ಬಿ.ಆರ್.ಅರಿಷಿಣಗೋಡಿ: ಬದುಕು-ಬರಹ

(ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ(ಕನ್ನಡ)ಕ್ಕೆ ಸಾದರಪಡಿಸಿದ
ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು
ಸಂಗನಗೌಡ. ಮಾ.ನಾಲತವಾಡ

ಮಾರ್ಗದರ್ಶಕರು
ಡಾ. ಶ್ರೀರಾಮ ಇಟ್ಟಣ್ಣವರ

ಬಿ.ಎಲ್.ಡಿ.ಇ. ಸಂಸ್ಥೆಯ
ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ
ಸಂಶೋಧನ ಕೇಂದ್ರ, ವಿಜಾಪುರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

೨೦೧೨

ಬಿ.ಆರ್.ಅರಿಷಿಣಗೋಡಿ: ಬದುಕು-ಬರಹ

(ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ(ಕನ್ನಡ)ಕ್ಕೆ ಸಾದರಪಡಿಸಿದ
ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು
ಸಂಗನಗೌಡ. ಮಾ.ನಾಲತವಾಡ

ಮಾರ್ಗದರ್ಶಕರು
ಡಾ. ಶ್ರೀರಾಮ ಇಟ್ಟಣ್ಣವರ

ಬಿ.ಎಲ್.ಡಿ.ಇ. ಸಂಸ್ಥೆಯ
ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ
ಸಂಶೋಧನ ಕೇಂದ್ರ, ವಿಜಾಪುರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

೨೦೧೨

ದೃಢೀಕರಣ ಪತ್ರ

ಸಂಗನಗೌಡ ಎಂ. ನಾಲತವಾಡ ಇವರು 'ಬಿ.ಆರ್. ಅರಿಷಿಣಗೋಡಿ: ಬದುಕು-ಬರಹ' ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ (ಕನ್ನಡ) ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಶ್ರೀರಾಮ ಇಟ್ಟಣ್ಣವರ)

'ಪಾರಿಜಾತ' ಗಾಂಧಿನಗರ, ಬೀಳಗಿ
ಬಾಗಲಕೋಟ ಜಿಲ್ಲೆ
ದಿನಾಂಕ: ೦೯-೮೧-೨೦೧೨

ಪ್ರಮಾಣ ಪತ್ರ

'ಬಿ.ಆರ್. ಅರಿಷಿಣಗೋಡಿ: ಬದುಕು-ಬರಹ' ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ. ಶ್ರೀರಾಮ ಇಟ್ಟಣ್ಣವರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ (ಕನ್ನಡ) ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ

(ಎಸ್.ಎಂ. ನಾಲತವಾಡ)
ಬಿ.ಎಲ್.ಡಿ.ಇ. ಸಂಸ್ಥೆಯ
ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ
ತಾ, ಜಿ: ವಿಜಾಪುರ

ಸ್ಥಳ: ವಿಜಾಪುರ
ದಿನಾಂಕ: ೦೯-೦೮-೨೦೧೨

ಅರಿಕೆ

ನಾನು ಮೂಲತಃ ಬೆನಕಟ್ಟಿಯಂತಹ ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದವನು; ಅಲ್ಲಿಯ ಎಲ್ಲಾ ಬಗೆಯ ಕಲೆಗಳಿಗೆ ಆಕರ್ಷಿತನಾದವನು. ವಿಶೇಷವಾಗಿ ವೃತ್ತಿರಂಗಭೂಮಿ ನನ್ನ ಒಲವಿನ ಕ್ಷೇತ್ರ. ತರುಣ ವಯಸ್ಸಿನಲ್ಲಿ ವೃತ್ತಿರಂಗಭೂಮಿಗೆ ಸಂಬಂಧಿಸಿದ ಅನೇಕ ನಾಟಕಗಳನ್ನು ಓದಿದ್ದೇನೆ. ಅಷ್ಟೇ ಅಲ್ಲ ನಮ್ಮೂರಿನಲ್ಲಿ ಹವ್ಯಾಸಿ ತಂಡದವರು ಆಡುತ್ತಿದ್ದ ನಾಟಕಗಳಲ್ಲಿ ಪಾತ್ರ ಕಟ್ಟಿ ಆಡಿದ್ದೇನೆ. ಮೊದಲಿನಿಂದಲೂ ರಂಗಭೂಮಿಯ ಬಗೆಗೆ ವಿಶೇಷ ಅಧ್ಯಯನ ಕೈಗೊಳ್ಳಬೇಕೆಂದಿದ್ದ ನನಗೆ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರವು ನನಗೆ ಅಂಥದೊಂದು ಅವಕಾಶವನ್ನು ಒದಗಿಸಿ ಕೊಟ್ಟಿತು. ನಟರಾಗಿ, ನಿರ್ದೇಶಕರಾಗಿ, ಕಂಪನಿ ಮಾಲಿಕರಾಗಿ ವೃತ್ತಿರಂಗಭೂಮಿಗೆ ಗೌರವ ತಂದುಕೊಟ್ಟ ಬಿ.ಆರ್. ಅರಿಷಿಣಗೋಡಿಯವರ ಬದುಕು-ಬರಹ ಕುರಿತು ಅಧ್ಯಯನ ಕೈಗೊಳ್ಳಲು ನಿರ್ಧರಿಸಿ ೨೦೦೬ರಲ್ಲಿ ಹೆಸರು ನೊಂದಾಯಿಸಿದೆ.

ಡಾ. ಶ್ರೀರಾಮ ಇಟ್ಟಣ್ಣವರ ಅವರು ನನ್ನ ಮಾರ್ಗದರ್ಶಕರು. ಸಾಮಗ್ರಿ ಸಂಗ್ರಹ, ಬರವಣಿಗೆಯ ರೀತಿ, ಪ್ರಬಂಧದ ಒಟ್ಟು ವಿನ್ಯಾಸ ಹೀಗೆ ಬೇರೆ ಬೇರೆ ಮಜಲುಗಳಲ್ಲಿ ನನ್ನನ್ನು ಓರಣಗೊಳಿಸಿದ್ದಾರೆ. ಶ್ರೀಯುತರನ್ನು ಈ ಸಂದರ್ಭದಲ್ಲಿ ಕೃತಜ್ಞತಾ ಭಾವದಿಂದ ಸ್ಮರಿಸುತ್ತೇನೆ.

ಐದು ವರ್ಷದ ನನ್ನ ಸಂಶೋಧನ ಕಾರ್ಯದಲ್ಲಿ ಸಹಾಯ, ಸಹಕಾರ, ಸಲಹೆ, ಸೂಚನೆಗಳನ್ನು ನೀಡಿದ ಎಲ್ಲಾ ಮಹನೀಯರನ್ನು ಇಲ್ಲಿ ನೆನೆಯುವುದು ನನ್ನ ಕರ್ತವ್ಯವಾಗಿದೆ. ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರದ ಅಧ್ಯಕ್ಷರಾದ ವಿದ್ವತ್ ಪ್ರೇಮಿಗಳಾದ ಶ್ರೀ ಶಿವಯೋಗಿ ಸಿ. ತಂಬಾಕೆ ಅಣ್ಣಾ ಅವರನ್ನು ಹೃದಯ ಪೂರ್ವಕ ಸ್ಮರಿಸುತ್ತೇನೆ. ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರದ ಪ್ರಗತಿಗಾಗಿ ನಿರಂತರ ಶ್ರಮಿಸುತ್ತಿರುವವರೂ ಅದರ ಸಂಯೋಜನಾಧಿಕಾರಿಗಳೂ ಆದ ಡಾ. ಎಂ.ಎಸ್. ಮದಭಾವಿ ಅವರ ಕಾಳಜಿ ಅವಿಸ್ಮರಣೀಯವಾಗಿದ್ದು ಅವರ ಸಹಾಯ ಸಹಕಾರಗಳನ್ನು ನೆನೆಯಲು ನನಗೆ ಸಂತೋಷವೆನಿಸುತ್ತದೆ. ಹಿರಿಯ ವಿದ್ವಾಂಸರಾದ ಪ್ರೊ. ಎ.ಎಸ್. ಹಿಪ್ಪರಗಿಯವರಿಗೆ ಋಣಿಯಾಗಿದ್ದೇನೆ. ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರದ ಶೈಕ್ಷಣಿಕ ಸಲಹಾ ಸಮಿತಿಯ ಎಲ್ಲ ಸದಸ್ಯರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಹಾಗೆಯೇ ಪ್ರಸ್ತುತ ಸಂಶೋಧನ ಕೇಂದ್ರದಲ್ಲಿ ಮಾರ್ಗದರ್ಶಕರಾಗಿ ಕಾರ್ಯನಿಭಾಯಿಸುತ್ತಿರುವ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಎಂ.ಎಂ. ಪಡಶೆಟ್ಟಿ, ಡಾ. ಸಂಗಮೇಶ ಬಿರಾದಾರ, ಡಾ. ಎಸ್.ಕೆ. ಕೊಪ್ಪಾ ಗುರುಗಳೆಲ್ಲರನ್ನು ಇಲ್ಲಿ ನೆನೆಯುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ ಕುಲಪತಿಗಳು ಹಾಗೂ ನನ್ನ ವಿದ್ಯಾಗುರುಗಳಾದ ಡಾ.ಎ.ಮುರಿಗೆಪ್ಪ ಅವರಿಗೆ ಋಣಿಯಾಗಿದ್ದೇನೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ಅಧ್ಯಯನಾಂಗ ವಿಭಾಗದ ನಿರ್ದೇಶಕರಾದ ಡಾ. ಎಫ್.ಟಿ. ಹಳ್ಳಿಕೇರಿಯವರನ್ನು ಸ್ಮರಿಸುತ್ತೇನೆ.

ನನ್ನ ಮಹಾಪ್ರಬಂಧ ಸಿದ್ಧಪಡಿಸುವವರೆಗೂ ಬಿ.ಆರ್. ಅರಿಷಿಣಗೋಡಿಯವರು ತಮ್ಮ ಇಳಿವಯಸ್ಸಿನಲ್ಲಿಯೂ ನಾನು ಕೇಳಿದಾಗಲೆಲ್ಲ ಅಪ್ರಕಟಿತ ಹಸ್ತ ಪ್ರತಿಗಳನ್ನು, ಅನೇಕ ವಿವರಗಳನ್ನು ಬೇಸರಿಸದೆ ಒದಗಿಸಿ ಸಹಾಯ ಮಾಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಉಪಯುಕ್ತ ಮಾಹಿತಿಯನ್ನು ನೀಡಿದ ಅರಿಷಿಣಗೋಡಿಯವರ ಕುಟುಂಬವರ್ಗ, ಅವರ ನಾಟಕಗಳನ್ನು ನೋಡಿದ ಪ್ರೇಕ್ಷಕರು, ಕಲಾವಿದರೆಲ್ಲರಿಗೂ ಕೃತಜ್ಞನಾಗಿದ್ದೇನೆ.

ಬಿ.ಎಲ್.ಡಿ.ಇ. ಸಂಸ್ಥೆಯ ಪದವಿ ಮಹಾವಿದ್ಯಾಲಯಗಳ ಆಡಳಿತಾಧಿಕಾರಿಗಳಾದ ಪ್ರೊ. ಎಸ್.ಎಚ್. ಲಗಳಿಯವರಿಗೆ ಋಣಿಯಾಗಿದ್ದೇನೆ. ಹಾಗೆಯೇ ಪದವಿಪೂರ್ವ ಮಹಾವಿದ್ಯಾಲಯಗಳ ಆಡಳಿತಾಧಿಕಾರಿಗಳಾದ ಪ್ರೊ. ಕೆ.ಎಸ್. ಬಿರಾದಾರ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಮಾರ್ಗದರ್ಶಕರಾದ ಡಾ. ಶ್ರೀರಾಮ ಇಟ್ಟಣ್ಣವರ ಅವರ ಜೊತೆಗೆ ಸಂಶೋಧನ ವಿಷಯವನ್ನು ಚರ್ಚಿಸಲು ಬೀಳಗಿಯಲ್ಲಿದ್ದ ಅವರ ಮನೆಗೆ ಹೋದಾಗಲೆಲ್ಲ ಅವರ ಧರ್ಮಪತ್ನಿ ಶ್ರೀಮತಿ ಸರೋಜ ಹಾಗೂ ಮಗಳು ವಿಜಯಶ್ರೀಯವರು ನನ್ನನ್ನು ತಮ್ಮ ಕುಟುಂಬದ ಸದಸ್ಯನಂತೆ ನೋಡಿದ್ದಾರೆ. ಸ್ನೇಹಿತರಾದ ಪ್ರೊ. ಎಚ್.ಕೆ. ಯಡಹಳ್ಳಿಯವರು ಕ್ಷೇತ್ರಕಾರ್ಯ ಸಂದರ್ಭದಲ್ಲಿ ನನಗೆ ನೆರವಾಗಿದ್ದಾರೆ. ಇವರಿಗೆಲ್ಲ ಚಿರಋಣಿಯಾಗಿದ್ದೇನೆ.

ನನ್ನ ಸಂಶೋಧನ ಅಧ್ಯಯನಕ್ಕೆ ಸಹಕಾರ ನೀಡಿದ ನನ್ನ ಪತ್ನಿ ಶ್ರೀಮತಿ ಪದ್ಮಾವತಿ, ಮಗ ಇಂದ್ರಜಿತ್‌ನಿಗೆ ನನ್ನ ವೈಯಕ್ತಿಕ ಕೃತಜ್ಞತೆಗಳು. ಅಚ್ಚುಕಟ್ಟಾಗಿ ಪುಟ ವಿನ್ಯಾಸ ಹಾಗೂ ಛಾಯಾಚಿತ್ರಗಳ ಜೋಡಣೆ ಮಾಡಿದ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಕೃತಜ್ಞನಾಗಿದ್ದೇನೆ.

ವಿಜಾಪುರ

ಸಂ.ಮಾ. ನಾಲತವಾಡ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಾರ್ಚ್ ೨೭ ವಿಶ್ವರಂಗಭೂಮಿ ದಿನಾಚರಣೆಯ ನೆನಪಿನಲ್ಲಿ ಕನ್ನಡ ರಂಗಭೂಮಿಗೆ ಭವಿಷ್ಯವಿದೆಯಾ? ಎಂದು ಕೇಳಿಕೊಂಡಾಗ ಕನ್ನಡದ ರಂಗಭೂಮಿಗೆ ಸಧ್ಯದಲ್ಲಿ ಇರುವ ತೊಡರುಗಳು ಧುತ್ತೆಂದು ನಮ್ಮೆದುರಿಗೆ ನಿಲ್ಲುತ್ತವೆ. 'ಕನ್ನಡ ರಂಗಭೂಮಿ ನಿಂತ ನೀರಾಗಿದೆ', 'ಕನ್ನಡ ರಂಗಭೂಮಿ ಸತ್ತಿದೆ' ಎಂಬ ಮಾತುಗಳನ್ನು ಮಾಧ್ಯಮದ ಮೂಲಕ ಹೇಳುವವರು ರಂಗಭೂಮಿಗೆ ಸಂಬಂಧಪಟ್ಟವರು ಅಥವಾ ಸಂಬಂಧ ಪಡದವರು ಯಾರೂ ಇರಬಹುದು. ಹಿರಿಯ ರಂಗಕರ್ಮಿ ಬಿ.ವಿ.ಕಾರಂತ ಹೇಳುವಂತೆ "ರಂಗಭೂಮಿ ಸಾಯಲ್ಲ ಒಮ್ಮೊಮ್ಮೆ ನಿದ್ದೆ ಮಾಡಿದ ಹಾಗೆ ಅನ್ಸುತ್ತೆ"[೧] ಅನ್ನುವುದು ನಿಜ.

ಎಪ್ಪತ್ತು-ಎಂಭತ್ತರ ದಶಕದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ವೃತ್ತಿರಂಗಭೂಮಿ ಮುಂದಿನ ದಶಕಗಳಲ್ಲಿ ಇಳಿಮುಖವಾದ ಹಾಗೆ ಕಂಡರೂ ಸಂಪೂರ್ಣ ಇಳಿಮುಖವಾಗಿಲ್ಲ. ಇದಕ್ಕೆ ಟಿ.ವಿ. ಮಾಧ್ಯಮ ಒಂದು ಕಾರಣವಾದರೆ, ಟಿ.ವಿ. ಕಾರ್ಯಕ್ರಮಗಳಿಗೆ ರಂಗ ಕಲಾವಿದರು ವಲಸೆ ಹೋದ ಕಾರಣ ಇನ್ನೊಂದು. ಹೀಗಾಗಿ ಸ್ವಲ್ಪಮಟ್ಟಿಗೆ ರಂಗಭೂಮಿ ಚಟುವಟಿಕೆ ಕಡಿಮೆಯಾಗಿರಬಹುದು. ಹೀಗೆಂದ ಮಾತ್ರಕ್ಕೆ ರಂಗಭೂಮಿ ಸತ್ತಿದೆ ಎಂದರ್ಥವಲ್ಲ. ಹವ್ಯಾಸಿ ರಂಗಭೂಮಿ ನಿರಂತರ ಚಟುವಟಿಕೆಗಳಲ್ಲಿ ತೊಡಗಿಕೊಂಡು ಚಲನಶೀಲವಾಗಿದೆ, ನಮ್ಮ ರಂಗಭೂಮಿ ಜಡಗೊಂಡ ಹಾಗೆ ಕಾಣುತ್ತದೆ ಆದರೆ ಜಡಗೊಂಡಿಲ್ಲ.

"ಸಿನಿಮಾದಲ್ಲಿ ಇದ್ದ ಮನುಷ್ಯ ದೊಡ್ಡದಾಗಿ ಕಾಣುತ್ತಾನೆ, ಟಿವಿಯಲ್ಲಿ ತನಗಿಂತ ಸಣ್ಣವನಾಗಿ ಕಾಣುತ್ತಾನೆ. ಆದರೆ ರಂಗಭೂಮಿಯಲ್ಲಿ ಮನುಷ್ಯ ಮನುಷ್ಯನ ಆಕಾರದಲ್ಲಿ ಕಾಣುತ್ತಾನೆ"[೨] ಎಂಬ ಕಾರಂತರ ಮಾತು ನಿತ್ಯ ಸತ್ಯವೆನಿಸುತ್ತದೆ. ಜೀವಂತ ಪ್ರದರ್ಶನ ರಂಗಭೂಮಿಯಲ್ಲಿ ಮಾತ್ರ ಸಾಧ್ಯ.

ರಂಗಭೂಮಿಯಲ್ಲಿ ವರ್ಗೀಕರಣಗೊಂಡ ವೃತ್ತಿ, ಹವ್ಯಾಸಿ ಹಾಗೂ ಜಾನಪದ ಎಂಬ ವರ್ಗೀಕರಣ ಅಳಿಯಬೇಕು. ಅಖಂಡ ರಂಗಪರಂಪರೆಯೇ ನಮ್ಮಲ್ಲಿ ಬೆಳೆದು ಬರಬೇಕು ಈ ಅಂತರ ಕಡಿಮೆಯಾಗಬೇಕು ಎನ್ನುವ ಆಶಯ ಸಾಹಿತಿಗಳು ಹಾಗೂ ರಂಗತಜ್ಞರದು, ವೃತ್ತಿಯವರು ಕೀಳರಿಮೆ ಬಿಡಬೇಕು. ಹವ್ಯಾಸಿಯವರು ವೃತ್ತಿರಂಗದವರ ನಾಟಕ ನೋಡುವಂತಾಗಬೇಕು.

ಹೀಗೆ ಹಲವಾರು ಕಾರಣಗಳಿಂದ, ಸಾಮಾಜಿಕ ಏರುಪೇರುಗಳಿಂದ ವೃತ್ತಿರಂಗಭೂಮಿ ನಶಿಸಿ ಹೋಗುತ್ತಿದೆ. ಒಂದು ಕಾಲದಲ್ಲಿ ಮಹಾರಾಜರ ವೈಭವದಂತೆ ಮೆರೆಯುತ್ತಿದ್ದ ನಾಟಕ ಕಂಪನಿಗಳು ಮುಚ್ಚಿ ಹೋಗುತ್ತಿವೆ. ಕರ್ನಾಟಕದಲ್ಲಿ ಇದ್ದ ನೂರಾರು ಕಂಪನಿಗಳ ಪೈಕಿ ಇವತ್ತು ಕೇವಲ ಕೈಬೆರಳೆಣಿಕೆಗಳಷ್ಟು ಕಂಪನಿಗಳು ಇದ್ದರೂ ಅವೂ ಕೂಡ ಮರಣದ ಶಯ್ಯೆಯಲ್ಲಿವೆ.

ಇಂಥ ಸಂದರ್ಭದಲ್ಲಿ ಹಿರಿಯ ನಾಟಕಕಾರ, ರಂಗಕರ್ಮಿ, ನಾಟಕ ಕಂಪನಿ ಮಾಲಿಕರಾದ ಶ್ರೀಯುತ ಬಿ.ಆರ್. ಅರಿಷಿಣಗೋಡಿಯವರು ವೃತ್ತಿರಂಗಭೂಮಿಗೆ ಕೊಡ ಮಾಡಿದ ೪೩ ವರ್ಷಗಳ ಸೇವೆ ನಾಟಕಗಳ ಸಾಹಿತ್ಯಿಕ, ಸಾಮಾಜಿಕ ಮೌಲ್ಯಗಳ ಸಮೀಕ್ಷೆ ಪ್ರಸ್ತುತವೆನಿಸುತ್ತದೆ. ಇವುಗಳನ್ನೆಲ್ಲ ದಾಖಲು ಮಾಡುವದು ಅವಶ್ಯವೆನಿಸಿದೆ. ಇಲ್ಲವಾದರೆ ಕನ್ನಡ ಸಾಹಿತ್ಯಕ್ಕೆ, ರಂಗಭೂಮಿ ಇತಿಹಾಸಕ್ಕೆ ಅಪಚಾರವಾಗುತ್ತದೆ.

ಬಿ.ವಿ. ವೈಕುಂಠರಾಜು ಅವರು ಹೇಳುತ್ತಾರೆ: "ಈಗ ಕನ್ನಡ ವೃತ್ತಿರಂಗಭೂಮಿ ಹಳೆಯ ವೈಭವದ ಪಳೆಯುಳಿಕೆಯಾಗಿದೆ ಎನ್ನುವ ಸ್ಥಿತಿಗೆ ಬಂದಿದೆ. ಅದನ್ನು ವೃತ್ತಿರಂಗಭೂಮಿ ಎಂದು ಕರೆಯುವುದೂ ಸರಿಯಾಗಲಾರದೇನೊ! ಏಕೆಂದರೆ ಅಲ್ಲಿರುವ ಕೆಲವೇ ಜನಕ್ಕೂ ಎರಡು ಹೊತ್ತಿನ ಊಟ ಸಿಕ್ಕುತ್ತಿಲ್ಲ. ಹಳೆಯ ಮೈಸೂರಿನಲ್ಲಂತೂ ವೃತ್ತಿರಂಗಭೂಮಿ ಹೆಚ್ಚೂಕಡಿಮೆ ನಾಮಾವಶೇಷವಾಗಿದೆ. ಹೆಸರಿಗೆ ಕೆಲವು ಕಂಪನಿಗಳು ಇದ್ದರೂ, ಅವು ಹೇಳಿಕೊಳ್ಳುವಂತಹ ಕೆಲಸವನ್ನೇನೂ ಮಾಡುತ್ತಿಲ್ಲ. ಉತ್ತರ ಕರ್ನಾಟಕದಲ್ಲಿ ಅನೇಕ ಕಂಪನಿಗಳಿವೆ. ನಾಲ್ಕೈದು ಕಂಪನಿಗಳು ಆರ್ಥಿಕವಾಗಿಯೂ ಸುಭದ್ರವಾಗಿದ್ದು ಕಲಾವಿದರಿಗೆ ಒಳ್ಳೆಯ ಸಂಬಳವನ್ನು ನೀಡುತ್ತಿವೆ... ನಾಟಕ ಕಂಪನಿಗಳು ಆರಿಸುವ ನಾಟಕಗಳು ಯಾವ ರೀತಿಯವು?... ಒಬ್ಬ ಒಳ್ಳೆ ಮನುಷ್ಯ, ಇನ್ನೊಬ್ಬ ಕೆಟ್ಟ ಮನುಷ್ಯ, ಕೊನೆಗೆ ಒಳ್ಳೆಯವನಿಗೆ ಎಲ್ಲವೂ ಒಳ್ಳೆಯದಾಗುತ್ತದೆ ಈ ಸರಳ ನೀತಿಯನ್ನು ಹೇಳಿದರೆ ಜನ ಬರುತ್ತಾರೆಯೇ? ಅದಕ್ಕಾಗಿಯೇ ಪೋಲಿ ಮಾತುಗಳು, ಹೆಣ್ಣಿನ ಅಂಗೋಪಾಂಗಗಳ ಪ್ರದರ್ಶನ, ಕೆಟ್ಟ ಕುಣಿತ ಇತ್ಯಾದಿ ಮಸಾಲೆಗಳನ್ನು ತುರುಕುವ ಪ್ರಯತ್ನ ನಡೆಯುತ್ತಿದೆ."[೩] ಆದರೆ ಬಿ.ಆರ್. ಅರಿಷಿಣಗೋಡಿಯವರ ಕಂಪನಿ ನಾಟಕಗಳಲ್ಲಿ ಈ ಕೆಳಮಟ್ಟದ ಅಭಿರುಚಿಯ ಅಭಿನಯವನ್ನು ಕಾಣವುದಿಲ್ಲ.

ವೃತ್ತಿರಂಗಭೂಮಿ ಎಂಬ ವ್ಯವಹಾರಿಕ ಸಂಸ್ಥೆ ಬೆಳೆದು ಬಂದದ್ದು ನಮ್ಮ ರಂಗಭೂಮಿ ಪರಂಪರೆಗೆ ಹೊಸದು. ಈ ವೃತ್ತಿರಂಗಭೂಮಿ ಹುಟ್ಟುತ್ತಿರುವಾಗಲೇ ಅದಕ್ಕೆ ನೀರುಣಿಸಿ ಬೆಳೆಸಿದ ಕೀರ್ತಿ ಉತ್ತರ ಕರ್ನಾಟಕದ ಗದುಗಿಗೆ ಸಲ್ಲುತ್ತದೆ. ಶಾಂತ ಕವಿಗಳ ಪ್ರೇರಣೆಯಿಂದ ಉತ್ತರ ಕರ್ನಾಟಕದ ಪ್ರಮುಖ ಪಟ್ಟಣಗಳಲ್ಲಿ ಅನೇಕ ಕಂಪನಿಗಳು ನಾಟಕ ಪ್ರದರ್ಶನ ಮಾಡಿದವು. ಆಮೇಲೆ ವೃತ್ತಿರಂಗಭೂಮಿ ಕಂಪನಿ ನಾಟಕಗಳ ಚಟುವಟಿಕೆಗಳು ಬಾಗಲಕೋಟೆಯ ಸುತ್ತಲಿನ ಬಾದಾಮಿ, ಗುಳೇದಗುಡ್ಡ, ಗುಡೂರ, ಅಮೀನಗಡ, ಕಲಾದಗಿ, ಕೆರೂರ ಊರುಗಳು ವೃತ್ತಿರಂಗಭೂಮಿಯ ಬೆಳವಣಿಗೆಯಲ್ಲಿ ರಂಗಸಂಪನ್ಮೂಲ ಕೇಂದ್ರಗಳಂತೆ ಕೆಲಸ ಮಾಡಿದ್ದು ಗಮನಾರ್ಹ. ವೃತ್ತಿರಂಗಭೂಮಿಯಲ್ಲಿ ಶ್ರೀಮಂತ ಕಂಪನಿಯಿಂದು

ಹೆಸರು ಗಳಿಸಿದ ಕೊಣ್ಣೂರ ಕಂಪನಿ ಪ್ರಾರಂಭವಾಗುವುದಕ್ಕಿಂತ ಪೂರ್ವದಲ್ಲಿ ೧೮೯೫ರಲ್ಲಿ ಗುಳೇದಗುಡ್ಡದ ಬಾಲ ನಾಟಕ ಮಂಡಳಿ, ೧೮೯೭ರಲ್ಲಿ ಹುಲ್ಲೂರ ಪರಪ್ಪನವರ ನಾಟಕ ಕಂಪನಿಗಳು ಸಾರಿಗೆ ಸೌಕರ್ಯದ ಕೊರತೆಯಿಂದ ಒಂದು ಮಿತಿಯಲ್ಲಿ ನಾಟಕಗಳನ್ನು ರಂಗಪ್ರಯೋಗ ಮಾಡಿ ಹೆಸರು ಗಳಿಸಿದ್ದವು. ಮೊದಲ ಶ್ರೇಷ್ಠ ನಟಿ ಯಲ್ಲೂಬಾಯಿ ಮತ್ತು ಈಕೆಯ ಸಾಕು ಮಗಳು ಗಾನರತ್ನ ಗಂಗೂಬಾಯಿ ಗುಳೇದಗುಡ್ಡದವರು. ಈ ಭಾಗದಿಂದ ಕೊಣ್ಣೂರ ನಾಟಕ ಕಂಪನಿ ಅನೇಕ ಕಲಾವಿದರನ್ನು ಕರೆದುಕೊಂಡು ಹೋದ ಬಗ್ಗೆ ದಾಖಲೆಗಳಿವೆ. ವೃತ್ತಿರಂಗಭೂಮಿಗೆ ಹೊಸ ಆಯಾಮ ನೀಡಿದ ಕಂದಗಲ್ಲ ಹನುಮಂತರಾಯರು ನೆಲೆನಿಂತದ್ದು ಗುಳೇದಗುಡ್ಡದಲ್ಲಿ. ಇವರ ಪ್ರಭಾವದಲ್ಲಿ ನಟ-ನಟಿಯರ ಪಡೆಯೇ ನಿರ್ಮಾಣವಾಯಿತು. ಇಂಥ ಪರಿಸರದಲ್ಲಿ ಅನೇಕ ನಾಟಕ ಕಂಪನಿಗಳು ಹುಟ್ಟಿಬಂದವು. ೧೯೪೨ರಲ್ಲಿ ಪ್ರಾರಂಭವಾದ ಚಿತ್ತರಗಿ ಗಂಗಾಧರಶಾಸ್ತ್ರಿಗಳ ಕುಮಾರ ವಿಜಯ ನಾಟ್ಯ ಸಂಘ, ೧೯೬೬ರಲ್ಲಿ ಪ್ರಾರಂಭವಾದ ಸುಳ್ಳದ ಮಲ್ಲನಗೌಡ ದೇಸಾಯಿಯವರ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಇಳಕಲ್‌ನ ಗೂಡುಸಾಬರ ಸರ್ವೋದಯ ನಾಟ್ಯ ಸಂಘ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು. ರಂಗಭೂಮಿಯಲ್ಲಿ ಮನೆಮಾತಾದ ಕೆರೂರ ವಾಸುದೇವಾಚಾರ್ಯ, ಕಂದಗಲ್ಲ ಹನುಮಂತರಾಯ, ಎಲ್.ಎಸ್. ಇನಾಮದಾರ, ಗಂಗಾಧರ ಶಾಸ್ತ್ರಿಗಳು, ಎಚ್.ಆರ್. ಭಸ್ಮೆ, ಪಿ.ಬಿ. ಧುತ್ತರಗಿ, ಮಾರುತೇಶ ಮಾಂಡ್ರೆ, ಮುಂತಾದ ಜನಪ್ರಿಯ ನಾಟಕಕಾರರ ಪರಂಪರೆಯೇ ಈ ಭಾಗದಲ್ಲಿ ನಿರ್ಮಾಣವಾಯಿತು. ಇದೇ ಭಾಗದಲ್ಲಿ ಹುಟ್ಟಿ ಬೆಳೆದು ಬಂದ ಕಮತಗಿಯ ಶ್ರೀ ಹುಚ್ಚೇಶ್ವರ ನಾಟ್ಯ ಸಂಘದ ಮಾಲಿಕ, ನಾಟಕಕಾರರಾದ ಬಿ.ಆರ್. ಅರಿಷಿಣಗೋಡಿಯವರು ಉತ್ತರ ಕರ್ನಾಟಕದ ರಂಗಸಂಪನ್ನ ವ್ಯಕ್ತಿಗಳಲ್ಲಿ ಒಬ್ಬರು.

ಈ ಮೇಲಿನ ಎಲ್ಲ ರಂಗಕರ್ಮಿಗಳ ಜೀವನ, ಅವರ ಬರವಣಿಗೆಗಳ ಬಗೆಗೆ ನಡೆದ ಅಧ್ಯಯನ ಕಡಿಮೆಯಂದೇ ಹೇಳಬಹುದು. ಆದರೂ ತಕ್ಕಮಟ್ಟಿಗೆ ಕೆಲವು ನಾಟಕಕಾರರ ಬಗ್ಗೆ ಸಮಗ್ರ ಅಧ್ಯಯನದ ಪ್ರೌಢ ಪ್ರಬಂಧಗಳು ಬಂದಿರುವುದನ್ನು ಗಮನಿಸಬಹುದು. ಪಿ.ಬಿ. ಧುತ್ತರಗಿ, ಕಂದಗಲ್ ಹನುಮಂತರಾಯ, ಎಚ್.ಎನ್. ಹೂಗಾರ, ಮಹಾಂತೇಶ ಶಾಸ್ತ್ರಿ, ನಲವಡಿ ಶ್ರೀಕಂಠ ಶಾಸ್ತ್ರಿ, ಭಸ್ಮೆ ಕೆಲವೇ ಕೆಲವೊಂದು ವ್ಯಕ್ತಿಗಳ ಸಮಗ್ರ ಅಧ್ಯಯನ ನಡೆದಿರುವುದನ್ನು ಗಮನಿಸಿದರೆ ರಂಗಭೂಮಿಯ ಬಗ್ಗೆ ಇದ್ದ ನಿರ್ಲಕ್ಷ್ಯವೇ ಇದಕ್ಕೆ ಕಾರಣವೆಂದು ಹೇಳಬಹುದು.

ಭೀಮಪ್ಪ ರಾಯಪ್ಪ ಅರಿಷಿಣಗೋಡಿಯವರು ನಾಟಕಕಾರ, ನಾಲ್ಕು ಕಂಪನಿಯ ಸಂಸ್ಥಾಪಕ, ನಟ, ನಿರ್ದೇಶಕರಾಗಿ ಕರ್ನಾಟಕದ ವೃತ್ತಿರಂಗಭೂಮಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕದ ರಂಗಭೂಮಿಯಲ್ಲಿ ವಿಶೇಷ ಸಾಧನೆಯನ್ನು ಮಾಡಿದ ಬಿ.ಆರ್. ಅರಿಷಿಣಗೋಡಿಯವರ ಜೀವನ ಸಾಧನೆ ಕುರಿತು ಸಮಗ್ರ ಅಧ್ಯಯನ ನಡೆದಿಲ್ಲ. ಡಾ. ರಾಮಕೃಷ್ಣ ಮರಾಠೆಯವರು ಬರೆದ ಒಂದು ಕಿರು ಪುಸ್ತಕವನ್ನು ಬಿಟ್ಟರೆ ಆಗಾಗ ದಿನಪತ್ರಿಕೆಗಳಲ್ಲಿ ಬಂದ ಬಿಡಿ ಲೇಖನಗಳು, ಪತ್ರಕರ್ತ

ಡಾ. ಗಣೇಶ ಅಮೀನಗಡ ಅವರ ಲೇಖನಗಳು ಹಾಗೂ ಡಾ. ಶ್ರೀರಾಮ ಇಟ್ಟಣ್ಣವರ ಹಾಗೂ ಅಬ್ಬಾಸ್ ಮೇಲಿನಮನಿ ಅವರ ಆಕಾಶವಾಣಿ ಧಾರವಾಡದ ಸಂದರ್ಶನ, ಸಂವಾದಗಳನ್ನು ಬಿಟ್ಟರೆ ಅರಿಷಿಣಗೋಡಿಯವರ ನಾಟಕಗಳ ಬಗ್ಗೆ, ಅವರ ನಾಲ್ಕು ಕಂಪನಿಗಳ ಬಗ್ಗೆ, ವಿಸ್ತೃತ ಅಧ್ಯಯನ ಮತ್ತು ವಸ್ತುನಿಷ್ಠ ಮೌಲ್ಯಮಾಪನ ನಡೆದಿಲ್ಲ. ಸರಕಾರ ಅರಿಷಿಣಗೋಡಿಯವರನ್ನು ಗುರುತಿಸಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ ಕೊಟ್ಟು ಅವರನ್ನು ಪುರಸ್ಕರಿಸಿದೆ. ಅನೇಕ ಸಂಘ ಸಂಸ್ಥೆಗಳು, ಮಠಮಾನ್ಯಗಳು ಅವರಿಗೆ ಅನೇಕ ಬಿರುದು, ಸನ್ಮಾನಗಳನ್ನು ಕೊಟ್ಟು ಗೌರವಿಸಿವೆ.

ಮೇಲೆ ಹೇಳಿದ ಇಂತಹ ಕಿರು ಪುಸ್ತಕ ಬಿಡಿಲೇಖನಗಳಿಂದ ಅರಿಷಿಣಗೋಡಿಯವರ ಜೀವನ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಯ ಸಮಗ್ರ ಚಿತ್ರಣ ದೊರಕುವುದಿಲ್ಲ. ಎಪ್ಪತ್ತೇಳು ವರ್ಷದ ಅರಿಷಿಣಗೋಡಿಯವರು ನಲವತ್ತೂಮೂರು ವರ್ಷಗಳ ಕಾಲ ತಮ್ಮ ಜೀವನವನ್ನು ವೃತ್ತಿರಂಗಭೂಮಿಗೆ ಮುಡಿಪಾಗಿಟ್ಟು ಸಧ್ಯ ನೇಪಥ್ಯಕ್ಕೆ ಸರಿದ ಅವರನ್ನು ಸಾಂಸ್ಕೃತಿಕ ಮತ್ತು ಸಾಹಿತ್ಯ ಲೋಕಕ್ಕೆ ನೆನಪಿಸಿಕೊಳ್ಳಬೇಕೆಂಬ ಸಮಯೋಚಿತ ಪ್ರಜ್ಞೆಯ ಉದ್ದೇಶದಿಂದ ಅವರ ಬದುಕು-ಬರಹದ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಅವರು ಬರೆದ ಹದಿನಾಲ್ಕು ನಾಟಕಗಳಲ್ಲಿ ಐದು ನಾಟಕಗಳು ಪ್ರಕಟಗೊಂಡಿವೆ. ಇನ್ನುಳಿದ ನಾಟಕಗಳು ಅಪ್ರಕಟಿತವಾಗಿಯೆ ಇರುವವು. ಅವರು ವೃತ್ತಿರಂಗಭೂಮಿಯಲ್ಲಿ ನಟರಾಗಿ, ನಿರ್ದೇಶಕರಾಗಿ, ಕಂಪನಿ ಮಾಲಿಕರಾಗಿ ಸೇವೆ ಸಲ್ಲಿಸಿದ್ದನ್ನು ಗುರುತಿಸುವುದು, ಅವರ ಒಟ್ಟು ನಾಟಕಗಳನ್ನು ಮೌಲ್ಯಮಾಪನ ಮಾಡಿ ನಾಟಕ ಸಾಹಿತ್ಯದಲ್ಲಿ ಮತ್ತು ವೃತ್ತಿ ಕಂಪನಿಗಳಲ್ಲಿ ಅವರ ಸ್ಥಾನಮಾನವನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ಅರಿಷಿಣಗೋಡಿಯವರು ನಾಟಕಕಾರರಾಗಲೂ ಸ್ಫೂರ್ತಿ ದೊರೆತದ್ದಾದರೂ ಹೇಗೆ? ಕಂಪನಿಗಳನ್ನು ಕಟ್ಟಲು ಪ್ರೇರಣೆ ಯಾವುದು? ಕಂಪನಿಯಿಂದ ಅವರು ಪಡೆದ ಸಾಮಾಜಿಕ, ಆರ್ಥಿಕ ಪ್ರಯೋಜನೆಗಳೇನು? ತಮ್ಮ ನಾಟಕ ಕಂಪನಿಯ ಮುಖಾಂತರ ರಂಗ ಪ್ರಯೋಗ ಮಾಡಿದ ನಾಟಕಗಳಿಂದ ಸಮಾಜದ ಮೇಲೆ ಬೀರಿದ ಪರಿಣಾಮವೇನು? ಕನ್ನಡ ರಂಗಭೂಮಿಗೆ ಕೊಟ್ಟ ಕೊಡುಗೆಯೇನು? ಮುಂತಾದ ವಿಷಯಗಳ ವಿಶ್ಲೇಷಣೆಯನ್ನು ಈ ಪ್ರಬಂಧ ಒಳಗೊಂಡಿದೆ.

ಪ್ರಬಂಧ ರಚನೆಗೆ ಮೂಲ ಆಕರ ಸಾಮಗ್ರಿಗಳಾಗಿ ಅವರ ಪ್ರಕಟಿತ-ಅಪ್ರಕಟಿತ ನಾಟಕಗಳು ಹಾಗೂ ಡಾ. ರಾಮಕೃಷ್ಣ ಮರಾಠೆಯವರು ಬರೆದ ಕಿರುಪುಸ್ತಕ, ದಿನಪತ್ರಿಕೆಗಳಲ್ಲಿ ಬಂದ ಬಿಡಿಲೇಖನಗಳು, ರಂಗಭೂಮಿ ವಿಚಾರಗಳಿಗೆ ಮೀಸಲಾದ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಲೇಖನ, ವಿಮರ್ಶೆಗಳು, ಪ್ರಬಂಧದ ಕೇಂದ್ರಬಿಂದುವಾದ ಅರಿಷಿಣಗೋಡಿಯವರ ವಿವರವಾದ ಸಂದರ್ಶನದ ಸಾರವನ್ನು

ಬಳಸಿಕೊಳ್ಳಲಾಗಿದೆ. ಅವರ ಕುಟುಂಬ ವರ್ಗದವರು, ಸ್ನೇಹಿತರು, ಅವರ ಕಂಪನಿಯಲ್ಲಿ ಕಲಾವಿದರಾಗಿ ದುಡಿದ ನಟನಟಿಯರನ್ನು, ಅಭಿಮಾನಿಗಳನ್ನು ಸಂದರ್ಶಿಸಿ ವಿಷಯಗಳನ್ನು ಸಂಗ್ರಹಿಸಲಾಗಿದೆ. ಅವರು ಬರೆದ ನಾಟಕಗಳು ಇವತ್ತೂ ಪ್ರದರ್ಶನಗೊಳ್ಳುತ್ತವೆ. ಪ್ರದರ್ಶನಗೊಂಡ ನಾಟಕ ಪ್ರೇಕ್ಷಕರ ಮೇಲೆ ಬೀರಿದ ಪರಿಣಾಮವನ್ನು ಗುರುತಿಸಲಾಗಿದೆ.

ಪ್ರಸ್ತುತ ಅಧ್ಯಯನದ ಅನುಕೂಲಕ್ಕೆ ಈ ಕೆಳಗಿನಂತೆ ೬ ಅಧ್ಯಾಯಗಳಲ್ಲಿ ವಿಷಯವನ್ನು ವಿಂಗಡಿಸಲಾಗಿದೆ. ಇದೇ ಪ್ರಸ್ತುತ ಪ್ರಬಂಧದ ವ್ಯಾಪ್ತಿಯೂ ಹೌದು.

ಮೊದಲನೆಯ ಅಧ್ಯಾಯ: ಬಿ.ಆರ್. ಅರಿಷಿಣಗೋಡಿಯವರು ಕಂಪನಿ ಮಾಲಿಕರಾಗಿ ನಾಟಕ ರಚನಾಕಾರರಾಗಿ, ನಟರಾಗಿ, ನಾಟಕ ನಿರ್ದೇಶಕರಾಗಿ ಬಹುಮುಖ ವ್ಯಕ್ತಿತ್ವವನ್ನು ಹೊಂದಿದವರು. ನಾಲ್ವತ್ತೂರು ವರ್ಷಗಳ ಕಾಲ ರಂಗಭೂಮಿಗೆ ದುಡಿದ ಅರಿಷಿಣಗೋಡಿಯವರ ವ್ಯಕ್ತಿತ್ವ, ಸಾಧನೆ ಮುಂದಿನ ಪೀಳಿಗೆಗೆ ಉಳಿಸಿಕೊಡಬೇಕೆಂಬ ಉದ್ದೇಶವನ್ನು ಪ್ರಸ್ತುತ ಪ್ರಬಂಧ ಹೊಂದಿದೆ ಎಂಬುವುದನ್ನು ವಿವರಿಸಿದೆ.

ಎರಡನೆಯ ಅಧ್ಯಾಯ: ಸಮಕಾಲೀನ ರಂಗಭೂಮಿಯನ್ನು ಕುರಿತಾಗಿದೆ. ಗರುಡ ಸದಾಶಿವರಾಯರು, ಗುಬ್ಬಿ ವೀರಣ್ಣ, ಕಂದಗಲ್ ಹನುಮಂತರಾಯ ಮುಂತಾದವರಿಂದ ಬೆಳೆದುಕೊಂಡು ಬಂದ ವೃತ್ತಿರಂಗಭೂಮಿಯು ಮುಂದಿನ ತಲೆಮಾರಿಗೆ ಪ್ರೇರಣೆ ನೀಡಿತು. ತರುವಾಯ ಎಚ್.ಎನ್. ಹೂಗಾರ, ಭಸ್ಮೆ, ಪಿ.ಬಿ. ಧುತ್ತರಗಿ, ಎಂ.ಎಸ್. ಖೇಡಗಿ, ಮಹಾಂತೇಶ ಶಾಸ್ತ್ರಿ, ಗಂಗಾಧರ ಶಾಸ್ತ್ರಿ ಮುಂತಾದವರಿಂದ ಗಟ್ಟಿಯಾಗಿ ನೆಲೆನಿಂತು ತನ್ನ ಸ್ಥಾನವನ್ನು ಜನಮಾನಸದಲ್ಲಿ ಗುರುತಿಸಿಕೊಂಡ ಸಂದರ್ಭದಲ್ಲಿಯೆ ಬಿ.ಆರ್. ಅರಿಷಿಣಗೋಡಿಯವರ ಶ್ರೀ ಹುಚ್ಚೇಶ್ವರ ನಾಟ್ಯಸಂಘ, ಕಮತಗಿ ನಾಟಕ ಕಂಪನಿಯು ಪ್ರಾರಂಭವಾಗುವದು. ನಾಡಿನಾದ್ಯಂತ ತನ್ನ ಸಾವಿರಾರು ರಂಗಪ್ರಯೋಗಗಳನ್ನು ಪ್ರದರ್ಶಿಸಿ ಕರ್ನಾಟಕ ವೃತ್ತಿರಂಗಭೂಮಿಗೆ ಅರಿಷಿಣಗೋಡಿಯವರು ಕೊಟ್ಟ ಕೊಡುಗೆಯನ್ನು ಇಲ್ಲಿ ಗುರುತಿಸಲಾಗುವುದು.

ಮೂರನೆಯ ಅಧ್ಯಾಯ: ಅರಿಷಿಣಗೋಡಿಯವರ ಕೌಟುಂಬಿಕ ವಿವರವನ್ನು ನೀಡುವುದು ಈ ಅಧ್ಯಾಯದ ಉದ್ದೇಶ. ತಂದೆ, ತಾಯಿ, ಸಹೋದರರು, ಸೋದರಮಾವ ಶ್ರೀಕೃಷ್ಣ ಪಾರಿಜಾತ ಪ್ರವೀಣ ಕೃಷ್ಣಪ್ಪ ಹುಡೇದಮನಿಯವರ ಪರಿಚಯ, ಬಿ.ಆರ್. ಅರಿಷಿಣಗೋಡಿಯವರ ಜನನ, ಬಾಲ್ಯ, ವಿದ್ಯಾಭ್ಯಾಸ, ಮದುವೆ, ಅಣ್ಣ ರಾಯಪ್ಪನ ಪರಿಚಯ ಬೆನಕಟ್ಟಿಯಿಂದ ಮಾವ ಗಿರಿಯಪ್ಪ ಮತ್ತು ಅಕ್ಕ ಲಚ್ಚವ್ವನ ಊರಾದ ಕಮತಗಿಗೆ ಬಂದದ್ದು ಕಮತಗಿಯಲ್ಲಿ ಕಿರಾಣಿ ಅಂಗಡಿ ಇಟ್ಟದ್ದು ಅಲ್ಲಿಯೇ ನಾಟಕಕಾರರಾಗಿ, ಕಂಪನಿ ಮಾಲಿಕರಾಗಿ ರಂಗಭೂಮಿಗೆ ತಮ್ಮನ್ನು ತೊಡಗಿಸಿಕೊಂಡ ವಿವರಣೆಯನ್ನು ವಿವರಿಸಲಾಗುವುದು.

ನಾಲ್ಕನೆಯ ಅಧ್ಯಾಯ: ಇಲ್ಲಿ ನಾಟಕಕಾರ ಅರಿಷಿಣಗೋಡಿಯವರ ವೃತ್ತಿ ಕಂಪನಿಯ ನಡೆ ಹಾಗೂ ಅರಿಷಿಣಗೋಡಿಯವರ ರಂಗ ಶ್ರದ್ಧೆಗಳನ್ನು ವಿವರಿಸಲಾಗುವುದು.

ಐದನೆ ಅಧ್ಯಾಯ: ಅರಿಷಿಣಗೋಡಿಯವರ ಒಟ್ಟು ಹದಿನಾಲ್ಕು ನಾಟಕಗಳ ಸಮೀಕ್ಷೆ ಹಾಗೂ ಭಾಷಿಕ ಮತ್ತು ಸಾಹಿತ್ಯಿಕ ಮೌಲ್ಯಮಾಪನವನ್ನು ~~ಈ ಅಧ್ಯಾಯದಲ್ಲಿ ಮಾಡ~~ಲಾಗುವುದು.

ಆರನೆಯ ಅಧ್ಯಾಯ: ಸಮಾರೋಪವಾಗಿದ್ದು ಪ್ರಸ್ತುತ ಪ್ರಬಂಧದ ಫಲಿತಗಳನ್ನು ಇಲ್ಲಿ ಸಮೀಕರಿಸಲಾಗುವುದು.

ಸಂದರ್ಭಸೂಚಿ

೧. ಹೊಸ ಶತಮಾನದಲ್ಲಿ ರಂಗಭೂಮಿಯ ಸವಾಲುಗಳು ಮತ್ತು ಜವಾಬ್ದಾರಿಗಳು ಲೇ. ಡಾ. ಗಣೇಶ ಅಮೀನಗಡ, ಸುಧಾ ವಾರಪತ್ರಿಕೆ, ೨ನೇ ಅಗಸ್ಟ್ ೨೦೦೧.

೨. ಹೊಸ ಶತಮಾನದಲ್ಲಿ ರಂಗಭೂಮಿಯ ಸವಾಲುಗಳು ಮತ್ತು ಜವಾಬ್ದಾರಿಗಳು ಲೇ. ಡಾ. ಗಣೇಶ ಅಮೀನಗಡ, ಸುಧಾ ವಾರಪತ್ರಿಕೆ, ೨ನೇ ಅಗಸ್ಟ್ ೨೦೦೧.

೩. ಕನ್ನಡ ರಂಗಭೂಮಿ, ಡಾ. ಬಿ.ವಿ. ವೈಕುಂಠರಾಜು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೫೩

೪. ದಿನಾಂಕ: ೦೩-೦೯-೨೦೦೮ ಬಿ.ಆರ್. ಅರಿಷಿಣಗೋಡಿಯವರ ಜೊತೆ ನಡೆದ ಸಂದರ್ಶನ

ಅಧ್ಯಾಯ ೨

ಸಮಕಾಲೀನ ರಂಗಭೂಮಿ

ಜನಪದ ರಂಗಭೂಮಿ-ವೃತ್ತಿರಂಗಭೂಮಿ-ಹವ್ಯಾಸಿ ರಂಗಭೂಮಿ

ವೃತ್ತಿರಂಗಭೂಮಿಯ ನಡೆ

ನಾಟಕ ಪ್ರಕಾರಗಳು

ಪೌರಾಣಿಕ-ಐತಿಹಾಸಿಕ-ಸಾಮಾಜಿಕ

ವೃತ್ತಿರಂಗಭೂಮಿಯ ಸಮಸ್ಯೆಗಳು

ಅಧ್ಯಾಯ ೨

ಸಮಕಾಲೀನ ರಂಗಭೂಮಿ

ಸಂಸ್ಕೃತಿಯೊಂದು ಕಟ್ಟಿಕೊಳ್ಳಲು ಬದುಕಿನ ರೀತಿ, ಸಂಪ್ರದಾಯ, ಹಬ್ಬ-ಹರಿದಿನಗಳ ಆಚಾರ-ವಿಚಾರ, ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆಗಳೆಲ್ಲ ಕಾರಣವಾಗುತ್ತವೆ.

ಸಂಸ್ಕೃತಿಯ ಕೆನೆ ಎಂಬುದು ಆಯಾ ನಾಡಿನ ಅಥವಾ ಜನಾಂಗದ ಕಲೆಗಳ ಮುಖಾಂತರ ತೋರ್ಪಡುತ್ತದೆ. ಕನ್ನಡ ನಾಡಿನ ಅನೇಕ ಕಲೆಗಳಲ್ಲಿ ಪ್ರಸ್ತುತ ನಮಗೆ ಮುಖ್ಯವಾಗುವುದು ಈ ನಾಡಿನ ರಂಗಭೂಮಿ.

ರಂಗಭೂಮಿಯೆಂಬುದು ಸಂಭಾಷಣೆ, ಸಂಗೀತ, ಅಭಿನಯ ಹೀಗೆ ಅನೇಕ ಲಲಿತಕಲೆಗಳನ್ನು ಮೇಳೈಸಿಕೊಂಡು, ಬೇರೆ ಬೇರೆ ಅಭಿರುಚಿಯ ಜನರಿಗೆ ಏಕಕಾಲಕ್ಕೆ ರಸಾನಂದವನ್ನು ಕೊಟ್ಟು ರಂಜಿಸುತ್ತದೆ. ರಂಗಭೂಮಿಯ ಪರಮಗುರಿಯೂ ಇದೇ ಆಗಿದೆ.

ಕಾಳಿದಾಸನ ಅಭಿಪ್ರಾಯದಂತೆ, ರಂಗಭೂಮಿ ಬೇರೆ ಬೇರೆ ಭಾವಗಳನ್ನು ಮೂಡಿಸಿ ನೋಟಕನ ಬಗೆಯಲ್ಲಿ ನವರಸಗಳನ್ನು ಒಸರಿಸುವುದರಿಂದಾಗಿ ನಾಟಕವು ಕಾವ್ಯ ಎನಿಸಿಕೊಂಡಿದೆ. ಕವಿಕಲ್ಪನೆಯ ಸೃಷ್ಟಿಯಾದ ಶ್ರವ್ಯಕಾವ್ಯಕ್ಕಿಂತ ಕಣ್ಣುತುಂಬುವಂತೆ ಚಿತ್ರಗಳನ್ನು ಕಟ್ಟುವ ದೃಶ್ಯಕಾವ್ಯವಾದ ನಾಟಕ ಒಂದೇ ಕಾಲಕ್ಕೆ ಬಿನ್ನರುಚಿಯ ಜನರನ್ನು ಆಕರ್ಷಿಸಲು ಹೆಚ್ಚು ಶಕ್ತವಾಗಿದೆ. ಕಾವ್ಯದ ಮಾತುಗಳಿಗೆ ಅಭಿನಯದಿಂದ ಮೂರ್ತಸ್ವರೂಪವನ್ನು ಕೊಟ್ಟು, ಸಂಗೀತ, ನೃತ್ಯ, ಚಿತ್ರಕಲೆಗಳಿಂದ ರಸತುಂಬಿ ಜೀವನಚಿತ್ರವನ್ನು ಕಣ್ಣು ಮುಂದೆ ಕಟ್ಟಿನಿಲ್ಲಿಸುವ ನಾಟಕ ಸರ್ವರಂಜನೆಯ ಧ್ಯೇಯವನ್ನು ಹೊತ್ತಿದೆ. ಸತ್ಯವೂ, ಸಂಪೂರ್ಣವೂ ಆದ ಅನುಭವವನ್ನು ಉಣಿಸುವದೇ ದೃಶ್ಯಕಾವ್ಯವಾದ ನಾಟಕದ ಗುರಿ. ಇಂತಹ ಅನುಭವ ಸುಜ್ಞಾನಿಗಳಿಗೂ, ಅಜ್ಞಾನಿಗಳಿಗೂ ಒಮ್ಮೆಗೇ ಆಗಬೇಕು. ಪಂಡಿತರನ್ನು, ಪಾಮರರನ್ನು ಬೆಳೆದವರನ್ನೂ, ಗಂಡನ್ನೂ, ಹೆಣ್ಣನ್ನೂ ಎಲ್ಲ ರೀತಿಯವರನ್ನು ಸೆರೆಹಿಡಿಯಲು ಸಮರ್ಥವಾಗಿರುವ ಸಾಧನವೆಂದರೆ ನಾಟಕ. ಅನೇಕ ಕಲೆಗಳ ಉತ್ತಮಾಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡಿರುವುದರಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ನಾಟಕಕ್ಕೆ ಈ ಪಟ್ಟ ಬಂದಿತೆನ್ನಿಸುತ್ತದೆ.

ಹೀಗೆ ಲೌಕಿಕ ಬದುಕಿನ ವಿವಿಧ ಆಯಾಮಗಳನ್ನು ತೋರಿಸಿ ಪ್ರೇಕ್ಷಕರನ್ನು ನಾಟಕ ರಂಜಿಸುವುದರಿಂದ ಅದು ಸಾಹಿತ್ಯಕ್ಕಿಂತಲೂ ಶ್ರೇಷ್ಠವೆಂಬುದು ಕೆಲವರ ಅಭಿಮತ. "ಒಂದು ಪುಸ್ತಕವು ಮಾಡುವುದಕ್ಕಿಂತ ನೂರು ಪಾಲು ಹೆಚ್ಚಿನ ಸಾಧನೆಯನ್ನು ನಾಟಕ ಮಾಡಬಲ್ಲುದಾಗಿದೆ. ವಿಚಾರವಂತನಿಗೆ ಬದುಕಿನ ರಹಸ್ಯವನ್ನು ಸಾಮಾನ್ಯನಿಗೆ ಜೀವನತತ್ವವನ್ನು ಕಲಾವಿದನಿಗೆ ಕಲ್ಪನಾದೃಷ್ಟಿಯ ವೈಭವವನ್ನು ತಾಮಸಿಗೆ ಭಾಷೆಯ ಬೆಡಗುಗಳನ್ನು ಅರಸಿಕನಾದವನಿಗೆ ವಿನೋದವನ್ನು ಅದು ಉಣಿಸುತ್ತದೆ ಎಂದು ಹೆನ್ರಿ ಆರ್ವಿಂಗ್ ಹೇಳಿದ."[೧] ಈ ಮಾತು ರಂಗದ ಮೇಲೆ ಪ್ರದರ್ಶಿಸುವ ನಾಟಕದ ತತ್ವವನ್ನು ಅನಾವರಣ ಗೊಳಿಸುತ್ತದೆ. ರಂಗಭೂಮಿಯಂದರೆ ನಾಟಕಕಾರನಿಂದ ಹಿಡಿದು ತನ್ನದೇ ರಂಗಕರ್ಮಿಗಳನ್ನು ಒಳಗೊಂಡ ಒಂದು ಸಂಸ್ಥೆ. ಯಾವುದೇ ನಾಡಿನ ಭೌಗೋಳಿಕ, ಸಾಂಸ್ಕೃತಿಕ ವಿದ್ಯಮಾನಗಳಿಗೆ ತಕ್ಕ ಬೇರೆ ಬೇರೆ ಪ್ರಕಾರಗಳು ರಂಗಭೂಮಿಯಲ್ಲಿ ಹುಟ್ಟುತ್ತವೆ. ರಂಗಭೂಮಿಯಲ್ಲಿ ಮೂರು ಪ್ರಕಾರಗಳನ್ನು ಕಾಣುತ್ತೇವೆ.

೧. ಜನಪದ ರಂಗಭೂಮಿ

೨. ವೃತ್ತಿರಂಗ ಭೂಮಿ

೩. ಹವ್ಯಾಸಿ ರಂಗಭೂಮಿ

ಜನಪದ ರಂಗಭೂಮಿ: ಜಗತ್ತಿನ ಯಾವುದೇ ರಂಗಭೂಮಿಯನ್ನು ನೋಡಿದರೂ ಜಾನಪದ ರಂಗಭೂಮಿಯೇ ಮೂಲ ಎಂಬುದು ಮನವರಿಕೆಯಾಗುತ್ತದೆ. ಅನಾಗರಿಕ ಸ್ಥಿತಿಯಲ್ಲಿದ್ದ ಮಾನವರು ಗುಡುಗು, ಸಿಡಿಲು, ಮಳೆ, ರೋಗ, ಮರಣ ಮುಂತಾದವುಗಳಲ್ಲಿ ಯಾವುದೋ ದುಷ್ಟಶಕ್ತಿಗಳ ಕೈವಾಡವಿದೆಯೆಂದು ಭಾವಿಸಿದ್ದರು. ಈ ದುಷ್ಟಶಕ್ತಿಗಳ ಶಮನಕ್ಕಾಗಿ ದೈವಾರಾಧನೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ನೆಮ್ಮದಿ ಕಾಣಲು ಪ್ರಯತ್ನಿಸಿದರು. ಇಂತಹ ಸ್ಥಿತಿಯಲ್ಲಿ ಅನೇಕ ದೇವರುಗಳ ಸೃಷ್ಟಿಯನ್ನು ಮಾನವ ಮಾಡಿದ. ಮುಂದೆ ಆಯಾ ಧರ್ಮಕ್ಕನುಗುಣವಾಗಿ ಅನೇಕ ದೇವರು ಸೃಷ್ಟಿಗೊಂಡರು. ದೇವರುಗಳ ಆರಾಧನೆಗಾಗಿ ಗುಡಿ-ಗುಂಡಾರಗಳು ನಿರ್ಮಾಣವಾದವು. ಮುಂದೆ ತಮ್ಮ ಆರಾಧ್ಯದೇವರನ್ನು ಕುರಿತು ಕಥೆ ಕಟ್ಟಿ ದೇವರ ಗುಡಿಯ ಒಳಗಡೆಯೇ ಹಾಡುತ್ತಾ ಕುಣಿಯತೊಡಗಿದರು. ಇದರ ಜೊತೆಗೆ ತಮಗೆ ತಿಳಿದಂತೆ ಮಾತುಗಳನ್ನು ಜೋಡಿಸಿದರು. ಇಂತಹ ದೃಶ್ಯಗಳನ್ನು ನೋಡುವವರ ಸಂಖ್ಯೆ ಅಧಿಕವಾಗಿ ಗುಡಿಯ ಒಳಗೆ ಹಾಡು, ಕುಣಿತ, ಮಾತುಗಳನ್ನು ಹೇಳುತ್ತಿದ್ದವರು ಗುಡಿಯ ಹೊರಗಡೆ ಇದ್ದ ಜಗಲಿಯ ಮೇಲೆ ಆಟವಾಡತೊಡಗಿದರು. ಇವತ್ತಿಗೂ ಕೂಡ ನಾವು ಹಬ್ಬ ಹರಿದಿನಗಳಲ್ಲಿ ಹಳ್ಳಿಯಲ್ಲಿ ನಾಟಕ ಪ್ರದರ್ಶನವು, ರಂಗಸಜ್ಜಿಕೆಯು ದೇವರ ಗುಡಿಯ ಮುಂದೆ ನಿರ್ಮಾಣಗೊಂಡಿರುವುದನ್ನು ಕಾಣಬಹುದು.

ಇವೆಲ್ಲ ಜಾನಪದ ರಂಗಭೂಮಿಯ ಆದಿಮ ಹೆಜ್ಜೆಗಳು. ಜನಪದರು ಅನಕ್ಷರಸ್ಥರಾದರೂ ಪ್ರವಚನಕಾರರಿಂದ ಕೀರ್ತನಕಾರರಿಂದ ಅನೇಕ ವಿಷಯಗಳನ್ನು ರಂಗಭೂಮಿಗೆ ಸಂಬಂಧಪಟ್ಟಂತೆ

ಬಲ್ಲವರಾಗಿದ್ದರು. ಬಹುಶಃ ಅಂಥವರಿಂದಲೇ ಪುರಾಣಗಳಿಗೆ ಸಂಬಂಧಪಟ್ಟಂತೆ ವಿಷಯ ಸಂಗ್ರಹಿಸಿದರು. ಅವನ್ನು ನೃತ್ಯಗಳಿಗೆ ಜೋಡಿಸಿಕೊಂಡರು. ಕ್ರಮೇಣ ಅಭಿನಯವನ್ನೂ ಸೇರಿಸಿ ನಾಟಕವಾಗಿಸಿದರು. ಭಾರತದ ತುಂಬ ಇಂಥ ಆಟಗಳನ್ನು ಕಾಣುತ್ತೇವೆ. ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಸ್ವರೂಪದಲ್ಲಿ ಒಂದೇ ಬಗೆಯಾದ ಆಟಗಳಿವೆ. ಇದನ್ನೇ ದ್ರಾವಿಡ ರಂಗಭೂಮಿ ಎನ್ನುವರು. ಕರ್ನಾಟಕದ ಯಕ್ಷಗಾನ, ತೆಲುಗಿನ ಬೀದಿನಾಟಕ, ತಮಿಳಿನ ತಿರುಕೂತ್ತು ರಂಗಭೂಮಿಯನ್ನು ತಣಿಸಿವೆ. ಕರ್ನಾಟಕದಲ್ಲಿ ಹರಡಿಕೊಂಡಿರುವ ಬೇರೆ ಬೇರೆ ಪ್ರಕಾರಗಳು ನಮ್ಮವರ ವಿವಿಧ ಬಗೆಯ ಜ್ಞಾನ, ಅಭಿರುಚಿಗಳನ್ನು ಖಚಿತಪಡಿಸುತ್ತವೆ. ಯಕ್ಷಗಾನ, ದೊಡ್ಡಾಟಗಳು ಪುರಾತನ ಕಥಾನಕಗಳನ್ನು ಆಧರಿಸಿ ಹಳೆಯದಾದ ಕಥೆಗಳನ್ನೇ ಹೆಚ್ಚಾಗಿ ಆಯ್ದುಕೊಂಡರು. ಶ್ರೀಕೃಷ್ಣ ಪಾರಿಜಾತ ಪೌರಾಣಿಕ ಕಥೆಯನ್ನು ಒಳಗೊಂಡಿದ್ದರೂ ಸಾಮಾಜಿಕ ಆವರಣವನ್ನೇ ಪಡೆಯುತ್ತದೆ. ಗೊಂಬೆ ಆಟಗಳೂ ಪೌರಾಣಿಕ ವಿಷಯಗಳನ್ನೇ ಪೇರಿಸಿಕೊಂಡವು. ಕರ್ನಾಟಕದ ಸಣ್ಣಾಟಗಳ ಬಗೆಗೆ ಎರಡು ಮಾತು ಇಲ್ಲಿಯೇ ಹೆಚ್ಚಿಗೆ ಹೇಳಬೇಕಾಗುತ್ತದೆ. ಜನಪದರು ಕೇವಲ ಪುರಾಣದೊಳಗಿನ ಹರಿಕಥೆ ಕೇಳಿ ಅಂಥ ಕಥೆಗಳನ್ನೇ ಅನುಕರಣೆ ಮಾಡಲಿಲ್ಲ. ಅವರು ಮನಸ್ಸು ಕಣ್ಣು ತೆರೆದುಕೊಂಡು ಸುತ್ತಲ ಸಮಾಜವನ್ನು ಪರಿಭಾವಿಸುತ್ತಿದ್ದರು. ಸಮಾಜದಲ್ಲಿ ತುಂಬಿರುವ ಸಾಮಾಜಿಕ ಮನಸ್ಸಿನ ವಿವರಗಳು ಸಾಮಾಜಿಕ ಘಟನೆಗಳು, ಸಂಘರ್ಷಗಳು ನಮ್ಮವರನ್ನು ಕಾಡಿದವು, ಕೊರೆದವು. ಅಂತಲೇ ಸಂಗ್ಯಾ ಬಾಳ್ಯಾ, ಕಟ್ಟಿ ಚೆನ್ನದಂಥ ಬಯಲಾಟಗಳು ಸೃಷ್ಟಿಗೊಂಡವು.

ಇದುವರೆಗಿನ ಈ ಜಾನಪದರ ನಡೆ ನಮ್ಮ ವೃತ್ತಿರಂಗ ಭೂಮಿಯ ಮೇಲೆ ಪರಿಣಾಮವನ್ನು ಬೀರಿದವು ಎಂಬುದನ್ನು ಮುಂದೆ ನೋಡುತ್ತೇವೆ.

ನೃತ್ಯ, ಕುಣಿತ, ಮಾತುಗಳು ನಾಟಕದ ವಸ್ತುವಿಗೆ ಮೇಳೈಸಿ ದಾಸರಾಟ, ದಪ್ಪಿನಾಟ, ಗೊಂಬೆಯಾಟ, ದೊಡ್ಡಾಟ, ಸಣ್ಣಾಟ, ಯಕ್ಷಗಾನ, ಪಾರಿಜಾತ ಮುಂತಾದವು ಜನಪದ ರಂಗಭೂಮಿಯ ಪ್ರಕಾರಗಳಾಗಿ ಹುಟ್ಟಲು ಕಾರಣವಾದವು.

ಕಥೆಯನ್ನು ಒಂದು ಚೌಕಟ್ಟಿಗೆ ತಂದು ಹಬ್ಬಹರಿದಿನಗಳಲ್ಲಿ ರಂಗಪ್ರಯೋಗಕ್ಕೆ ಒಳಪಡಿಸಿ ಜನರು ಆನಂದಪಡುತ್ತಿದ್ದರು. ರಂಗ ಪ್ರಯೋಗಕ್ಕೆ ಬೇಕಾದ ವೇಷಭೂಷಣ ಮುಂತಾದ ರಂಗಪರಿಕರಗಳನ್ನು ಊರಲ್ಲಿಯೇ ಪಾತ್ರಧಾರಿಗಳು ಸಂಗ್ರಹಿಸಿ ಪ್ರದರ್ಶನ ಮಾಡುತ್ತಿದ್ದರು. ಪ್ರದರ್ಶನ ಮುಗಿದ ನಂತರ ಸಂಗ್ರಹಿಸಿದ ವಸ್ತುಗಳನ್ನು ಮರಳಿಸುವ ರೂಢಿಯನ್ನು ಇಟ್ಟುಕೊಂಡಿದ್ದರು.

ವೃತ್ತಿರಂಗಭೂಮಿ: ನಮ್ಮ ನಾಡಿನಲ್ಲಿ ಮೊದಲಿನಿಂದಲೂ ರಂಗಭೂಮಿ ಬೆಳೆದು ಬಂದಿತ್ತು. ಅದು ಕೇವಲ ರಾಜಮಹಾರಾಜರ ಆಸ್ಥಾನದಲ್ಲಿ ಪ್ರದರ್ಶನಗೊಂಡು ರಾಜರು, ಆಸ್ಥಾನ ಪಂಡಿತರು ಹಾಗೂ ರಾಜಕುಟುಂಬದ ಪರಿವಾರದವರಿಗೆ ಮಾತ್ರ ಸೀಮಿತವಾಗಿತ್ತು. ಇದರಿಂದ ಜನಸಾಮಾನ್ಯರು ಮತ್ತು ಮಧ್ಯಮ ವರ್ಗದ ಜನ ಈ ತರಹದ ರಂಗಭೂಮಿಯ ಮನರಂಜನೆಯಿಂದ ವಂಚಿತರಾಗಿದ್ದರು.

ದೇವರ ಗುಡಿಯ ಮುಂದಿನ ಜಗುಲಿಯ ಮೇಲೆ, ದೇವಾಲಯದ ಮುಂದಿನ ಬಯಲುಗಳಲ್ಲಿ ರಂಗಸಜ್ಜಿಕೆಗಳನ್ನು ನಿರ್ಮಾಣ ಮಾಡಿ ಹಿಲಾಲುಗಳ ಬೆಳಕಿನಲ್ಲಿ ಪ್ರದರ್ಶನಗೊಳಿಸುತ್ತಿದ್ದರು. ಮುಂದೆ ಬರಬರುತ್ತ ವಿದ್ಯುದ್ದೀಪ, ಧ್ವನಿವರ್ಧಕ, ಮುಖವರ್ಣಿಕೆ, ಸುಸಜ್ಜಿತ ವೇಷ ಭೂಷಣಗಳನ್ನು ಉಪಯೋಗಿಸಿ ನಾಟಕವಾಡಲು ತೊಡಗಿದಾಗ ಖರ್ಚು ಹೆಚ್ಚಿಗೆ ಬರಹತ್ತಿತು. ಪಾತ್ರಧಾರಿಗಳು ಕೈಯಿಂದ ಹಣಹಾಕಿ ಇಲ್ಲವೆ ಊರಲ್ಲಿ ಪಟ್ಟಿ (ಚಂದಾ) ಎತ್ತಿ ನಾಟಕವಾಡಲು ಪ್ರಾರಂಭ ಮಾಡಿದರು. ನಾಟಕದ ವಸ್ತು, ರಂಗಸಜ್ಜಿಕೆ, ವೇಷ-ಭೂಷಣಗಳು ಜನರನ್ನು ಆಕರ್ಷಿಸಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಬರಲಾರಂಭಿಸಿದರು. ಇವರ ಅಭಿರುಚಿಯನ್ನು ವ್ಯಾಪಾರಿ ತಂತ್ರವನ್ನಾಗಿ ಬಳಸಿಕೊಂಡು ಪ್ರೇಕ್ಷಕರಿಂದ ಹಣ ವಸೂಲಿ ಮಾಡಲು ನಾಟಕಕಾರರು ಮುಂದಾದರು. ಪ್ರೇಕ್ಷಕರು ಕೊಟ್ಟ ಹಣಕ್ಕೆ ತಕ್ಕಂತೆ ಆಸನದ ವ್ಯವಸ್ಥೆಯನ್ನು ಮಾಡಿದರು. ಕಲೆಯ ಹುಚ್ಚು, ರಂಗಕಲಾಸೇವೆಯ ಕಾಳಜಿ ಹಾಗೂ ಲಾಭದಾಯಕವಾಗಿ ಕಂಡ ಅನೇಕರು ತಂಡಕಟ್ಟಿಕೊಂಡು ಬೇರೆ ಬೇರೆ ನಾಟಕಗಳನ್ನು ಆಡುತ್ತಾ ಊರೂರು ಸುತ್ತಿದರು. ಇದರಿಂದ ಲಾಭವಾದದ್ದನ್ನು ಮನಗಂಡ ನಾಟಕಕಾರರು ಇದನ್ನೆ ವೃತ್ತಿಯನ್ನಾಗಿ ಮಾಡಿಕೊಂಡರು. "ಒಟ್ಟಿನಲ್ಲಿ ಹಣಕೊಟ್ಟು ನಾಟಕ ನೋಡುವ ಪ್ರೇಕ್ಷಕರು ಮತ್ತು ಅವರು ತೆತ್ತ ಹಣಕ್ಕೆ ಪ್ರತಿಫಲವಾಗಿ ನಾಟಕ ಮಾಡುವ ಕಲಾವಿದರು ನಿರ್ಮಾಣಗೊಂಡರು."[೨] ಇಂತಹ ಪರಿಸ್ಥಿತಿ ಇರುವಾಗಲೇ ಬಂಗಾಳದಲ್ಲಿ ವೃತ್ತಿರಂಗಭೂಮಿ ತಲೆದೋರಿತು ಎಂದು ಡಾ. ಮರುಳಸಿದ್ದಪ್ಪನವರು ಹೇಳಿದ ಮಾತು ವೃತ್ತಿರಂಗಭೂಮಿಯ ಧೋರಣೆಯನ್ನು ತೋರಿಸುವದು. ಒಟ್ಟಿನಲ್ಲಿ ಬಂಗಾಲದಲ್ಲಿ ರಂಗಚಟುವಟಿಕೆಗಳು ನಡೆದು ಪಾರಸಿ ಕಂಪನಿಗಳ ಪ್ರೇರಣೆಯಿಂದ ಆಧುನಿಕ ವೃತ್ತಿರಂಗಭೂಮಿ ಹುಟ್ಟಿಕೊಂಡಿತೆನ್ನಬಹುದು. ಅದು ಮುಂದೆ ಕರ್ನಾಟಕವನ್ನೂ ಪ್ರವೇಶಿಸಿತು.

ಹವ್ಯಾಸಿ ರಂಗಭೂಮಿ: ನಾಟಕ ಕಲೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಅದರ ಪ್ರದರ್ಶನಗಳಿಂದ ಬಂದ ಹಣದಿಂದ ಜೀವನ ಸಾಗಿಸುವುದು ವೃತ್ತಿರಂಗ ಭೂಮಿಯಾದರೆ ಕೇವಲ ಲಾಭ-ನಷ್ಟಗಳನ್ನು ಲೆಕ್ಕಿಸದೇ ಹಣವಿಲ್ಲದೇ ಹವ್ಯಾಸಕ್ಕಾಗಿ ನಾಟಕ ಪ್ರದರ್ಶನ ಮಾಡುವದು ಹವ್ಯಾಸಿ ರಂಗಭೂಮಿ ಎನಿಸಿತು. ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಒಂದು ಕಡೆ ಸೇರಿ ತಮಗೆ ಇಷ್ಟವಾದ ಯಾವುದೊ ಒಂದು ಪ್ರಚಲಿತ ಸಮಸ್ಯೆಯನ್ನು ಕುರಿತು ರಂಗಪ್ರದರ್ಶನಮಾಡಿ ಪ್ರೇಕ್ಷಕರಿಂದ ಮೆಚ್ಚುಗೆ ಪಡೆಯುವ ಉದ್ದೇಶದಿಂದ ಹವ್ಯಾಸಿ ರಂಗಭೂಮಿ ಹುಟ್ಟಿಕೊಂಡಿತು. ವೃತ್ತಿರಂಗಭೂಮಿಯಲ್ಲಿ ಮಾಲಿಕ-ಕಲಾವಿದರ ಮಧ್ಯ ಭೇದ-ಭಾವವಿರುತ್ತದೆ. ಆದರೆ ಹವ್ಯಾಸಿ ರಂಗತಂಡದಲ್ಲಿ ಯಾವುದೇ ಭೇದ-ಭಾವವಿಲ್ಲದೇ ಎಲ್ಲರು ಸಮಾನರು ಎಂಬ ಮನೋಭಾವನೆ ಇರುತ್ತದೆ.

೧೯೩೦ರ ವೇಳೆಗಾಗಲೇ ವೃತ್ತಿರಂಗಭೂಮಿಯಲ್ಲಿ ಅನೇಕ ಏರಿಳಿತಗಳು ನಡೆದಿದ್ದವು. ವೃತ್ತಿರಂಗ ಭೂಮಿಯು ತನ್ನ ಪಾವಿತ್ರ್ಯವನ್ನು ಕಡಿಮೆ ಮಾಡಿಕೊಂಡು ಕಳಪೆದರ್ಜೆಯ ನಾಟಕಗಳನ್ನು ಪ್ರದರ್ಶಿಸಿ

ತನ್ನ ಹಿಂದಿನ ವೈಭವವನ್ನಂತೂ ಕಳೆದುಕೊಂಡಿತ್ತು. ಹೊಸತಲೆಮಾರಿನ ಅನೇಕರು ಪಾಶ್ಚಿಮಾತ್ಯ ದೇಶಗಳಿಗೆ ಅಧ್ಯಯನಕ್ಕೆ ಹೋಗಿ ಅಲ್ಲಿಯ ನಾಟಕದ ಕಥಾವಸ್ತು ರಂಗಪ್ರದರ್ಶನದ ಸಾಧ್ಯತೆಗಳನ್ನು ನೋಡಿ ತಿಳಿದುಕೊಂಡವರಾಗಿದ್ದರು. ನಮ್ಮ ವೃತ್ತಿರಂಗಭೂಮಿಗಳ ನಾಟಕ ಪ್ರದರ್ಶನದಿಂದ ರೋಸಿಹೋಗಿದ್ದ ನಮ್ಮ ಸಾಹಿತಿಗಳು ಹೊಸದೊಂದು ರಂಗ ಸೃಷ್ಟಿ ಮಾಡುವ ಭರದಲ್ಲಿ ಹವ್ಯಾಸಿ ರಂಗ ತಂಡಗಳನ್ನು ಹುಟ್ಟು ಹಾಕಿದರು. ಈಗಾಗಲೇ ನಮ್ಮ ನಾಡಿನಲ್ಲಿದ್ದ ಜನಪದರಂಗಭೂಮಿ, ವೃತ್ತಿರಂಗಭೂಮಿಗಳ ನಡುವೆ ಹೊಸ ರೀತಿಯ ನಾಟಕಗಳನ್ನು ರಂಗಪ್ರಯೋಗಕ್ಕೆ ತಂದರು.

ಅನೇಕ ಏರಿಳಿತಗಳ ಹೊಡೆತಕ್ಕೆ ಸಿಕ್ಕ ವೃತ್ತಿರಂಗಭೂಮಿ ಒಂದು ನೆಲೆ ಕಂಡುಕೊಳ್ಳುತ್ತಿರುವ ಕಾಲದಲ್ಲಿ ಶ್ರೀರಂಗ, ಕೈಲಾಸಂ, ಶಿವರಾಮ ಕಾರಂತ ಮುಂತಾದ ಸಾಹಿತಿಗಳು ವೃತ್ತಿರಂಗಭೂಮಿಯ ವಿರುದ್ಧ ನಿಂತಿದ್ದು ವಿಪರ್ಯಾಸ. "ಇದಕ್ಕೆ ಕಾರಣ ಕನ್ನಡ ಬುದ್ಧಿಜೀವಿಗಳ ಸೊಕ್ಕು. ಸಮೀಚಿನ ಹೊಟ್ಟೆತುಂಬ ಉಂಡು, ಪೊಕ್ತರಾಗಿ ಅಡ್ಡಾಡುವ ಎಲ್ಲರಿಗೂ ಹೆದರುತ್ತ ನಮ್ರ ಮರ್ಯಾದೆವಂತ ಸುಶಿಕ್ಷಿತ ನೌಕರದಾರಿ ವರ್ಗ ೧೯೩೦ರಿಂದ ಕರ್ನಾಟಕದಲ್ಲಿ ಬೆಳೆಯಿತು. ನಾಟಕಗಳಿಗೆ ಹೋಗುವುದೆಂದರೆ (ಇಷ್ಟೆ ಏಕೆ ಕಾದಂಬರಿ ಓದುವದೆಂದರೆ) ವೇಶ್ಯಾವಾಟಿಕೆಗೆ ಹೋದಂತೆ ಎಂದು ತಿಳಿಯುತ್ತಿದ್ದ ಈ ವರ್ಗವು ನಾಟಕ ಕಂಪನಿಗಳು ಅಶಿಕ್ಷಿತರಿಂದ ನಡೆಯಲ್ಪಡುತ್ತಿವೆಯೆಂಬ ಒಂದು ಕಾರಣದಿಂದಲೇ ಅವರನ್ನು ದೂರವಿಟ್ಟಿತು."[೩] ಎಂದು ಡಾ.ಶಂಕರ ಮೋಕಾಶಿ ಪುಣೇಕರ ಹವ್ಯಾಸಿ ರಂಗಭೂಮಿಯ ಚಟುವಟಿಕೆಗಳನ್ನು ಖಂಡಿಸುವರು.

ಹೆಚ್ಚಾಗಿ ಪೌರಾಣಿಕ, ಚಾರಿತ್ರಿಕ ನಾಟಕಗಳನ್ನು ಆಡುತ್ತಿದ್ದ ವೃತ್ತಿರಂಗಭೂಮಿ ಆಧುನಿಕ ಶಿಕ್ಷಣದಿಂದ ಪ್ರೇರಿತಗೊಂಡ ಪ್ರೇಕ್ಷಕ ವರ್ಗದಿಂದ, ವಿಲಾಸಿ ರಂಗಭೂಮಿಯ ಕಟು ಟೀಕೆಯಿಂದ ಹಿಂದೆ ಸರಿಯದೇ ಎಲ್ಲಾ ಸವಾಲುಗಳನ್ನು ಎದುರಿಸಿ ಗಟ್ಟಿಯಾಗಿ ನೆಲೆ ನಿಂತು ರಂಗಕಲಾಸೇವೆಯನ್ನು ಮಾಡಿದ್ದು ಗಮನಾರ್ಹ.

ಅನೇಕ ವೈಪರಿತ್ಯ ಬದಲಾವಣೆಗಳನ್ನು ಕಂಡ ನಮ್ಮ ವೃತ್ತಿರಂಗಭೂಮಿ, ತನ್ನ ಅಭಿನಯ, ಸಂಗೀತ, ಮಾತುಗಾರಿಕೆಗೆ ಅನೇಕ ನಾಟಕಕಾರರ ನಾಟಕಗಳನ್ನು ಬಳಸಿಕೊಂಡು ನಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಬಹುದೊಡ್ಡ ಕೆಲಸವನ್ನು ಮಾಡಿದ್ದು ಉಲ್ಲೇಖನಾರ್ಹ.

ಸುಮಾರು ೧೫೦ ವರ್ಷಗಳ ಇತಿಹಾಸವನ್ನು ಹೊಂದಿದ ನಮ್ಮ ಈ ವೃತ್ತಿರಂಗಭೂಮಿಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕುರಿತು ಅನೇಕ ಲೇಖಕರು ಬರೆದು ವೃತ್ತಿರಂಗಭೂಮಿಯ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ.

ಈ ನಾಡಿನ ವೃತ್ತಿರಂಗಭೂಮಿಯನ್ನು ಕುರಿತು ಇದುವರೆಗೆ ಅನೇಕ ವಿದ್ವಾಂಸರು ಸಾಕಷ್ಟು ಅಭ್ಯಸಿಸಿ ವೃತ್ತಿರಂಗಭೂಮಿಯ ಇತಿಹಾಸದ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ.

ಭಾರತದಲ್ಲಿ ಬಂಗಾಳದಿಂದ ಆರಂಭಗೊಂಡ ಆಧುನಿಕ ರಂಗಭೂಮಿಯ ಚಟುವಟಿಕೆ, ಪಾರ್ಸಿ ಕಂಪನಿಗಳ ಆಧಿಕ್ಯ, ಕನ್ನಡ ರಂಗಭೂಮಿಯ ಮೇಲೆ ಮರಾಠಿ ರಂಗಭೂಮಿಯ ಪ್ರಭಾವ ಇವನ್ನೆಲ್ಲ ಕುರಿತು ಡಾ. ಎಚ್.ಕೆ. ರಂಗನಾಥ, ಡಾ. ಜಗಜಂಪಿ, ಡಾ. ರಾಮಕೃಷ್ಣ ಮರಾಠೆ ಮುಂತಾದವರು ಪ್ರಬುದ್ಧ ಪ್ರಬಂಧಗಳನ್ನು ಬರೆದಿದ್ದಾರೆ.

ಅದರಲ್ಲೂ ಡಾ. ರಾಮಕೃಷ್ಣ ಮರಾಠೆಯವರು ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿದ್ದಾರೆ.

ಬಂಗಾಳ, ಪಾರ್ಸಿ, ಮರಾಠಿ, ವೃತ್ತಿ ಕಂಪನಿಗಳ ಪ್ರಭಾವಕ್ಕೆ ಒಳಗಾದ ಉತ್ತರ ಕರ್ನಾಟಕ ತನ್ನ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡಬೇಕಾಯಿತು. ಅದರಲ್ಲೂ ಮರಾಠಿ ರಂಗಭೂಮಿಯ ಪ್ರಾಬಲ್ಯವನ್ನು ಕಡಿಮೆ ಮಾಡುವ ಉದ್ದೇಶದಿಂದ ಪ್ರೇರಣೆಗೊಂಡು ಉತ್ತರ ಕರ್ನಾಟಕದಲ್ಲಿ ವೃತ್ತಿರಂಗಭೂಮಿ ಜನ್ಮತಾಳಿತು.

ಉತ್ತರ ಕರ್ನಾಟಕದ ರಂಗಭೂಮಿ ಸಂಪೂರ್ಣ ಮರಾಠಿಮಯವಾಗಿದ್ದನ್ನು ಮನಗಂಡ ಶಾಂತಕವಿಗಳು (ಸಕ್ಕರಿ ಬಾಳಾಚಾರ್ಯರು) ನೊಂದು ಮರಾಠಿ ರಂಗಭೂಮಿಯ ಪ್ರಾಬಲ್ಯವನ್ನು ಕುರಿತು 'ನಾಟಕ' ಎಂಬ ಪದ್ಯವನ್ನು ಬರೆದು ಪ್ರಭಾತ ಪತ್ರಿಕೆಯ ೧೯೧೯ ಮಾರ್ಚ ಸಂಚಿಕೆಯಲ್ಲಿ ಪ್ರಕಟಿಸಿ ತಮ್ಮ ರಂಗಭೂಮಿಯ ಕಾಳಜಿಯನ್ನು ವ್ಯಕ್ತಪಡಿಸಿದರು.

ಎಲ್ಲಿ ನೋಡಲು ಮರಾಠಿಯವರ ನಾಟಕ ಕೀರ್ತಿ ।
ಎಲ್ಲಿ ನೋಡಲು ಮರಾಠಿಯವರ ನಾಟಕದರ್ಥಿ ।
ಎಲ್ಲಿ ನೋಡಲು ಮರಾಠಿಯವರ ನಾಟಕ ನಟರ ಮೂರ್ತಿಗಳ ಸಂಚಾರವು ॥
ಎಲ್ಲಿ ನೋಡಲು ಮರಾಠಿಯವರ ನಾಟಕದಾಟ ।
ಎಲ್ಲಿ ನೋಡಲು ಮರಾಠಿಯವರ ನಾಟಕದೂಟ ।
ಎಲ್ಲಿ ನೋಡಲು ಮರಾಠಿಯವರ ನಾಟಕಮಯಂ । ತಾನಾಯ್ತು ಕರ್ನಾಟಕಂ ॥[೪]

ಇಂತಹ ವಾತಾವರಣದಿಂದ ಪ್ರೇರಿತಗೊಂಡ ಶಾಂತಕವಿಗಳು ಕೃತಪುರ ಶ್ರೀ ವೀರನಾರಾಯಣ ಪ್ರಾಸಾಧಿಕ ನಾಟಕ ಮಂಡಳಿ ಕಟ್ಟಿ ಅನೇಕ ವೃತ್ತಿನಾಟಕ ಮಂಡಳಿಗೆ ನಾಂದಿ ಹಾಡಿದರು. ಮುಂದೆ ಸ್ವಲ್ಪ ಅವಧಿಯಲ್ಲಿಯೇ ಅನೇಕ ಊರುಗಳಲ್ಲಿ ವೃತ್ತಿ ಮಂಡಳಿಗಳು ಹುಟ್ಟಿದವು.

ಕಾಲದ ಅವಶ್ಯಕತೆಯನ್ನು ಅನುಸರಿಸಿ ಕನ್ನಡ ಸಾಹಿತ್ಯ ಬೇರೆ ಬೇರೆ ರೂಪಗಳನ್ನು ಪಡೆಯುತ್ತಾ ಬೆಳೆದು ಬಂದಿರುವದನ್ನು ಕನ್ನಡ ಸಾಹಿತ್ಯ ಚರಿತ್ರೆ ನಮಗೆ ತೋರಿಸುತ್ತದೆ. ಈ ಹೊಸ ರೂಪ ದಿನಗಳದಂತೆ ಆ ಕಾಲದ ಯುಗದ ಧರ್ಮವೆನಿಸಿಕೊಳ್ಳುವುದು. ೧೦, ೧೨, ೧೫, ೨೦ನೆಯ ಶತಮಾನಗಳಲ್ಲೆಲ್ಲ ಯುಗಧರ್ಮದ ಆವಿಷ್ಕಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ಹಾಗೆಯೇ ವೃತ್ತಿರಂಗಭೂಮಿಯು ಬದಲಾದ ಜನರ ಅಭಿರುಚಿಗೆ ತಕ್ಕಂತೆ ಕಾಲದಿಂದ ಕಾಲಕ್ಕೆ ತನ್ನ ಸ್ವರೂಪವನ್ನು ಬದಲಿಸಿಕೊಂಡು ಉಳಿದು ಬಂದಿದೆ. ಕನ್ನಡ ಸಾಹಿತ್ಯ ಯುಗಧರ್ಮಕ್ಕನುಗುಣವಾಗಿ ಬೆಳೆದು ಸಮೃದ್ಧಿಯಾದಂತೆ ವೃತ್ತಿರಂಗಭೂಮಿಯು ಯುಗಧರ್ಮಕ್ಕೆ ತಕ್ಕಂತೆ ಸಾಹಿತ್ಯ ಸೃಷ್ಟಿ ಮಾಡಿಕೊಂಡು ಸಮೃದ್ಧವಾಗಿ ಬೆಳೆಯಿತು.

ವೃತ್ತಿರಂಗಭೂಮಿಯಲ್ಲಿ ಕಾಲದ ಮನೋಧರ್ಮಕ್ಕೆ ತಕ್ಕಂತೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ಹುಟ್ಟಿಕೊಂಡು ವೃತ್ತಿರಂಗಭೂಮಿಯನ್ನು ಶ್ರೀಮಂತಗೊಳಿಸಿದವು.

ಉಷಾಹರಣ, ಸೀತಾಸ್ವಯಂವರ, ಕೀಚಕವಧ, ಕೃಷ್ಣಲೀಲೆ, ಕಂಸವಧಾ, ಅಕ್ಷಯಾಂಬರ, ಲಂಕಾದಹನ, ಬಾಣಸಿಗ ಭೀಮ, ಕುರುಕ್ಷೇತ್ರ, ಚಿತ್ರಾಂಗಧಾ, ಭೌಮಾಸುರ, ಹರಿಶ್ಚಂದ್ರ ಮುಂತಾದ ನೂರಾರು ಪೌರಾಣಿಕ ನಾಟಕಗಳು ರಂಗಭೂಮಿಯ ಮೇಲೆ ಪ್ರದರ್ಶನಗೊಂಡು ಜನರ ಅಭಿರುಚಿಯನ್ನು ತಣಿಸಿ ರಂಜಿಸಿದವು. ಸುಮಾರು ಮೂರು ದಶಕಗಳವರೆಗೆ ವೃತ್ತಿರಂಗಭೂಮಿಯನ್ನು ಈ ಪೌರಾಣಿಕ ನಾಟಕಗಳೇ ಆಳಿದವು ಎಂದರೆ ತಪ್ಪಾಗಲಿಕ್ಕಿಲ್ಲ.

೧೯೩೦ರ ಸುಮಾರಿಗೆ ಬದಲಾದ ರಾಜಕೀಯ ಗಾಳಿ ವೃತ್ತಿರಂಗಭೂಮಿಗೆ ತಟ್ಟಿ ಅನೇಕ ಐತಿಹಾಸಿಕ ನಾಟಕಗಳು ರಚನೆಗೊಂಡವು. ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಎಚ್ಚಮನಾಯಕ, ಕಿತ್ತೂರ ರುದ್ರಮ್ಮ, ಬೆಳವಡಿ ಮಲ್ಲಮ್ಮ, ನರಗುಂದದ ಬಂಡಾಯ, ಛತ್ರಪತಿ ಶಿವಾಜಿ, ಟಿಪ್ಪೂಸುಲ್ತಾನ, ಸಿಂಧೂರ ಲಕ್ಷ್ಮಣ ಮುಂತಾದ ನಾಟಕಗಳು ರಚನೆಗೊಂಡು ವೃತ್ತಿರಂಗಭೂಮಿಗೆ ಆಕರ್ಷಣೆಯನ್ನು ತಂದುಕೊಟ್ಟವು.

ಸ್ವಾತಂತ್ರ್ಯದ ನಂತರದ ಸಂಕೀರ್ಣ ಬದುಕಿನ ಮಿಡಿತವನ್ನು ಅರ್ಥೈಸಿದ ನಾಟಕಕಾರರು, ವೃತ್ತಿಮಂಡಳಿಗಳು ಸಾಮಾಜಿಕ ನಾಟಕಗಳ ಕಡೆಗೆ ಒಲವು ತೋರಿದರು. ವೃತ್ತಿಕಂಪನಿಗಳಿಗಾಗಿಯೇ ಅಸಂಖ್ಯಾತ ಸಾಮಾಜಿಕ ನಾಟಕಗಳು ರಚನೆಗೊಂಡವು.

"ನಮ್ಮ ರಂಗಭೂಮಿ ದೇವದೇವತೆಗಳಿಂದ ರಾಜರಾಣಿಯರಿಂದ ಕಿಕ್ಕಿರಿದು ತುಂಬಿಹೋಗಿದ. ಇನ್ನಾದರೂ ಅವರಿಗೆ ಸ್ವಲ್ಪ ವಿಶ್ರಾಂತಿ ಕೊಟ್ಟು ಮಾನವರಲ್ಲಿರುವ ದೈವವನ್ನು ಕಾಣುವಕಾಲ ಬರಬೇಕಾಗಿದೆ." ಎಂದು ಹರೀಂದ್ರನಾಥ ಚಟ್ಟೋಪಾಧ್ಯಾಯರು ೧೯೩೧ರಲ್ಲಿ ಆಂಧ್ರ ನಾಟಕ ಪರಿಷತ್ತಿನ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ ಮಾತು ಆ ಕಾಲದ ರಂಗಭೂಮಿಯ ಬಗ್ಗೆ ಜನರಲ್ಲಿ ಮೂಡಿದ ಭಾವನೆಗಳನ್ನು ಧ್ವನಿಸುತ್ತದೆ.

ಸಮಾಜದಲ್ಲಿ ಬೇರು ಬಿಟ್ಟ ಸ್ತ್ರೀ ಶೋಷಣೆ, ಬಾಲ್ಯವಿವಾಹ, ವಿಧವಾ ವಿವಾಹ, ಬಡತನ, ಕುಡಿತ ಮುಂತಾದ ವಿಷಯಗಳನ್ನು ತೆಗೆದುಕೊಂಡು ಸ್ತ್ರೀ, ಬಿ.ಎ. ಹೊಲೆಯರ ಹುಡುಗಿ, ಕಾಲಚಕ್ರ, ನಿಶಾಮಹಿಮೆ ಮುಂತಾದ ಅಸಂಖ್ಯಾತ ನಾಟಕಗಳು ಬಂದವು.

ಮೇಲಿನ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಿಗೆ ಅವಕಾಶ ಕೊಡುತ್ತಾ ಬದಲಾದ ಜನರ ಅಭಿರುಚಿಗೆ ನೀರುಣಿಸುತ್ತಾ ಇಲ್ಲಿಯವರೆಗೆ ನಿರಂತರವಾಗಿ ವೃತ್ತಿರಂಗಭೂಮಿ ಉಳಿದುಕೊಂಡು ಬಂದಿದೆ. ಇದನ್ನೀಗ ವಿಶದವಾಗಿ ನೋಡಬಹುದು.

ವೃತ್ತಿರಂಗಭೂಮಿಯ ನಡೆ

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಆರಂಭವಾದ ವೃತ್ತಿನಾಟಕ ಕಂಪನಿ ಎಂಬ ವ್ಯವಹಾರಿಕ ಕಲೆ ನಮ್ಮ ಉತ್ತರ ಕರ್ನಾಟಕಕ್ಕೆ ಹೊಸದಾದುದು. ಈ ವೃತ್ತಿರಂಗಭೂಮಿಯ ಕಲೆಗೆ ನೀರುಣಿಸಿ ಬೆಳೆಸಿದ ಕೀರ್ತಿ ಗದಗ, ಬಾಗಲಕೋಟೆ, ಗುಳೇದಗುಡ್ಡ, ಬಾದಾಮಿ, ಕೆರೂರ, ಹುನಗುಂದ, ಅಮೀನಗಡ, ಇಳಕಲ್, ಕಲಾದಗಿ, ಬೀಳಗಿ, ಮುಧೋಳ, ಮಹಾಲಿಂಗಪುರ, ಜಮಖಂಡಿ ಮುಂತಾದ ಊರುಗಳಿಗೆ ಸಲ್ಲುತ್ತದೆ. ಬಾಗಲಕೋಟೆಯ ಸುತ್ತಲಿನ ಊರುಗಳು ವೃತ್ತಿರಂಗಭೂಮಿಗೆ ಕೊಟ್ಟಿರುವ ಕೊಡುಗೆ ಸಾಮಾನ್ಯವಾದುದೇನಲ್ಲ. ಬಿ.ಆರ್.ಅರಿಷಿಣಗೋಡಿಯವರು ಈ ಪ್ರದೇಶದಲ್ಲಿ ಹುಟ್ಟಿ ಬೆಳೆದು ರಂಗಭೂಮಿಗೆ ತಮ್ಮದೇ ಆದ ಕೊಡುಗೆ ನೀಡಿದವರು. ಆದ್ದರಿಂದ ಬಿ.ಆರ್.ಅರಿಷಿಣಗೋಡಿಯವರ ಸಮಕಾಲೀನ ರಂಗಭೂಮಿ ಅಧ್ಯಯನ ಪ್ರಕ್ರಿಯೆಗೆ ಇದೇ ಪ್ರದೇಶದ ವೃತ್ತಿರಂಗಭೂಮಿಯ ಚಟುವಟಿಕೆಗಳನ್ನು ಆಧಾರವಾಗಿಸಿಕೊಂಡು ಮುಂದುವರಿಯುವುದು ಸೂಕ್ತವೆನಿಸುತ್ತದೆ.

ಕೊಣ್ಣೂರ ನಾಟಕ ಕಂಪನಿಗಿಂತಲೂ ಮುಂಚೆ ಅಂದರೆ ೧೮೫೭ರಲ್ಲಿಯೇ ಗುಳೇದಗುಡ್ಡದಲ್ಲಿ 'ಬಾಲ ನಾಟಕ ಮಂಡಳಿ' ಒಂದು ಮಿತಿಯಲ್ಲಿ ರಂಗಕಲಾ ಸೇವೆಯನ್ನು ಮುಂದುವರಿಸಿತ್ತು. ಅದೇ ಭಾಗದ ಹುಲ್ಲೂರ ಪರಪ್ಪನವರ ನಾಟಕ ಕಂಪನಿಯೂ ೧೮೫೭ರಲ್ಲಿ ಪ್ರಾರಂಭವಾಗಿತ್ತು.

ಗುಳೇದಗುಡ್ಡದ ಸುತ್ತಮುತ್ತಲಿನ ಗ್ರಾಮಗಳಿಂದ ನಾಟಕ ಕಲಾವಿದರನ್ನು ಕರೆದುಕೊಂಡು ಹೋದ ಬಗ್ಗೆ ದಾಖಲೆಗಳಿವೆ. ವೃತ್ತಿರಂಗಭೂಮಿಯಲ್ಲಿ ಮೊಟ್ಟ ಮೊದಲ ಸ್ತ್ರೀ ಕಲಾವಿದೆ ರಂಗಮಂಚವನ್ನು ಏರಿದ ಹೆಗ್ಗಳಿಕೆಗೆ ಪಾತ್ರಳಾದ ಯಲ್ಲೂಬಾಯಿ ಗುಳೇದಗುಡ್ಡದವಳು. ಅವಳು ಮೊದಲು ಸೇರಿದ್ದು ಪರಪ್ಪನವರ ಕಂಪನಿಯಲ್ಲಿ. ಅವಳ ಸಾಕು ಮಗಳು ಗಾನರತ್ನ ಬಿರುದಾಂಕಿತಳಾದ ಗಂಗೂಬಾಯಿ ಗುಳೇದಗುಡ್ಡ ಪ್ರತಿಭಾ ಸಂಪನ್ನ ಕಲಾವಿದೆ. ಅಲ್ಲದೇ ೧೯೨೫ರಲ್ಲಿ 'ಶ್ರೀಕೃಷ್ಣ ನಾಟಕ ಮಂಡಳಿ' ಎಂಬ ಹೆಸರಿನ ನಾಟಕ ಕಂಪನಿ ಕಟ್ಟಿ ರಂಗಕಲಾಸೇವೆಯನ್ನು ಮುಂದುವರೆಸಿದವಳು.

ಪ್ರಾರಂಭದಲ್ಲಿ ಸಂಗೀತ ಪ್ರಧಾನ ನಾಟಕಗಳಿಂದ ತುಂಬಿ ಹೋಗಿದ್ದ ಕಂಪನಿ ನಾಟಕಗಳಿಗೆ ಗದ್ಯದ ಸ್ಪರ್ಶಕೊಟ್ಟ ಕಂದಗಲ್ ಹನುಂತರರಾಯರು ನೆಲೆ ನಿಂತದ್ದು ಗುಳೇದಗುಡ್ಡದಲ್ಲಿ. ಕಂದಗಲ್ ಹನುಮಂತರಾಯರು ೧೯೨೨, ೧೯೪೦, ೧೯೪೨ರಲ್ಲಿ ಕ್ರಮವಾಗಿ ಮೂರು ಕಂಪನಿ ಕಟ್ಟಿದರು. ಇವರ ಕಂಪನಿಯ ಪ್ರಭಾವಕ್ಕೆ ಒಳಗಾಗಿ ಅನೇಕ ಕಲಾವಿದರು ಈ ಭಾಗದಲ್ಲಿ ತಯಾರಾದರು. ಕಂದಗಲ್ ಹನುಮಂತರಾಯರು ಕರ್ನಾಟಕದ ಷೇಕ್ಸಪಿಯರ್ ಎಂದೇ ಪ್ರಸಿದ್ಧಿಯನ್ನು ಪಡೆದಿದ್ದರು.

ಕಲಾದಗಿಯ ಎಲ್.ಎಸ್ ಇನಾಮದಾರ, ಎಚ್.ಆರ್. ಭಸ್ಮೆ, ಪಿ.ಬಿ. ಧುತ್ತರಗಿ, ಹೊಳೆಆಲೂರಿನ ಮಾರುತೇಶ ಮಾಂಡ್ರೆ ಮುಂತಾದ ನಾಟಕಕಾರರು ಹುಟ್ಟಿ ಬೆಳೆದದ್ದು ಈ ನೆಲದ ವೈಶಿಷ್ಟ್ಯ.

ರಂಗಮಂಚದ ಮೇಲೆ ಸ್ತ್ರೀ ಪಾತ್ರಗಳನ್ನು ಮಾಡಿ ಪ್ರೇಕ್ಷಕರಿಂದ ಸೈ ಎನಿಸಿಕೊಂಡು ಮೆರೆದ ಮಂಕಣಿ ಮಾಣಪ್ಪ, ಅದೃಶ್ಯಪ್ಪ ಮಾನವಿ, ಅಮೀನಗಡದ ಲಾಡಸಾಹೇಬ, ಚಿತ್ತರಗಿಯ ಗಂಗಾಧರ ಶಾಸ್ತ್ರಿಯವರ ಸಹೋದರ ಮುಪ್ಪಯ್ಯಸ್ವಾಮಿ, ಅಬ್ಬಾಸಲಿ, ವೀರಣ್ಣ ಜಾಲಿಹಾಳ, ಪ್ರಮೀಳಾ ಗುಡೂರ, ಮಮತಾಜ ಗುಡೂರ, ಶಾಂತಾಬಾಯಿ ಇಳಕಲ್ ಮುಂತಾದ ಕಲಾವಿದರಿಂದ ಈ ಭಾಗದ ವೃತ್ತಿರಂಗಭೂಮಿ ಕಂಗೊಳಿಸುತ್ತಿತ್ತು.

ಕಲಾದಗಿಯ ಎಲ್.ಎಸ್ ಇನಾಮದಾರರು ಏಣಗಿ ಬಾಳಪ್ಪನವರ ಜೊತೆಗೂಡಿ ೧೯೪೦ರಲ್ಲಿ 'ವೈಭವ ನಾಟಕ ಮಂಡಳಿಯನ್ನು' ಕಟ್ಟಿದರು. ೧೯೪೨ರಲ್ಲಿ ಹುನಗುಂದ ತಾಲೂಕಿನ ಚಿತ್ತರಗಿಯ ಗಂಗಾಧರಶಾಸ್ತ್ರಿಗಳ 'ಶ್ರೀ ಕುಮಾರ ವಿಜಯ ನಾಟ್ಯ ಸಂಘ', ೧೯೬೮ರಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ ಸುಳ್ಳ, ೧೯೬೨ರಲ್ಲಿ ಇಲಕಲ್ಲಿನ ಗುಡುಸಾಬರ ಸರ್ವೋದಯ ನಾಟ್ಯ ಸಂಘ, ೧೯೬೯ರಲ್ಲಿ ಸೂಳೇಭಾವಿಯ ಪಿ.ಬಿ.ಧುತ್ತರಗಿಯವರ ತ್ರಿಪುರ ಸುಂದರಿ ನಾಟ್ಯ ಸಂಘ ಪ್ರಾರಂಭವಾದವು. ಇವೆಲ್ಲ ಕಂಪನಿಗಳು ಉತ್ತರ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ ಸುತ್ತಾಡಿ ರಂಗಕಲಾಸೇವೆಯನ್ನು ಮಾಡಿ ಜನಾನುರಾಗಿಯಾಗಿ ಮೆರೆದವು. ಹೀಗೆ ಈ ಭಾಗದ ಕಂಪನಿಗಳ ಬೆಳವಣಿಗೆಯನ್ನು ಕಂಡಂತೆ ನಾಟಕಕಾರರನ್ನೂ ಈಗ ಸಮೀಕ್ಷಿಸಬಹುದು.

ಕಂದಗಲ್ ಹನುಮಂತರಾಯಃ ಕಂದಗಲ್ ಹನುಮಂತರಾಯರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ರಚಿಸಿ ಅನೇಕ ಯುವ ನಾಟಕಕಾರರಿಗೆ ಪ್ರೇರಣೆ ಕೊಟ್ಟಿದ್ದನ್ನು ಕಾಣುತ್ತೇವೆ ಹಾಗೂ ಇವರ ನಾಟಕಗಳ ಪ್ರಭಾವಕ್ಕೆ ಒಳಗಾಗಿ ಅನೇಕ ಕಂಪನಿಗಳು ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಹುಟ್ಟಿಕೊಂಡವು. ಕಂದಗಲ್ ಹನುಮಂತರಾಯರು 'ಅಕ್ಷಯಾಂಬರ', (೧೯೨೪) ಪಾಂಚಾಲಿ (೧೯೨೫) ದೈವದುರಂತಕರ್ಣ (೧೯೩೯), ರಕ್ತರಾತ್ರಿ (೧೯೩೯) ಚಿತ್ರಾಂಗದಾ, ಮಾಯಾಮೃಗ ಮುಂತಾದ ಹದಿನಾಲ್ಕು ಪೌರಾಣಿಕ ನಾಟಕಗಳನ್ನು ಬರೆದುದಲ್ಲದೆ. ಅಗಸ್ಟ ಹದಿನೈದರ ನಂತರ, ವರಪ್ರದಾನ, ವೀರರಾಣಿಕಿತ್ತೂರ ಚೆನ್ನಮ್ಮ ಎಂಬ ಮೂರು ಐತಿಹಾಸಿಕ ನಾಟಕಗಳನ್ನು ಬರೆದು ಜನಮೆಚ್ಚುಗೆಯನ್ನು ಪಡೆದರು. ಇವರು ಬದಲಾದ ಜನರ ಅಭಿರುಚಿಯನ್ನು ತಣಿಸುವುದಕ್ಕಾಗಿ ಸಾಮಾಜಿಕ ನಾಟಕಗಳನ್ನು ಬರೆದು ಕಾಲದ ಅಗತ್ಯವನ್ನು ಪೂರೈಸಿದರು. ಕಂದಗಲ್ ಹನುಮಂತರಾಯರ ಸಾಮಾಜಿಕ ನಾಟಕಗಳೆಂದರೆ ಪುಣ್ಯಪ್ರಭಾ (೧೯೨೬), ಬಡತನದ ಭೂತ (೧೯೩೯) ಬೆಳ್ಳಿಚುಕ್ಕಿ, ಮಾತಂಗಕನ್ಯಾ (೧೯೪೮) ವೀಣಾ (೧೯೪೮) ಮುಂತಾದ ಹನ್ನೆರಡು ನಾಟಕಗಳು. ಇವುಗಳನ್ನೆಲ್ಲ ರಂಗಪ್ರಯೋಗಕ್ಕೆ ಒಳಪಡಿಸಿ ಸಾಮಾಜಿಕ ನಾಟಕಗಳಿಂದಲೂ ಜನಮೆಚ್ಚುಗೆ ಪಡೆದರು.

ಅಕ್ಷಯಾಂಬರ ನಾಟಕದ ಕಥೆ ಮಹಾಭಾರತದಲ್ಲಿ ಬರುವ ದ್ರೌಪದಿ ವಸ್ತ್ರಾಪಹರಣ ಪ್ರಸಂಗದೊಂದಿಗೆ ಪ್ರಾರಂಭವಾಗುತ್ತದೆ. ನಾಟಕದುದ್ದಕ್ಕೂ ಕೃಷ್ಣನ ಮಹಿಮೆಯನ್ನು ಸಾರುತ್ತಾ ನಡೆಯುತ್ತದೆ. ಕಂದಗಲ್ ಹನುಮಂತರಾಯರು ನಾಟಕದ ತಲೆಬರಹವನ್ನು ಸಮರ್ಥಿಸುವುದಕ್ಕಾಗಿ ಒಂದು ಘಟನೆಯನ್ನು ಹೆಣೆದಿರುವದನ್ನು ಕಾಣುತ್ತೇವೆ. ಅಡುಗೆ ಮಾಡುವ ಸಂದರ್ಭದಲ್ಲಿ ಕೃಷ್ಣನ ಕೈಬೆರಳಿಗೆ ಗಾಯವಾಗಿ ರಕ್ತ ಸೋರುತ್ತದೆ. ಇದನ್ನು ನೋಡಿದ ದ್ರೌಪದಿ ತಾನುಟ್ಟ ಪೀತಾಂಬರವನ್ನು ಹರಿದು ಕೃಷ್ಣನ ಬೆರಳ ಗಾಯಕ್ಕೆ ಕಟ್ಟುತ್ತಾಳೆ. ಮಹಾಭಾರತದ ಕಥೆಯನ್ನಾಧರಿಸಿ ಕಥಾವಸ್ತುವನ್ನು ಕಂದಗಲ್‌ರು ತಮ್ಮ ನಾಟಕಕ್ಕೆ ಬೇಕಾದಷ್ಟು ತೆಗೆದುಕೊಂಡಿದ್ದಾರೆ. ನಾಟಕದುದ್ದಕ್ಕೂ ಕೃಷ್ಣನ ಪಾತ್ರವೇ ಕಂಗೊಳಿಸುತ್ತದೆ. ಜಯದ್ರಥ, ದುಶ್ಯಲೆಯವರ ಪ್ರಸಂಗದಲ್ಲಿ ಹಾಸ್ಯ ಇಣಿಕಿಸಿದರೂ ಅದು ಭಕ್ತಿರಸದ ಕಡೆಗೆ ತಿರುಗುವದು. ದ್ರೌಪದಿಯ ವಸ್ತ್ರಾಪಹರಣ ಸಂದರ್ಭದಲ್ಲಿಯ ಸಂಭಾಷಣೆ ನಾಟಕಕ್ಕೆ ಕಳೆ ಕಟ್ಟುವಂತೆ ಮಾಡುತ್ತದೆ.

ಮಾಯಾಮೃಗ ಇದು ರಾಮಾಯಣದ ಕಥೆಯನ್ನು ಒಳಗೊಂಡ ನಾಟಕ. ಇಲ್ಲಿ ಕಂದಗಲ್ ಹನುಮಂತರಾಯ, ಕೈಕೆ ಮತ್ತು ರಾವಣರ ಪಾತ್ರಗಳನ್ನು ವಿಭಿನ್ನ ದೃಷ್ಟಿಕೋನದಿಂದ ಚಿತ್ರಿಸಿರುವುದನ್ನು ಕಾಣುತ್ತೇವೆ.

ಮಂಥರೆಯು ಕೈಕೆಯಿಗೆ ಉಪದೇಶಗಳನ್ನು ಹೇಳುವದರೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ಇಲ್ಲಿ ದಶರಥನ ಸಾವಿಗೆ ಕೈಕೆಯಿ ಕಾರಣವಾಗದೆ ಮುನಿಯ ಶಾಪಕಾರಣವಾಗಿ ಸಾವನ್ನಪ್ಪುವದನ್ನು ನಾಟಕಕಾರರು ಸಾಧಿಸುವರು. ಹಾಗೆಯೇ ರಾವಣನು ಸೀತೆಯನ್ನು ಅಪಹರಿಸಿದ್ದು ಅವಳ ಮೇಲಿನ ಮೋಹದಿಂದಲ್ಲ ತನ್ನ ತಂಗಿಗೆ ಆದ ಅಪಮಾನದ ಸೇಡನ್ನು ತೀರಿಸಿಕೊಳ್ಳಲು ಸೀತೆಯನ್ನು ಕದ್ದೊಯ್ದದ್ದು ಎಂಬುದನ್ನು ನಾಟಕದ ಕೊನೆಯಲ್ಲಿ ಸಮರ್ಥಿಸುವರು. ನಾಟಕಕಾರರ ವಿಭಿನ್ನ ದೃಷ್ಟಿಕೋನವನ್ನು ಇಲ್ಲಿ ಕಾಣುತ್ತೇವೆ.

ಪ್ರಾರಂಭದಲ್ಲಿ ಪೌರಾಣಿಕ ನಾಟಕಗಳನ್ನು ಬರೆದರೂ ಬದಲಾದ ಕಾಲದ ಮನೋಧರ್ಮಕ್ಕೆ ತಕ್ಕಂತೆ ಐತಿಹಾಸಿಕ ನಾಟಕಗಳನ್ನೂ ಕಂದಗಲ್ಲರು ಬರೆದರು. 'ವರಪ್ರದಾನ' ನಾಟಕದ ಕಥೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಿಂದ ಹಿಡಿದು ಪ್ರಾರಂಭವಾಗುವುದು. ವಿಜಯನಗರ ಸಾಮ್ರಾಜ್ಯಕ್ಕೆ ಪ್ರೇರಣೆಯಾದ ಮಾಧವಾಚಾರ್ಯರ ಪ್ರೇರಣೆಯಿಂದ ಹಕ್ಕ-ಬುಕ್ಕರು ಹಿಂದೂ ಸಾಮ್ರಾಜ್ಯದ ಸ್ಥಾಪನೆ ಮಾಡುತ್ತಾರೆ.

ಆನೆಗುಂದಿಯ ಅರಸ ಜಂಬುಕೇಶ್ವರನಿಗೆ ಲಲಿತಾಂಬಿಕಾ ಎಂಬ ಒಬ್ಬಳೆ ಪುತ್ರಿ ಇದ್ದಳು. ಗಂಡು ಸಂತಾನವಿಲ್ಲದ ಜಂಬುಕೇಶ್ವರ ತನ್ನ ನಂತರ ಕಂಪಲಿಯ ಹಕ್ಕನಿಗೆ ಅಧಿಕಾರ ವಹಿಸಿಕೊಡಲು ನಿರ್ಣಯಿಸುವನು. ಇದನ್ನು ತಿಳಿದ ಜಂಬುಕೇಶ್ವರನ ಪ್ರಧಾನಿ ರೌದ್ರಧಾಮ ಸಿಂಹಾಸನಕ್ಕೆ ತಾನೇ ಏರಲು ಕುತಂತ್ರ ಮಾಡುತ್ತಾನೆ. ಹಾಗೆಯೇ ಅರಸನ ಮಗಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ.

ಈಗಾಗಲೇ ದೇಶಾಭಿಮಾನಿಯಾದ ಹಕ್ಕನ ಪ್ರೇಮಪಾಶದಲ್ಲಿ ಲಲಿತಾಂಬಾ ಬಿದ್ದಿದ್ದಳು. ಸಿಂಹಾಸನವನ್ನು ಏರುವ ಭರದಲ್ಲಿ ಅರಸ ಜಂಬುಕೇಶ್ವರನನ್ನು ಮೋಸದಿಂದ ರೌದ್ರಧಾಮ ಕೊಲ್ಲಿಸುವನು. ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದ ತುಘಲಕನ ಸೈನ್ಯ ಆನೆಗುಂದಿಯನ್ನು ವಶಪಡಿಸಿಕೊಳ್ಳಲು ದಾಳಿ ಮಾಡುವದು ಹಕ್ಕ-ಬುಕ್ಕರು ಜೊತೆಗೂಡಿ ಕುರುಬರ ವೀರ ಪಡೆಯಿಂದ ತುಘಲಕನ ಸೈನ್ಯವನ್ನು ಸೋಲಿಸುತ್ತಾರೆ. ಮುಂದೆ ಅರಸನ ಮಗಳಾದ ಲಲಿತಾಂಬೆಯನ್ನು ಮದುವೆಯಾಗಿ ಹಕ್ಕನು ಸಿಂಹಾಸನವನ್ನೇರುವುದು ಈ ನಾಟಕದ ಕೊನೆಯ ಭಾಗದಲ್ಲಿ ಬರುತ್ತದೆ.

ಎಲ್.ಎಸ್.ಇನಾಮದಾರಃ ಪೌರಾಣಿಕ, ಐತಿಹಾಸಿಕ, ನಾಟಕಗಳ ಪ್ರಭಾವದಲ್ಲಿದ್ದ ಕಾಲದಲ್ಲಿ 'ಪಠಾಣಪಾಶಾ' ಎಂಬ ಸಾಮಾಜಿಕ ನಾಟಕವನ್ನು ಬರೆದು ಜನಪ್ರಿಯಗೊಳಿಸಿದ ಕೀರ್ತಿ ಎಲ್.ಎಸ್. ಇನಾಮದಾರರಿಗೆ ಸಲ್ಲುತ್ತದೆ. ಶ್ರೀಮಂತರು ಬಡವರ ಆರ್ಥಿಕ ಸಂಕಷ್ಟವನ್ನು ದುರುಪಯೋಗ ಪಡಿಸಿಕೊಳ್ಳುವರು ಎಂಬ ವಸ್ತುವನ್ನು ಆಯ್ದುಕೊಂಡು 'ಪಠಾಣಪಾಶಾ' ನಾಟಕವನ್ನು ರಚಿಸಿದರು. ಬಡ್ಡಿಯ ರೂಪದಲ್ಲಿ ಬಡವರಿಗೆ ಸಾಲ ನೀಡಿ ಅವರನ್ನು ಶೋಷಿಸುತ್ತಿರುವ ಪರಿಯನ್ನು ಪಠಾಣನ ಪಾತ್ರದ ಮುಖಾಂತರ ಚಿತ್ರಿಸಿದ್ದಾರೆ. 'ಬೆಂಗಳೂರ ಟು ಮಂಗಳೂರ' 'ಹಳ್ಳಿಯಿಂದ ದಿಲ್ಲಿಯವರೆಗೆ' ನಾಟಕಗಳಲ್ಲಿ ಸಮಕಾಲೀನ ಸಂವೇದನೆಗಳನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಸಿಂಧೂರ ಲಕ್ಷ್ಮಣ, ಕಿತ್ತೂರು... ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ ಎಂಬ ಐತಿಹಾಸಿಕ ನಾಟಕಗಳನ್ನು ಬರೆದು ಐತಿಹಾಸಿಕ ಪ್ರಜ್ಞೆಯನ್ನು ತೋರಿಸಿದ್ದಾರೆ. ಪೃಥ್ವಿಪುತ್ರ, ಭೌಮಾಸುರ ಮುಂತಾದ ಪೌರಾಣಿಕ ನಾಟಕಗಳನ್ನು ಬರೆದು ತಮ್ಮ ಪೌರಾಣಿಕ ಪ್ರಜ್ಞೆಯನ್ನು ತೋರಿಸಿದ್ದಾರೆ. ಭೂದಾನ, ಕುಲಪತಿ, ಧೂಳುಮುಸುಕಿದ ಹೂ, ನಮ್ಮದು ಕಾಶ್ಮೀರ, ನಾಟಕಗಳು ರಾಜಕೀಯ ಪ್ರೇರಿತ ನಾಟಕವಾಗಿವೆ. ಎಲ್.ಎಸ್. ಇನಾಮದಾರ ಒಟ್ಟು ೮೦ ನಾಟಕಗಳನ್ನು ಬರೆದರು. ಪಠಾಣಪಾಶಾ ನಾಟಕದಿಂದ ಜನಾನುರಾಗಿಯಾಗಿ ಮೆರೆದ ಇವರು ಈ ಭಾಗದ ರಂಗಸಂಪನ್ನರಲ್ಲಿ ಒಬ್ಬರು.

ಪಿ.ಬಿ. ಧುತ್ತರಗಿಃ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಸೂಳೇಭಾವಿಯಲ್ಲಿ ೧೫.೦೬.೧೯೨೮ರಲ್ಲಿ ಬಸನಗೌಡ-ಸಂಗಮ್ಮ ದಂಪತಿಗಳ ಉದರದಲ್ಲಿ ಜನಿಸಿದರು. ಪಿ.ಬಿ. ಧುತ್ತರಗಿಯವರ ಪೂರ್ವಜರು ಗುಲಬರ್ಗಾ ಜಿಲ್ಲೆಯ ಧುತ್ತರಗಿ ಎಂಬ ಊರಿಗೆ ಸೇರಿದವರು. ಬಡತನದಿಂದ ಶಾಲೆಗೆ ಹೋಗಲು ಆಗದೆ ಪಿ.ಬಿ.ಧುತ್ತರಗಿಯವರು ನೇಕಾರಿಕೆ ವೃತ್ತಿಯನ್ನು ಅವಲಂಬಿಸಿ ನಿಂತರು. ನೇಕಾರಿಕೆ ಮಾಡುತ್ತಾ ಬಿಡುವಿನ ವೇಳೆಯಲ್ಲಿ ಓದುವ ಚಟವನ್ನು ಅಂಟಿಸಿಕೊಂಡರು. ಪ್ರಗತಿಶೀಲ ಸಾಹಿತ್ಯ ಚಳುವಳಿಯ ಕಾಲದಲ್ಲಿ (೧೯೪೬) ಬಂದ ಅನಕೃ, ತರಾಸು, ನಿರಂಜನ, ಬಸವರಾಜ ಕಟ್ಟಿಮನಿ, ಮುಂತಾದ ಸಾಹಿತಿಗಳ ಕತೆ, ಕಾದಂಬರಿಗಳನ್ನು ಓದಿ ಜ್ಞಾನದ ಹರವನ್ನು ವಿಸ್ತರಿಸಿಕೊಂಡರು. ಸೂಳೇಭಾವಿಯಲ್ಲಿ ಗೆಳೆಯರ ಗುಂಪು ಕಟ್ಟಿಕೊಂಡು ತಾವೇ ಓದಲು ರವೀಂದ್ರ ವಾಚನಾಲಯ ಪ್ರಾರಂಭ

ಮಾಡಿದರು. ರವೀಂದ್ರ ವಾಚನಾಲಯದಿಂದ ಅನೇಕ ಹಿಂದಿನ ಕವಿಗಳ ಕಾವ್ಯಗಳನ್ನು ಓದಿ ಮನವರಿಕೆಯನ್ನು ಮಾಡಿಕೊಂಡರು.

ಅಲ್ಲದೇ ಆ ಕಾಲಕ್ಕೆ ವೃತ್ತಿರಂಗಭೂಮಿಯಲ್ಲಿ ಹೆಸರು ಗಳಿಸಿದ ವಾಮನರಾವ ಮಾಸ್ತರ, ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು, ಗರುಡ ಸದಾಶಿವರಾಯರು, ಜಿ.ಜಿ. ಹೆಗಡೆ, ಕೋಲ ಶಾಂತಪ್ಪ, ಅಚ್ಯುತರಾವ ಹುಯಿಲಗೋಳ, ಎಲ್.ಎಸ್. ಇನಾಮದಾರ, ಕಂದಗಲ್ ಹನುಮಂತರಾಯರು. ಎಚ್.ಟಿ. ಮಹಾಂತೇಶ ಶಾಸ್ತ್ರಿ ಮುಂತಾದವರ ನಾಟಕಗಳನ್ನು ಓದಿ ಮುಗಿಸಿದರು. ಇವರ ನಾಟಕಗಳು ರಂಗದ ಮೇಲೆ ಪ್ರದರ್ಶನಗೊಂಡದ್ದನ್ನು ನೋಡಿದ, ಪಿ.ಬಿ. ಧುತ್ತರಗಿಯವರು ಓದು, ನಾಟಕ-ಚಲನಚಿತ್ರಗಳನ್ನು ನೋಡಿದ ಅನುಭವದಿಂದ ನಾಟಕ ಬರೆಯಲು ಮನಸ್ಸು ಮಾಡಿದರು. 'ಕಲ್ಪನಾ ಪ್ರಪಂಚ', 'ನಂದಾದೀಪ' 'ಕಾನೂನು' ಈ ಮೂರು ನಾಟಕಗಳು ಪ್ರಗತಿಶೀಲ ಸಾಹಿತ್ಯದ ಓದಿನಿಂದ ಪ್ರೇರಣೆಗೊಂಡು ರಚಿಸಿದಂತವುಗಳು. ಹರಗಿರಿಜೆ, ಚಾರುದತ್ತ, ಪುರಂದರದಾಸ ಈಗಾಗಲೇ ಜನಜನಿತವಾದ ವಸ್ತುವನ್ನು ಇಟ್ಟುಕೊಂಡು ಬರೆದವುಗಳು. 'ಅತ್ತಿಗೆ' ಮನಸ್ಸಿಲ್ಲದ ಮದುವೆ, ಧರ್ಮದೇವತೆ ನಾಟಕಗಳಲ್ಲಿಯೂ ಪ್ರಗತಿಶೀಲ ಸಾಹಿತ್ಯದ ಮನೋಧರ್ಮ ಕಂಡು ಬರುತ್ತದೆ. ತಾಯಿ ಕರುಳು, ಮಲಮಗಳು, ಸಂಪತ್ತಿಗೆ ಸವಾಲ್, ಚಿಕ್ಕ ಸೊಸೆ, ಸುಖದ ಸುಪ್ಪತ್ತಿಗೆ, ಸಂಪತ್‌ಲಕ್ಷ್ಮಿ, ಇಳಕಲ್ ಸೀರೆ ಮುಂತಾದ ನಾಟಕಗಳು ರಂಗಪ್ರಯೋಗದಲ್ಲಿ ಪ್ರೇಕ್ಷಕರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾದವು. ಧುತ್ತರಗಿಯವರ ಪೌರಾಣಿಕ ನಾಟಕಗಳಲ್ಲಿ ದೇವಿ ಮಹಾತ್ಮೆ ಪ್ರಸಿದ್ಧಿಯನ್ನು ಪಡೆಯಿತು. ಕಿತ್ತೂರ ಚೆನ್ನಮ್ಮ, ಸಿಂಧೂರ ಲಕ್ಷ್ಮಣ ನಾಟಕಗಳು ಧುತ್ತರಗಿಯವರಿಗೆ ಕೀರ್ತಿಯನ್ನು ತಂದುಕೊಟ್ಟಿವೆ.

೧೯೬೦ರಲ್ಲಿ ರಚಿಸಿದ ಧುತ್ತರಗಿಯವರ ತಾಯಿ ಕರುಳು ಇಂದಿನವರೆಗೂ ತನ್ನ ಜನಪ್ರಿಯತೆಯನ್ನು ಇಟ್ಟುಕೊಂಡು ಬಂದಿರುವದಕ್ಕೆ ಕಾರಣ ಆ ನಾಟಕದ ಕಥಾವಸ್ತುವೇ ಅಂತಹದ್ದು.

ಇದರ ಕಥಾವಸ್ತು ಒಂದು ಕುಟುಂಬದ ಕರುಣಾಮಯಿ ತಾಯಿಯ ಸುತ್ತ ಸುತ್ತುವುದು. ಕಲ್ಯಾಣ ಶೆಟ್ಟಿ ಗೌರಮ್ಮ ಎಂಬ ದಂಪತಿಗಳಿಗೆ ಮಹೇಶ, ಮಹಾಂತೇಶ, ದಾಕ್ಷಾಯಣಿ ಎಂಬ ಮೂರು ಮಕ್ಕಳು. ಮಹೇಶನ ಹೆಂಡತಿ ಸರಸ್ವತಿ. ಈಕೆ ಸಿಡುಕು ಸ್ವಭಾವದ ಹೆಣ್ಣು, ಸರಸ್ವತಿಯ ಸಂಚಿನಿಂದ ಕಲ್ಯಾಣ ಶೆಟ್ಟಿಯು ದುರ್ವ್ಯಸನಕ್ಕೆ ಈಡಾಗುತ್ತಾನೆ. ಗಂಡ ಮಹೇಶನ ಮುಖಾಂತರ ಕೆಲಸವಿಲ್ಲದ ಮೈದುನನನ್ನು ಮನೆಯಿಂದ ಹೊರಗಟ್ಟುವಲ್ಲಿ ಯಶಸ್ವಿಯಾಗುತ್ತಾಳೆ. ಹೊರಹೋದ ಮಹಾಂತೇಶ ಭಾರತೀಯ ಸೈನ್ಯದಲ್ಲಿ ಸೇರಿ ತಾಯಿ ಮತ್ತು ತಂಗಿಯರಿಗೆ ಪ್ರತಿತಿಂಗಳು ಹಣ ಕಳಿಸುತ್ತಿರುತ್ತಾನೆ. ಇವಾವುದನ್ನು ಅತ್ತೆ ಮತ್ತು ದಾಕ್ಷಾಯಣಿಯರಿಗೆ ತಿಳಿಸದೆ ಮಹಾಂತೇಶ ಕಳಿಸುವ ಹಣದ ವಿಷಯವನ್ನು ಗುಟ್ಟಾಗಿ ಇಟ್ಟು ಮಹೇಶ ಸರಸ್ವತಿಯರೆ ಬಳಸುತ್ತಾ ಇರುವರು. ದಾಕ್ಷಾಯಣಿ ಒಂದು ದಿನ ವಿಷಮಶೀತ ಜ್ವರದಿಂದ ಬಳಲಿ ಮರಣವನ್ನಪ್ಪುವಳು. ಸೊಸೆಯ ಕಿರುಕುಳವನ್ನು ತಾಳದೆ ಮನೆಬಿಟ್ಟು ಬಂದ ಅತ್ತೆ ಗೌರಮ್ಮ ಬಸಸ್ಟ್ಯಾಂಡಿನಲ್ಲಿ

ಹಮಾಲಿ ಮಾಡುತ್ತಿರುತ್ತಾಳೆ. ರಜೆಗೆಂದು ಊರಿಗೆ ಬಂದ ಮಹಾಂತೇಶ ತನ್ನ ಲಗೇಜುಗಳನ್ನು ತನ್ನ ತಾಯಿಯೆಂದು ಅರಿಯದೆ ಅವಳ ಮೇಲೆ ಹೊರಿಸಿಕೊಂಡು ಮನೆಗೆ ಬರುತ್ತಾನೆ. ನಿಜ ಸಂಗತಿ ತಿಳಿದು ದುಃಖಿಸುತ್ತಾನೆ. ತಾಯಿಯನ್ನು ಈ ಸ್ಥಿತಿಗೆ ತಂದ ಅಣ್ಣ ಅತ್ತಿಗೆಯರನ್ನು ಹೊಡೆಯಲು ಮುಂದಾದಾಗ ತಾಯಿ ಆಣೆ ಇಟ್ಟು ಅವರ ಅಪರಾಧವನ್ನು ಕ್ಷಮಿಸು ಎಂದು ಹೇಳುವ ಅವಳ ಮಾತಿನಲ್ಲಿ ತಾಯಿಯ ಕರುಳು ಮನಮುಟ್ಟುತ್ತದೆ.

ಇಂತಹ ಸರಳವಾದ ಕಥೆಯ ಈ ನಾಟಕ ಅಪಾರವಾದ ಜನಪ್ರಿಯತೆಯನ್ನು ಗಳಿಸಿತು. ಕುಟುಂಬದಲ್ಲಿ ಏನೆ ತೊಂದರೆ ಕೊಟ್ಟರೂ ಸಹಿಸಿಕೊಂಡು ಹೋದ ಕರುಣಾಮಯಿ ತಾಯಿ, ಕುಟೀಲ ಕಾರಸ್ಥಾನದ ಸಂಕುಚಿತ ಮನೋಭಾವನೆಯ ಸೊಸೆ ಇಲ್ಲಿ ತಾಯಿಯ ತ್ಯಾಗ, ಸೊಸೆಯ ಸ್ವಾರ್ಥಗಳನ್ನು ನೋಡುತ್ತೇವೆ. ಹೆಣ್ಣಿನ ಶೋಷಣೆ ಹೆಣ್ಣಿನಿಂದಲೇ ನಡೆಯುವದನ್ನು ಸೊಸೆಯ ಪಾತ್ರದಲ್ಲಿ ಕಾಣುತ್ತೇವೆ. ಸಾಮಾನ್ಯವಾಗಿ ಮಧ್ಯಮ ವರ್ಗದ ಕುಟುಂಬದಲ್ಲಿ ನಡೆಯುವ ಸಾಮಾನ್ಯ ಕಥೆಯ ಈ ನಾಟಕವು ಸಹಜವಾಗಿಯೆ ಎಲ್ಲ ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸಿತು. ವೃತ್ತಿಕಂಪನಿಯ ಎಲ್ಲ ಮಂಡಳಿಯಲ್ಲಿ ಈ ನಾಟಕ ಯಶಸ್ವಿ ರಂಗಪ್ರಯೋಗಗೊಂಡಿದೆ. ಏಣಗಿ ಬಾಳಪ್ಪನವರ ಕಂಪನಿಯ ಮುಖಾಂತರ ಈ ನಾಟಕ ಮಹಾರಾಷ್ಟ್ರದ ಮುಂಬೈವರೆಗೆ ಹೋಗಿ ಪ್ರದರ್ಶನಗೊಂಡಿದೆ.

ಸಂಪತ್ತಿಗೆ ಸವಾಲ್ ನಾಟಕವು ಧುತ್ತರಗಿಯವರ ಅಪ್ರತಿಮ ಕಲಾ ಕುಸುಮ. ಇವರ ಎಲ್ಲ ನಾಟಕಗಳಲ್ಲಿಯೇ ಈ ನಾಟಕ ಮೇರುಕೃತಿಯೆನಿಸಿದೆ. ಈ ನಾಟಕ ಗೋಕಾಕ ಕಂಪನಿಯಲ್ಲಿ ಕರ್ನಾಟಕದಾದ್ಯಂತ ೧೦೦-೨೦೦ ಪ್ರಯೋಗಗಳನ್ನು ಕಂಡು ಕಂಪನಿಗೆ ಆದಾಯ ಮತ್ತು ಕೀರ್ತಿಯನ್ನು ತಂದುಕೊಟ್ಟಿದೆ. ಗೋಕಾಕ ಕಂಪನಿಯ ಮಾಲಿಕರಾದ ಬಸವರಾಜಪ್ಪ ಹೊಸಮನಿಯವರು ಈ ನಾಟಕದ ೧೦೧ನೆಯ ಪ್ರಯೋಗದ ಸಂಭ್ರಮದಲ್ಲಿ ಧುತ್ತರಗಿಯವರಿಗೆ 'ನಾಟ್ಯಕವಿ ಪುಂಗವ' ಎಂಬ ಬಿರುದು ಕೊಟ್ಟು ಸನ್ಮಾನಿಸಿದರು. ಹಿರಿಯ ಕಂಪನಿ ಮಾಲಿಕ, ನಾಟಕಕಾರ ಗಂಗಾಧರಶಾಸ್ತ್ರಿಗಳು "ಇದುವರೆಗೆ ನಾನು ಇಂತಹ ನಾಟಕ ನೋಡಿಯೇ ಇಲ್ಲ" ಎಂದು ಉದ್ಗಾರ ತೆಗೆದು ಧುತ್ತರಗಿಯವರಿಗೆ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಗೋಕಾಕ ಕಂಪನಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಈ ನಾಟಕವನ್ನು ರಂಗ ಪ್ರದರ್ಶನ ಮಾಡುತ್ತಿದ್ದ ವೇಳೆ ಗುಬ್ಬಿ ವೀರಣ್ಣನವರು ನಾಟಕ ನೋಡಿ ಚಲನಚಿತ್ರ ಮಾಡಲು ನಿರ್ಧರಿಸಿದ್ದರು. ಅದು ವೀರಣ್ಣನವರಿಂದ ಕೈಗೊಡಲಿಲ್ಲ. ಕನಕಪುರದಲ್ಲಿ ಗೋಕಾಕ್ ಕಂಪನಿ ಕ್ಯಾಂಪ ಮಾಡಿದಾಗ ಕಂಪನಿ ತುಂಬಾ ನಷ್ಟದಲ್ಲಿ ಬಂತು. ನಷ್ಟವನ್ನು ತುಂಬಿಕೊಳ್ಳಲು ವರನಟ ರಾಜಕುಮಾರರನ್ನು ಕರೆದುಕೊಂಡು ಬಂದರು. ಡಾ. ರಾಜಕುಮಾರ ಅವರು ಈ ಸಂಪತ್ತಿಗೆ ಸವಾಲ್ ನಾಟಕವನ್ನು ಚಲನಚಿತ್ರವನ್ನಾಗಿ ಮಾಡುತ್ತೇನೆಂದು ತಿಳಿಸಿ ಭದ್ರನ ಪಾತ್ರವನ್ನು ತಾವೇ ಮಾಡುವದಾಗಿ ಹೇಳಿದರು.

ಬೆಂಗಳೂರಿನ ಪದ್ಮಶ್ರೀ ಪಿಕ್ಚರ್ ಲಾಂಛನದಡಿಯಲ್ಲಿ ಚಲನಚಿತ್ರ ನಿರ್ಮಾಣವಾಗಿ ನಾಟಕಕಾರರಿಗೆ ಅಪಾರ ಕೀರ್ತಿಯನ್ನು ತಂದುಕೊಟ್ಟಿತು.

ಸುಳ್ಳದ ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘದ ಒಡೆಯರಾದ ಮಲ್ಲನಗೌಡ ದೇಸಾಯಿಯವರ ಒತ್ತಾಸೆಗೆ ಮಣಿದು, ಗೌರವಿಸಿ ಸಿಂಧೂರ ಲಕ್ಷ್ಮಣ ಎಂಬ ಐತಿಹಾಸಿಕ ನಾಟಕವನ್ನು ಆ ಕಂಪನಿಗೆ ಬರೆದು ಕೊಟ್ಟು ಕಂಪನಿಯ ಕೀರ್ತಿಯನ್ನು ಹೆಚ್ಚಿಸಿದರು. ಇವರ ಸಿಂಧೂರ ಲಕ್ಷ್ಮಣ, ಹರಗಿರಿಜೆ, ಮಥಾರಿ ನಂಜ, ಸೋದರಮಾವ, ತಾಯಿ ಕರುಳು, ಸಂಪತಲಕ್ಷ್ಮಿ, ಇಳಕಲ್ ಸೀರೆ ಮೊದಲಾದ ನಾಟಕಗಳು ಆಕಾಶವಾಣಿಯಲ್ಲಿ ಪ್ರಚಾರಗೊಂಡಿರುವುದನ್ನು ಕಾಣುತ್ತೇವೆ.

ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ ಗುಬ್ಬಿ ಕಂಪನಿ ಮಲಮಗಳು ನಾಟಕವನ್ನು ಪ್ರದರ್ಶಿಸಿ ತನ್ನ ಕಂಪನಿ ಆದಾಯವನ್ನು ಹೆಚ್ಚಿಸಿಕೊಂಡಿತು. ಕೆ.ಬಿ.ಆರ್. ಡ್ರಾಮಾ ಕಂಪನಿ ಇವರ ಮಲಮಗಳು, ತಾಯಿ ಕರುಳು, ನಾಟಕಗಳನ್ನು ಪ್ರದರ್ಶಿಸಿ ಕವಿಗೆ ಕೀರ್ತಿ, ಕಂಪನಿಗೆ ಆದಾಯವನ್ನು ತಂದುಕೊಂಡಿತು. ಶಾರದಾ ಸಂಗೀತ ನಾಟಕ ಮಂಡಳಿ ಗೋಕಾಕ ಕಂಪನಿ ಇವರ ಸಂಪತ್ತಿಗೆ ಸವಾಲ್, ಚಿಕ್ಕಸೊಸೆ, ಹೊಳೆಯದಂಡೆಯ ಹೊಲ, ಮಲಮಗಳು, ನಾರಿ ಸ್ವರ್ಗಕ್ಕೆ ದಾರಿ, ಬಿಟ್ಟಿ ಬಿಜನೆಸ್, ಮುಂತಾದ ನಾಟಕಗಳನ್ನು ಪ್ರದರ್ಶಿಸಿ ಜನಾನುರಾಗಿಯಾಯಿತು.

ಶ್ರೀ ಗಜಾನನ ನಾಟ್ಯ ಸಂಘ, ಜಮಖಂಡಿ ಮಲಮಗಳು ನಾಟಕವನ್ನು ಪ್ರದರ್ಶಿಸುತ್ತಿತ್ತು. ಗಂಗಾಧರ ಶಾಸ್ತ್ರಿಗಳು ಇವರ ನ್ಯಾಯಾಧೀಶ, ತಾಯಿ ಕರುಳು, ಮಲಮಗಳು, ಸಿಂಧೂರ ಲಕ್ಷ್ಮಣ ಮುಂತಾದ ನಾಟಕಗಳನ್ನು ಪ್ರದರ್ಶಿಸಿಸುತ್ತಿದ್ದರು. ಕಲಾವೈಭವ ನಾಟ್ಯ ಸಂಘ, ಬೆಳಗಾವಿ ಮಾಲಿಕರಾದ ಏಣಗಿ ಬಾಳಪ್ಪನವರು ಇವರ ನಾಟಕಗಳ ಬಗ್ಗೆ ಎಲ್ಲಿಲ್ಲದ ಪ್ರೀತಿ ಗೌರವಗಳನ್ನು ತೋರಿಸುತ್ತಿದ್ದರು. ಅಲ್ಲದೆ ತಾಯಿ ಕರುಳು, ಚಿಕ್ಕ ಸೊಸೆ, ಅತ್ತಿಗೆ, ಸಂಪತ್ತಿಗೆ ಸವಾಲ್ ಮುಂತಾದ ನಾಟಕಗಳನ್ನು ಪ್ರದರ್ಶಿಸಿದರು. ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿಯು ಇವರ ಪುರಂದರದಾಸ, ಮಲಮಗಳು ನಾಟಕಗಳನ್ನು ಪ್ರದರ್ಶಿಸಿ ತನ್ನ ಕಂಪನಿ ಆದಾಯವನ್ನು ಹೆಚ್ಚಿಸಿಕೊಂಡಿದೆ. ಹೀಗೆ ಉತ್ತರ ಕರ್ನಾಟಕದಲ್ಲಿದ್ದ ಸುಮಾರು ೪೦-೪೨ ಕಂಪನಿಗಳು ಇವರ ನಾಟಕಗಳನ್ನು ಪ್ರದರ್ಶಿಸಿ ಇವರ ನಾಟಕಗಳನ್ನು ಜನಪ್ರಿಯಗೊಳಿಸಿದ್ದು ಗಮನಾರ್ಹ.

ಮಾರುತೇಶ ಮಾಂಡ್ರೆ: ೧೯೩೦ರಲ್ಲಿ ಹೊಳೆಆಲೂರಿನಲ್ಲಿ ಜನಿಸಿದರು. ಇವರು ನಾಟಕದ ಕಡೆಗೆ ಒಲವನ್ನು ಬೆಳೆಸಿಕೊಂಡಿದ್ದರು. ಹೀಗಾಗಿ ಏಳನೆಯ ವರ್ಗ ಮುಗಿಯುತ್ತಿದ್ದಂತೆ ಓದಿಗೆ ವಿದಾಯ ಹೇಳಿದರು. ಬಾದಾಮಿಯ ಸುತ್ತಮುತ್ತಲಿನ ಕಂಪನಿಗಳಾದ ವಿಶ್ವಕಲಾರಂಜನ, ಭಾಗ್ಯೋದಯ, ಕೆರೂರ ನಾಟಕ ಮಂಡಳಿಗಳು ಪ್ರದರ್ಶಿಸುತ್ತಿದ್ದ ನಾಟಕಗಳನ್ನು ನೋಡಿ ಆನಂದಿಸುತ್ತಿದ್ದರು. ಕಂದಗಲ್ಲ ಹನುಮಂತರಾಯರ,

ಶ್ರೀಕಂಠಶಾಸ್ತ್ರಿಗಳ, ಪಂಡಿತ ಪುಟ್ಟರಾಜ ಗವಾಯಿಗಳ ನಾಟಕಗಳನ್ನು ನೋಡಿ ಪ್ರೇರಣೆಗೊಂಡು ನಾಟಕ ಬರೆಯಲು ತೊಡಗಿದರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ಸೌಭಾಗ್ಯ ಲಕ್ಷ್ಮಿ ಎಂಬ ನಾಟಕವನ್ನು ಬರೆದ ಇವರು ಅದನ್ನು ಗಂಗಾಧರಶಾಸ್ತ್ರಿಗಳಿಗೆ ತೋರಿಸಿ ಅವರ ಸಲಹೆ ಸೂಚನೆಯಂತೆ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡರು. ಇವರ ನಾಟಕವನ್ನು ಗಂಗಾಧರಶಾಸ್ತ್ರಿಗಳು ತಮ್ಮ ಕಂಪನಿಯಲ್ಲಿ ಪ್ರದರ್ಶಿಸಿದರು. ಇವರ ಈ ಸೌಭಾಗ್ಯಲಕ್ಷ್ಮಿ ನಾಟಕ ಗಂಗಾಧರ ಶಾಸ್ತ್ರಿಗಳ ಕೈಯಲ್ಲಿ ಬೇಗನೆ ಜನ ಬೆಂಬಲ ಪಡೆಯಿತು. ತಮ್ಮ ಮೊದಲ ನಾಟಕ ಸೌಭಾಗ್ಯಲಕ್ಷ್ಮಿ ನಾಟಕದ ಪ್ರೇರಣೆಯಿಂದ ಸುಮಾರು ೫೦ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದರು. ಆಳವಾದ ಅಧ್ಯಯನದ ಫಲವಾಗಿ ಮಾರುತೇಶ ಮಾಂಡ್ರೆಯವರಿಗೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಭಕ್ತಿಪ್ರಧಾನ, ರಾಜಕೀಯ ಮುಂತಾದ ವಸ್ತುಗಳನ್ನು ಆಯ್ದುಕೊಂಡು ನಾಟಕ ರಚಿಸಲು ಸಾಧ್ಯವಾಯಿತು. ಶಿವಶರಣರನ್ನು ಕುರಿತು ಹೆಚ್ಚು ನಾಟಕಗಳನ್ನು ರಚಿಸಿ ಶರಣಕವಿಯೆಂದೇ ಗುರುತಿಸಿಕೊಂಡಿದ್ದರು. ಕೊಪ್ಪಳ ಗವಿಸಿದ್ದೇಶ್ವರ ಮಹಾತ್ಮೆ, ನಾಟಕದ ಜನಪ್ರಿಯತೆಗೆ ಮನಸೋತ ಕೊಪ್ಪಳ ಶ್ರೀಗಳು 'ಶರಣ ಸಾಹಿತ್ಯರತ್ನ' ಎಂಬ ಬಿರುದು ಕೊಟ್ಟು ಸನ್ಮಾನಿಸಿದರು. ಮಹಾಸತಿ, ಭೂಕೈಲಾಸ ಮುಂತಾದವು ಇವರ ಪೌರಾಣಿಕ ನಾಟಕಗಳಾದರೆ ನರಗುಂದ ಬಂಡಾಯ, ವೀರಮಾತೆ ಬೆಳವಡಿ ಮಲ್ಲಮ್ಮ, ಇವು ಚಾರಿತ್ರಿಕ ನಾಟಕಗಳು. ಸಂಸಾರ, ಕಟ್ಟಿದ ತಾಳಿ, ಸತಿ ಸರಸ್ವತಿ, ಸ್ತ್ರೀರತ್ನ, ತವರುಮನೆ, ಮುಠಾಳಮಾವ, ದೇಸಾಯರ ದರ್ಬಾರ ಮುಂತಾದ ಸಾಮಾಜಿಕ ನಾಟಕಗಳಿಂದಲೂ ಜನಾನುರಾಗಿಯಾಗಿ ಕೀರ್ತಿಗಳಿಸಿದರು. ಕೊಪ್ಪಳದ ಗವಿಸಿದ್ದೇಶ್ವರ ಮಹಾತ್ಮೆ, ಹಾನಗಲ್ ಕುಮಾರೇಶ್ವರ ಮಹಾತ್ಮೆ, ಇಳಕಲ್ ವಿಜಯ ಮಹಾಂತೇಶ ಮಹಾತ್ಮೆ, ಶ್ರೀ ಸಿದ್ಧಾರೂಢರ ಮಹಾತ್ಮೆ, ಗುಡಗಂಟಿಯ ಅಮರೇಶ್ವರ ಮಹಾತ್ಮೆ ಮುಂತಾದ ಶರಣ ಮಹಾತ್ಮೆಗಳನ್ನು ಬರೆದು ಭಕ್ತಿರಸವನ್ನು ಹರಸಿದ ಶರಣಕವಿ ಮಾರುತೇಶ ಮಾಂಡ್ರೆ ಈ ಭಾಗದ ಪ್ರಮುಖ ನಾಟಕಕಾರರಲ್ಲಿ ಒಬ್ಬರು.

ಎಚ್.ಆರ್. ಭಸ್ಮೆ: ಕಂದಗಲ್ ಹನುಮಂತರಾಯ, ನಲವಡಿ ಶ್ರೀಕಂಠ ಶಾಸ್ತ್ರಿಗಳ ಪ್ರಭಾವಕ್ಕೆ ಒಳಗಾದ ಎಚ್.ಆರ್. ಭಸ್ಮೆಯವರು 'ಅತ್ತೆ-ಅಳಿಯ' ಎಂಬ ಸಾಮಾಜಿಕ ನಾಟಕವನ್ನು ರಚಿಸುವದರ ಮುಖಾಂತರ ರಂಗಭೂಮಿಗೆ ಪ್ರವೇಶ ಪಡೆದರು. ೧೯೫೨ರಲ್ಲಿ ರಚಿಸಲ್ಪಟ್ಟ ಅತ್ತೆ-ಅಳಿಯ ನಾಟಕವನ್ನು ಗಂಗಾಧರ ಶಾಸ್ತ್ರಿಗಳು ತಮ್ಮ ಕಂಪನಿಯಲ್ಲಿ ಪ್ರದರ್ಶಿಸಿ ಎಚ್.ಆರ್. ಭಸ್ಮೆಯವರಿಗೆ ರಂಗಭೂಮಿಯಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟರು. ಇದರಿಂದ ಪ್ರೇರಿತಗೊಂಡ ಭಸ್ಮೆಯವರು ೧೫೦ಕ್ಕೂ ಹೆಚ್ಚು ನಾಟಕಗಳನ್ನು ಬರೆದು ರಂಗಭೂಮಿಯನ್ನು ಶ್ರೀಮಂತಗೊಳಿಸಿದರು. ಪ್ರಾಸಪ್ರಿಯರಾದ ಇವರು ತಮ್ಮ ನಾಟಕಗಳಲ್ಲಿ ಪ್ರಾಸಯುಕ್ತ ಸಂಭಾಷಣೆಯ ಮುಖಾಂತರ ನಾಟಕದ ಪರಿಣಾಮವನ್ನು ಪ್ರೇಕ್ಷಕರ ಮನಸ್ಸಿನಲ್ಲಿ ನಾಟುವಂತೆ ಮಾಡಿದರು. ಸಾಮಾನ್ಯವಾಗಿ ಇವರು ತಮ್ಮ ಸುತ್ತಲಿನ ಸಮಾಜದಲ್ಲಿ ಬೇರು ಬಿಟ್ಟ ಕೌಟುಂಬಿಕ ಕಲಹ, ಮೋಸ, ವಂಚನೆ, ಭ್ರಷ್ಟಾಚಾರ, ಹೆಣ್ಣಿನ ಶೋಷಣೆ, ಹೆಣ್ಣಿನ ಕಟುತನ, ಕಲುಷಿತ

ರಾಜಕೀಯ ವಾತಾವರಣ ಮುಂತಾದ ವಿಷಯುಗಳನ್ನು ತಮ್ಮ ನಾಟಕಗಳ ರಚನೆಗೆ ಬಳಸಿಕೊಂಡರು. ಇಂದಿರಾಗಾಂಧಿಯವರು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದಾಗ 'ರಂಡೆಮುಂಡೆ ರಾಜ್ಯದಾಗ' ಎಂಬ ಸಾಮಾಜಿಕ ರಾಜಕೀಯ ನಾಟಕವನ್ನು ಬರೆದು ಜೈಲಿಗೆ ಹೋದರು. ಜೈಲಿನಿಂದ ಬಿಡುಗಡೆ ಹೊಂದಿ ಬಂದ ನಂತರ ಅವರು ಪ್ರಜಾಪ್ರಭುತ್ವದ ಕಾಳಜಿಯನ್ನು ಮರೆಯಲಿಲ್ಲ. ಪ್ರಜಾಪ್ರಭುತ್ವದ ದುರ್ಬಳಕೆಯನ್ನು ಕುರಿತು 'ಕವಿ ಖೈದಿಯಾದ' ಎಂಬ ನಾಟಕವನ್ನು ಬರೆದು ಜನಜಾಗೃತಿಯನ್ನು ಮಾಡಲು ಪ್ರಯತ್ನಿಸಿದರು. ತಕರಾರು ತಂದ ತಾಳಿ, ಹುಬ್ಬಳ್ಳಿ ಹುಡ್ಗಿ, ಕಣ್ಣೀರು, ದೇವರೆಲ್ಲಿದ್ದಾನೆ?, ಬಾಳುಬೆಳಗಿದ ಸತಿ, ಹಣದ ಹುಚ್ಚು, ಶ್ರೀಮಂತ ಸೊಸೆ, ಮುಂಡರ ಗಂಡ, ಒಲಿದರೆ ನಾರಿ ಮುನಿದರೆ ಮಾರಿ, ಗೌಡ್ರ ಗದ್ಲ, ಯಾರಿಗೆ ಯಾರು? ಮುಂತಾದ ಸಾಮಾಜಿಕ ನಾಟಕಗಳನ್ನು ರಚಿಸಿ ಅನೇಕ ವೃತ್ತಿ ಮಂಡಳಿಗೆ ಕೊಟ್ಟರು. ಇವರ ನಾಟಕಗಳನ್ನು ಅನೇಕ ವೃತ್ತಿಮಂಡಳಿಗಳು ಪ್ರಯೋಗ ಮಾಡಿ ಆದಾಯ ಮತ್ತು ಕೀರ್ತಿಯನ್ನು ಹೆಚ್ಚಿಸಿಕೊಂಡಿವೆ. ಇಷ್ಟೆಲ್ಲ ನಾಟಕಗಳನ್ನು ಬರೆದರೂ ಕೊನೆಗಳಿಗೆಯವರೆಗೆ ಬಡತನ ಇವರ ಬೆನ್ನು ಬಿಡಲಿಲ್ಲ.

ನಾಟಕ ಪ್ರಕಾರಗಳು

ಕನ್ನಡ ನಾಟಕ ಸಾಹಿತ್ಯ ಕಾಲದಿಂದ ಕಾಲಕ್ಕೆ ಯುಗಧರ್ಮವನ್ನು ಅನುಸರಿಸಿ ರಚನೆಗೊಂಡ ನಾಟಕಗಳನ್ನು ನೋಡಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಂದು ಸ್ಥೂಲವಾಗಿ ವರ್ಗೀಕರಿಸಿಬಹುದಾದರೂ ಇಂತಹದ್ದೇ ಕಾಲದಲ್ಲಿ ಇಂತಹ ನಾಟಕಗಳ ಪ್ರಕಾರ ಇತ್ತೆಂದು ಕಾಲಮಾನದ ಕಂಪಾರ್ಟಮೆಂಟನಲ್ಲಿಡುವದು ಕಷ್ಟ, ಯಾಕಂದರೆ ದೇಶಾಭಿಮಾನ ಜಾಗೃತಿಯಾಗಿ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ವೃತ್ತಿರಂಗಭೂಮಿ ಯಲ್ಲಿ ರಂಗಪ್ರಯೋಗ-ಗೊಳ್ಳುತ್ತಿರುವಾಗಲೇ ಪೌರಾಣಿಕ ನಾಟಕಗಳು ರಂಗಪ್ರಯೋಗದಲ್ಲಿ ಕಂಡುಬಂದವು.

"ದೇಶಾಭಿಮಾನ ಜಾಗೃತಿವಾಗುತ್ತಿರುವದನ್ನು ಕಂಡು 'ಎಚ್ಚಮ ನಾಯಕ'ದಂತಹ ನಾಟಕವನ್ನು ರಂಗಭೂಮಿಗೆ ತಂದರು. ಹಿಂದೂ-ಮುಸ್ಲಿಂ ಐಕ್ಯವು ರಾಷ್ಟ್ರದ ಬೆಳವಣಿಗೆಗೆ ಅಗತ್ಯ ಎಂದು ಮುಂದಾಳುಗಳು ಹೇಳುವ ಕಾಲದಲ್ಲಿ 'ಕಬೀರದಾಸ'ದಂತಹ ನಾಟಕವನ್ನಾಡಿದರು. ಸಮಾಜ ಸುಧಾರಣೆಯತ್ತ ಜನರ ಮನವು ಸೆಳೆಯಲ್ಪಡುತ್ತಿರುವಾಗ 'ವಿಷಮ ವಿವಾಹ'ದಂತಹ ಸಾಮಾಜಿಕ ನಾಟಕವನ್ನಾಡಿದರು. ಜೊತೆಗೆ ರಂಗಸಜ್ಜಿಕೆ, ವೇಷ-ಭೂಷಣಗಳ ಆಕರ್ಷಣೆಗೆ ಅವಕಾಶವಿದ್ದ ಸಂಗೀತ, ನೃತ್ಯಗಳನ್ನು ಒಳಗೊಂಡ 'ಪಾದುಕಾ ಪಟ್ಟಾಭಿಷೇಕ' 'ಕೃಷ್ಣಲೀಲೆ' 'ಕಂಸವಧ' ಮುಂತಾದ ಪೌರಾಣಿಕ ನಾಟಕಗಳನ್ನು ಆಡುತ್ತಿದ್ದರು."[೫] ಶ್ರೀರಂಗರ ಮಾತುಗಳನ್ನು ನೋಡಿದಾಗ ಕನ್ನಡ ರಂಗಭೂಮಿಯನ್ನು ನಾಟಕ ಪ್ರಕಾರಗಳಿಂದ ವರ್ಗೀಕರಿಸಿ ನೋಡುವುದು ಸೂಕ್ತವೆನಿಸುವುದಿಲ್ಲ.

ವೃತ್ತಿರಂಗಭೂಮಿಯು ಪ್ರೇಕ್ಷಕರ ಅಭಿರುಚಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ವೈವಿಧ್ಯತೆಯ ದೃಷ್ಟಿಯಿಂದ ಎಲ್ಲ ಪ್ರಕಾರದ ನಾಟಕಗಳನ್ನು ಎಲ್ಲಾ ಕಾಲಕ್ಕೂ ಪ್ರದರ್ಶಿಸುತ್ತಾ ಬಂದಿರುವದು ಗಮನಾರ್ಹ.

ಪೌರಾಣಿಕ ನಾಟಕಗಳು

ಬಂಗಾಲಿ, ಪಾರ್ಸಿ ಕಂಪನಿಗಳ ಪ್ರಭಾವದಿಂದ ದಕ್ಷಿಣ ಭಾರತದ ರಂಗಭೂಮಿ ಅನೇಕ ಬದಲಾವಣೆಗಳನ್ನು ಕಂಡುಕೊಂಡಿತು. ಮರಾಠಿ ವೃತ್ತಿರಂಗಭೂಮಿಯ ಪ್ರಭಾವವೂ ಉತ್ತರಕರ್ನಾಟಕದ ರಂಗಭೂಮಿಯ ಮೇಲೆ ಆವರಿಸಿತ್ತು. ಜನಪದ ರಂಗಭೂಮಿಯ ಇತಿಹಾಸವನ್ನು ನೋಡಿದರೆ ಅಲೌಕಿಕ, ಅತಿಮಾನುಷ, ದುಷ್ಟಶಕ್ತಿಗಳ ಬಗ್ಗೆ ಕುರಿತು ಇದ್ದ ಕಥೆಯನ್ನು ತೆಗೆದುಕೊಂಡು ಜನಪದ ರಂಗಭೂಮಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ನಮ್ಮ ಕನ್ನಡ ಸಾಹಿತ್ಯದ ಪ್ರಾರಂಭದಲ್ಲಿ ರಾಮಾಯಣ, ಮಹಾಭಾರತ, ಶಿವಪುರಾಣ, ವಿಷ್ಣುಪುರಾಣ, ಸಾಧು ಸಂತರನ್ನು ಕುರಿತು ಐತಿಹಾಸಿಕ ಪುರಾಣಗಳು ಅಸಂಖ್ಯಾತ ಪ್ರಮಾಣದಲ್ಲಿ ರಚನೆಗೊಂಡವು. ಈ ರೀತಿ ರಚನೆಗೊಳ್ಳಲು ನಮ್ಮ ಭಾರತೀಯರ ರಾಮಾಯಣ, ಮಹಾಭಾರತ, ಪುರಾಣಗಳ ಬಗ್ಗೆ ಇದ್ದ ಪ್ರೀತಿ-ಗೌರವಗಳು ಕಾರಣ. ಜನರ ನಾಡಿ ಬಡಿತವನ್ನು ಅರ್ಥೈಯಿಸಿದ ಆ ಕಾಲದ ಪ್ರವಚನಕಾರರು ಪುರಾಣ ಪ್ರಸಿದ್ಧವಾದ ವಸ್ತುವನ್ನು ಆಯ್ದುಕೊಂಡು ಕೀರ್ತನೆಗಳ ಮುಖಾಂತರ ಪೌರಾಣಿಕ ಕಥೆಗಳಲ್ಲಿ ನಿರೂಪಿತವಾದ ವಿಷ್ಣು ಮುಂತಾದವರನ್ನು ತಮ್ಮ ಕೀರ್ತನೆಗಳ ಮುಖಾಂತರ ಪ್ರಚಾರ ಮಾಡಿ ಕೀರ್ತನಕಾರರು ಜನರನ್ನು ಲೌಕಿಕ ಬದುಕಿನಿಂದ ಪಾರಮಾರ್ಥಿಕ ಬದುಕಿನೆಡೆಗೆ ತಿರುಗಿಸಿದರು. ಇಂತಹ ಒಂದು ಪೌರಾಣಿಕ ಆಯಾಮ ಸಿದ್ಧವಾಗಿತ್ತು. ಕರ್ನಾಟಕದ ವೃತ್ತಿರಂಗಭೂಮಿಯು ಇಂಥ ಒಂದು ಪ್ರಭಾವಕ್ಕೆ ಒಳಗಾಗಿದ್ದನ್ನು ಈ ಹಿಂದೆಯೇ ಹೇಳಿದೆ. ಮರಾಠಿ ವೃತ್ತಿರಂಗಭೂಮಿಯ ಪ್ರಭಾವದಿಂದ ಹೊರಬರುವ ಭರದಲ್ಲಿ ನಮ್ಮ ವೃತ್ತಿರಂಗಭೂಮಿಗೆ ಕಂಡದ್ದು ಪುರಾಣ ಪ್ರಸಿದ್ಧವಾದ ವಿಷಯಗಳು. ಇಂತಹ ಪೌರಾಣಿಕ ವಸ್ತುವನ್ನು ಆಯ್ದುಕೊಂಡು ಜರೂರಿಯಾಗಿ ವೃತ್ತಿರಂಗಭೂಮಿಗೆ ಬೇಕಾದ ನಾಟಕಗಳನ್ನು ನಾಟಕಕಾರರು ರಚಿಸಿದರು. ಪುರಾಣಗಳಲ್ಲಿ ಬರುವ ನಾಟಕೀಯ ಅಂಶಗಳನ್ನು ತೆಗೆದುಕೊಂಡು ನಾಟಕಗಳನ್ನು ರಚಿಸಲು ಮುಂದಾದರು. ವೃತ್ತಿರಂಗಭೂಮಿ ಬದಲಾದ ಕಾಲದ ಕರೆಯನ್ನು ಪೂರೈಸುತ್ತ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ಪ್ರಯೋಗಿಸುತ್ತಾ ಬಂದಿದೆ. ಇಲ್ಲಿಯವರೆಗೆ ಪೌರಾಣಿಕ ನಾಟಕಗಳು ನಮ್ಮ ವೃತ್ತಿರಂಗಭೂಮಿಯಲ್ಲಿ ಉಳಿದು ಬಂದದ್ದನ್ನು ನೋಡಿದರೆ ಇದಕ್ಕೆ ಮೂಲ ಕಾರಣ ಜನಸಾಮಾನ್ಯರಲ್ಲಿದ್ದ ಧಾರ್ಮಿಕ ಭಕ್ತಿ, ಅತಿಮಾನುಷ ಘಟನೆಗಳ ಬಗೆಗೆ ಇದ್ದ ಭಯ ಕುತೂಹಲಗಳೇ ಕಾರಣವೆನ್ನಬೇಕಾಗುತ್ತದೆ.

ಶಾಂತ ಕವಿಗಳು ಮರಾಠಿ ರಂಗಭೂಮಿಯ ಪ್ರಭಾವವನ್ನು ಪ್ರತಿಭಟಿಸುವುದಕ್ಕಾಗಿ ಕೃತಪುರ ನಾಟಕ ಮಂಡಳಿಯನ್ನು ಹುಟ್ಟುಹಾಕಿದ್ದನ್ನು ಹಿಂದೆಯೇ ಹೇಳಿದೆ. ತಮ್ಮ ವೃತ್ತಿಮಂಡಳಿಯ ರಂಗಪ್ರಯೋಗಗಳಿಗೆ ಸುಮಾರು ೨೫ಕ್ಕಿಂತಲೂ ಹೆಚ್ಚು ಪೌರಾಣಿಕ ನಾಟಕಗಳನ್ನು ರಚಿಸಿ ರಂಗಪ್ರಯೋಗಕ್ಕೆ ಒಳಪಡಿಸಿ ಸುತ್ತಲಿನ ಊರುಗಳಲ್ಲಿ ಕ್ಯಾಂಪ ಮಾಡಿ ಜನರಿಗೆ ಪೌರಾಣಿಕ ಕಥಾವಸ್ತುವನ್ನು ಉಣಬಡಿಸುತ್ತಾ ಜನರನ್ನು ರಂಜಿಸಿದರು. ಶಾಂತಕವಿಗಳು ರಚಿಸಿದ ಎಲ್ಲ ನಾಟಕಗಳು ಪೌರಾಣಿಕ ನಾಟಕಗಳೇ ಆಗಿದ್ದವು.

ಉಷಾಹರಣ, ಕೀಚಕವಧೆ, ಸಿರಯಾಳ ಸತ್ವಪರೀಕ್ಷೆ ಚಂದ್ರಾವಳಿ, ಸುಂದೋಪಸುಂದ, ಸೀತಾ ಸ್ವಯಂವರ ಮುಂತಾದ ನಾಟಕಗಳು ಕೃತಪುರ ನಾಟಕ ಮಂಡಳಿಯಿಂದ ಪ್ರದರ್ಶನಗೊಳ್ಳುತ್ತಿದ್ದವಲ್ಲದೆ ಆ ಕಾಲದಲ್ಲಿ ಪ್ರಚಾರದಲ್ಲಿದ್ದ ಅನೇಕ ವೃತ್ತಿ ಕಂಪನಿಗಳು ಶಾಂತಕವಿಗಳ ಪೌರಾಣಿಕ ನಾಟಕಗಳನ್ನು ಪ್ರದರ್ಶನ ಮಾಡಿ ಜನರನ್ನು ರಂಜಿಸಿದವು.

ಇದೇ ಕಾಲಕ್ಕೆ ಕೆಲವು ನಾಟಕಕಾರರು ಮರಾಠಿ ರಂಗಭೂಮಿಯಲ್ಲಿದ್ದ ಜನಪ್ರಿಯ ನಾಟಕಗಳನ್ನು ಕನ್ನಡದಲ್ಲಿ ಅನುವಾದ ಮಾಡುವ ಕಾರ್ಯದಲ್ಲಿ ತೊಡಗಿದರು. ಕನ್ನಡದಲ್ಲಿ ಅನುವಾದಿತ ಜನಪ್ರಿಯ ಪೌರಾಣಿಕ ನಾಟಕಗಳನ್ನು ಅನೇಕ ವೃತ್ತಿಮಂಡಳಿಗಳು ರಂಗಪ್ರಯೋಗಕ್ಕೆ ಒಳಪಡಿಸಿ ಜನಮೆಚ್ಚುಗೆಯನ್ನು ಪಡೆದವು. ಮರಾಠಿ ಭಾಷೆ, ಸಂಸ್ಕೃತಿಯನ್ನು ಆಳವಾಗಿ ತಿಳಿದುಕೊಂಡ ವಾಮನರಾಯ ಮಾಸ್ತರರು ಮರಾಠಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಪೌರಾಣಿಕ ನಾಟಕಗಳಲ್ಲಿ ವೈವಿಧ್ಯತೆ ತರಲು ಪ್ರಯತ್ನಿಸಿದರು. ವೃತ್ತಿಮಂಡಳಿಯ ಪ್ರಯೋಗಗಳಿಗಾಗಿ ಅನೇಕ ಮರಾಠಿ ಪೌರಾಣಿಕ ನಾಟಕಗಳ ಅನುವಾದ ಕಾರ್ಯ ನಡೆಯಿತು.

ಮುಂದೆ ಗರುಡ ಸದಾಶಿವರಾಯರು ಚವತಿಚಂದ್ರ, ಸಾವಿತ್ರಿ, ಸತ್ಯವಾನ, ದುರಾತ್ಮರಾವಣ, ಸೌಭದ್ರ, ಬಸ್ಮಾಸುರ, ಮೋಹಿನಿ, ಶಕ್ತಿವಿಲಾಸ, ಪ್ರಹ್ಲಾದ, ಕಂಸವಧೆ, ಅನುಸೂಯಾ ಮುಂತಾದ ಪೌರಾಣಿಕ ನಾಟಕಗಳನ್ನು ಬರೆದು ವೃತ್ತಿರಂಗಭೂಮಿಗೆ ಅರ್ಪಿಸಿದರು. ಈ ಮೊದಲು ಪೌರಾಣಿಕ ನಾಟಕಗಳಲ್ಲಿದ್ದ ಸಂಗೀತ ಪ್ರಾಧಾನ್ಯತೆಯನ್ನು ಕಡಿಮೆಮಾಡಿ ಸಾಹಿತ್ಯದ ಕಡೆಗೆ ತಿರುಗಿಸಿದ್ದು ಇವರ ವೈಶಿಷ್ಟ್ಯ.

ಪೌರಾಣಿಕ ನಾಟಕಗಳಲ್ಲಿದ್ದ ಸಂಗೀತ ಪ್ರಾಧಾನ್ಯತೆಯನ್ನು ಕಡಿಮೆ ಮಾಡಿ ಸಾಹಿತ್ಯದ ಕಡೆಗೆ ತಿರುಗಿಸಿದ ಗರೂಡ ಸದಾಶಿವರಾಯರ ಪ್ರಯೋಗಶೀಲತೆಯನ್ನು ನಮ್ಮ ಭಾಗದವರಾದ ಕಂದಗಲ್ ಹನುಮಂತರಾಯರು ಮುಂದುವರೆಸಿದರು. ಅದನ್ನು ಪ್ರಾಸಯುಕ್ತ ಗದ್ಯದ ಕಡೆಗೆ ತಿರುಗಿಸಿದರು. ೧೯೨೦ರ ಸುಮಾರಿಗೆ ಗದ್ಯ ಪ್ರಧಾನವಾದ ಕಂದಗಲ್ ಹನುಮಂತರಾಯರ ಪೌರಾಣಿಕ ನಾಟಕಗಳನ್ನು ಅನೇಕ ಕಂಪನಿಗಳು ಪ್ರದರ್ಶನಮಾಡಿ ಜನಾನುರಾಗಿಯಾಗಿ ಮೆರೆದುದಲ್ಲದೆ ಆರ್ಥಿಕವಾಗಿ ಬಲಿಷ್ಠವಾದವು.

ಕಂದಗಲ್ ಹನುಮಂತರಾಯರು ಬೇರೆ ಬೇರೆ ಕಾಲದಲ್ಲಿ ಒಟ್ಟು ಹದಿನಾಲ್ಕು ಪೌರಾಣಿಕ ನಾಟಕಗಳನ್ನು ಬರೆದು ಪೌರಾಣಿಕ ನಾಟಕಗಳಿಗೆ ಒಂದು ಹೊಸ ಆಯಾಮವನ್ನು ಸೃಷ್ಟಿಸಿದರು. ಅವರ ಅಕ್ಷಯಾಂಬರ (೧೯೨೫), ಪಾಂಚಾಲಿ(೧೯೨೪), ಚಿತ್ರಾಂಗದಾ(೧೯೪೪), ಕುರುಕ್ಷೇತ್ರ(೧೯೪೨), ರಕ್ತರಾತ್ರಿ(೧೯೨೯), ಅಗ್ನಿಕಮಲ(೧೯೪೮) ಕೊಡಲಿರಾಮ, ಜಗನ್ಮಾಯಾ, ದೈವದುರಂತ ಕರ್ಣ, ನರವೀರಪಾರ್ಥ, ಬಾಣಸಿಗ ಭೀಮ ಮುಂತಾದ ನಾಟಕಗಳಲ್ಲಿ ಕಥೆಗೆ ಪ್ರಾಧಾನ್ಯತೆಯನ್ನು ಕೊಡದೆ ಪಾತ್ರಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟಿರುವದನ್ನು ಕಾಣುತ್ತೇವೆ. ಒಂದೊಂದು ನಾಟಕ ಒಂದು ಪಾತ್ರಕ್ಕಾಗಿಯೇ ಸೃಷ್ಟಿಸಿದಂತೆ ಅವರ

ಪೌರಾಣಿಕ ನಾಟಕಗಳು ಕಂಡುಬರುತ್ತವೆ. ಹಂದಿಗನೂರ ಸಿದ್ದರಾಮಪ್ಪನಂತಹ ಕಲಾವಿದನಿಗಾಗಿಯೇ ಒಂದು ಪೌರಾಣಿಕ ನಾಟಕವನ್ನು ರಚಿಸಿದ್ದುಂಟು.

ಕವಿ, ಸಂಗೀತಗಾರ, ನಾಟಕಕಾರರಾದ ನಲವಡಿ ಶ್ರೀಕಂಠ ಶಾಸ್ತ್ರಿಗಳು ವಿಚಿತ್ರ ವಿಲಾಸ, ಶೈವಶಾಂತಿ, ಸಂತಸಂಗ, ಶಾಪವಿಮೋಚನೆ, ಲಂಕಾದಹನ, ಹಿರಣ್ಯಕಶ್ಯಪ ಮುಂತಾದ ಪೌರಾಣಿಕ ನಾಟಕಗಳನ್ನು ರಚಿಸಿ, ವೃತ್ತಿರಗಂಭೂಮಿಯ ಅನೇಕ ಕಂಪನಿಗಳಿಂದ ತಮ್ಮ ಪೌರಾಣಿಕ ನಾಟಕಗಳನ್ನು ಪ್ರದರ್ಶನ ಮಾಡಿಸಿ ತಮಗೂ ಮತ್ತು ಕಂಪನಿಗೂ ಕೀರ್ತಿಯನ್ನು ತಂದುಕೊಂಡರು. ಇವರು ತಮ್ಮ ನಾಟಕಗಳಲ್ಲಿ ಸಂಗೀತ, ಗದ್ಯಕ್ಕಿಂತಲೂ ಹಾಡುಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟು ವೃತ್ತಿರಂಗಭೂಮಿಗೆ ಒಂದು ರೀತಿಯ ಹೊಸತನವನ್ನು ತಂದುಕೊಟ್ಟರು.

ಕಲಾದಗಿಯ ಎಲ್.ಎಸ್. ಇನಾಮದಾರರು ಪೃಥ್ವಿಪುತ್ರ, ಭೌಮಾಸುರ ಮುಂತಾದ ಪೌರಾಣಿಕ ನಾಟಕಗಳನ್ನು ಬರೆದು ಹೆಸರು ಮಾಡಿದರು.

ಶಾಂತಕವಿ, ಗರೂಡ ಸದಾಶಿವರಾಯರು, ವಾಮನರಾಯರು, ನಲವಡಿ ಶ್ರೀಕಂಠಶಾಸ್ತ್ರಿಗಳು, ಕಂದಗಲ್ ಹನುಮಂತರಾಯರು, ಎಲ್. ಎಸ್. ಇನಾಮದಾರ ಮುಂತಾದವರ ಪೌರಾಣಿಕ ನಾಟಕಗಳಿಂದ ಸಮೃದ್ಧವಾಗಿ ಬೆಳೆದು ನಿಂತ ನಮ್ಮ ವೃತ್ತಿರಂಗಭೂಮಿ ೧೯೪೦ ರ ಸುಮಾರಿಗೆ ಐತಿಹಾಸಿಕ, ಸಾಮಾಜಿಕ ನಾಟಕಗಳ ಪ್ರಭಾವದಿಂದ ತನ್ನ ಮೊದಲಿನ ವೈಭವವನ್ನು ಕಳೆದುಕೊಂಡಿತು.

ಗರೂಡ ಸದಾಶಿವರಾಯರ ಚವತಿಚಂದ್ರ, ಶಕ್ತಿವಿಲಾಸ, ಕಂಸವಧೆ, ಪ್ರಹ್ಲಾದ, ಶ್ರೀನಿವಾಸಕಲ್ಯಾಣ, ದುರಾತ್ಮರಾವಣ ನಾಟಕಗಳು ನಮ್ಮ ಭಾಗದಲ್ಲಿ ಪ್ರದರ್ಶನಗೊಂಡು ಜನಾನುರಾಗಿಯಾಗಿ ಮೆರೆದವು.

ಐತಿಹಾಸಿಕ ನಾಟಕಗಳು

೧೬೦೦ರಲ್ಲಿ ವ್ಯಾಪಾರ ನಿಮಿತ್ಯ ಭಾರತಕ್ಕೆ ಬಂದ ಬ್ರಿಟಿಷ್ ಈಸ್ಟ ಇಂಡಿಯಾ ಕಂಪನಿ ಇಲ್ಲಿಯೇ ನೆಲೆನಿಂತು, ಇಡೀ ಭಾರತ ದೇಶವನ್ನೇ ಆಳುವಷ್ಟು ಪ್ರಬಲವಾಯಿತು. ಅಂದು ಒಂದೊಂದು ಪ್ರದೇಶ ಒಬ್ಬೊಬ್ಬ ರಾಜರ ಆಧಿಪತ್ಯಕ್ಕೆ ಒಳಪಟ್ಟಿದ್ದವು. ಅಲ್ಲದೆ ತಮ್ಮ ತಮ್ಮಲ್ಲಿಯೇ ರಾಜರು ತಮ್ಮ ಪ್ರಾಬಲ್ಯವನ್ನು ಮೆರೆಯಲು ಮೇಲಿಂದಮೇಲೆ ಯುದ್ಧಗಳನ್ನು ಮಾಡುತ್ತಿದ್ದರು. ಇಂತಹ ಆಂತರಿಕ ಕಲಹದಲ್ಲಿ ನಿರತರಾದ ರಾಜರ ದೌರ್ಬಲ್ಯವನ್ನು ಬ್ರಿಟಿಷರು ಚೆನ್ನಾಗಿ ಬಲ್ಲವರಾಗಿದ್ದರು. ಒಂದು ಸಾಮ್ರಾಜ್ಯದ ವಿರುದ್ಧ ಮತ್ತೊಂದು ಸಾಮ್ರಾಜ್ಯದ ಅರಸರನ್ನು ಎತ್ತಿ ಕಟ್ಟುತ್ತಾ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತಿದ್ದರು.

ಪ್ರಾರಂಭದಲ್ಲಿ ಬಂಗಾಲದಲ್ಲಿ ನೆಲೆನಿಂತ ಈಸ್ಟ ಇಂಡಿಯಾ ಕಂಪನಿಯ ಹೇಸ್ಟಿಂಗ್ಸ್‌ನು ಬಂಗಾಲದ ಗವರ್ನರನಾಗಿದ್ದನು. ೧೭೭೩ರ ರೆಗ್ಯೂಲೇಟಿಂಗ್ ಆ್ಯಕ್ಟದ ಮುಖಾಂತರ ಇಡೀ ಭಾರತದ ಗವರ್ನರ್

ಜನರಲ್‌ನಾಗಿ ನೇಮಕಗೊಂಡನು. ಇದು ಅವರ ಪ್ರಾಬಲ್ಯವನ್ನು ತೋರಿಸುತ್ತದೆ. ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟುತ್ತಾ ಸೈನಿಕ ಸಹಾಯ ಮಾಡುತ್ತಾ ಆಳರಸರಿಂದ ಕಪ್ಪಕಾಣಿಕೆಯನ್ನು ಪಡೆಯುವಷ್ಟು ಬಲಿಷ್ಠರಾಗಿದ್ದರು.

ಬ್ರಿಟಿಷರ ದರ್ಪ, ಅನ್ಯಾಯ ಹೆಚ್ಚಿದಂತೆಲ್ಲ ಭಾರತೀಯರಲ್ಲಿ ಸ್ವಾಭಿಮಾನ, ದೇಶಾಭಿಮಾನ ಹೆಚ್ಚಾದವು. ೧೮೫೭ರಲ್ಲಿ ಸಿಪಾಯಿದಂಗೆ (ಪ್ರಥಮ ಸ್ವಾತಂತ್ರ್ಯ ಹೋರಾಟ) ಮುಖಾಂತರ ಇಡೀ ದೇಶವೇ ಕಂಪನಿ ಸರಕಾರದ ವಿರುದ್ಧ ಸಿಡಿದು ನಿಂತಿತು. ಇದೇ ವೇಳೆ ಬ್ರಿಟಿಷರನ್ನು ಕರ್ನಾಟಕದ ರಾಜಮನೆತನಗಳು ತಮ್ಮ ಶಕ್ತ್ಯಾನುಸಾರ ಪ್ರತಿಭಟಿಸಿದವು.

೧೮೨೪ರಲ್ಲಿ ಕಿತ್ತೂರ ರಾಣಿ ಚನ್ನಮ್ಮ ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸಿ ಸ್ವಾತಂತ್ರ್ಯದ ಕಹಳೆಯನ್ನು ಊದಿದ ವೀರ ವನಿತೆ. ಕಿತ್ತೂರನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ವಿಜಾಪುರ ಸುಲ್ತಾನರ ಆಧೀನದಲ್ಲಿದ್ದ ಕಿತ್ತೂರ ಸಂಸ್ಥಾನ ಒಂದು ದೇಸಗತಿ ಮನೆತನ. ವಿಜಾಪುರ ಸುಲ್ತಾನರು ದುರ್ಬಲಗೊಂಡನಂತರ ಮರಾಠಿಗರಿಗೆ ಸಾಮಂತರಾಗಿದ್ದರು. ಹೈದರ, ಟಿಪ್ಪು ಸುಲ್ತಾನರು ಮರಾಠಿಗಳ ಕಡು ವೈರಿಗಳಾಗಿದ್ದರು. ಟಿಪ್ಪು ಸುಲ್ತಾನ ಕಾಲದಲ್ಲಿದ್ದ ಕಿತ್ತೂರಿನ ಅರಸ ಮಲ್ಲಸರ್ಜ ಟಿಪ್ಪುವಿನ ಒತ್ತಡಕ್ಕೆ ಒಳಗಾಗಿ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಆದರೂ ತನ್ನ ನಿಷ್ಠೆಯನ್ನು ಮರಾಠಿ ಪೇಶ್ವೆಗಳಿಗೆ ತೋರಿಸಿ ಅವರಿಂದ 'ಪ್ರತಾಪರಾವ' ಎಂಬ ಬಿರುದನ್ನು ಪಡೆದನು.

ಕಿತ್ತೂರಿನ ಅರಸು ಮಲ್ಲಸರ್ಜನನು ಇಬ್ಬರು ಹೆಂಡಿರನ್ನು ಹೊಂದಿದವನಾಗಿದ್ದನು. ಹಿರಿಯ ಹೆಂಡತಿ ರುದ್ರಮ್ಮ ಕಿರಿಯ ಹೆಂಡತಿ ಚನ್ನಮ್ಮ. ಮಲ್ಲಸರ್ಜನನ ನಂತರ ರುದ್ರಮ್ಮನ ಹೊಟ್ಟೆಯಲ್ಲಿ ಹುಟ್ಟಿದ ಶಿವಲಿಂಗಸರ್ಜನನು ರಾಜ್ಯಭಾರ ಮಾಡಿದನು. ರೋಗಪೀಡಿತನಾದ ಶಿವಲಿಂಗಸರ್ಜನನು ಸಾಯುವದಕ್ಕಿಂತ ಮುಂಚೆಯೇ ಉತ್ತರಾಧಿಕಾರಿಯಾಗಿ ದತ್ತಕ ತೆಗೆದುಕೊಂಡು ಮರಣವನ್ನಪ್ಪಿದನು. 'ದತ್ತಕ ಮಕ್ಕಳಿಗೆ ಹಕ್ಕಿಲ್ಲ' ಎಂಬ ಬ್ರಿಟಿಷ ಕಾನೂನಿಗೆ ಇದು ವಿರುದ್ಧವಾಗಿತ್ತು. ದತ್ತಕ ವಿಷಯವನ್ನು ತಿಳಿದುಕೊಂಡ ಧಾರವಾಡದ ಕಲೆಕ್ಟರ್ ಥ್ಯಾಕರೆ ಕಿತ್ತೂರ ಸಂಸ್ಥಾನದ ರಾಜ ಭಂಡಾರಕ್ಕೆ ಬೀಗ ಮುದ್ರೆಯನ್ನು ಹಾಕಿ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿದನು. ಇದರಿಂದ ಕೋಪಗೊಂಡ ಚೆನ್ನಮ್ಮನ ಸೈನಿಕರು ಚನ್ನಮ್ಮನ ಸಲಹೆಯಂತೆ ಥ್ಯಾಕರೆಯನ್ನು ಕೊಲ್ಲುವರಲ್ಲದೆ ಅವರ ಅನೇಕ ಬ್ರಿಟಿಷ ಅಧಿಕಾರಿಗಳನ್ನು ಬಂಧಿಸಿಡುವರು.

ಥ್ಯಾಕರೆಯ ಮರಣವನ್ನು ಕಂಪನಿ ಸರಕಾರ ಪ್ರತಿಷ್ಠೆಯನ್ನಾಗಿ ತೆಗೆದುಕೊಂಡು ಹೇಗಾದರೂ ಮಾಡಿ ಕಿತ್ತೂರ ಸಂಸ್ಥಾನವನ್ನು ವಶಪಡಿಸಿಕೊಳ್ಳಬೇಕೆಂದು ಮುಂಬಯಿಯ ಕಮಿಷನರ್ ಚಾಪ್ಲಿನ್ ನಿರ್ಧರಿಸಿದನು. ಅಪಾರ ಸೈನ್ಯದೊಂದಿಗೆ ಕಿತ್ತೂರಿಗೆ ಬಂದ ಚಾಪ್ಲಿನ್ ಶರಣಾಗುವಂತೆ ಚನ್ನಮ್ಮನನ್ನು ಕೇಳಿದ, ಸ್ವಾಭಿಮಾನಿಯಾದ ಚೆನ್ನಮ್ಮ ಶರಣಾಗದೆ ಯುದ್ಧಕ್ಕೆ ನಿಲ್ಲುವಳು. ಬ್ರಿಟಿಷರ ಸುಸಜ್ಜಿತ ಸೈನ್ಯ ಒಂದೇ

ದಿನದಲ್ಲಿ ಕಿತ್ತೂರ ಸಂಸ್ಥಾನವನ್ನು ವಶಪಡಿಸಿಕೊಂಡಿತು. ಸೆರೆಸಿಕ್ಕ ಚೆನ್ನಮ್ಮನನ್ನು ಬೈಲಹೊಂಗಲದ ಕಾರಾಗೃಹದಲ್ಲಿ ಬಂಧಿಸಿಡಲಾಯಿತು.

ಕಿತ್ತೂರ ಚೆನ್ನಮ್ಮ ಹೊತ್ತಿಸಿದ ಸ್ವಾತಂತ್ರ್ಯದ ಕಿಡಿ ಇಲ್ಲಿಗೆ ನಿಲ್ಲಲಿಲ್ಲ. ಚೆನ್ನಮ್ಮನ ಸೈನ್ಯದಲ್ಲಿದ್ದ ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಡಿ ಬಂಧನಕ್ಕೊಳಗಾಗಿ ಗಲ್ಲಿಗೇರಿದನು. ಕಿತ್ತೂರಿನ ಜನರು ಅನೇಕ ಸಲ ದತ್ತಕ ಶಿವಲಿಂಗಪ್ಪನ ಹಕ್ಕನ್ನು ಎತ್ತಿಹಿಡಿಯಲು ಬಂಡೆದಿದ್ದನ್ನು ಕಾಣುತ್ತೇವೆ.

ಬ್ರಿಟಿಷರು ಸಹಾಯಕ ಸೈನ್ಯ ಪದ್ಧತಿ ಕಾಯಿದೆ, ದತ್ತು ಮಕ್ಕಳಿಗೆ ಹಕ್ಕಿಲ್ಲ, ತೆರಿಗೆ ನೀತಿ ಮುಂತಾದ ಕಾಯಿದೆಗಳ ಮೂಲಕ ದೇಶಿಯ ಸಂಸ್ಥಾನಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವ ಸಿದ್ಧತೆ ನಡೆಸಿದರು. ಇದರಿಂದ ಸಿಟ್ಟಿಗೆದ್ದ ಅನೇಕ ಸ್ಥಳೀಯರು ಬ್ರಿಟಿಷರ ವಿರುದ್ಧ ತಿರುಗಿನಿಂತರು. ದೇಶಾದ್ಯಂತ ನಡೆದ ಸಿಪಾಯಿ ದಂಗೆಗೆ ಪೂರ್ವಬಾಯಿಯಾಗಿ ಉತ್ತರ ಕರ್ನಾಟಕದಲ್ಲಿ ನಡೆದ ಕೊಪ್ಪಳದ ಬಂಡಾಯ, ಸುಳಿಹಳ್ಳಿ ಬಂಡಾಯ, ಕಿತ್ತೂರ ಬಂಡಾಯ, ವಿಜಾಪುರ ಜಿಲ್ಲೆಯ ಸಿಂದಗಿ ಬಂಡಾಯ ದೇಶದ ಇತಿಹಾಸದಲ್ಲಿ ಗಮನಾರ್ಹವಾಗಿವೆ.

ಸಿಂದಗಿ ಬಂಡಾಯ: ಬ್ರಿಟಿಷರ ಕಂದಾಯ ನೀತಿಯನ್ನು ವಿರೋಧಿಸುವುದಕ್ಕಾಗಿ ಚಿದಂಬರ ದೀಕ್ಷಿತರ ಮುಂದಾಳತ್ವದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯದ ಬಾವುಟವನ್ನು ಸಿಂದಗಿಯಲ್ಲಿ ಹಾರಿಸಲಾಯಿತು. ನಾವೀಗ ಸ್ವತಂತ್ರರು ಈಸ್ಟ ಇಂಡಿಯಾ ಕಂಪನಿಗೆ ಕಂದಾಯ ಕೊಡಬೇಕಾಗಿಲ್ಲ ಎಂಬ ಘೋಷಣೆಯ ಮೂಲಕ ಸಿಂದಗಿಯ ಜನ ಬಂಡಾಯದ ಅಲೆಯನ್ನು ಪ್ರಾರಂಭಿಸಿದ್ದರು. ಸಿಂದಗಿ ಸೇರಿದಂತೆ ಸುತ್ತಲಿನ ಗ್ರಾಮಗಳ ಕಂದಾಯವನ್ನು ಬಂಡಾಯಗಾರರೆ ವಸೂಲಿ ಮಾಡಹತ್ತಿದರು. ಇದರಿಂದ ಕೋಪಗೊಂಡ ಧಾರವಾಡದ ಕಲೆಕ್ಟರ್ ಸ್ಟೀವನ್-ಸನ್ ಬಂಡುಕೋರರ ಮುಂದಾಳುಗಳನ್ನು ಸಂಚಿನಿಂದ ಖಂಡಿಸಿ ಬಂಡುಕೋರರನ್ನು ಸೆರೆಮನೆಗೆ ತಳ್ಳಿದನು.

ಸಿಂದಗಿಯ ಈ ಬಂಡಾಯ ವಿಜಾಪುರ ಜಿಲ್ಲೆಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಿಂದಗಿಯ ಬಂಡಾಯ ಜಿಲ್ಲೆಯ ಬೇರೆ ಬೇರ ಕಡೆಗೆ ಬ್ರಿಟಿಷ ವಿರೋಧಿ ಅಲೆಯನ್ನು ಹುಟ್ಟುಹಾಕಿದ್ದು ಗಮನಾರ್ಹ.

ಹಲಗಲಿ ಬಂಡಾಯ: ಬ್ರಿಟಿಷ ಸರಕಾರದ ಶಸ್ತ್ರಾಸ್ತ್ರ ನಿಷೇಧ ಕಾನೂನಿನ ಬಿಸಿ ಹಲಗಲಿ ಬೇಡರನ್ನು ಕೆರಳಿಸಿತು. ಬ್ರಿಟಿಷ ಕಂಪನಿ ಸರಕಾರ ೧೮೫೭ರ ನವ್ಹೆಂಬರ ತಿಂಗಳದಲ್ಲಿ ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಕಂಪನಿ ಸರಕಾರಕ್ಕೆ ಒಪ್ಪಿಸಬೇಕೆಂದು ಒಂದು ಹುಕುಮನ್ನು ಹಲಗಲಿ ಬೇಡರಿಗೆ ರವಾನಿಸಿತು. ತಮ್ಮನ್ನು ಬ್ರಿಟಿಷ ಸರಕಾರ ನಿಶ್ಶಸ್ತ್ರೀಕರಣ ಮಾಡುತ್ತಾರೆಂದು ತಿಳಿದು ಜಡಗ-ಬಾಲಾರ ನೇತೃತ್ವದಲ್ಲಿ ೫೦೦ ಜನ ಬೇಡರ ಗುಂಪು ಕಂಪನಿ ಸರಕಾರದ ವಿರುದ್ಧ ತಿರುಗಿ ನಿಂತಿತು. ಇದರಿಂದ ಕೋಪಗೊಂಡ ಬ್ರಿಟಿಷ

ಸರಕಾರ ಹೆಚ್ಚಾಗಿ ಬೇಡರೆ ವಾಸಿಸುತ್ತಿದ್ದ ಹಲಗಲಿ ಗ್ರಾಮಕ್ಕೆ ಮೋಸದಿಂದ ಬೆಂಕಿ ಹಚ್ಚಿ ಇಡೀ ಗ್ರಾಮವನ್ನೇ ಬೆಂಕಿಗಾಹುತಿ ಮಾಡಿದರು. ಬಂಡಾಯದ ಮುಂದಾಳುಗಳಾದ ಜಡಗಾ-ಬಾಲಾರ ಜೊತೆ ೧೯ಜನ ಬೇಡರನ್ನು ಬಂಧಿಸಿ ಸಾರ್ವಜನಿಕರ ಎದುರು ಗಲ್ಲಿಗೇರಿಸಿ ತನ್ನ ಅಟ್ಟಹಾಸವನ್ನು ಕಂಪನಿ ಸರಕಾರ ಮೆರೆಯಿತು. ಇದು ಜನರು ಬ್ರಿಟಿಷ ಸರಕಾರದ ವಿರುದ್ಧ ನಿಲ್ಲಲು ಕಾರಣವಾಯಿತು.

ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರ ಚೆನ್ನಮ್ಮ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ರಾಮದುರ್ಗದ ಬಂಡಾಯ, ಸಿಂದಗಿಯ ಬಂಡಾಯ, ಹಲಗಲಿ ಬೇಡರಕದನ, ಕೌಜಲಗಿ ಶ್ರೀನಿವಾಸರಾಯರ ಸ್ವದೇಶಿ ಪ್ರೇಮ, ಕೌಜಲಗಿ ಹನುಮಂತರಾಯರ 'ಗಾಂಧಿ ಟೊಪ್ಪಿಗೆ' ಪ್ರಕರಣ ಮುಂತಾದ ರಾಷ್ಟ್ರೀಯ ಆಂದೋಲನದ ಪ್ರಭಾವಕ್ಕೆ ಒಳಗಾದ ಐತಿಹಾಸಿಕ ವ್ಯಕ್ತಿಗಳನ್ನು, ಘಟನೆಗಳನ್ನು ಜನಪದರು ಅಸಂಖ್ಯಾತ ಲಾವಣಿಗಳ ಮುಖಾಂತರ ಜನರ ಸಮೀಪ ತಂದರು. ಲಾವಣಿಗಳಲ್ಲಿ ಜನಜನಿತವಾದ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಅನೇಕ ನಾಟಕಕಾರರು ಐತಿಹಾಸಿಕ ನಾಟಕಗಳನ್ನು ಬರೆದು ಹವ್ಯಾಸಿ, ವೃತ್ತಿರಂಗಭೂಮಿ ಗಳಲ್ಲಿ ರಂಗಪ್ರಯೋಗಕ್ಕೆ ಒಳಪಡಿಸಿ ಜನಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದ ಫಲವಾಗಿ ಐತಿಹಾಸಿಕ ನಾಟಕಗಳು ರಂಗಭೂಮಿಗೆ ಬಂದವು.

ಸ್ವಾತಂತ್ರ್ಯ ಚಳುವಳಿಯ ಬಿಸಿ ಹಾಗೂ ಲಾವಣಿಕಾರರ ಪ್ರಭಾವಕ್ಕೆ ಒಳಗಾದ ವೃತ್ತಿರಂಗಭೂಮಿಯ ನಾಟಕಕಾರರು ಜನರ ಅಭಿರುಚಿಯನ್ನು ಅರ್ಥೈಸಿದರು. ಮೌಖಿಕ ಪರಂಪರೆಯಿಂದ ಹರಿದು ಬಂದ ಅನೇಕ ಲಾವಣಿಕಾರರು ಕಥಾ ನಾಯಕರನ್ನು ತಮ್ಮ ನಾಟಕಗಳಿಗೆ ಬಳಸಿಕೊಂಡು ವೃತ್ತಿರಂಗಭೂಮಿಯ ಕಡೆಗೆ ಜನರನ್ನು ಆಕರ್ಷಿಸಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೆಲವು ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ರಚಿಸಿದ ಲಾವಣಿಗಳನ್ನು ನೋಡಬಹುದು. ಬ್ರಿಟಿಷ ಸರಕಾರದ ಶಸ್ತ್ರಾಸ್ತ್ರ ನಿಷೇಧ ಕಾಯಿದೆ ವಿರುದ್ಧ ತಿರುಗಿಬಿದ್ದ ಹಲಗಲಿ ಬೇಡರನ್ನು ಕುರಿತ ಈ ಲಾವಣಿ ಮನಮಿಡಿಯುವಂತೆ ಮಾಡುತ್ತದೆ.

ಹೊತ್ತು ಬಂದಿತು ಮತ್ತ ನೋಡಿರಿ ಕತ್ತಿ ಹಿಡಿಯುವ ಜನಕ ।
ಸಿಟ್ಟಿನ ಮಂದಿ ಹಲಗಲಿ ಬಂಟರು ಮುಟ್ಟಲಿಲ್ಲೊ ದಡಕ ॥ಪ॥
ವಿಲಾಯಿತಿಯಿಂದ ಹುಕುಮು ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ ॥
ಕತ್ತಿ, ಕಟಾರಿ, ಕೈಚೂರಿ, ಚಾಕು ಗುರ್ಡಿ, ಸುರಗಿ ಚಕ್ರಾ
ಪಟಾಕ ಪಿಸ್ತೂಲ ಕರಲಿ ತೋಕೆ, ಚೂಪಕೊಡ್ಲಿ, ಶಸ್ತ್ರಾ ॥
ಭಾಲಬರ್ಚಿ ಬಿಚ್ಚಗತ್ತಿ ನೋಡೊ ಬಿಲ್ಲಬಾಣಾ
ತೋಪ ತುಬಾಕಿ ಮುದ್ದು ಗುಂಡ ಬಿಡಬ್ಯಾಡೊ ಜಾಣ ॥

ಮುಚ್ಚಿದವರಿಗೆ ಮೂರುವರುಷ ಬೇಡಿ ಹಾಕಿನೊ ಪೂರಾ
ಕೊಡದೆ ದಿಟಾಯ ಮಾಡಿದವರಿಗೆ ಕಡಿದು ಹಾಕಿರೊ ಠಾರಾ ॥
ಬೇಡಿದ ಚಣಕ ತಾವೇ ಕೊಟ್ಟರ ಹಿಡಿರಿ ಅಂದು
ಹಲಿಗರ ಹಳ್ಳಿ ಮುಧೋಳ ಹತ್ತಿರ ಪರಿಯಿತೂ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ, ಜಡಗರಾಮ ಮಸಲತ್ತ
ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವದು ಗೊತ್ತ
ಸುತ್ತಹಳ್ಳಿ ಮತ್ತದೊರೆಗಳ್ಗೆ ತಿಳಿಸರಿ ಹೀಂಗ ಅಂತ
ಕತ್ತಿಕಟಾರಿ ಕೊಡಬಾರದೆಂದು ನಮ್ಮ ಮಸಲತ್ತ ಈಗಂತ
ಕಾರಕೂನನ ಕಪಾಳಕ ಬಡಿದ ಸಿಪಾಯಿ ನೆಲಕಬಿತ್ತ
ಆಗಿಂದಾಗ ದುಃಖದ ಸುದ್ದಿ ಸಾಹೇಬ ಗೊತ್ತಾಯಿತ್ತು
ಕೇಳಿ ಸಾಯೆಭ ಸಿಟ್ಟಲಿ ತಿರುಗಿದ, ಸೇರಿದನಾದ ಕಲಾದಗಿ
ಕರಸಿ ಕುಂದರಿ ಕೃಷ್ಣನಾಯಕ್ನ ಬಗೆಹರಿಸುವದಕಾಗಿ
ಹಟ ಮಾಡಬಾರದು ಹತಾರ ಕೊಡ್ರಿ ಸಾಯೇಬನ ತಾಬಾಕ
ಹತಾರ ಕೊಡಲಾಕ ಹೆಂಗಸಾಗಿ ಬಳಿ ಇಟ್ಟಲ್ಲೊ ಕೈಯಾಗ
ಕುದುರಿ ಮಂದಿ ಕೂಡಿ ಮುಟ್ಟಿತೂ ಹಲಗಲಿ ತಳದ ಮ್ಯಾಗ
ಕತ್ತಿ ಕುದುರಿ ಮುತ್ತು ಮಾಣಿಕ ಯಾವುದು ಬದಲಿಲ್ಲಾ
ಸರಗಿಸರ ದಾಳಿ ಬುಗುಡಿ ಚಾವುಲಿ ಒಂದೊಂದುಳಿಯಲಿಲ್ಲಾ
ಬೆಳ್ಳಿ ಬಂಗಾರ ಹರಳಿನಂಗುರ ಹೊನ್ನುಂಗುರ ಗೋಲಾ
ಕಡಗ ಕಂಕಣ ನಡುವಿನ ಡಾಬಾ ನಡಕಟ್ಟು ರುಮಾಲಾ
ಕುಬಸ ಸೀರೆ ಹಪ್ಪಳ ಸೆಂಡಿಗೆ ಕುರುಚಿಗಿ ಕುಡಗೋಲಾ
ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು, ಎಣ್ಣೆ ಅರಿಸಿಣ ಜೀರಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳ ಚರಿಗಿ ಮಂಗಳಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೊಯಿತು ಅತ್ತ ವರ್ಣಿಸಿ ಹೇಳಲಿ ನಾನೇಷ್ಟು
ಸಿಕ್ಕದ್ದು ತಗೊಂಡು ಸರದ ನಿಂತರೂ ಊರಿಗೆ ಕೊಳ್ಳಿಕೊಟ್ಟಾ
ಬೂದಿ ಮಾಡ್ಯಾರ, ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು

ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು

ಕುರ್ತುಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ

(ಕನ್ನಡ ಜನಪದ ಗೀತೆಗಳು- ಡಾ. ಗದ್ದಗಿಮಠ, ಕ.ವಿ.ವಿ ಪ್ರಕಾಶನ, ಪುಟ ೮೨, ೮೮, ೮೯)

ಸಂಗೊಳ್ಳಿ ರಾಯಣ್ಣನನ್ನು ಕುರಿತು ಒಂದು ಲಾವಣಿ ಈ ರೀತಿಯಿದೆ:

ಪುಂಡ ಕಿತ್ತೂರ ನಾಡಿನೊಳಗೆ
ಭಂಡಾಯ ಮಾಡಿದರಾಯಾ
ಪಂಡಿತರೆಲ್ಲಾ ಇಟ್ಟ ಕೇಳಿರಿ ಚಿತ್ತಾ
ಅಂವ ಜಾತಿಲೆ ಕುರುಬ ಭೀರುನ ಭಕ್ತಾ
ಹಳಬ ಸರಕಾರದ ಚಾಕರಿ ಮಾಡುತ್ತಿದ್ದ ಸಿಸ್ತಾ
ಕುಲಕರ್ಣಿ ದಶಿಯಿಂದ ಪೈಲೆ ಕದನ ಹುಟ್ಟಿ ಊರಬಿಟ್ಟ
ಸುತ್ತೆಲ್ಲ ಹಾವಳಿ ಮಾಡಿದೊ ವಿಪರೀತಾ
ಬಂಟ ಇದ್ದರ ಇರಬೇಕೋ ಪುಂಡರಾಯ ಪ್ರಖ್ಯಾತ
ಮುಂದಿನ ಕೆಡಗಾಲಕ್ಕಿನ್ನ ಅಂದಾನೋ ಬ್ರಾಹ್ಮಣ್ಣ
ಬಂದ ಉಟ್ಟಿರುವ ಗತಾರಾಕೋ ರಾಯ ನೀನಾ
ಹಳಬಾರದ ಮೇಲೆ ಹೇಳಿದ ಮಾತ ಮೀರುವರೆಕೇನಾ
ತುಸು ಅಲಕ್ಷ ಮಾಡದೆ ಪಾಲಿಸನ್ನ ವಚನಾ
ಸಿಟ್ಟಿಗೆದ್ದ ಅಂತಾನ ರಾಯಾ ಉಟ್ಟಿರುವ ಧೋತ್ರಾ
ಒಗತರಲಾಕು ಬಿಟ್ಟ ಆಳುಗಳ ಕೆಲಸ ಮಾಡುವೆಲ್ಲರ ನಾನಾ
ಎಂಥ ಕೆಟ್ಟ ಮಾತಾಡಿದೆಪ್ಪ ಬಾಳಣ್ಣ ನೀನಾ
ಕಡಿಯಂದ್ರ ನೂರ ಮಂದಿನ ಕಡಿಯಾವ
ಹೊಡಿಯಂದ್ರ ನೂರ ಮಂದಿನ ಹೊಡೆಯಾವ
ಇಂಥ ಡೊಮ್ಮಾನ ಕೆಲಸ ಮಾಡಲಾಕ ನಾಚಿಕಲ್ಲೇನ
ದೊಡ್ಡ ದೊಡ್ಡ ಮೇಲ್‌ಮಾಳಗಿ
ಅಂತ್ರಾಚಿಲೆ ಜಿಗಿದ ಹೊಗುವಂಥ ನಾನಾ
ಮನಸಿನೊಳ ಇಟ್ಟ ಬ್ರಾಹ್ಮಣ ಮೈಲಗಿ ಧೋತ್ರಾ
ಮನಿಗಿ ತಂದು ಸಿಕ್ಕರೆ ಸಿಗಲಿ ನನ್ನ ಕೈಯೊಳಗೊಂದಿನಾ
ಬಗ್ಗಿಸಿ ಡುಬ್ಬದ ಮೇಲೆ ಕಲ್ಲುಹೇರಿ ಕಳಿಯುವೆನು ಮಾನಾ

ನಾಲ್ಕು ಮಂದಿ ಹಳಬರಿಗೆ ಕೈಮುಗದ ಹೇಳತಾನಾ ರಾಯಾ
ಮಾಡಬ್ಯಾಡ್ರಿ ನಮ್ಮಣ್ಣ ಅಬರಗೇಡಿ
ಮುನಿಯಾಗ ಅದಾವ ಚಲೋ ಹೋರಿ ಜೋಡಾ
ನಾಳೆ ಕಿತ್ತೂರ ಸಂತಿಗೆ ಹೋಗಿ ಆತುರದಿಂದಲೆ
ಮಾರಿ ತರತೀವೆಪ್ಪ ಅಣ್ಣ ತೊಡಬೇಡ
ಇನ್ನ ಬಾಳ ಮಾತಾಡಿದರ ಅಲ್ಲ ಪಾಡಾ
ಕಣ್ಣೀರ ಉದರುಸುತೆ ರಾಯಾ ಎರಡೂ ಹೋರಿ ಕನ್ನಿಬಿಟ್ಟ
ಕೈಯಲ್ಲಿರುವ ಕತ್ತಿ ಕಟ್ಟಿದ ನಡಾ
ನೋಡಿ ತಾಯಿ ಅಂತಾಳ ಮಗನೆ ಹೋಗಬೇಡಾ
ಕೂಡ ಸುಮ್ಮನಿರು ಹಡದವ್ವಾ ನೀನಾ
ಹೆಮ್ಮೆ ಬಹಳ ಕುಲಕರಣೆದು ಪಾಳೆದ
ರೂಪಾಯಿ ಹೋರಿ ಮಾಡಿಕೊಡುವೆನ ತುರ್ತಾ
ಹಿಂದುಗಡೆ ಅವನ ಬನವಿಗೆ ಬೆಂಕಿ ಹಚ್ಚುದು ತುರ್ತಾ
ಇಷ್ಟು ಹೇಳಿ ಸಂತಿಗಿ ಹೊಡಕೊಂಡು ಹೋದ
ಸಮರ್ಥ ಮಂಟ ಕಿತ್ತೂರ ನಾಡಿನೊಳಗ
ಹೆಬ್ಬುಲಿ ಹಿಡಿದ ಒಯ್ಯುವಾಗ ಹಬ್ಬಿಸಿ ನೋಡುವ ಮಂದಿ ಭಾಳಾ
ಸಾಬಸುಬೇದಾರ ಪಾರಾ ಅವರ ಮ್ಯಾಲಾ
ಸಖಿದಂಡ ಎಲ್ಲಾ ನಿಂತಾರ ಅವನ ಸುತ್ತ ಮುತ್ತಲೆ
ಮೈ ಉಬ್ಬಿಸ್ಥಾನ ಕಟ್ಟಿರುವ ಹಗ್ಗಾ ಕಿತ್ತವ ಮಿಗಿಲಾ
ಹನ್ನೆರಡಾಳ ಉದ್ದಗೋಡಿ ಓಡಿಬಂದ
ಜಿಗದಹೋದಾ ಹದಿನೆಂಟು ಮಂದಿ ಪಾರಾ
ಸಿಪಾಯರು ಅವನ ಮಲ್ಲ ಮುತ್ತ ಮುತ್ತಗಿ
ಹಾಕಿ ಹೊಡಿದಾರ ಅವನ ಒತ್ತರದಿಂದಲಿ
ಇಂಥಾ ಒಬ್ಬ ಬಹದ್ದೂರ ಇರಲಿ ನಮ್ಮ ದಂಡಿನಲಿ
ತಿರುಗಿ ಉತ್ರಾ ಕಳುಹಿದಾರ ಹುಕಮು ಏನೂ ಮಾಡಬಾರದು
ಜೋಕುಮು ಇಲ್ಲದೆ ತಕ್ಕೊಂಡು ಬರ್ರಿ
ಜೋರ ಹುಕುಂ ನಡಿಸ್ಯಾರ ದೂರತನಕ ಜಾಹೀರ ಹೋತು

ನೋಡಲಾಕ ಕೂಡಿಸ್ಯಾರ ಜನಾ

ಗಲ್ಲಿಗೇರಸತಾರ ಸೋಮವಾರ ದಿನಾ

ಮುಸುಕಿಲೆ ಹಗ್ಗಾ ಹಿಡಿದಾ ವೀರರಾಯಾ

(ಲಾವಣಿ ಸಾಹಿತ್ಯದಲ್ಲಿ ಸಂಗೊಳ್ಳಿ ರಾಯಣ್ಣಾ ಶ್ರೀ ನಿಂಗಣ್ಣ ಸಣ್ಣಕ್ಕಿ ಪುಟ ೧೭, ೧೮, ೧೯)

ಇಲ್ಲಿ ಸಂಗೊಳ್ಳಿ ರಾಯಣ್ಣನ ಸ್ವಾಭಿಮಾನ, ದೇಶ ಪ್ರೇಮವನ್ನು ಕಾಣುತ್ತೇವೆ. ಕಂಪನಿ ಸರಕಾರವನ್ನು ಎದುರು ಹಾಕಿಕೊಂಡು ವೀರಮರಣವನ್ನು ಹೊಂದಿದ ಸಿಂಧೂರ ಲಕ್ಷ್ಮಣನನ್ನು ಕುರಿತು ಬರೆದ ಲಾವಣಿ ಎಂತಹವನನ್ನೂ ನವಿರೇಳಿಸುವಂತೆ ಮಾಡುತ್ತದೆ.

ಪರಗಾಣಿ ಜತ್ತೀ ಉಮರಾಣಿ ದೇಶಕ ವಾಯಿಣಿ

ಆಳುವಂತ ಧಣಿ ಡಪ್ಪಳೆ ಸರಕಾರ ||ಪ||

ಜತ್ತ ಸಂಸ್ಥಾನ ಪೈಕಿ ಸಣ್ಣ ಹಳ್ಳಿ ಸಿಂಧೂರ

ಸಿಂಧೂರಾಗ ಲಕ್ಷ್ಮಣ ಹುಟ್ಯಾನ । ಬಂಟ ಅನಿಸ್ಯಾನ ಕೊಟ್ಟ ವಚನ

ಹುಟ್ಟಿ ತಪ್ಪಲಿಲ್ಲ ಹುಟ್ಟಿ ತಪ್ಪಲಿಲ್ಲ

ಘಟ ಹೋಗುವ ತನಕ ಹಿಡಿದಾ ಹಟ ಬಿಡಲಿಲ್ಲಾ

ಪಾಂಡವರೊಳಗ ಇದ್ದಂಗ ಭೀಮ

ಚಲುವ ಚಂದ್ರಾಮ ಥೇಟ ಹೋಳಿಕಾಮ ರೂಪದಲಿ ಡೌಲ

ಒಬ್ಬಳ ಅಯ್ಯನ ಕಲಾಗ ಕದನ ಬಿತ್ತಾ

ಮಾಡಿದನು ಶರತಾ ಅತ್ತೊ? ವಿಪರೀತಾ

ಒಂದಿನಾ ಲಕ್ಷ್ಮಣಾ ತಳ್ಳಿ ಮಾಡಿದಾ ಅಯ್ಯನ ಮ್ಯಾಲ

ಊರ ಇದ್ದಲ್ಲಿ ಹೊಲಗೇರಿ ಉಂಟಾ

ಬರದಾರಪುಟಾ । ಬಂದ ಇನ್ಸಿಪೇಟಾ

ಆದ ಬೆಂಕಿಲಾಲ । ಕರಕರ ಹಲ್ಲ ತಿಂತಾರ ಲಕ್ಷ್ಮಣನ ಮ್ಯಾಲ

ಸರಕಾರದ ಕಡಿಂದ ವಾರಂಟ್ । ತರಸಿ ಇನ್ಸಿಪೆಟಾ

ಹಿಡಿಲಿಕ ಹೊಂಟಾರ । ಸಿಪಾಯಿ ಹಿಂಬಾಲ

ಕತ್ತಿ ಬಂದೂಕ । ಜೋಡ ಬಾರಿನ ಪಿಸ್ತೂಲ

ಇನ್ಸಿಪೆಟಾ ಸಿಂಧೂರಿಗೆ । ಕರೆಕಳಿಸಿ ಲಕ್ಷ್ಮಣ ಹಿಡಿದಾ

ಬೇಡಿ ಹಾಕಲಿಕ್ಕೆ ಹೋಗ್ಯಾನ ಎದ್ದು । ಲಕ್ಷ್ಮಣ ಹೇಳತಾನ ಸರ್ದಾ

ಇನ್ಸಿಪೇಟಾ ಲಕ್ಷ್ಮಣಕಿಂತ ಹಿಂದಾ । ಅವುಸರ ಮಾಡಿಹ್ಯಾದಾ

ಭರ್ಚಲೇ ಬಗೆದಾ ಅವನ ತೊಡಿಯಾಗ

ರಾಮ ರಾಮ ಅಂತ ಲಕ್ಷ್ಮಣ ಬಿದ್ದಾ। ಭೂಮಿಮ್ಯಾಗ

ಒಯ್ದು ಹಾಕ್ಯಾರ ದವಾಖಾನ್ಯಾಗ

ಅಲ್ಲಿ ಡಾಕ್ಟರು ಎಂಟು ದಿನದಾಗ। ತಯ್ಯಾರ ಮಾಡ್ಯಾರ

ಒಯ್ದಿಟ್ಟು ಖಟ್ಲೆ ನಡೆಸ್ಯಾರ। ತುರಂಗದೊಳಗೆ

ಸಾಬ್ಯಾ ಗೋಪಾಲ್ಯಾ ನರಸ್ಯಾ। ಮೂವರು

ಕೂಡಿ ಮಾತಾಡ್ಯಾರ ತಮ್ಮ ಮನಿಯೊಳಗ

ನಾಳೆ ಜೇಲ ಮುರಿದು ತರಬೇಕ ಅಂದ್ರ ಮಾವಗ

ಮರುದಿವಸ ಜತ್ತಿಗೆ ಹೋಗ್ಯಾರ

ತುರಂಗ ಮುರಿದಾರ। ಸಾರಿ ಹೊಂಟಾರ ನಡುವಿ ಪ್ಯಾಟ್ಯಾಗ

ಯಾವ ಗಂಡ್ಸ ಮಗ ಇದ್ದರ ಹಿಡಿಬೇಕು ನಮಗ

ಲಕ್ಷ್ಮಣನ ಹಿಡಿದರ ವತನಲ್ಲಾ। ಕಾಲಸುತ್ತ ಮಾಡೋದು ಬಿಡುದುಲ್ಲಾ

ಮನಸ್ಸಿನಲ್ಲಿ ತೆಗೆದನು ಅಕಲಾ। ತೆಗ್ಗಿನ ನಾಯಕಗೆ ಹಾಕ್ಯಾರ ಜೇಲು

ಸೇಂದಿ, ಶರೆ ಆಮಲ ಕುರಿಕೋಳಿ। ದಿನಾ ತಿನ್ನಿಸುವರು ಲಕ್ಷ್ಮನಾಗ

ಗುಡ್ಡದಾಗ ದೇವರ ಮಾಡ್ಯಾಕೆ। ಕುರಿಯ ಕುಯ್ಯಾರ

ತಗೊಂಡು ವಾಲಿಕಾರ। ನಾಯಕ ಬಂದಾನು

ಊಟ ಹುಡಿಗಿ ಊಣಿಸಿ। ಎಲ್ಲಾ ಮಂದಿ ಕಳುವ್ಯಾನು

ನಾಯಕ ಅಲ್ಲೊಬ್ಬ ಉಳಿದ। ಲಾಚೀನ ತಗದ ಲಕ್ಷ್ಮಣನ ಕರೆದು

ಕೈಯಾಗ ಕೊಟ್ಟಾನು। ಮೊದಲ ಸೂಚನೆ ಇತ್ತು

ವಾಲಿಕಾರ ಸೊಮಣ್ಣ ಹೊಡೆದಾನು ಪರೆಯಾಗ ಗುಂಡಾ ಬಡಿತಲ್ಲಾ

ಆತು ಒಳ್ಳೇ ಕೇಡಾ। ನಾಯಕ ಓಡಿಹೋದಾ ಲಕ್ಷ್ಮಣ ಬಿದ್ದಾನು

ಮೋಸ ಮಾಡಿ ಹೊಡದಂಗಾಯ್ತು। ಅಭಿಮನ್ಯುವಿಗೆ ಕೌರವನು

ಪೋಲಿಸರು ಬಂದರು ಮರುದಿನಾ। ಒಯ್ದಾರಾ ಹೆಣಾ

ಬೀಳಗಿ ತಂದ ಮಣ್ಣ ಮಾಡಿದರು

ಮುಳ್ಳು ಕಡಿದು ಹೋತಂತ। ಸಾಯೇಬ ಹಾಲ ಕುಡಿದಾನ

(ಧಾರವಾಡ ಜಿಲ್ಲೆಯ ಲಾವಣಿಗಳು: (ಸಂ) ಪಿ.ಎಸ್. ರಾಜಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ., ಪುಟ ೧೬, ೧೭, ೨೧, ೨೨, ೨೪)

ಇವೆಲ್ಲಾ ಲಾವಣಿಗಳು ಬಂಡಾಯ ಏಳುವ ಮನೋಭಾವವನ್ನು ಈ ಭಾಗದಲ್ಲಿ ಬೆಳೆಸಿದವು.

ಸ್ವಾತಂತ್ರ್ಯ ಚಳುವಳಿಯ ಗಾಳಿ ಬಾಗಲಕೋಟೆಯ ಪರಿಸರದಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಬೆಳೆಸಿತು. ೧೯೦೫ರಲ್ಲಿ ಬಾಗಲಕೋಟೆಯ ಜಯರಾವ ನರಗುಂದ ವಕೀಲರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರ ಮನೆ ರಾಷ್ಟ್ರೀಯ ಚಳುವಳಿ ಕೇಂದ್ರವಾಗಿತ್ತು.

ಸ್ವದೇಶಿ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಬಾಗಲಕೋಟೆಯಲ್ಲಿ ಸ್ವದೇಶಿ ಅಂಗಡಿಗಳು ಪ್ರಾರಂಭವಾದವು. ದೇಶಿಯ ಶಿಕ್ಷಣವನ್ನು ನೀಡುವ ರಾಷ್ಟ್ರೀಯ ಶಾಲೆಗಳು ಬಾಗಲಕೋಟೆ, ವಿಜಾಪುರ ಬದಾಮಿಗಳಲ್ಲಿ ಪ್ರಾರಂಭವಾದವು. ಬಾಗಲಕೋಟೆಯಲ್ಲಿ ಜಯರಾವ ನರಗುಂದ ಹಾಗೂ ಶ್ರೀನಿವಾಸರಾವ ಕೌಜಲಗಿಯವರಿಂದ ಪ್ರಾರಂಭವಾದ 'ಕೃಷ್ಣಪಾಠಶಾಲೆ' ಕರ್ನಾಟಕದ ಮೊಟ್ಟ ಮೊದಲ ರಾಷ್ಟ್ರೀಯ ಶಿಕ್ಷಣವನ್ನು ಬೋಧಿಸುವ ಶಾಲೆಯಾಗಿತ್ತು. ಒಂದು ಸಲ ಅಸಹಕಾರ ಚಳುವಳಿಯ ಬಗ್ಗೆ ನೆರೆದಿದ್ದ ಸಭಿಕರನ್ನುದ್ದೇಶಿಸಿ ಶ್ರೀನಿವಾಸರಾವ ಕೌಜಲಗಿಯವರು ವಿಜಾಪುರದಲ್ಲಿ ಭಾಷಣ ಮಾಡಿದ್ದರು. ಅಸಹಕಾರ ಚಳುವಳಿಯ ಪ್ರಚಾರಕ್ಕಾಗಿ ವಾರದಲ್ಲಿ ಎರಡು ಸಲ ಬೆಳಗಾವಿಗೆ ಹೋಗಿ ಭಾಷಣ ಮಾಡಿ ಬರುತ್ತಿದ್ದರು.

ಕೌಜಲಗಿ ಹನುಮಂತರಾಯರು ಸ್ವದೇಶಿ ಆಂದೋಲನದಲ್ಲಿ ಗುರುತಿಸಿಕೊಂಡ ಇವರು ಜನರಲ್ಲಿ ಸ್ವದೇಶಿ ಭಾವನೆಯನ್ನು ಜಾಗೃತಿ ಮಾಡುವುದಕ್ಕಾಗಿ ಬಾಲಕೋಟೆಯ ಪರಿಸರದ ಅಮೀನಗಡ, ಹುನಗುಂದ, ಕಮತಗಿ, ಗುಡೂರ, ಇಳಕಲ್, ಬದಾಮಿ, ಕಲಾದಗಿ, ಕೆರೂರ, ಬೀಳಗಿ, ಮುಧೋಳ ಮುಂತಾದ ಊರುಗಳಿಗೆ ಹೋಗಿ ಸ್ವದೇಶಿ ವಿಷಯವನ್ನು ಕುರಿತು ಭಾಷಣ ಮಾಡಿ ಬರುತ್ತಿದ್ದರು. ಇವರ ಸಂಪರ್ಕಕ್ಕೆ ಬಂದ ಕಾಕಾ ಕಾರಕಾನೀಸರು ಸ್ವದೇಶಿ ಖಾದಿ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಬಿಸನಾಳದಲ್ಲಿ ಉಪ್ಪು ತಯಾರಿಸಿದ್ದು ಮಹಾದೇವಪ್ಪ ಹಟ್ಟಿ, ಸತ್ಯಕಾಮ, ಹಬ್ಬು ಮುಂತಾದವರು ಗಲಗಲಿ ಭಾಗವನ್ನು ಕೇದ್ರವನ್ನಾಗಿ ಮಾಡಿಕೊಂಡು ಸ್ವದೇಶಿ ಚಳುವಳಿಯಲ್ಲಿ ಧುಮಿಕಿದರು. ಇದೇ ಸಂದರ್ಭದಲ್ಲಿ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಿಂದ ಪ್ರೇರಣೆಗೊಂಡು ವಿಜಾಪುರ, ಜಮಖಂಡಿ, ಮುಧೋಳ, ಬಾಗಲಕೋಟೆ ಭಾಗಗಳಿಂದ ಬಂದ ಸ್ವಾತಂತ್ರ್ಯ ಯೋಧರು ಬೀಳಗಿ ತಾಲೂಕಿನ ಬಿಸನಾಳ ಹಳ್ಳದಲ್ಲಿ ಉಪ್ಪನ್ನು ತಯಾರಿಸಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಸುಮಾರು ೧೯೩೦ರಿಂದ ೧೯೪೭ರವರೆಗೆ ಹೋರಾಡಿದ ಕೌಜಲಗಿ ಹನುಮಂತರಾಯರು, ಕೌಜಲಗಿ ಶ್ರೀನಿವಾಸರಾಯರು, ತಿಮ್ಮಸಾನಿ ಬಸಪ್ಪ, ತಿಮ್ಮಸಾನಿ ಸೀತಾಬಾಯಿ, ಮಹಾದೇವಪ್ಪ ಹಟ್ಟಿ, ಸತ್ಯಕಾಮ ಮುಂತಾದ ಸ್ವಾತಂತ್ರ್ಯ ಯೋಧರ ಪಡೆ ಈ ಭಾಗದಲ್ಲಿ ಪ್ರಸಿದ್ಧವಾದುದು. ಇವರೆಲ್ಲ ಅಹೋರಾತ್ರಿ ಅನ್ನ-ನೀರಿನ ಪರಿವೆ ಇಲ್ಲದೆ ದೇಶಕ್ಕಾಗಿ ದುಡಿದದ್ದು, ಈ ಭಾಗದ ಅನೇಕ ಕಲಾವಿದರನ್ನು ಖಂಡಿತವಾಗಿಯೂ ತಟ್ಟಿದೆ. ಇಂಥವರಿಂದ ಪ್ರೇರಣೆ ಪಡೆದು ಕಲಾ ಸೃಷ್ಟಿಮಾಡಿದವರಲ್ಲಿ ನಾಟಕಕಾರರು ಇದ್ದರೆಂಬುದನ್ನು ಅಲ್ಲಗಳೆಯುವಂತಿಲ್ಲ.

ಕಂದಗಲ್ ಹನುಮಂತರಾಯರು ಪ್ರಾರಂಭದಲ್ಲಿ ಪೌರಾಣಿಕ ನಾಟಕಗಳನ್ನು ಬರೆದರು. ಬದಲಾದ ಕಾಲದ ಮನೋಧರ್ಮಕ್ಕೆ ತಕ್ಕಂತೆ ಐತಿಹಾಸಿಕ ನಾಟಕಗಳನ್ನೂ ಬರೆದರು. ವರಪ್ರದಾನ ನಾಟಕದ ಕಥಾವಸ್ತು. ವಿಜಯನಗರ ಸಾಮ್ರಾಜ್ಯದ ಪ್ರಾರಂಭದಿಂದ ಹಕ್ಕರು ಅಧಿಕಾರವನ್ನು ವಹಿಸಿಕೊಳ್ಳುವವರೆಗೆ ಇರುವುದನ್ನು ಕಾಣುತ್ತೇವೆ. ಕಿತ್ತೂರ ಚೆನ್ನಮ್ಮ ನಾಟಕ ಈಗಾಗಲೇ ಇತಿಹಾಸ ಹಾಗೂ ಲಾವಣಿಗಳಲ್ಲಿ ಜನಜನಿತವಾದ ಘಟನೆಗಳನ್ನು ತೆಗೆದುಕೊಂಡು ರಚಿತವಾಗಿರುವದನ್ನು ಕಾಣುತ್ತೇವೆ. ಈ ಕಿತ್ತೂರ ಚೆನ್ನಮ್ಮ ನಾಟಕವನ್ನು ಕಂದಗಲ್ ಹನುಮಂತರಾಯರು, ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ ಸುಳ್ಳದ ದೇಸಾಯಿವರ ಕಂಪನಿ ಪ್ರದರ್ಶನಕ್ಕೆ ಬರೆದು ಕೊಟ್ಟದ್ದಾಗಿದೆ. ಸ್ವಾತಂತ್ರ್ಯ ಸಿಕ್ಕ ನಂತರ ಕಾಂಗ್ರೆಸ್ ಸರಕಾರ ದೇಶದಲ್ಲಿದ್ದ ಸಣ್ಣ ದೊಡ್ಡ ಸಂಸ್ಥಾನಗಳನ್ನು ಭಾರತದ ಒಕ್ಕೂಟದಲ್ಲಿ ಸೇರಿಸಿಕೊಳ್ಳಲು ನಿರ್ಧರಿಸಿತು. ಸಂಸ್ಥಾನಗಳು ಭಾರತದ ಒಕ್ಕೂಟದಲ್ಲಿ ವಿಲೀನೀಕರಣದ ಸಂದರ್ಭದಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಬರೆದ ಕಥೆಯನ್ನು 'ಅಗಸ್ಟ್ ೧೫ರ ನಂತರ' ನಾಟಕ ಒಳಗೊಂಡಿದೆ.

ಧುತ್ತರಗಿಯವರ 'ಸಿಂಧೂರ ಲಕ್ಷ್ಮಣ' ನಾಟಕ ಇತಿಹಾಸದ ಪುಟಗಳನ್ನು ಮತ್ತೊಮ್ಮೆ ನೆನಪಿಸುವಂತೆ ನೋಡುಗರ ಮೇಲೆ ಪರಿಣಾಮವನ್ನು ಬೀರುತ್ತದೆ. ಹಾಗೆಯೇ ಜನರನ್ನು ರಂಜಿಸಿ ದೇಶಾಭಿಮಾನವನ್ನು ಹುಟ್ಟಿಸುವಂತೆ ಪ್ರೇರೇಪಿಸುತ್ತದೆ. ಕಿತ್ತೂರ ಚೆನ್ನಮ್ಮನ ಇತಿಹಾಸ, ಶಿವಲಿಂಗ ಶಾಸ್ತ್ರಿಗಳು ಹಾಗೂ ಕಂದಗಲ್ ಹನುಮಂತರಾಯರು ಬರೆದ ಕಥಾವಸ್ತುವನ್ನಿಟ್ಟುಕೊಂಡು 'ಕಿತ್ತೂರ ಚೆನ್ನಮ್ಮ'ನೆಂಬ ಐತಿಹಾಸಿಕ ನಾಟಕವನ್ನು ಧುತ್ತರಗಿಯವರು ಬರೆದರಾದರೂ ಬೇರೆಯದಾದ ಆಶಯ ಇಲ್ಲಿ ಒಡೆದು ತೋರುತ್ತದೆ. ಇಲ್ಲಿ ಚೆನ್ನಮ್ಮ ಒಬ್ಬ ವೀರಮಾತೆಯಾಗಿದ್ದಂತೆ ಒಬ್ಬ ಕರುಣಾಮಯಿ ತಾಯಿಯಾಗಿದ್ದನ್ನು ಎತ್ತಿ ತೋರಿಸಿದ್ದಾರೆ.

ಮಾರುತೇಶ ಮಾಂಡ್ರೆಯವರು ಸಾಮಾಜಿಕ ನಾಟಕಗಳ ಜೊತೆಗೆ ಐತಿಹಾಸಿಕ ನಾಟಕಗಳನ್ನು ಬರೆದು ಇತಿಹಾಸವನ್ನು ನೆನಪಿಸುವಂತೆ ಮಾಡಿದ್ದಾರೆ. ನರಗುಂದದ ಬಂಡಾಯ, ವೀರಮಾತೆ ಬೆಳವಡಿ ಮಲ್ಲಮ್ಮ ನಾಟಕಗಳನ್ನು ಬರೆಯುವದರ ಮೂಲಕ ವೃತ್ತಿನಾಟಕ ಕಂಪನಿಗಳಲ್ಲಿ ಐತಿಹಾಸಿಕ ನಾಟಕಗಳನ್ನು ರಂಗಪ್ರಯೋಗಕ್ಕೆ ಅಳವಡಿಸಿ ಜನರಲ್ಲಿ ವೀರ ತ್ಯಾಗ ಗುಣಗಳು ಮರುಕಳಿಸುವಂತೆ ಮಾಡಿದ್ದಾರೆ.

ಎಚ್.ಟಿ. ಮಹಾಂತೇಶ ಶಾಸ್ತ್ರಿಯವರೂ ಐತಿಹಾಸಿಕ ನಾಟಕಗಳನ್ನು ಬರೆದಿದ್ದಾರೆ. ಸಂಗೊಳ್ಳಿ ರಾಯಣ್ಣ, ಕಿತ್ತೂರ ಚೆನ್ನಮ್ಮ ಹೊತ್ತಿಸಿದ ಸ್ವಾಭಿಮಾನ ಸ್ವಾತಂತ್ರ್ಯದ ಕಿಡಿಯನ್ನು ಆರದಂತೆ ಕಾಪಾಡಿದ. ಈ ಅಭಿಮಾನದ ವಿಷಯವನ್ನು ಸಂಗೊಳ್ಳಿ ರಾಯಣ್ಣನ ನಾಟಕದಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಸಂಗೊಳ್ಳಿ ರಾಯಣ್ಣನಂತಹ ಒಬ್ಬ ಐತಿಹಾಸಿಕ ವ್ಯಕ್ತಿಯನ್ನು ವೃತ್ತಿರಂಗಭೂಮಿಯಲ್ಲಿ ಯಾವ ರೀತಿ ಬಳಸಿಕೊಳ್ಳಬಹುದು ಎಂಬ ಜಾಣ್ಮೆಯನ್ನು ನಾಟಕಕಾರರು ತೋರಿಸಿದ್ದಾರೆ.

ಸಾಮಾಜಿಕ ನಾಟಕಗಳು

ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿಯ ಅತಿಯಾದ ಸಂಗೀತ, ಪ್ರಾಸಯುಕ್ತ ಉದ್ದುದ್ದ ಸಂಭಾಷಣೆ ಅತಿ ರಂಜಿತ ಸನ್ನಿವೇಶಗಳನ್ನು ನೋಡಿ ಜನರು ಬೇಸರಿಸಿದ್ದರು. ಸ್ವಾತಂತ್ರ್ಯಾ ನಂತರದ ಸಾಮಾಜಿಕ ಸಂವೇದನೆಗಳು ಬೇರೆಯಾಗಿದ್ದವು. ಸಮಕಾಲೀನ ಸಂವೇದನೆಗಳಿಗೆ ಸ್ಪಂದಿಸಿದ ನಾಟಕಕಾರರು ನಮ್ಮ ಬದುಕಿನ ಸುತ್ತಮುತ್ತಲೂ ನಡೆಯುವ ಘಟನೆಗಳನ್ನು ಆಯ್ದುಕೊಂಡು ಸಾಮಾಜಿಕ ನಾಟಕಗಳನ್ನು ರಚಿಸಲು ಮುಂದಾದರು. "ಈಗ ಆಡುತ್ತಿರುವ ನಾಟಕಗಳಲ್ಲಿ ಅನೇಕ ನಾಟಕಗಳು ೧೫-೨೦ ವರ್ಷಗಳ ಹಿಂದೆ ಸತ್ತಿರಬೇಕಾದವುಗಳು. ಮತ್ತೆ ಕೆಲವು ನಾಟಕವೆಂದು ಹೇಳಿಸಿಕೊಳ್ಳಲೂ ಯೋಗ್ಯತೆ ಇಲ್ಲದವು. ಇವುಗಳಲ್ಲಿ ಮೂರು ಮುಕ್ಕಾಲು ಪಾಲು ನಟರ ಕೀರ್ತಿ, ಅಭಿನಯ ಕೌಶಲ್ಯಗಳಿಂದಾಗಿ ಬದುಕಿದೆ."[೬] ಎಂದು ಹೇಳುವ ಮಾತುಗಳು, ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ಕುರಿತು ಹೇಳಿದ ಮಾತುಗಳು. ಮುಂದೆ ವೃತ್ತಿರಂಭಗಭೂಮಿ ಸಾಮಾಜಿಕ ನಾಟಕಗಳತ್ತ ಹೊರಡುವ ಮುನ್ಸೂಚನೆಗಳನ್ನು ಕೊಡುತ್ತವೆ. ಅಲ್ಲದೇ ಅದೇ ತಾನೇ ಬಂದ ಚಲನಚಿತ್ರಗಳ ಪ್ರಭಾವ ವಿಲಾಸಿ ರಂಗಭೂಮಿಯವರ ಕಟುಟೀಕೆ ಬದಲಾದ ಸನ್ನಿವೇಶಕ್ಕೆ ತಕ್ಕಂತೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪೌರಾಣಿಕ, ಐತಿಹಾಸಿಕ ನಾಟಕಗಳ ಜೊತೆಗೆ ಸಾಮಾಜಿಕ ನಾಟಕಗಳು ರಂಗಪ್ರಯೋಗಗೊಳ್ಳ ಹತ್ತಿದವು. ಬದುಕಿಗೆ ಸಮೀಪವಾದ ಕಥಾವಸ್ತುವನ್ನು ಆಯ್ದುಕೊಂಡು ಸಾಮಾನ್ಯ ಜನರು ಮಾತನಾಡುವ ಆಡುಭಾಷೆಯನ್ನು ಬಳಸಿ ರಂಗಪ್ರಯೋಗಗಳತ್ತ ಸಾಮಾಜಿಕ ನಾಟಕಗಳು ಜನರ ಸಮೀಪ ಬಂದು ನಿಂತವು.

ಸಾಮಾಜಿಕ ನಾಟಕಗಳಲ್ಲಿ ಸಮಕಾಲೀನ ಸಂವೇದನೆಗಳಿಗೆ ಮೂರ್ತಸ್ವರೂಪ ಕೊಟ್ಟವರು ಚಿಕ್ಕೋಡಿ ಶಿವಲಿಂಗಸ್ವಾಮಿಗಳು. ಇವರ ಅಸ್ಪೃಶ್ಯತಾ ನಿವಾರಣೆ, ಮಹಾತ್ಮ ಗಾಂಧಿಯವರ ಧೋರಣೆ ಹೊಂದಿದ ಕೃತಿಯಾಗಿದೆ. ಇವರಿಂದಲೇ ರಚಿತವಾದ 'ರಾಷ್ಟ್ರಧ್ವಜ' ನಾಟಕ ರಾಷ್ಟ್ರೀಯತೆಯನ್ನು ಬೆಳೆಸಲು ರಚಿಸಿದ ನಾಟಕ. 'ಗುರುವಿರಕ್ತರ ಪ್ರಪಂಚ' ನಾಟಕವು ಸ್ವಾಮಿಗಳ ಅನ್ಯೆಕತೆಯನ್ನು ಬಿಂಬಿಸುವ ಕಥಾವಸ್ತುವನ್ನು ಒಳಗೊಂಡಿದೆ. ಗುರುರಾವ ಮಮದಾಪೂರ ಅವರ 'ಇಂದಿರೆ' ಸ್ತ್ರೀ ಶೋಷಣೆಯನ್ನು ಕುರಿತು ಬರೆದ ಮೊದಲ ನಾಟಕವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೋಲ ಶಾಂತಪ್ಪನವರ ಸ್ತ್ರೀ, ಬಿಎ ನಾಟಕಗಳು ಆಧುನಿಕ ಜೀವನ ಪದ್ಧತಿಯಿಂದ ಸಮಾಜದ ಮೇಲೆ ಆಗುವ ದುಷ್ಪರಿಣಾಮವನ್ನು ಬಿಂಬಿಸುತ್ತವೆ. ಉತ್ತರ ಕರ್ನಾಟಕದಲ್ಲಿ ಕಂದಗಲ್ ಹನುಮಂತರಾಯರು, ನಲವಡಿ ಶ್ರೀಕಂಠ ಶಾಸ್ತ್ರಿಗಳು, ಎಚ್.ಟಿ. ಮಹಾಂತೇಶಶಾಸ್ತ್ರಿಗಳು ಬದುಕಿನ ನಾನಾ ಸಮಸ್ಯೆಗಳನ್ನು ತಮ್ಮ ನಾಟಕದಲ್ಲಿ ಸಮರ್ಥವಾಗಿ ಚಿತ್ರಿಸಿ ರಂಗಪ್ರಯೋಗಕ್ಕೆ ಒಳಪಡಿಸಿದ್ದಾರೆ. ಕಂದಗಲ್ ಹನುಮಂತರಾಯರ ಬಡತನದ ಭೂತ, ಮಹಾಂತೇಶ ಶಾಸ್ತ್ರಿಗಳ ಕನ್ಯಾ, ತಾವರೆ ತೊಟ್ಟಿಲು, ಬೆಳ್ಳಿ ಚುಕ್ಕಿ ನಾಟಕಗಳು ಅವರ ಸಂವೇದನಾಶೀಲ ಮನಸ್ಸನ್ನು ತೋರಿಸುತ್ತವೆ. ನಲವಡಿ ಶ್ರೀಕಂಠಶಾಸ್ತ್ರಿಗಳು ನವಯುವಕುಮಾರಿ, ಲವ್‌ಮ್ಯಾರೇಜ ಮುಂತಾದ ಸಾಮಾಜಿಕ

ನಾಟಕಗಳನ್ನು ರಚಿಸಿ ವೃತ್ತಿರಂಗಭೂಮಿಯ ಕಾಲದ ಅವಶ್ಯಕತೆಯನ್ನು ಪೂರೈಸಿದ್ದಾರೆ. ನವಯುವಕುಮಾರಿ ನಾಟಕವಂತೂ ಮಠಮಾನ್ಯಗಳಲ್ಲಿ ನಡೆಯುವ ಅನೈತಿಕತೆ, ಢೋಂಗಿ ಸಾಧುಗಳ ಬಣ್ಣ ಬಯಲು ಮಾಡಿರುವದನ್ನು ಕಾಣುತ್ತೇವೆ.

ಹೆಚ್ಚು ಸಾಮಾಜಿಕ ನಾಟಕಗಳನ್ನು ರಚಿಸಿ ರಂಗಪ್ರಯೋಗಕ್ಕೆ ಒಳಪಡಿಸಿದ ಕೀರ್ತಿ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳಿಗೆ ಸಲ್ಲುತ್ತದೆ. ನರರಾಕ್ಷಸಿ, ವಧುವರ, ಕುಂಕುಮ, ರೂಪವತಿ ನಾಟಕಗಳಲ್ಲಿ ಸ್ತ್ರೀಯ ವಿವಿಧ ಮುಖಗಳನ್ನು ಚಿತ್ರಿಸಿರುವುದನ್ನು ಕಾಣುತ್ತೇವೆ. ಕುಂಕುಮ ನಾಟಕವಂತೂ ಸಮಾಜದಲ್ಲಿ ಬೇರು ಬಿಟ್ಟ ವಿಧವಾ ಸಮಸ್ಯೆಯ ಕರಾಳ ಮುಖವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಎಲ್.ಎಸ್. ಇನಾಮದಾರರು ಸಮಕಾಲೀನ ಸಂವೇದನೆಗಳಿಗೆ ಸ್ಪಂದಿಸಿ ಅವುಗಳನ್ನು ತಮ್ಮ ಭೂದಾನ, ನಮ್ಮದು ಕಾಶ್ಮೀರ, ಪಠಾಣಪಾಶಾ ಮುಂತಾದ ನಾಟಕಗಳಲ್ಲಿ ಚಿತ್ರಿಸಿರುವದನ್ನು ಕಾಣುತ್ತೇವೆ.

ಮುಂದೆ ಸಾಮಾಜಿಕ ನಾಟಕಗಳು ಊರಿಗೊಂದರಂತೆ ಹುಟ್ಟಿ ಬಂದವು. ಅನೇಕರು ಸತ್ವಹೀನ ನಾಟಕಗಳನ್ನು ರಚಿಸಿ ವೃತ್ತಿರಂಗಭೂಮಿಯ ಪಾವಿತ್ರ್ಯವನ್ನು ಕಳೆದರು. ಆದರೂ ಇದೇ ಕಾಲದಲ್ಲಿ ಒಳ್ಳೆಯ ನಾಟಕಗಳನ್ನು ಬರೆದ ಕೆ.ಎನ್. ಸಾಳುಂಖೆಯವರ ಗೌರಿ ಶಂಕರ, ತಂಗಿಯ ಮನೆ, ದಾರಿ ದೀಪ, ಮನೆಕಟ್ಟಿ ನೋಡು, ತಾಳಿಯ ತಕರಾರು, ವರನೋಡಿ ಹೆಣ್ಣುಕೊಡು, ಮುಂತಾದ ಶ್ರೇಷ್ಠ ನಾಟಕಗಳನ್ನು ನೋಡಬಹುದು. ಪಿ.ಬಿ.ಧುತ್ತರಗಿಯವರ ಕಲ್ಪನಾ ಪ್ರಪಂಚ, ನಂದಾದೀಪ, ಮದುಮಗಳು ಒಳ್ಳೆಯ ಕಥಾವಸ್ತುವನ್ನು ಒಳಗೊಂಡ ನಾಟಕಗಳು. ಎಚ್.ಎನ್. ಹೂಗಾರರ ಕೊಂಡುತಂದ ಗಂಡ ಎಚ್.ಆರ್. ಭಸ್ಮೆಯವರ ಯಾರ ವಿಶ್ವಾಸ ಯಾರಿಗೆ ಇವು ಜನಪ್ರಿಯ ಯಶಸ್ವಿ ನಾಟಕಗಳೆನಿಸಿವೆ. ಎನ್.ಎಸ್. ಜೋಶಿಯವರ ಚೆನ್ನಪ್ಪ ಚೆನ್ನಗೌಡ ನಾಟಕವು ಯಶಸ್ವಿ ರಂಗಪ್ರಯೋಗಗಳನ್ನು ಮಾಡಿ ಜನಾನುರಾಗಿಯಾಗಿ ಮೆರೆಯಿತು. ಎನ್.ಬಸವರಾಜವರ ರೈತನ ಮಕ್ಕಳು, ಸೂಳೆಮಗ, ಗಂಡ ಬಿಟ್ಟ ಗರತಿ ಮುಂತಾದ ನಾಟಕಗಳು ಜನರನ್ನು ರಂಜಿಸುತ್ತ ನೀತಿಯ ಪಾಠವನ್ನು ಹೇಳಿದವು.

ಸಾಮಾಜಿಕ ನಾಟಕಗಳು ಸ್ವಾತಂತ್ರ್ಯ ನಂತರದ ಸಮಕಾಲೀನ ಸಮಸ್ಯೆಗಳನ್ನು ಕಥಾವಸ್ತುವನ್ನಾಗಿ ಆಯ್ದುಕೊಂಡದ್ದು ಗಮನಾರ್ಹ. ವಸ್ತುವಿನ ದೃಷ್ಟಿಯಿಂದ ಸಾಮಾಜಿಕ ನಾಟಕಗಳು ಬಿಂಬಿಸಲು ಹೊರಟ ಸಮಸ್ಯೆಗಳು ಅನೇಕ. ವಿಧವಾ ಸಮಸ್ಯೆ, ಜಾತಿಯ ಸಮಸ್ಯೆ, ಬಡತನದ ಸಮಸ್ಯೆ, ವರದಕ್ಷಿಣೆಯ ಸಮಸ್ಯೆ, ಬಾಲ್ಯವಿವಾಹ ಸಮಸ್ಯೆ, ಮರುವಿವಾಹ ಸಮಸ್ಯೆ, ವೇಶ್ಯಾ ಸಮಸ್ಯೆ, ಕಾರ್ಮಿಕರ ಸಮಸ್ಯೆ, ಅಂಗವಿಕಲರ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಕೃಷಿಕಾರ್ಮಿಕ ಸಮಸ್ಯೆ, ಹೆಣ್ಣಿನ ಶೋಷಣೆ, ಕುಟುಂಬ ವರ್ಗದಲ್ಲಿ ಬರುವ ಗಂಡಹೆಂಡತಿಯರ ಸಮಸ್ಯೆ, ಅಣ್ಣತಮ್ಮಂದಿರ ಸಮಸ್ಯೆ, ಅತ್ತೆ-ಸೊಸೆ, ತಂದೆ-ಮಕ್ಕಳ ಸಮಸ್ಯೆ ಮುಂತಾದ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ರೀತಿಯಲ್ಲಿ ಅಸಂಖ್ಯಾತ ಸಾಮಾಜಿಕ ನಾಟಕಗಳು ರಚನೆಗೊಂಡವು.

ಪಿ.ಬಿ. ಧುತ್ತರಗಿಯವರ ಕಲ್ಪನಾ ಪ್ರಪಂಚ ಇವರ ಮೊದಲ ಸಾಮಾಜಿಕ ನಾಟಕ. ನಂದಾದೀಪ, ನ್ಯಾಯಾಧೀಶ, ಮನಸ್ಸಿಲ್ಲದ ಮದುವೆ, ಕಾಲಚಕ್ರ, ಧರ್ಮದೇವತೆ, ತಾಯಿ ಕರುಳು, ಸಹೋದರಿ, ಮದುಮಗಳು, ಮಲಮಗಳು, ಹೊಳೆದಂಡೆಯ ಹೊಲ, ಸಂಪತ್ತಿಗೆ ಸವಾಲ, ಪಂಚಾಯತಿ ರಾಜ್ಯ, ಸಹಕಾರವೇ ಜೀವನ, ಕಾಂಚನಮೃಗ ಮುಂತಾದ ೩೧ ಸಾಮಾಜಿಕ ನಾಟಕಗಳನ್ನು ರಚಿಸಿದ ಧುತ್ತರಗಿಯವರು ತಮ್ಮ ಸಾಮಾಜಿಕ ಜೀವನದಲ್ಲಿ ಕೌಟುಂಬಿಕ ರಾಜಕೀಯ ಮುಂತಾದ ಮುಖಗಳನ್ನು ಚಿತ್ರಿಸಿ ವೃತ್ತಿರಂಗಭೂಮಿಯ ವೈಭವವನ್ನು ಹೆಚ್ಚಿಸಿದ್ದಾರೆ.

ಎನ್.ಎಸ್.ಜೋಶಿಯವರು ರತ್ನ ಮಾಂಗಲ್ಯ, ಹುಚ್ಚು ಬಿಡಿಸಿದ ಹೆಣ್ಣು, ಸೋತು ಗೆದ್ದ ಸಾಧ್ವಿ, ಬಂಜೆಯ ತೊಟ್ಟಿಲು, ಸಮಾಜಕ್ಕೆ ಸವಾಲ್, ಇಂದಿರಾ, ರಾಮಾಚಾರಿ, ಕುಂಟ ಮಾಡಿದ ಗಲಾಟೆ, ಹುಚ್ಚಿ ಹಚ್ಚಿದ ದೀಪ, ರಕ್ತದಾನ, ಹಾಸಿಗೆ ಇದ್ದಷ್ಟು ಕಾಲಚಾಚು, ಪ್ರಣಯ ತಂದ ಫಜಿತಿ ಮುಂತಾದ ೨೦ಕ್ಕೂ ಹೆಚ್ಚು ನಾಟಕಗಳನ್ನು ಬರೆದರು. ಇವೆಲ್ಲ ವೃತ್ತಿರಂಗಭೂಮಿಯಲ್ಲಿ ರಂಗಪ್ರಯೋಗಕ್ಕೆ ಒಳಪಟ್ಟು ಜನರನ್ನು ರಂಜಿಸಿದ ನಾಟಕಗಳು.

ಎಚ್.ಟಿ. ಮಹಾಂತೇಶ ಶಾಸ್ತ್ರಿಯವರು ನರರಾಕ್ಷಸಿ, ಕುಂಕುಮ, ಸತಿಪತಿ, ಬಿಡುಗಡೆ, ಹೆಣ್ಣಿನ ಜೀವನ ಮುಂತಾದ ೩೦ಕ್ಕೂ ಹೆಚ್ಚು ಸಾಮಾಜಿಕ ನಾಟಕಗಳನ್ನು ಬರೆದು ವೃತ್ತಿರಂಗಭೂಮಿಯ ಸಾಮಾಜಿಕ ನಾಟಕಕಾರರಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.

ವೃತ್ತಿರಂಗಭೂಮಿಯ ರಂಗಪ್ರಯೋಗಕ್ಕಾಗಿಯೆ ಬರೆಯುತ್ತಿದ್ದ ಹೂಗಾರರು ಜುಬಿಲಿ ಕವಿಯೆಂದೇ ಪ್ರಸಿದ್ಧಿ ಪಡೆದಿದ್ದರು. ಸಾಮಾಜಿಕ ನಾಟಕಗಳನ್ನು ಬರೆಯುವದರಲ್ಲಿ ಹೂಗಾರರು ಎತ್ತಿದ ಕೈ. ಕೊಂಡು ತಂದ ಗಂಡ, ಹುಚ್ಚರ ರಾಜ್ಯ, ಬೂದಿ ಮುಚ್ಚಿದ ಕೆಂಡ, ಗೆದ್ದವರು ಯಾರು, ಸುಳ್ಳ ದೇವರಿಗೆ ಕಳ್ಳ ಪೂಜಾರಿ ಮುಂತಾದ ಸಾಮಾಜಿಕ ನಾಟಕಗಳನ್ನು ಬರೆದು ರಂಗಪ್ರದರ್ಶನ ಮಾಡಿ ಜನಮೆಚ್ಚುಗೆ ಪಡೆದ ಇವರು ಸದಭಿರುಚಿಯ ನಾಟಕಗಳನ್ನು ಕೊಡುತ್ತ ವೃತ್ತಿರಂಗಭೂಮಿಯ ಗೌರವವನ್ನು ಹೆಚ್ಚಿಸಿದ್ದಾರೆ.

ಪೌರಾಣಿಕ ನಾಟಕಗಳನ್ನು ಬರೆಯುತ್ತ ರಂಗಪ್ರಯೋಗಕ್ಕೆ ಒಳಪಡಿಸುತ್ತಲೇ ಸಾಮಾಜಿಕ ನಾಟಕಗಳನ್ನೂ ಬರೆದು ಕರ್ನಾಟಕದ ಷೇಕ್ಸಪೀಯರ ಎಂದು ಕರೆಯಿಸಿಕೊಂಡವರು ಕಂದಗಲ್ ಹನುಮಂತರಾಯರು. ತಾವರೆ ತೊಟ್ಟಿಲು, ನೆತ್ತರ ದೌತಣ, ಬಡತನದ ಭೂತ, ಬಾಳಿನೊಳು ಬೆಳಕು, ಬೆಳ್ಳಿ ಚುಕ್ಕೆ, ಮಾತಂಗ ಕನ್ಯಾ, ವೀಣಾ ಮುಂತಾದ ೧೦-೧೨ ಸಾಮಾಜಿಕ ನಾಟಕಗಳನ್ನು ಬರೆದು ಅವುಗಳನ್ನು ಈ ಭಾಗದಲ್ಲಿ ಪ್ರದರ್ಶಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ ಈ ಭಾಗದ ಪ್ರಮುಖ ನಾಟಕಕಾರರು ಇವರು.

ಹಾಗೆಯೇ ಮಾರುತೇಶ ಮಾಂಡ್ರೆ, ಎಚ್.ಆರ್. ಭಸ್ಮೆ, ಗಂಗಾಧರ ಶಾಸ್ತ್ರಿಗಳು ಮುಂತಾದವರು ಅನೇಕ ಸಾಮಾಜಿಕ ನಾಟಕಗಳನ್ನು ಬರೆದು ರಂಗಪ್ರಯೋಗಕ್ಕೆ ಒಳಪಡಿಸಿ ಈ ಭಾಗದ ಜನರನ್ನು ರಂಜಿಸಿ ಮೆಚ್ಚುಗೆ ಪಡೆದಿದ್ದಾರೆ.

ವೃತ್ತಿರಂಗಭೂಮಿಯ ಸಮಸ್ಯೆಗಳು

೧೯೪೦ರ ಸುಮಾರಿಗೆ ಚಲನಚಿತ್ರ ರಂಗದ ಪ್ರವೇಶದಿಂದ ಜನರು ಚಿತ್ರರಂಗದ ಕಡೆಗೆ ಒಲಿದರು. ಚಿತ್ರರಂಗದ ಆಕರ್ಷಣೆಗೆ ಒಳಗಾದ ಬಹಳಷ್ಟು ಜನರು ವೃತ್ತಿರಂಗಭೂಮಿಯನ್ನು ನಿರಾಕರಿಸಿದರು. ರಂಗಭೂಮಿಯಲ್ಲಿ ಮನುಷ್ಯ ಮನುಷ್ಯನ ಆಕಾರದಲ್ಲಿ ಕಂಡರೆ ಚಿತ್ರರಂಗದಲ್ಲಿ ಮನುಷ್ಯ ಮನುಷ್ಯನಿಗಿಂತಲೂ ದೊಡ್ಡವನಾಗಿ ಕಾಣುತ್ತಾನೆ ಹಾಗೂ ಯಂತ್ರಗಳ ಸಹಾಯದಿಂದ ಕಥೆಗೆ ತಕ್ಕಂತೆ ಸನ್ನಿವೇಶಗಳು ಇರುವದರಿಂದ ಜನರಿಗೆ ಚಿತ್ರರಂಗದ ಆಕರ್ಷಣೆ ಹೆಚ್ಚಿತು. ಅನೇಕ ರಂಗಭೂಮಿ ಕಲಾವಿದರು ಚಿತ್ರರಂಗದ ಮೇಲೆ ಕಣ್ಣಿಟ್ಟು ರಂಗಭೂಮಿಯನ್ನು ಬಿಟ್ಟು ಚಿತ್ರರಂಗಕ್ಕೆ ಹೋದರು. ನಟನಾ ಸಾಮರ್ಥ್ಯವಿಲ್ಲದ ನಟ-ನಟಿಯರಿಂದ ವೃತ್ತಿರಂಗಭೂಮಿ ತನ್ನ ಮೊದಲಿನ ಆಕರ್ಷಣೆಯನ್ನು ಪಡೆಯುವದಕ್ಕೆ ಹೆಣಗಾಡಬೇಕಾಯಿತು. ಅನೇಕ ವೃತ್ತಿಮಂಡಳಿಗಳು ಚಿತ್ರರಂಗದ ಜೊತೆ ಸ್ಪರ್ಧೆ ಹಿಡಿದು ಏನೆಲ್ಲಾ ಕಸರತ್ತು ಮಾಡಿದರು. ಚಲನಚಿತ್ರದ ಸಿನೆಮಾಟೊಗ್ರಾಫಿ ಮುಂದೆ ಜನರನ್ನು ಆಕರ್ಷಿಸಲು ವಿಫಲರಾದರು. ಅಲ್ಲದೇ ನಗರದಲ್ಲಿದ್ದ ರಂಗಮಂದಿರಗಳು ಚಿತ್ರಮಂದಿರಗಳಾಗಿ ಪರಿವರ್ತನೆಗೊಂಡವು. ನಂತರ ಕೆಲವೇ ವರ್ಷಗಳಲ್ಲಿ ದೊಡ್ಡ ದೊಡ್ಡ ಹಳ್ಳಿಗಳಿಗೂ ಟೂರಿಂಗ್ ಟಾಕೀಸ್‌ಗಳು ಬಂದವು. ಇವೆಲ್ಲ ಒತ್ತಡ ಸಹಿಸಿಕೊಂಡು ವೃತ್ತಿರಂಗಭೂಮಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿತ್ತು.

ಇವೆಲ್ಲ ತೊಂದರೆಗಳ ಮಧ್ಯವೂ ನಮ್ಮ ವೃತ್ತಿರಂಗಭೂಮಿ ಜೀವಂತವಾಗಿಯೇ ಉಳಿದು ಬಂದಿರುವುದು. ಇದರ ಮಹತ್ವವನ್ನು ಸತ್ವವನ್ನು ತೋರಿಸುತ್ತದೆ.

ವೃತ್ತಿರಂಗಭೂಮಿಯಲ್ಲಿ ಮೊದಲಿನಿಂದಲೂ ಕಂಪನಿ-ಕಂಪನಿಗಳ ಮಧ್ಯೆ ಸ್ಪರ್ಧೆ ಇದೆ. ಒಂದು ಕಂಪನಿ ಪ್ರಸಿದ್ಧ ನಟ-ನಟಿಯರನ್ನು ರಾತ್ರೋರಾತ್ರಿ ಪಲಾಯನ ಮಾಡಿಕೊಂಡು ಹೋಗಿ ಕಂಪನಿಗಳನ್ನು ಇಕ್ಕಟ್ಟಿಗೆ ಸಿಗಿಸಿದ್ದುಂಟು. ಹಾಗೆಯೇ ಸ್ವತಃ ಕಲಾವಿದರು ಒಂದು ಕಂಪನಿಯಲ್ಲಿ ಹೆಸರು ಮಾಡಿದರೆ ಬೇರೆ ಕಂಪನಿಯ ಕರೆಯ ಮೇರೆಗೆ ಇದ್ದಕ್ಕಿದ್ದಂತೆ ಹೇಳದೆ ಕೇಳದೆ ಬಿಟ್ಟುಹೋಗುತ್ತಿದ್ದರು. ಇನ್ನು ಬಹಳಷ್ಟು ಕಲಾವಿದರು ದುಶ್ಚಟಗಳಿಗೆ ದಾಸರಾಗಿ ಸಾಲಸೋಲಗಳನ್ನು ಮಾಡಿ ತಲೆಮರೆಸಿಕೊಳ್ಳುತ್ತಿದ್ದರು. ನಟ-ನಟಿಯರು ಒಂದೇ ಕಡೆ ಕೂಡಿ ಇರುತ್ತಿದ್ದರಿಂದ ಒಬ್ಬರಿಗೊಬ್ಬರು ಆಕರ್ಷಿತರಾಗಿ ಕಲಾದಂಪತಿಗಳಾಗಿ ಮಧ್ಯದಲ್ಲಿ ಕೈಬಿಟ್ಟು ಬಿಡುತ್ತಿದ್ದರು. ಅಲ್ಲೊಬ್ಬ ಇಲ್ಲೊಬ್ಬನು ಕೊನೆಯವರೆಗೆ ತಾಳಿ ಕಟ್ಟಿದವಳ ಜೊತೆ ಬಾಳ್ವೆ ಮಾಡಿದ ಕಲಾವಿದರನ್ನು ಕಾಣುತ್ತೇವೆ.

ವೃತ್ತಿರಂಗಭೂಮಿಯ ಪಾವಿತ್ರ್ಯವನ್ನು ಕಾಪಾಡಿ ರಂಗಕಲಾ ಸೇವೆಯನ್ನು ಮಾಡುವ ಉದ್ದೇಶದಿಂದ ಕಂಪನಿ ಕಟ್ಟಿದ ಮಾಲಿಕರನ್ನು ಅಪರೂಪಕ್ಕೆ ಕಾಣುತ್ತೇವೆ. ಇಂತಹ ಮಾಲಿಕರು ಕಲಾವಿದರನ್ನು ತಮ್ಮ ಸ್ವಂತ ಮಕ್ಕಳಂತೆ ಕಂಡದ್ದುಂಟು. ಇನ್ನು ಕೆಲ ಶ್ರೀಮಂತ ರಸಿಕ ಕಂಪನಿ ಮಾಲಿಕರು ಹವ್ಯಾಸಕ್ಕಾಗಿ ಕಂಪನಿ ಕಟ್ಟಿ ಒಳ್ಳೊಳ್ಳೆ ಸುಂದರ ೨-೩ ಕಲಾಪತ್ನಿಯರನ್ನು ಮಾಡಿಕೊಂಡದ್ದುಂಟು. ವೃತ್ತಿರಂಗಭೂಮಿಯ ಮಾಲಿಕರ, ನಟ-ನಟಿಯರ, ರಂಗಕರ್ಮಿಗಳ ಎಲ್ಲ ದೌರ್ಬಲ್ಯಗಳನ್ನು ಮರೆತು ನಮ್ಮ ಪ್ರೇಕ್ಷಕರು ವೃತ್ತಿರಂಗಭೂಮಿಯನ್ನು ಪ್ರೀತಿಸುತ್ತಲೇ ಬಂದಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ.

ರಂಗಭೂಮಿಯ ಚರಿತ್ರೆಯನ್ನು ಕಟ್ಟುವದು ತುಂಬಾ ಕಷ್ಟದ ಕೆಲಸ. ಯಾವುದೇ ಕಂಪನಿ ನಾಟಕಕಾರರ ಜನ್ಮ ಎಂದಾಯಿತು ಹೇಳುವದು ಸುಲಭ, ಆದರೆ ಕಂಪನಿಗಳು ಬೆಳೆದು ಬಂದ ಕಾಲಮಾನದಲ್ಲಿ ನಾಟಕಕ್ಕೆ ಮೂಲವಾದ ಆಯಾ ವಿಷಯಗಳನ್ನು ಕಾಲಮಾನದ ಪರಿಯಲ್ಲಿ ಕಟ್ಟಿ ಇಡುವದು ತುಂಬಾ ಕಷ್ಟದ ಕೆಲಸ. ಒಂದು ಕಂಪನಿ ಪೌರಾಣಿಕ ನಾಟಕ ಒಂದರ ಪ್ರಯೋಗ ಮಾಡುತ್ತಿದೆ ಎನ್ನುತ್ತಿರುವಾಗಲೇ ಸಾಮಾಜಿಕ ನಾಟಕವೊಂದನ್ನಾಡಿ ಜನಪ್ರಿಯತೆಯನ್ನು ಗಳಿಸುತ್ತದೆ. ಮತ್ತೆ ತಿಂಗಳೊಪತ್ತಿನಲ್ಲಿ ಐತಿಹಾಸಿಕ ನಾಟಕವನ್ನಾಡಿ ತನ್ನ ಜನಪ್ರಿಯತೆಯ ದಿಕ್ಕನ್ನು ಬದಲಿಸಿಕೊಳ್ಳುತ್ತದೆ. ಪ್ರತಿಯೊಂದು ಕಂಪನಿಯು ಇಂತಹ ಪ್ರಯೋಗಗಳನ್ನು ಮತ್ತೆ ಮತ್ತೆ ಮಾಡುವದರಿಂದ ನಾಟಕಗಳ ಚಾರಿತ್ರಿಕ ಸಮೀಕ್ಷೆ ಗೋಜಗೋಜಲು ಆಗಿ ಬಿಡುತ್ತದೆ. ಇದು ಏನಿದ್ದರೂ ಅಧ್ಯಯನದ ವಿಷಯ, ಅಧ್ಯಯನಕಾರರ ಸಮಸ್ಯೆ. ಪ್ರೇಕ್ಷಕರು ಮಾತ್ರ ಯಾವ ಬಗೆಯ ಸಂಕೀರ್ಣತೆಗೂ ವಿಚಲಿತರಾಗದೆ ಎಲ್ಲಾ ಬಗೆಯ ನಾಟಕಗಳಿಗೆ ತೆರೆದುಕೊಳ್ಳುತ್ತಲೇ ಬಂದಿದ್ದಾರೆ. ೨೦ನೆಯ ಶತಮಾನದ ಮಧ್ಯಭಾಗ ವೃತ್ತಿರಂಗಭೂಮಿಯ ಸುಗ್ಗಿಯ ಕಾಲ. ಇಂತಹ ಗಳಿಗೆಯಲ್ಲಿ ಬಿ.ಆರ್. ಅರಿಷಿಣಗೋಡಿಯವರು ವೃತ್ತಿರಂಗಭೂಮಿಯನ್ನು ಪ್ರವೇಶಿಸಿದರು.

ಸಂದರ್ಭಸೂಚಿ

೧. ಅಂಕಣ ಸಾಹಿತ್ಯ ಪ್ರವಾಸ ಕಥನ (ಸಂ) ಡಾ. ಶಿವಾನಂದ ಕೆಳಗಿನಮನಿ, ಡಾ. ಜಿ.ಜಿ. ಪಟ್ಟಣಶೆಟ್ಟಿ, ಪ್ರಸಾರಾಂಗ, ಕ.ವಿ.ವಿ., ಧಾರವಾಡ, ೨೦೧೦, ಪ್ರಸ್ತಾವನೆ.

೨. ಆಧುನಿಕ ಕನ್ನಡ ನಾಟಕ, ಡಾ. ಕೆ. ಮರುಳಸಿದ್ದಪ್ಪ, ಪುಟ ೪೫

೩. ಡಾ. ಶಂಕರ ಮೊಕಾಸಿ ಪುಣೇಕರ- ಪ್ರೇಕ್ಷಕ ಮತ, ಕಲಾಭಿರುಚಿ, ಕನ್ನಡ ರಂಗಭೂಮಿ ಅಂದು-ಇಂದು, ಕ.ವಿ.ವಿ. ಪ್ರಕಾಶನ, ಧಾರವಾಡ, ಪುಟ ೨೯

೪. ಹೊಸಗನ್ನಡ ಸಾಹಿತ್ಯದ ಉದಯಕಾಲ, ಡಾ. ರಾ.ಯ. ಧಾರವಾಡಕರ, ಪುಟ ೨೯೦

೫. ಶ್ರೀರಂಗ-ವ್ಯವಸಾಯ ರಂಗಭೂಮಿ, ಐತಿಹಾಸಿಕ ಹಿನ್ನೆಲೆ ಉತ್ತರ ಕರ್ನಾಟಕ ಕನ್ನಡ ರಂಗಭೂಮಿ ನಡೆದು ಬಂದ ದಾರಿ, (ಸಂ) ಶ್ರೀರಂಗ, ಪುಟ ೨೮

೬. ರಂಗಭೂಮಿ: ೧೯೨೭ನೇ ಸೆಪ್ಟೆಂಬರ್ ಸಂಚಿಕೆ, ಪುಟ ೧೩

ಅಧ್ಯಾಯ ೩

ಕೌಟುಂಬಿಕ ಜೀವನ

ಬಾಲ್ಯ, ಗ್ರಾಮೀಣ ಪರಿಸರ-ಶಿಕ್ಷಣ-ದಾಂಪತ್ಯ-ರಂಗಭೂಮಿ ಆಕರ್ಷಣೆ

ಅಧ್ಯಾಯ ೩

ಕೌಟುಂಬಿಕ ಜೀವನ

ಕೌಟುಂಬಿಕ ಹಿನ್ನೆಲೆ

ಬಾಗಲಕೋಟ ತಾಲೂಕಿನ ಬೆನಕಟ್ಟಿ ಬಿ.ಆರ್. ಅರಿಷಿಣಗೋಡಿಯವರ ಊರು. ಬೆನಕಟ್ಟಿ ಗ್ರಾಮ ಬಾಗಲಕೋಟೆಯಿಂದ ಆಲಮಟ್ಟಿಗೆ ಅಥವಾ ಕೂಡಲಸಂಗಮಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ ಬಾಗಲಕೋಟೆಯಿಂದ ೧೪ ಕಿ.ಮೀ. ದೂರದಲ್ಲಿದೆ. ಈ ಊರು ಚಿಕ್ಕದಾದರೂ ಒಕ್ಕಲುತನಕ್ಕೆ ಸುತ್ತಲಿನ ಮನ್ನಿಕಟ್ಟಿ, ಹೊನ್ನಾಕಟ್ಟಿ, ಹಳ್ಳೂರ, ಭಗವತಿ, ಬೇವೂರ, ಬೈರಮಟ್ಟಿ, ಬಸರಿಕಟ್ಟಿ, ಶಿರೂರ ಮುಂತಾದ ಊರುಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. 'ಬಪ್ಪರೆ ಬಹದ್ದೂರ ಬೆನಕಟ್ಟಿ ಒಕ್ಕಲುತನಕೆ ಬಲುಗಟ್ಟಿ' ಎಂಬ ಮಾತನ್ನು ಸಾರ್ಥಕಪಡಿಸಿಕೊಂಡಿದೆ. ಬಿ.ಆರ್. ಅರಿಷಿಣಗೋಡಿಯವರು ೨೧.೧೨.೧೯೩೪ರಂದು ಬೆನಕಟ್ಟಿಯಲ್ಲಿ ಜನ್ಮತಾಳಿದರು. ತಂದೆ ರಂಗಪ್ಪ ಅರಿಷಿಣಗೋಡಿ ತಾಯಿ ಕಾಶವ್ವ. ಕಾಶವ್ವ ಬೆನಕಟ್ಟಿಯ ಪ್ರಸಿದ್ಧ ಶ್ರೀಕೃಷ್ಣ ಪಾರಿಜಾತದ ಕಲಾವಿದರಾದ ಕೃಷ್ಣಪ್ಪ ಹುಡೇದಮನಿಯವರ ಅಕ್ಕ.

ಬಡವರೂ ಅಲ್ಲದ ಶ್ರೀಮಂತರೂ ಅಲ್ಲದ ಮಧ್ಯಮ ವರ್ಗದ ರಡ್ಡಿ (ಜನಾಂಗದ) ಮನೆತನದ ರಂಗಪ್ಪ ಕಾಶವ್ವ ದಂಪತಿಗಳು ಮೂರು ಗಂಡು ಒಂದು ಹೆಣ್ಣನ್ನು ಹೆತ್ತ ತುಂಬು ಕುಟುಂಬದ ಭಾಗ್ಯಶಾಲಿಗಳು. ಹಿರಿಯವ ಗಿರಿಯಪ್ಪ, ಎರಡನೆಯವ ರಾಯಪ್ಪ, ಮೂರನೆದವಳು ಲಕ್ಷ್ಮೀಬಾಯಿ, ನಾಲ್ಕನೆಯ ಕಡೆಯ ಹುಟ್ಟು ಈ ಪ್ರಬಂಧದ ಕೇಂದ್ರ ಬಿಂದುವಾದ ಭೀಮಪ್ಪ. ರಂಗಪ್ಪ-ಕಾಶವ್ವರ ಕಿರಿಯ ಮಗನಾದ ಭೀಮಪ್ಪನ ಮೇಲೆ ಕುಟುಂಬ ವರ್ಗದ ಸದಸ್ಯರೆಲ್ಲರ ಪ್ರೀತಿ ಹರಿದು ಅಚ್ಚು-ಮೆಚ್ಚಿನ ಹುಡುಗನಾಗಿ ಬೆಳೆದನು. ರಂಗಪ್ಪನ ಹಿರಿಯ ಮಗ ಗಿರಿಯಪ್ಪನಿಗೆ ಓದು ಹತ್ತಲಿಲ್ಲ. ಅದೇ ಊರಿನ ಬೆಣ್ಣೂರ ಮನೆತನದ ಪಾರ್ವತಿಯನ್ನು ಮದುವೆಯಾಗಿ ಪದ್ಮಾವತಿ, ರಂಗವ್ವ, ಲಕ್ಷ್ಮೀಬಾಯಿ, ಸುಂದರವ್ವ, ಮಹಾಂತೇಶ, ಶೀಲಾ ಎಂಬ ಆರು ಜನ ಮಕ್ಕಳನ್ನು ಪಡೆದು, ಪ್ರಗತಿಪರ ರೈತನೆನಿಸಿಕೊಂಡು ಊರಲ್ಲಿ ಹೆಸರು ಗಳಿಸಿದ್ದನು. ರಂಗಪ್ಪನ ಎರಡನೆಯ ಮಗ ರಾಯಪ್ಪ ಮುಲ್ಕೀ ಪರೀಕ್ಷೆಯವರೆಗೆ ಓದಿ

ಮುಂದೆ ವಿದ್ಯಾಭ್ಯಾಸವನ್ನು ಮಾಡದೇ ಮನೆತನದ ಉದ್ಯೋಗವಾದ ಒಕ್ಕಲುತನಕ್ಕೆ ನಿಂತ. ಮುಂದೆ ತಮ್ಮ ಭೀಮಪ್ಪ ನಾಟಕ ಕಂಪನಿ ಕಟ್ಟಿದಾಗ ತಮ್ಮನ ಸಹಾಯಕ್ಕೆ ಹೋದ ರಾಯಪ್ಪ ವೃತ್ತಿರಂಗಭೂಮಿಯ ಆಕರ್ಷಣೆಗೆ ಒಳಗಾಗಿ ಒಕ್ಕಲುತನಕ್ಕೆ ಶರಣು ಹೊಡೆದು ವೃತ್ತಿರಂಗಭೂಮಿಯಲ್ಲಿ ನೆಲೆನಿಂತ.

ಬಿ.ಆರ್. ಅರಿಷಿಣಗೋಡಿಯರ ಅಕ್ಕ ಲಕ್ಷ್ಮೀಬಾಯಿಯನ್ನು ಕಮತಗಿಯ ಶ್ರೀಮಂತ ಮೆಳ್ಳಿಯವರ ಮನೆಯ ಗಿರಿಯಪ್ಪನಿಗೆ ಮದುವೆ ಮಾಡಿಕೊಟ್ಟರು. ಗಿರಿಯಪ್ಪ-ಲಕ್ಷ್ಮೀಬಾಯಿ ದಂಪತಿಗಳು ಮೂರು ಮಕ್ಕಳಿಗೆ ಜನ್ಮ ನೀಡಿದರು. ಮೊದಲನೆಯವ ಹುಚ್ಚೇಶ, ಎರಡನೆಯವಳು ರೇಣುಕಾ, ಮೂರನೆಯವ ರಮೇಶ. ಗಿರಿಯಪ್ಪ-ಲಕ್ಷ್ಮೀಬಾಯಿ ದಂಪತಿಗಳ ಎರಡನೆಯ ಮಗಳು ರೇಣುಕಾಳೇ ಬಿ.ಆರ್. ಅರಿಷಿಣಗೋಡಿಯವರ ಧರ್ಮಪತ್ನಿ. ಬಿ.ಆರ್. ಅರಿಷಿಣಗೋಡಿಯವರ ಅಣ್ಣ ಗಿರಿಯಪ್ಪನ ಮಗಳು ರಂಗವ್ವನನ್ನು ಹುಚ್ಚೇಶನಿಗೆ ಮದುವೆ ಮಾಡಿಕೊಟ್ಟರು. ಹಾಗೆಯೇ ಅಣ್ಣ ರಾಯಪ್ಪನ ಮಗಳು ಪದ್ಮಾವತಿಯನ್ನು ರಮೇಶನಿಗೆ ಮದುವೆ ಮಾಡಿಕೊಟ್ಟು ರಕ್ತ ಸಂಬಂಧವನ್ನು ಉಳಿಸಿಕೊಂಡರು.

ಬಿ.ಆರ್. ಅರಿಷಿಣಗೋಡಿಯವರ ತಾಯಿ ಕಾಶವ್ವ ಈ ಹಿಂದೆ ಹೇಳಿದಂತೆ ಬೆನಕಟ್ಟಿಯ ಹುಡೇದಮನಿ ಮನೆತನದ ಹೆಣ್ಣುಮಗಳು. ಕಾಶವ್ವನ ತಂದೆ-ತಾಯಿ ಲಕ್ಕಪ್ಪ-ಶೇಷವ್ವ. ಹುಡೇದಮನಿ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು. ಪಾರ್ವತೆವ್ವ, ಕಾಶವ್ವ, ಕೃಷ್ಣಪ್ಪ, ಕುಷ್ಣವ್ವ. ಕಾಶವ್ವನ ತಮ್ಮ ಕೃಷ್ಣಪ್ಪ ಶ್ರೀಕೃಷ್ಣ ಪಾರಿಜಾತ ಪ್ರವೀಣ. ಬಿ.ಆರ್. ಅರಿಷಿಣಗೋಡಿಯವರ ಸೋದರ ಮಾವನ ಹೆಂಡತಿ ಹೂಲಗೇರಿಯ ಕಕರಡ್ಡಿ ಮನೆತನದ ಹೆಣ್ಣುಮಗಳು ಗಂಗವ್ವ.

ಕಲಾವಿದನೊಬ್ಬ ಬೆಳೆಯಬೇಕಾದರೆ ಕುಟುಂಬ ಪರಿಸರದಲ್ಲಿ ಅಂಥ ವಾತಾವರಣವಿರಬೇಕಾಗುತ್ತದೆ. ಬಿ.ಆರ್. ಅರಿಷಿಣಗೋಡಿಯವರ ಕೌಟುಂಬಿಕ ಪರಿಸರದಲ್ಲಿ ಅಂಥ ವಾತಾವರಣವಿತ್ತು. ಬಿ.ಆರ್. ಅರಿಷಿಣಗೋಡಿಯವರ ಸೋದರಮಾವ ಕೃಷ್ಣಪ್ಪ ಸ್ವತಃ ಶ್ರೀಕೃಷ್ಣ ಪಾರಿಜಾತ ಕಲಾವಿದ. ಈ ಕೃಷ್ಣಪ್ಪ-ಗಂಗವ್ವ ದಂಪತಿಗಳಿಗೆ ಆರು ಜನ ಮಕ್ಕಳು. ಶಿವನಗೌಡ, ನೀಲವ್ವ, ಶಂಕರಗೌಡ, ಶಾಸವ್ವ, ರಾಮನಗೌಡ, ಲಕ್ಷ್ಮೀಬಾಯಿ. ಶಿವನಗೌಡ, ಪ್ರಾಥಮಿಕ ಶಿಕ್ಷಣವನ್ನು ಪೂರೈಸಿ ಒಕ್ಕಲುತನಕ್ಕೆ ನಿಂತರೆ ಶಂಕರಗೌಡ ಗಣಿತಶಾಸ್ತ್ರದಲ್ಲಿ ಎಂ.ಎಸ್ಸಿ. ಸ್ನಾತಕೋತ್ತರ ಪದವೀಧರರಾಗಿ ಇಳಕಲ್‌ನ ವಿಜಯ ಮಹಾಂತೇಶ ಮಹಾವಿದ್ಯಾಲಯದಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಸಧ್ಯ ವಿಶ್ರಾಂತ ಜೀವನವನ್ನು ಇಳಕಲ್‌ದಲ್ಲಿಯೇ ಕಳೆಯುತ್ತಿದ್ದಾರೆ. ಸಣ್ಣವನಾದ ರಾಮನಗೌಡನಿಗೆ ಕಲೆಯ ಹುಚ್ಚು. ಹಬ್ಬ-ಹರಿದಿನಗಳಲ್ಲಿ ಊರಲ್ಲಿ ಪ್ರದರ್ಶನಗೊಳ್ಳುವ ಹವ್ಯಾಸಿ ತಂಡದಲ್ಲಿ ಅನೇಕ ನಾಟಕಗಳಲ್ಲಿ ಖಳನಾಯಕನ ಪಾತ್ರಗಳನ್ನು ಮಾಡಿ ಜನಾನುರಾಗಿಯಾಗಿದ್ದವನು. ಮುಂದೆ ಅಕಾಲಿಕ ಮರಣವನ್ನಪ್ಪಿದನು.

ಬಾಲ್ಯ, ಗ್ರಾಮೀಣ ಪರಿಸರ (ಕಲೆ ಮತ್ತು ಇತರ): ಬಾಲಕ ಭೀಮಪ್ಪ ತಂದೆ-ತಾಯಿಗಳಿಗೆ ಕಿರಿಯ ಮಗನಾಗಿದ್ದರಿಂದ ಅತಿ ಮುದ್ದಿನಿಂದ ನಲ್ಮೆಯ ಕಂದನಾಗಿ ಬೆಳೆದನು. ಭೀಮಪ್ಪನ ಬಾಲ್ಯದ

ತುಂಟಾಟಗಳನ್ನು ನೋಡಿ ತಾಯಿ ಕಾಶವ್ವ ಮನದಲ್ಲಿ ಆನಂದಪಡುತ್ತಿದ್ದಳು. ಸರಿಕರ ಜೊತೆ ಆಟಗಳನ್ನು ಆಡಿ ಹೊತ್ತಲ್ಲದ ಹೊತ್ತಿನಲ್ಲಿ ಬಂದು ಏನಾದರೂ ತಿನ್ನಲಿಕ್ಕೆ ತಿಂಡಿ-ತಿನಿಸುಗಳನ್ನು ಕೊಡೆಂದು ತಾಯಿಯನ್ನು ಕೇಳುತ್ತಿದ್ದನು. ತಾಯಿ ಮಗನ ಬಾಯಿಚಪಲವನ್ನು ತೀರಿಸಲು ಬೇಸನ್ ಉಂಡಿ, ಅಂಟಿನ ಉಂಡಿ, ಕೊಬ್ಬರಿ ಉಂಡಿ, ಶೇಂಗಾದ ಹೋಳಿಗೆ, ಹುರಕ್ಕಿ ಕರ್ಚಿಕಾಯಿ, ಸುರಳಿ ಹೋಳಿಗೆ ಮುಂತಾದ ತಿನಿಸುಗಳನ್ನು ಮಾಡಿ ಮಗನಿಗೆ ತಿನ್ನಲಿಕ್ಕೆ ಕೊಟ್ಟು ಆನಂದಪಡುತ್ತಿದ್ದಳು. ಇವತ್ತಿಗೂ ಕೂಡ ಊರಲ್ಲಿ ಅರಿಷಿಣಗೋಡಿಯವರ ಮನೆಯ ಉಂಡಿಗಳು ಪ್ರಸಿದ್ಧಿಯನ್ನು ಪಡೆದಿವೆ.

ತುಂಟ ಹುಡುಗನಾದ ಭೀಮಪ್ಪ ಪ್ರಾಥಮಿಕ ಶಿಕ್ಷಣವನ್ನು ಬೆನಕಟ್ಟಿಯಲ್ಲಿಯೇ ಮುಗಿಸಿದನು. ಪ್ರಾಥಮಿಕ ಶಾಲೆಯಲ್ಲಿ ಜಾಣನಾಗಿದ್ದ ಹುಡುಗ ಭೀಮಪ್ಪ ಶಾಲೆಯಲ್ಲಿ ನಡೆಯುತ್ತಿದ್ದ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಗುರುಗಳಿಗೆ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದನು. ಈ ಭೀಮಪ್ಪ ವಿದ್ಯಾಭ್ಯಾಸ ಮಾಡಿದ ಪ್ರಾಥಮಿಕ ಶಾಲೆ ಇಂದು ಶತಮಾನೋತ್ಸವ ಆಚರಿಸಿಕೊಳ್ಳುವ ಸಂಭ್ರಮದಲ್ಲಿದೆ.

ಅಂದಿನ ಕಾಲದಲ್ಲಿ ಹಬ್ಬ-ಹರಿದಿನಗಳಲ್ಲಿ ರಂಗಪ್ರಯೋಗ ನಡೆಸುತ್ತಿದ್ದ ಬೆನಕಟ್ಟಿಯ ಅನೇಕ ಹವ್ಯಾಸಿ ರಂಗತಂಡಗಳ ಕಲಾವಿದರನ್ನು ಪರಿಚಯಿಸದೇ ಹೋದರೆ ನಾಟಕ, ಸಂಶೋಧನೆ, ಇತಿಹಾಸ ದಾಖಲೆಗೆ ಅಪಚಾರವಾದೀತು. ಇವತ್ತಿನ ಹಾಗೆ ಮನರಂಜನಾ ಮಾಧ್ಯಮಗಳಿಲ್ಲದ ಆ ಹೊತ್ತಿನ ಕಾಲದಲ್ಲಿ ಊರಿನ ಜನರು ಕೃಷಿ ಚಟುವಟಿಕೆಯ ಬಿಡುವಿನ ವೇಳೆಯಲ್ಲಿ ಮನರಂಜನೆಗಾಗಿ ಹಬ್ಬ ಹರಿದಿನಗಳಲ್ಲಿ ಹವ್ಯಾಸಿ ತಂಡಗಳನ್ನು ಕಟ್ಟಿಕೊಂಡು ನಾಟಕ ಪ್ರದರ್ಶನ ಮಾಡಿ, ಜನರನ್ನು ರಂಜಿಸುತ್ತಿದ್ದರು.

ಬೆನಕಟ್ಟಿಗೆ ಇರಬಹುದಾದ ಯಾವುದೇ ಐತಿಹಾಸಿಕ ಹಿನ್ನೆಲೆ ಸಧ್ಯಕ್ಕೆ ದೊರೆಯುತ್ತಿಲ್ಲ. ಇರದೇ ಇದ್ದರೂ ಒಂದಂತೂ ನಿಜ ಮೊದಲಿನಿಂದಲೂ ಬೆನಕಟ್ಟಿ ಒಕ್ಕಲುತನ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಸಮೃದ್ಧವಾಗಿತ್ತು. ಊರಲ್ಲಿಯ ಇಂತಹ ಸಾಂಸ್ಕೃತಿಕ ವಾತಾವರಣ ಬಾಲ್ಯದಲ್ಲಿ ಭೀಮಪ್ಪನ ಮೇಲೆ ಪ್ರಭಾವ ಬೀರಿರಲು ಸಾಕು. ಸೋದರಮಾವ ಕೃಷ್ಣಪ್ಪ ಹುಡೇದಮನಿ ಪಾರಿಜಾತ ಕಲಾವಿದನಾಗಿ ಬೆನಕಟ್ಟಿಯಲ್ಲಿಯೇ ಒಂದು ಪಾರಿಜಾತ ಮೇಳವನ್ನು ಕಟ್ಟಿ ಸುತ್ತಲಿನ ಹತ್ತಾರು ಗ್ರಾಮಗಳಲ್ಲಿ ಶ್ರೀಕೃಷ್ಣ ಪಾರಿಜಾತದ ಪ್ರದರ್ಶನ ನೀಡಿ ಹೆಸರು ಗಳಿಸಿ ತನ್ನ ರಂಗ ಕಲಾಸೇವೆಯನ್ನು ಮುಂದುವರಿಸಿದ್ದ. ಕೃಷ್ಣಪ್ಪ ಹುಡೇದಮನಿಯವರ ಶ್ರೀಕೃಷ್ಣ ಪಾರಿಜಾತ ಮೇಳದಲ್ಲಿ ರಾಮಪ್ಪ ಲಕ್ಷ್ಮಪ್ಪ ದಾಸಪ್ಪನವರ ಎನ್ನುವವ ಸತ್ಯಭಾಮಾ, ಕೊರವಂಜಿ ಪಾತ್ರ ನಿರ್ವಹಿಸುತ್ತಿದ್ದ ಕಲಾವಿದ. ಕೃಷ್ಣಪ್ಪ ಹುಡೇದಮನಿಯವರ ಅಳಿಯ ಹನುಮಂತ ತಿಮ್ಮಪ್ಪ ಕಟಗೇರಿ ಎಂಬ ೮ ವರ್ಷದ ಬಾಲಕ ಗೋಪಾಲನ ಪಾತ್ರವನ್ನು ಈ ಪಾರಿಜಾತ ಮೇಳದಲ್ಲಿ ಮಾಡುತ್ತಿದ್ದನು. ಕೃಷ್ಣನ ಪಾತ್ರ ಮತ್ತು ಭಾಗವತ ಪಾತ್ರಗಳನ್ನು ಕೃಷ್ಣಪ್ಪ ಹುಡೇದಮನಿಯವರೇ ನಿರ್ವಹಿಸುತ್ತಿದ್ದರು. ಇವರ ಕಂಪನಿ ೧೦-೧೫ ವರ್ಷಗಳವರೆಗೆ ಪ್ರದರ್ಶನ ನೀಡಿತು. ಮುಂದೆ ಕಲಾವಿದರ ಕೊರತೆ ಹಾಗೂ ಕೃಷ್ಣಪ್ಪ ಹುಡೇಮನಿಯವರ ವಯೋಗುಣಧರ್ಮದ ಅಶಕ್ತತೆಯಿಂದ ಮೇಳ ನಿಂತಿತು.

ಹಡಪದ ಹೊನ್ನಪ್ಪ, ಪಿಂಜಾರ ಹಸನಪ್ಪ, ಬಡಿಗೇರ ತಿರಕಪ್ಪ ಮುಂತಾದವರು ಕೂಡಿಕೊಂಡು ಊರಲ್ಲಿಯೇ ಇನ್ನೊಂದು ಪಾರಿಜಾತ ತಂಡವನ್ನು ಕಟ್ಟಿ ಒಂದು ಮಿತಿಯಲ್ಲಿ ರಂಗಸೇವೆ ಮಾಡಿರುವುದನ್ನು ಅಲ್ಲಗಳೆಯುವಂತಿಲ್ಲ.

ನಿಂಗಪ್ಪ ಗೌಡಪ್ಪ ಬಾಳಕ್ಕನವರ ಹಾಗೂ ಮುದುಕಪ್ಪ ಮಾಚಾ ಇವರು ವೃತ್ತಿರಂಗಭೂಮಿಯ ಆಕರ್ಷಣೆಗೆ ಒಳಗಾಗಿ 'ಮೈಲಾರ ಲಿಂಗೇಶ್ವರ' ನಾಟ್ಯ ಸಂಘ, ಬೆನಕಟ್ಟಿ ಎಂಬ ತಂಡ ಕಟ್ಟಿ ಅನೇಕ ರಂಗ ಪ್ರಯೋಗಗಳನ್ನು ಮಾಡಿ ತಕ್ಕ ಮಟ್ಟಿಗೆ ಯಶಸ್ಸು ಪಡೆದದ್ದೂ ಗಮನಾರ್ಹ. ಉತ್ಸವ-ಜಾತ್ರೆಗಳಲ್ಲಿ ಮನರಂಜನೆಗಾಗಿ ಪ್ರದರ್ಶನ ಮಾಡಲು ಹುಟ್ಟಿಕೊಂಡ ಹವ್ಯಾಸಿ ತಂಡ ಇದು. ಪ್ರಸಿದ್ಧ ರಂಗಗೀತ ಕಲಾವಿದೆಯಾದ ಸುಭದ್ರಮ್ಮ ಮನಸೂರ ಅವರು ಕೆಲವು ಕಾಲ ಈ ಕಂಪನಿಯ ಖ್ಯಾತ ಕಲಾವಿದೆಯಾಗಿ ನಟಿಸುತ್ತಿದ್ದಳು. ಮುಂದೆ ೭-೮ ವರ್ಷಗಳಲ್ಲಿ ಕಂಪನಿ ಪಾಲುದಾರಿಕೆಯಲ್ಲಿ ಮನಸ್ತಾಪ ಉಂಟಾಗಿ ಕುಂಟುತ್ತಾ ತೇವಳುತ್ತ ನಡೆದು ಕೊನೆಗೆ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ ಕಂಪನಿ ನಿಂತು ಬಿಟ್ಟಿತು.

'ಚಿತ್ರಾಂಗದಾ' 'ಬಾಲಚಂದರ' 'ಜೀವನಯಾತ್ರೆ' ಮುಂತಾದ ನಾಟಕಗಳನ್ನು ಪ್ರದರ್ಶನ ಮಾಡಿ ಜನಮನ್ನಣೆಯನ್ನು ಪಡೆದ ಇನ್ನೊಂದು ಹವ್ಯಾಸಿ ರಂಗ ತಂಡ ಊರಲ್ಲಿ ಇತ್ತು. ಕೃಷ್ಣಪ್ಪ ಯಂಕಪ್ಪ ಯಡಹಳ್ಳಿ, ಹನುಮಂತಗೌಡ ರಾಮಚಂದ್ರಪ್ಪ ಅರಿಷಿಣಗೋಡಿ, ಶಿವಪ್ಪ ದಾಸಪ್ಪನವರ, ಲಕ್ಷ್ಮಣ ನಿಂಗನಗೌಡ ಪಾಟೀಲ, ಹನಮಂತ ಪುಂಡಲಿಕಪ್ಪ ಬಾಳಕ್ಕನವರ ಆ ತಂಡದ ಪ್ರಮುಖ ಕಲಾವಿದರಾಗಿದ್ದರು. 'ಜೀವನ ಯಾತ್ರೆ' ನಾಟಕದ ಖಳನಾಯಕ ಬಿಹಾರಿಯ ಪಾತ್ರಧಾರಿ ಕೃಷ್ಣಪ್ಪ ಯಂಕಪ್ಪ ಯಡಹಳ್ಳಿಯವರು ತಮ್ಮ ಅದ್ಭುತವಾದ ವಾಕ್‌ಚಾತುರ್ಯ ಹಾಗೂ ಅಭಿನಯ ಪ್ರೌಢಿಮೆಯಿಂದ ಬಿಹಾರಿ ಪಾತ್ರಕ್ಕೆ ಮೆರಗು ತಂದುಕೊಟ್ಟ ಕಲಾವಿದ. ಶ್ರೀಕೃಷ್ಣ ಪಾರಿಜಾತ ಮೇಳವನ್ನು ಕಟ್ಟಿಕೊಂಡ ಹಡಪದ ಹೊನ್ನಪ್ಪನ ಕರಡಿ ಮಜಲಿನ ಮೇಳ, ಪಿಂಜಾರ ಹಸನಪ್ಪನ ಹಲಗೆ ಮೇಳ, ಬಡಿಗೇರ ತಿರಕಪ್ಪನ ಭಜನಾ ಮೇಳಗಳಿಂದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪಡೆದ ಊರು ತನ್ನ ಕಲಾ ಸೇವೆಯನ್ನು ಮುಂದುವರಿಸಿತ್ತು. ಇವೆಲ್ಲ ಪ್ರಭಾವಗಳು ಬಾಲ್ಯದಲ್ಲಿ ಭೀಮಪ್ಪನ ಮೇಲೆ ಪ್ರಭಾವ ಬೀರಿರಲು ಸಾಕು.

ಬೆನಕಟ್ಟಿಯಲ್ಲಿದ್ದ ಸೋದರಮಾವ ಕೃಷ್ಣಪ್ಪ ಹುಡೇದಮನಿ ಮೇಳ ಕಟ್ಟಿಕೊಂಡು ಊರೂರು ಸುತ್ತುತ್ತಿರುವಾಗ ಬಾಲಕ ಭೀಮಪ್ಪ ಕುತೂಹಲಕ್ಕೆ ಅವರ ಮೇಳದ ಜೊತೆ ಹೋಗುತ್ತಿದ್ದ. ಅವಕಾಶ ಸಿಕ್ಕಾಗ ಚಿಕ್ಕಮಟ್ಟ ಪಾತ್ರಗಳನ್ನು ಮಾಡುತ್ತಿದ್ದ.

ಶಿಕ್ಷಣ: ಬೆನಕಟ್ಟಿಯ ಪ್ರಾಥಮಿಕ ಶಾಲೆಯಲ್ಲಿ ಜಾಣ ಮತ್ತು ಚುರುಕು ಬುದ್ಧಿಯ ಹುಡುಗನೆನಿಸಿಕೊಂಡ ಭೀಮಪ್ಪ ಮುಂದಿನ ವಿದ್ಯಾಭ್ಯಾಸಕ್ಕಾಗಿ ಉತ್ತರ ಕರ್ನಾಟಕದಲ್ಲಿಯೇ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದಾದ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಹೈಸ್ಕೂಲಿನಲ್ಲಿ ತನ್ನ ಹದಿಮೂರನೆಯ ವಯಸ್ಸಿನಲ್ಲಿ ಪ್ರವೇಶ ಪಡೆದನು. ಬಾಗಲಕೋಟೆಯಲ್ಲಿ ಕಲಿಯುತ್ತಿರುವ ಮಗನ ವಿದ್ಯಾಭ್ಯಾಸದಿಂದ

ತಂದೆ-ತಾಯಿಗಳು ಸಂತೋಷಪಟ್ಟರು. ಮನೆಯಲ್ಲಿ ಇವನಾದರೂ ಒಬ್ಬ ಕಲಿತು ದೊಡ್ಡ ಸರಕಾರಿ ಹುದ್ದೆಯನ್ನೇರಲಿ ಎಂದು ಕನಸು ಹೊತ್ತು ತಂದೆ ರಂಗಪ್ಪ ಭೀಮಪ್ಪನ ಓದಿಗಾಗಿ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿದನು. ರಂಗಪ್ಪನವರು ೨೦ ಎಕರೆ ಜಮೀನಿನ ಒಡೆಯನಾಗಿದ್ದರೂ ಮಳೆಯಾದರೆ ಬೆಳೆ ಮಳೆ ಇಲ್ಲದಿದ್ದರೆ ಬೆಳೆಯೇ ಇಲ್ಲ. ಒಣ ಬೇಸಾಯದಿಂದ ಒಂದೊಂದು ವರ್ಷ ಆರ್ಥಿಕ ತೊಂದರೆಗಳನ್ನು ಅನುಭವಿಸುತ್ತಿದ್ದರು. ಹೆಚ್ಚು ಅಂಕಗಳನ್ನು ಪಡೆದ ೧೦ ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಬಿ.ಆರ್. ಅರಿಷಿಣಗೋಡಿಯವರು ಏಳನೆಯ ಸ್ಥಾನವನ್ನು ಪಡೆದು ೧೯೫೦ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯನ್ನು ಬಸವೇಶ್ವರ ಹೈಸ್ಕೂಲ್‌ನಲ್ಲಿ ಪಾಸ್ ಮಾಡಿದರು. ಇದರಿಂದ ತಂದೆ ರಂಗಪ್ಪನವರಿಗೆ ಆದ ಆನಂದಕ್ಕೆ ಪಾರವೇ ಇಲ್ಲ. ಇಂಥ ಸರಳ, ಸಜ್ಜನ, ನಿರಾಡಂಬರ, ಕಾಯಕ ನಿಷ್ಠ(ಕೃಷಿ) ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ ತಂದೆಯ ಬಗ್ಗೆ ಬಿ.ಆರ್. ಅರಿಷಿಣಗೋಡಿಯವರಿಗೆ ವಿಶೇಷ ಗೌರವವಿತ್ತು.

ಡಾಕ್ಟರನೋ, ಇಂಜನೀಯರನೋ, ನ್ಯಾಯವಾದಿಯೋ ಆಗಬೇಕೆಂದು ತಂದೆಯ ಒತ್ತಾಸೆ. ಹೀಗಾಗಿ ಸಾಹಿತ್ಯದ ಒಲವಿದ್ದರೂ ವಿಜ್ಞಾನದ ವಿದ್ಯಾರ್ಥಿಯಾಗಿ ಅರಿಷಿಣಗೋಡಿಯವರು ಕಾಲೇಜು ಸೇರಿದರು. ಹೈಸ್ಕೂಲ್‌ನಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಭೀಮಪ್ಪನಿಗೆ ಕಾಲೇಜಿನಲ್ಲಿ ಸಿರಸಂಗಿ ಲಿಂಗರಾಜರ ಹೆಸರಿನಲ್ಲಿದ್ದ ೫೨ ರೂಪಾಯಿ ಶಿಷ್ಯವೇತನ ದೊರೆಯುತ್ತಿತ್ತು.

ಭೀಮಪ್ಪ ಸಾಯನ್ಸ್ ಇಂಟರ್‌ಮಿಡಿಯೇಟ್ ಓದುತ್ತಿರುವಾಗ ಕಾಲೇಜು ಪ್ರಾರಂಭವಾಗಿ ೨-೩ ತಿಂಗಳು ಹೋಗಿರಬೇಕು. ಗ್ಯಾಸ್ಟ್ರಿಕ್ ಟ್ರಬಲ್ ಹೆಚ್ಚಾಗಿ ಹೊಟ್ಟೆನೋವು ಪ್ರಾರಂಭವಾಯಿತು. ಅಲ್ಸರ್ ರೋಗದಿಂದ ಉಂಟಾದ ಹೊಟ್ಟೆ ನೋವನ್ನು ತಾಳಲಾರದೇ ಹೆಚ್ಚಿನ ಚಿಕಿತ್ಸೆಗಾಗಿ ಮುಂಬಯಿಗೆ ಹೋಗಬೇಕಾಯಿತು. ಬಾಗಲಕೋಟೆಯವರೇ ಆದ ಡಾ. ಕುಪ್ಪಸ್ತ ಅವರು ಮುಂಬಯಿಯ ಭಾಟಿಯಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಡಾ. ಕುಪ್ಪಸ್ತ ಅವರ ವಿಶೇಷ ಕಾಳಜಿಯಿಂದ ೧೫-೨೦ ದಿನಗಳಲ್ಲಿ ಹುಡುಗನ ಆರೋಗ್ಯ ಸುಧಾರಿಸಿತು. ಮನಸ್ಸಿಗೆ ಮುದನೀಡುವ ಸಂಗೀತ, ಸಾಹಿತ್ಯ ಮುಂತಾದ ಚಟುವಟಿಕೆಗಳಲ್ಲಿ ತೊಡಗಿದರೆ, ಉದರ ಬೇನೆ ಮತ್ತೆ ಮರುಕಳಿಸುವುದಿಲ್ಲ ಎಂಬ ಡಾಕ್ಟರ್ ಸಲಹೆಯಂತೆ ಮುಂಬಯಿಯಿಂದ ಬರುವಾಗ ಒಂದು ಹಾರ್ಮೋನಿಯಂ ಖರೀದಿಸಿಕೊಂಡು ಬಂದರು.

ಅರಿಷಿಣಗೋಡಿಯವರು ಚಿಕಿತ್ಸೆಗಾಗಿ ಮುಂಬಯಿಗೆ ಹೋದ ವೇಳೆಯಲ್ಲಿ ಕಾಲೇಜಿನಲ್ಲಿ ಮಧ್ಯಂತರ ಅವಧಿಯ ಪರೀಕ್ಷೆಗಳು ಮುಗಿದು ಹೋಗಿದ್ದವು. ಇದರಿಂದ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳುವ ಅರ್ಹತೆಯನ್ನು ಕಳೆದುಕೊಳ್ಳಬೇಕಾಯಿತು. ಒಂದು ವರುಷ ಹಾಳು ಮಾಡಿತಲ್ಲ ಈ ಉದರಬೇನೆ ಎಂದು ತರುಣ ವಯಸ್ಸು ಮರುಗಿತು. ಹೊಲ ಮನೆಯಲ್ಲಿ ಕೆಲಸ ಹಾಗೂ ಸಂಗೀತದ ಅಭ್ಯಾಸವನ್ನು ಮಾಡುತ್ತಾ ಒಂದು ವರ್ಷ ಊರಲ್ಲಿ ಕಾಲ ಕಳೆದು ಮರು ವರುಷ ಮತ್ತೆ ಕಾಲೇಜು ಸೇರಿದರು. ಒಂದು ವರುಷ ಕಾಲೇಜು ಬಿಟ್ಟದ್ದರಿಂದ ಇವರ ಜೊತೆ ಕಲಿಯುತ್ತಿದ್ದ ಸಹಪಾಠಿಗಳು ಮುಂದೆ ಹೋಗಿದ್ದರು.

ಅಲ್ಲದೇ ಕಾಲೇಜು ಆವರಣದಲ್ಲಿ ಕಳೆದ ವರುಷ ಇದ್ದ ಸಹಪಾಠಿಗಳು ಇವರನ್ನು ಕೀಳು ದೃಷ್ಟಿಯಿಂದ ನೋಡುವಂತಾಯಿತು. ಕೊಂಕು ನುಡಿಗಳಿಂದ ಮನಸ್ಸಿಗೆ ನಾಟುವ ರೀತಿಯಲ್ಲಿ ಮಾತನಾಡುವ ಗೆಳೆಯರ ವರ್ತನೆಯಿಂದ ಮೃದುಸ್ವಭಾವದ ಅರಿಷಿಣಗೋಡಿಯವರ ಮನಸ್ಸು ರೋಸಿಹೋಗಿ ಕಾಲೇಜಿಗೆ ಶರಣು ಹೊಡೆಯುವ ನಿರ್ಧಾರ ಮಾಡಿದರು. ಕಾಲೇಜು ಬಿಟ್ಟು ಊರಿಗೆ ಹೋದರೆ ತಂದೆ ರಂಗಪ್ಪನವರು ಶಿಕ್ಷಿಸಬಹುದೆಂದು ಭೀಮಪ್ಪ ಭಯಗೊಂಡನು. ಅಲ್ಲದೇ ಶಾಲೆ ಕಲಿಯಲಿಕ್ಕೆ ಆಗದೇ ಬಿಟ್ಟು ಓಡಿ ಬಂದ ಹುಡುಗನೆಂದು ಆಡಿಕೊಳ್ಳುವರಿಗೆ ವಸ್ತುವಾಗುತ್ತೇನೆಂದು ತಿಳಿದು ಬೆನಕಟ್ಟಿಗೆ ಹೋಗದೇ ಇರುವ ನಿರ್ಧಾರ ಮಾಡಿದನು. ಅಕ್ಕನ ಊರು ಕಮತಗಿಗೆ ಹೋಗುವುದು ಸೂಕ್ತವೆನಿಸಿ ನೇರವಾಗಿ ಶಾಲೆ ಬಿಟ್ಟು ಕಮತಗಿಗೆ ಬಂದನು.

ಕಮತಗಿಯಲ್ಲಿ ಪಂಚಾಕ್ಷರ ಗವಾಯಿಗಳ ಶಿಷ್ಯ ಗದಿಗೆಪ್ಪ ಮಾಸ್ತರರ ಹತ್ತಿರ ಸಂಗೀತಾಭ್ಯಾಸ ಮಾಡಹತ್ತಿದರು. ಬಾಗಲಕೋಟಿಯ ವಿದ್ಯಾರ್ಥಿ ಜೀವನದಲ್ಲಿ ಬಿಡುವಿನ ವೇಳೆಯಲ್ಲಿ ಮಲ್ಲಿಗೆ, ಕಸ್ತೂರಿ ಮುಂತಾದ ಮಾಸಿಕ ಪತ್ರಿಕೆಗಳನ್ನು ಓದುವ ರೂಢಿಯನ್ನಿಟ್ಟುಕೊಂಡಿದ್ದರು. ಕ್ರಮೇಣ ಅನಕೃ, ಬಸವರಾಜ ಕಟ್ಟಿಮನಿಯಂಥವರ ಎಡಪಂಥೀಯ ಧೋರಣೆಯ ಕಾದಂಬರಿಗಳನ್ನು ಓದಿ ಪ್ರಗತಿಶೀಲ ಮನೋಭಾವನೆಗಳನ್ನು ಬೆಳೆಸಿಕೊಂಡ ತರುಣನಲ್ಲಿ ವಯಸ್ಸು ಮಾಗಿದಂತೆ ವಿಚಾರಗಳೂ ಮಾಗಿದವು.

ಕಮತಗಿ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ದೊಡ್ಡ ಹಳ್ಳಿ ಮತ್ತು ಬೆನಕಟ್ಟಿಗೆ ೮ ಕಿ.ಮೀ. ಅಂತರದಲ್ಲಿರುವ ಊರು. ಬಾಗಲಕೋಟೆಯಿಂದ ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿ ಮಲಪ್ರಭಾನದಿ ದಡದ ಮೇಲೆ ಇಲಕಲ್ಲಿಗೆ ಹೋಗುವ (ಹುನಗುಂದ-ಬೆಳಗಾವಿ ರಸ್ತೆ) ಮಾರ್ಗದಲ್ಲಿದೆ. ಹುಚ್ಚೇಶ್ವರ ಆ ಊರಿನ ಪ್ರಮುಖ ದೇವರು. ಪ್ರತಿವರ್ಷ ಭಾರತ ಹುಣ್ಣಿಮೆಯ ಐದನೇ ದಿನಕ್ಕೆ ಹುಚ್ಚೇಶ್ವರ ಜಾತ್ರೆ ನಡೆಯುವದು. ಹುಚ್ಚೇಶ್ವರ ಹೈಸ್ಕೂಲ್, ವೃತ್ತಿಪರ ತರಬೇತಿ, ಮಹಿಳಾ ಬಿ.ಎಡ್ ಕಾಲೇಜುಗಳನ್ನು ಮಠದ ಉಸ್ತುವಾರಿಯಲ್ಲಿ ಈಗಿನ ಸ್ವಾಮಿಗಳು ಇವತ್ತಿನವರೆಗೂ ನಡೆಸಿಕೊಂಡು ಹೋಗುತ್ತಿದ್ದಾರೆ.

ಶಾಲೆ ಬಿಟ್ಟು ಕಮತಗಿಗೆ ಬಂದು ೫-೬ ತಿಂಗಳು ಕಳೆದಿರಬೇಕು. ಮಾವನ ಮನೆಯಲ್ಲಿ ಖಾಲಿ ಕುಳಿತು ತಿನ್ನುವದು ಸರಿಯಲ್ಲವೆಂದು ತಿಳಿದು ಅರಿಷಿಣಗೋಡಿಯವರು ಏನಾದರೊಂದು ಉದ್ಯೋಗ ಮಾಡುತ್ತೇನೆಂದು ಮಾವ ಗಿರಿಯಪ್ಪನವರ ಮುಂದೆ ಪ್ರಸ್ತಾಪ ಮಾಡಿದರು. ಮಾವನವರ ಸಲಹೆಯಂತೆ ಕಿರಾಣಿ ಅಂಗಡಿ ಪ್ರಾರಂಭ ಮಾಡಿದರು.

ದಾಂಪತ್ಯ

ಬಾಲ್ಯದಲ್ಲಿ ಅಣ್ಣ ರಾಯಪ್ಪನ ಮದುವೆಯ ಜೊತೆಗೆ ಕಡೆಹುಟ್ಟು ಕಡೆಬಿಡಬಾರದು ಎಂದು ಅಕ್ಕ ಲಕ್ಷ್ಮೀಬಾಯಿ ಮಗಳು ರೇಣುಕಾಳ ಜೊತೆಗೆ ಬಿ.ಆರ್. ಅರಿಷಿಣಗೋಡಿಯವರ ಮದುವೆಯನ್ನೂ

ಹಿರಿಯರು ಬೆನಕಟ್ಟಿಯಲ್ಲಿರುವಾಗಲೇ ಮಾಡಿದ್ದರು. ಬಿ.ಆರ್. ಅರಿಷಿಣಗೋಡಿಯವರು 'ಹೆಗಲ ಮೇಲೆ ಎತ್ತಿಕೊಂಡು ಆಡಿಸುತ್ತಿದ್ದ ಚಿಕ್ಕ ಹುಡುಗಿ ರೇಣುಕಾಳನ್ನು ನನಗೆ ಹೆಂಡತಿಯನ್ನಾಗಿ ಮಾಡಿದರು' ಎನ್ನುವರು. ಶಾಲೆ ಬಿಟ್ಟು ಕಮತಗಿಗೆ ಬಂದು ಕಿರಾಣಿ ಅಂಗಡಿಯನ್ನು ನಡೆಸುತ್ತಿರುವಾಗಲೇ ಬಿ.ಆರ್. ಅರಿಷಿಣಗೋಡಿಯವರು ಸಾಂಸಾರಿಕ ಬದುಕನ್ನು ಹೆಂಡತಿ ರೇಣುಕಾಳ ಜೊತೆ ಶುರು ಮಾಡಿದರು. ಭೀಮಪ್ಪ-ರೇಣುಕಾಳ ದಾಂಪತ್ಯದ ಫಲವಾಗಿ ಇವರಿಗೆ ನಾಲ್ಕು ಜನ ಗಂಡುಮಕ್ಕಳು ಜನಿಸಿದರು. ಹಿರಿಯವನಾದ ಹುಚ್ಚೇಶ ಮನೆಯಲ್ಲಿ ಸಂಗ್ರಹಿಸಿಟ್ಟ ಹತ್ತಿ ಕೋಣೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಅಗ್ನಿಗಾಹುತಿಯಾಗಿ ಅಕಾಲಿಕ ಮರಣವನ್ನಪ್ಪಿದ. ಈ ಅನಾಹುತವನ್ನು ಕಣ್ಣಾರೆ ಕಂಡ ಅಣ್ಣ ರಾಯಪ್ಪನ ಮಗಳು ಪದ್ಮಾವತಿ ಮಾನಸಿಕ ಆಘಾತಕ್ಕೊಳಗಾಗಿ ಇವತ್ತಿಗೂ ಬುದ್ಧಿಮಾಂದ್ಯಳಾಗಿದ್ದಾಳೆ. ಎರಡನೆಯವ ವೆಂಕಟೇಶ, ಮೂರನೆಯವ ಶಶಿಧರ, ನಾಲ್ಕನೆಯವ ಶ್ರೀಕಾಂತ. ಇವರು ಪ್ರಾಥಮಿಕ ಶಿಕ್ಷಣವನ್ನು ಕಮತಗಿಯಲ್ಲಿಯೇ ಪೂರೈಸಿದರು. ನಾಟಕ ಕಂಪನಿಯ ಬೆನ್ನು ಹತ್ತಿ ಯಾವಾಗಲೂ ತಿರುಗಾಟದಲ್ಲಿರುತ್ತಿದ್ದ ಬಿ.ಆರ್. ಅರಿಷಿಣಗೋಡಿಯವರು ತಮ್ಮ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದೆಂದು ಭಾವಿಸಿದರು. ಅಣ್ಣ ರಾಯಪ್ಪ ಹಾಗೂ ತಮ್ಮ ಭೀಮಪ್ಪ, ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಬಾಗಲಕೋಟೆಯಲ್ಲಿ ಕಂದಾಯ ಉಪವಿಭಾಗಾಧಿಕಾರಿ ಕಾರ್ಯಾಲಯದ ಎದುರುಗಡೆ ಇದ್ದ ಭವ್ಯವಾದ ಒಂದು ಮನೆಯನ್ನು ಖರೀದಿಸಿದರು. ಹೆಂಡತಿ ರೇಣುಕಾಳು ಮಕ್ಕಳ ಉನ್ನತ ಶಿಕ್ಷಣ ಜವಾಬ್ದಾರಿ ಹೊತ್ತು ಬಾಗಲಕೋಟೆಯಲ್ಲಿದ್ದರೆ, ರಾಯಪ್ಪನ ಹೆಂಡತಿ ದೊಡ್ಡವ್ವ ಒಕ್ಕಲುತನವನ್ನು ನೋಡಿಕೊಳ್ಳಲು ಮಾವ ರಂಗಪ್ಪನ ಜೊತೆ ಬೆನಕಟ್ಟಿಯಲ್ಲಿಯೇ ಇದ್ದಳು. ಯಾಕೆಂದರೆ ಕಂಪನಿಯ ತಿರುಗಾಟದ ಜೊತೆ ತಾಯಿ ಕಾಶವ್ವ ಹಾಗೂ ಬುದ್ಧಿಮಾಂದ್ಯಳಾದ ಪದ್ಮಾವತಿಯರು ಇರುತ್ತಿದ್ದರು. ಬಿ.ಆರ್. ಅರಿಷಿಣಗೋಡಿ ಯವರ ಹಿರಿಯ ಮಗ ವೆಂಕಟೇಶ ಬಿ.ಎಸ್ಸಿ. ಪದವೀಧರ. ಶಶಿಧರ ಡಿಪ್ಲೋಮಾ ಮೆಕ್ಯಾನಿಕಲ್ ತರಬೇತಿ ಪಡೆದಿದ್ದಾನೆ ಹಾಗೂ ನೀನಾಸಂ ರಂಗ ಶಿಕ್ಷಣವನ್ನು ಹೊಂದಿದ್ದಾನೆ. ಶ್ರೀಕಾಂತ ಎಂ.ಬಿ.ಬಿ.ಎಸ್. ಪದವೀಧರ.

ಸಧ್ಯ ಡಾ. ಶ್ರೀಕಾಂತ ಚಿಕ್ಕಮಕ್ಕಳ ತಜ್ಞರಾಗಿ ಮಹಾಲಿಂಗಪುರದಲ್ಲಿ ವೈದ್ಯವೃತ್ತಿಯಲ್ಲಿ ಮುಂದುವರೆದಿದ್ದಾನೆ. ಶಶಿಧರ ಕಮತಗಿಯಲ್ಲಿ ಒಕ್ಕಲುತನ ಹಾಗೂ ಶ್ರೀ ಹುಚ್ಚೇಶ್ವರ ಚಿತ್ರಮಂದಿರದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾನೆ. ಹಿರಿಯವನಾದ ವೆಂಕಟೇಶ ಮಹಾಲಿಂಗಪುರದಲ್ಲಿ ತಮ್ಮನ ಆಸ್ಪತ್ರೆಯಲ್ಲಿ ಔಷಧ ಅಂಗಡಿ ನಡೆಸುತ್ತಿದ್ದವನು ೨೦೧೧ರಲ್ಲಿ ಸಕ್ಕರೆ ಖಾಯಿಲೆ ಮತ್ತು ಯಕೃತ್ತಿನ ಅರ್ಬುದ ರೋಗಕ್ಕೆ ತುತ್ತಾಗಿ ಮರಣವನ್ನಪ್ಪಿದನು. ಅಣ್ಣ ರಾಯಪ್ಪನವರ ಮಕ್ಕಳಲ್ಲಿ ಹಿರಿಯವನಾದ ಕೃಷ್ಣಪ್ಪ ಬಾಗಲಕೋಟೆಯ ಸಾಸನೂರ ಪೆಟ್ರೋಲ್ ಬಂಕಿನ ಹತ್ತಿರ ಇದ್ದ ಬೇವಿನ ಗಿಡ ಬಿರುಗಾಳಿಗೆ ಮೈ ಮೇಲೆ ಬಿದ್ದು ಬೆನ್ನು ಹುರಿ ಮುರಿದು ಅಕಾಲಿಕ ಮರಣವನ್ನಪ್ಪಿದನು. ಎರಡನೆಯವ ಶಿವಪ್ಪ ಒಕ್ಕಲುತನವನ್ನು

ಮಾಡುತ್ತಿದ್ದಾನೆ. ಮೂರನೆಯವ ರವಿ ಬಿ.ಇ. ಪದವೀಧರನಾಗಿದ್ದರೂ ಅಣ್ಣ ಕೃಷ್ಣಪ್ಪನ ಸಾವಿನ ನಂತರ ಒಕ್ಕಲುತನ, ಪೌಲ್ಟ್ರಿ ಫಾರ್ಮ್ ನಡೆಸಿಕೊಂಡು ಹೋಗುತ್ತಿದ್ದಾನೆ. ನಾಲ್ಕನೆಯ ಮಗ ಅಶೋಕ ಟೆಕ್ಸ್‌ಟೈಲ್ ಡಿಪ್ಲೋಮಾ ಮಾಡಿ ಬೆಂಗಳೂರಿನ ಯಲಹಂಕದಲ್ಲಿ ಸಧ್ಯ ಫ್ಯಾಕ್ಟರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ. ಬಿ.ಆರ್. ಅರಿಷಿಣಗೋಡಿಯವರ ಕುಟುಂಬದಲ್ಲಿ ನಡೆದ ಮಕ್ಕಳ ಅಕಾಲಿಕ ಸಾವು ಈ ದಂಪತಿಗಳನ್ನು ಕೊಂಚ ಜರ್ಜರಿತರನ್ನಾಗಿ ಮಾಡಿದೆ. ವೃತ್ತಿರಂಗಭೂಮಿಯಲ್ಲಿದ್ದುಕೊಂಡು ಬಿ.ಆರ್. ಅರಿಷಣಗೋಡಿಯವರು ಹೆಂಡತಿ, ಮಕ್ಕಳನ್ನು ನಿರ್ಲಕ್ಷಿಸದೇ ಇದ್ದುದರಿಂದ ಹೆಂಡತಿ ಮತ್ತು ಮಕ್ಕಳ ಪ್ರೀತಿ-ಗೌರವಗಳಿಗೆ ಪಾತ್ರರಾಗಿದ್ದಾರೆ.

ರಂಗಭೂಮಿ ಆಕರ್ಷಣೆ

ಹಿಂದೆಯೇ ಹೇಳಿದಂತೆ ಬಿ.ಆರ್. ಅರಿಷಿಣಗೋಡಿಯವರು ಶಾಲೆ ಬಿಟ್ಟು ಕಮತಗಿಗೆ ಬಂದು ಮಾವನವರ ಸಲಹೆಯಂತೆ ಕಿರಾಣಿ ಅಂಗಡಿ ವ್ಯಾಪಾರ ಮಾಡತೊಡಗಿದರು. ಇವರ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ವ್ಯವಹಾರ ಕೌಶಲ್ಯಗಳಿಂದ ವ್ಯಾಪಾರ ಚೆನ್ನಾಗಿಯೇ ನಡೆದಿತ್ತು. ಇಂಥ ಸಂದರ್ಭದಲ್ಲಿ ಅವರ ಬಾಳಿಗೆ ತಿರುವು ಕೊಡುವ ಒಂದು ಘಟನೆ ನಡೆಯಿತು. ಊರ ಗೌಡನಿಗೆ ನಾಗರ ಪಂಚಮಿ ಹಬ್ಬದಲ್ಲಿ ಕಿರಾಣಿ ಉದ್ರಿಯನ್ನು ಕೊಡಲಿಲ್ಲವೆಂಬ ಕಾರಣಕ್ಕೆ ಗೌಡನ ವಿರೋಧ ಕಟ್ಟಿಕೊಳ್ಳಬೇಕಾಯಿತು. ಉದ್ರಿ ಕೊಡದೇ ಇದ್ದುದರಿಂದ ಅವಮಾನಿತನಾದ ಗೌಡ ಬಿ.ಆರ್. ಅರಿಷಿಣಗೋಡಿಯವರ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದನು. ಅದಕ್ಕಾಗಿ ಒಂದು ಜಾಲವನ್ನು ನಿರ್ಮಿಸಿ ಅರಿಷಿಣಗೋಡಿಯವರನ್ನು ಹಣಿಯಲು ಉದ್ಯುಕ್ತನಾದ. ಊರಿಗೆ ತೂಕ ಮತ್ತು ಅಳತೆಯ ಅಧಿಕಾರಿಗಳು ಬಂದಾಗ ಅರಿಷಿಣಗೋಡಿಯವರ ತಕ್ಕಡಿ ಮತ್ತು ಕಲ್ಲುಗಳು ಸರಿಯಾಗಿದ್ದರೂ ಸರಿಯಾಗಿಲ್ಲವೆಂದು ಕುತಂತ್ರಿಯಾದ ಗೌಡ ತೂಕ ಮತ್ತು ಅಳತೆಯ ಅಧಿಕಾರಿ ವಸ್ತ್ರದ ಎಂಬವನ ಮುಖಾಂತರ ಕೇಸು ಹಾಕಿಸಿದ. ಅರಿಷಿಣಗೋಡಿಯವರು ತಮ್ಮ ಮೇಲೆ ಹಾಕಿದ ಕೇಸು ಆಧಾರ ರಹಿತವಾದದ್ದು ಎಂದು ವಕೀಲರ ಮುಖಾಂತರ ಹುನಗುಂದ ಕೋರ್ಟಿನಲ್ಲಿ ಸಾಬೀತುಪಡಿಸಿ ನಿರಪರಾಧಿಗಳಾದರು. ಈ ಘಟನೆಯಿಂದ ಅರಿಷಿಣಗೋಡಿಯವರ ಸ್ವಾಭಿಮಾನ ಜಾಗೃತವಾಯಿತು. ಗೌಡಕಿಯ ಅಮಲಿನಲ್ಲಿದ್ದ ಗೌಡನ ಮೇಲೆ ನೇರವಾಗಿ ಸೇಡು ತೀರಿಸಿಕೊಳ್ಳುವುದು ಸೂಕ್ತವಾದ ಮಾರ್ಗವಲ್ಲ, ಎದುರು ಹಾಕಿಕೊಂಡರೆ ಬದುಕುವುದೇ ಕಷ್ಟವಾದೀತು. ಮನಸ್ಸಿನಲ್ಲಿಯೇ ಬಿ.ಆರ್. ಅರಿಷಿಣಗೋಡಿಯವರು ಯಾವ ರೀತಿಯಲ್ಲಿ ಗೌಡನ ಈ ಕುಕೃತ್ಯವನ್ನು ಪ್ರತಿಭಟಿಸಬೇಕು ಎಂದು ಯೋಚಿಸತೊಡಗಿದರು.

ಸ್ವಾಭಿಮಾನ ಮನುಷ್ಯನ ಎದೆಯಾಳದ ನೋವು ಚೈತನ್ಯವಾಗಿ ಪರಿವರ್ತನೆಯಾಗುತ್ತದೆ. ತಮ್ಮ ಜೀವನದಲ್ಲಿ ನಡೆದ ಈ ಘಟನೆಯನ್ನು ಆಧಾರವಾಗಿಟ್ಟುಕೊಂಡು ನಾಟಕ ಬರೆದು ನಾಲ್ಕು ಜನರ ಮುಂದೆ ಪ್ರದರ್ಶನ ಮಾಡಿ ಗೌಡನ ಕುತಂತ್ರವನ್ನು ಬಯಲು ಮಾಡಿದರೆ ಸೇಡು ತೀರಿಸಿಕೊಂಡಂತಾಗುತ್ತದೆಂದು

ಅರಿಷಿಣಗೋಡಿಯವರು ಭಾವಿಸಿದರು. ತಮ್ಮ ಬದುಕಿನಲ್ಲಿ ನಡೆದ ಘಟನೆಗೆ ತಕ್ಕಂತೆ ನಾಟಕದ ಕಥಾವಸ್ತುವನ್ನು ಆಯ್ದು ಅದಕ್ಕೆ 'ಲಂಚ ಸಾಮ್ರಾಜ್ಯ' ಎಂದು ಹೆಸರಿಟ್ಟರು. ತಾವು ನಾಟಕ ಬರೆದ ವಿಷಯವನ್ನು ಒಂದಿಬ್ಬರು ಸ್ನೇಹಿತರಿಗೆ ಹೇಳಿದರು. ನಾಟಕ ಹೊರಸೂಸುತ್ತಿದ್ದ ಮೌಲ್ಯ, ಜಾಗೃತಿಗಳು ಸ್ನೇಹಿತರಿಗೆ ಹಿಡಿಸಿದವು. ಇದನ್ನು ತಾವೇ ಸ್ನೇಹಿತರು ಯಾಕೆ ರಂಗಭೂಮಿಗೆ ತರಬಾರದು ಎಂದು ಯೋಚಿಸಿದರು. ಯೋಚನೆ ಹಣ್ಣಾಗಿ ಒಂದು ದಿನ 'ಲಂಚ ಸಾಮ್ರಾಜ್ಯ' ಪ್ರದರ್ಶನಗೊಳ್ಳಲು ಸಿದ್ಧವಾಯಿತು. ನಾಟಕಕಾರ ಅರಿಷಿಣಗೋಡಿಯವರು ನಾಯಕನ ಪಾತ್ರವನ್ನು ಈ ಪ್ರದರ್ಶನದಲ್ಲಿ ವಹಿಸುವುದೆಂದು ತೀರ್ಮಾನಿಸಲಾಯಿತು. ಕುರುಬರ ಓಣಿಯ ಹುಡುಗರ ಸಹಕಾರದಿಂದ ಹುಚ್ಚೇಶ್ವರ ಜಾತ್ರೆಯಲ್ಲಿ "ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ" ಎಂಬ ಹವ್ಯಾಸಿ ತಂಡದ ಹೆಸರಿನಲ್ಲಿ ಪ್ರದರ್ಶನಗೊಂಡ 'ಲಂಚ ಸಾಮ್ರಾಜ್ಯ' ನಾಟಕವು ಪ್ರೇಕ್ಷಕರ ಮನಸ್ಸನ್ನು ಗೆದ್ದುಕೊಂಡಿತು. ಈ ನಾಟಕದ ಪ್ರಯೋಗದಿಂದ ಅರಿಷಿಣಗೋಡಿಯವರು ನಟರಾಗಿ, ನಾಟಕರಾರರಾಗಿ ಹೆಸರು ಗಳಿಸಿದರು. ನಾಟಕ ಬರೆಯಲಿಕ್ಕೆ ಗೌಡನ ಒಂದು ಪ್ರಸಂಗ ಕಾರಣವಾದರೂ ಹಿನ್ನೆಲೆಯಾಗಿ ಕೆಲಸ ಮಾಡಿದ್ದು ಹುಟ್ಟೂರಾದ ಬೆನಕಟ್ಟಿ ಪರಿಸರ. ಊರಲ್ಲಿ ನಡೆದ ಒಂದು ಕಹಿ ಘಟನೆ ಒಬ್ಬ ಶ್ರೇಷ್ಠ ನಾಟಕಕಾರನಿಗೆ ಜನ್ಮಕೊಟ್ಟಿತು.

ಬೆನಕಟ್ಟಿಯು ಜನಪದ ತಂಡಗಳಿಂದ, ಪಾರಿಜಾತ ಮೇಳಗಳಿಂದ, ಹವ್ಯಾಸಿ ರಂಗ ತಂಡಗಳಿಂದ, ಪ್ರತಿಭಾವಂತ ರಂಗ ಕಲಾವಿದರಿಂದ ಸುತ್ತಲಿನ ಗ್ರಾಮಗಳಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು. ಇಂತಹ ಪರಿಸರದಲ್ಲಿ ಹುಟ್ಟಿ ಬೆಳೆದ ಅರಿಷಿಣಗೋಡಿಯವರು ಸಹಜವಾಗಿ ನಾಟಕಕಾರರಾಗಿ, ನಟರಾಗಿ, ನಿರ್ದೇಶಕರಾಗಿ, ಸಮರ್ಥ ಕಂಪನಿ ಮಾಲಿಕರಾಗಿ ಬೆಳೆಯಲು ಇದರಿಂದ ಸಾಧ್ಯವಾಯಿತು.

ಬಾಗಲಕೋಟಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಮಾಸ್ಟರ್ ಹಿರಣ್ಣಯ್ಯನವರ 'ಲಂಚಾವತಾರ' ಸುಬ್ಬಯ್ಯ ನಾಯ್ಡು ಅವರ 'ಭೂ ಕೈಲಾಸ' ಪಡೇಸೂರ ಕಂಪನಿಯ 'ದಸರಾ', 'ಕೊಂಡುತಂದ ಗಂಡ' ಗುಬ್ಬಿ ವೀರಣ್ಣನವರ 'ಲವಕುಶ' ಮುಂತಾದ ನಾಟಕಗಳನ್ನು ಬಿ.ಆರ್. ಅರಿಷಿಣಗೋಡಿಯವರು ನೋಡಿದ್ದರು. ಅರಿಷಿಣಗೋಡಿಯವರು "ಗೆಳೆಯರು ಸಿನಿಮಾ ನೋಡಲು ಹೋದರೆ ನಾನು ನಾಟಕ ನೋಡಲು ಹೋಗುತ್ತಿದ್ದೆ" ಎನ್ನುತ್ತಾರೆ. ಹಾಗೆಯೇ ಕಲೆಯ ಅಭಿರುಚಿ ಹೊಂದಿದ್ದ ಕುಟುಂಬದ ಹಿನ್ನೆಲೆಯಿಂದ ಬಂದ ತಾಯಿ ಕಾಶೀಬಾಯಿಯ ರಕ್ತಗುಣ, ಬಿ.ಆರ್. ಅರಿಷಿಣಗೋಡಿಯವರಲ್ಲಿದ್ದ ರಂಗನಾಟಕಗಳ ಆಸಕ್ತಿ ಹಾಗೂ ಶೋಷಣೆಯನ್ನು ಪ್ರತಿಭಟಿಸುವ ಮನೋಧರ್ಮದಿಂದ 'ಲಂಚ ಸಾಮ್ರಾಜ್ಯ' ನಾಟಕವನ್ನು ರಚಿಸಲು ಬಿ.ಆರ್. ಅರಿಷಿಣಗೋಡಿಯವರಿಗೆ ಸಾಧ್ಯವಾಯಿತು.

'ಲಂಚ ಸಾಮ್ರಾಜ್ಯ' ನಾಟಕವು ಪ್ರೇಕ್ಷಕರ ಅಭಿಲಾಷೆಯಂತೆ ಕಮತಗಿಯಲ್ಲಿ ಅನೇಕ ಪ್ರಯೋಗಗಳನ್ನು ಕಂಡು ಜನ ಮೆಚ್ಚುಗೆಯನ್ನು ಪಡೆಯಿತು. ನಾಟಕದಲ್ಲಿ ಪಾತ್ರವನ್ನು ಮಾಡುವ ಕಲಾವಿದರು ಹೆಚ್ಚಾಗಿ ಗೆಳೆಯರೇ ಆಗಿದ್ದರು. ಗೌಡನ ಕುತಂತ್ರಕ್ಕೆ ಸಿಕ್ಕು ನೊಂದ ವ್ಯಕ್ತಿ ಬಿ.ಆರ್. ಅರಿಷಿಣಗೋಡಿಯವರೇ

ಶಿಲಾಧರನ ಪಾತ್ರಧಾರಿಯಾಗಿ ನಾಟಕದಲ್ಲಿ ಅಭಿನಯಿಸಿದರು. ನಾಟಕದಲ್ಲಿ ಬರುವ ನಾಯಕಿ ಮೀನಾಕ್ಷಿ ಪಾತ್ರವನ್ನು ಪ್ರಮೀಳಾ ಗುಡೂರ ಅಭಿನಯಿಸಿದಳು. ಈ 'ಲಂಚ ಸಾಮ್ರಾಜ್ಯ' ನಾಟಕದ ಜನಪ್ರಿಯತೆ ನಾಟಕ ಕಂಪನಿ ಗುತ್ತಿಗೆದಾರ ಶಿವಣ್ಣ ಜವಳಿಯರಿಗೆ ತಿಳಿದು ಅವರನ್ನು ಕಮತಗಿಗೆ ಸೆಳೆದು ತಂದಿತು. ಪ್ರಯೋಗ ಒಂದಕ್ಕೆ ೨೦೦ ರೂಪಾಯಿ ಕೊಡುವ ಒಪ್ಪಂದ ಮಾಡಿಕೊಂಡು ಒಂದು ತಿಂಗಳಿಗೆ ಕಮತಗಿಯಿಂದ ೧೦ ಕಿ.ಮೀ. ದೂರದಲ್ಲಿದ್ದ ಗುಳೇದಗುಡ್ಡದಲ್ಲಿ ಕ್ಯಾಂಪ ಮಾಡುವ ನಿರ್ಧಾರವನ್ನು ಶಿವಣ್ಣ ಜವಳಿಯವರು ಮಾಡಿದರು. ನಟರ ಸಂಬಳ, ಊಟದ ವ್ಯವಸ್ಥೆಯನ್ನು ಅರಿಷಿಣಗೋಡಿಯವರೇ ನೋಡಿಕೊಳ್ಳಬೇಕು. ಉಳಿದದ್ದು ಗುತ್ತಿಗೆದಾರರು ನೋಡಿಕೊಳ್ಳುವ ವ್ಯವಸ್ಥೆಯಾಗಿತ್ತು. ಹಗಲು ಹೊತ್ತಿನಲ್ಲಿ ಕಿರಾಣಿ ಅಂಗಡಿ ವ್ಯಾಪಾರ ಮಾಡಬೇಕು. ರಾತ್ರಿ ನಾಟಕದ ಕಲಾವಿದರಿಗೆ ಬುತ್ತಿ ಕಟ್ಟಿಕೊಂಡು ಗುಳೇದಗುಡ್ಡಕ್ಕೆ ಹೋಗಬೇಕು.

ಗುಳೇದಗುಡ್ಡದಲ್ಲಿ ನಾಟಕ ಪ್ರಾರಂಭವಾಗಿ ಒಂದು ವಾರ ಕಳೆದಿರಲಿಲ್ಲ. ಗುತ್ತಿಗೆದಾರ ಏನೇನೋ ನೆಪ ಹೇಳಿ ಒಪ್ಪಂದವನ್ನು ಮುರಿದುಕೊಂಡ. ಕಲಾವಿದರಿಗೆ ಒಂದು ತಿಂಗಳ ಸಂಬಳ ಕೊಡುವುದಾಗಿ ಮಾತು ಕೊಟ್ಟಿದ್ದ ಅರಿಷಿಣಗೋಡಿಯವರಿಗೆ ಸಮಸ್ಯೆಯಾಯಿತು. ಕೆಲವು ಕಲಾವಿದರಿಗೆ ಈಗಾಗಲೇ ಮುಂಗಡವಾಗಿ ಒಂದು ತಿಂಗಳ ಸಂಬಳವನ್ನು ಕೊಟ್ಟು ಬಿಟ್ಟಿದ್ದರು. ಇಂಥದ್ದರಲ್ಲಿ ನಾಟಕವನ್ನು ಅರ್ಧಕ್ಕೆ ಕೈಬಿಡುವುದು ಬಿ.ಆರ್. ಅರಿಷಿಣಗೋಡಿಯವರಿಗೆ ಸರಿಯಲ್ಲವೆನಿಸಿತು. ಚುರುಕು ಬುದ್ಧಿಯ ಅರಿಷಿಣಗೋಡಿಯವರು ಈ ಅಲ್ಪಾವಧಿಯಲ್ಲಿಯೇ ನಾಟಕ ಕಂಪನಿಯ ವ್ಯವಹಾರಗಳನ್ನು ಅಲ್ಪಸ್ವಲ್ಪ ತಿಳಿದುಕೊಂಡಿದ್ದರು. ಗುಳೇದಗುಡ್ಡ ಪ್ರದರ್ಶನದ ಆರಂಭದಲ್ಲಿ ಕಲಾವಿದರಿಗೆ ಮಾತುಕೊಟ್ಟಂತೆಯೇ ನಾಟಕ ಪ್ರಯೋಗಗಳನ್ನು ಗುಳೇದಗುಡ್ಡದಲ್ಲಿಯೇ ಮುಂದುವರೆಸುವ ನಿರ್ಧಾರ ಮಾಡಿದರು. ಗುಳೇದಗುಡ್ಡ ಕ್ಯಾಂಪಿನಿಂದ ಲಾಭವೂ ಆಗಲಿಲ್ಲ ನಷ್ಟವೂ ಆಗಲಿಲ್ಲ ಎಂದು ಬಿ.ಆರ್. ಅರಿಷಿಣಗೋಡಿಯವರೇ ಹೇಳಿದ್ದಾರೆ. ಗುಳೇದಗುಡ್ಡದ ಕ್ಯಾಂಪ್ ಅರಿಷಿಣಗೋಡಿಯವರಲ್ಲಿ ನಿರಾಸೆ ಹುಟ್ಟಿಸಬಹುದಿತ್ತು. ಊರಿಗೆ ಮರಳುವಂತೆ ಮಾಡಬಹುದಿತ್ತು, ಹಾಗೆ ಆಗಲಿಲ್ಲ. ಗುಳೇದಗುಡ್ಡದಲ್ಲಿ 'ಲಂಚ ಸಾಮ್ರಾಜ್ಯ' ನಾಟಕ ಪ್ರಯೋಗಗಳು ನಡೆಯುತ್ತಿರುವಂತೆ ಲಾಭ ನಷ್ಟಗಳ ವ್ಯವಹಾರಿಕ ಗಡಿಮೀರಿ ಅರಿಷಿಣಗೋಡಿಯವರು ರಂಗಭೂಮಿಯ ಆಕರ್ಷಣೆಗೆ ಒಳಗಾದರು. ರಂಗಭೂಮಿಯಲ್ಲಿ ಸುಖವಿದೆ, ಇದರಲ್ಲಿಯೇ ತಾವು ಮುಂದುವರೆಯಬೇಕು ಅನ್ನಿಸತೊಡಗಿತು. ಈ ಅನಿಸಿಕೆ ಆಕರ್ಷಣೆಗಳೇ ಮುಂದಿನ ಬಾಗಲಕೋಟ ಕ್ಯಾಂಪಿಗೆ ಕಾರಣಗಳಾದವು.

ರಂಗ ಪ್ರದರ್ಶನ ಮಾಡಲು ಬಾಗಲಕೋಟೆಯ ಕ್ಯಾಂಪು ಲಂಚ ಸಾಮ್ರಾಜ್ಯ ನಾಟಕದ ಸತತ ೫೦ ಯಶಸ್ವಿ ಪ್ರಯೋಗಗಳನ್ನು ಮಾಡಿ ಪ್ರೇಕ್ಷಕರ ಮೆಚ್ಚುಗೆಯನ್ನು ಗಳಿಸಿಕೊಂಡಿತು. ಸ್ವಲ್ಪಮಟ್ಟಿಗೆ ಹಣವೂ ಸಂಪಾದನೆ ಆಯಿತು. ಜನ ತಂಡೋಪತಂಡವಾಗಿ ಬಂದು ನಾಟಕ ನೋಡುತ್ತಿದ್ದರು. ಒಕ್ಕಲುತನ

ಮಾಡುತ್ತಿದ್ದ ಅಣ್ಣ ರಾಯಪ್ಪ ಬಾಗಲಕೋಟೆ ಕ್ಯಾಂಪನ ಜನದಟ್ಟಣೆಯನ್ನು ನಿಯಂತ್ರಿಸುವುದಕ್ಕಾಗಿ ಬಂದು ನಿಂತರು. ಪ್ರಯೋಗಗಳು ಸುಸೂತ್ರವಾಗಿ ನಡೆಯಲು ಇದರಿಂದ ಸಾಧ್ಯವಾಯಿತು.

ಅಣ್ಣ ರಾಯಪ್ಪನ ಸಹಾಯ, ಸಹಕಾರ ದೊರೆಯಲು ನಾಟಕ ಕಲೆಯನ್ನೇ ಉದ್ಯೋಗ ಮಾಡಿಕೊಳ್ಳುವ ಯೋಚನೆಯನ್ನು ಬಿ.ಆರ್. ಅರಿಷಿಣಗೋಡಿಯವರು ಮಾಡಿದರು. ಈ ಯೋಚನೆ ಬಂದದ್ದೇ ತಡ ಕೆಲ ದಿನಗಳಲ್ಲೇ ರಂಗಭೂಮಿಯ ಮಂಡಳಿ ಕಟ್ಟಲು ನಿರ್ಧರಿಸಿದರು. ಬಿ.ಆರ್. ಅರಿಷಿಣಗೋಡಿಯವರು ೧೯೬೧ರಲ್ಲಿ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ' ಎಂಬ ಹೆಸರಿನಿಂದ ಕಂಪನಿಯನ್ನು ಒಮ್ಮೆಲೇ ಪ್ರಾರಂಭಿಸಿದರು. ಕಂಪನಿ ನಡೆಸಿಕೊಂಡು ಹೋಗುವುದೇನೂ ಅವರಿಗೆ ಕಷ್ಟವಾಗಲಿಲ್ಲ. ಕಂಪನಿ ಪ್ರಾರಂಭ ಮಾಡಿದರು. ಈ ನಾಟಕ ಕಂಪನಿ ಕಟ್ಟುವುದಕ್ಕಿಂತ ಮುಂಚೆ ಗುಳೇದಗುಡ್ಡ - ಬಾಗಲಕೋಟ ಕ್ಯಾಂಪಿನಲ್ಲಿ ನಟ, ನಾಟಕಕಾರ, ವ್ಯವಸ್ಥಾಪಕನಾಗಿ ಈ ಮೂರನ್ನು ಬಿ.ಆರ್. ಅರಿಷಿಣಗೋಡಿಯವರೇ ನೋಡಿ ಕೊಳ್ಳುತ್ತಿದ್ದರು. ಆ ಅನುಭವ ಈಗ ಎಷ್ಟೋ ಸಹಕಾರಿಯಾಯಿತು.

ಕಮತಗಿಯಲ್ಲಿ ಮಾವ ಗಿರಿಯಪ್ಪ ಮೆಳ್ಳಿಯವರು ಹಾಕಿಕೊಟ್ಟ ಕಿರಾಣಿ ಅಂಗಡಿಯನ್ನು ಬಂದು ಮಾಡಿ ನಾಟಕ ಕಂಪನಿ ಪ್ರಾರಂಭ ಮಾಡಿದಾಗ ಅರಿಷಿಣಗೋಡಿಯವರಿಗೆ ಮಾವ ಗಿರಿಯಪ್ಪ, ಅಕ್ಕ ಲಕ್ಷ್ಮೀಬಾಯಿ, ತಂದೆ-ತಾಯಿಗಳಿಂದ ಪ್ರಾರಂಭದಲ್ಲಿ ವಿರೋಧ ಉಂಟಾಯಿತು. ನಾಟಕದಿಂದ ನಮ್ಮ ಹುಡುಗ ಎಲ್ಲಿ ದುಶ್ಚಟಗಳಿಗೆ ಆಹುತಿಯಾಗಿ ಹಾಳಾಗುತ್ತಾನೋ ಎಂದು ಭಯಗೊಂಡರು. ನಾಟಕದ ಸಂಬಂಧದಿಂದ ಇವರನ್ನು ದೂರವಾಗಿಸಲು ಅವರಿವರಿಂದ ಪ್ರಯತ್ನಿಸಿದರು. ಒಂದೆರಡು ವರುಷ ಕಂಪನಿ ನಡೆಸುವೆ ನನ್ನ ನಡತೆ ತಮಗೆ ಸರಿಕಾಣದಿದ್ದರೆ ಮರಳಿ ಮನೆಗೆ ಬರುವೆ ಎಂದು ಮಾವ, ಅಕ್ಕ, ತಂದೆ-ತಾಯಿಗಳಿಗೆ ಭೀಮಪ್ಪ ಅವರಿಗೆ ಸಮಾಧಾನದ ಉತ್ತರ ಹೇಳಿದರು. ಹಣಕ್ಕಾಗಿ ಮನೆಯವರನ್ನು ಅವಲಂಬಿಸದೇ ಕಿರಾಣಿ ಅಂಗಡಿ ವ್ಯಾಪಾರದಿಂದ ಗಳಿಸಿದ ಹಣವನ್ನು ಕಂಪನಿಗೆ ಹಾಕಿದರು. ಈಗಾಗಲೇ 'ಲಂಚ ಸಾಮ್ರಾಜ್ಯ' ನಾಟಕದಿಂದ ಕಮತಗಿಯ ಜನರ ಮನ ಸೂರೆಗೊಂಡಿದ್ದ ಅರಿಷಿಣಗೋಡಿಯವರಿಗೆ ಮಾವ ಗಿರಿಯಪ್ಪನಿಂದ ಪ್ರಬಲವಾದ ವಿರೋಧವೇನು ವ್ಯಕ್ತವಾಗಲಿಲ್ಲ. ಬಿ.ಆರ್. ಅರಿಷಿಣಗೋಡಿಯವರು ಕುಟುಂಬ ವರ್ಗದವರ ಮನಸ್ಸನ್ನು ಮೆಚ್ಚಿಸಿಕೊಂಡು ವೃತ್ತಿರಂಗಭೂಮಿಗೆ ಪ್ರವೇಶ ಮಾಡಿದರು. ಎರಡು ವರುಷದಲ್ಲಿ ಕುಟುಂಬದ ಹಿರಿಯರು ಮೆಚ್ಚುವಂತೆ ಯಶಸ್ವಿ ರಂಗ ಪ್ರಯೋಗಗಳಿಂದ ಸಂಪತ್ತು ಕೀರ್ತಿಯನ್ನು ಸಂಪಾದಿಸಿ ಸೈ ಎನಿಸಿಕೊಂಡರು. ಹಿಂದೆಯೇ ಹೇಳಿದಂತೆ ಆ ವೇಳೆಗಾಗಲೇ ಅಣ್ಣ ರಾಯಪ್ಪನೂ ಕೂಡ ಕಂಪನಿಗೆ ಸೇರಿದ್ದನು. ಇಬ್ಬರೂ ಅಣ್ಣ-ತಮ್ಮಂದಿರ ಶ್ರದ್ಧೆ, ಪರಿಶ್ರಮ, ವ್ಯವಹಾರ ಚತುರತೆಯಿಂದ ಒಂದು ಕಂಪನಿ ಇದ್ದದ್ದು ೨ ಬ್ರ್ಯಾಂಚ್ ಕಂಪನಿಗಳಾಗಿ ಪ್ರಗತಿಯನ್ನು ಕಂಡಿತು. ಮಿತವ್ಯಯಿಗಳಾದ ಅಣ್ಣ-ತಮ್ಮಂದಿರು ಕಂಪನಿಯಿಂದ ಗಳಿಸಿದ ಹಣದಿಂದ ಊರಲ್ಲಿ ಹೊಲ ಹಿಡಿದರು, ಮನೆ ಕಟ್ಟಿಸಿದರು. ಕಂಪನಿ ಆರ್ಥಿಕವಾಗಿ ಸಂಕಷ್ಟಕ್ಕೀಡಾದಾಗ ಮನೆಯಿಂದ ಹಣ ತಂದು ಕಂಪನಿಗೆ

ಹಾಕಿದ್ದಾರೆ. ಈ ಕೊಡುಕೊಳ್ಳುವಿಕೆಯಿಂದ ಕುಟುಂಬದೊಂದಿಗೆ ಅರಿಷಿಣಗೋಡಿಯವರ ಸಂಬಂಧ ಅನ್ಯೋನ್ಯತೆಯಿಂದ ಕೂಡಿತ್ತು.

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿಯ ಕಂಪನಿಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಬಿ.ಆರ್. ಅರಿಷಿಣಗೋಡಿಯವರ ಅಣ್ಣ ರಾಯಪ್ಪನನ್ನು ಇಲ್ಲಿ ಪರಿಚಯಿಸದೇ ಹೋದರೆ ತಪ್ಪಾದೀತು. ಬಿ.ಆರ್. ಅರಿಷಿಣಗೋಡಿಯವರ ಕಂಪನಿಯು ಪ್ರಾರಂಭವಾಗಿ ಕರ್ನಾಟಕದಾದ್ಯಂತ ಜಯಭೇರಿ ಹೊಡೆದು ಜನ ಮೆಚ್ಚುಗೆ ಗಳಿಸಿಕೊಳ್ಳಲು ಅಣ್ಣ ರಾಯಪ್ಪನ ಕೊಡುಗೆಯನ್ನೂ ಕಂಪನಿ ಮರೆಯುವಂತಿಲ್ಲ. ಅಣ್ಣ ರಾಯಪ್ಪ ತಮ್ಮನ ಕಂಪನಿಯಲ್ಲಿ ವ್ಯವಸ್ಥಾಪಕರಾಗಿ, ಮಾಲಿಕರಾಗಿ, ನಟರಾಗಿ ಕಂಪನಿಯ ಬೆಳವಣಿಗೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವರು.

ಹಿಂದೆಯೇ ಹೇಳಿದಂತೆ ೧೯೩೦ರಲ್ಲಿ ರಂಗಪ್ಪ-ಕಾಶವ್ವ ದಂಪತಿಗಳ ಎರಡನೆಯ ಗಂಡು ಮಗನಾಗಿ ರಾಯಪ್ಪಜನಿಸಿದನು. ತಂದೆಯ ಮಾರ್ಗದರ್ಶನದಂತೆ ಒಕ್ಕಲುತನಕ್ಕೆ ನಿಂತಿದ್ದರು. ತಮ್ಮ ಭೀಮಪ್ಪ ಬಾಗಲಕೋಟೆಯಲ್ಲಿ ನಾಟಕ ಕಂಪನಿ ಕಟ್ಟಲು ಒಕ್ಕಲುತನ ಬಿಟ್ಟು ತಮ್ಮನ ನೆರವಿಗೆ ಬಂದರಷ್ಟೇ ಪ್ರಾರಂಭದಲ್ಲಿ ತಮ್ಮ ನಾಟಕ ಬರೆಯುತ್ತಾ, ಪಾತ್ರ ಮಾಡುತ್ತ ರಂಗದ ಮೇಲೆ ಇರುವಾಗ ಕಂಪನಿ ಆಡಳಿತವನ್ನು ರಾಯಪ್ಪ ನಿರ್ವಹಿಸುತ್ತಿದ್ದರು. ತಮ್ಮ ಭೀಮಪ್ಪನಿಗಿಂತಲೂ ಅಣ್ಣ ರಾಯಪ್ಪ ದೈಹಿಕವಾಗಿ ಬಲಿಷ್ಠ ಮತ್ತು ಧೈರ್ಯವಂತನಾಗಿದ್ದನು. ಸ್ವಭಾವತಃ ಅಣ್ಣ ರಾಯಪ್ಪ ಬಹಿರ್ಮುಖಿ ವ್ಯಕ್ತಿತ್ವವನ್ನು ಪಡೆದಿದ್ದರೆ, ತಮ್ಮ ಭೀಮಪ್ಪ ಅಂತರ್‌ಮುಖಿ ವ್ಯಕ್ತಿತ್ವವನ್ನು ಪಡೆದಿದ್ದರು. ಇಬ್ಬರು ಅಣ್ಣ ತಮ್ಮಂದಿರು ಬೇರೆ ಬೇರೆ ಗುಣಗಳನ್ನು ಪಡೆದಿದ್ದರೂ ಇದು ಕಂಪನಿ ನಡೆಸಿಕೊಂಡು ಹೋಗಲು ಸಹಾಯವಾಯಿತು. ೧೯೬೬-೬೭ರಲ್ಲಿ ಕಂಪನಿಯ ಮೊದಲ ಶಾಖೆ ರಬಕವಿಯಲ್ಲಿ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ' ಕಂಪನಿ ಪ್ರಾರಂಭವಾಗಲು ರಾಯಪ್ಪನವರು ಅದರ ಮಾಲಿಕರಾದರು. ಕಾಲಾಂತರದಲ್ಲಿ ಮತ್ತೆರಡು ಶಾಖೆಗಳು ಆರಂಭಗೊಂಡವು.

ರಾಯಪ್ಪ ಅರಿಷಿಣಗೋಡಿಯವರು ಉತ್ತಮ ಹಾಸ್ಯ ಕಲಾವಿದರೂ ಉತ್ತಮ ಹಿನ್ನಲೆ ಗಾಯಕರೂ ಆಗಿ ನಾಡಿನಾದ್ಯಂತ ಜನರನ್ನು ರಂಜಿಸಿದ್ದಾರೆ. ಹಾಸ್ಯ ಪಾತ್ರ ಮಾಡುವದೆಂದರೆ ರಾಯಪ್ಪನವರಿಗೆ ಅಚ್ಚುಮೆಚ್ಚು. 'ಲಂಚ ಸಾಮ್ರಾಜ್ಯ'ದಲ್ಲಿ ಸಿದ್ಧ, 'ಹೆಣ್ಣುಮಗಳು' ನಾಟಕದಲ್ಲಿ ಗುರಣ್ಣನ ಹಾಸ್ಯ ಪಾತ್ರಗಳನ್ನು ಮಾಡಿ ನಾಟಕಕ್ಕೆ ಕಳೆಕಟ್ಟಿದ್ದಾರೆ. 'ಇಲ್ಲಿಗೆ ಬಂತೋ ಸಂಗಯ್ಯಾ'ದಲ್ಲಿ ಆರ್.ಎಂ.ಪಿ. ಡಾಕ್ಟರ್ ಪಾತ್ರ ಮಾಡಿದ್ದಾರೆ. ಕಂಪನಿ ನಟರು ಆಕಸ್ಮಿಕ ಬಿಟ್ಟು ಹೋದ ಅನಿವಾರ್ಯ ಪ್ರಸಂಗಗಳಲ್ಲಿ ಅವರ ಬೇರೆ-ಬೇರೆ ಪಾತ್ರಗಳನ್ನು ಕೂಡ ಮಾಡಿ ಒಳ್ಳೆಯ ಕಲಾವಿದರೆನಿಸಿಕೊಂಡಿದ್ದರು. ರಂಗದ ಮೇಲೆ ರಾಯಪ್ಪ ನವರ ಪಾತ್ರಗಳು ಪ್ರೇಕ್ಷಕರನ್ನು ರಂಜಿಸಿ, ನಗೆಗಡಲಲ್ಲಿ ತೇಲಿಸುತ್ತಿದ್ದವು. ಹೀಗೆ ೧೯೮೦ರವರೆಗೆ

ಅಣ್ಣ-ತಮ್ಮಂದಿರು ಭೇದ ಭಾವವಿಲ್ಲದೆ ಒಟ್ಟು ೪ ಬ್ರ್ಯಾಂಚ್ ಕಂಪನಿಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದರು.

ಮುಂದೆ ಕೌಟುಂಬಿಕ ಸಾಮರಸ್ಯದ ಕೊರತೆಯಿಂದ ಅಣ್ಣ ತಮ್ಮಂದಿರಲ್ಲಿ ಮನಸ್ತಾಪ ಉಂಟಾಗಿ ೧೯೮೧ರಲ್ಲಿ ಬೇರೆಯಾದರು. ಇಬ್ಬರಿಗೂ ಎರಡೆರಡು ಕಂಪನಿಗಳು ಪಾಲಿಗೆ ಬಂದವು. ಬೇರೆಯಾದ ನಂತರ ರಾಯಪ್ಪನವರು ೩-೪ ವರ್ಷಗಳವರೆಗೆ ಕಂಪನಿ ಸರಿಯಾಗಿ ನಡೆಸಿಕೊಂಡು ಹೋದರು. ಮುಂದೆ ರಾಯಪ್ಪನವರ ವಯೋಗುಣಧರ್ಮದ ಅಶಕ್ತತೆಯಿಂದ ಕಂಪನಿ ಮೇಲಿನ ಹಿಡಿತ ತಪ್ಪಿ ೧೯೮೩-೮೪ರಲ್ಲಿ ಒಂದು ಕಂಪನಿ ನಿಲ್ಲಿಸಿದರು. ರಾಯಪ್ಪನವರಿಗೆ ಮೊದಲಿನಿಂದಲೂ ಇದ್ದ ಸಕ್ಕರೆ ಖಾಯಿಲೆ, ರಕ್ತದೊತ್ತಡ ಖಾಯಿಲೆಗಳು ೧೯೯೪ರ ವೇಳೆಗೆ ಉಲ್ಬಣಗೊಂಡವು. ಇದರಿಂದ ಕಂಪನಿಯ ಆಡಳಿತ ಅಸ್ತವ್ಯಸ್ತಗೊಂಡಿತು. ಕಂಪನಿ ವ್ಯವಹಾರಗಳನ್ನು ನೋಡಿಕೊಳ್ಳಲು ರಾಯಪ್ಪನವರಿಗೆ ಆರೋಗ್ಯ ಅನುಮತಿ ಕೊಡಲಿಲ್ಲ. ಆದ್ದರಿಂದ ೧೯೯೩ರಲ್ಲಿ ಇದ್ದ ಇನ್ನೊಂದು ಕಂಪನಿಯನ್ನೂ ಬಂದು ಮಾಡಿ ಬೆನಕಟ್ಟಿಗೆ ಬಂದು ನೆಲೆಸಿದರು. ಮುಂದೆ ೮-೨-೧೯೯೯ರಂದು ಬೆನಕಟ್ಟಿಯಲ್ಲಿ ವೈಕುಂಠವಾಸಿಗಳಾದರು.

೧೯೬೧ರಲ್ಲಿ ಆರಂಭಗೊಂಡ ಬಿ.ಆರ್. ಅರಿಷಿಣಗೋಡಿಯವರ ರಂಗ ಸೇವೆ ೨೦೦೩ರವರೆಗೆ ಸಂದಿತು. ನಾಟಕಕಾರ ಬಿ.ಆರ್. ಅರಿಷಿಣಗೋಡಿಯವರ ಹುಟ್ಟೂರು ಬೆನಕಟ್ಟಿ, ಆದರೆ ಅವರ ರಂಗಸೇವೆಗೆ ಸ್ಫೂರ್ತಿಯ ಸೆಲೆಯಾಗಿದ್ದುದು ಕಮತಗಿಯ ಪರಿಸರ. ಬಿ.ಆರ್. ಅರಿಷಿಣಗೋಡಿಯವರ ಪ್ರಭಾವದಿಂದ ಬೆನಕಟ್ಟಿ ಊರು ರಂಗ ಪ್ರಯೋಗವನ್ನು ಹೆಚ್ಚಿಸಿಕೊಂಡಿತು. ಬೆನಕಟ್ಟಿಯು ತನ್ನ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಸುತ್ತಲಿನ ಹತ್ತಾರು ಹಳ್ಳಿಗಳ ಮನಸ್ಸನ್ನು ಗೆದ್ದುಕೊಂಡಿದೆ. ಬೆನಕಟ್ಟಿಯ ಪ್ರಮುಖ ದೇವತೆ ಹೇಮರಡ್ಡಿ ಮಲ್ಲಮ್ಮ, ಸರ್ವಜ್ಞನ ಸಮಕಾಲೀನನಾದ ತತ್ವಜ್ಞಾನಿ ವೇಮನ ಜಯಂತಿಯ ನಿಮಿತ್ಯವಾಗಿ ಜನವರಿ ೧೯ರಂದು ಪ್ರತಿವರ್ಷ ಬೆನಕಟ್ಟಿಯಲ್ಲಿ ಜಾತ್ರೆ ನಡೆಯುವುದು. ಅದರ ನಿಮಿತ್ಯವಾಗಿ ಮಲ್ಲಮಾಂಬೆ ದೇವಸ್ಥಾನ ಸಮಿತಿಯು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ. ಸುಮಾರು ಮೂವತ್ತು ವರ್ಷಗಳ ಹಿಂದೆಯೇ ಜಾತ್ರೆಯ ಅಂಗವಾಗಿ ಹುಟ್ಟಿಕೊಂಡ 'ಮಲ್ಲಮಾಂಬೆ ನಾಟ್ಯ ಸಂಘ' ಎಂಬ ಹವ್ಯಾಸಿ ತಂಡ ಮೂರು ದಿನಗಳವರೆಗೆ ನಾಟಕ ಪ್ರದರ್ಶನ ಮಾಡಿ ತನ್ನ ರಂಗಸೇವೆಯನ್ನು ಪ್ರತಿ ವರ್ಷ ಜನವರಿ ೧೯, ೨೦, ೨೧ರಂದು ಮುಂದುವರಿಸಿಕೊಂಡು ಹೋಗುತ್ತಿದೆ. ಈ ಹವ್ಯಾಸಿ ಮಲ್ಲಬಾಂಬೆ ನಾಟ್ಯ ಸಂಘ ಬಿ.ಆರ್. ಅರಿಷಿಣಗೋಡಿಯವರು ರಚಿಸಿದ ನಾಟಕಗಳನ್ನು ಅನೇಕ ಸಲ ರಂಗ ಪ್ರಯೋಗಕ್ಕೆ ಒಳಪಡಿಸಿದೆ. ಒಂದೊಂದು ವರ್ಷ ೫೦ರಿಂದ ೬೦ ಸಾವಿರ ರೂಪಾಯಿಗಳವರೆಗೆ ರಂಗ ಪ್ರಯೋಗದಿಂದ ಕಲೆಕ್ಷನ್ ಆಗಿದ್ದೂ ಉಂಟು. ಅರಿಷಿಣಗೋಡಿಯವರು ರಚಿಸಿದ ನಾಟಕಗಳಲ್ಲಿಯೇ ಮೇರು ಕೃತಿಯಾದ 'ಬಸ್ ಕಂಡಕ್ಟರ್' ನಾಟಕವನ್ನು ರಂಗ ಪ್ರಯೋಗಕ್ಕೆ ಈ ಹವ್ಯಾಸಿ ರಂಗ ತಂಡ ಪ್ರಯೋಗಕ್ಕೆ ಒಳಪಡಿಸಿದೆ. 'ಬಸ್ ಕಂಡಕ್ಟರ್' ನಾಟಕದಲ್ಲಿ ಜಗದೀಶನ

ಪಾತ್ರವನ್ನು ಹನುಮಂತ ಶೇಷಪ್ಪನವರ ಅದ್ಭುತವಾಗಿ ನಟಿಸಿ ಜನರನ್ನು ರಂಜಿಸಿ ಜನಮೆಚ್ಚುಗೆಯನ್ನು ಪಡೆದ ಕಲಾವಿದ. ಖಾನಾವಳಿ ಗಿರಾಕಿ ರಾಜೂನ ಹಾಸ್ಯ ಪಾತ್ರವನ್ನು ಮಾಡಿದ ಅಣ್ಣಪ್ಪ ಕಟಗೇರಿ ತಮ್ಮ ವಿಶಿಷ್ಟ ಅಂಗೀಕ ಅಭಿನಯದಿಂದ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿ ಜನ ಮೆಚ್ಚುಗೆ ಪಡೆದ ಇನ್ನೊಬ್ಬ ಕಲಾವಿದ.

ಈ ಹವ್ಯಾಸಿ ಮಲ್ಲಮಾಂಬೆ ನಾಟ್ಯ ಸಂಘದಲ್ಲಿ ಆರ್.ಆರ್. ಅರಿಷಿಣಗೋಡಿಯವರ ಮತ್ತು ಬಿ.ಆರ್. ಅರಿಷಿಣಗೋಡಿಯವರ ಮಕ್ಕಳೂ ನಾಟಕಗಳಲ್ಲಿ ಪಾತ್ರಧಾರಿಗಳಾಗಿ ನಟಿಸಿ ಜನಮೆಚ್ಚುಗೆ ಗಳಿಸಿದ್ದಾರೆ. ಒಂದು ಸಲ 'ಹೆಣ್ಣು ಮಗಳು' ನಾಟಕದಲ್ಲಿ ನಾಯಕ ಭರತನ ಪಾತ್ರಧಾರಿಯಾಗಿ ನಟಿಸಿ ಆರ್.ಆರ್. ಅರಿಷಿಣಗೋಡಿಯವರ ಎರಡನೆಯ ಮಗ ಶಿವಪ್ಪ ಅರಿಷಿಣಗೋಡಿಯವರು ಜನಮೆಚ್ಚುಗೆ ಯನ್ನು ಪಡೆದಿದ್ದಾರೆ. ಮತ್ತೊಂದು ಸಾರಿ 'ಹೆಣ್ಣುಮಗಳು' ನಾಟಕವನ್ನು ಹಚ್ಚಿದಾಗ ಖಳನಾಯಕ ವಿನಾಯಕನ ಪಾತ್ರವನ್ನು ಬಿ.ಆರ್. ಅರಿಷಿಣಗೋಡಿಯವರ ಹಿರಿಯಣ್ಣನಾದ ಗಿರಿಯಪ್ಪ ಅವರ ಮಗ ಮಹಾಂತೇಶ ಪಾತ್ರಧಾರಿಯಾಗಿ ನಟಿಸಿದ್ದು ವಿಶೇಷವಾಗಿತ್ತು. ಇದೇ ಹವ್ಯಾಸಿ ತಂಡ ರಂಗ ಪ್ರಯೋಗಕ್ಕೆ ಒಳಪಡಿಸಿದ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ರಾಯಪ್ಪನ ಹಿರಿಯ ಮಗ ಕೃಷ್ಣಪ್ಪ ಕಟಕ್ ಇನ್ಸ್‌ಪೆಕ್ಟರ್ ಮೋಹನ ಕಲಾಲ ಪಾತ್ರವನ್ನು ಮಾಡಿ ಜನಮೆಚ್ಚುಗೆ ಪಡೆದ ಕಲಾವಿದ. ನಾಲ್ಕು ವರ್ಷದ ಹಿಂದೆ ಇದೇ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ರವಿ ಅರಿಷಿಣಗೋಡಿಯವರು ಗಾರ್ಮನ್‌ನ ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆದರು. ಬಿ.ಆರ್. ಅರಿಷಿಣಗೋಡಿಯವರ ಮಗ ಶಶಿಧರನೂ ಕೂಡ ಈ ಹವ್ಯಾಸಿ ತಂಡದಲ್ಲಿ ಅನೇಕ ಸಲ ನಟಿಸಿದ ಕಲಾವಿದ.


ಈ ರೀತಿ ಬಿ.ಆರ್. ಅರಿಷಿಣಗೋಡಿಯವರ ಕುಟುಂಬದ ಪೀಳಿಗೆ ವೃತ್ತಿರಂಗಭೂಮಿಯಲ್ಲಿ ತೊಡಗಿಕೊಳ್ಳದಿದ್ದರೂ, ಹವ್ಯಾಸಿ ರಂಗ ತಂಡದಲ್ಲಿ ಕಲಾವಿದರಾಗಿ ನಟಿಸಿ ರಂಗ ಸೇವೆ ಮಾಡುತ್ತಿರುವುದು ಗಮನಾರ್ಹ.

ಬೆನಕಟ್ಟಿ ಮೊದಲಿನಿಂದಲೂ ಇಲ್ಲಿಯವರೆಗೆ ರಂಗ ಕಲಾ ಸೇವೆಯನ್ನು ಮುಂದುವರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹೀಗಾಗಿ ಬೆನಕಟ್ಟಿ ಜನಪದ ತಂಡಗಳು, ವೃತ್ತಿರಂಗಭೂಮಿ, ಚಲನಚಿತ್ರ ರಂಗದ ಸಂಪರ್ಕದಿಂದ ತನ್ನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹಚ್ಚಿಕೊಂಡಿದೆ ಹಳ್ಳಿಯಿಂದ ರಾಜಧಾನಿ ಬೆಂಗಳೂರಿನವರೆಗೂ ಪ್ರಸಿದ್ಧಿಯನ್ನು ಪಡೆದಿದೆ. ಇತ್ತೀಚೆಗೆ ಕರ್ನಾಟಕದ ಚಲನಚಿತ್ರ ಮಂಡಳಿಯ ಅಧ್ಯಕ್ಷರಾದ ಬಸಂತಕುಮಾರ ಪಾಟೀಲರು ಬೆನಕಟ್ಟಿಯವರೇ.

೭೭ ವಸಂತಗಳನ್ನು ಕಂಡ ಬಿ.ಆರ್. ಅರಿಷಿಣಗೋಡಿಯವರು ಸರಳ, ಸಜ್ಜನ, ಮಿತಭಾಷಿ ವೃತ್ತಿರಂಗಭೂಮಿಯಿಂದ ಸಹಜವಾಗಿ ಅಂಟಿಕೊಳ್ಳುವ ಮದಿರೆ, ಮಾನಿನಿ, ಮಾಂಸಗಳಿಂದ ಬಿ.ಆರ್.

ಅರಿಷಿಣಗೋಡಿಯವರು ಬಲುದೂರ. ಕಮತಗಿಯ ಹುಚ್ಚೇಶ್ವರ, ಬದಾಮಿ ತಾಲೂಕಿನ ಕೆಲವಡಿ ರಂಗನಾಥರ ಮೇಲೆ ನಂಬಿಕೆಯಿಟ್ಟ ದೈವ ಭಕ್ತರಾಗಿದ್ದಾರೆ. ನಿತ್ಯ ಚಹಾ ಹಾಗೂ ಗಣೇಶ ಬ್ರಾಂಡಿನ ಬೀಡಿ ಸೇದುವರು, ಕಸ್ತೂರಿ, ಮಯೂರ ಮುಂತಾದ ಮಾಸ ಪತ್ರಿಕೆಗಳನ್ನು ಓದುವರು. ಅಲ್ಲದೇ ವೇಳೆ ಸಿಕ್ಕಾಗ ಕಾದಂಬರಿಗಳನ್ನು ಇವತ್ತಿಗೂ ಓದುವ ರೂಢಿ ಇಟ್ಟುಕೊಂಡಿದ್ದಾರೆ. ೪೩ ವರ್ಷಗಳ ಕಾಲ ಕಂಪನಿಯ ಹಿಂದೆ ನಾಡಿನಾದ್ಯಂತ ತಿರುಗಿ ಸುಸ್ತಾಗಿ ೨೦೦೩ರಲ್ಲಿ ಕಂಪನಿ ನಿಲ್ಲಿಸಿ ಕಮತಗಿಯ ಮನೆಯ ಮುಂದೆ ತಗಡಿನ ಟೆಂಟಿನಲ್ಲಿ ಕಂಪನಿಯ ರಂಗಪರಿಕರಗಳನ್ನು ಇಟ್ಟುಕೊಂಡಿದ್ದಾರೆ. ತಾವೇ ಕಟ್ಟಿಸಿದ ಮನೆಯಲ್ಲಿ ಹೆಂಡತಿ, ಮಕ್ಕಳು, ಸೊಸೆಯಂದಿರೊಂದಿಗೆ ಕಮತಗಿಯಲ್ಲಿ ವಾಸವಾಗಿದ್ದಾರೆ. ಅವರದು ಹಿತ-ಮಿತ ಮಾತು, ಸಂತೃಪ್ತ ಜೀವನ.

ಬಿ.ಆರ್. ಅರಿಷಿಣಗೋಡಿಯವರ ವಂಶವೃಕ್ಷ



ಅಧ್ಯಾಯ ೪

ಬಿ.ಆರ್.ಅರಿಷಿಣಗೋಡಿಯವರ ರಂಗಯಾತ್ರೆ ಮತ್ತು ರಂಗಶ್ರದ್ಧೆ

ಅ. ರಂಗಯಾತ್ರೆ

ಆ. ರಂಗಶ್ರದ್ಧೆ

ಕಲಾವಿದರಿಗೆ ಆಶ್ರಯ-ಸ್ವಂತ ನಾಟಕಗಳು-ಅನ್ಯರ ನಾಟಕಗಳು ಅಡೆತಡೆಗಳು-ಅತಿಥಿ ನಟರು-ಆಡಳಿತ-ನಟ-ನಿರ್ದೇಶಕ-ಮಾಲಿಕ-ಓದು ನಾಟಕಕಾರರು, ಸಾಹಿತಿಗಳ ಒಡನಾಟ-ಗುಣಸ್ವಭಾವಗಳು

ಅಧ್ಯಾಯ ೪

ಬಿ.ಆರ್. ಅರಿಷಿಣಗೋಡಿಯವರ ರಂಗಯಾತ್ರೆ ಮತ್ತು ರಂಗಶ್ರದ್ಧೆ

ಈ ಪ್ರಕರಣದಲ್ಲಿ ಬಿ.ಆರ್. ಅರಿಷಿಣಗೋಡಿಯವರು ಕಟ್ಟಿದ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ ಕಂಪನಿಯ ನಡೆ ಹಾಗೂ ಅರಿಷಿಣಗೋಡಿಯವರ ರಂಗಶ್ರದ್ಧೆಗಳನ್ನು ಕುರಿತಾಗಿ ಬರೆಯಲಾಗಿದೆ. ಅರಿಷಿಣಗೋಡಿ ಮತ್ತು ಅವರ ಕಂಪನಿ ಇವೆರಡೂ ಅವಿಭಾಜ್ಯ ಅಂಶಗಳು. ರಂಗಾಸಕ್ತನೊಬ್ಬ ನಾಟಕ ಕಂಪನಿಯೊಂದನ್ನು ಕಟ್ಟುತ್ತಾನೆಂದರೆ ಅಲ್ಲಿ ವ್ಯವಹಾರ ಮುಖ ಮಾತ್ರವಿರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ರಂಗಭೂಮಿ ಕುರಿತಾಗಿ ಅವನಿಗೊಂದು ಮೋಹವಿರುತ್ತದೆ. ಕಂಪನಿ ಕಟ್ಟುವ ಮೊದಲು ರಂಗಭೂಮಿ ಕುರಿತಾಗಿರುವ ಪ್ರೀತಿಯೇ ಮುಖ್ಯವಾಗಿರುತ್ತದೆ. ಕಟ್ಟಿದ ಮೇಲೆ ಅದನ್ನು ನಡೆಸಿಕೊಂಡು ಹೋಗುವ ಉಳಿಸಿಕೊಂಡು ಹೋಗುವ ದಾರಿಯಲ್ಲಿ ವ್ಯವಹಾರ ಮುಖ ಕ್ರಮೇಣ ಬೆಳೆಯುತ್ತದೆ. ನಾಟಕದ ಮೇಲೆ ಒಂದಿಷ್ಟೂ ಪ್ರೀತಿಯಿಲ್ಲದವ ಎಂದೂ ಕಂಪನಿ ಕಟ್ಟಲಾರ.

ಬಿ.ಆರ್. ಅರಿಷಿಣಗೋಡಿಯವರು ಕಂಪನಿ ಕಟ್ಟಿದ್ದು ಆಕಸ್ಮಿಕ. ಅವರು ಬಾಲ್ಯದಲ್ಲಾಗಲಿ, ತಾರುಣ್ಯ ದಲ್ಲಾಗಲಿ ಅಂಥದೊಂದು ಕನಸು ಕಂಡವರಲ್ಲ. ಮೊಟ್ಟ ಮೊದಲು ಅವರು ರಂಗಭೂಮಿಗೆ ಕಾಲಿಟ್ಟದ್ದು ನಾಟಕಕಾರರಾಗಿ. ತನ್ನೊಂದಿಗೆ ವಿನಾಕಾರಣ ದ್ವೇಷ ಬೆಳೆಯಿಸಲೆಳಿಸಿದ ಗೌಡನನ್ನು ಪ್ರತಿಭಟಿಸಿ ನಾಟಕ ಬರೆದದ್ದು ಆ ನಾಟಕವನ್ನು ಸ್ನೇಹಿತರೆಲ್ಲ ಕೂಡಿ ಆಡಿದ್ದು ತರುವಾಯ ಅದು ಕಂಪನಿಯಾಗಿ ರೂಪ ಪಡೆದಿದ್ದು ಆ ಕಂಪನಿಗೆ ಅರಿಷಿಣಗೋಡಿಯವರು ಮಾಲಿಕರಾದದ್ದು ಈ ಎಲ್ಲ ಪ್ರಕ್ರಿಯೆಗಳು ಅತ್ಯಂತ ಸಹಜವಾಗಿ ನಡೆದು ಬಂದ ಬೆಳವಣಿಗೆಗಳು.

೧೯೬೧ರಿಂದ ೨೦೦೩ರವರೆಗೆ ಅರಿಷಿಣಗೋಡಿಯವರ ಕಂಪನಿ ಬದುಕಿ ಬಾಳಿದೆ. ಅವರ ನಾಟಕ ರಚನೆ ೨೦೧೦ರವರೆಗೆ ನಡೆದಿದೆ. ಅಂದರೆ ಸುಮಾರು ಐದು ದಶಕಗಳ ಕಾಲ ಅವರಿಂದ ವೃತ್ತಿರಂಗಭೂಮಿಗೆ ಸಂಬಂಧಿಸಿದಂತೆ ಕಂಪನಿ ಕಟ್ಟುವ, ಕಂಪನಿಗೆ ಬೇಕಾದ ನಾಟಕಗಳನ್ನು ರಚಿಸುವ ರಂಗ ಚಟುವಟಿಕೆಗಳು

ನಡೆದಿವೆ. ಈ ಅವಧಿಯಲ್ಲಿ ಅನೇಕ ಸುಪ್ರಸಿದ್ಧ ನಾಟಕಕಾರರು ಭಕ್ತಿ ಪ್ರಧಾನ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ. ತಾವು ರಚಿಸಿದ ನಾಟಕಗಳನ್ನು ರಂಗಪ್ರಯೋಗಕ್ಕೆ ಒಳಪಡಿಸಿದ್ದಾರೆ. ಈ ಅವಧಿಯಲ್ಲಿ ಅಸಂಖ್ಯಾತ ನಾಟಕ ಕಂಪನಿಗಳು ಹುಟ್ಟಿ ತಮ್ಮ ರಂಗಪ್ರಯೋಗಗಳ ಮುಖಾಂತರ ರಂಗಕಲಾ ಸೇವೆಯನ್ನು ಮಾಡಿವೆ. ಹೀಗಾಗಿ ಅರಿಷಿಣಗೋಡಿಯವರ ಸ್ಥಾನಮಾನ ಗುರುತಿಸುವಲ್ಲಿ ಈ ಕಾಲಾವಧಿ ಮಹತ್ವಪೂರ್ಣವಾಗಿದೆ.

ಬಿ.ಆರ್. ಅರಿಷಿಣಗೋಡಿಯವರು ಕರ್ನಾಟಕದಾದ್ಯಂತ ರಂಗಪ್ರಯೋಗಗಳನ್ನು ಮಾಡುತ್ತ ಸಂಚರಿಸಿದರೂ ಇವರ ಕಾರ್ಯಕ್ಷೇತ್ರ ಪ್ರಮುಖವಾಗಿ ಉತ್ತರ ಕರ್ನಾಟಕವೇ. ಆದ್ದರಿಂದ ಉತ್ತರ ಕರ್ನಾಟಕದ ಪ್ರಮುಖ ನಾಟಕಕಾರರು ಹಾಗೂ ಕಂಪನಿಗಳ ಹಿನ್ನೆಲೆಯಲ್ಲಿ ಬಿ.ಆರ್. ಅರಿಷಿಣಗೋಡಿಯವರನ್ನು ನೋಡಬೇಕಾಗುತ್ತದೆ. ಅವರದು ಬಹುಮುಖ ವ್ಯಕ್ತಿತ್ವ. ಅವರು ನಾಟಕ ಬರೆದಂತೆ ಒಳ್ಳೆಯ ನಟರೂ ಆದರು, ಒಳ್ಳೆಯ ನಟರಾದಂತೆ ಒಳ್ಳೆಯ ಕಂಪನಿ ಮಾಲಿಕರಾದರು. ಅರಿಷಿಣಗೋಡಿಯವರು ರಂಗಭೂಮಿಗೆ ಬಂದದ್ದು ಹಣಗಳಿಸಲೆಂದಲ್ಲ, ಮತ್ತಾವುದೇ ತೆವಲಿಗಲ್ಲ. ರಂಗಭೂಮಿಯ ಕಲೆಯ ಗೀಳು ಅವರನ್ನು ಕರ್ನಾಟಕ ರಂಗಭೂಮಿಗೆ ಎಳೆದು ತಂದಿದೆ.

ಬಿ.ಆರ್. ಅರಿಷಿಣಗೋಡಿಯವರು ವೃತ್ತಿರಂಗಭೂಮಿಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು. ಸುಖ ಬರಲಿ, ನೋವಿರಲಿ ಎಲ್ಲವನ್ನೂ ಸಮನಾಗಿ ಸ್ವೀಕರಿಸಿ ಕೇವಲ ಕಲೆಗಾಗಿ ಬದುಕಿದವರು. ಅವರದು ಬಿಡುವಿರದ ದುಡಿಮೆ. ಕಂಪನಿಯೊಂದನ್ನು ಕಟ್ಟಿಕೊಂಡು ನಟ-ನಟಿಯರ ಆಗುಹೋಗುಗಳನ್ನು ವಿಚಾರಿಸುತ್ತ ನಿರಂತರ ಶ್ರಮಿಸಿದವರು. ನಟ-ನಟಿಯರಿಗೆ ರಾತ್ರಿ ವೇಳೆ ರಂಗಭೂಮಿಯ ಮೇಲೆ ತಮ್ಮ ಪಾತ್ರ ಕುರಿತಾದ ಯೋಚನೆ ಮಾತ್ರ. ನಿರ್ವಹಣೆ ಹೊತ್ತ ಕಂಪನಿ ಮಾಲಿಕನಾದವನು ಹಗಲು, ರಾತ್ರಿ ಎರಡೂ ಹೊತ್ತು ಯೋಚಿಸಬೇಕು. ನಟನೊಬ್ಬನ ಪಾತ್ರ ಚೆನ್ನಾಗಿಲ್ಲ, ಅವನನ್ನು ಹೇಗೆ ಸುಧಾರಿಸಬೇಕು. ನಟಿಯೊಬ್ಬಳು ಕಾಯಿಲೆ ಬಿದ್ದಿದ್ದಾಳೆ, ನಾಳೆ ಅವಳನ್ನು ಯಾವ ದವಾಖಾನೆಗೆ ಕರೆದುಕೊಂಡು ಹೋಗಬೇಕು, ಪರದೆ ಎಳೆಯುವ ಹುಡುಗನ ವೇತನ ಸಾಲದು ಹೆಚ್ಚು ಮಾಡಿರಿ ಎನ್ನುತ್ತಿದ್ದಾನೆ. ಅವನಿಗೆ ಏನು ಹೇಳಬೇಕು, ಮುಂದಿನ ಕ್ಯಾಂಪ್ ಯಾವೂರಲ್ಲಿ ಮಾಡಬೇಕು -ಹೀಗೆ ಹತ್ತು ಹಲವು ವಿಚಾರಗಳು ಕಾಡುತ್ತಲೇ ಇರುತ್ತವೆ. ಮಾಲಿಕ ಎಲ್ಲ ವಿಚಾರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಹಾಗೆ ಸ್ಪಂದಿಸದಿದ್ದರೆ ರಂಗಪ್ರಯೋಗದ ಮೇಲೆ ಪರಿಣಾಮ ಬೀರಿ ಏನೇನೋ ಎಡವಟ್ಟುಗಳಾಗುತ್ತವೆ. ಇವಕ್ಕೆಲ್ಲ ಪರಿಹಾರ ಸಿಗುವುದು ಶ್ರದ್ಧೆ ಇದ್ದಾಗ ಮಾತ್ರ. ಬಿ.ಆರ್. ಅರಿಷಿಣಗೋಡಿಯವರು ಇಂಥ ರಂಗ ಶ್ರದ್ಧೆಯಿಂದಲೇ ರಂಗಭೂಮಿಯಲ್ಲಿ ಪಾತ್ರವಾಡಿದವರು.

ಇಲ್ಲಿ ರಂಗಶ್ರದ್ಧೆ ಎಂಬುದನ್ನು ಒಂದೇ ಮುಖದಿಂದ ನೋಡಿಲ್ಲ. ಅವರ ಒಡನಾಟದಲ್ಲಿ ಬರುವ ಎಲ್ಲಾ ವಿಷಯಗಳನ್ನು, ಸಮಸ್ಯೆಗಳನ್ನು ಧನಾತ್ಮಕವಾಗಿ ವಿಸ್ತರಿಸುವ ರೀತಿಗೆ ಇಲ್ಲಿ ಒತ್ತುಕೊಡಲಾಗಿದೆ.

ಕಂಪನಿಯಿಂದ ಮೇಲೆ ಊರಿಂದೂರಿಗೆ ಕ್ಯಾಂಪ್ ಮಾಡಬೇಕು. ೪೩ ವರ್ಷಗಳ ಕಾಲ ಹರಿಗಡಿಯದೆ ಅಡ್ಡಾಡಿದ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಂಪನಿ ಪ್ರವಾಸದ ರೀತಿಯನ್ನು 'ರಂಗಯಾತ್ರೆ' ಶೀರ್ಷಿಕೆಯಡಿಯಲ್ಲಿ ಸಮೀಕ್ಷಿಸಲಾಗಿದೆ. ಬಿ.ಆರ್. ಅರಿಷಿಣಗೋಡಿಯವರೊಂದಿಗೆ ಅನೇಕ ಕಲಾವಿದರಿದ್ದಾರೆ. ಒಬ್ಬಿಬ್ಬರನ್ನು ಬಿಟ್ಟು ಯಾವ ನಟ-ನಟಿಯರೂ ಕಂಪನಿಯಲ್ಲಿ ಶಾಶ್ವತವಾಗಿ ಉಳಿದಿಲ್ಲ. ಅದು ಸಾಧ್ಯವೂ ಇಲ್ಲ. ಅವರು ಎಷ್ಟೇ ಕಾಲ ನಿಲ್ಲಲಿ, ಅವರ ಕೊಡುಗೆ ರಂಗಭೂಮಿಗೆ ಸಂದಿರುತ್ತದೆ. ಇಂಥ ಕಲಾವಿದರನ್ನು ಗ್ರಹಿಸಿಕೊಂಡಿರುವಲ್ಲಿಯೂ ಅವರ ಶ್ರದ್ಧೆಯಿದೆ. ಅವರು ರಂಗಯಾತ್ರೆ ಮಾಡುತ್ತಲೇ ನಾಟಕ ರಚಿಸಿದರು. ಯಾವವು, ಎಲ್ಲೆಲ್ಲಿ ಸೃಷ್ಟಿಗೊಂಡವು, ಎಲ್ಲಾ ಒತ್ತಡಗಳ ಮಧ್ಯೆ ಹೇಗೆ ಬರೆದರು, ಇವನ್ನೆಲ್ಲ ಇಲ್ಲಿ ದಾಖಲಿಸಲಾಗಿದೆ. ಸಂಗಡವೇ ಈ ಕಂಪನಿ ಅನ್ಯರ ನಾಟಕಗಳನ್ನು ಆಡಿ ಸಹೃದಯತೆ ತೋರಿವೆ. ಅದನ್ನು ಇಲ್ಲಿ ವಿವರಿಸಲಾಗಿದೆ. ಕಂಪನಿ ಕಟ್ಟಿದವನಿಗೆ ಬರುವ ಅಡೆತಡೆಗಳೇನು, ಅಂಥವುಗಳನ್ನು ಬಿ.ಆರ್. ಹೇಗೆ ಎದುರಿಸಿದರು, ಕಂಪನಿ ಆಡಳಿತ ಹೇಗಿತ್ತು ಅದರಲ್ಲೆಲ್ಲ ಇವರ ರಂಗ ಶ್ರದ್ಧೆ ಹೇಗಿತ್ತು ಎಂಬುದನ್ನು ಇಲ್ಲಿ ಪರಿವೀಕ್ಷಿಸಲಾಗಿದೆ. ಒಟ್ಟಾರೆ ಬಿ.ಆರ್. ಅವರು ತಮ್ಮ ಜೀವವೆಂಬಂತೆ ಕಂಪನಿ ಮುನ್ನಡಿಸಿಕೊಂಡು ಬಂದ ಬಗೆಯನ್ನು ವಿವರಿಸುವಲ್ಲಿ ಎಲ್ಲಾ ನಿಟ್ಟಿನ ವಿಷಯಗಳನ್ನು ಕ್ರೂಢೀಕರಿಸಲು ಇಲ್ಲಿ ಯತ್ನಿಸಲಾಗಿದೆ.

'ನಾಟ್ಯಕವಿರಾಜ' ಎಂಬ ಬಿರುದು ಪಡೆದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ ಹೆಸರು ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಪ್ರಸಿದ್ಧಿ ಪಡೆದ ಕಾಲವದು. ಅತಿ ಭಾವುಕತೆಯ ಕಥಾವಸ್ತುವನ್ನು ಆಯ್ದುಕೊಂಡು ನಾಟಕೀಯ ದೃಶ್ಯಾವಳಿಯ ಸನ್ನಿವೇಶಗಳನ್ನು ಜೋಡಿಸಿ ಜನರ ಮನಸ್ಸು ರಂಜಿಸುವ ಕಲಾ ಕೌಶಲವನ್ನು ಪಡೆದ ಶಾಸ್ತ್ರಿಗಳ ಸಾಮಾಜಿಕ ರಂಗ ನಾಟಕಗಳು ಯುವ ನಾಟಕಕರಾರರನ್ನು ಆಕರ್ಷಿಸಿದವು. ಇವರ ಪ್ರೇರಣೆಯಿಂದ ಸಾಮಾಜಿಕ ನಾಟಕಕಾರರ ತಂಡವೇ ಹುಟ್ಟಿಕೊಂಡಿತು. ಈ ಕಾಲವನ್ನು ಸಾಮಾಜಿಕ ನಾಟಕಕಾರರ ಸುಗ್ಗಿಯ ಕಾಲವೆಂದೇ ಹೇಳಬಹುದು.

ಇದೇ ಅವಧಿಯಲ್ಲಿ ರಚನೆಗೊಂಡ ನಾಟಕಗಳೆಂದರೆ ಕೆ.ಎನ್. ಸಾಳುಂಕೆಯವರ ವರ ನೋಡಿ ಹೆಣ್ಣುಕೊಡು, ಮನೆ ಕಟ್ಟಿನೋಡು, ಕಾಲು ಕೆದರಿದ ಹೆಣ್ಣು, ಪಿ.ಬಿ. ಧುತ್ತರಗಿಯವರ ಸಂಪತ್ತಿಗೆ ಸವಾಲ್, ತಾಯಿ ಕರುಳು, ಅತ್ತಿಗೆ, ಚಿಕ್ಕ ಸೊಸೆ, ಮಾರುತೇಶ ಮಾಂಡ್ರೆಯವರ ಧರ್ಮದೇವತೆ, ಕಟ್ಟಿದ ತಾಳಿ, ಸಂಸಾರ, ಮಡದಿ ಕೊಟ್ಟ ಮಾತು, ಎಚ್.ಆರ್. ಭಸ್ಮೆಯವರ ಯಾರ ವಿಶ್ವಾಸ ಯಾರಿಗೆ, ಬಾಳು ಬೆಳಗಿದ ಸತಿ, ಪುಂಡರ ಗಂಡ, ಒಲಿದರೆ ನಾರಿ ಮುನಿದರೆ ಮಾರಿ, ಎಚ್.ಎನ್. ಹೂಗಾರರ ಕೊಂಡು ತಂದ ಗಂಡ, ಹುಚ್ಚರ ರಾಜ್ಯ, ಬೂದಿ ಮುಚ್ಚಿದ ಕೆಂಡ, ದಸರಾ, ಹೆಣ್ಣು ಬಾಳಿನ ಕಣ್ಣು, ಡಿ.ಆರ್. ಕಾಮತರ ಹೈಬ್ರಿಡ್ ಹೆಣ್ಣು, ಹೃದಯ ದೇಗುಲ, ಜ್ವಾಲಾಮುಖಿ, ಎನ್. ಎಸ್. ಜೋಶಿಯವರ ಸೋತು ಗೆದ್ದ ಸಾಧ್ವಿ, ಚೆನ್ನಪ್ಪ ಚೆನ್ನಗೌಡ, ಸಮಾಜಕ್ಕೆ ಸವಾಲ್, ರೌಡಿ ರಾಮಾಚಾರಿ, ತಲಾಟಿ ಮಾಡಿದ

ಗಲಾಟೆ, ಹುಚ್ಚಿ, ಹಚ್ಚಿದ ದೀಪ, ಯಾರಿಗೆ ಯಾರು, ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕಾರಸ್ಥಾನ, ಪ್ರೇಮ ಜ್ಯೋತಿ, ಗರತಿಯ ಜೀವನ, ರಾಜಕುಮಾರಿ, ಪದ್ಮಾ, ಮೋಹನ ಕಿರಣಗಿಯವರ ಅಣ್ಣ-ತಂಗಿ, ಎನ್. ಬಸವರಾಜರ ಸೂಳೆಮಗ, ಗಂಡಬಿಟ್ಟ ಗರತಿ, ದುಡ್ಡಿನ ದರ್ಪ, ರೈತನ ಮಕ್ಕಳು, ಬಿ.ವಿ. ಈಶರ ಗೌಡ್ರ ಗದ್ದ, ಕಲಿತ-ಕಳ್ಳ ಮುಂತಾದ ನಾಟಕಗಳನ್ನು ರಚಿಸಿ ವೃತ್ತಿರಂಗಭೂಮಿಯಲ್ಲಿ ಸಾಮಾಜಿಕ ನಾಟಕಗಳಿಗೆ ಒಂದು ಹೊಸ ಆಯಾಮವನ್ನು ಸೃಷ್ಟಿಸಿದ್ದರು.

ಇನ್ನು ಕೆಲವು ನಾಟಕಕಾರರು ನಾಟಕ ಬರೆಯಬೇಕೆಂಬ ಹಟಕ್ಕೆ ಬಿದ್ದು ಹೆಸರಿಗೆ ನಾಟಕವೆನ್ನುವ ರೀತಿಯಲ್ಲಿ ನಾಟಕ ರಚಿಸಲು ಮುಂದಾಗಿ ವೃತ್ತಿರಂಗಭೂಮಿಯ ಪಾವಿತ್ರ್ಯವನ್ನು ಕೆಡಿಸಿದರು. ಇನ್ನೂ ಕೆಲ ಕಂಪನಿ ಮಾಲಿಕರು ಬೇರೊಬ್ಬರು ಬರೆದ ನಾಟಕವನ್ನು ತಾವೇ ರಚಿಸಿದ್ದು ಎಂದು ಪ್ರಚಾರ ಗಿಟ್ಟಿಸಿಕೊಂಡರು. ಈ ಕಾಲಾವಧಿಯಲ್ಲಿ (೧೯೬೧) ನಾಟಕ ಸಾಹಿತ್ಯ ರಚನೆ ತನ್ನ ಕಲಾತ್ಮಕ ಅಂಶಗಳನ್ನು ಕಳೆದುಕೊಳ್ಳುತ್ತದೆಯೋ ಎಂಬಂತೆ ಕೃತಕವೆನಿಸಲಿಕ್ಕೆ ಹತ್ತಿತು. ಈಗಾಗಲೇ ವೃತ್ತಿರಂಗಭೂಮಿಯಲ್ಲಿ ಮನೆ ಮಾಡಿದ್ದ ಕೃತಕತೆ, ಏಕತಾನತೆಯನ್ನು ಮನಗಂಡ ಬಿ.ಆರ್. ಅರಿಷಿಣಗೋಡಿಯವರು ಹೊಸ ನಮೂನೆಯ ಸಮಕಾಲೀನ ಸಂವೇದನೆಗಳನ್ನು ಗರ್ಭೀಕರಿಸಿಕೊಂಡು 'ಲಂಚ ಸಾಮ್ರಾಜ್ಯ' ಎಂಬ ನಾಟಕವನ್ನು ರಚಿಸಿ ವೃತ್ತಿರಂಗಭೂಮಿಗೆ ಹೊಸತನವನ್ನು ತಂದುಕೊಟ್ಟರು.

ಬಿ.ಆರ್. ಅರಿಷಿಣಗೋಡಿಯವರು ೪೩ ವರ್ಷಗಳ ಕಾಲ ತಮ್ಮ ಕಂಪನಿಯನ್ನು ನಡೆಸಿಕೊಂಡು ಬಂದವರು. ಐಹಿಕ ಬದುಕಿನ ಆಕರ್ಷಣೆ, ಹಿತಾಸಕ್ತಿಗಳನ್ನು ಬದಿಗೊತ್ತಿ ರಂಗಲೋಕಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡ ಅರಿಷಿಣಗೋಡಿಯವರ ರಂಗಶ್ರದ್ಧೆ ಅನುಕರಣೀಯ.

ಅ. ರಂಗಯಾತ್ರೆ

೨೧-೧೨-೧೯೬೧ರಂದು ಬಾಗಲಕೋಟೆಯಲ್ಲಿ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಎಂಬ ಹೆಸರಿನಿಂದ ಕಂಪನಿಯನ್ನು ಬಿ.ಆರ್. ಅರಿಷಿಣಗೋಡಿಯವರು ಸ್ವಂತ ಮಾಲಿಕತ್ವದಲ್ಲಿ ಕಟ್ಟಿದ ವಿಷಯ ಈ ಹಿಂದೆಯೇ ಪ್ರಸ್ತಾಪಿಸಲ್ಪಟ್ಟಿದೆ. ಮೊಟ್ಟಮೊದಲು ತಾವೇ ಬರೆದ ಲಂಚ ಸಾಮ್ರಾಜ್ಯ ಎಂಬ ನಾಟಕವನ್ನು ರಂಗ ಪ್ರಯೋಗಕ್ಕೆ ಒಳಪಡಿಸಿದರು. 'ಲಂಚ ಸಾಮ್ರಾಜ್ಯ' ನಾಟಕವು ಬಾಗಲಕೋಟೆಯಲ್ಲಿ ಸತತ ಐವತ್ತು(೫೦) ಯಶಸ್ವಿ ಪ್ರಯೋಗಗಳನ್ನು ಕಂಡಿತು. ಮಾಸ್ಟರ್ ಹಿರಣ್ಣಯ್ಯನವರ 'ಲಂಚಾವತಾರ' ನಾಟಕದ ನಂತರ ಅದೇ ಹೆಸರನ್ನು ಹೋಲುವ ಈ ಕಮತಗಿ ಕಂಪನಿಯ 'ಲಂಚಸಾಮ್ರಾಜ್ಯ' ನಾಟಕವು ಬಾಗಲಕೋಟೆಯಲ್ಲಿ ಯಶಸ್ವಿ ರಂಗ ಪ್ರಯೋಗಗಳಿಂದ ಕಂಪನಿಯ ಕೀರ್ತಿ, ಸಂಪತ್ತು ಹೆಚ್ಚಿಸಿತು.

ಕಂಪನಿ ಬಾಗಲಕೋಟೆಯಲ್ಲಿ ಕ್ಯಾಂಪ್ ಮಾಡಿದಾಗ ಡಿ.ಸಿ.ಸಿ. ಬ್ಯಾಂಕ್‌ನ ಮ್ಯಾನೇಜರರಾದ ಕೆ.ಜಿ. ಕಕರಡ್ಡಿ, ಭಗವತಿ ಗ್ರಾಮದ ಬಾಗಲಕೋಟ ವಿಧಾನಸಭೆಯ ಸದಸ್ಯರಾದ ಬಿ.ಟಿ. ಮುರನಾಳ ಹಾಗೂ

ಬಾಗಲಕೋಟೆಯ ಗಣ್ಯ ವ್ಯಾಪಾರಸ್ಥರಿಂದ ಸಹಕಾರ ಪಡೆದು ಯಶಸ್ವಿ ಪ್ರಯೋಗಗಳನ್ನು ಮಾಡಿ ಜನಾನುರಾಗಿಯಾದರು. 'ಲಂಚ ಸಾಮ್ರಾಜ್ಯ' ಎಂಬ ಒಂದೇ ಒಂದು ನಾಟಕವನ್ನು ಪ್ರದರ್ಶಿಸುತ್ತಿದ್ದುದರಿಂದ ಕಂಪನಿಯು ಬಾಗಲಕೋಟಿಯಲ್ಲಿ ಬಹಳ ದಿನಗಳವರೆಗೆ ನಿಲ್ಲಲು ಸಾಧ್ಯವಾಗಲಿಲ್ಲ. ತಮ್ಮ ಕಂಪನಿ ಬೆಳೆಯಲು, ಮುನ್ನಡೆಯಲು ಮಾಲಿಕನಾದವ ಮತ್ತೆ ಮತ್ತೆ ಪರ್ಯಾಯ ಆಲೋಚನೆಗಳನ್ನು ಮಾಡಬೇಕಾಗುತ್ತದೆ. ಕಂಪನಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಕಲಾವಿದರ ಸಂಘಟನೆ, ತಾಲೀಮು, ಪ್ರಚಾರ, ಪ್ರದರ್ಶನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಬೇಕಾಗುವುದು. ಅದು ತನ್ನ ಕಂಪನಿಯ ಕಲಾವಿದರ ಲೌಕಿಕ ಬದುಕಿನ ನಿರ್ವಹಣೆಗೆ ಸಂಬಳವನ್ನು ಕೊಡುವುದಲ್ಲದೇ ಇತರೆ ಖರ್ಚು-ವೆಚ್ಚಗಳನ್ನು ನಿಭಾಯಿಸಬೇಕಾಗುತ್ತದೆ. ಕಂಪನಿಗಳು ತಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಬೆನ್ನಲ್ಲೇ ನಾಡಿನ ಜನರ ಮೆಚ್ಚುಗೆ ಗಳಿಸಿಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ.

ಒಂದು ಕಂಪನಿ ಆರ್ಥಿಕವಾಗಿ ಅಶಕ್ತಗೊಂಡರೆ, ರಂಗಾಸಕ್ತರ ಆಸಕ್ತಿಯನ್ನು ಕಳೆದುಕೊಂಡರೆ ಒಂದೇ ಊರಿನಲ್ಲಿ ಬಹಳ ದಿನಗಳವರೆಗೆ ನಿಲ್ಲಲು ಸಾಧ್ಯವಾಗುವುದಿಲ್ಲ. ಒಂದೊಂದು ಸಾರಿ ಕಂಪನಿ-ಕಂಪನಿಗಳ ಮಧ್ಯ ಸ್ಪರ್ಧೆ ಏರ್ಪಟ್ಟು, ಕಂಪನಿಗಳು ಆಡುತ್ತಿದ್ದ ಒಂದೋ ಎರಡು ನಾಟಕಗಳ ಪ್ರಯೋಗಗಳಿಂದಲೇ ಪ್ರೇಕ್ಷಕರ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದ್ದವು. ಹೀಗಾಗಿ ಕಂಪನಿಗಳು ಒಂದು ಊರಿನಲ್ಲಿ ಬಹಳ ದಿನಗಳವರೆಗೆ ನಿಲ್ಲದೇ ಬೇರೆ ಬೇರೆ ಪಟ್ಟಣಗಳಿಗೆ ತನ್ನ ರಂಗ-ಕಲಾ ಸೇವೆಯನ್ನು ಮುಂದುವರೆಸಿ ಗಲ್ಲಾ ಪೆಟ್ಟಿಗೆಯನ್ನು ತುಂಬಿಸಿಕೊಳ್ಳುವದು ಅನಿವಾರ್ಯವಾಗುತ್ತದೆ.

ಬಾಗಲಕೋಟಿಯ ಕ್ಯಾಂಪಿನಲ್ಲಿ 'ಲಂಚಸಾಮ್ರಾಜ್ಯ' ನಾಟಕದ ಯಶಸ್ಸಿನಿಂದ ಉತ್ತೇಜಿತರಾದ ಬಿ.ಆರ್. ಅರಿಷಿಣಗೋಡಿಯವರು ಇಳಕಲ್, ಅಮೀನಗಡ, ಹುನಗುಂದ, ಬಾದಾಮಿ, ರಬಕವಿ, ಬನಹಟ್ಟಿ, ಮಹಾಲಿಂಗಪೂರ, ಜಮಖಂಡಿ, ಮುಧೋಳ ಮುಂತಾದ ಕಡೆಗಳಲ್ಲಿ ಕ್ಯಾಂಪು ಮಾಡಿ ಪರಿಣಾಮಕಾರಿ ರಂಗ ಪ್ರಯೋಗಗಳ ಮುಖಾಂತರ ವೃತ್ತಿರಂಗಭೂಮಿಯಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಕಂಪನಿ ಕ್ಯಾಂಪ್ ಮಾಡಿದ ಊರುಗಳಲ್ಲಿ ಸ್ಥಳಿಯರ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದು ಕಂಪನಿಯ ಯಶಸ್ಸಿಗೆ ಶ್ರೀರಕ್ಷೆಯಾಯಿತು.

ಲಂಚ ಸಾಮ್ರಾಜ್ಯವು ತನ್ನ ಅಂತಸ್ಸತ್ವದಿಂದ ಕಲಾವಿದರ ನೈಪುಣ್ಯದಿಂದ ಕಂಪನಿಗೆ ಕೀರ್ತಿ ತಂದಿತಾದರೂ ಅದೊಂದೇ ನಾಟಕದಿಂದ ಕಂಪನಿಯ ಅಸ್ತಿತ್ವ ಕಷ್ಟ ಸಾಧ್ಯವೆಂಬುದನ್ನು ಅರಿತ ಬಿ.ಆರ್. ಅರಿಷಿಣಗೋಡಿ ಯವರು ಕಮತಗಿಯಲ್ಲಿ ನಡೆದ ಘಟನೆಯೊಂದಕ್ಕೆ ನಾಟಕದ ರೂಪ ಕೊಟ್ಟು 'ಹೆಣ್ಣುಮಗಳು' ಎಂಬ ಇನ್ನೊಂದು ನಾಟಕ ಬರೆದರು. ಮರುವರುಷ ಅಂದರೆ ೧೯೬೨ರಲ್ಲಿ ಮತ್ತೆ ಕಂಪನಿ 'ಹೆಣ್ಣುಮಗಳು' ನಾಟಕದೊಂದಿಗೆ ಬಾಗಲಕೋಟಿಯಲ್ಲಿ ಕ್ಯಾಂಪ್ ಮಾಡಿತು. ಈ ಎರಡನೆಯ ನಾಟಕ 'ಹೆಣ್ಣುಮಗಳು' ಕಂಪನಿಗೆ ಹಣ ಮತ್ತು ಜನಮೆಚ್ಚುಗೆಯನ್ನು ತಂದುಕೊಟ್ಟಿತು. ಮುಂದೆ ಕಂಪನಿ ೧೯೬೨ರಿಂದ

೬೪ರವರೆಗೆ ಬಾಗಲಕೋಟೆಯಿಂದ ಹುನಗುಂದ, ಇಳಕಲ್, ಗುಳೇದಗುಡ್ಡ, ವಿಜಾಪುರ, ಮುಧೋಳ, ಗೊಡಚಿ ಜಾತ್ರೆಗೆ, ಜಮಖಿಂಡಿ, ರಬಕವಿ, ಬನಹಟ್ಟಿ, ಮಹಾಲಿಂಗಪುರ, ಗದಗ ಮುಂತಾದ ಊರುಗಳಲ್ಲಿ ತನ್ನ ಕಲಾ ಯಾತ್ರೆಯನ್ನು ಮುಂದುವರಿಸಿ ಜನಾನುರಾಗಿಯಾಗಿ ಮೆರೆಯಿತು. ಗದಗ್ ಕ್ಯಾಂಪಿನಲ್ಲಿ 'ಹೆಣ್ಣುಮಗಳು' ನಾಟಕ ಮಲ್ಲಮ್ಮ ರಂಗಮಂದಿರದಲ್ಲಿ ಸತತ ೧೦೧ ಯಶಸ್ವಿ ಪ್ರಯೋಗಗಳನ್ನು ಮಾಡಿ ಸುತ್ತಲಿನ ಗ್ರಾಮಗಳ ಜನರ ಮನಸ್ಸನ್ನು ಗೆದ್ದುಕೊಂಡಿತು. ಮೂರು ವರ್ಷಗಳಲ್ಲಿ ಎರಡೂ ನಾಟಕಗಳ ಯಶಸ್ಸಿನಿಂದ ಕಂಪನಿ ಆರ್ಥಿಕವಾಗಿ ಸುಭದ್ರವಾಯಿತು.

೧೯೬೪ರಲ್ಲಿಯ ಗದಗ್ ಕ್ಯಾಂಪ್ ಕಂಪನಿಯ ಇತಿಹಾಸದಲ್ಲಿಯೇ ನೆನಪಿಡುವಂತಹದ್ದು. ಈ ಮೂರು ಮೂರುವರೆ ವರ್ಷಗಳವರೆಗೆ ಕಂಪನಿಯು ಎರಡೇ ನಾಟಕಗಳನ್ನು ಆಡುತ್ತ ಗದಗಗೆ ಕ್ಯಾಂಪ್ ಮಾಡಿತ್ತು. ಈ ಕ್ಯಾಂಪಿನಲ್ಲಿದ್ದಾಗಲೇ ಬಿ.ಆರ್. ಅರಿಷಿಣಗೋಡಿಯವರು 'ಬಸ್ ಕಂಡಕ್ಟರ್' ನಾಟಕ ಬರೆದಿದ್ದರು. ಕರ್ನಾಟಕದಾದ್ಯಂತ ಜಯಭೇರಿ ಬಾರಿಸಿದ ಮತ್ತು ಇಂದಿಗೂ ತನ್ನ ಜನಪ್ರಿಯತೆಯನ್ನು ಇಟ್ಟುಕೊಂಡ ನಾಟಕ ಇದು. ಗದುಗಿನ ಮಲ್ಲಮ್ಮ ರಂಗಮಂದಿರದಲ್ಲಿ ೨೦೧ ಯಶಸ್ವಿ ಪ್ರಯೋಗಗಳನ್ನು ಮಾಡಿ ಜನಮೆಚ್ಚುಗೆಯನ್ನು ಪಡೆಯಿತು. ಕುರ್ಚಿ ೫ ರೂ., ಚಾಪೆ ೨ ರೂ., ನೆಲ ೧ ರೂ. ಇದ್ದಾಗ ಒಂದೊಂದು ಪ್ರಯೋಗಕ್ಕೆ ಎರಡರಿಂದ ಎರಡೂವರೆ ಸಾವಿರ ಕಲೆಕ್ಷನ್ ಆಗುತ್ತಿತ್ತು. ಇಂತಹ ಜನದಟ್ಟಣೆಯ ರಂಗಪ್ರಯೋಗಗಳು 'ಬಸ್ ಕಂಡಕ್ಟರ್' ನಾಟಕದ ಜನಪ್ರಿಯತೆಗೆ ಸಾಕ್ಷಿ.

ಸುಪ್ರಸಿದ್ಧ ಸಾಮಾಜಿಕ ನಾಟಕಕಾರೆಂದು ಹೆಸರು ಗಳಿಸಿದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ ಪರಿಚಯ ಇದೇ ಗದಗ್ ಕ್ಯಾಂಪಿನಲ್ಲಿ ಆಯಿತು. 'ಬಸ್ ಕಂಡಕ್ಟರ್' ನಾಟಕವನ್ನು ನೋಡಿದ ಮಹಾಂತೇಶ ಶಾಸ್ತ್ರೀಗಳು, ಈ ನಾಟಕದ ಕಥೆ, ಸನ್ನಿವೇಶ, ಸಂಭಾಷಣೆ ಮುಂತಾದವುಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದರು. ಮುಂದೆ ಬಿ.ಆರ್. ಅರಿಷಿಣಗೋಡಿಯವರ ಅಪೇಕ್ಷೆಯಂತೆ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ' ಕಂಪನಿಯ ರಂಗಪ್ರಯೋಗಕ್ಕಾಗಿಯೇ ಅಕ್ಕ-ತಂಗಿ, ಪ್ರಜಾ ಸರಕಾರ, ಏರಿದ ನಂಜು, ಎಲ್ಲಿದೆ ಸರಕಾರ, ಇವನೆಂಥ ಗಂಡ, ಕಲಿತ ಕತ್ತೆ, ಪೋಸ್ಟಮನ್ ಮುಂತಾದ ನಾಟಕಗಳನ್ನು ರಚಿಸಿಕೊಟ್ಟರು. ಬೇರೆ ಬೇರೆ ಊರುಗಳಲ್ಲಿ ನೂರಾರು ರಂಗಪ್ರಯೋಗಗಳನ್ನು ಮಾಡಿ ಕಂಪನಿ ಹಣ ಮತ್ತು ಕೀರ್ತಿಯನ್ನು ಗಳಿಸಿತು. ಇದೇ ಕ್ಯಾಂಪಿನಲ್ಲಿದ್ದಾಗಲೇ ಬಿ.ಆರ್. ಅರಿಷಿಣಗೋಡಿಯವರು 'ಸೈನಿಕನ ಸಹೋದರಿ' ಎಂಬ ಮತ್ತೊಂದು ನಾಟಕವನ್ನು ರಚಿಸಿ ರಂಗಪ್ರಯೋಗಕ್ಕೆ ಒಳಪಡಿಸಿದರು. "ದೇಶವನ್ನು ರಕ್ಷಿಸುವ ಸೈನಿಕನ ಕುಟುಂಬವನ್ನು ಯಾರು ರಕ್ಷಿಸಬೇಕು" ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಚಲಿಸುವ ಈ ನಾಟಕ ಗದಗ್ ಕ್ಯಾಂಪಿನಲ್ಲಿ ಜನಾನುರಾಗಿಯಾಗಿ ಕಂಪನಿಗೆ ಒಳ್ಳೆಯ ಆದಾಯವನ್ನು ತಂದುಕೊಟ್ಟಿತು. 'ಬಸ್ ಕಂಡಕ್ಟರ್' ನಾಟಕವಂತೂ ಕಂಪನಿಯ ಮಾಸ್ಟರ್ ಪೀಸ್ ಆಗಿ ಮೆರೆಯಿತು. ಆರಂಭದ ಆರು ವರುಷಗಳಲ್ಲಿ ಲಂಚಸಾಮ್ರಾಜ್ಯ, ಹೆಣ್ಣುಮಗಳು,

ಬಸ್ ಕಂಡಕ್ಟರ್, ಸೈನಿಕನ ಸಹೋದರಿ ಈ ನಾಲ್ಕು ನಾಟಕಗಳು ರಂಗ ಪ್ರಯೋಗದಿಂದ ಉತ್ತರ ಕರ್ನಾಟಕದಲ್ಲಿ ಬಿ.ಆರ್. ಅರಿಷಿಣಗೋಡಿಯವರಿಗೆ ಸಾಕಷ್ಟು ಕೀರ್ತಿ, ಧನ ಸಂಪಾದನೆಯಾಯಿತು. ಜನರ ಮನವನ್ನು ಗೆದ್ದುಕೊಂಡ ಕಂಪನಿಯ ಹೆಸರಿನ ಮೇಲೆ ಇನ್ನೊಂದು ಕಂಪನಿ ಪ್ರಾರಂಭ ಮಾಡಲು ಅರಿಷಿಣಗೋಡಿಯವರು ಯೋಚಿಸಿದರು. ಅಣ್ಣ ರಾಯಪ್ಪನ ಮೇಲ್ವಿಚಾರಣೆಯಲ್ಲಿ ಬಾಗಲಕೋಟೆ ಜಿಲ್ಲೆಯ ರಬಕವಿಯಲ್ಲಿ ೧೯೬೭ರಲ್ಲಿ ಬಿ.ಆರ್. ಅರಿಷಿಣಗೋಡಿಯವರೇ ಬರೆದ 'ಬಸ್ ಕಂಡಕ್ಟರ್' ನಾಟಕದೊಂದಿಗೆ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ' ಎಂಬ ಹೆಸರಿನ ಎರಡನೆಯ ಕಂಪನಿ ಪ್ರಾರಂಭ ಮಾಡಿದರು. ರಬಕವಿ ಕ್ಯಾಂಪಿನಲ್ಲಿ ಈ ನಾಟಕ ಬಹು ಬೇಗನೆ ಜನಪ್ರಿಯವಾಗಿ ಕಂಪನಿಗೆ ಹೇರಳ ಪ್ರಮಾಣದಲ್ಲಿ ಆದಾಯ ತಂದುಕೊಟ್ಟಿತು. ಎರಡೂ ಕಂಪನಿಗಳ ಗಲ್ಲಾ ಪೆಟ್ಟಿಗೆ ತಂಬಿಸುವಲ್ಲಿ ಈ ನಾಟಕ ಯಶಸ್ವಿಯಾಯಿತು. ಈ 'ಬಸ್ ಕಂಡಕ್ಟರ್' ನಾಟಕವನ್ನು ಪ್ರಯೋಗಿಸಿದ ಕಂಪನಿಗಳೇ ಇಲ್ಲವೆನ್ನಬಹುದು. ಹಬ್ಬ ಹರಿದಿನಗಳಲ್ಲಿ ಹುಟ್ಟಿಕೊಂಡ ಹವ್ಯಾಸಿ ರಂಗ ತಂಡಗಳೂ ಈ ನಾಟಕವನ್ನು ಪ್ರಯೋಗಿಸುತ್ತಿರುವದು ಈ ನಾಟಕದ ಜನಪ್ರಿಯತೆಗೆ ಸಾಕ್ಷಿ.

ಕಂಪನಿಯ ಬತ್ತಳಿಕೆಯಲ್ಲಿದ್ದ ಕೇವಲ ನಾಲ್ಕೇ ನಾಲ್ಕು ನಾಟಕಗಳಿಂದ ವೃತ್ತಿಯ ಸ್ಪರ್ಧೆಯನ್ನು ಎದುರಿಸುವುದು ಕಷ್ಟ ಸಾಧ್ಯವೆಂಬುದನ್ನು ಅರಿಷಿಣಗೋಡಿಯವರು ಅರಿತುಕೊಂಡರು. ಈ ಕೊರತೆಯನ್ನು ತುಂಬಿಕೊಳ್ಳಲು ಸಂವೇದನಾ ಶೀಲ ಅರಿಷಿಣಗೋಡಿಯವರ ಮನಸ್ಸು ಮತ್ತೊಂದು ನಾಟಕ ಬರೆಯಲು ಪ್ರೇರೇಪಿಸಿತು. ೧೯೬೮ರಲ್ಲಿ 'ಕಣ್ಣಿದ್ದೂ ಕುರುಡ' ಎಂಬ ನಾಟಕವನ್ನು ರಚಿಸಿದರು. ಅರಿಷಿಣಗೋಡಿಯವರ ಎರಡೂ ಕಂಪನಿಗಳು ಬೇರೆ ಬೇರೆ ಊರುಗಳಲ್ಲಿ ಈ ತಮ್ಮ ಹಳೆಯ ನಾಟಕಗಳೊಂದಿಗೆ ಈ ಹೊಸ ನಾಟಕವನ್ನು ಪ್ರದರ್ಶನ ಮಾಡಿ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡವು. ಎರಡೂ ಕಂಪನಿಗಳ ಅಗತ್ಯತೆಯನ್ನು ಪೂರೈಸುವುದಕ್ಕಾಗಿ ಅದೇ ವರ್ಷ ಅಂದರೆ ೧೯೬೮ರಲ್ಲಿಯೇ 'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕ ರಚಿಸಿ ರಂಗ ಪ್ರಯೋಗಕ್ಕೆ ಒಳಪಡಿಸಿದರು. ಇವರ ಎರಡೂ ಕಂಪನಿಯ ಬತ್ತಳಿಕೆಯಲ್ಲಿದ್ದ ಒಟ್ಟು ಆರು ನಾಟಕಗಳ ಮುಖಾಂತರ ನಾಡಿನ ಅನೇಕ ಪ್ರಮುಖ ಸ್ಥಳಗಳಲ್ಲಿ ತಮ್ಮ ರಂಗ ಕಲಾಸೇವೆಯನ್ನು ಮುಂದುವರೆಸಿ ಎರಡೂ ಕಂಪನಿಗಳು ಪ್ರಸಿದ್ಧಿಯನ್ನು ಪಡೆದವು. ಮುಂದೆ ನಾಲ್ಕು ವರ್ಷಗಳವರೆಗೆ ಎರಡೂ ಕಂಪನಿಗಳು ತಮ್ಮ ರಂಗ ಕಲಾ ಸೇವೆಯನ್ನು ಮಾಡುತ್ತ ರಂಗಾಸಕ್ತರಿಂದ ಮೆಚ್ಚುಗೆ ಗಳಿಸುತ್ತ ತಿರುಗಾಟದಲ್ಲಿದ್ದರು. ಜನಾನುರಾಗಿಯಾಗಿ ಮೆರೆಯುತ್ತಿರುವ ಕಂಪನಿಯ ಜನಪ್ರಿಯತೆ ಹಸಿಯಾಗಿರುವಾಗಲೇ ಮತ್ತೊಂದು ನಾಟಕ ಬರೆಯಬೇಕೆಂದು ವಿಚಾರಿಸಿ, 'ಗರೀಬಿ ಹಟಾವೋ' ಎಂಬ ನಾಟಕವನ್ನು ಬರೆದರು. 'ಗರೀಬಿ ಹಟಾವೋ' ನಾಟಕ ನಾಡಿನ ತುಂಬೆಲ್ಲ ಸಂಚರಿಸಿ ಕಂಪನಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಿತು. ಹೀಗೆ ಕಂಪನಿಯ ರಂಗ ಕಲಾಸೇವೆಗೆ ಅನುವು ಮಾಡಿಕೊಡುತ್ತಾ ಕಂಪನಿಯ ಅಗತ್ಯಗಳಿಗೆ ಸ್ಪಂದಿಸಿ ಹೊಸ ಹೊಸ ನಾಟಕ ಬರೆಯುತ್ತ ತಮ್ಮ ನಾಟಕ ಸಾಹಿತ್ಯ ಶಕ್ತಿಯನ್ನು ಬೆಳೆಸಿಕೊಂಡಿದ್ದಾರೆ.

ಎರಡು ಕಂಪನಿಗಳ ರಂಗ ಸಂಚಾರದಿಂದ ಜನಾನುರಾಗಿಯಾದ ಅರಿಷಿಣಗೋಡಿಯವರು ಇನ್ನೊಂದು ಕಂಪನಿಯನ್ನು ಹುಟ್ಟುಹಾಕಬೇಕೆಂದು ನಿರ್ಧರಿಸಿದರು. ಅವರ ನಿರ್ಧಾರದ ಫಲವಾಗಿ ೧೯೭೭ರಲ್ಲಿ ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ 'ಗರೀಬಿ ಹಟಾವೊ' ನಾಟಕದೊಂದಿಗೆ ೩ನೆಯ ಕಂಪನಿ ಪ್ರಾರಂಭಗೊಂಡಿತು. ಮೂರು ಕಂಪನಿಗಳ ಅಗತ್ಯತೆಗೆ ಅನುಗುಣವಾಗಿ ಅರಿಷಿಣಗೋಡಿಯವರು ನಾಟಕಗಳನ್ನು ರಚಿಸುತ್ತಾ ರಂಗಪ್ರಯೋಗಗಳಿಗೆ ಒಳಪಡಿಸುತ್ತಾ ರಂಗ ಕಲಾ ಸೇವೆಯನ್ನು ಮುಂದುವರಿಸಿದರು. ಮುಂದೆ ಸುಮಾರು ಏಳು ವರ್ಷಗಳವರೆಗೆ ನಾಟಕಗಳನ್ನು ರಚಿಸದೇ ಹಿಂದೆ ತಾವು ರಚಿಸಿದ ಹಾಗೂ ಬೇರೆ ಕವಿಗಳು ರಚಿಸಿದ ನಾಟಕಗಳನ್ನು ತಮ್ಮ ಕಂಪನಿಯಲ್ಲಿ ಪ್ರದರ್ಶಿಸುತ್ತಾ ನಾಡಿನಾದ್ಯಂತ ಸಂಚರಿಸಿದರು. ಇದರ ಪರಿಣಾಮವಾಗಿ ಅರಿಷಿಣಗೋಡಿಯವರ ಕೀರ್ತಿ ನಾಡಿನಾದ್ಯಂತ ಪಸರಿಸಿತು.

ಈ ಕಂಪನಿಯ ಪ್ರಸಿದ್ಧಿ ಅರಿಷಿಣಗೋಡಿಯವರನ್ನು ಸುಮ್ಮನೆ ಕುಳ್ಳರಿಸಲಿಲ್ಲ. ಮನಸ್ಸು ಮತ್ತೊಂದು ೪ನೆಯ ಕಂಪನಿ ಪ್ರಾರಂಭ ಮಾಡಲು ನಿರ್ಣಯಿಸಿತು. ೧೯೮೪ರಲ್ಲಿ ಚಿಕ್ಕಮಗಳೂರ ಜಿಲ್ಲೆಯ ಮೂಡಿಗೆರೆಯಲ್ಲಿ 'ಗರೀಬಿ ಹಟಾವೊ' ನಾಟಕದೊಂದಿಗೆ ಪ್ರಾರಂಭವಾಯಿತು. ಈ ನಾಲ್ಕನೆಯ ಕಂಪನಿ ಬೆಂಗಳೂರು, ಮೈಸೂರು ಭಾಗದಲ್ಲಿಯೇ ಹೆಚ್ಚು ಪ್ರಯೋಗಗಳನ್ನು ಮಾಡಿತು. 'ಗರೀಬಿ ಹಟಾವೊ' 'ಬಸ್ ಕಂಡಕ್ಟರ್' 'ಇಲ್ಲಿಗೆ ಬಂತೋ ಸಂಗಯ್ಯಾ' 'ಕಣ್ಣಿದ್ದೂ ಕುರುಡ' ನಾಟಕಗಳು ಆ ಭಾಗದಲ್ಲಿಯೂ ಭಾರಿ ಯಶಸ್ಸು ಪಡೆದವು.

೧೯೬೧ರಲ್ಲಿ ಕಂಪನಿ ಪ್ರಾರಂಭವಾಗಿ ೧೯೮೪ರವರೆಗೆ ಅಂದರೆ ೨೩ ವರ್ಷಗಳಲ್ಲಿ ನಾಲ್ಕು ಶಾಖೆಗಳಾಗಿ ೨೦೦೩ರವರೆಗೆ ಅಂದರೆ ೪೩ ವರ್ಷಗಳವರೆಗೆ ನಿರಂತರ ರಂಗ ಸಂಚಾರ ಮಾಡಿ ಜನಾನುರಾಗಿಯಾಗಿ ಮೆರೆದ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕಂಪನಿಗೆ ದೀರ್ಘವಾದ ಇತಿಹಾಸವಿದೆ. ಇಷ್ಟು ದೀರ್ಘ ಇತಿಹಾಸವನ್ನು ಹೊಂದಿದ ಕಂಪನಿ ಕ್ಯಾಂಪ್ ಮಾಡಿದ ಊರುಗಳು, ಆಡಿದ ನಾಟಕಗಳು, ಪ್ರೇಕ್ಷಕರ ಪ್ರತಿಕ್ರಿಯೆ ಮುಂತಾದ ವಿಷಯಗಳನ್ನು ನಿಖರವಾಗಿ ಹೇಳಲು ನಮಗೆ ಕಷ್ಟ ಸಾಧ್ಯವಾದರೂ, ಕಂಪನಿಯ ಮಾಲಿಕರಾದ ಬಿ.ಆರ್. ಅರಿಷಿಣಗೋಡಿಯವರ ಆಗಾಧವಾದ ನೆನಪಿನ ಶಕ್ತಿ, ಅವರ ಕಂಪನಿಯಲ್ಲಿ ಅಭಿನಯಿಸಿದ ಕೆಲವು ಕಲಾವಿದರ ಅನಿಸಿಕೆಗಳು, ಅರಿಷಿಣಗೋಡಿಯವರ ನಾಟಕಗಳನ್ನು ನೋಡಿದ ಕೆಲವು ಪ್ರೇಕ್ಷಕರ ಅನಿಸಿಕೆಗಳು ಇವೆಲ್ಲ ಆಧಾರಗಳಿಂದ ಅವರ ರಂಗ ಸಂಚಾರದ ಏಳು ಬೀಳುಗಳೆಲ್ಲವನ್ನು ಇಲ್ಲಿ ದಾಖಲಿಸಲಾಗಿದೆ.

೧೯೬೧ರಲ್ಲಿ ಕಂಪನಿ ಪ್ರಾರಂಭವಾಗಿ ೨೩ ವರ್ಷಗಳಲ್ಲಿ ಅಂದರೆ ೧೯೮೪ರವರೆಗೆ ನಾಲ್ಕು ಕಂಪನಿಗಳಾಗಿ ಬೆಳೆದು ಕರ್ನಾಟಕದಾದ್ಯಂತ ಜನಾನುರಾಗಿಯಾಗಿ ಪ್ರಸಿದ್ಧಿಯನ್ನು ಪಡೆದಿತ್ತು. ಕಂಪನಿ ಬೆಳೆಯುತ್ತಾ ಬೆಳೆಯುತ್ತಾ ತನ್ನ ರಂಗ ಕಲಾ ಸೇವೆಯನ್ನು ಮುಂದುವರಿಸಿತ್ತು.

ಮೊದಮೊದಲು ಅಂದರೆ ೧೯೭೭ರವರೆಗೆ ತಾವು ರಚಿಸಿದ ನಾಟಕಗಳನ್ನು ಪ್ರದರ್ಶಿಸುತ್ತಿದ್ದ ಅರಿಷಿಣಗೋಡಿಯವರು ನಂತರ ತಾವು ರಚಿಸಿದ ಮತ್ತು ಬೇರೆ ಕವಿಗಳು ರಚಿಸಿದ ನಾಟಕಗಳನ್ನು ಪ್ರದರ್ಶಿಸಲಿಕ್ಕೆ ಹತ್ತಿದರು. ೧೯೭೭ರಿಂದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ರಚಿಸಿದ ಪ್ರಜಾ ಸರಕಾರ, ಸತಿಪತಿ, ದೇವರಿಲ್ಲದ ಗುಡಿ, ಏರಿದ ನಂಜು ನಾಟಕಗಳು ಇಡಿ ನಾಡಿನಾದ್ಯಂತ ಪ್ರದರ್ಶನಮಾಡಿ ವೃತ್ತಿರಂಗ ಭೂಮಿಯಲ್ಲಿ ಕಂಪನಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. ೭೦-೮೦ರ ದಶಕದಲ್ಲಿ ಅರಿಷಿಣಗೋಡಿಯವರ ಕಂಪನಿಗೆ ಯಾವ ನಾಟಕವೂ ಗಲ್ಲಾ ಪೆಟ್ಟಿಗೆಗೆ ಮೋಸ ಮಾಡಲಿಲ್ಲ. ೧೯೮೦ರ ವಿಜಾಪುರ ಕ್ಯಾಂಪಿನಲ್ಲಿದ್ದಾಗ ಎಸ್.ಎಂ. ಖೇಡಗಿಯವರಿಂದ ರಚಿಸಲ್ಪಟ್ಟ 'ರೀತಿ ತಪ್ಪಿದರೂ ನೀತಿ ತಪ್ಪಿಲ್ಲ' 'ಗೌರಿಹೋದಳು ಗಂಗೆ ಬಂದಳು' ಎಂಬ ನಾಟಕಗಳು ಅರಿಷಿಣಗೋಡಿಯವರ ಕಂಪನಿಯಲ್ಲಿ ಪ್ರದರ್ಶನಗೊಂಡು ಕಂಪನಿಯ ಗಲ್ಲಾ ಪೆಟ್ಟಿಗೆಯನ್ನು ತುಂಬಿಸಿದವು. ಇದೇ ಅವಧಿಯಲ್ಲಿ ಉಳಿದ ಬ್ರ್ಯಾಂಚ್ ಕಂಪನಿಗಳು ಎನ್.ಎಸ್. ಜೋಶಿಯವರ ಚೆನ್ನಪ್ಪ ಚೆನ್ನಗೌಡ, ಸಮಾಜಕ್ಕೆ ಸವಾಲು, ಹುಚ್ಚಿ ಹಚ್ಚಿದ ದೀಪ, ರೌಡಿ ರಾಮಾಚಾರಿ, ಧುತ್ತರಗಿಯವರ ಮುದುಕನ ಮದುವೆ ಮುಂತಾದ ಬೇರೆಯವರು ಬರೆದ ನಾಟಕಗಳ ಜೊತೆ ಅರಿಷಿಣಗೋಡಿಯವರು ಬರೆದ ನಾಟಕಗಳನ್ನು ಪ್ರದರ್ಶನ ಮಾಡಿ ಕಂಪನಿ ಪ್ರಸಿದ್ಧಿಯನ್ನು ಪಡೆದಿತ್ತು. ಕೇವಲ ಸಾಮಾಜಿಕ ನಾಟಕಗಳನ್ನು ಪ್ರದರ್ಶನ ಮಾಡುತ್ತ ಬಂದ ಕಂಪನಿ ಹೊಸ ಪ್ರಯೋಗವೆಂಬತೆ ಎನ್.ಎಸ್. ಜೋಶಿಯವರು ಬರೆದ 'ಸಿಂಧೂರ ಲಕ್ಷ್ಮಣ' ಎಂಬ ಐತಿಹಾಸಿಕ ನಾಟಕವನ್ನು ಕಂಪನಿ ಅದ್ದೂರಿ ರಂಗಸಜ್ಜಿಕೆಯ ಮುಖಾಂತರ ರಂಗಪ್ರಯೋಗ ಮಾಡಿ ಜನಮೆಚ್ಚುಗೆಯನ್ನು ಪಡೆಯಿತು. ಜೋಶಿಯವರಿಂದ ಬರೆಸಲ್ಪಟ್ಟ ಶ್ರೀ ಹೊಳೆ ಹುಚ್ಚೇಶ್ವರ ಮಹಾತ್ಮೆ' ಎಂಬ ಭಕ್ತಿ ಪ್ರಧಾನವಾದ ನಾಟಕವನ್ನು ಕಂಪನಿಯಲ್ಲಿ ಪ್ರದರ್ಶಿಸಲಾಯಿತು. ಕಂಪನಿ ಸಾಮಾಜಿಕ, ಐತಿಹಾಸಿಕ, ಭಕ್ತಿ ಪ್ರಧಾನ ನಾಟಕಗಳಿಂದ ನಾಡಿನಾದ್ಯಂತ ಪ್ರಸಿದ್ಧಿ ಪಡೆದುಕೊಂಡಿತು. ಮಾರುತೇಶ ಮಾಂಡ್ರೆಯವರ ಧರ್ಮದೇವತೆ, ನಾ.ದೆ. ನರಸಿಂಹಮೂರ್ತಿಯವರ ಎಚ್ಚರ ತಂಗಿ ಎಚ್ಚರ, ಎಸ್.ಎಂ. ಖೇಡಗಿಯವರ ಸಂಗೊಳ್ಳಿ ರಾಯಣ್ಣ, ಮುದುಕನ ಮದುವೆ, ಎನ್.ಎಂ. ಕಣವಿಯವರ ಕೈಲಾಗದ ಗಂಡ ಕೈಲಾಸ ಕಂಡ ನಾಟಕಗಳನ್ನು ಕಂಪನಿಯಲ್ಲಿ ಪ್ರದರ್ಶಿಸಿ ನಾಟಕಕಾರರ ಆಶಯವನ್ನು ಜನರ ಮುಂದೆ ಇಟ್ಟಿದ್ದಾರೆ. ಈ ನಾಟಕಗಳ ಪ್ರದರ್ಶನದಿಂದ ಕಂಪನಿಗೆ ಕೀರ್ತಿ, ಆದಾಯವೂ ಬಂದಿದೆ. 'ಸಮಾಜಕ್ಕೆ ಸವಾಲು' 'ಹುಚ್ಚೇಶ್ವರ ಮಹಾತ್ಮೆ' 'ಗೌರಿ ಹೋದಳು ಗಂಗೆ ಬಂದಳು' ನಾಟಕಗಳಿಗೆ ಟ್ರಿಕ್ ಸೀನ್ಸ್ ಅಳವಡಿಸಿ ರಂಗ ಪ್ರಯೋಗದಲ್ಲಿ ಭಾರಿ ಹೊಸತನವನ್ನು ತಂದು ವೃತ್ತಿರಂಗಭೂಮಿಯ ಆಕರ್ಷಣೆಯನ್ನು ಬಿ.ಆರ್. ಅರಿಷಿಣಗೋಡಿಯವರು ಹೆಚ್ಚಿಸಿದರು.

ಕಂಪನಿ ಮತ್ತೊಮ್ಮೆ ಗರೀಬಿ ಹಟಾವೋ ನಾಟಕದೊಂದಿಗೆ ಗಂಗಾವತಿಗೆ ಕ್ಯಾಂಪು ಮಾಡಿತು. ನಾಟಕದ ಉದ್ಘಾಟನೆಗೆ ಕಮತಗಿಯ ಹುಚ್ಚೇಶ್ವರ ಸ್ವಾಮಿಗಳನ್ನು ಕರೆಸಿದ್ದರು. ಗಂಗಾವತಿಯ ಪ್ರಸಿದ್ಧ

ಡಾಕ್ಟರಾದ ರಾಮರಾವ ಅವರು ಅಧ್ಯಕ್ಷತೆ ವಹಿಸಿದ್ದರು. ಕಂಪನಿಯ ನಾಟಕಗಳಾದ ಹೆಣ್ಣು ಮಗಳು, ಇಲ್ಲಿಗೆ ಬಂತೊ ಸಂಗಯ್ಯಾ, ಚಂದ್ರಿಯ ಚೆಲ್ಲಾಟ (ಸೈನಿಕರ ಸಹೋದರಿ), ಕಂಪನಿಯಲ್ಲಿಯೇ ಪ್ರಸಿದ್ಧಿಯಾದ ಬಸ್ ಕಂಡಕ್ಟರ್ ಮುಂತಾದ ನಾಟಕಗಳು ಜನಾನುರಾಗಿಯಾಗಿ ಮೆರೆದು ಕಂಪನಿಗೆ ಒಳ್ಳೆಯ ಆದಾಯವನ್ನು ತಂದುಕೊಟ್ಟವು. ಗಂಗಾವತಿ ಕ್ಯಾಂಪಿನಲ್ಲಿ ಯಾವುದೇ ನಾಟಕ ಆಡಿದರೂ ೫೦-೧೦೦ ಯಶಸ್ವಿ ಪ್ರಯೋಗಗಳಾಗುತ್ತಿದ್ದವು.

ಮುಂದೆ ಕಂಪನಿ ಗಂಗಾವತಿಯಿಂದ ದಾವಣಗೆರೆಗೆ ಕ್ಯಾಂಪು ಬದಲಾಯಿಸಿತು. ಚಿಂದೋಡಿ ಲೀಲಾ ಅವರ ಸ್ವಂತ ಥೇಟರ್ ಜಾಗದಲ್ಲಿ ಕಂಪನಿ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ದಾವಣಗೆರೆಯಲ್ಲಿ ಕಂಪನಿ ಒಳ್ಳೆಯ ಹೆಸರು ಮಾಡಿ ಜನಮೆಚ್ಚುಗೆ ಗಳಿಸಿತು. ಮುಂದೆ ಕಂಪನಿ ೧೯೭೮ರಲ್ಲಿ ಸಿಂಧನೂರಿಗೆ ಕ್ಯಾಂಪ್ ಮಾಡಿತು. ಕಂಪನಿ ಈಗಾಗಲೇ ಹಲವಾರು ಬಾರಿ ಈ ಊರಿನಲ್ಲಿ ಕ್ಯಾಂಪ್ ಮಾಡಿದ್ದರಿಂಬ ಇಲ್ಲಿ ಬಹಳಷ್ಟು ಜನ ಅಭಿಮಾನಿಗಳಿದ್ದರು. ಈ ಸಲ ಅಬ್ಬಾಸಅಲಿ ಇಳಕಲ್ ಹಾಗೂ ಮಾಲತಿ ಮೈಸೂರ ಜೋಡಿ ಪ್ರಮುಖ ಪಾತ್ರಗಳಲ್ಲಿದ್ದರಿಂದ ಕಂಪನಿಗೆ ಪ್ರಸಿದ್ಧಿ ಬಂದಿತು. ಸಿಂಧನೂರಿನ ಅರಳಿ ಬಸನಗೌಡರ ಜೀನಿನ ಆವರಣದ ಥೇಟರನಲ್ಲಿ ಕಂಪನಿ ರಂಗ ಪ್ರದರ್ಶನ ಮಾಡುತ್ತಿತ್ತು. ಏನೇ ತೊಂದರೆ ಬಂದರೂ ಸಿಂಧನೂರಿನ ಅರಳಿ ಬಸನಗೌಡರು ಮತ್ತು ಅರಳಿ ನಾಗಪ್ಪನವರು ತಕ್ಷಣ ಹಾಜರಾಗಿ ನೆರವು ನೀಡುತ್ತಿದ್ದರು. ಹೀಗೆ ಕಂಪನಿ ಸಿಂಧೂರಿನಲ್ಲಿ ಮನೆಮಾತಾಯಿತು. ಸಿಂಧನೂರಿನ ಕ್ಯಾಂಪ್ ತರುವಾಯ ಸಮೀಪದಲ್ಲಿದ್ದ ಮಾನ್ವಿಗೆ ಕ್ಯಾಂಪ್ ಮಾಡಿತು. ಪ್ರಾರಂಭದಲ್ಲಿ ಕಂಪನಿಗೆ ಒಳ್ಳೆಯ ಆದಾಯ ಬಂದರೂ ಮಳೆಗಾಲ ಪ್ರಾರಂಭವಾಗಿ ಕಂಪನಿ ನಷ್ಟವನ್ನು ಅನುಭವಿಸಬೇಕಾಯಿತು. ಮಾನ್ವಿ ಕ್ಯಾಂಪಿನಲ್ಲಾದ ನಷ್ಟವನ್ನು ತುಂಬಿಕೊಳ್ಳಲು ಇಳಕಲ್‌ಗೆ ಕಂಪನಿ ತನ್ನ ರಂಗ ಕಲಾಯಾತ್ರೆಯನ್ನು ಮುಂದುವರಿಸಿತು. ಅನೇಕ ರಂಗಭೂಮಿ ಕಲಾವಿದರಿಗೆ ಜನ್ಮ ನೀಡಿದ, ರಂಗಕರ್ಮಿಗಳಿಂದ ಕೂಡಿದ, ಕಲಾಭಿಮಾನಿಗಳಿಂದ ತುಂಬಿದ ಇಳಕಲ್‌ಗೆ ವೃತ್ತಿರಂಗಭೂಮಿಯ ಹೆಸರಾಂತ ಕಂಪನಿಗಳು ಮೇಲಿಂದ ಮೇಲೆ ಕ್ಯಾಂಪು ಹಾಕುತ್ತಿದ್ದವು. ಕ್ಯಾಂಪು ಹಾಕಿದ ಕಂಪನಿಗಳಿಗೆ ಯಾವತ್ತೂ ನಷ್ಟವಾದ ಉದಾಹರಣೆಗಳಿಲ್ಲದಿದ್ದನ್ನು ಅರ್ಥಮಾಡಿಕೊಂಡ ಅರಿಷಿಣಗೋಡಿಯವರು ಇಳಕಲ್‌ನಲ್ಲಿ ಬಸ್ ಕಂಡಕ್ಟರ್ ನಾಟಕದೊಂದಿಗೆ ಕ್ಯಾಂಪು ಪ್ರಾರಂಭ ಮಾಡಿದರು. ಇಳಕಲ್ ಸೀರೆಯಷ್ಟೇ ಇಲ್ಲಿಯ ನಾಗರಿಕರು ಕಂಪನಿ ನಾಟಕಗಳ ಕಲಾಭಿಮಾನಿಗಳಾಗಿ ಹೆಸರುವಾಸಿಯಾಗಿದ್ದಾರೆ. ಇಳಕಲ್ ಕ್ಯಾಂಪಿನಿಂದ ಹಿಂದೆ ಮಾನ್ವಿಯಲ್ಲಾದ ನಷ್ಟವನ್ನು ಕಂಪನಿ ತುಂಬಿಸಿಕೊಂಡು ಸ್ವಲ್ಪಮಟ್ಟಿಗೆ ಲಾಭವನ್ನು ಮಾಡಿಕೊಂಡು ಚೇತರಿಸಿತು. ಇದೇ ಇಳಕಲ್ ಕ್ಯಾಂಪಿನಲ್ಲಿದ್ದಾಗ ಒಂದು ಕಾರ್ಯಕ್ರಮಕ್ಕೆ ಹೆಸರಾಂತ ರಂಗಭೂಮಿ, ಚಲನಚಿತ್ರ ನಟ ಮತ್ತು ಸಂಗೀತ ಪ್ರವೀಣ ಹೊನ್ನಪ್ಪ ಬಾಗವತರ್ ಇಳಕಲ್ಲಿಗೆ ಬಂದಿದ್ದರು. ಅಂದು ಅವರು ಅರಿಷಿಣಗೋಡಿಯವರ ಕಂಪನಿ ನಾಟಕವನ್ನು ನೋಡಿ ಪ್ರಶಂಸೆಯ ಮಾತುಗಳನ್ನಾಡಿದರು.

ಪ್ರೇಕ್ಷಕರನ್ನು ಆಕರ್ಷಿಸುವುದಕ್ಕಾಗಿ ಆರು ತಿಂಗಳೋ ವರ್ಷಕ್ಕೊಮ್ಮೆಯೋ ಅರಿಷಿಣಗೋಡಿಯವರು ರಚಿಸಿದ ನಾಟಕಗಳ ಜೊತೆ ಬೇರೆ ಕವಿಗಳು ರಚಿಸಿದ ನಾಟಕಗಳನ್ನು ಕಂಪನಿಯಲ್ಲಿ ಪ್ರದರ್ಶನ ಮಾಡಿ ಜನಾಕರ್ಷಣೆಯನ್ನು ಬೆಳೆಸಿಕೊಳ್ಳುತ್ತಿದ್ದರು. ಇಳಕಲ್ ಕ್ಯಾಂಪ್‌ದಿಂದ ಬಾಗಲಕೋಟ ಕ್ಯಾಂಪಿಗೆ ಬಂದಾಗ ಹೊಸ ನಾಟಕ ಕೂಡಿಸುವ ವಿಚಾರ ಮಾಡಿದರು. ಜುಬಲಿ ಕವಿಯೆಂದೇ ಹೆಸರಾದ ಹಾಗೂ ಗುಬ್ಬೀ ವೀರಣ್ಣ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಎಚ್.ಎನ್. ಹೂಗಾರ ಅವರನ್ನು ಹೊಸ ನಾಟಕ ಕೂಡಿಸಲು ಕಂಪನಿಗೆ ಆಹ್ವಾನ ಮಾಡಿದರು. ಎಚ್.ಎನ್. ಹೂಗಾರರ ಗೆದ್ದವರು ಯಾರು ನಾಟಕಕ್ಕೆ ನಿರ್ದೇಶನ ಅವರದೇ ಆಗಿತ್ತು. ಈ ನಾಟಕ ಬಾಗಲಕೋಟೆಯಲ್ಲಿ ಕಂಪನಿಯ ಗಲ್ಲಾ ಪೆಟ್ಟಿಗೆಯನ್ನು ತುಂಬಿಸಿಕೊಟ್ಟಿತು. ಅರಿಷಿಣಗೋಡಿಯವರ ಕಂಪನಿಯಲ್ಲಿ ಯಶಸ್ವಿಯಾಗಿ ಹೆಸರುಗಳಿಸಿದ ಗೆದ್ದವರು ಯಾರು ಎಂಬ ನಾಟಕ ಮುಂದೆ 'ಕಣ್ಣು ತೆರೆಸಿದ ಹೆಣ್ಣು' ಎಂದು ಚಲನಚಿತ್ರವಾಗಿ ನಿರ್ಮಾಣವಾಯಿತು. ಆದರೆ ಈ ನಾಟಕ ವೃತ್ತಿರಂಗಭೂಮಿಯಲ್ಲಿ ಹೆಸರು ಗಳಿಸಿದಂತೆ ಚಲನಚಿತ್ರರಂಗದಲ್ಲಿ ಹೆಸರು ಗಳಿಸಲಿಲ್ಲ.

ಬಾಗಲಕೋಟೆಯಿಂದ ಮುಂದೆ ಕಂಪನಿ ಬ್ಯಾಡಗಿಗೆ ತನ್ನ ಕಲಾ ಸೇವೆಯನ್ನು ಮುಂದುವರಿಸಿತು. ಈ ಕಂಪನಿಯಲ್ಲಿ ಕೆಲವು ಕಲಾವಿದರು ಬದಲಾದರೂ ಕಂಪನಿಗೆ ತೊಂದರೆಯಾಗಲಿಲ್ಲ. ಹೆಚ್ಚಾಗಿ, 'ಗರೀಬಿ ಹಟಾವೊ', 'ಬಸ್ ಕಂಡಕ್ಟರ್', 'ಹೆಣ್ಣುಮಗಳು', 'ಸೈನಿಕನ ಸಹೋದರಿ', 'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕಗಳನ್ನು ಆಡುತ್ತಿದ್ದರು. ಬ್ಯಾಡಗಿ ಕ್ಯಾಂಪ್‌ನಲ್ಲಿಯೇ ೧೯೮೦ರಲ್ಲಿ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ 'ಜೈ ಜವಾನ ಜೈಕಿಸಾನ' ಹಾಗೂ 'ದೇವರಿಲ್ಲದ ಗುಡಿ' ನಾಟಕಗಳನ್ನು ಮಹಾಂತೇಶ ಶಾಸ್ತ್ರಿಗಳ ನಿರ್ದೇಶನದಲ್ಲಿ ಪ್ರದರ್ಶನ ಮಾಡಿ ಕಂಪನಿ ಜನಮೆಚ್ಚುಗೆ ಪಡೆಯಿತು.

ಇದೇ ಬ್ಯಾಡಗಿ ಕ್ಯಾಂಪಿನಲ್ಲಿ 'ಗಂಡೆದೆಯ ಗೌರಿ' ನಾಟಕವನ್ನು ಅರಿಷಿಣಗೋಡಿಯವರು ರಚಿಸಿದರು. ಇಲ್ಲೇ ಕಲಾವಿದರ ಜೊತೆ ಚರ್ಚಿಸಿ ಈ ನಾಟಕವನ್ನು ಪ್ರದರ್ಶನಕ್ಕೆ ಸಿದ್ಧಗೊಳಿಸಿದರು. ಬ್ಯಾಡಗಿ ಜನತೆಗೆ ಅರಿಷಿಣಗೋಡಿಯವರ ಕಂಪನಿ ಅಚ್ಚುಮೆಚ್ಚಿನ ಕಂಪನಿಯಾಗಿತ್ತು. ಅಲ್ಲಿನ ಪ್ರೇಕ್ಷಕ ವೃಂದಕ್ಕೆ ಕಂಪನಿಯ ಕಲಾವಿದರು ಅಚ್ಚುಮೆಚ್ಚಿನವರಾಗಿದ್ದರು. ಬ್ಯಾಡಗಿಯಲ್ಲಿ 'ಗಂಡೆದೆಯ ಗೌರಿ' ನಾಟಕ ಸಾಕಷ್ಟು ಗಳಿಕೆ ತಂದುಕೊಟ್ಟಿತು. ಅದರಲ್ಲೂ ಮಳೆಗಾಲ ನಾಟಕ ಕಂಪನಿಗಳಿಗೆ ಸಂಕಷ್ಟವನ್ನು ತಂದೊಡ್ಡುವ ದಿನಗಳೇ. ಒಂದು ದಿನ ಇದ್ದಕ್ಕಿದ್ದಂತೆ ರಾತ್ರಿ ೧೦.೩೦ರ ವೇಳೆ ಮಳೆ ಸುರಿಯಿತು. ನಾಟಕ ಪ್ರದರ್ಶನ ರದ್ದು ಮಾಡಿದರಾಯಿತೆಂದು ಅರಿಷಿಣಗೋಡಿಯವರು ನಿರ್ಣಯಿಸಿದರು. ಅದಾಗಲೇ ಟಿಕೇಟ್ ಕೊಟ್ಟಾಗಿತ್ತು. ಆದರೆ ಬ್ಯಾಡಗಿಯ ಪ್ರೇಕ್ಷಕರು ದುಡ್ಡನ್ನು ಇಸಿದುಕೊಳ್ಳದೆ ಮರುದಿನ ನಾಟಕಕ್ಕೆ ಬರುವ ಅವಕಾಶವನ್ನು ಕೊಡಿ ಎಂದು ಪಾಸು ತೆಗೆದುಕೊಂಡು ಹೋದರು. ಇದು ಬ್ಯಾಡಗಿ ಜನತೆ ಅರಿಷಿಣಗೋಡಿಯವರಲ್ಲಿ ಇಟ್ಟ ಗೌರವವನ್ನು ಸೂಚಿಸುತ್ತದೆ.

ಮುಂದೆ ಬ್ಯಾಡಗಿಯಿಂದ ಜಮಖಂಡಿಗೆ ಕ್ಯಾಂಪು ಮಾಡಿತು. ಜಮಖಂಡಿ ಕ್ಯಾಂಪು ಕಂಪನಿಗೆ ಒಳ್ಳೆಯ ಆದಾಯವನ್ನು ತಂದುಕೊಟ್ಟಿತು. ಅಲ್ಲಿಂದ ಕಂಪನಿ ಐನಾಪುರಗೆ ಕ್ಯಾಂಪು ತಗೆದುಕೊಂಡು ಹೋಯಿತು. ಐನಾಪುರದಲ್ಲಿ 'ಬಸ್ ಕಂಡಕ್ಟರ್' ನಾಟಕ ಎರಡನೇ ಪ್ರಯೋಗಕ್ಕೆ ಜನರನ್ನು ಆಕರ್ಷಿಸಿತು. ಐನಾಪುರದಲ್ಲಿ ಸುಮಾರು ಒಂದು ತಿಂಗಳ ಕ್ಯಾಂಪ್ ಮಾಡಿ ಆ ಭಾಗದಲ್ಲಿ ಜನಾನುರಾಗಿಯಾಗಿ ಮುಂದೆ ಕಂಪನಿ ತನ್ನ ರಂಗಯಾತ್ರೆಯನ್ನು ೧೯೮೦ರ ವೇಳೆಗೆ ಗುಲಬರ್ಗಾಕ್ಕೆ ಮತ್ತೊಂದು ಸಾರಿ ಮುಂದುವರಿಸಿತು. ತಮ್ಮ ಕಂಪನಿಯಲ್ಲಿ ಮೊದಲಿದ್ದ ನಾಟಕಗಳೊಂದಿಗೆ ಮಹಾಂತೇಶ ಶಾಸ್ತ್ರಿಯವರ 'ಗೆದ್ದವರು ಯಾರು' ಎಂಬ ನಾಟಕವನ್ನು ಪ್ರದರ್ಶನ ಮಾಡಿ ಕೀರ್ತಿ ಮತ್ತು ಹಣವನ್ನು ಸಂಪಾದಿಸಿತು. 'ಗೆದ್ದವರು ಯಾರು' ನಾಟಕದಲ್ಲಿ ಹಾಸ್ಯಪಾತ್ರಗಳನ್ನು ಮಾಡುತ್ತಿದ್ದ ಅಬ್ಬಾಸ್‌ಅಲಿ ಮತ್ತು ಮಾಲತಿ ಮೈಸೂರರ ಜೋಡಿಯನ್ನು ನೋಡಲು ಜನ ಹಳ್ಳಿಯಿಂದ ಚಕ್ಕಡಿ ಗಾಡಿಯಲ್ಲಿ ಬರುತ್ತಿದ್ದರು.

ಇದುವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಕೇಂದ್ರವಾಗಿದ್ದ ಗುಲಬರ್ಗಾ ವಿಶ್ವವಿದ್ಯಾಲಯ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿತ್ತು. ಗುಲಬರ್ಗಾ ಮೊದಲಿನಿಂದಲೂ ಸಾಕಷ್ಟು ಜನ ಸಾಹಿತಿಗಳು, ವಿದ್ವಾಂಸರು, ಕಲಾವಿದರು, ಕಲಾಭಿಮಾನಿಗಳನ್ನು ಹೊಂದಿದ ಊರು. ಗುಲಬರ್ಗಾದ ಗವೀಶ ಹಿರೇಮಠರು ಅರಿಷಿಣಗೋಡಿಯವರ ಎಲ್ಲಾ ನಾಟಕಗಳನ್ನು ನೋಡಲು ಬರುತ್ತಿದ್ದರು. ನಾಟಕ ಪ್ರದರ್ಶನದ ನಂತರ ಮಾಲಿಕರ, ಕಲಾವಿದರ ಜೊತೆ ಚರ್ಚಿಸುತ್ತಿದ್ದರು. ಜಾನಪದ ವಿದ್ವಾಂಸ ಎಚ್.ಎಲ್. ನಾಗೇಗೌಡರು ಕಾರ್ಯ ನಿಮಿತ್ಯ ಗುಲಬರ್ಗಾಕ್ಕೆ ಬಂದಾಗ ಅರಿಷಿಣಗೋಡಿಯವರ ನಾಟಕ ನೋಡಿ ಆನಂದಪಟ್ಟು ಮನಬಿಚ್ಚಿ ಕಂಪನಿಯ ಬಗ್ಗೆ ಒಳ್ಳೆಯ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಾಲಯದ ಅಧಿಕಾರಿ ಎಸ್.ಆರ್. ಗುಂಜಾಳ ನಾಟಕ ನೋಡಿ ಮನಸಾರೆ ಹೊಗಳಿದ್ದಾರೆ. ಗುಲಬರ್ಗಾ ಆಕಾಶವಾಣಿಯ ಅಧಿಕಾರಿಗಳಾದ ಹುನಗುಂದ ಮತ್ತು ಜಿ.ಎಂ. ಶಿರಹಟ್ಟಿಯವರು ಅರಿಷಿಣಗೋಡಿಯವರ ನಾಟಕಗಳನ್ನು ನೋಡಿ ಮೆಚ್ಚಿಕೊಂಡು ಆಕಾಶವಾಣಿಯಲ್ಲಿ ಅರಿಷಿಣಗೋಡಿಯವರು ಬರೆದ 'ನಕಲಿ ಸಂಪನ್ನರು' ನಾಟಕವನ್ನು ಪ್ರಸಾರ ಮಾಡಿದರು. ಗುಲಬರ್ಗಾ ಕ್ಯಾಂಪದಲ್ಲಿಯೇ ಎಸ್.ಎಂ. ಖೇಡಗಿಯವರ 'ರೀತಿ ತಪ್ಪಿದವರು ನೀತಿ ಬಿಟ್ಟಿಲ್ಲ' ಎಂಬ ನಾಟಕ ಸತತ ೨೦೦ ಪ್ರಯೋಗಗಳನ್ನು ಮಾಡಿ ಕಂಪನಿಯ ಆದಾಯವನ್ನು ಹೆಚ್ಚಿಸಿದೆ. ಅಲ್ಲದೇ ಖೇಡಗಿಯವರ 'ನಿಮ್ಮ ಹೆಂಡತಿ ನಾನಲ್ಲ' 'ಅಪ್ಪನ ಗಂಡ ಅವ್ವ' 'ಮಾತು ಅಂಗಾರ ಮೌನ ಬಂಗಾರ' ನಾಟಕಗಳು ಗುಲಬರ್ಗಾದಲ್ಲಿ ಯಶಸ್ವಿ ಪ್ರಯೋಗಳಿಂದ ಕಂಪನಿಯ ಗಲ್ಲಾಪೆಟ್ಟಿಗೆಯನ್ನು ತುಂಬಿಸಿದವು. ಇಲ್ಲಿ ಕವಿ ಖೇಡಗಿಯವರಿಗೆ ಅರಿಷಿಣಗೋಡಿಯವರು ಹೆಸರು ತಂದುಕೊಟ್ಟರು ಎಂಬುದು ಗಮನಾರ್ಹ.

ಅದೇ ಗುಲಬರ್ಗಾ ಕ್ಯಾಂಪಿನಲ್ಲಿ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ 'ದೇವರಿಲ್ಲದ ಗುಡಿ' ಸತತ ೨೫೦ ಯಶಸ್ವಿ ಪ್ರಯೋಗಗಳನ್ನು ಕಂಡಿತು. ಎನ್.ಎಸ್. ಜೋಶಿಯವರ 'ಚೆನ್ನಪ್ಪ ಚೆನ್ನಗೌಡ'

೨೫೦ ಪ್ರಯೋಗಗಳನ್ನು ಕಂಡು ಕಂಪನಿಗೆ ಕೀರ್ತಿ ಮತ್ತು ಸಾಕಷ್ಟು ಆದಾಯವನ್ನು ತಂದುಕೊಟ್ಟಿತು. ಚಲನಚಿತ್ರ ರಂಗದ ನಟ ಕಲ್ಯಾಣಕುಮಾರನ ಹೆಂಡತಿ ರೇವತಿ ಅರಿಷಿಣಗೋಡಿಯವರ ನಾಟಕಗಳನ್ನು ನೋಡಿ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ. ಗುಲಬರ್ಗಾ ಕ್ಯಾಂಪಿನಲ್ಲಿಯೇ ಎರಡು ವರ್ಷ ಯಶಸ್ವಿ ನಾಟಕಗಳನ್ನು ಪ್ರಯೋಗಿಸಿ ಕಂಪನಿ ಗುಲಬರ್ಗಾದಿಂದ ಗೋಕಾಕಕ್ಕೆ ತನ್ನ ರಂಗ ಕಲಾಯಾತ್ರೆಯನ್ನು ಮುಂದುವರಿಸಿತು. ಗೋಕಾಕದಲ್ಲಂತೂ ಕಂಪನಿ ಮನೆಮಾತಾಗಿ ಪ್ರಸಿದ್ಧಿ ಪಡೆಯಿತು. ಗೋಕಾಕದಲ್ಲಿ ತನ್ನ ಕಂಪನಿಯಲ್ಲಿದ್ದ ಎಲ್ಲಾ ನಾಟಕಗಳನ್ನು ಪ್ರದರ್ಶಿಸಿ ಸಾಕಷ್ಟು ಆದಾಯವನ್ನು ಹೊಂದಿತು. ಗೋಕಾಕದಿಂದ ಹೊರಟ ಕಂಪನಿ ಮತ್ತೊಂದು ಸಾರಿ ಚಿಂಚಲಿ ಜಾತ್ರೆಗೆ ಬಂದು ಎರಡು ನಾಟಕಗಳನ್ನು ಪ್ರದರ್ಶನ ಮಾಡಿ ಅಲ್ಲಿಂದ ಹಾರೂಗೇರಿ, ಚಿಕ್ಕೋಡಿಗಳಲ್ಲಿ ಕ್ಯಾಂಪು ಮಾಡಿತು. ನಂತರ ಕಂಪನಿಯ ರಂಗ ಕಲಾಯಾತ್ರೆ ವಿಜಾಪುರದ ಕಿತ್ತೂರ ಚೆನ್ನಮ್ಮ ರಂಗಮಂದಿರಕ್ಕೆ ಬಂತು. ವಿಜಾಪುರ ಕ್ಯಾಂಪಿನಲ್ಲಿ ತಮ್ಮ ಕಂಪನಿಯ ಹಳೆಯ ನಾಟಕಗಳೊಂದಿಗೆ ಖೇಡಗಿಯವರು ಬರೆದ 'ಪಾಪದದೇಹ ಪುಣ್ಯದ ಜೀವ' 'ಗೌರಿ ಹೋದಳು ಗಂಗೆ ಬಂದಳು' ನಾಟಕಗಳನ್ನು ಆಡಿ ಕಂಪನಿ ಜಯಭೇರಿ ಹೊಡೆಯಿತು. ಬನಹಟ್ಟಿಯ ಗಂಗಾಧರ ಭೂತೆ ಅವರು ಈ ನಾಟಕದ ಹಾಡುಗಳಿಗೆ ರಾಗ ಸಂಯೋಜಿಸಿದ್ದು ಪ್ರೇಕ್ಷಕರನ್ನು ಆಕರ್ಷಿಸಿತು. ವಿಜಾಪುರ ಕ್ಯಾಂಪಿನಲ್ಲಿದ್ದಾಗ ನಾ.ದೇ. ನರಸಿಂಹಮೂರ್ತಿ ಎಂಬ ಯುವ ನಾಟಕಕಾರ ಕಂಪನಿಗೆ ಬಂದು ಸೇರಿದರು. ನಾ.ದೇ. ನರಸಿಂಹಮೂರ್ತಿಯವರಿಗೆ ವೃತ್ತಿರಂಗಭೂಮಿಯಲ್ಲಿ ಒಳ್ಳೆಯ ಹೆಸರಿತ್ತು. ಅವರ 'ಮಾಂಗಲ್ಯ ಮೋಸ ಮಾಡಲಿಲ್ಲ' 'ಎಚ್ಚರ ತಂಗಿ ಎಚ್ಚರ' ನಾಟಕಗಳನ್ನು ವಿಜಾಪುರ ಕ್ಯಾಂಪಿನಲ್ಲಿ ಪ್ರದರ್ಶನ ಮಾಡಿ ಕಂಪನಿ ಒಳ್ಳೆಯ ಹೆಸರನ್ನು ಪಡೆದುಕೊಂಡಿತು.

ವಿಜಾಪುರದಲ್ಲಿ ಒಂದು ವರ್ಷ ಕ್ಯಾಂಪ್ ಮಾಡಿ ಅಲ್ಲಿಂದ ಚಡಚಣ ಜಾತ್ರೆ, ಕೂಕನೂರ ಜಾತ್ರೆಗೆ ಕಂಪನಿ ತನ್ನ ರಂಗ ಕಲಾಸೇವೆಯನ್ನು ಮುಂದುವರಿಸಿತು. ಕುಕನೂರ ಜಾತ್ರೆಯಲ್ಲಿ 'ಗೌರಿ ಹೋದಳು ಗಂಗೆ ಬಂದಳು' ನಾಟಕ ಜಯಭೇರಿ ಹೊಡೆಯಿತು. ಟಿಕೇಟ್ ಪಡೆಯಲು ಜನರ ನೂಕು ನುಗ್ಗಾಟ ಹೆಚ್ಚಾಗಿ ಜನರನ್ನು ನಿಯಂತ್ರಿಸಲು ಪೊಲೀಸರು ಬರಬೇಕಾಗುತ್ತಿತ್ತು. ಕುಕನೂರ ಜಾತ್ರೆಯ ನಂತರ ಕಂಪನಿ ಬದಾಮಿ ತಾಲೂಕಿನ ಬನಶಂಕರಿ ಜಾತ್ರೆಗೆ ಮತ್ತೊಮ್ಮೆ ತನ್ನ ರಂಗ ಕಲಾಯಾತ್ರೆಯನ್ನು ಬೆಳೆಸಿತು. ಬನಶಂಕರಿಯಲ್ಲಿ ಕಂಪನಿಗೆ ಒಳ್ಳೆಯ ಆದಾಯ ಬಂತು. ಅಲ್ಲಿಂದ ಕಂಪನಿ ಮತ್ತೆ ಗದಗಕ್ಕೆ ಪ್ರಯಾಣ ಬೆಳೆಸಿತು. ಗದಗದಲ್ಲಿ ಕಂಪನಿಯ ಹಳೆಯ ನಾಟಕಗಳ ಪ್ರದರ್ಶನದೊಂದಿಗೆ ಗದಗದವರೆ ಆದ ಎಚ್.ಎನ್. ಹೂಗಾರರ 'ಒಲಿದರೆ ಹೂವು ಮುನಿದರೆ ಹಾವು' ನಾಟಕ ಪ್ರದರ್ಶನ ಮಾಡಿ ಕಂಪನಿ ಹೆಸರು ಗಳಿಸಿತು. ಗದಗ ಕ್ಯಾಂಪು ಮುಗಿಸಿ ಕಂಪನಿ ಕಾಗವಾಡಕ್ಕೆ ಪ್ರಯಾಣ ಬೆಳೆಸಿತು. ಕಾಗವಾಡದಲ್ಲಿ ೯೦ ದಿನ ಯಶಸ್ವಿ ಪ್ರಯೋಗ ಮಾಡಿ ಕಂಪನಿ ಮಹಾರಾಷ್ಟ್ರದ ಇಚಲಕರಂಜಿಗೆ ಪ್ರಯಾಣ ಬೆಳೆಸಿತು. ಮೊದಲು ಜಾಗ ಕೊಡುತ್ತೇವೆ ಎಂದವರು ನಾಟಕ ಪ್ರಯೋಗಕ್ಕೆ ಜಾಗ ಕೊಡಲಿಲ್ಲ.

ಮರಳಿ ಕಂಪನಿ ಕಾಗವಾಡಕ್ಕೆ ಬಂದು ತನ್ನ ರಂಗ ಕಲಾಸೇವೆಯನ್ನು ಕಾಗವಾಡದಲ್ಲಿಯೇ ಮುಂದುವರಿಸಿತು. ಕಾಗವಾಡ ಕ್ಯಾಂಪಿನಲ್ಲಿ ಕಂಪನಿಯ ನಾಟಕಗಳಾದ 'ಬಸ್ ಕಂಡಕ್ಟರ್' 'ಗರೀಬಿ ಹಟಾವೋ' 'ಬಡವರೂ ನಗಬೇಕು' 'ಸಂಗ್ಯಾ ಬಾಳ್ಯಾ' ಪ್ರದರ್ಶಿಸಲ್ಪಟ್ಟವು. ಮುಂದೆ ಕಂಪನಿ ಯರಗಟ್ಟಿಗೆ ಕ್ಯಾಂಪ್ ಮಾಡಿತು. ಯರಗಟ್ಟಿಯಲ್ಲಿ ಕಂಪನಿ ಜಯಭೇರಿ ಹೊಡೆಯಿತು. ಯರಗಟ್ಟಿಯಲ್ಲಿ ಕಂಪನಿ ಕ್ಯಾಂಪ್ ಮಾಡಿದ ವೇಳೆಯಲ್ಲಿ ಪ್ರಮುಖ ನಟ-ನಟಿಯರು ಕೈಕೊಟ್ಟು ಹೋದರು. ಯರಗಟ್ಟಿಯ ೬ ತಿಂಗಳು ಕ್ಯಾಂಪ್‌ನಲ್ಲಿ ಕಂಪನಿ ಬಹಳಷ್ಟು ಕಷ್ಟ-ನಷ್ಟಗಳನ್ನು ಅನುಭವಿಸುತ್ತ ಕೊನೆಕೊನೆಯಲ್ಲಿ ಲಾಭ ಮಾಡಿಕೊಂಡು ಸವದತ್ತಿಗೆ ಮುಕ್ಕಾಂ ಮಾಡಿತು. ಸವದತ್ತಿಯಲ್ಲಿ ಕಂಪನಿ ಒಳ್ಳೆಯ ಹೆಸರನ್ನು ಪಡೆಯಿತು. ಸವದತ್ತಿಯ ಕಲಾಭಿಮಾನಿಗಳು ಕಲಾವಿದರನ್ನು ಗೌರವಿಸಿ ಸನ್ಮಾನ ಪತ್ರ ಕೊಟ್ಟರು.

ಸವದತ್ತಿಯಿಂದ ಕಂಪನಿ ಚಿಂಚಲಿ ಜಾತ್ರೆಗೆ ತನ್ನ ಕಲಾಯಾತ್ರೆಯನ್ನು ಮುಂದುವರಿಸಿತು. ಅಲ್ಲಿ ಈಗಾಗಲೇ ಎರಡು ಪ್ರಸಿದ್ಧ ವೃತ್ತಿ ಮಂಡಳಿಗಳು ಕ್ಯಾಂಪ್ ಮಾಡಿದ್ದವು. ಆ ಎರಡು ಕಂಪನಿಗಳಿಗಿಂತ ಅರಿಷಿಣಗೋಡಿಯವರ ಕಂಪನಿಗೆ ಹೆಚ್ಚಿನ ಹೆಸರು ಬಂತು. ಚಿಂಚಲಿ ಜಾತ್ರೆಯಲ್ಲಿ ನಡೆದ ಒಂದು ಘಟನೆಯನ್ನು ಬಿ.ಆರ್. ಅರಿಷಿಣಗೋಡಿಯವರು ಈ ರೀತಿ ಹೇಳುತ್ತಾರೆ. ನಾಟಕದ ಕೊನೆಯ ಒಂದು ದೃಶ್ಯವಿರುವಾಗ ಕಂಪನಿಯ ಮ್ಯಾನೇಜರ್ ರಂಗ ಮಂಟಪದ ಮೇಲೆ ಬಂದು ಪ್ರೇಕ್ಷಕರಿಗೆ ಕೈ ಮುಗಿದು ಇಂದು ಇಷ್ಟನೆಯ ಪ್ರಯೋಗವಾಯಿತು. ನಾಳೆ ಇಂತಹ ನಾಟಕ, ನಾಳೆಯೂ ತಪ್ಪದೆ ಬಂದು ನಮ್ಮನ್ನು ಉತ್ತೇಜಿಸಬೇಕು ಎಂದು ಹೇಳುವುದು ಸಂಪ್ರದಾಯ. ಅದೇ ರೀತಿ ನಾಳೆ ಕಂಪನಿಯ ಕೊನೆಯ ನಾಟಕ ಎಂದು ಹೇಳಿದ್ದೇ ತಡ ಪ್ರೇಕ್ಷಕರು ಗಲಾಟೆ ಶುರುಮಾಡಿದರು. ಅದು ಹೇಗೆ ಕ್ಯಾಂಪ್ ಕ್ಲೋಸ್ ಮಾಡ್ತೀರಿ ನಾವು ನೋಡುತ್ತೇವೆಂದು ತಕರಾರು ತಗೆದರು. ಕಂಪನಿ ಕಲಾವಿದರೆಲ್ಲ ಮುಂದಿನ ಕ್ಯಾಂಪ್‌ಗೆಂದು ತಮ್ಮ ಸಾಮಾನುಗಳನ್ನು ಕಟ್ಟಿ ಇಟ್ಟಿದ್ದರು. ಚಿಂಚಲಿ ಜಾತ್ರೆಯ ಪ್ರೇಕ್ಷಕರ ಆಗ್ರಹಕ್ಕೆ ಮಣಿದ ಬಿ.ಆರ್. ಅರಿಷಿಣಗೋಡಿಯವರು ಮತ್ತೆ ಅದೇ ಊರಿನಲ್ಲಿ ಎರಡು ದಿನ ಕ್ಯಾಂಪು ಮುಂದುವರಿಸಿ ಪ್ರೇಕ್ಷಕರ ಪ್ರೀತಿಗೆ ಪಾತ್ರರಾದರು. ಅಲ್ಲಿಂದ ಜೇವರ್ಗಿಗೆ ಕಂಪನಿ ಕ್ಯಾಂಪು ಮಾಡಿತು. ಅಲ್ಲಿ ೬ ತಿಂಗಳವರೆಗೆ ಕಂಪನಿಯ ಹಳೆ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ ಹೆಸರುಗಳಿಸಿ ಮತ್ತೆ ಕಂಪನಿ ತನ್ನ ರಂಗಕಲಾಸೇವೆಯನ್ನು ಅಥಣಿ ಪಟ್ಟಣಕ್ಕೆ ಮುಂದುವರಿಸಿತು. ಅಥಣಿ ಕ್ಯಾಂಪ್‌ನಲ್ಲಿ ಸುಮಾರು ೧೨೦ ದಿನಗಳವರೆಗೆ ಕಂಪನಿಯ ಎಲ್ಲಾ ನಾಟಕಗಳನ್ನು ಪ್ರದರ್ಶಿಸಿ ತನ್ನ ಆದಾಯವನ್ನು ಹೆಚ್ಚಿಸಿಕೊಂಡಿತು. ಅಲ್ಲಿಂದ ಮುಂದೆ ಸಿಂದಗಿ ತಾಲೂಕ ಕಲಕೇರಿ ಜಾತ್ರೆಗೆ ಪ್ರಯಾಣವನ್ನು ಬೆಳೆಸಿದರು. ಕಲಕೇರಿ ಜಾತ್ರೆಯಲ್ಲಿ ರಂಗ ಪ್ರಯೋಗಗೊಂಡ 'ಗೌರಿ ಹೋದಳು ಗಂಗೆ ಬಂದಳು' ನಾಟಕವನ್ನು ಊರಿನ ಅನುಕೂಲಸ್ಥ ಕಲಾಭಿರುಚಿಯನ್ನು ಹೊಂದಿದ ಜನರು ವಿಡಿಯೋ ಕ್ಯಾಸೆಟ್ ಮಾಡಿಟ್ಟುಕೊಂಡರು. ಇದು ಬಿ.ಆರ್. ಅರಿಷಿಣಗೋಡಿಯವರ ಕಂಪನಿಯ ಜನಪ್ರಿಯತೆಯನ್ನು ತೋರಿಸುತ್ತದೆ. ಅದೇ

ಕಲಕೇರಿ ಜಾತ್ರೆಯಲ್ಲಿ ಕ್ಯಾಂಪಿನ ಕೊನೆಗೆ 'ಬಸ್ ಕಂಡಕ್ಟರ್' ನಾಟಕವಂತೂ ಜನರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾಗಿ ಸಾಕಷ್ಟು ಹಣವನ್ನು ಕಂಪನಿಗೆ ಕೂಡಿಸಿಕೊಟ್ಟಿತು. ಮುಂದೆ ಕಂಪನಿ ತನ್ನ ಕಲಾಯಾತ್ರೆಯನ್ನು ಕನಕಗಿರಿಗೆ ಬೆಳಸಿತು. ಕನಕಗಿರಿಯ ಕ್ಯಾಂಪು ಕಂಪನಿಗೆ ಆದಾಯ ಕೀರ್ತಿಯನ್ನು ತಂದುಕೊಟ್ಟಿತು. ಕನಕಗಿರಿಯಲ್ಲಿ ಜನಾನುರಾಗಿಯಾಗಿ ಮೆರೆದ ಕಂಪನಿ ಗುಳೇದಗುಡ್ಡಕ್ಕೆ ಕ್ಯಾಂಪ್ ಮಾಡಿತು. ಗುಳೇದಗುಡ್ಡ ಕ್ಯಾಂಪಿನಲ್ಲಿ ಕಂಪನಿಗೆ ತೊಂದರೆ ಆಗಿ ನಷ್ಟವನ್ನು ಅನುಭವಿಸಬೇಕಾಯಿತು. ಗುಳೇದಗುಡ್ಡದ ನಷ್ಟವನ್ನು ತುಂಬಿಸಿಕೊಳ್ಳುವುದಕ್ಕಾಗಿ ಬಿ.ಆರ್. ಅರಿಷಿಣಗೋಡಿಯವರು ಗಜೇಂದ್ರಗಡಕ್ಕೆ ಕ್ಯಾಂಪ್ ಬದಲಾಯಿಸಿದರು. ಗಜೇಂದ್ರಗಡದಲ್ಲಿ 'ಗೌಡ್ರ ಗದ್ಲ' ನಾಟಕವಂತೂ ೨೦೧ ಯಶಸ್ವಿ ಪ್ರಯೋಗಗಳನ್ನು ಕಂಡು ಕಂಪನಿಯ ಜನಪ್ರಿಯತೆಯನ್ನು ಹೆಚ್ಚಿಸಿತು. ಗಜೇಂದ್ರಗಡದ ಪ್ರೇಕ್ಷಕರ ಮಿಡಿತವನ್ನು ಅರ್ಥೈಸಿದ ಬಿ.ಆರ್. ಅರಿಷಿಣಗೋಡಿಯರು ಕಂಪನಿಯ ಹಳೆಯ ನಾಟಕಗಳಾದ 'ಲಂಚಸಾಮ್ರಾಜ್ಯ' 'ಹೆಣ್ಣುಮಗಳು' 'ಗರೀಬಿ ಹಟಾವೊ' ಮುಂತಾದ ನಾಟಕಗಳನ್ನು ಪ್ರದರ್ಶಿಸಿ ಆದಾಯವನ್ನು ಹೆಚ್ಚಿಸಿಕೊಂಡರು.

ಮುಂದೆ ಕಂಪನಿ ಬೆಳಗಾಂವ ಜಿಲ್ಲೆ ಅಂಕಲಗಿಗೆ ಮುಕ್ಕಾಂ ಮಾಡಿತು. ಅಂಕಲಗಿಯಲ್ಲಿ ಕ್ಯಾಂಪು ಮಾಡಿದ ಬಿ.ಆರ್. ಅರಿಷಿಣಗೋಡಿಯವರ ಕಂಪನಿಯ ಜನಪ್ರಿಯತೆಯನ್ನು ತಿಳಿದುಕೊಂಡ ದ್ಯಾಮಣ್ಣನು ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿಯನ್ನು ಗುತ್ತಿಗೆ ಹಿಡಿದನು. ಗುತ್ತಿಗೆ ಹಿಡಿದ ಗುತ್ತಿಗೆದಾರನಿಗೆ ಕಂಪನಿ ಮೋಸ ಮಾಡಲಿಲ್ಲ. ಮುಂದೆ ಮೂಡಲಗಿ, ಹುಕ್ಕೇರಿ, ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಎಲ್ಲ ಕ್ಯಾಂಪುಗಳು ಏಳು-ಬೀಳುಗಳೊಂದಿಗೆ ಸಾಗಿದ್ದವು. ಮುಂದೆ ಕಂಪನಿ ತನ್ನ ಅದೃಷ್ಟ ಪರೀಕ್ಷಿಸಿಕೊಳ್ಳಲು ೨ನೆಯ ಬಾರಿಗೆ ಬನಶಂಕರಿ ಜಾತ್ರೆಗೆ ತಯಾರಿ ನಡೆಸಿತು. ಬನಶಂಕರಿ ಜಾತ್ರೆಯ ಕ್ಯಾಂಪಿನಲ್ಲಿ ಶಂಕರಯ್ಯ ಸ್ವಾಮಿ ಕಡಪಟ್ಟಿ ಕುಟುಂಬ ವರ್ಗವೇ ಕಂಪನಿಗೆ ಬಂದು ಸೇರಿಕೊಂಡಿತು. ಪ್ರಕಾಶ ಕಡಪಟ್ಟಿ, ಸುನಂದಾ ಕಡಪಟ್ಟಿ ಜೋಡಿ ಈಗಾಗಲೇ ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಹೆಸರುಗಳಿಸಿದವರು. ಪ್ರಕಾಶ ಕಡಪಟ್ಟಿಯವರು ನಟರಾದಂತೆ ನಾಟಕಕಾರರಾಗಿಯೂ ಹೆಸರು ಗಳಿಸಿದ್ದರು. ಹೀಗಾಗಿ ಅವರ ನಾಟಕಗಳನ್ನು ಎತ್ತಿಕೊಂಡು ಕಂಪನಿಯಲ್ಲಿ ಪ್ರಯೋಗ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆಂದು ಬಿ.ಆರ್. ಅರಿಷಿಣಗೋಡಿಯವರು ಯೋಚಿಸಿದರು. ಅದೇ ಬನಶಂಕರಿ ಜಾತ್ರೆಯ ಕ್ಯಾಂಪಿನಲ್ಲಿ ಪ್ರಕಾಶ ಕಡಪಟ್ಟಿಯವರ 'ಭೂಮಿ ತೂಕದ ಹೆಣ್ಣು' ನಾಟಕವನ್ನು ಪ್ರದರ್ಶಿಸಿ ಕಂಪನಿ ಹೆಸರು ಪಡೆಯಿತು. ಮುಂದೆ ಕಂಪನಿ ಪ್ರಕಾಶ ಕಡಪಟ್ಟಿಯವರ ನಾಟಕಗಳನ್ನು ತಮ್ಮ ಬೇರೆ ನಾಟಕಗಳ ಜೊತೆಗೆ ಪ್ರದರ್ಶನ ಮಾಡಲಿಕ್ಕೆ ಹತ್ತಿತು.

ಕಂಪನಿ ಉತ್ತರ ಕರ್ನಾಟಕದ ಹಲವಾರು ಊರುಗಳಲ್ಲಿ ಮತ್ತೆ ಮತ್ತೆ ಕ್ಯಾಂಪು ಮಾಡಿ ತನ್ನ ಆದಾಯ ಕೀರ್ತಿಯನ್ನು ಹೆಚ್ಚಿಸಿಕೊಳ್ಳುತ್ತ ರಂಗಕಲಾಯಾತ್ರೆಯನ್ನು ಮುಂದುವರಿಸಿತು. ಕೊಟ್ಟೂರ

ಬಸವೇಶ್ವರ ಜಾತ್ರೆಯಲ್ಲಿ ಕಂಪನಿ ಕ್ಯಾಂಪು ಮಾಡಿದಾಗ ಪತ್ರಕರ್ತ ಗುಡಿಹಳ್ಳಿ ನಾಗರಾಜ ಮತ್ತು ಕಾದಂಬರಿಕಾರ ಕುಂ. ವೀರಭದ್ರಪ್ಪನವರು ಜೊತೆಗೂಡಿ ಕಂಪನಿಯ ನಾಟಕಗಳನ್ನು ನೋಡಿ ಮೆಚ್ಚುಗೆಯ ಮಾತುಗಳನ್ನು ಹೇಳಿಹೋಗಿದ್ದಾರೆ. ಈ ಮೊದಲು ಗುಡಿಹಳ್ಳಿ ನಾಗರಾಜ ಅವರು ಬಿ.ಆರ್. ಅರಿಷಿಣಗೋಡಿಯವರ ಅನೇಕ ನಾಟಕಗಳನ್ನು ನೋಡಿದವರು.

ರಾಜಧಾನಿ ಬೆಂಗಳೂರ ನಗರದಲ್ಲಿ ಗುಬ್ಬೀ ವೀರಣ್ಣ ರಂಗಮಂದಿರ ನಿರ್ಮಾಣವಾಗಿ ವೃತ್ತಿ ನಾಟಕ ಕಂಪನಿಗಳಿಗೆ ಒಂದು ನೆಲೆಯನ್ನು ಒದಗಿಸಿದಾಗ ಗುಬ್ಬಿ ವೀರಣ್ಣ ರಂಗ ಮಂದಿರದ ಉದ್ಘಾಟನೆಯ ನಂತರ ಪ್ರಪ್ರಥಮವಾಗಿ ಚಿಂದೋಡಿ ಲೀಲಾ ಅವರ ಕೆ.ಬಿ.ಆರ್. ಡ್ರಾಮಾ ಕಂಪನಿ ಕ್ಯಾಂಪು ಮಾಡಿತು. ಅರವತ್ತರ ಅಂಚಿನಲ್ಲಿದ್ದ ಚಿಂದೋಡಿ ಲೀಲಾ ಅವರೇ ಅಭಿನಯಿಸಿದ 'ಪೋಲೀಸನ ಮಗಳು' ನಾಟಕ ಸತತ ೧೨೦೦ ಪ್ರಯೋಗಗಳನ್ನು ಮಾಡಿ ವಿಶ್ವದಾಖಲೆಯನ್ನು ನಿರ್ಮಿಸಿತು. (ಗಿನ್ನಿಸ್ ದಾಖಲೆ) ಅವರ ಕ್ಯಾಂಪ್ ಮುಗಿದ ಮೇಲೆ ಬಿ.ಆರ್. ಅರಿಷಿಣಗೋಡಿಯವರಿಗೆ ಗುಬ್ಬೀ ವೀರಣ್ಣ ರಂಗಮಂದಿರದಲ್ಲಿ ಕ್ಯಾಂಪ್ ಮಾಡುವ ಅವಕಾಶ ಸಿಕ್ಕಿತು. ೧೯೯೮ಲ ಆಗಸ್ಟ್ ತಿಂಗಳಲ್ಲಿ ಬಿ.ಆರ್. ಅರಿಷಿಣಗೋಡಿಯವರ ಕಂಪನಿ ಪ್ರಯೋಗ ಪ್ರಾರಂಭ ಮಾಡಿತು. ನಾ.ದೇ. ನರಸಿಂಹಮೂರ್ತಿಯವರ 'ಎಚ್ಚರ ತಂಗಿ ಎಚ್ಚರ' ಎಂಬ ಪತ್ತೇದಾರಿ ಸಾಮಾಜಿಕ ನಾಟಕವನ್ನು ಕಂಪನಿ ಪ್ರದರ್ಶನಗೊಳಿಸಿತು. 'ಎಚ್ಚರ ತಂಗಿ ಎಚ್ಚರ' ನಾಟಕ ಮೆಟ್ರೊ ಪಾಲಿಟನ್ ನಗರವಾದ ಬೆಂಗಳೂರಿನಲ್ಲಿ ಸತತ ೨೫೦ ಪ್ರಯೋಗಗಳನ್ನು ಕಂಡಿತು. ಇದೇ 'ಎಚ್ಚರ ತಂಗಿ ಎಚ್ಚರ' ನಾಟಕದ ೧೦೧ನೆಯ ಪ್ರದರ್ಶನ ಸಮಾರಂಭಕ್ಕೆ ಬಿ.ಆರ್. ಅರಿಷಿಣಗೋಡಿಯವರು ಗದುಗಿನ ಪುಟ್ಟರಾಜ ಗವಾಯಿಗಳನ್ನು ಹಾಗೂ ಕಮತಗಿಯ ಶ್ರೀ ಶ್ರೀ ಹುಚ್ಚೇಶ್ವರ ಸ್ವಾಮಿಗಳನ್ನು ಕರೆಸಿದ್ದರು.

ಬೆಂಗಳೂರು ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಪ್ರಯೋಗಗೊಂಡ ಅರಿಷಿಣಗೋಡಿಯವರ ಒಂದೊಂದು ನಾಟಕ ೨೦೦ರಿಂದ ೨೫೦ ಪ್ರಯೋಗಗಳನ್ನು ಕಂಡಿವೆ. 'ಬಸ್ ಕಂಡಕ್ಟರ್' 'ಭೂಮಿ ತೂಕದ ಹೆಣ್ಣು' 'ನನ್ನ ಗಂಡನ ಹೆಂಡತಿ' 'ಕಿವುಡ ಮಾಡಿದ ಕಿತಾಪತಿ' 'ಎಚ್ಚರ ತಂಗಿ ಎಚ್ಚರ' ನಾಟಕಗಳನ್ನು ಬೆಂಗಳೂರಿನಲ್ಲಿ ಪ್ರದರ್ಶನ ಮಾಡಿ ಕಂಪನಿ ಸರ್ಕಾರದ ಕಣ್ಣಿಗೆ ಬಿತ್ತು. ಅದೇ ವರ್ಷ ಬಿ.ಆರ್. ಅರಿಷಿಣಗೋಡಿಯವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಕರ್ನಾಟಕ ಸರಕಾರ ಗೌರವಿಸಿತು. ಬೆಂಗಳೂರಿನ ಕ್ಯಾಂಪಿಗೆ ಗುಡಿಹಳ್ಳಿ ನಾಗರಾಜರು ಮೇಲಿಂದ ಮೇಲೆ ಬಂದು ನಾಟಕ ವೀಕ್ಷಿಸಿ ಬಿ.ಆರ್. ಅರಿಷಿಣಗೋಡಿಯವರ ಜೊತೆ ಚರ್ಚಿಸಿ ಮೆಚ್ಚುಗೆಯ ಮಾತುಗಳನ್ನು ಹೇಳಿ ಹೋಗುತ್ತಿದ್ದರು. ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಶಾಂತರಸರು ಆಗ ಬೆಂಗಳೂರಿನಲ್ಲಿ ನೆಲೆಸಿದ್ದರು. ಒಮ್ಮೆ ಗುಡಿಹಳ್ಳಿ ನಾಗರಾಜರು ಶಾಂತರಸರನ್ನು ನಾಟಕ ನೋಡಲು ಕರೆತಂದಿದ್ದರು. ಬಿ.ಆರ್. ಅರಿಷಿಣಗೋಡಿ ಯವರ ನಾಟಕ ರುಚಿಸಿದ್ದರಿಂದ ಶಾಂತರಸರು ಮತ್ತೊಮ್ಮೆ ತಮ್ಮ ಕುಟುಂಬ ಸಮೇತರಾಗಿ ಬಂದು

ನಾಟಕ ವೀಕ್ಷಣೆ ಮಾಡಿ ಅರಿಷಿಣಗೋಡಿಯವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದರು. ಹವ್ಯಾಸಿ ರಂಗಭೂಮಿಯ ಗಣ್ಯ ಕಲಾವಿದರು ಕಂಪನಿಯ ನಾಟಕಗಳನ್ನು ನೋಡಿ ಮೆಚ್ಚುಗೆಯ ಮಾತುಗಳನ್ನು ಆಡಿದ್ದಾರೆ.

ರಂಗಭೂಮಿಯ ಬಗ್ಗೆ ಆಸಕ್ತಿ ಇದ್ದ ಎಂ.ಪಿ. ಪ್ರಕಾಶರು ಆಗ ಮಂತ್ರಿಗಳಾಗಿದ್ದರು. ಅರಿಷಿಣಗೋಡಿಯವರು ನಾಟಕದ ಒಂದು ಸಮಾರಂಭಕ್ಕೆ ಬೆಂಗಳೂರಿನ ಕ್ಯಾಂಪನಲ್ಲಿಯೇ ಎಂ.ಪಿ. ಪ್ರಕಾಶರನ್ನು ಆಹ್ವಾನಿಸಿದ್ದರು. ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕಂಪನಿಯ ಬಗ್ಗೆ ಹಾಗೂ ಮಾಲಿಕರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ ಎಂ.ಪಿ. ಪ್ರಕಾಶರು ಇನ್ನೂ ಕೆಲವು ದಿನಾ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ನಾಟಕ ಪ್ರದರ್ಶನ ಮಾಡುವಿರಾ? ಎಂದು ಕೇಳಿದರು. ಕಾಂಟ್ರ್ಯಾಕ್ಟ್ (ಗುತ್ತಿಗೆ) ಮುಗಿಯಲು ಬಂದ ಅವಧಿಯನ್ನು ಇನ್ನೂ ೬ ತಿಂಗಳವರೆಗೆ ವಿಸ್ತರಿಸಿಕೊಟ್ಟದ್ದು ಅರಿಷಿಣಗೋಡಿಯವರ ಕಂಪನಿಯ ಬಗ್ಗೆ ಇದ್ದ ಗೌರವವನ್ನು ಸೂಚಿಸುತ್ತದೆ.

ಬಿ.ಆರ್. ಅರಿಷಿಣಗೋಡಿಯವರ ಇನೆಯ ಕಂಪನಿ ಹೆಚ್ಚಾಗಿ ದಕ್ಷಿಣ ಕನ್ನಡದ ಮೈಸೂರು, ಪಿರಿಯಾಪಟ್ಟಣ, ಗುಂಡ್ಲುಪೇಟೆ, ಶಿವಮೊಗ್ಗ, ತೀರ್ಥಹಳ್ಳಿ, ಶೃಂಗೇರಿ, ಕೊಪ್ಪ, ಹೊನ್ನಾಳಿ, ಶಿಕಾರಿಪುರ, ದಾವಣಗೆರೆ, ಬೆಂಗಳೂರ, ತುಮಕೂರ, ಸಿರಾ, ಜವನಗೊಂಡನಹಳ್ಳಿ ಮುಂತಾದಕಡೆ ಕ್ಯಾಂಪು ಮಾಡಿದೆ.

'ಭೂಮಿ ತೂಕದ ಹೆಣ್ಣು' ನಾಟಕದೊಂದಿಗೆ ಕಂಪನಿ ಬೆಂಗಳೂರಿನಿಂದ ಉತ್ತರ ಕರ್ನಾಟಕದ ಪಟ್ಟಣಗಳಿಗೆ ಮತ್ತೆ ಪ್ರಯಾಣ ಬೆಳೆಸಿತು. ಉತ್ತರ ಕರ್ನಾಟಕದಲ್ಲಿ 'ಭೂಮಿ ತೂಕದ ಹೆಣ್ಣು' ನಾಟಕ ಕಂಪನಿಗೆ ಒಳ್ಳೆಯ ಆದಾಯ ಮತ್ತು ಕೀರ್ತಿಯನ್ನು ತಂದುಕೊಟ್ಟಿತು. ಸುನಂದಾ-ಪ್ರಕಾಶ ಕಡಪಟ್ಟಿ ದಂಪತಿಗಳು ಉತ್ತರ ಕರ್ನಾಟಕದಲ್ಲಿ ವೃತ್ತಿರಂಗಭೂಮಿಯಲ್ಲಿ ಪಳಗಿದ ಕಲಾವಿದರಾಗಿದ್ದರು. ಅಲ್ಲದೇ ಇವರ ಜೊತೆ ಮಾಲತಿ ಮೈಸೂರ ಸೇರಿಕೊಂಡು ಅರಿಷಿಣಗೋಡಿಯವರ ಕಂಪನಿ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿದಾಗ ಕಂಪನಿ ಆರ್ಥಿಕವಾಗಿ ಸುಭದ್ರವಾಗಿ ಬೆಳೆದು ನಿಂತಿತು. ಸುನಂದಾ-ಪ್ರಕಾಶ ಕಡಪಟ್ಟಿ, ಮಾಲತಿ ಮೈಸೂರು ಇವರ ಸಂಭಾಷಣೆಯನ್ನು ಕೇಳುತ್ತಿದ್ದ ಪ್ರೇಕ್ಷಕರು ಕೇಕೆಹಾಕಿ ಸೀಟಿ ಊದಿ ಚಪ್ಪಾಳೆ ತಟ್ಟಿ ಆನಂದ ಪಡುತ್ತಿದ್ದರು.

ಮುಂದೆ ಕಂಪನಿ ಇಂಡಿಗೆ ಕ್ಯಾಂಪು ಮಾಡಿತು. ಇಲ್ಲಿ ಕಂಪನಿ ಹಳೆಯ ನಾಟಕಗಳೊಂದಿಗೆ 'ಭೂಮಿ ತೂಕದ ಹೆಣ್ಣು' ನಾಟಕದ ಪ್ರಯೋಗದಿಂದ ಯಶಸ್ವಿಯಾಗಿ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿತು. ನಂತರ ಕೊಪ್ಪಳ ಜಾತ್ರೆಗೆ ನಾಟಕ ಕ್ಯಾಂಪು ಬಂದಿತು. ಕೊಪ್ಪಳದಲ್ಲಿ ಮೊದ ಮೊದಲು ಕಲೆಕ್ಷನ್ ಅಷ್ಟೇನು ಸರಿಯಾಗಿರಲಿಲ್ಲ. ನಂತರ ದಿನಗಳೆದಂತೆ ಒಂದುವರೆ ಸಾವಿರ ಇದ್ದ ಕಲೆಕ್ಷನ್ ೫ರಿಂದ ೬ ಸಾವಿರದವರೆಗೆ ಏರುತ್ತಾ ಹೋಯಿತು. ಕೊಪ್ಪಳ ಗವಿಸಿದ್ಧೇಶ್ವರನ ಕೃಪೆಯಿಂದ ಕಂಪನಿ ಭರ್ಜರಿ

ಜಯವನ್ನು ಹೊಂದಿತು. ಕಂಪನಿ ೨ನೆಯ ಸಲ ಬೆಂಗಳೂರು ಕ್ಯಾಂಪ್ ಮುಗಿಸಿ ಚೆನ್ನರಾಯ ಪಟ್ಟಣಕ್ಕೆ ಕ್ಯಾಂಪು ಮಾಡಲು ತನ್ನ ಕಲಾಯಾತ್ರೆಯನ್ನು ಮುಂದುವರಿಸಿತು. ಚೆನ್ನರಾಯ ಪಟ್ಟಣದಲ್ಲಿ ಮಳೆಗಾಲ ಅಲ್ಲದಿದ್ದರೂ ರಂಗಮಂದಿರ ಖಾಲಿ ಖಾಲಿ ಇರುತ್ತಿತ್ತು. ಕಂಪನಿಗೆ ಯಾವುದಾದರೊಂದು ಊರಿನಲ್ಲಿ ಹೀಗೆ ಒಮ್ಮೊಮ್ಮೆ ಆಗಿ ಬಿಡುತ್ತಿತ್ತು. ನಂತರ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ 'ಕಿವುಡ ಮಾಡಿದ ಕಿತಾಪತಿ' ನಾಟಕದಿಂದ ಪ್ರಯೋಗ ಪ್ರಾರಂಭ ಮಾಡಿದರು. ೨-೩ ದಿನ ಕಲೆಕ್ಷನ್ ಆಗಲಿಲ್ಲ ಬೇಸರಗೊಂಡ ಬಿ.ಆರ್. ಅರಿಷಿಣಗೋಡಿಯವರು ಯಾಕೋ ನಮ್ಮ ಗ್ರಹಗತಿ ಚೆನ್ನಾಗಿಲ್ಲವೆಂದು ನೊಂದುಕೊಂಡು ಸುಮ್ಮನಿದ್ದರು. ಇದ್ದಕ್ಕಿದ್ದ ಹಾಗೆ ೫-೬ ದಿನಗಳಲ್ಲಿ ಕಂಪನಿ ಕಲೆಕ್ಷನ್ ಏರತೊಡಲಿಕ್ಕೆ ಹತ್ತಿತು. ದಿನಕ್ಕೆ ಎರಡು ನಾಟಕಗಳು ನಡೆಯಲಿಕ್ಕೆ ಹತ್ತಿದವು. 'ಕಿವುಡ ಮಾಡಿದ ಕಿತಾಪತಿ' ಮೊದಲ ನಾಟಕ ಸತತ ೯೮ ಪ್ರಯೋಗಗಳನ್ನು ಕಂಡಿತು. ತೀರ್ಥಹಳ್ಳಿಯಲ್ಲಿ ಕ್ಯಾಂಪ್ ಮಾಡಿ ಆಡುತ್ತಿದ್ದಾಗ 'ಕಿವುಡ ಮಾಡಿದ ಕಿತಾಪತಿ' ನಾಟಕಕಕ್ಕೆ ಹೆಚ್ಚಾಗಿ ಮಹಿಳೆಯರೇ ಬರುತ್ತಿದ್ದುದು ಒಂದು ವಿಶೇಷ. ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ನಾಟಕಕ್ಕೆ ಬರುವುದು ಕಡಿಮೆಯಾಗಿರುವ ಸಂದರ್ಭದಲ್ಲಿ ಮಹಿಳಾ ಪ್ರೇಕ್ಷಕರ ಆಗಮನ ಬಿ.ಆರ್. ಅರಿಷಿಣಗೋಡಿಯವರಿಗೆ ಆನಂದವನ್ನುಂಟು ಮಾಡಿತು. ಅದೇ ತೀರ್ಥಹಳ್ಳಿಯಲ್ಲಿ 'ಬಸ್ ಕಂಡಕ್ಟರ್' 'ಗರೀಬಿ ಹಟಾವೋ' 'ಇಲ್ಲಿಗೆ ಬಂತೋ ಸಂಗಯ್ಯಾ' 'ಚೆನ್ನಪ್ಪ ಚೆನ್ನಗೌಡ' 'ಭೂಮಿ ತೂಕದ ಹೆಣ್ಣು' ಮುಂತಾದ ನಾಟಕಗಳನ್ನೂ ಯಶಸ್ವಿಯಾಗಿ ಪ್ರಯೋಗ ಮಾಡಿತು.

೧೯೯೯ರ ಬೇಸಿಗೆಯಲ್ಲಿ ಕಂಪನಿ ಕಡಕೋಳದಲ್ಲಿ ಕ್ಯಾಂಪ್ ಮಾಡಿತು. ಕಡಕೋಳದಲ್ಲಿ ಕಂಪನಿ ಹೀನಾಯವಾಗಿ ಸೋಲನ್ನು ಅನುಭವಿಸಿ ನಷ್ಟವನ್ನು ಹೊಂದಿತು. ಕಂಪನಿ ಅಲ್ಲಿಂದ ಅನಿವಾರ್ಯವಾಗಿ ಕಾಲುಕೀಳಬೇಕಾಯಿತು. ನಂತರದ ಬಳ್ಳಾರಿಯ ಕ್ಯಾಂಪು ಕೂಡ ಕಂಪನಿಗೆ ನಷ್ಟವನ್ನು ತಂದಿತು. ಕಡಕೋಳ ಮತ್ತು ಬಳ್ಳಾರಿ ಕ್ಯಾಂಪುಗಳು ಕಂಪನಿಗೆ ಒಟ್ಟು ಅವತ್ತಿನ ಕಾಲದಲ್ಲಿ ೬೦ ಸಾವಿರ ರೂಪಾಯಿ ನಷ್ಟವನ್ನು ತಂದವು. ಇಂತಹ ಆರ್ಥಿಕ ಹೊಡೆತದಿಂದ ಒಮ್ಮೊಮ್ಮೆ ಕಂಪನಿ ಬಂದು ಮಾಡುವ ವಿಚಾರ ಬಿ.ಆರ್. ಅರಿಷಿಣಗೋಡಿಯವರ ತಲೆಯಲ್ಲಿ ಬರುತ್ತಿತ್ತು. ಅಖಂಡ ೪೦ ವರ್ಷಗಳವರೆಗೆ ಕಂಪನಿ ನಡೆಸಿ ಹೈರಾಣಾದ ಇವರು ನಮಗಿನ್ನೇನು ಮಾಡಲು ಬರುತ್ತದೆ ಎಂದು ಹಾಗೇ ಕಂಪನಿಯನ್ನು ಮುನ್ನಡೆಸಿಕೊಂಡು ಹೋದರು. ೧೯೯೯ರ ಯರಗಟ್ಟಿಗೆ ಕಂಪನಿ ಕ್ಯಾಂಪು ಹಾಕಿತು. ಈ ಹಿಂದೆ ಕಂಪನಿ ೨ ಸಲ ಕ್ಯಾಂಪ್ ಮಾಡಿದ ಊರು. 'ಬಸ್ ಕಂಡಕ್ಟರ್' 'ಧರ್ಮದೇವತೆ' 'ಗರೀಬಿ ಹಟಾವೋ' 'ಬಡವರು ನಗಬೇಕು' ನಾಟಕಗಳು ಗಲ್ಲಾ ಪೆಟ್ಟಿಗೆಗೆ ಮೋಸ ಮಾಡಲಿಲ್ಲ. ಅಲ್ಲಿಂದ ಕಂಪನಿ ಶಿರಸಿಗೆ ಕ್ಯಾಂಪು ಮಾಡಿತು. ಶಿರಸಿಯ ನಂತರ ಸಮೀರವಾಡಿ, ಚಿಕ್ಕೋಡಿಗಳಿಗೆ ಕಂಪನಿ ತನ್ನ ರಂಗಯಾತ್ರೆಯನ್ನು ಮುಂದುವರೆಸಿ ಯಶಸ್ವಿಯಾಯಿತು. ಮುಂದೆ ಕಂಪನಿ ೨೦೦೩ರಲ್ಲಿ ಬೇರೆ ಬೇರೆ ಊರುಗಳಿಗೆ ತನ್ನ

ರಂಗಕಲಾಸೇವೆಯನ್ನು ಮುಂದುವರೆಸಿ ಸಖರಾಯಪಟ್ಟಣದ ಕ್ಯಾಂಪಿನಲ್ಲಿ ನಷ್ಟದ ಮೇಲೆ ನಷ್ಟವನ್ನು ಅನುಭವಿಸಿ ಕೊನೆಯ ಅಂಕ ಪರದೆಯನ್ನು ಎಳೆಯಿತು. ಯಾವುದಕ್ಕೂ ಕೊನೆ ಎಂಬುದು ಇರುತ್ತದೆ ಬಿ.ಆರ್. ಅರಿಷಿಣಗೋಡಿಯವರು ತಮ್ಮ ವೃತ್ತಿರಂಗಭೂಮಿ ಬದುಕಿನಲ್ಲಿ ಹಿತ-ಮಿತ ಸೂತ್ರವನ್ನು ಅನುಸರಿಸಿ ಕರ್ನಾಟಕದಾದ್ಯಂತ ಸಂಚರಿಸಿದರು. ಆರ್ಥಿಕವಾಗಿ ಸೋಲೋ ಗೆಲುವೋ ಇಷ್ಟು ದಿನಗಳ ಕಾಲ ಹುಚ್ಚೇಶ್ವರ ನಾಟ್ಯ ಸಂಘದ ರಂಗಯಾತ್ರೆಯನ್ನು ಮುನ್ನಡೆಸಿಕೊಂಡು ಬಂದದ್ದರಲ್ಲಿ ಅರಿಷಿಣಗೋಡಿಯವರ ರಂಗಪ್ರೀತಿ ಒಡೆದು ತೋರುತ್ತದೆ.

ಆ. ರಂಗಶ್ರದ್ಧೆ

ಬಿ.ಆರ್. ಅರಿಷಿಣಗೋಡಿಯವರು ಅತ್ಯಂತ ಪ್ರೀತಿಯಿಂದ, ಶಿಸ್ತಿನಿಂದ, ಶ್ರಮದಿಂದ ಕಂಪನಿಯನ್ನು ನಡೆಸಿಕೊಂಡು ಬಂದರು. ಈ ದಿನಗಳಲ್ಲಿ ಎಷ್ಟೋ ಜನ ಕಲಾವಿದರು ಅವರ ಕಂಪನಿಗೆ ಬಂದು ಸೇರಿದರು. ಈ ಕಲಾವಿದರ ಸಂಖ್ಯೆಯನ್ನು ನೋಡಿದರೆ ಇಷ್ಟೊಂದು ಜನರನ್ನು ಅರಿಷಿಣಗೋಡಿಯವರು ಹೇಗೆ ಸಂಭಾಳಿಸಿದರು ಎಂಬುದೇ ಆಶ್ಚರ್ಯದ ವಿಷಯವೆನಿಸುತ್ತದೆ. ಇದಕ್ಕೆ ಶ್ರಮ, ಸಹನೆ ಎರಡೂ ಗುಣಗಳಿರಬೇಕು. ಇವೆರಡನ್ನೂ ಪಡೆದುಕೊಂಡು ಕಂಪನಿಯನ್ನು ದೀರ್ಘ ದಿನಗಳ ಕಾಲ ನಡೆಸಿಕೊಂಡು ಬಂದದ್ದರಲ್ಲಿ ಬಿ.ಆರ್. ಅರಿಷಿಣಗೋಡಿಯವರ ರಂಗಶ್ರದ್ಧೆ ಒಡೆದು ತೋರುತ್ತದೆ. ಹುಚ್ಚೇಶ್ವರ ಕಂಪನಿಗೆ ಬಂದು ಸೇರಿದ ಕಲಾವಿದರು ಯಾರು ಯಾರು ಅವರನ್ನು ಹೇಗೆ ನೋಡಿಕೊಂಡರು ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಕಂಪನಿಯ ನಿತ್ಯದ ಕೆಲಸಗಳ ಜಂಜಾಟದಲ್ಲಿ ತಮಗೆ ಎಷ್ಟೇ ತೊಂದರೆಯಾಗಲಿ ಹೊಸ ಹೊಸ ನಾಟಕಗಳನ್ನು ಬರೆದು ರಂಗಭೂಮಿಗೆ ಅಳವಡಿಸಿ ಪ್ರೇಕ್ಷಕರ ಅಭಿಮಾನವನ್ನು ನಿರಂತರ ಕಾಯ್ದುಕೊಂಡಿದ್ದಾರೆ. ಹಾಗೇ ಬೇರೆಯವರ ನಾಟಕಗಳನ್ನು ಆಡಿಸುವ ಉದಾರ ಗುಣದೊಂದಿಗೆ ರಂಗಭೂಮಿಗೆ ವೈವಿಧ್ಯತೆ ತುಂಬಿಕೊಂಡಿದ್ದಾರೆ. ಬರುವ ಅಡೆತಡೆಗಳನ್ನು ಧೈರ್ಯದಿಂದ ಎದುರಿಸಿದ್ದಾರೆ. ಪ್ರೇಕ್ಷಕರು ಇಷ್ಟಪಟ್ಟಾಗಲೆಲ್ಲ ಚಿತ್ರರಂಗದಿಂದ ಅನೇಕ ಅತಿಥಿನಟರನ್ನು ಕರೆಸಿದ್ದಾರೆ. ನಟ-ನಿರ್ದೇಶಕನಾಗಿರುವುದರೊಂದಿಗೇ ಚಾಣಾಕ್ಷ ಮಾಲಿಕನಾಗಿ ಕಂಪನಿಯ ಆಡಳಿತವನ್ನು ಚೆನ್ನಾಗಿ ನಡೆಸಿದ್ದಾರೆ. ವಿಸ್ತೃತವಾದ ಓದಿನ ಹವ್ಯಾಸವನ್ನು ಬೆಳೆಯಿಸಿಕೊಂಡ ಅರಿಷಿಣಗೋಡಿಯವರು ಅನೇಕ ಶ್ರೇಷ್ಠ ನಾಟಕಕಾರರ ಸಾಹಿತಿಗಳ ಒಡನಾಟವನ್ನು ಬೆಳೆಸಿಕೊಂಡವರು. ಅವರ ಗುಣ ಸ್ವಭಾವಗಳು ರಂಗ ಚಟುವಟಿಕೆಗಳಿಗೆ ಪೂರಕವಾಗಿಯೇ ಇವೆ. ಪ್ರಸಿದ್ಧ ಕಲಾವಿದರಿಗೆ ಆಶ್ರಯ, ಸ್ವಂತ ನಾಟಕಗಳು, ಅನ್ಯರ ನಾಟಕಗಳು, ಅಡಚಣೆಗಳು, ಅತಿಥಿ ನಟರು, ಆಡಳಿತ, ನಟ, ನಿರ್ದೇಶಕ, ಮಾಲಿಕ, ಓದು, ನಾಟಕಕಾರರು, ಸಾಹಿತಿಗಳ ಒಡನಾಟ, ಗುಣ ಸ್ವಭಾವಗಳು ಎಂಬ ಉಪಶೀರ್ಷಿಕೆಗಳ ಅಡಿಯಲ್ಲಿ ಇವೆಲ್ಲವನ್ನೂ ವಿವರಿಸುತ್ತ ಅನನ್ಯವಾಗಿರುವ ಅರಿಷಿಣಗೋಡಿಯವರ ರಂಗಶ್ರದ್ಧೆಯನ್ನು ಕಂಡರಿಸಲು ಇಲ್ಲಿ ಯತ್ನಿಸಲಾಗಿದೆ.

ಕಲಾವಿದರಿಗೆ ಆಶ್ರಯ

ನಾಟಕಕಾರನು ಸೃಷ್ಟಿಸಿದ ಪಾತ್ರಗಳಿಗೆ ಜೀವ ತುಂಬುವವರು ಕಲಾವಿದರು. ಪ್ರತಿಯೊಂದು ವೃತ್ತಿ ಮಂಡಳಿಯ ಯಶಸ್ಸು ಕಲಾವಿದರ ಸಾಮರ್ಥ್ಯದ ಮೇಲೆ ನಿಂತಿರುತ್ತದೆ. ಇಂತಹ ನಟ, ಇಂತಹ ನಟಿಯರು ಕಂಪನಿಯಲ್ಲಿದ್ದಾರೆ ಎಂಬ ಪ್ರಸಿದ್ಧಿಯ ಹಿನ್ನೆಲೆಯಲ್ಲಿ ಎಷ್ಟೋ ಕಂಪನಿಗಳು ಪ್ರಚಾರಮಾಡಿ ಹಣ ಸಂಪಾದಿಸುತ್ತಿದ್ದವು. ಹೀಗಾಗಿ ಕಂಪನಿ ನಾಟಕಗಳಲ್ಲಿ ಕಲಾವಿದರೆ ಪ್ರಮುಖವಾಗಿ ನಿಲ್ಲುತ್ತಾರೆ. ನಟನು ಆಂಗಿಕ ಹಾವ-ಭಾವಗಳ ಜೊತೆಗೆ ಸಂದರ್ಭಕ್ಕೆ ತಕ್ಕಂತೆ ಧ್ವನಿ ಏರಿಳಿತದ ಕೌಶಲವನ್ನು ಪಡೆದಿರಬೇಕಾಗುತ್ತದೆ. ಇಂತಹ ಸಾಮರ್ಥ್ಯವನ್ನು ಪಡೆದ ನಟನು ಕಂಪನಿಗೆ ಕೀರ್ತಿಯನ್ನು ತರಲು ಸಾಧ್ಯ. ಬಿ.ಆರ್. ಅರಿಷಿಣಗೋಡಿಯವರ ಕಂಪನಿಯಲ್ಲಿ ಕಲಾ ನೈಪುಣ್ಯವನ್ನು ಹೊಂದಿದ ಕಲಾವಿದರ ತಂಡವನ್ನೇ ಕಾಣುತ್ತೇವೆ. ಕಲಾವಿದರು ತಮ್ಮ ಕಲಾಭಿನಯದಿಂದ ಕಂಪನಿಯ ಕೀರ್ತಿಯನ್ನೂ ತಮ್ಮ ಜನಪ್ರಿಯತೆಯನ್ನೂ ಹೆಚ್ಚಿಸಿಕೊಂಡದ್ದನ್ನು ಕಾಣುತ್ತೇವೆ.

೧೯೬೧ರಲ್ಲಿ ಪ್ರಾರಂಭವಾದ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕಂಪನಿ ಪ್ರಾರಂಭದಲ್ಲಿ ಕೆಲವೇ ಕೆಲವು ಕಲಾವಿದರನ್ನು ಸೇರಿಸಿಕೊಂಡು ಯಶಸ್ವಿ ರಂಗ ಪ್ರಯೋಗಗಳನ್ನು ಮಾಡಿತು. ನಂತರದ ದಿನಗಳಲ್ಲಿ ಕಂಪನಿ ಬೆಳೆದಂತೆ ಕಂಪನಿಯ ಸಂಸಾರವೂ ಬೆಳೆಯುತ್ತಾ ನಡೆಯಿತು.

ಕಂಪನಿ ಪ್ರಾರಂಭವಾದ ವರ್ಷದಲ್ಲಿಯೇ ಶ್ರೇಷ್ಠ ನಟಿ ಪ್ರಮೀಳಾ ಗುಡೂರ 'ಲಂಚ ಸಾಮ್ರಾಜ್ಯ' ನಾಟಕದಲ್ಲಿಯ ಖಳನಾಯಕಿ ಮೀನಾಕ್ಷಿಯ ಪಾತ್ರದಲ್ಲಿ ಪ್ರೇಕ್ಷಕರನ್ನು ರಂಜಿಸಿ ಕಂಪನಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟ ಅಪರೂಪದ ಕಲಾವಿದೆ. ಶಿವಲಿಂಗಪ್ಪ ಹಳ್ಳದ, ಈಶ್ವರ ಗೊಂದಕರ, ಬಸಯ್ಯ ಪಟ್ಟದಕಲ್, ಗುಡುಸಾಬ ಇಳಕಲ್, ಅಬ್ಬಾಸಅಲಿ ಇಳಕಲ್, ಯಲ್ಲಪ್ಪ ರಡ್ಡೇರ ತಿಮ್ಮಾಪೂರ, ಶಾಂತಾಬಾಯಿ ಪತ್ತಾರ ಇಳಕಲ್ ಇವರೆಲ್ಲ 'ಲಂಚ ಸಾಮ್ರಾಜ್ಯ' 'ಹೆಣ್ಣುಮಗಳು' ನಾಟಕದಲ್ಲಿ ಪಾತ್ರಗಳನ್ನು ಮನೋಜ್ಞವಾಗಿ ನಿರ್ವಹಿಸಿ ಕಂಪನಿಯ ಕೀರ್ತಿಯನ್ನು ಹೆಚ್ಚಿಸಿದರು. ಕಂಪನಿಯೂ ಸುಮಾರು ಮೂರು ವರ್ಷಗಳವರೆಗೆ ಇದೇ ಮೇಲೆ ಹೇಳಿದ ಕಲಾವಿದರನ್ನು ತೆಗೆದುಕೊಂಡು ಬೇರೆ ಬೇರೆ ಊರುಗಳಲ್ಲಿ ಕ್ಯಾಂಪು ಮಾಡಿ ಪ್ರದರ್ಶನ ನೀಡಿತು.

೧೯೬೪ರ ಸುಮಾರು ಗದಗ ಕ್ಯಾಂಪಿನಲ್ಲಿ ಸೋಮಯ್ಯ ಲಕ್ಷ್ಮೇಶ್ವರ, ರಾಮನಗೌಡ ಕಟಗೇರಿ, ರಹಿಮಾನಸಾಹೇಬ ಶಿರಹಟ್ಟಿ, ಬಸಪ್ಪ ಕಲ್ಲೂರ, ನೀಲಮ್ಮ ಅಮ್ಮಣಗಿ, ಮೆಹಬೂಬಿ ನೂರಜಾಹನ್ ಗದಗ ಇವರೆಲ್ಲ ಕಲಾವಿದರು 'ಬಸ್ ಕಂಡಕ್ಟರ್' ಮತ್ತು 'ಸೈನಿಕನ ಸಹೋದರಿ' ನಾಟಕದಲ್ಲಿ ಪಾತ್ರಗಳನ್ನು ಮಾಡಲು ಕಂಪನಿಗೆ ಬಂದು ಸೇರಿದರು. ನಂತರ ಕಂಪನಿ ಗದಗದಿಂದ ಬಾಗಲಕೋಟೆಗೆ ಮುಕ್ಕಾಂ ಮಾಡಿದಾಗ ಸುರೇಶ ಪಾಟೀಲ ತೋಡಿಹಾಳ, ಸೋಮಣ್ಣ ಹೊಳಗುಂದಿ, ರಾಮಗೋಪಾಲ, ಮಾರುತಿ ತೋರಣಗಟ್ಟಿ, ಮೃತ್ಯುಂಜಯ ಸ್ವಾಮಿ, ನಿಂಗನಗೌಡ ಅಂಬಲಿ, ದೇವರಾಜ ಅಂಬಲಿ, ಪರಮೇಶಿ

ಗದಗ, ಹಸನ್ ಬೇಗಂ ಬಾಗಲಕೋಟ, ಮಮತಾಜ ಗುಡೂರ, ಲೋಲಾ ಬೆಂಗಳೂರ, ಬಸವಣ್ಣೆವ್ವ ಗದಗ ಕಲಾವಿದರು ಬಂದು ಸೇರಿದರು. ಇವರೆಲ್ಲರೂ ತಮ್ಮ ಪಾತ್ರಗಳಿಗೆ ನ್ಯಾಯವನ್ನು ಒದಗಿಸಿ ಕಂಪನಿಯ ಕೀರ್ತಿಯನ್ನು ಹೆಚ್ಚಿಸಿದರು.

೧೯೬೭ರಲ್ಲಿ ಆರಂಭವಾದ 'ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ ಎಂಬ ಹೆಸರಿನ ೨ನೆಯ ಕಂಪನಿಗೆ ಕಲಾವಿದರ ದಂಡೇ ಹರಿದು ಬಂದದ್ದು ಗಮನಾರ್ಹ. ಈಗಾಗಲೇ ಹೆಸರು ಗಳಿಸಿದ ಕಮತಗಿ ಕಂಪನಿಗೆ ರಬಕವಿ ಮುಕ್ಕಾಮದಲ್ಲಿ ಪಾಂಡುರಂಗ ಗೋಕರ್ಣ, ಗುರುಸಿದ್ಧಯ್ಯ ಇದ್ದಲಗಿ, ರಾಚಯ್ಯ ಗುಳೇದಗುಡ್ಡ, ಶಂಕರಯ್ಯ ರಕ್ಕಸಗಿ, ಸಾರಂಗಯ್ಯ ಐಹೊಳೆ, ಉಳಿವೆಪ್ಪ ಬಡಿಗೇರ, ಸುಲೋಚನಾ ಇಳಕಲ್, ಲಲಿತಾ ಕೋದಂಡ, ಮೋಹಿನಿ ಬೆಂಗಳೂರು, ಸುನೀತಾ ಕುಂದಾಪುರ, ಶೋಭಾ ಗದಗ, ಜಯಾ ರಿತ್ತಿ, ಇಂದುಮತಿ ದಾವಣಗೆರೆ ಕಲಾವಿದರು ಬಂದು ಸೇರಿದರು. ಮೇಲಿನ ಕಲಾವಿದರೆಲ್ಲ ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿಯ ಬೇರೆ ಬೇರೆ ನಾಟಕಗಳಲ್ಲಿ ಪಾತ್ರಗಳನ್ನು ಮಾಡಿ ಕಂಪನಿ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ.

ಸುಲೋಚನಾ ಇಳಕಲ್, ಇಂದುಮತಿ ದಾವಣಗೆರೆ ಇವರು 'ಬಸ್ ಕಂಡಕ್ಟರ್' ನಾಟಕದಲ್ಲಿ ಖಾನಾವಳಿ ಚೆನ್ನಿ ಪಾತ್ರಗಳಿಂದ ಜನರನ್ನು ರಂಜಿಸಿ ಹೆಸರು ಗಳಿಸಿದ ಕಲಾವಿದೆಯರು. ರಾಚಯ್ಯ ಗುಳೇದಗುಡ್ಡ 'ಬಸ್ ಕಂಡಕ್ಟರ್' ನಾಟಕದಲ್ಲಿ ಖಾನಾವಳಿ ಮಾಲಕ ದೇವಣ್ಣನ ಪಾತ್ರವನ್ನು ಮಾಡಿ ಜನಮೆಚ್ಚುಗೆ ಗಳಿಸಿದಾತ. 'ಹೆಣ್ಣುಮಗಳು' ನಾಟಕದಲ್ಲಿ ಮೀನಾಕ್ಷಿಯ ಪಾತ್ರವನ್ನು ಮಮತಾಜ ಗುಡೂರ ಮನೋಜ್ಞವಾಗಿ ಅಭಿನಯಿಸಿ ಕಂಪನಿಯ ಕೀರ್ತಿಯನ್ನು ಹೆಚ್ಚಿಸಿದ ಕಲಾವಿದೆ. ಗಂಗಾವತಿ ಕ್ಯಾಂಪಿನಲ್ಲಿ ಬಂದು ಸೇರಿದ ಬಿ. ಸಣ್ಣಾಚಾರಿ, ಮರಿಯಣ್ಣಾ ಹೊಸಪೇಟೆ, ಕೆ. ಬಾಲಚಂದ್ರಗೌಡ ಕಲಾವಿದರು 'ಗರಿಬೀ ಹಟಾವೊ' ನಾಟಕದೊಂದಿಗೆ ಬಿ.ಆರ್. ಅರಿಷಿಣಗೋಡಿಯವರ ಕಂಪನಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟರು. ಅಲ್ಲದೇ ತಾವು ಕೂಡ ಜನಮಾನಸದಲ್ಲಿ ಮೆಚ್ಚುಗೆಯನ್ನು ಪಡೆದು ಶ್ರೇಷ್ಠ ನಟರೆಂದು ಪ್ರಸಿದ್ಧಿ ಪಡೆದರು. ೧೯೭೨ರ ಸುಮಾರಿಗೆ ಹೊಸದುರ್ಗ ಕ್ಯಾಂಪಿನಲ್ಲಿ ಮಾಲತಿ ಮೈಸೂರ ಕಂಪನಿಗೆ ಬಂದು ಸೇರಿದಳು. ಕಂಪನಿ ಆಗ 'ಗರೀಬಿ ಹಟಾವೋ' ನಾಟಕವನ್ನು ಪ್ರದರ್ಶಿಸುತ್ತಿತ್ತು. ಕಂಪನಿ ಪ್ರದರ್ಶಿಸುತ್ತಿದ್ದ ಎಲ್ಲಾ ನಾಟಕಗಳಲ್ಲಿಯೂ ಮಾಲತಿ ಮೈಸೂರ ಬೇರೆ ಬೇರೆ ಪಾತ್ರಗಳನ್ನು ಮಾಡಿ ಪ್ರೇಕ್ಷಕರಿಂದ ಮಾಲಿಕರಿಂದ ಸೈ ಎನಿಸಿಕೊಂಡ ಪ್ರತಿಭಾನ್ವಿತ ಕಲಾವಿದೆ. ಬಿ.ಆರ್. ಅರಿಷಿಣಗೋಡಿಯವರ ಕಂಪನಿಗೆ ಬಂದು ಸೇರಿದ ಮಾಲತಿ ಮೈಸೂರ ಕಂಪನಿ ನಿಲ್ಲುವವರೆಗೆ ಅಂದರೆ ೨೦೦೩ರ ತನಕ ತನ್ನ ರಂಗಕಲಾಸೇವೆ ಯನ್ನು ನಿರ್ವಹಿಸಿ ಕರ್ನಾಟಕದಾದ್ಯಂತ ಹೆಸರುಗಳಿಸಿದರು.

ಕಂಪನಿ ಗೋಕಾಕ ಕ್ಯಾಂಪ್ ಮಾಡಿದಾಗ 'ಲಂಚ ಸಾಮ್ರಾಜ್ಯ' ನಾಟಕದೊಂದಿಗೆ ಕಂಪನಿಯಲ್ಲಿ ಪ್ರವೇಶ ಪಡೆದ ಬಾಬಣ್ಣಾ ಗೋಕಾಕ ೧೫ ವರ್ಷಗಳವರೆಗೆ ಕಂಪನಿ ಪ್ರದರ್ಶಿಸುತ್ತಿದ್ದ ಬೇರೆ ಬೇರೆ

ನಾಟಕಗಳಲ್ಲಿ ಬೇರೆ ಬೇರೆ ಪಾತ್ರಗಳನ್ನು ಮಾಡಿ ಕಂಪನಿಗೂ, ತನಗೂ ಕೀರ್ತಿಯನ್ನು ತಂದುಕೊಟ್ಟ ಕಲಾವಿದ. ಅದೇ ಗೋಕಾಕ ಕ್ಯಾಂಪಿನಲ್ಲಿ ಉತ್ತರ ಕರ್ನಾಟಕದಾದ್ಯಂತ ಬೇರೆ ಬೇರೆ ಕಂಪನಿಗಳಲ್ಲಿ ಹೆಸರುಗಳಿಸಿದ ಅಯ್ಯನಗೌಡ ಶಾಡಗುಪ್ಪಿ ಕಂಪನಿಗೆ ಬಂದು ಸೇರಿದರು. ಆಗ ಅಯ್ಯನಗೌಡ ಶಾಡಗುಪ್ಪಿಗಾಗಿಯೇ 'ಗೌಡ್ರ ಗದ್ಲ' ನಾಟಕವನ್ನು ಕಂಪನಿ ಪ್ರದರ್ಶಿಸಲು ಪ್ರಾರಂಭ ಮಾಡಿತು. 'ಗೌಡ್ರ ಗದ್ಲ' ನಾಟಕದಲ್ಲಿ ಖಳನಾಯಕ ಗೌಡನ ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿ ಜನರನ್ನು ರಂಜಿಸಿದ ಅಯ್ಯನಗೌಡ ನಾಟಕದಲ್ಲಿ ಪಾತ್ರ ಮಾಡುತ್ತಾನೆಂದರೆ ಜನರು ತಾಮುಂದು ನಾಮುಂದು ಎಂದು ನಾಟಕ ನೋಡಲು ಬರುತ್ತಿದ್ದರು. ಇಂತಹ ಕಲಾವಿದರ ರಂಗ ಕಲಾಸೇವೆಯಿಂದ ಬಿ.ಆರ್. ಅರಿಷಿಣಗೋಡಿಯವರ ಕಂಪನಿ ಕರ್ನಾಟಕದಾದ್ಯಂತ ಜಯಭೇರಿ ಹೊಡೆಯಲು ಸಾಧ್ಯವಾಯಿತು.

ಶಿಕಾರಿಪುರ, ತೀರ್ಥಹಳ್ಳಿಯಲ್ಲಿ ಕಂಪನಿ ಕ್ಯಾಂಪು ಮಾಡಿದಾಗ ಶಿವಾನಂದ, ಬಿದರಕೋಟೆ, ಗಂಗಾಧರ ಗುಬ್ಬಿ, ಪರಮೇಶ ಸಿರ್ಸಿ, ವಿಜಯಶೇಖರ ಅನಗುಂಡಿ ಕಲಾವಿದರು ಕಂಪನಿಗೆ ಬಂದು ಸೇರಿದರು. ಇವರೆಲ್ಲ ಕಂಪನಿ ಪ್ರದರ್ಶಿಸುತ್ತಿದ್ದ ನಾಟಕಗಳಲ್ಲಿ ಬಿ.ಆರ್. ಅರಿಷಿಣಗೋಡಿಯವರು ಕೊಟ್ಟ ಪಾತ್ರಗಳನ್ನು ಮಾಡಿ ಜನರಿಂದ ಮೆಚ್ಚುಗೆ ಪಡೆದು ರಂಗಕಲಾಸೇವೆಯಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡರು. ಶಿಕಾರಿಪುರ ಕ್ಯಾಂಪಿನಲ್ಲಿಯೇ ಮಂಗಳಾ ಶಿಕಾರಿಪುರ ಎಂಬ ಕಲಾವಿದೆ 'ಸೈನಿಕನ ಸಹೋದರಿ' ನಾಟಕದಲ್ಲಿ ಚಂದ್ರಿಯ ಪಾತ್ರಧಾರಿಯಾಗಿ ಕಂಪನಿಗೆ ಸೇರಿ ಒಳ್ಳೆಯ ಹೆಸರನ್ನು ತಂದುಕೊಟ್ಟಳು. ಅದೇ ಕ್ಯಾಂಪಿನಲ್ಲಿ ಸರ್ವಮಂಗಳ ಎಂಬ ಕಲಾವಿದೆ 'ಗಂಡೆದೆಯ ಗೌರಿ' ನಾಟಕದಿಂದ ಕಂಪನಿಗೆ ಪ್ರವೇಶ ಮಾಡಿದಳು. ಚನ್ನರಾಯಪಟ್ಟಣದಲ್ಲಿ ಕಂಪನಿ ಕ್ಯಾಂಪು ಮಾಡಿದಾಗ ಕೆ. ಮಾಲಾ ಎಂಬ ಹಾಸ್ಯ ಕಲಾವಿದೆ 'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕದೊಂದಿಗೆ ಬಿ.ಆರ್. ಅರಿಷಿಣಗೋಡಿಯವರ ಕಂಪನಿಗೆ ಬಂದು ಸೇರಿದಳು. ಕೆ. ಮಾಲಾ ತನ್ನ ವಿಶಿಷ್ಟವಾದ ಆಂಗಿಕ ಅಭಿನಯದಿಂದ ಜನರನ್ನು ಮೆಚ್ಚಿಸಿದ ಕಲಾವಿದೆ.

ಕಂಪನಿ ಗುಲಬರ್ಗಾದಲ್ಲಿ ಕ್ಯಾಂಪು ಮಾಡಿತ್ತು, ಯಮನಪ್ಪ ಸಾಸನೂರ, ಅಮ್ಮಣಗಿ ದೇಸಾಯಿ, ಈಶ್ವರ ಶಿಗ್ಗಲಿ, ಮರಿಯಣ್ಣಾ ಮದ್ದೂರ ಎಂಬ ಕಲಾವಿದರು ಕಂಪನಿಗೆ ಬಂದು ಸೇರಿದರು. ಕಂಪನಿ ಪ್ರಯೋಗಿಸುತ್ತಿದ್ದ 'ಲಂಚ ಸಾಮ್ರಾಜ್ಯ' 'ಇಲ್ಲಿಗೆ ಬಂತೋ ಸಂಗಯ್ಯಾ' ಮುಂತಾದ ನಾಟಕಗಳಲ್ಲಿ ನಾಯಕ, ಪೋಷಕ ಪಾತ್ರಗಳಲ್ಲಿ ನಟಿಸಿ ಗುಲಬರ್ಗಾ ಭಾಗದಲ್ಲಿ ಕಂಪನಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟರು. ಗಂಗಾವತಿಯಲ್ಲಿ ಕಂಪನಿ ೨ನೆಯ ಸಲ ಕ್ಯಾಂಪ್ ಮಾಡಿತ್ತು. ಆ ವೇಳೆಯಲ್ಲಿ 'ಸೈನಿಕನ ಸಹೋದರಿ' ನಾಟಕ ಪ್ರಾರಂಭವಾಗಿತ್ತು. ಈ ವೇಳೆಯಲ್ಲಿ ಗಂಗಾವತಿಯ ಮಾರ್ತಾಂಡ ಗವಾಯಿ, ಮಾಣಿಕರಾವ್ ಗವಾಯಿ, ಕುಬೇರಪ್ಪ ಗವಾಯಿಗಳು ಪಾತ್ರಧಾರಿಗಳಾಗಿ ಕಂಪನಿಗೆ ಬಂದು ಸೇರಿದರು. ಈ ಮೂರು ಕಲಾವಿದರು ಸಂಗೀತದ ಜ್ಞಾನವನ್ನು ಪಡೆದವರಾಗಿದ್ದರು ಹಾಗೂ ಹಿನ್ನೆಲೆ ಗಾಯಕರೂ ಆಗಿ ಕಂಪನಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟರು.

ಹಿರೇಕೆರೂರ, ರಾಣೆಬೆನ್ನೂರ ಕ್ಯಾಂಪಿನಲ್ಲಿ ಜಯಣ್ಣ ಹೊಸಮನಿ, ವೆಂಕಟೇಶ ಹೆಗಡೆ, ಕುಮಾರ ಸಿರ್ಸಿ, ಶೇಖರ ಹೆಗಡೆ, ಸಂಗಮೇಶ ಬ್ಯಾಡಗಿ ಕಲಾವಿದರು 'ಗಂಡೆದೆಯ ಗೌರಿ' ನಾಟಕದಲ್ಲಿ ಪಾತ್ರಧಾರಿಗಳಾಗಿ ಅಭಿನಯಿಸಲು ಬಂದು ಕಂಪನಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದ್ದಾರೆ. ಬ್ಯಾಡಗಿಯಲ್ಲಿ ಕಂಪನಿ ಮುಕ್ಕಾಂ ಮಾಡಿತ್ತು. ಕೊಟ್ರಯ್ಯ ಬ್ಯಾಡಗಿ, ಚಿಕ್ಕರಡ್ಡಿ ಹಂಚಿನಾಳ, ದಾವಣಗೆರೆ, ರಾಜು ತಾಳಿಕೋಟಿ, ಅಣ್ಣಪ್ಪ ಕಟಗೇರಿ ಬೆನಕಟ್ಟಿ ಕಲಾವಿದರು ಕಂಪನಿಗೆ ಬಂದು ಸೇರಿದರು. ಇವರೆಲ್ಲ ಕಲಾವಿದರ ಆಗಮನದಿಂದ ಬ್ಯಾಡಗಿ ಕ್ಯಾಂಪ್ ಯಶಸ್ವಿಯಾಗಿ ೨೫೦ ಪ್ರಯೋಗಗಳನ್ನು ಪೂರೈಸಿತು. ಕಂಪನಿ ಬ್ಯಾಡಗಿ ಕ್ಯಾಂಪಿನಲ್ಲಿ 'ಲಂಚ ಸಾಮ್ರಾಜ್ಯ' 'ಹೆಣ್ಣುಮಗಳು' 'ಸೈನಿಕನ ಸಹೋದರಿ' 'ಗಂಡೆದೆಯ ಗೌರಿ' 'ಬಸ್ ಕಂಡಕ್ಟರ್' 'ಪಾಪದ ದೇಹ ಪುಣ್ಯದ ಜೀವ' ಮುಂತಾದ ನಾಟಕಗಳನ್ನು ಈ ಮೇಲಿನ ಕಲಾವಿದರ ಕಲಾ ಕೌಶಲದಿಂದ ಯಶಸ್ವಿಯಾಗಿ ಪ್ರದರ್ಶನ ಮಾಡಿ ಕಂಪನಿ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿತು.

ರಾಜು ತಾಳಿಕೋಟಿ, ಅಣ್ಣಪ್ಪ ಕಟಗೇರಿಯಂತಹ ಹಾಸ್ಯ ಕಲಾವಿದರು ಕಂಪನಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟರು. ಹಾಗೆಯೇ ಪ್ರಕಾಶ ಕಡಪಟ್ಟಿ, ಸುನಂದಾ ಕಡಪಟ್ಟಿ ಜೋಡಿ ತಮ್ಮ ಕಲಾ ಕೌಶಲದಿಂದ ಬಿ.ಆರ್. ಅರಿಷಿಣಗೋಡಿಯವರ ಕಂಪನಿಗೆ ಜನಪ್ರಿಯತೆಯನ್ನು ತಂದುಕೊಟ್ಟ ಕಲಾದಂಪತಿಗಳು.

ಕಲಾವಿದರು ಎಂದರೆ ಕೇವಲ ನಟ-ನಟಿಯರು ಎಂದು ಅರ್ಥ ಮಾಡಿದರೆ ತಪ್ಪಾದೀತು. ಕಂಪನಿಯಲ್ಲಿ ಕಾರ್ಯನಿರ್ವಹಿಸುವ ವ್ಯವಸ್ಥಾಪಕರು(ಮ್ಯಾನೇಜರ್), ಸಂಗೀತ ನಿರ್ದೇಶಕರು, ಹಾರ್ಮೋನಿಯಂ ವಾದಕರು, ತಬಲಾ ವಾದಕರು, ಪೇಂಟರುಗಳೆಲ್ಲರನ್ನು ಕಲಾವಿದರು ಎಂಬ ವಿಶಾಲ ಅರ್ಥದಲ್ಲಿ ಬಳಸುವುದು ಸೂಕ್ತ ವೆನಿಸುತ್ತದೆ.

ನಟ-ನಟಿಯರು ರಂಗಮಂಚದ ಮೇಲೆ ಕಾಣಿಸಿಕೊಂಡು ತಮ್ಮ ಕಲಾಭಿನಯದಿಂದ ಪ್ರೇಕ್ಷಕರನ್ನು ರಂಜಿಸಿ ನಾಟಕದ ಯಶಸ್ಸಿಗೆ ಕಾರಣವಾದರೆ, ರಂಗಮಂಚದ ಮುಂದೆ ತಗ್ಗು ಪ್ರದೇಶದಲ್ಲಿ ಆಸೀನರಾದ ವಾದ್ಯ ವೃಂದದವರು ಸಂದರ್ಭಕ್ಕೆ ತಕ್ಕ ತಮ್ಮ ವಾದ್ಯಗಳನ್ನು ನುಡಿಸುತ್ತ ರಂಗಮಂದಿರವನ್ನು ನಾಟಕ ಮುಗಿಯುವವರೆಗೂ ಜೀವಂತವಾಗಿ ಇಡುವ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ.

'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ' ಕಂಪನಿಗೆ ಪ್ರಾರಂಭದಲ್ಲಿ ಕಮತಗಿಯ ಬಸಲಿಂಗ ಹೂಗಾರ ಅವರು ಹಾರ್ಮೋನಿಯಂ ವಾದಕರಾಗಿ ಸೇರಿದರು. ಕಂಪನಿ ಪ್ರದರ್ಶಿಸುತ್ತಿದ್ದ 'ಲಂಚ ಸಾಮ್ರಾಜ್ಯ' 'ಹೆಣ್ಣುಮಗಳು' 'ಸೈನಿಕನ ಸಹೋದರಿ' 'ಬಸ್ ಕಂಡಕ್ಟರ್' ನಾಟಕಗಳಿಗೆ ಸುಮಾರು ಏಳು ವರ್ಷಗಳ ವರೆಗೆ ಹಾರ್ಮೋನಿಯಂ ವಾದಕರಾಗಿ ತಮ್ಮ ರಂಗಸೇವೆಯನ್ನು ಮಾಡಿ ಮುಂದೆ ವೃತ್ತಿರಂಗಭೂಮಿಯಿಂದ ಅನಾರೋಗ್ಯ, ಅಶಕ್ತತೆ ಕಾರಣಗಳಿಂದ ನಿವೃತ್ತಿ ಹೊಂದಿದರು. ಶಂಕ್ರಪ್ಪ ಕಂಪ್ಲಿ ಎಂಬ ಹಾರ್ಮೋನಿಯಂ ವಾದಕ ಕಂಪನಿ ಗಂಗಾವತಿಯಲ್ಲಿ ಕ್ಯಾಂಪ್ ಮಾಡಿದಾಗ ಕಂಪನಿಗೆ ಬಂದು ಸೇರಿಕೊಂಡರು. ೧೯೭೨ರಿಂದ

೧೯೯೯ರವರೆಗೆ ಕಂಪನಿಯಲ್ಲಿ ಹಾರ್ಮೋನಿಯಂ ವಾದಕರಾಗಿ ಸುದೀರ್ಘ ಸೇವೆ ಸಲ್ಲಿಸಿದರು. ಬಿ.ಆರ್. ಅರಿಷಿಣಗೋಡಿಯವರ ಒಟ್ಟು ನಾಲ್ಕು ಕಂಪನಿಗಳಲ್ಲಿ ಹಾರ್ಮೋನಿಯಂ ವಾದಕರಾಗಿ ರಂಗಕಲಾಸೇವೆಯನ್ನು ಮಾಡಿದ ಈಶ್ವರ ಮ್ಯಾಗೇರಿ, ರೇವಣಸಿದ್ದಪ್ಪ ಸುರಕೋಡ, ಸೋಮನಾಥ ತಂಗೋಡ, ಗೋಪಾಲ ಬಳ್ಳಾರಿ, ಬಸವಣ್ಣೆಪ್ಪ ಹೊಸಪೇಟೆ, ಮಲ್ಲಿಕಾರ್ಜುನ ಅಸುಂಡಿ ಮುಂತಾದ ಹಾರ್ಮೋನಿಯಂ ಕಲಾವಿದರನ್ನು ಇಲ್ಲಿ ನೆನೆಯದೆ ಹೋದರೆ ತಪ್ಪಾದೀತು.

ಕಂಪನಿ ಪ್ರಾರಂಭವಾದಾಗ ತಬಲಾ ವಾದಕರಾಗಿ ಚೆನ್ನಪ್ಪ ಧನ್ನೂರ, ಗುಂಡುಕುಮಾರ ಇಳಕಲ್, ವಿಜಯಕುಮಾರ ಮುರೋಳ ಇವರು ಕಂಪನಿಗೆ ಬಂದು ಸೇರಿದರು. ಮುಂದೆ ಕಂಪನಿ ತನ್ನ ರಂಗಕಲಾಯಾತ್ರೆಯನ್ನು ದಾವಣಗೆರೆ ಕಡೆಗೆ ತೆಗೆದುಕೊಂಡು ಹೋದ ಸಂದರ್ಭದಲ್ಲಿ ಚಂದ್ರ ದಾವಣಗೆರೆ, ನಾಗೇಶ ಭಟ್ಟರು ಕಂಪನಿಗೆ ತಬಲಾ ವಾದಕರಾಗಿ ಬಂದು ಸೇರಿ ತಮ್ಮ ಸೇವೆಯನ್ನು ಮುಂದುವರೆಸಿದರು. ಕಂಪನಿ ಜಮಖಂಡಿಯಲ್ಲಿ ಮುಕ್ಕಾಂ ಮಾಡಿದಾಗ ಬಾಗಲಕೋಟೆಯ ಶಿವಾನಂದ ಎನ್ನುವ ತಬಲಾವಾದಕ ಕಂಪನಿಗೆ ಬಂದು ಸೇರಿದರು. ಕಂಪನಿ ಗುಲಬರ್ಗಾದಲ್ಲಿ ಕ್ಯಾಂಪು ಮಾಡಿದಾಗ ಕಮಲರಾಜ ದೇವದುರ್ಗ ಎನ್ನುವ ತಬಲಾ ವಾದಕರು ಬಂದು ಸೇರಿದರು.

ಪ್ರಾರಂಭದಲ್ಲಿ ರಂಗಸಜ್ಜಿಕೆಗೆ ಬೇಕಾದ ಅಂಕ ಪರದೆಗಳನ್ನು ಬೆಂಗಳೂರಿನಿಂದ ತರಿಸಲಾಗುತ್ತಿತ್ತು. ನಂತರ ಕೆ.ಎಲ್. ಕೆಂಧೂಳಿ ಪೇಂಟರ್ ಇಳಕಲ್, ಶಿಲ್ಪಾಚಾರ್ಯ ಪೇಂಟರ್ ಚಿತ್ರದುರ್ಗ, ಎಸ್. ಪ್ರಹ್ಲಾದ ಪೇಂಟರ್ ಹುಬ್ಬಳ್ಳಿ, ರಾಜು ಪೇಂಟರ್ ಹಿರೇಹಾಳ, ಅಮೀನ ಪೇಂಟರ್ ಇಳಕಲ್, ಮರಿ ಪೇಂಟರ್ ಬೆಂಗಳೂರ, ಕೃಷ್ಣಾ ಪೇಂಟರ್ ಹುಬ್ಬಳ್ಳಿ ಮುಂತಾದ ಪ್ರಸಿದ್ಧ ಪೇಂಟರುಗಳ ಸಹಾಯದಿಂದ ನಾಟಕಗಳ ಸನ್ನಿವೇಶಕ್ಕೆ ತಕ್ಕಂತೆ ಅಂಕ ಪರದೆಯನ್ನು ಬರೆಯಿಸಿ ಕಂಪನಿ ತನ್ನ ಪ್ರದರ್ಶನದಲ್ಲಿ ಬಳಸಿಕೊಂಡದ್ದು ಗಮನಾರ್ಹ.

೧೯೬೧ರಿಂದ ೧೯೬೫ರವರೆಗೆ ಬಿ.ಆರ್. ಅರಿಷಿಣಗೋಡಿಯವರೇ ಸಂಗೀತ ನಿರ್ದೇಶನ ಮಾಡುತ್ತಿದ್ದರು. ನಂತರ ಸಂಗೀತ ನಿರ್ದೇಶನಕ್ಕೆ ಸಂಗಮೇಶ, ಹೊನ್ನಿಗನೂರ, ಚಿದಾನಂದ ಸಪ್ಪಂಡಿ ಇಳಕಲ್, ಗಂಗಾಧರ ಭೂತಿ ಬನಹಟ್ಟಿ, ಕಂಪ್ಲಿ ಇವರ ಸೇವೆಯನ್ನು ಕಂಪನಿ ಬಳಸಿಕೊಂಡು ಮಧುರವಾದ ರಾಗ ಸಂಯೋಜನೆಗಳ ಮುಖಾಂತರ ಜನರನ್ನು ತಣಿಸಿತು.

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕಂಪನಿಯು ಇಷ್ಟೆಲ್ಲ ಪ್ರಸಿದ್ಧ ಕಲಾವಿದರಿಂದ ಕರ್ನಾಟಕದ ವೃತ್ತಿ ಮಂಡಳಿಗಳಲ್ಲಿಯೇ ಹೆಸರು ಗಳಿಸಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತ್ತು. ಆದರೂ ನಟ-ನಟಿಯರ ಪಲಾಯನ ನಿರಂತರವಾಗಿ ನಡೆದೇ ಇತ್ತು. ಕೆಲವು ನಟ-ನಟಿಯರು ಕಂಪನಿಯನ್ನು ಬಿಟ್ಟು ಹೋದರೆ ಅವರ ಸ್ಥಾನವನ್ನು ಹೊಸದಾಗಿ ಬಂದ ನಟ-ನಟಿಯರು ತುಂಬುತ್ತಿದ್ದರು. ಹೀಗೆ ಬಿಟ್ಟು ಹೋದ ಕಲಾವಿದರ ಸ್ಥಾನವನ್ನು ಕಾಲದಿಂದ ಕಾಲಕ್ಕೆ ಕಂಪನಿ ತುಂಬಿಸಿಕೊಳ್ಳುತ್ತ ಹೊಸ ಕಲಾವಿದರಿಗೆ

ಅವಕಾಶವನ್ನು ಕಲ್ಪಿಸುತ್ತ, ತನ್ನ ವೃತ್ತಿ ಜೀವನದಲ್ಲಿ ಕಂಪನಿ ಅನೇಕ ಏರಿಳಿತವನ್ನು ಕಲಾವಿದರಿಂದ ಅನುಭವಿಸುತ್ತ ೪೩ ವರ್ಷಗಳವರೆಗೆ ನಿಲ್ಲದೇ ನಡೆದುಕೊಂಡು ಬಂದುದು ಸಾಮಾನ್ಯವಾದುದೇನಲ್ಲ.

ಸ್ವಂತ ನಾಟಕಗಳು

ಬಿ.ಆರ್. ಅರಿಷಿಣಗೋಡಿಯವರು 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ' ಕಮತಗಿ ಕಂಪನಿಯನ್ನು ಬಾಗಲಕೋಟೆಯಲ್ಲಿ ಪ್ರಾರಂಭ ಮಾಡಿದ ವಿಷಯವನ್ನು ಹಿಂದೆಯೇ ಹೇಳಿದೆ. ಊರ ಗೌಡನಿಗೆ ಪ್ರತಿಭಟನಾ ರೂಪವಾಗಿ ಬಿ.ಆರ್. ಅರಿಷಿಣಗೋಡಿಯವರು 'ಲಂಚ ಸಾಮ್ರಾಜ್ಯ' ನಾಟಕವನ್ನು ಬರೆದು ತಾವೇ ಕಟ್ಟಿದ ಕಮತಗಿಯ ಹವ್ಯಾಸಿ ತಂಡದಲ್ಲಿ ರಂಗಪ್ರಯೋಗ ಮಾಡಿ ಕಮತಗಿ ಜನರಿಂದ ಮೆಚ್ಚುಗೆ ಪಡೆದರು. ಮುಂದೆ ಬಾಗಲಕೋಟೆಯಲ್ಲಿ ಕಂಪನಿ ಕಟ್ಟಿ ಅದೇ 'ಲಂಚ ಸಾಮ್ರಾಜ್ಯ' ನಾಟಕದಿಂದ ಹೆಸರುಗಳಿಸಿದ ಬಿ.ಆರ್. ಅರಿಷಿಣಗೋಡಿಯವರಿಗೆ ಇದರಿಂದ ಮತ್ತೊಂದು ನಾಟಕ ಬರೆಯಲು ಪ್ರೇರಣೆಯಾಯಿತು. ತಮ್ಮ ಕಂಪನಿಯ ರಂಗಪ್ರದರ್ಶನಕ್ಕಾಗಿ 'ಹೆಣ್ಣುಮಗಳು' ಎಂಬ ಸುಂದರ ಸಾಮಾಜಿಕ ನಾಟಕವನ್ನು ೧೯೬೧ರಲ್ಲಿ ರಚಿಸಿ ಅನೇಕ ಊರುಗಳಲ್ಲಿ ಪ್ರದರ್ಶನ ಮಾಡಿ ಕಂಪನಿಯು ಮತ್ತೆ ತಮ್ಮ ಹೆಸರನ್ನು ಹೆಚ್ಚಿಸಿಕೊಂಡಿತು. 'ಲಂಚ ಸಾಮ್ರಾಜ್ಯ' 'ಹೆಣ್ಣುಮಗಳು' ನಾಟಕಗಳನ್ನು ೩ ವರ್ಷಗಳವರೆಗೆ ರಂಗ ಪ್ರಯೋಗ ಮಾಡಿ ಜನರನ್ನು ರಂಜಿಸಿದರೂ ಇವೆರಡೆ ನಾಟಕಗಳು ಕಂಪನಿಯನ್ನು ಮುನ್ನಡೆಸಿಕೊಂಡು ಹೋಗಲು ಸಾಕಾಗುವುದಿಲ್ಲ ಎಂಬುದನ್ನು ಮನಗಂಡ ಬಿ.ಆರ್. ಅರಿಷಿಣಗೋಡಿಯವರು ೧೯೬೪ ರಲ್ಲಿ 'ಸೈನಿಕನ ಸಹೋದರಿ' ಎಂಬ ಸಾಮಾಜಿಕ ನಾಟಕವನ್ನು ಬರೆದು ತಮ್ಮ ಕಂಪನಿಯಲ್ಲಿ ರಂಗ ಪ್ರಯೋಗಕ್ಕೆ ಒಳಪಡಿಸಿ ಪ್ರಸಿದ್ಧಿಯನ್ನು ಪಡೆದರು. ಈ 'ಸೈನಿಕನ ಸಹೋದರಿ' ನಾಟಕವನ್ನು ರಚಿಸಲು ಅರಿಷಿಣಗೋಡಿಯವರಿಗೆ ೧೯೬೨ರಲ್ಲಿ ನಡೆದ ಚೀನಾ-ಭಾರತ ಯುದ್ಧ ಪ್ರೇರಣೆ ನೀಡಿದ್ದನ್ನು ಗಮನಿಸಬಹುದು. ಬಿ.ಆರ್. ಅರಿಷಿಣಗೋಡಿಯವರು ಕಂಪನಿಯ ಅವಶ್ಯಕತೆಗೆ ಅನುಗುಣವಾಗಿ ಗದಗ್ ಕ್ಯಾಂಪ್‌ನಲ್ಲಿ ಮತ್ತೊಂದು ನಾಟಕವನ್ನು ರಚಿಸಲು ಮುಂದಾದರು. ಅದರಫಲವಾಗಿಯೇ 'ಬಸ್ ಕಂಡಕ್ಟರ್' ಎಂಬ ನಾಟಕ ೧೯೬೫ರಲ್ಲಿ ರಚನೆಯಾಯಿತು. ೧೯೬೧ರಿಂದ ೧೯೬೩ರವರೆಗೆ ಅಂದರೆ ೬ ವರ್ಷಗಳಲ್ಲಿ ಬಿ.ಆರ್. ಅರಿಷಿಣಗೋಡಿಯವರು ಬರೆದ ಲಂಚಸಾಮ್ರಾಜ್ಯ, ಹೆಣ್ಣುಮಗಳು, ಸೈನಿಕನ ಸಹೋದರಿ, ಬಸ್ ಕಂಡಕ್ಟರ್ ನಾಟಕಗಳನ್ನು ಪ್ರದರ್ಶಿಸುತ್ತಾ ಉತ್ತರ ಕರ್ನಾಟಕದ ಪ್ರಮುಖ ನಗರಗಳಲ್ಲಿ ಸಂಚರಿಸಿ ಕಂಪನಿ ಸ್ಥಿರತೆ ಪಡೆಯಿತು.

ಕಂಪನಿಯ ಜನಪ್ರಿಯತೆಯು ಬಿ.ಆರ್. ಅರಿಷಿಣಗೋಡಿಯವರ ಕವಿ ಮನಸ್ಸನ್ನು ಸುಮ್ಮನೆ ಕೂಡಿಸಲಿಲ್ಲ. ಅದೇ ತಾನೆ ಮತ್ತೊಂದು ಕಂಪನಿ ೧೯೬೭ರಲ್ಲಿ ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಎಂಬ ಹೆಸರಿನಲ್ಲಿ ಪ್ರಾರಂಭ ಮಾಡಿದ್ದರು. ಎರಡು ಕಂಪನಿಗಳ ಅಗತ್ಯತೆಯನ್ನು ಪೂರೈಸುವುದಕ್ಕಾಗಿ ೧೯೬೮ರಲ್ಲಿ 'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕವನ್ನು ರಚಿಸಿದರು. 'ಇಲ್ಲಿಗೆ ಬಂತೋ ಸಂಗಯ್ಯಾ'

ನಾಟಕ ಕಂಪನಿಗೆ ಒಳ್ಳೆಯ ಆದಾಯವನ್ನು ತಂದುಕೊಟ್ಟಿತು. ಮುಂದೆ ಅದೇ ವರ್ಷ ಆರೇ ತಿಂಗಳಲ್ಲಿ 'ಕಣ್ಣಿದ್ದೂ ಕುರುಡ' ನಾಟಕ ರಚಿಸಿ ರಂಗ ಪ್ರಯೋಗಕ್ಕೆ ಒಳಪಡಿಸಿದರು. 'ಇಲ್ಲಿಗೆ ಬಂತೋ ಸಂಗಯ್ಯಾ' 'ಕಣ್ಣಿದ್ದೂ ಕುರುಡ' ಎರಡೂ ನಾಟಕಗಳು ಸುಂದರವಾದ ಸಾಮಾಜಿಕ ಕಥಾವಸ್ತುವನ್ನು ಒಳಗೊಂಡ ನಾಟಕಗಳಾಗಿದ್ದರಿಂದ ಜನರ ಮನಸ್ಸನ್ನು ಬೇಗನೆ ಸೂರೆಗೊಂಡವು.

ದೇಶದಲ್ಲಿ ಬದಲಾದ ರಾಜಕೀಯ ಗಾಳಿ ಕರ್ನಾಟಕಕ್ಕೂ ತಟ್ಟಿತು. ಇಂದಿರಾ ಗಾಂಧಿಯವರ ಜನಪ್ರಿಯ ಹೇಳಿಕೆಯಾದ "ಗರೀಬಿ ಹಟಾವೊ" ಕೇವಲ ಸರಕಾರಿ ಹೇಳಿಕೆಯಾಗಿ ಕಾಗದ ಪತ್ರದಲ್ಲಿಯೇ ಉಳಿದು ಸಾಮಾನ್ಯ ಜನರಿಗೆ ಅದರ ಫಲ ತಟ್ಟದೇ ಹೋಯಿತು. ಇಂತಹ ಸ್ಥಿತಿಯಲ್ಲಿ ಸಂವೇದನಾಶೀಲ ಬಿ.ಆರ್. ಅರಿಷಿಣಗೋಡಿಯವರ ಮನಸ್ಸು ಜನಜಾಗೃತಿಯನ್ನುಂಟು ಮಾಡಲು 'ಗರೀಬಿ ಹಟಾವೊ' ನಾಟಕವನ್ನು ೧೯೭೨ರಲ್ಲಿ ರಚನೆ ಮಾಡಿ ಸಂವೇದನಾಶೀಲ ನಾಟಕಕಾರರು ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಮುಂದೆ ಸುಮಾರು ಆರು ವರ್ಷಗಳಕಾಲ ಯಾವುದೇ ನಾಟಕವನ್ನು ರಚಿಸದೇ ಹಿಂದೆ ರಚಿಸಿದ ನಾಟಕಗಳನ್ನು ಪ್ರದರ್ಶನಮಾಡುತ್ತ ರಂಗಕಲಾಸೇವೆಯನ್ನು ಮುಂದುವರೆಸಿದರು. ೧೯೭೮ರಲ್ಲಿ ಗಂಗಾವತಿ ಕ್ಯಾಂಪಿನಲ್ಲಿ 'ಗಂಡೆದೆಯ ಗೌರಿ' ಎಂಬ ಸಾಮಾಜಿಕ ನಾಟಕವನ್ನು ರಚಿಸಿ ರಂಗಪ್ರಯೋಗಕ್ಕೆ ಒಳಪಡಿಸಿ ಕಂಪನಿಯ ಆದಾಯವನ್ನು ಹೆಚ್ಚಿಸಿದರು.

೧೯೭೭ರಲ್ಲಿ ಆರಂಭಗೊಂಡ ೩ನೇ ಬ್ರ್ಯಾಂಚ್ ಕಂಪನಿ ಗಂಗಾವತಿಯಲ್ಲಿ ಕ್ಯಾಂಪ್ ಮಾಡಿತ್ತು. ಆರಂಭದಲ್ಲಿ ಕಂಪನಿ ತನ್ನ ಹಿಂದಿನ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ಹೊಸದಾಗಿ ಪ್ರಾರಂಭವಾದ ಕಂಪನಿಯ ಕಡೆಗೆ ಪ್ರೇಕ್ಷಕರನ್ನು ಸೆಳೆಯುವುದಕ್ಕಾಗಿ 'ಗಂಡೆದೆಯ ಗೌರಿ' 'ಬಡವರೂ ನಗಬೇಕು' ಎಂಬ ಎರಡು ಸಾಮಾಜಿಕ ನಾಟಕಗಳನ್ನು ೧೯೭೮ರಲ್ಲಿ ಅದೇ ಗಂಗಾವತಿ ಕ್ಯಾಂಪನಲ್ಲಿ ರಚಿಸಿ ಕಂಪನಿಗೆ ಬಿ.ಆರ್. ಅರಿಷಿಣಗೋಡಿಯವರು ಅರ್ಪಿಸಿದರು. ಮಧ್ಯಮ ವರ್ಗದ ಕೌಟುಂಬಿಕ ಸಮಸ್ಯೆಯನ್ನು ಬಗೆಹರಿಸುವ ಕಥಾವಸ್ತುವಿನಿಂದ ಈ ಎರಡು ನಾಟಕಗಳು ಪ್ರೇಕ್ಷಕರನ್ನು ಆಕರ್ಷಿಸಿ ಕಂಪನಿಯ ಹೆಸರನ್ನು ಮುಂದೆ ಒಯ್ದವು.

೧೯೮೪ರಲ್ಲಿ ಮೂಡಿಗೆರೆ ಕ್ಯಾಂಪ್‌ನೊಂದಿಗೆ ೪ನೆಯ ಕಂಪನಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಈ ೪ನೆಯ ಕಂಪನಿಯು ಹಿಂದಿನ ನಾಟಕಗಳನ್ನು ಪ್ರದರ್ಶಿಸುತ್ತ ಬೆಂಗಳೂರು, ಮೈಸೂರು ಭಾಗದಲ್ಲಿಯೇ ತನ್ನ ರಂಗಕಲಾಸೇವೆಯನ್ನು ಮುಂದುವರಿಸಿತು. ಉತ್ತರ ಕರ್ನಾಟಕದಲ್ಲಿ ಜನಜನಿತವಾದ ಸಂಗ್ಯಾ-ಬಾಳ್ಯಾ ಬಯಲಾಟವನ್ನು ಪರಿವರ್ತಿಸಿ ವೃತ್ತಿರಂಗಭೂಮಿಯಲ್ಲಿ ಪ್ರದರ್ಶನಕ್ಕೆ ಯೋಗ್ಯವಾಗುವ ರೀತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಸಂಗ್ಯಾ-ಬಾಳ್ಯಾ ನಾಟಕವನ್ನು ೧೯೮೫ರಲ್ಲಿ ಬಿ.ಆರ್. ಅರಿಷಿಣಗೋಡಿಯವರು ರಚಿಸಿದರು. ಈ ಸಂಗ್ಯಾ-ಬಾಳ್ಯಾ ನಾಟಕ ವೃತ್ತಿರಂಗಭೂಮಿಯಲ್ಲಿ ಒಂದು

ರೀತಿಯ ಹೊಸತನವನ್ನು ತಂದುಕೊಟ್ಟಿತಲ್ಲದೇ ಅರಿಷಿಣಗೋಡಿಯವರ ಕಂಪನಿ ಗಲ್ಲಾ ಪೆಟ್ಟಿಗೆಯನ್ನು ತುಂಬಿಸಿತು. ಕಂಪನಿ ೧೯೮೭ರಲ್ಲಿ ಗುಲಬರ್ಗಾ ಕ್ಯಾಂಪ್ ಮಾಡಿತ್ತು. ಕಂಪನಿಯ ಹಳೆಯ ನಾಟಕಗಳಾದ ಲಂಚ ಸಾಮ್ರಾಜ್ಯ, ಹೆಣ್ಣುಮಗಳು, ಗಂಡೆದೆಯ ಗೌರಿ, ಗರೀಬಿ ಹಟಾವೋ, ಬಸ್ ಕಂಡಕ್ಟರ್ ಮುಂತಾದ ನಾಟಕಗಳನ್ನು ಪ್ರದರ್ಶಿಸಿದ ಸಂದರ್ಭದಲ್ಲಿಯೇ ಅದೇ ಗುಲಬರ್ಗಾ ಕ್ಯಾಂಪ್‌ನಲ್ಲಿ 'ನಕಲಿ ಸಂಪನ್ನರು' ಎಂಬ ಸಾಮಾಜಿಕ ನಾಟಕವನ್ನು ರಚಿಸಿ ರಂಗಪ್ರಯೋಗಕ್ಕೆ ಒಳಪಡಿಸಿ, ಬಿ.ಆರ್. ಅರಿಷಿಣಗೋಡಿಯವರು ಆರ್ಥಿಕವಾಗಿ ಬಲಗೊಂಡರು.

ಹೀಗೆ ಬಿ.ಆರ್. ಅರಿಷಿಣಗೋಡಿಯವರು ಒಂದು ಕಡೆ ಕಂಪನಿಯ ಆಗು ಹೋಗುಗಳನ್ನು ನೋಡಿಕೊಳ್ಳುವ ಕೆಲಸದಲ್ಲಿ ತೊಡಗಿದರೆ, ಇನ್ನೊಂದು ಕಡೆ ಕಂಪನಿಯ ಪ್ರದರ್ಶನಕ್ಕೆ ಬೇಕಾದ ನಾಟಕಗಳನ್ನು ರಚಿಸಿ ವೃತ್ತಿರಂಗಭೂಮಿಯ ಬಗ್ಗೆ ತಮಗಿದ್ದ ರಂಗಶ್ರದ್ಧೆ, ಕಾಳಜಿಯನ್ನು ತೋರಿಸಿದ್ದಾರೆ. ಎಪ್ಪತ್ತೇಳು ವಸಂತಗಳನ್ನು ಕಂಡಿರುವ ಅರಿಷಿಣಗೋಡಿಯವರು ಈ ಇಳಿವಯಸ್ಸಿನಲ್ಲಿಯೂ ನಾಟಕ ರಚನೆಯನ್ನು ಮುಂದುವರಿಸಿಕೊಂಡು ಬಂದದ್ದನ್ನು ಅವರ 'ಗೀಗೀ ಮೇಳದ ಗಂಗಮ್ಮ' ನಾಟಕ ನಮಗೆ ಮನವರಿಕೆ ಮಾಡಿಕೊಡುತ್ತದೆ.

ಅನ್ಯರ ನಾಟಕಗಳು

ಬಿ.ಆರ್. ಅರಿಷಿಣಗೋಡಿಯವರು ಕಂಪನಿಯಲ್ಲಿ ತಾವು ರಚಿಸಿದ ನಾಟಕಗಳೊಂದಿಗೆ ವರುಷಕ್ಕೊ, ಆರು ತಿಂಗಳಿಗೊಮ್ಮೆಯೋ ಬೇರೆ ನಾಟಕಕಾರರು ಬರೆದ ನಾಟಕಗಳನ್ನು ಪ್ರದರ್ಶಿಸಿ ಬೇರೆ ನಾಟಕಕಾರರ ನಾಟಕಗಳನ್ನು ಗೌರವಿಸುತ್ತಿದ್ದರು. ಅಲ್ಲದೇ ಕಂಪನಿಯಲ್ಲಿ ಪ್ರಯೋಗಗೊಳ್ಳುತ್ತಿದ್ದ ತಮ್ಮ ನಾಟಕಗಳ ಏಕತಾನತೆಯನ್ನು ತೊಲಗಿಸಿ, ಬೇರೆ ನಾಟಕಕಾರರ ನಾಟಕಗಳಿಂದ ಕಂಪನಿಯಲ್ಲಿ ವೈವಿಧ್ಯತೆ ತಂದು ಪ್ರೇಕ್ಷಕರನ್ನು ಸೆಳೆದುಕೊಳ್ಳುವ ಕಲೆಯನ್ನು ಬಿ.ಆರ್. ಅರಿಷಿಣಗೋಡಿಯವರು ಕರಗತ ಮಾಡಿಕೊಂಡಿದ್ದರು.

೧೯೭೫ರಲ್ಲಿ ಗದಗ್ ಕ್ಯಾಂಪ್ ಮಾಡಿದಾಗ ಬಿ.ಆರ್. ಅರಿಷಿಣಗೋಡಿಯವರ ಸಂಪರ್ಕಕ್ಕೆ ಬಂದ ಪ್ರಸಿದ್ಧ ನಾಟಕಕಾರ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ಇವರ ಕಂಪನಿ ಪ್ರದರ್ಶನಕ್ಕೆ ನಾಟಕಗಳನ್ನು ಬರೆದುಕೊಡಲು ಒಪ್ಪಿಕೊಂಡರು. ಮುಂದೆ ೧೯೬೨ರಿಂದ ಇವರ ಕಂಪನಿಗಾಗಿಯೇ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು 'ಪ್ರಜಾ ಸರಕಾರ' 'ಸತಿಪತಿ' ನಾಟಕಗಳನ್ನು ರಚಿಸಿಕೊಟ್ಟರು. ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ ಈ ಎರಡು ನಾಟಕಗಳು ಕಂಪನಿಗೆ ಆದಾಯ ಮತ್ತು ಕೀರ್ತಿಯನ್ನು ತಂದುಕೊಟ್ಟವು. ಮುಂದೆ ೧೯೭೫ರಿಂದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳಿಂದ ರಚಿಸಿದ 'ದೇವರಿಲ್ಲದ ಗುಡಿ' ನಾಟಕವನ್ನು ಕಂಪನಿ ಪ್ರದರ್ಶಿಸಲಿಕ್ಕೆ ಹತ್ತಿತು. ೧೯೮೫ರಿಂದ ಮಹಾಂತೇಶ ಶಾಸ್ತ್ರಿಗಳಿಂದ ರಚಿಸಿದ 'ಏರಿದ ನಂಜು' ನಾಟಕವನ್ನು ಕಂಪನಿ ಪ್ರದರ್ಶಿಸಿ ಪ್ರೇಕ್ಷಕರಿಗೆ ಹೊಸ ರುಚಿ ಒದಗಿಸಿತು. ೧೯೭೫ರಿಂದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳಿಂದ ರಚಿಸಿದ 'ಪ್ರಜಾ ಸರಕಾರ', 'ಸತಿಪತಿ', 'ದೇವರಿಲ್ಲದ ಗುಡಿ', 'ಏರಿದ

ನಂಜು' 'ಪೋಸ್ಟ್‌ಮನ್' ನಾಟಕಗಳನ್ನು ೨೦೦೩ರವರೆಗೆ ನಾಡಿನಾದ್ಯಂತ ಪ್ರಯೋಗಿಸಿ ಬಿ.ಆರ್. ಅರಿಷಿಣಗೋಡಿಯವರ ಕಂಪನಿ ವೃತ್ತಿರಂಗಭೂಮಿಯಲ್ಲಿ ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡಿದೆ.

ಸಾಮಾಜಿಕ ನಾಟಕಗಳನ್ನು ಆಡುತ್ತ ಬಂದ ಕಂಪನಿ, ಹೊಸ ಪ್ರಯೋಗವೆಂಬಂತೆ ಎನ್.ಎಸ್. ಜೋಶಿಯವರು ಬರೆದ 'ಸಿಂಧೂರ ಲಕ್ಷ್ಮಣ' ಎಂಬ ಐತಿಹಾಸಿಕ ನಾಟಕವನ್ನು ಅದ್ದೂರಿ ರಂಗಸಜ್ಜಿಕೆಯ ಮುಖಾಂತರ ಪ್ರಯೋಗ ಮಾಡಿ ಜನ ಮೆಚ್ಚುಗೆಯನ್ನು ಪಡೆಯಿತು. ೧೯೭೨ರಿಂದ ೨೦೦೦ರವರೆಗೆ 'ಸಿಂಧೂರ ಲಕ್ಷ್ಮಣ' ಈ ಕಂಪನಿಯಲ್ಲಿ ಅನೇಕ ಯಶಸ್ವಿ ಪ್ರಯೋಗಗಳನ್ನು ಕಂಡು ನಾಟಕಕಾರ ಎನ್.ಎಸ್. ಜೋಶಿಯವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿದೆ. ೧೯೮೦ರಲ್ಲಿ ಬಿ.ಆರ್. ಅರಿಷಿಣಗೋಡಿ ಯವರು ಎನ್.ಎಸ್. ಜೋಶಿಯವರಿಂದ 'ಶ್ರೀ ಹೊಳೆಹುಚ್ಚೇಶ್ವರ ಮಹಾತ್ಮೆ' ನಾಟಕವನ್ನು ಬರೆಸಿ ನಾಡಿನಾದ್ಯಂತ ಅನೇಕ ರಂಗ ಪ್ರದರ್ಶನಗಳನ್ನು ಮಾಡಿ ಕಂಪನಿಯ ಆದಾಯ ಮತ್ತು ಕೀರ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ. ಇವರದೇ 'ಚೆನ್ನಪ್ಪ ಚೆನ್ನಗೌಡ' ೧೯೮೦ರ ವಿಜಾಪುರದ ಕ್ಯಾಂಪಿನಲ್ಲಿದ್ದಾಗ ಎಸ್.ಎಂ. ಖೇಡಗಿಯವರಿಂದ ರಚಿಸಲ್ಪಟ್ಟ 'ರೀತಿ ತಪ್ಪಿದರೂ ನೀತಿ ತಪ್ಪಿಲ್ಲ' 'ಪಾಪದ ದೇಹ ಪುಣ್ಯದ ಜೀವ' 'ನನ್ನ ಗಂಡನ ಹೆಂಡತಿ' 'ಗೌರಿಹೋದಳು ಗಂಗೆ ಬಂದಳು' ನಾಟಕಗಳನ್ನು ಬಿ.ಆರ್. ಅರಿಷಿಣಗೋಡಿಯವರು ರಂಗಪ್ರಯೋಗಕ್ಕೆ ಒಳಪಡಿಸಿ ಎಸ್.ಎಂ. ಖೇಡಗಿಯವರಿಗೆ ಉತ್ತಮ ನಾಟಕಕಾರರೆಂಬ ಹೆಸರನ್ನು ತಂದುಕೊಟ್ಟಿದ್ದಾರೆ. ಹಾಗೆಯೇ ಎಸ್.ಎಂ. ಖೇಡಗಿಯವರ ನಾಟಕಗಳು ಬೇರೆ ಬೇರೆ ನಗರಗಳಲ್ಲಿ ಕಂಪನಿಯಿಂದ ಪ್ರದರ್ಶನಗೊಂಡು ಕಂಪನಿಯ ಗಲ್ಲಾಪೆಟ್ಟಿಗೆಯನ್ನು ತುಂಬಿಸಿಕೊಟ್ಟಿವೆ. ೧೯೮೧ರಿಂದ ಎಚ್.ಎನ್. ಹೂಗಾರರ 'ಗೆದ್ದವರು ಯಾರು' 'ಕೊಂಡು ತಂದ ಗಂಡ' ನಾಟಕಗಳನ್ನು ಹೂಗಾರವರ ನಿರ್ದೇಶನದಲ್ಲಿ ಕಂಪನಿ ಅನೇಕ ನಗರಗಳಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡಿದೆ.

೧೯೮೭ರಿಂದ ಹೊಳೆಆಲೂರಿನ ಮಾರುತೇಶ ಮಾಂಡ್ರೆಯವರ 'ಧರ್ಮದೇವತೆ' 'ಮಡದಿ ಕೊಟ್ಟ ಮಾತು' 'ಗಂಡನ ಮನೆ' ನಾಟಕಗಳನ್ನು ಕಂಪನಿ ಪ್ರದರ್ಶಿಸಿ ಯುವ ಕವಿ ಮಾಂಡ್ರೆಗೆ ಹೆಸರು ತಂದುಕೊಟ್ಟಿದೆ. ಯುವ ನಾಟಕಕಾರಾದ ನಾ.ದೇ. ನರಸಿಂಹಮೂರ್ತಿಯವರ 'ಎಚ್ಚರ ತಂಗಿ ಎಚ್ಚರ', ಎಸ್.ಎಂ. ಖೇಡಗಿಯವರ 'ಸಂಗೊಳ್ಳಿ ರಾಯಣ್ಣ', 'ಗರಗದ ಮಡಿವಾಳೇಶ್ವರ' ಎಂಬ ಐತಿಹಾಸಿಕ ಮತ್ತು ಭಕ್ತಿ ಪ್ರಧಾನ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಪಿ. ಬಿ. ಧುತ್ತರಗಿಯವರ 'ಮುದುಕನ ಮದುವೆ' ಎಸ್.ಎಂ. ಕಣವಿಯವರ 'ಕೈಲಾಗದ ಗಂಡ ಕೈಲಾಸ ಕಂಡ', ಕೆ.ಎನ್. ಸಾಳುಂಕೆಯವರ 'ದಾರೀದೀಪ' 'ವರ ನೋಡಿ ಹೆಣ್ಣು ಕೊಡು' 'ಕಣ್ಣಿದ್ದರೂ ಬುದ್ದಿಬೇಕು' 'ತಾಳಿಯ ತಕರಾರು' ನಾಟಕಗಳನ್ನು ಕಂಪನಿಯಲ್ಲಿ ಪ್ರದರ್ಶಿಸಿ ನಾಟಕಕಾರರ ಆಶಯವನ್ನು ಜನರ ಮುಂದೆ ಇಟ್ಟಿದ್ದಾರೆ. 'ಸಮಾಜಕ್ಕೆ ಸವಾಲು', 'ಹುಚ್ಚೇಶ್ವರ ಮಹಾತ್ಮೆ', 'ಗೌರಿ ಹೋದಳು ಗಂಗೆ ಬಂದಳು' ನಾಟಕಗಳಿಗೆ ಟ್ರಿಕ್ ಸೀನ್ಸ್ ಅಳವಡಿಸಿ ರಂಗ ಪ್ರಯೋಗದಲ್ಲಿ ಭಾರಿ ಹೊಸತನವನ್ನು ತಂದು ವೃತ್ತಿರಂಗಭೂಮಿಯ ಆಕರ್ಷಣೆಯನ್ನು ಹೆಚ್ಚಿಸಿದರು.

ವಿಜಾಪುರ ಕ್ಯಾಂಪಿನಲ್ಲಿದ್ದಾಗ ನಾ.ದೇ. ನರಸಿಂಹಮೂರ್ತಿ ಕಂಪನಿಗೆ ಬಂದು ಸೇರಿದರು. ನಾ.ದೇ. ನರಸಿಂಹಮೂರ್ತಿಯವರಿಗೆ ವೃತ್ತಿರಂಗಭೂಮಿ ನಾಟಕಕಾರರಲ್ಲಿ ಆಗ ಒಳ್ಳೆಯ ಹೆಸರಿತ್ತು. ಅವರ 'ಮಾಂಗಲ್ಯ ಮೋಸ ಮಾಡಲಿಲ್ಲ' ಎಂಬ ನಾಟಕವನ್ನು ಕಂಪನಿ ವಿಜಾಪುರ ಕ್ಯಾಂಪಿನಲ್ಲಿ ಪ್ರದರ್ಶನ ಮಾಡಿ ಒಳ್ಳೆಯ ಹೆಸರನ್ನು ಪಡೆದುಕೊಂಡಿತು. ಪ್ರಕಾಶ ಕಡಪಟ್ಟಿಯವರು ತಮ್ಮ ಕಂಪನಿಯನ್ನು ಬಂದು ಮಾಡಿ ಬಿ.ಆರ್. ಅರಿಷಿಣಗೋಡಿಯವರ ಕಂಪನಿಗೆ ಬಂದು ಸೇರಿದರು. ಪ್ರಕಾಶ ಕಡಪಟ್ಟಿಯವರು ತಮ್ಮ ಕಂಪನಿಯಲ್ಲಿ ಪ್ರದರ್ಶಿಸುತ್ತಿದ್ದ 'ಭೂಮಿ ತೂಕದ ಹೆಣ್ಣು' 'ತವರು ಬಿಟ್ಟ ತಂಗಿ' ನಾಟಕಗಳು ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದವು. ಈ ಪ್ರಸಿದ್ಧಿ ಪಡೆದ 'ಭೂಮಿ ತೂಕದ ಹೆಣ್ಣು' 'ತವರು ಬಿಟ್ಟ ತಂಗಿ' ನಾಟಕಗಳನ್ನು ಬಿ.ಆರ್. ಅರಿಷಿಣಗೋಡಿಯವರು ತಮ್ಮ ಕಂಪನಿಯಲ್ಲಿ ಬೇರೆಬೇರೆ ನಗರಗಳಲ್ಲಿ ಪ್ರದರ್ಶಿಸಿ ವೃತ್ತಿರಂಗಭೂಮಿಯಲ್ಲಿ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡರು.

ಹೀಗೆ ಬಿ.ಆರ್. ಅರಿಷಿಣಗೋಡಿಯವರು ಬೇರೆ ನಾಟಕಕಾರರು ರಚಿಸಿದ ನಾಟಕಗಳನ್ನು ತಮ್ಮ ಕಂಪನಿಯಲ್ಲಿ ಪ್ರದರ್ಶಿಸಿ ಸಮಕಾಲೀನ ನಾಟಕಕಾರರ ನಾಟಕಗಳನ್ನು ಜನಪ್ರಿಯಗೊಳಿಸಿದ್ದಾರೆ.

ಅಡತಡೆಗಳು

ವೃತ್ತಿರಂಗಭೂಮಿಯ ಇತಿಹಾಸವನ್ನು ಅವಲೋಕಿಸಿದಾಗ ನಮಗೆ ಅನೇಕ ಕಂಪನಿಗಳು ಕಷ್ಟನಷ್ಟಗಳನ್ನು ಅನುಭವಿಸಿ ದಿವಾಳಿ ಎದ್ದಿರುವದನ್ನು ಕಾಣುತ್ತೇವೆ. ಕೆಲವು ಕಂಪನಿಗಳು ನೈಸರ್ಗಿಕ ವಿಕೋಪಗಳಾದ ಬೆಂಕಿ, ಮಳೆ, ಗಾಳಿಗೆ ಸಿಕ್ಕು ತಮ್ಮ ರಂಗಪರಿಕರಗಳನ್ನು ನಾಶ ಪಡಿಸಿಕೊಂಡು ಅನೇಕ ತೊಂದರೆಗಳಿಗೆ ಸಿಕ್ಕಿ-ಹಾಕಿಕೊಂಡಿದ್ದನ್ನು ಕಾಣುತ್ತೇವೆ. ಆದರೆ ಬಿ.ಆರ್. ಅರಿಷಿಣಗೋಡಿಯವರ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿ ಅಂತಹ ಪ್ರಾಕೃತಿಕ ವಿಕೋಪಕ್ಕೆ ಸಿಕ್ಕು ತೊಂದರೆ ಅನುಭವಸಿದ ಉದಾಹರಣೆ ಇಲ್ಲ. ಇದಕ್ಕೆ ಕಾರಣ ಬಿ.ಆರ್. ಅರಿಷಿಣಗೋಡಿಯವರು ಪ್ರತಿಯೊಂದು ವಿಷಯವನ್ನು ಸೂಕ್ಷ್ಮವಾಗಿ ಅವಲೋಕಿಸಿ ತಡ ಮಾಡದೇ ನಿರ್ಣಯಗಳನ್ನು ತೆಗೆದುಕೊಂಡು ಮುಂದೆ ನಡೆಯಬಹುದಾದ ಅನಾಹುತಗಳನ್ನು ತಪ್ಪಿಸುತ್ತಿದ್ದರು.

೧೯೭೩ರಲ್ಲಿ ಸಂಕೇಶ್ವರದಲ್ಲಿ ಕಂಪನಿ ಕ್ಯಾಂಪ್ ಮಾಡಿತ್ತು. 'ಸೈನಿಕನ ಸಹೋದರಿ' ನಾಟಕ ಯಶಸ್ವಿಯಾಗಿ ಪ್ರಯೋಗಗೊಳ್ಳುತ್ತಾ ಕೀರ್ತಿ ಮತ್ತು ಸಾಕಷ್ಟು ಹಣ ಸಂಪಾದನೆಯನ್ನು ಮಾಡಿತ್ತು. ಇದೇ ಅವಧಿಯಲ್ಲಿ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಶ್ರೀ ಕುಮಾರೇಶ್ವರ ನಾಟ್ಯ ಸಂಘ ಅಥಣಿಯಲ್ಲಿ ಮುಕ್ಕಾಂ ಮಾಡಿತ್ತು. ಇದ್ದಕ್ಕಿದ್ದಂತೆ ರಾತ್ರಿ ೧೦ ಗಂಟೆಗೆ ಒಂಭತ್ತು ಜನ ಕಲಾವಿದರು ಅರಿಷಿಣಗೋಡಿಯವರ ಕಂಪನಿಯಿಂದ ಹೋಗಿಬಿಟ್ಟರು. ಧೃತಿಗೆಡದ ಅರಿಷಿಣಗೋಡಿಯವರು ಬಾಗಲಕೋಟೆ ಜಿಲ್ಲೆಯ ಕೆರೂರನಲ್ಲಿ ಬ್ರಾಂಚ ಕಂಪನಿಯ ನಟರನ್ನು ತಂದು ಯಥಾರೀತಿ ನಾಟಕ ಪ್ರಯೋಗ ಮಾಡಿ ಸ್ಪರ್ಧೆಗಳಿದ ಕಂಪನಿಗೆ ತಕ್ಕ ಉತ್ತರ ಕೊಟ್ಟರು. ಅಂದು 'ಸೈನಿಕನ ಸಹೋದರಿ' ನಾಟಕದಲ್ಲಿ ಸಂಜೀವನ ಪಾತ್ರವನ್ನು ಅರಿಷಿಣಗೋಡಿ

ಯವರು ಸೊಗಸಾಗಿ ಮಾಡಿ ಜನಾಕರ್ಷಣೆಯನ್ನು ಹೆಚ್ಚಿಸಿಕೊಂಡರು. ಎಂತಹ ಕಠಿಣ ಪ್ರಸಂಗದಲ್ಲಿಯೂ ಅರಿಷಿಣಗೋಡಿಯವರು ಅಧೈರ್ಯಗೊಳ್ಳದೇ ಚಾಣಾಕ್ಷತನದಿಂದ ಕಂಪನಿಯನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು. ಸಂಕೇಶ್ವರ ಕ್ಯಾಂಪಿನಲ್ಲಿ ಜಯಭೇರಿ ಹೊಡೆದು ಮುಂದೆ ವಿಜಾಪುರ ಜಿಲ್ಲೆಯ ಚಡಚಣದಲ್ಲಿ ಸುಮಾರು ಮೂರು ತಿಂಗಳವರೆಗೆ ಯಶಸ್ವಿ ನಾಟಕ ಪ್ರಯೋಗಗಳನ್ನು ಮಾಡಿ ಜನಮೆಚ್ಚುಗೆಯನ್ನು ಪಡೆದುಕೊಂಡಿತು. ತಾಯಿ ಕಾಶವ್ವ ಯಾವತ್ತೂ ಕಂಪನಿಯ ಜೊತೆ ಇರುತ್ತಿದ್ದರು. ಕಂಪನಿ ಚಡಚಣ ಕ್ಯಾಂಪಿನಿಂದ ತಾಳಿಕೋಟೆಗೆ ಹೋಗಲು ಸಜ್ಜಾಯಿತು.

ಕಂಪನಿಯ ಪರಿಕರಗಳನ್ನು ತಾಳಿಕೋಟೆಗೆ ಕಳಿಸಿ, ಅರಿಷಿಣಗೋಡಿಯವರು ತಾಯಿಯ ಜೊತೆ ಕಾರಿನಲ್ಲಿ ತಾಳಿಕೋಟೆಗೆ ಪ್ರಯಾಣ ಬೆಳೆಸಿದರು. ಮಧ್ಯಾಹ್ನ ೨ ಗಂಟೆಯ ವೇಳೆ ಅಂಬಾಸೆಡರ್ ಕಾರಿನ ಟಾಯರ್‌ಗಳು ಒಡೆದು ಕಾರು ನಿಂತಿತು. ಕಾಕತಾಳೀಯವೋ ಏನೋ ಎನ್ನುವಂತೆ ಅದೇ ವೇಳೆಗೆ ಕಮತಗಿಯ ಮನೆಯಲ್ಲಿ ಅಗ್ನಿದುರಂತ ಸಂಭವಿಸಿತ್ತು. ಕಮತಗಿಯ ಮನೆಯಲ್ಲಿ ಹೆಂಡತಿ ರೇಣುಕಾ, ಅಕ್ಕ ಲಕ್ಷ್ಮೀಬಾಯಿ, ಮಾವ ಗಿರಿಯಪ್ಪ ಹಾಗೂ ರಾಯಪ್ಪ ಅರಿಷಿಣಗೋಡಿಯವರ ಮಗಳು ಪದ್ಮಾವತಿ, ಬಿ.ಆರ್. ಅರಿಷಿಣಗೋಡಿಯವರ ಚೊಚ್ಚಲ ಮಗ ಹುಚ್ಚೇಶ ಹಾಗೂ ಅಕ್ಕನ ಕುಟುಂಬ ವರ್ಗದವರು ಇರುತ್ತಿದ್ದರು. ನಡುದಾರಿಯಲ್ಲಿ ನಿಂತ ಕಾರನ್ನು ರಿಪೇರಿ ಮಾಡಿಕೊಂಡು ಅರಿಷಿಣಗೋಡಿಯವರು ತಾಳಿಕೋಟೆಗೆ ತಲುಪುತ್ತಿದ್ದಂತೆಯೇ ಅಗ್ನಿ ದುರಂತದ ಸುದ್ದಿ ಕಿವಿಗೆ ಅಪ್ಪಳಿಸಿತು. ಮನೆಯ ದೇವರ ಕೋಣೆಯಲ್ಲಿ ಪೂಜೆ ಮಾಡುವಾಗ ಸಂಗ್ರಹಿಸಿಟ್ಟಿದ್ದ ಹತ್ತಿ ಗುಂಪಿಗೆ ಆಕಸ್ಮಿಕವಾಗಿ ಹತ್ತಿಗೆ ಬೆಂಕಿ ಹತ್ತಿಕೊಂಡು ಮಗ ಹುಚ್ಚೇಶ ಅಗ್ನಿ ದುರಂತದಲ್ಲಿ ಸಾವನ್ನಪ್ಪಿದನು ಎಂಬ ಸುದ್ದಿ ತಂತಿ ಮುಖಾಂತರ ಗೊತ್ತಾಯಿತು. ಸುದ್ದಿ ತಿಳಿದು ಆಘಾತಗೊಂಡ ಅರಿಷಿಣಗೋಡಿಯವರು ತಾಯಿಯನ್ನು ಕರೆದುಕೊಂಡು ಕಮತಗಿಗೆ ಬಂದರು. ಚೊಚ್ಚಲ ಮಗ ಹುಚ್ಚೇಶ ಸುಟ್ಟು ಕರಕಲಾಗಿದ್ದ. ಅರಿಷಿಣಗೋಡಿಯವರ ಕಣ್ಣಿಗೆ ಸುಟ್ಟು ಕರಕಲಾದ ಶರೀರ ನೋಡಲಾಗಲಿಲ್ಲ. ಕೂಡಿದ ಜನ ಅವರಿಗೆ ಸಂತಾಪದ ನುಡಿಗಳನ್ನು ಹೇಳಿ ಸಮಾಧಾನಪಡಿಸಿದರು. ಹುಚ್ಚೇಶನೆಂದು ಹೆಸರಿಟ್ಟ ಮಗನ ಶವ ಸಂಸ್ಕಾರವು ಹುಚ್ಚೇಶ್ವರ ಮಠದ ಹತ್ತಿರವೇ ನಡೆಯಬೇಕೆಂದು ಸೇರಿದ ಜನ ಹಠ ಹಿಡಿದರು. ಅದಕ್ಕೆ ಸ್ವಾಮಿಗಳು ಒಪ್ಪಿದರು. ಮಠದ ಆವರಣದಲ್ಲಿ ಶವ ಸಂಸ್ಕಾರದ ವಿಧಿವಿಧಾನಗಳನ್ನು ಮುಗಿಸಿದರು. ಅಂದು ಇಡೀ ರಾತ್ರಿ ಹೆಂಡತಿ, ತಾಯಿಗೆ, ಅಕ್ಕ ಲಕ್ಷ್ಮೀಬಾಯಿಗೆ ಹಾಗೂ ಮಾವ ಗಿರಿಯಪ್ಪನಿಗೆ ಸಮಾಧಾನ ಹೇಳಿದರು. ಮರುದಿನ ಎದ್ದವರೆ ತಾಳಿಕೋಟೆಗೆ ಪ್ರಯಾಣ ಬೆಳೆಸಿದರು ಅಂದು 'ಬಸ್ ಕಂಡಕ್ಟರ್' ನಾಟಕ ಆಡುವುದಾಗಿ ಪ್ರಚಾರ ಮಾಡಿಯಾಗಿತ್ತು. ದುಃಖದ ಮಡುವಿನಲ್ಲಿದ್ದ ಅರಿಷಿಣಗೋಡಿಯವರು ಜಗದೀಶನ ತಂದೆಯ ಪಾತ್ರವನ್ನು ಮೈತುಂಬಿಕೊಂಡು ಮಾಡಿ ಪ್ರೇಕ್ಷಕರ ಆದರಣೆಗೆ ಪಾತ್ರರಾದರು. ಎಂತಹ ಕಠಿಣ ಪ್ರಸಂಗಗಳು ಬಂದರೂ ಕಂಪನಿಯ ಪ್ರಯೋಗಗಳನ್ನು ನಿಲ್ಲಿಸದೇ ಮುನ್ನಡೆಸಿಕೊಂಡು ಹೋಗುತ್ತಿದ್ದರು. ಅವರ ಸಮಯೋಚಿತ ನಿರ್ಣಯಗಳು ಕಂಪನಿಯ ಭವಿಷ್ಯದ ಮೇಲೆ ಪರಿಣಾಮವನ್ನು ಬೀರುತ್ತಿದ್ದವು.

ಕಂಪನಿ ಗುಲಬರ್ಗಾದಲ್ಲಿ ಕ್ಯಾಂಪ್ ಮಾಡಿತ್ತು. ಅದೇ ಗುಲಬರ್ಗಾದಲ್ಲಿ 'ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ' ಸುಳ್ಳ ಕಂಪನಿಯು ಸ್ಪರ್ಧೆಗಿಳಿಯಿತು. ಸ್ಪರ್ಧೆಗಿಳಿದ ಸುಳ್ಳದ ದೇಸಾಯಿಯವರೆಗೆ 'ಇಲ್ಲಿಗೆ ಬಂತೋ ಸಂಗಯ್ಯಾ' 'ಬಸ್ ಕಂಡಕ್ಟರ್' ನಾಟಕಗಳ ಮುಖಾಂತರ ತಕ್ಕ ಉತ್ತರ ಕೊಟ್ಟು ಗುಲಬರ್ಗಾ ಕ್ಯಾಂಪನಲ್ಲಿ ಜನಾನುರಾಗಿಯಾಗಿ ಮೆರೆಯಿತು. ಸ್ಪರ್ಧೆಗಿಳಿದ ಶ್ರೀಶೈಲ ಮಲ್ಲಿಕಾರ್ಜುನ ಕಂಪನಿ ಸಾಕಷ್ಟು ನಷ್ಟವನ್ನು ಅನುಭವಿಸಿ ಗುಲಬರ್ಗಾದಿಂದ ಕಾಲುಕಿತ್ತಿತು.

ಕಂಪನಿ ಕ್ಯಾಂಪ ಮಾಡಿದ ಊರುಗಳಲ್ಲಿ ಸಣ್ಣ ಪುಟ್ಟ ತೊಂದರೆಗಳು ಬರುತ್ತಿದ್ದವು. ಆದರೆ ಅಂತಹ ತೊಂದರೆಗಳನ್ನು ದೊಡ್ಡದು ಮಾಡದೆ ಚಾಣಾಕ್ಷತನದಿಂದ ಪರಿಹರಿಸಿಕೊಳ್ಳುವ ಕಲೆಯನ್ನು ಬಿ.ಆರ್. ಅರಿಷಿಣಗೋಡಿಯವರು ಕರಗತ ಮಾಡಿಕೊಂಡಿದ್ದರು. ಸ್ವಭಾವತ ಮೃದು ಸ್ವಭಾವದ ಅರಿಷಿಣಗೋಡಿಯವರಿಗೆ ತಮ್ಮ ವೃತ್ತಿ ಕಂಪನಿ ಬದುಕಿನಲ್ಲಿ ಅಂತಹ ಗಂಭೀರವಾದ ಅಡತಡೆಗಳು ಬರಲಿಲ್ಲ. ಇದು ಕಂಪನಿಯನ್ನು ಅಖಂಡ ೪೩ ವರ್ಷಗಳವರೆಗೆ ನಡೆಸಿಕೊಂಡು ಹೋಗಲು ಸಹಾಯವಾಯಿತು.

ಅತಿಥಿ ನಟರು

ವೃತ್ತಿರಂಗಭೂಮಿಯಲ್ಲಿ ನಾಟಕ, ಕಂಪನಿಯ ಹೆಸರು, ನಟ-ನಟಿಯರ ಹೆಸರಿನ ಮೇಲೆ ನಡೆದರೂ ಒಂದೊಂದು ಸಾರಿ ಕಂಪನಿ ಜನಾಕರ್ಷಣೆಯನ್ನು ಕಳೆದುಕೊಂಡು ಆರ್ಥಿಕವಾಗಿ ಸಂಕಷ್ಟಕ್ಕೆ ಒಳಗಾಗುವದು ಸಹಜ. ಹೀಗಾಗಿ ವೃತ್ತಿರಂಗಭೂಮಿಯಲ್ಲಿ ಕಂಪನಿಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾದಾಗ, ರಂಗಾಸಕ್ತರ ಆಸಕ್ತಿಯನ್ನು ಕಂಪನಿ ಕಳೆದುಕೊಂಡಾಗ ಜನಪ್ರಿಯ ಚಲನಚಿತ್ರದ ನಟ-ನಟಿಯರನ್ನು ಕರೆಸಿ ನಾಟಕದಲ್ಲಿ ಅವರಿಗೆ ಪಾತ್ರಗಳನ್ನು ಕೊಟ್ಟು ಪ್ರಚಾರ ಮಾಡಿ ಕಂಪನಿಗಳು ಪ್ರೇಕ್ಷಕರನ್ನು ಸೆಳೆಯಲು ಪ್ರಯತ್ನಿಸುತ್ತಿದ್ದದ್ದು ಸರ್ವೇಸಾಮಾನ್ಯ. ಬಿ.ಆರ್. ಅರಿಷಿಣಗೋಡಿಯವರ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿ ಇದಕ್ಕೆ ಹೊರತಾಗಿದ್ದಿಲ್ಲ.

ಕಂಪನಿ, ಆರ್ಥಿಕವಾಗಿ ನಷ್ಟವನ್ನು ಅನುಭವಿಸಿದಾಗ ನಷ್ಟವನ್ನು ತುಂಬಿಕೊಳ್ಳಲು ಮತ್ತು ಕಂಪನಿಯ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ಬಿ.ಆರ್. ಅರಿಷಿಣಗೋಡಿಯವರು ಚಲನಚಿತ್ರ ರಂಗದ ಕಲಾವಿದರನ್ನು ಕರೆಯಿಸುವ ರೂಢಿಯನ್ನು ಇಟ್ಟುಕೊಂಡಿದ್ದರು. 'ಬಸ್ ಕಂಡಕ್ಟರ್' ನಾಟಕದಲ್ಲಿ ಖಾನಾವಳಿ ಚೆನ್ನಿಯ ಪಾತ್ರವನ್ನು ಮಾಡುವುದಕ್ಕಾಗಿ ಚಲನಚಿತ್ರ ರಂಗದ ನಟಿ ಉಮಾಶ್ರೀಯನ್ನು ಕರೆಯಿಸಿ ಆಕೆಗೆ ಚೆನ್ನಿಯ ಪಾತ್ರವನ್ನು ಕೊಟ್ಟು ಕಂಪನಿ ಸಾಕಷ್ಟು ಪ್ರೇಕ್ಷಕರನ್ನು ತನ್ನ ಕಡೆಗೆ ಸೆಳೆದುಕೊಂಡು ಕಂಪನಿ ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿದೆ. ಉಮಾಶ್ರೀ 'ಬಸ್ ಕಂಡಕ್ಟರ್' ನಾಟಕದಲ್ಲಿ ತನ್ನ ದ್ವಂದ್ವಾರ್ಥ ಮಾತುಗಳಿಂದ ಪ್ರೇಕ್ಷಕರನ್ನು ರಂಜಿಸಿ ಕಂಪನಿಯ ಜನಪ್ರಿಯತೆಯನ್ನು ಹೆಚ್ಚಿಸಿದ ಕಲಾವಿದೆ. ಪ್ರಾರಂಭದಲ್ಲಿ ಉಮಾಶ್ರೀಗೆ ೧೫೦೦ರಿಂದ ೨೦೦೦ ರೂ.ವರೆಗೆ ಒಂದು ದಿನಕ್ಕೆ ಸಂಬಳ ಕೊಡುತ್ತಿದ್ದರು. ೧೯೯೦ರ

ನಂತರ "ಒಂದು ದಿನಕ್ಕೆ ರೂ. ೫೦೦೦ದಿಂದ ೬೦೦೦ ರೂ.ಗಳವರೆಗೆ ಸಂಬಳ ಕೊಡುತ್ತಿದ್ದ" ಎಂದು ಬಿ.ಆರ್. ಅರಿಷಿಣಗೋಡಿಯವರು ಹೇಳುತ್ತಾರೆ.

ಅದೇ ರೀತಿಯ ದ್ವಂದ್ವಾರ್ಥದ ಮಾತುಗಳಿಂದ ಚಲನಚಿತ್ರರಂಗದಲ್ಲಿ ಹೆಸರು ಗಳಿಸಿದ ಧೀರೆಂದ್ರ ಗೋಪಾಲರನ್ನು ಈ ಅರಿಷಿಣಗೋಡಿಯವರ ಕಂಪನಿ ಕರೆಸಿ ಪಾತ್ರಗಳನ್ನು ಕೊಟ್ಟು ತನ್ನ ಜನಪ್ರಿಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ ತನ್ನ ಗಲ್ಲಾಪೆಟ್ಟಿಗೆಯನ್ನು ಕಂಪನಿ ತುಂಬಿಸಿಕೊಂಡಿದೆ. ಅರಿಷಿಣಗೋಡಿಯವರು ಪ್ರದರ್ಶನ ಮಾಡುತ್ತಿದ್ದ ನಾಟಕಗಳಲ್ಲಿ ಖಳನಾಯಕನ ಪಾತ್ರಗಳನ್ನು ಮಾಡಿ ಧೀರೆಂದ್ರ ಗೋಪಾಲರು ತಮಗೂ, ಕಂಪನಿಗೂ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ.

ಒಂದು ಕಾಲದಲ್ಲಿ ಚಲನಚಿತ್ರರಂಗದಲ್ಲಿ ಖಳನಾಯಕ ಪಾತ್ರಗಳಿಂದ ಅತ್ಯಂತ ಬೇಡಿಕೆಯ ನಟನಾಗಿದ್ದ ಸುಂದರಕೃಷ್ಣ ಅರಸರನ್ನು ಕರೆಯಿಸಿ ಬಿ.ಆರ್. ಅರಿಷಿಣಗೋಡಿಯರು ತಮ್ಮ ಕಂಪನಿಯ ನಾಟಕಗಳಲ್ಲಿ ಖಳನಾಯಕನ ಪಾತ್ರಗಳನ್ನು ಕೊಟ್ಟು ಜನಾಕರ್ಷಣೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಯಾವಾಗ ಯಾವಾಗ ಕಂಪನಿಯ ನಾಟಕಗಳು ರಂಗಾಸಕ್ತರ ಆಕರ್ಷಣೆಯನ್ನು ಕಳೆದುಕೊಂಡಿವೆ ಆಗ ಚಲನಚಿತ್ರರಂಗದ ನಟರನ್ನು ಅತಿಥಿ ನಟರನ್ನಾಗಿ ಕರೆಸಿ ಕಂಪನಿ ತನ್ನ ಆಕರ್ಷಣೆಯನ್ನು ಪ್ರೇಕ್ಷಕರಲ್ಲಿ ಹಸಿ-ಹಸಿಯಾಗಿ ಇಟ್ಟುಕೊಳ್ಳುತ್ತಾ ಬಂದಿದೆ. ಸುಂದರ ಕೃಷ್ಣ ಅರಸರು ಖಳನಾಯಕನ ಪಾತ್ರದಲ್ಲಿ ಅಭಿನಯಿಸುತ್ತಾರೆಂದು ಪ್ರಚಾರವಾದರೆ ಸಾಕು ಪ್ರೇಕ್ಷಕರು ತಂಡೋಪ-ತಂಡವಾಗಿ ನಾಟಕ ನೋಡಲು ರಂಗಮಂದಿರಕ್ಕೆ ಬರುತ್ತಿದ್ದರು. ಎಷ್ಟೋ ಸಾರಿ ಪ್ರೇಕ್ಷಕರನ್ನು ನಿಯಂತ್ರಿಸಲು ಪೊಲೀಸರನ್ನು ಕರೆಯಿಸಬೇಕಾಗುತ್ತಿತ್ತು.

ಎನ್.ಎಸ್. ಜೋಶಿಯವರು ಬರೆದ 'ಸಿಂಧೂರ ಲಕ್ಷ್ಮಣ' ನಾಟಕಕ್ಕೆ ಅನೇಕ ಸಾರಿ 'ಲಕ್ಷ್ಮಣ'ನ ಪಾತ್ರವನ್ನು ಮಾಡಲು ಚಲನಚಿತ್ರರಂಗದ ಸುಧೀರ ಅವರನ್ನು ಅತಿಥಿ ನಟರನ್ನಾಗಿ ಕರೆಸಿದ್ದಾರೆ. ಅಜಾನುಬಾಹು, ಸುಂದರವಾದ ಕಂಠ, ಸಂದರ್ಭಕ್ಕೆ ತಕ್ಕಂತೆ ಆಂಗಿಕ ಅಭಿನಯದಿಂದ 'ಸಿಂಧೂರ ಲಕ್ಷ್ಮಣ' ನಾಟಕದ ಲಕ್ಷ್ಮಣನ ಪಾತ್ರಕ್ಕೆ ಜೀವಕಳೆ ತುಂಬಿ ಅಭಿನಯಿಸುತ್ತಿದ್ದ ಸುಧೀರನ ಪಾತ್ರವನ್ನು ನೋಡಲು ಜನರು ತಾ-ಮುಂದು, ನಾ-ಮುಂದು ಎಂದು ರಂಗಮಂದಿರಕ್ಕೆ ಬಂದು ಕಂಪನಿಯ ಗಲ್ಲಾಪೆಟ್ಟಿಗೆಯನ್ನು ತುಂಬಿಸಿ ಹೋಗುತ್ತಿದ್ದರು. ಬಿ.ವ್ಹಿ. ಈಶರ 'ಗೌಡ್ರ ಗದ್ಲ' ನಾಟಕವನ್ನು ಪ್ರದರ್ಶನ ಮಾಡುತ್ತಿದ್ದಾಗಲೂ ಒಮ್ಮೊಮ್ಮೆ ಕಂಪನಿ ಆರ್ಥಿಕವಾಗಿ ಸಂಕಷ್ಟಕ್ಕೆ ಈಡಾದಾಗ ಅದೇ ಚಲನಚಿತ್ರರಂಗದ ಸುಧೀರ ಅವರನ್ನು ಗೌಡನ ಪಾತ್ರವನ್ನು ಮಾಡಲು ಕರೆಸುತ್ತಿದ್ದರು. ಖಳನಾಯಕ ಗೌಡನ ಪಾತ್ರವನ್ನು ಮಾಡುವಾಗಲಂತೂ ಪ್ರೇಕ್ಷಕರ ಮೈನವಿರೇಳುವಂತೆ ನಟಿಸಿ ಕಂಪನಿಗೂ ತನಗೂ ಕೀರ್ತಿಯನ್ನು ತಂದುಕೊಂಡ ಸುಧೀರ ರಂಗಭೂಮಿ ಮತ್ತು ಚಲನಚಿತ್ರರಂಗ ಎರಡರಲ್ಲೂ ಜನಪ್ರಿಯತೆ ಗಳಿಸಿದ ಕಲಾವಿದ.

ಹೀಗೆ ಬಿ.ಆರ್. ಅರಿಷಿಣಗೋಡಿಯವರು ಚಲನಚಿತ್ರ ರಂಗದ ನಟ-ನಟಿಯರನ್ನು ಕಂಪನಿಗೆ ಕರೆಸಿ ಪಾತ್ರಗಳನ್ನು ಕೊಟ್ಟು ವೃತ್ತಿರಂಗಭೂಮಿಯ ಆಕರ್ಷಣೆಯನ್ನು ಹೆಚ್ಚಿಸಲು ಪ್ರಯತ್ನಿಸಿದ್ದಾರೆ.

ಆಡಳಿತ

ನಾಟಕ ಕಂಪನಿ ಎನ್ನುವುದು ಒಂದು ವ್ಯವಹಾರಿಕ ಸಂಸ್ಥೆ. ಆದರೆ ಕರ್ನಾಟಕದಲ್ಲಿ ವೃತ್ತಿ ಮಂಡಳಿಗಳು ವೃತ್ತಿಯ ಕೌಶಲ್ಯಗಳನ್ನು ಅಳವಡಿಸಿಕೊಂಡು ಒಂದು ಉದ್ದಿಮೆಯಾಗಿ ಬೆಳೆದು ಬರಲಿಲ್ಲ ಎಂಬುದು ವಿಷಾದನೀಯ. ಬಹುತೇಕ ಕಂಪನಿ ಮಾಲಿಕರು ಕಂಪನಿ ಕಟ್ಟುವದರ ಕಡೆ ಉತ್ಸಾಹ ತೋರಿದರೆ ವಿನಃ ಅದನ್ನು ನಿಭಾಯಿಸಿಕೊಂಡು ಹೋಗುವ ವ್ಯವಸ್ಥೆಯ ಕಡೆ ಲಕ್ಷವಹಿಸಲಿಲ್ಲ. ಕರ್ನಾಟಕದ ವೃತ್ತಿರಂಗಭೂಮಿಯ ಇತಿಹಾಸದಲ್ಲಿ ಕೆಲವೇ ಕೆಲವೊಂದಿಷ್ಟು ಮಾಲಿಕರು ಕಂಪನಿಯಲ್ಲಿ ವ್ಯವಸ್ಥಾಪಕರನ್ನು ನೇಮಿಸಿಕೊಂಡು ವ್ಯವಸ್ಥಿತ ರೀತಿಯಲ್ಲಿ ಕಂಪನಿಯನ್ನು ನಡೆಸಿಕೊಂಡು ಹೋಗಿದ್ದನ್ನು ಕಾಣುತ್ತೇವೆ. ಶಿವಮೂರ್ತಿಸ್ವಾಮಿ ಕಣಬುರ್ಗಿಮಠ, ಶಿರಹಟ್ಟಿ ವೆಂಕೋಬರಾವ್, ಗುಬ್ಬಿ ವೀರಣ್ಣ, ಕೆ.ಬಿ.ಆರ್. ಡ್ರಾಮಾ ಕಂಪನಿಯ ಚಿಂದೋಡಿ ಲೀಲಾ, ಏಣಗಿ ಬಾಳಪ್ಪ, ಗಂಗಾಧರ ಶಾಸ್ತ್ರಿಗಳು, ಎನ್. ಬಸವರಾಜರಂತಹ ಕೆಲವೇ ಕೆಲವು ಕಂಪನಿ ಮಾಲಿಕರು ಸಮರ್ಥವಾದ ವ್ಯವಸ್ಥಾಪಕರನ್ನು ನೇಮಿಸಿಕೊಂಡು ಕಂಪನಿ ಮ್ಯಾನೇಜಮೆಂಟ್ ಕಡೆಗೆ ಒತ್ತು ಕೊಟ್ಟಿರುವುದನ್ನು ಕಾಣುತ್ತೇವೆ. ಈ ಕಾರಣದಿಂದಲೇ ಕೆಲವು ಕಂಪನಿಗಳು ಅನೇಕ ವರ್ಷಗಳವರೆಗೆ ಬದುಕಿ ಬಾಳಲಿಕ್ಕೆ ಸಾಧ್ಯವಾಯಿತು. ಮ್ಯಾನೇಜಮೆಂಟ್ ಕಡೆಗೆ ಒತ್ತು ಕೊಡದೇ ಇದ್ದುದರಿಂದ ಬಹಳಷ್ಟು ಕಂಪನಿ ಮಾಲಿಕರು ನೆಲಕಚ್ಚಿರುವುದನ್ನು ಕಾಣುತ್ತೇವೆ. ಒಂದೊಂದು ಕಂಪನಿಗಳು ವ್ಯವಸ್ಥಾಪಕರನ್ನು ನೇಮಿಸಿಕೊಂಡಿದ್ದರೂ ವ್ಯವಸ್ಥಾಪಕರು ಹೇಳಿದ ಸಲಹೆ-ಸೂಚನೆಗಳನ್ನು ಮಾಲಿಕರು ಗಂಭೀರವಾಗಿ ಪರಿಗಣಿಸದೇ ಅಸಡ್ಡೆ ತೋರಿದ ಉದಾಹರಣೆಗಳು ಸಾಕಷ್ಟಿವೆ. ಅನೇಕ ಕಂಪನಿ ಮಾಲಿಕರಲ್ಲಿ ದೂರದೃಷ್ಟಿಯ ಕೊರತೆ ಇರುವುದನ್ನು ಕಾಣುತ್ತೇವೆ. ಮ್ಯಾನೇಜಮೆಂಟ್ ಕಡೆಗೆ ಒತ್ತು ಕೊಡದೆ ಇದ್ದುದರಿಂದ ಅನೇಕ ಕಂಪನಿಗಳು ಹುಟ್ಟಿದ ಹತ್ತಾರು ವರ್ಷಗಳಲ್ಲಿ ನೆಲಕಚ್ಚಿ ಕಣ್ಮರೆಯಾಗಿ ಹೋಗಿರುವುದನ್ನು ಕಾಣುತ್ತೇವೆ.

ವೃತ್ತಿಯ ಕೌಶಲ್ಯಗಳನ್ನು ಅರ್ಥ ಮಾಡಿಕೊಂಡ ಬಿ.ಆರ್. ಅರಿಷಿಣಗೋಡಿಯವರು ಕಂಪನಿಯಲ್ಲಿ ಸಮರ್ಥ ಮ್ಯಾನೇಜರನನ್ನು ನೇಮಿಸಿಕೊಂಡಿದ್ದರು. "ನಮ್ಮ ವೃತ್ತಿರಂಗಭೂಮಿಯ ಕಂಪನಿಗಳಲ್ಲಿ ದಕ್ಷ ಮ್ಯಾನೇಜರ ಇರದೇ ಇದ್ದದ್ದು ಅನೇಕ ಕಂಪನಿಗಳು ನೆಲಕಚ್ಚಲಿಕ್ಕೆ ಪ್ರಮುಖ ಕಾರಣಗಳಲ್ಲೊಂದು" ಎಂದು ಬಿ.ಆರ್. ಅರಿಷಿಣಗೋಡಿಯವರೇ ಹೇಳುತ್ತಾರೆ. ಅವರು ಹೇಳುವ ಮಾತು ಸತ್ಯವೆನಿಸುತ್ತದೆ. ಕಂಪನಿಗೆ ಒಬ್ಬ ನುರಿತ ವ್ಯವಹಾರ ಚತುರ ಮ್ಯಾನೇಜರ ಅವಶ್ಯಕತೆ ಇದೆ ಎಂಬುದನ್ನು ಬಹಳಷ್ಟು ಮಾಲಿಕರು ತಿಳಿದುಕೊಳ್ಳದೇ ಹೋದರು. ಆದರೆ ಬಿ.ಆರ್. ಅರಿಷಿಣಗೋಡಿಯವರು ವ್ಯವಹಾರ ಚತುರರಾಗಿದ್ದರಷ್ಟೇ ಅಲ್ಲ, ದೂರದೃಷ್ಟಿಯುಳ್ಳವರೂ ಆಗಿದ್ದರು. ಆದುದರಿಂದಲೇ ಬಿ.ಆರ್. ಅರಿಷಿಣಗೋಡಿಯವರು ತಮ್ಮ ನಾಲ್ಕು ಕಂಪನಿಗಳಲ್ಲಿ ಸಮರ್ಥ ವ್ಯವಸ್ಥಾಪಕರನ್ನು ನೇಮಿಸಿಕೊಂಡಿದ್ದರಿಂದ ಕಂಪನಿಯನ್ನು ಮುನ್ನಡೆಸಿಕೊಂಡು ಹೋಗಲು ಸಾಧ್ಯವಾಯಿತು. ಅವರು ಕಂಪನಿಯಲ್ಲಿ ನಡೆಯುವ ಅತೀ ಸೂಕ್ಷ್ಮ

ಅಧ್ಯಾಯ ೬

ಸಮಾರೋಪ

ಇರಬೇಕೆಂಬ ಒತ್ತಾಯವಿರಲಿಲ್ಲ. ರವಿವಾರ, ಸಂತೆ, ಜಾತ್ರಾ ದಿನಗಳಲ್ಲಿ ಎರಡೆರಡು ಪ್ರಯೋಗಗಳು ನಡೆಯುತ್ತಿದ್ದಾಗ ಕಲಾವಿದರಿಗೆ ವಿಶೇಷ ಭತ್ಯೆ ಕೊಡಲಾಗುತ್ತಿತ್ತು. ನಾಟಕ ಸತತ ೧೦೧ನೆಯ, ೧೫೦ನೆಯ, ೨೦೧ನೆಯ, ೨೫೦ನೆಯ ಪ್ರಯೋಗಗಳನ್ನು ಮಾಡಿದಾಗ ಕಂಪನಿಯ ಕಲಾವಿದರಿಗೆ, ರಂಗಕರ್ಮಿಗಳಿಗೆ ಉಡುಗೊರೆ, ಕಾಣಿಕೆಗಳನ್ನು ಕೊಟ್ಟು ಬಿ.ಆರ್. ಅರಿಷಿಣಗೋಡಿಯವರು ಆನಂದಿಸುತ್ತಿದ್ದರು.

ಕಂಪನಿಯಲ್ಲಿ ೨ ವರ್ಷಕ್ಕಿಂತ ಹೆಚ್ಚು ಸೇವೆ ಮಾಡಿದ ನಟ-ನಟಿಯರು, ರಂಗಕರ್ಮಿಗಳಿಗೆ ಒಂದೊಂದು ಕ್ಯಾಂಪಿನಲ್ಲಿ ಒಬ್ಬರಿಗೆ ಒಂದೊಂದು ಬೆನ್‌ಫಿಟ್ ಶೋ ಕೊಟ್ಟು ಕಂಪನಿಯ ಕಲಾವಿದರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಕಂಪನಿ ಪ್ರಯತ್ನಿಸುತ್ತಿತ್ತು. ಕಲಾವಿದರು ಪ್ರತಿ ೨ ವರ್ಷಕ್ಕೊಮ್ಮೆ ಅಂತಹ ಬೆನ್‌ಫಿಟ್ ಶೋದ ಅನುಕೂಲವನ್ನು ತೆಗೆದುಕೊಳ್ಳುತ್ತಿದ್ದರು. ಕಲಾವಿದರಿಗೆ ರಜೆಯ ಸೌಲಭ್ಯವನ್ನು ಕಂಪನಿ ಒದಗಿಸಿತ್ತು. ಆದರೆ ರಜೆ ಮಂಜೂರಿ ಮಾಡಿಕೊಳ್ಳವಾಗ ಕಲಾವಿದರು ಸಕಾರಣ ಕೊಡಬೇಕಾಗುತ್ತಿತ್ತು. ಸಕಾರಣವಿಲ್ಲದೆ ಹೇಳದೆ ಕೇಳದೆ ಹೋದ ಕಲಾವಿದರ ಸಂಬಳವನ್ನು ಕಡಿತಗೊಳಿಸಲಾಗುತ್ತಿತ್ತು. ಇದು ಕಂಪನಿಯ ಕಲಾವಿದರ ಮೇಲೆ ಹಿಡಿತ ಸಾಧಿಸಲು ಅನುಕೂಲವಾಗುತ್ತಿತ್ತು. ಅಲ್ಲದೆ ಕಲಾವಿದರಲ್ಲಿ ಸೇವಾ ನಿಷ್ಠೆಯನ್ನು ಬೆಳೆಸಲು ಇದು ಸಹಾಯವಾಗುತ್ತಿತ್ತು. ಕ್ಯಾಂಪ್ ಬದಲಾಯಿಸುವಾಗ ಕಲಾವಿದರಿಗೆ ೨ ದಿನ ರಜೆ ಹಾಗೂ ಮುಂಗಡ ಸಂಬಳ ಕೊಡುವ ಪದ್ಧತಿಯನ್ನು ಕಂಪನಿ ಪ್ರಾರಂಭದಿಂದಲೂ ಇಟ್ಟುಕೊಂಡಿತ್ತು. ಕಲಾವಿದರು ಕ್ಯಾಂಪ್ ಮಾಡಿದ ಊರಲ್ಲಿ ಬೇರೆ ಬೇರೆ ಅಂಗಡಿಗಳಲ್ಲಿ ಉದ್ರಿ ಮಾಡಿದ್ದರೆ, ಆ ಊರಿನಲ್ಲಿ ಪರಿಚಿತರಾದವರ ಕಡೆ ಇಸಿದುಕೊಂಡ ಕೈಗಡವನ್ನು ಕೊಡಲಿಕ್ಕೆ ಮುಂಗಡ ಸಂಬಳ ಅನುಕೂಲವಾಗುತ್ತಿತ್ತು. ಇಂತಹ ಕಂಪನಿಯ ಕಲಾವಿದರು ಹಾಕಿಕೊಂಡು ಹೋದರು ಎಂದು ಕಂಪನಿಯ ಹೆಸರನ್ನು ಕೆಡಿಸಿಕೊಳ್ಳಲು ಬಿ.ಆರ್. ಅರಿಷಿಣಗೋಡಿಯವರು ತಯಾರಿರಲಿಲ್ಲ. ನಾಟಕಗಳ ಪ್ರಚಾರಕ್ಕಾಗಿ ಪ್ರತಿ ಕಂಪನಿಯಲ್ಲಿ ಒಂದೊಂದು ಆಟೋರಿಕ್ಷಾ ಒಂದೊಂದು ಟಾಂಗಾ ಹಾಗೂ ತಮಗಾಗಲೀ, ಕಂಪನಿ ಉಪಯೋಗಕ್ಕಾಗಲೀ ಒಂದು ಅಂಬಾಸಡರ್ ಕಾರು ಇಟ್ಟುಕೊಂಡಿದ್ದರು. ಕ್ಯಾಂಪ್ ಮಾಡಿದ ಊರುಗಳಲ್ಲಿಯ ಜನರ ಜೊತೆ ಮಧುರ ಬಾಂಧವ್ಯವನ್ನು ಇಟ್ಟುಕೊಂಡು ಸಾರ್ವಜನಿಕ ಬದುಕಿನೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡಿದ್ದರು.

ಕಂಪನಿಯು ಯಾವುದೇ ತೊಂದರೆಗೆ ಸಿಕ್ಕು ಬಂದು ಮಾಡಿದ ಉದಾಹರಣೆಗಳಿಲ್ಲ. ಈ ರೀತಿ ಕಂಪನಿ ತನ್ನ ಸಾವಿರಾರು ಪ್ರಯೋಗಗಳನ್ನು ನಿರಂತರ ಮುನ್ನಡೆಸಿಕೊಂಡು ಹೋಗಲು ಸಾಧ್ಯವಾದುದರ ಗುಟ್ಟು ಕಂಪನಿಯ ಸಮರ್ಥ ಮ್ಯಾನೇಜರಗಳು ಅಂದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ. ಕಂಪನಿ ಪ್ರಾರಂಭದಿಂದಲೂ ಕಾಲ-ಕಾಲಕ್ಕೆ ಸಮರ್ಥ ವ್ಯವಸ್ಥಾಪಕರನ್ನು ನೇಮಿಸಿಕೊಂಡಿದೆ. ಬಿ.ಆರ್. ಅರಿಷಿಣಗೋಡಿಯವರ ಕಂಪನಿಯ ಮ್ಯಾನೇಜರರಾದರೂ ಚಾಣಾಕ್ಷ ಮತ್ತು ಸೇವಾ ಮನೋಭಾವನೆಯನ್ನು ಬೆಳೆಸಿಕೊಂಡವರಾಗಿದ್ದರು. ಕಂಪನಿಯ ಏಳ್ಗೆಗಾಗಿಯೇ ಹಗಲಿರುಳು ದುಡಿವ ವ್ಯವಸ್ಥಾಪಕರನ್ನು ಹೊಂದಿದ್ದ ರಿಂದಲೇ ಕಂಪನಿ ಕರ್ನಾಟಕದಾದ್ಯಂತ ಜಯಭೇರಿ ಹೊಡೆಯಲು ಸಾಧ್ಯವಾಯಿತು.

ಕಂಪನಿಯ ವ್ಯವಸ್ಥಾಪಕರಾಗಿ ಬಸವರಾಜ ನ್ಯಾಮತಿ, ಕುಂಟೋಜಿ ಬಸಣ್ಣ, ಬಾಲರಾಜ ಬೆಂಗಳೂರು, ಬಿ.ಸಿ. ಕೊಪ್ಪ ವಿಜಾಪುರ, ಜಿ.ಎನ್. ಕುಲಕರ್ಣಿ ಹುಬ್ಬಳ್ಳಿ, ಆರ್.ಸಿ. ಗೊರ್ಜಿನಾಳ ಗದಗ, ಎಸ್.ಬಿ. ಹಳ್ಳದ, ಕರಿಂಸಾಬ್ ದೇವಗಿರಿ, ಟಿ. ಶಿವಣ್ಣ ತುಮಕೂರ, ರವೀಂದ್ರಕುಮಾರ ಹಾಸನ ಇವರೆಲ್ಲರ ಸೇವೆಯನ್ನು ಕಂಪನಿ ಬಳಸಿಕೊಂಡು ಕರ್ನಾಟಕ ವೃತ್ತಿರಂಗಭೂಮಿಯಲ್ಲಿ ಹೆಸರುವಾಸಿಯಾಗಲು ಸಾಧ್ಯವಾಯಿತು. ಕಂಪನಿಯಲ್ಲಿ 'ರಂಗಪಾರ್ಟಿ' ಎನಿಸಿಕೊಳ್ಳುವವನೊಬ್ಬ ವೇಷ ಭೂಷಣಗಳನ್ನು ಒಗೆದು ಹಾಕುವುದು, ಬಣ್ಣ ತಯಾರಿಸಿಕೊಡುವ ಮುಂತಾದ ಕೆಲಸಗಳನ್ನು ಮಾಡುತ್ತಿದ್ದನು. ಸ್ವತಃ ನಟ-ನಟಿಯರೇ ಕಂಪನಿಯಲ್ಲಿ ಬಣ್ಣ ಬಳೆದುಕೊಳ್ಳುತ್ತಿದ್ದರು. ಕಂಪನಿಯಲ್ಲಿ ಟಿಕೇಟ್ ಹರಿಯುವವ, ಬುಕಿಂಗ್ ಕ್ಲಾರ್ಕ, ಅಕೌಂಟೆಂಟ್ ಇವರೆಲ್ಲ ಇದ್ದರು. ಇಲೆಕ್ಟ್ರೀಷಿಯನನ್ನನೇ ಧ್ವನಿವರ್ಧಕ, ಬೆಳಕಿನ ವ್ಯವಸ್ಥೆ ಮಾಡುತ್ತಿದ್ದನು. ಗೇಟಕೀಪರ್ ಇಬ್ಬರು ಇರುತ್ತಿದ್ದರು. ಒಂದೊಂದು ಸಲ ನಾಲ್ಕು ಮಂದಿ ಗೇಟಕೀಪರ್‌ಗಳೂ ಇರುತ್ತಿದ್ದರು. ಪ್ರಚಾರದ ಹುಡುಗ, ಕಾರಿನ ಚಾಲಕ ಇವರು ಉಳಿದ ವೇಳೆಯಲ್ಲಿ ಸಣ್ಣ-ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದರು. ಕಂಪನಿಯಲ್ಲಿ ಹಾರ್ಮೋನಿಯಂ, ತಬಲಾ ಕ್ಯಾಷಿಯೋ, ಡ್ರಮ್ಸ್, ಬ್ಯಾಂಗೋ, ಟ್ಯಾಂಗೋ, ಕೊಳಲು, ಕ್ಲಾರಿಯೋನೆಟ್ ಇತ್ಯಾದಿ ಅವತ್ತಿನ ಕಾಲದಲ್ಲಿ ಚಲಾವಣೆಯಲ್ಲಿದ್ದ ಸಂಗೀತ ವಾದ್ಯಗಳನ್ನು ಬಳಸಲಾಗುತ್ತಿತ್ತು.

ನಟ

ಬಿ.ಆರ್. ಅರಿಷಿಣಗೋಡಿಯವರು ತಮ್ಮ ಕಂಪನಿಯ ನಾಟಕಗಳಲ್ಲಿ ನಾಯಕನಿಂದ ಸೇವಕನ ವರೆಗೆ ಎಲ್ಲಾ ಪಾತ್ರಗಳನ್ನು ಮಾಡಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ಲಂಚ ಸಾಮ್ರಾಜ್ಯ ನಾಟಕದಲ್ಲಿ ಶಿಲಾಧರ, ಖಳನಾಯಕ ರಮೇಶ, ಸಂಪತರಾವ್ ಪಾತ್ರಗಳನ್ನು ಮಾಡಿದ್ದಾರೆ. ಹೆಣ್ಣುಮಗಳು ನಾಟಕದಲ್ಲಿಯ ಗೂರನ ಪಾತ್ರವು ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಯಿತು. ಗೂರನ ಪಾತ್ರದಲ್ಲಿಯ ಬಿ.ಆರ್. ಅರಿಷಿಣಗೋಡಿಯವರನ್ನು ಪ್ರೇಕ್ಷಕರು ಇನ್ನೂ ಮೆಲುಕು ಹಾಕುತ್ತಾರೆ. ಅದೇ ಹೆಣ್ಣುಮಗಳು ನಾಟಕದಲ್ಲಿ ಕಾಮಾಕ್ಷಿಯ ತಂದೆಯಾದ ಸೋಮೇಶನ ಪಾತ್ರದಲ್ಲಿ ತೋರುವ ಅಭಿನಯ ಪ್ರೇಕ್ಷಕರಲ್ಲಿ ಸಂಚಲನವನ್ನು ಉಂಟುಮಾಡುತ್ತದೆ. ಬಸ್ ಕಂಡಕ್ಟರದಲ್ಲಿ ನಾಯಕ ಪ್ರದೀಪ, ತಂದೆ ರಂಗಣ್ಣ, ಖಾನಾವಳಿ ಗಿರಾಕಿ ರಾಜು ಕಂಡಕ್ಟರನಾಗಿ, ಖಾನಾವಳಿ ಮಾಲಿಕ ದೇವಣ್ಣನ ಪಾತ್ರಗಳನ್ನು ನಿರ್ವಹಿಸಿ ಪ್ರೇಕ್ಷಕರ ಮನಸ್ಸನ್ನು ಗೆದ್ದುಕೊಂಡಿದ್ದಾರೆ. ಗರೀಬಿ ಹಟಾವೋ ನಾಟಕದಲ್ಲಿ ಗುರುಬಸಪ್ಪ, ರಾಮು ಪಾತ್ರಗಳನ್ನು ಮಾಡಿದ್ದಾರೆ. ಸೈನಿಕನ ಸಹೋದರಿಯಲ್ಲಿ ಹಾಸ್ಯ ಪಾತ್ರದ ಸಂಜೀವ, ಲಿಂಗಣ್ಣ ಶೆಟ್ಟಿಯಾಗಿ, ಇಲ್ಲಿಗೆ ಬಂತೋ ಸಂಗಯ್ಯಾದಲ್ಲಿ ಆರ್.ಎಂ.ಪಿ. ಡಾಕ್ಟರನಾಗಿ, ಎಚ್.ಎನ್. ಹೂಗಾರರ 'ಕೊಂಡು ತಂದ ಗಂಡ' ನಾಟಕದಲ್ಲಿ ಹಾಸ್ಯ ಪಾತ್ರವಾದ ಮಾಣಿ ಪಾತ್ರದಲ್ಲಿ ಕಾಣಿಸಿಕೊಂಡು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದ್ದಾರೆ. ೧೯೬೦-೭೦ರ ದಶಕದಲ್ಲಿ ಸೈನಿಕನ ಸಹೋದರಿ ನಾಟಕದಲ್ಲಿಯ ಸಂಜೀವನ

ಪಾತ್ರದ ಬಿ.ಆರ್. ಅರಿಷಿಣಗೋಡಿಯವರನ್ನು ಬಹು ಸಂಖ್ಯಾತ ಪ್ರೇಕ್ಷಕರು ಮೆಚ್ಚಿಕೊಂಡಿದ್ದರು. ಕುರುಬರ ಸಂಜೀವನ ಪಾತ್ರದಲ್ಲಿ ಅರಿಷಿಣಗೋಡಿಯವರು ತೋರಿಸುತ್ತಿದ್ದ ಆಂಗಿಕ ಅಭಿನಯವು ಪ್ರೇಕ್ಷಕರನ್ನು ಸೆಳೆಯುವಂತಿತ್ತು. ಕಂಪನಿಯನ್ನು ಬಿಟ್ಟು ಹೋದ ಕಲಾವಿದರ ಎಲ್ಲಾ ಪಾತ್ರಗಳನ್ನು ನಿರ್ವಹಿಸುತ್ತಿದ್ದರಾದರೂ ಅರಿಷಿಣಗೋಡಿಯವರು ಹೆಚ್ಚಾಗಿ ತಂದೆಯ ಹಾಗೂ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ತಮ್ಮ ಸ್ವಂತ ಕಂಪನಿಯಲ್ಲಿ ತಾವು ರಚಿಸಿದ ನಾಟಕಗಳಲ್ಲಿ ಪಾತ್ರಗಳನ್ನು ಮಾಡುತ್ತಿದ್ದುದು ಬಿ.ಆರ್. ಅರಿಷಿಣಗೋಡಿಯವರ ವಿಶೇಷತೆ.

"ಹಾಸ್ಯ ಪಾತ್ರ ಮಾಡುವ ಪಾತ್ರಧಾರಿಗಳು ಎಷ್ಟರಮಟ್ಟಿಗೆ ಲೋಕಾನುಭವ ಪಡೆದಿರುತ್ತಾರೆ. ಅಷ್ಟರ ಮಟ್ಟಿಗೆ ತಮ್ಮ ನಟನಾ ಸಾಮರ್ಥ್ಯವನ್ನು ತೋರಿಸಲಿಕ್ಕೆ ಅವಕಾಶವಿರುತ್ತದೆ. ಪಾತ್ರಧಾರಿಯು ಪೌರಾಣಿಕ ನಾಟಕಗಳಲ್ಲಿ ಭಾವಾತೀಕರಣಕ್ಕೆ ಒಳಗಾದರೆ ನಡೆಯುತ್ತದೆ. ಸಾಮಾಜಿಕ ನಾಟಕಗಳಲ್ಲಿ ಪಾತ್ರಧಾರಿ ಭಾವಾತಿರೇಕಕ್ಕೆ ಒಳಗಾದರೆ ನಾಟಕ ಪ್ರೇಕ್ಷಕರ ಮುಂದೆ ಆಭಾಸವಾಗುತ್ತದೆ" ಎಂದು ಬಿ.ಆರ್. ಅರಿಷಿಣಗೋಡಿಯವರು ಹೇಳುವರು. ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸುವ ನಟನು ಸಮಾಜದ ರೀತಿ-ನೀತಿ, ಆಚಾರ, ವಿಚಾರ, ಸಂಸ್ಕೃತಿ, ಉಪ-ಸಂಸ್ಕೃತಿಗಳಲ್ಲಿದ್ದ ಪದ್ಧತಿಗಳನ್ನು ತಿಳಿದುಕೊಂಡವನಾಗಿದ್ದರೆ ನಾಟಕ ಪ್ರದರ್ಶನ ಪ್ರೇಕ್ಷಕರ ಮುಂದೆ ಆಭಾಸವಾಗುವದಿಲ್ಲ. ನಟನು ಸ್ಪಷ್ಟವಾಗಿ ಉಚ್ಚಾರ ಮಾಡಬೇಕು. ಧ್ವನಿ ಏರಿಳಿತದಲ್ಲಿ ಕೌಶಲ್ಯವನ್ನು ಹೊಂದಿದವನಾಗಿದ್ದರೆ ಎಂಥಾ ಕ್ಲಿಷ್ಟ ಭಾವನೆಗಳನ್ನು ಕೂಡ ಪರಿಣಾಮಕಾರಿಯಾಗಿ ಬಿಂಬಿಸಲು ಸಾಧ್ಯವಾಗುತ್ತದೆ. ಇಂತಹ ಗುಣ-ಸ್ವಭಾವಗಳನ್ನು ಕಲಾವಿದನು ಅದರಲ್ಲೂ ಹಾಸ್ಯ ಪಾತ್ರಧಾರಿಯು ಮೈಗೂಡಿಸಿಕೊಂಡಾಗ ಆ ಪಾತ್ರಕ್ಕೆ ಜೀವ ತುಂಬಲು ಸಾಧ್ಯವೆಂದು ಬಿ.ಆರ್. ಅರಿಷಿಣಗೋಡಿಯವರು ಹೇಳುವರು.

ನಿರ್ದೇಶಕ

ವೃತ್ತಿರಂಗಭೂಮಿಯಲ್ಲಿ ನಾಟಕಕಾರನೇ ನಿರ್ದೇಶಕ. ನಾಟಕ ಪ್ರದರ್ಶನಗೊಳ್ಳುವರೆಗೆ ಆತನದೇ ಜವಾಬ್ದಾರಿ. ಕಂಪನಿಯ ಎಲ್ಲಾ ಕಲಾವಿದರನ್ನು ಕೂಡಿಸಿಕೊಂಡು ಅವರ ಮುಂದೆ ನಾಟಕದ ಕಥೆಯನ್ನು ಓದುವದು, ಕಂಪನಿಯಲ್ಲಿದ್ದ ಕಲಾವಿದರಿಗೆ ಹೊಂದಿಕೆಯಾಗುವ ಪಾತ್ರಗಳನ್ನು ಹಂಚಿಕೊಡುವುದು, ಮಾತುಗಳನ್ನು ಕಂಠಪಾಠ ಮಾಡಿಸುವದು, ಕಲಾವಿದರಿಂದ ಮಾತುಗಳನ್ನು ಒಪ್ಪಿಸಿಕೊಂಡ ನಂತರ ಆ ಮಾತುಗಳನ್ನು ಉಚ್ಚರಿಸುವ (ಧ್ವನಿ-ಏರಳಿತ) ರೀತಿಯನ್ನು ತಿದ್ದುವುದು, ಇವೆಲ್ಲ ಅರಿಷಿಣಗೋಡಿಯವರ ನಿರ್ದೇಶನದಲ್ಲಿ ಮಹತ್ವದ ಘಟ್ಟಗಳಾಗಿದ್ದವು. ನಂತರ ಹಾವ-ಭಾವ, ಅಂಗಾಂಗಳ ಚಲನವಲನಗಳನ್ನು ಕಲಾವಿದನಿಗೆ ಹೇಳಿಕೊಡುತ್ತಿದ್ದರು. ಮಾತು, ಹಾಡು, ಅಭಿನಯಗಳ ಮುಖಾಂತರ ೮-೧೦ ದಿನಗಳವರೆಗೆ ತಾಲೀಮು ಮಾಡಿಸುತ್ತಿದ್ದರು. ಕಲಾವಿದರ ಅಭಿನಯದ ಕುಂದು-ಕೊರತೆಗಳನ್ನು ತಿದ್ದುತ್ತಾ ರಂಗ ಪರಿಕರ, ವೇಷ-ಭೂಷಣಗಳ ಬಗೆಗೆ ಅರಿಷಿಣಗೋಡಿಯವರು ತಾವೇ ಸಲಹೆ-ಸೂಚನೆಗಳನ್ನು ಕೊಡುತ್ತಿದ್ದರು.

ತಮ್ಮ ಮನಸ್ಸಿಗೆ ತೃಪ್ತಿಯಾಗುವವರೆಗೆ ತಾಲೀಮಿನ ಸಂದರ್ಭದಲ್ಲಿ ಕಲಾವಿದರನ್ನು ತಿದ್ದಿ-ತೀಡಿ ತಯಾರು ಮಾಡಿ ರಂಗ ಪ್ರದರ್ಶನ ಮಾಡುತ್ತಿದ್ದರು. ತಾವು ಬರೆದ ನಾಟಕದ ಆಶಯ ಪರಿಣಾಮಕಾರಿಯಾಗಿ ಪ್ರೇಕ್ಷಕರ ಮನಸ್ಸನ್ನು ತಟ್ಟುವಂತೆ ನಿರ್ದೇಶನ ಮಾಡುತ್ತಿದ್ದರು.

ಬಿ.ಆರ್. ಅರಿಷಿಣಗೋಡಿಯವರು ತಮ್ಮ ಕಂಪನಿಯಲ್ಲಿ ಪ್ರದರ್ಶಿಸುತ್ತಿದ್ದ ತಮ್ಮ ಸ್ವಂತ ನಾಟಕಗಳಿಗೆ ತಾವು ನಿರ್ದೇಶನ ಮಾಡುತ್ತಿದ್ದರು. ಬೇರೆ ನಾಟಕಕಾರರು ರಚಿಸಿದ ನಾಟಕಗಳನ್ನು ತಮ್ಮ ಕಂಪನಿಯಲ್ಲಿ ಪ್ರದರ್ಶಿಸುವಾಗ ನಾಟಕವನ್ನು ರಚಿಸಿದ ನಾಟಕಕಾರಿಂದ ನಿರ್ದೇಶನ ಕೊಡಿಸುತ್ತಿದ್ದದು ಅರಿಷಿಣಗೋಡಿಯವರ ವೈಶಿಷ್ಟ್ಯಗಳಲ್ಲೊಂದು. ಕಂಪನಿ ಗುಲಬರ್ಗಾ ಕ್ಯಾಂಪನಲ್ಲಿದ್ದಾಗ ಎಸ್.ಎಂ. ಖೇಡಗಿಯವರ ರೀತಿ ತಪ್ಪಿದರೂ ನೀತಿ ಬಿಟ್ಟಿಲ್ಲ, ನಾಟಕ ಪ್ರದರ್ಶನ ಮಾಡಲು ಬಿ.ಆರ್. ಅರಿಷಿಣಗೋಡಿಯವರು ನಿರ್ಧರಿಸಿದರು. ಆದರೆ ನಾಟಕದ ತಾಲೀಮಿನ ವೇಳೆಯಲ್ಲಿ ಕಂಪನಿ ಕಲಾವಿದರಿಗೆ ನಿರ್ದೇಶನ ಮಾಡಲು ನಾಟಕವನ್ನು ರಚಿಸಿದ ಖೇಡಗಿಯವರನ್ನೇ ಕಂಪನಿಗೆ ಕರೆಸಿ ನಿರ್ದೇಶನ ಕೊಡಿಸಿದರು. ೧೯೮೦ರಲ್ಲಿ ಬಾಗಲಕೋಟೆಯಲ್ಲಿ ಕಂಪನಿ ಕ್ಯಾಂಪ್ ಮಾಡಿತ್ತು. ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತರಾದ ಆದ ಎಚ್.ಎನ್. ಹೂಗಾರರ 'ಗೆದ್ದವರು ಯಾರು' ನಾಟಕದ ತಾಲೀಮಿನಲ್ಲಿ ನಿರ್ದೇಶನ ಮಾಡಲು ಸ್ವತಃ ನಾಟಕಕಾರ ಹೂಗಾರರನ್ನೇ ಕರೆಸಿದ್ದರು. ಇದು ಬಿ.ಆರ್. ಅರಿಷಿಣಗೋಡಿಯಲ್ಲಿದ್ದ ಸಮಕಾಲೀನ ನಾಟಕಕಾರರ ಬಗ್ಗೆ, ನಿರ್ದೇಶನದ ಬಗ್ಗೆ ಇದ್ದ ಕಾಳಜಿಯನ್ನು ತೋರಿಸುತ್ತದೆ.

ಬಿ.ಆರ್. ಅರಿಷಿಣಗೋಡಿಯವರು ಹಿರಿಯರು ಹೇಳಿದ ಮಾರ್ಮಿಕ ತತ್ವಗಳನ್ನು ತಮ್ಮ ಕಂಪನಿಯಲ್ಲಿ ಹಾಗೂ ನಾಟಕಗಳಲ್ಲಿ ಅಳವಡಿಸಿಕೊಂಡು ಕಲಾವಿದರು ಹದ್ದು ಮೀರದಂತೆ ಎಚ್ಚರ ವಹಿಸುತ್ತಿದ್ದರು. ಬಿ.ಆರ್. ಅರಿಷಿಣಗೋಡಿಯವರ ನಿರ್ದೇಶನದಲ್ಲಿ ಯಾವುದೇ ನಾಟಕವಿದ್ದರೂ ರಾಷ್ಟ್ರಾಭಿವೃದ್ಧಿಯ ಕಳಕಳಿಯ ಕಡೆಗೆ ಒತ್ತುಕೊಟ್ಟಿರುವುದನ್ನು ಕಾಣುತ್ತೇವೆ. ನಾಟಕ ಯಾವುದೇ ಇದ್ರೂ ಅದರಲ್ಲಿ ಅಸ್ಪೃಷ್ಯತೆ, ಮದ್ಯಪಾನ ವಿರೋಧ, ಸ್ವದೇಶಿ ವಸ್ತುಗಳ ಬಳಕೆ, ವೇಶ್ಯಾ ಸಮಸ್ಯೆ, ಸ್ತ್ರೀಸ್ವಾತಂತ್ರ್ಯ, ಅನಕ್ಷರತೆ, ಭ್ರಷ್ಟಾಚಾರ, ಲಂಚ, ಕಾಳಸಂತೆಕೋರರ ವಿಷಯಗಳು ಸಾಮಾನ್ಯ ಜನರ ಮನಮುಟ್ಟುವಂತೆ ನಿರ್ದೇಶನ ಮಾಡುತ್ತ ಜನ ಜಾಗೃತಿ ಮಾಡಿರುವುದನ್ನು ಕಾಣುತ್ತೇವೆ.

ಅರಿಷಿಣಗೋಡಿಯವರು ಒಬ್ಬ ಕವಿಯಾಗಿ ಕಲ್ಪನಾಲೋಕದಲ್ಲಿ ವಿಹರಿಸಲಿಲ್ಲ. ನಾಟಕಕಾರರಾಗಿ, ಕಂಪನಿಯ ಮಾಲಿಕರಾಗಿ ಬಣ್ಣದ ಬದುಕಿಗೆ ಬಲಿಯಾಗಲಿಲ್ಲ. ಸಮಾಜ ಚಿಂತಕರಾಗಿ ತಮ್ಮ ವಿಚಾರಗಳನ್ನು ರಂಗ ಪ್ರಯೋಗದಲ್ಲಿ ನಿರ್ದೇಶನದ ಮುಖಾಂತರ ತೋರಿಸಿಕೊಟ್ಟಿದ್ದಾರೆ. ಸುತ್ತಲಿನ ಸಮಾಜದತ್ತ ದೃಷ್ಟಿ ಬೀರಿ ಸಮಾಜದ ಅಂಕು-ಡೊಂಕುಗಳನ್ನು ತಮ್ಮ ನಿರ್ದೇಶನದಲ್ಲಿ ಎತ್ತಿತೋರಿಸಿದ್ದಾರೆ. ಸ್ವಸ್ಥ ಸಮಾಜ ನಿರ್ಮಾಣವಾಗಲಿಕ್ಕೆ ಬೇಕಾದ ವಿಚಾರಗಳನ್ನು ನಿರ್ದೇಶನದಲ್ಲಿ ತುಂಬಿದ್ದಾರೆ. ತಮ್ಮ ಕಂಪನಿ ನಾಟಕಗಳ

ಪ್ರದರ್ಶನದಲ್ಲಿ ಬರುವ ಹಾಸ್ಯ ಸನ್ನಿವೇಶಗಳು ಸಾಮಾಜಿಕ ಜೀವನದ ಪ್ರತಿಬಿಂಬಗಳಾಗಿ ಮೂಡಿ ಬರುವಂತೆ ನಿರ್ದೇಶಿಸಿದ್ದಾರೆ.

ಕಲಾವಿದರನ್ನು ಕಂಪನಿಯಲ್ಲಿ ತರಬೇತುಗೊಳಿಸಿ ಎಲ್ಲಾ ಪಾತ್ರಗಳನ್ನು ಮಾಡಲು ಸಿದ್ಧಗೊಳಿಸುವಲ್ಲಿ ವಿಶೇಷ ಕಾಳಜಿಯನ್ನು ಅರಿಷಿಣಗೋಡಿಯವರು ಹೊಂದಿದ್ದರು. ನಾಟಕ ಪ್ರದರ್ಶನಕ್ಕೆ ಬೇಕಾದ ಪ್ರಮುಖ ಅಂಗಗಳಲ್ಲಿ ನಟನು ಸರ್ವ ಶ್ರೇಷ್ಠ. ಸಂದರ್ಭಕ್ಕೆ ತಕ್ಕಂತೆ ಹಾವ-ಭಾವಗಳಲ್ಲಿ ಸನ್ನಿವೇಶವನ್ನು ಪ್ರತಿನಿಧಿಸುವ ನಟ ಪ್ರೇಕ್ಷಕರ ಮನಗೆಲ್ಲುವಲ್ಲಿ ಯಶಸ್ವಿಯಾಗುತ್ತಾನೆ. ಮುಖದಲ್ಲಿ, ಕಣ್ಣುಗಳಲ್ಲಿ, ಮೂಗಿನ ಹೊರಳೆಗಳಲ್ಲಿ ಧ್ವನಿಯ ಏರಿಳಿತಗಳಲ್ಲಿ ನಟ ತನ್ನ ಅಭಿನಯ ಸಾಮರ್ಥ್ಯವನ್ನು ತೋರಿಸಬಹುದಾಗಿದೆ. ಡಾ. ಎಂ.ಎಂ. ಕಲಬುರ್ಗಿಯವರ ಅಭಿಪ್ರಾಯದಂತೆ "ಅಭಿನಯ ಸಂದರ್ಭದಲ್ಲಿ ನಟನು ತನ್ನನ್ನು ಮರೆತು ಪಾತ್ರದೊಂದಿಗೆ ತಾದಾತ್ಮ್ಯ ಹೊಂದಬೇಕೆಂದು ಕೆಲವರು ಹೇಳುತ್ತಾರೆ. ಈ ಹೇಳಿಕೆ ಸಮಂಜಸ ಅಲ್ಲವೆಂದು ತೋರುತ್ತದೆ. ತಾದಾತ್ಮ್ಯ ಹೊಂದಿದರೆ ನಟನು ಕರಗಿ ಹೋಗಿ, ಏನನ್ನು ನಟನೆ ಮಾಡಬೇಕೆಂಬ ಪ್ರಜ್ಞೆ ಇಲ್ಲದವನಾಗುವು ದರಿಂದ ಅವನಿಗೆ ಅಭಿನಯ ಸಾಧ್ಯವಾಗುವುದಿಲ್ಲ. ಹೀಗಾಗಿ ಇಲ್ಲಿ ನಿಜವಾಗಿ ನಡೆಯವುದು ತಾದಾತ್ಮ್ಯವಲ್ಲ ಅನುಕರಣೆ. ಈ ಅನುಕರಣಾ ಕ್ರಿಯೆ ಗಾಢವಾದಷ್ಟು ಅಭಿನಯ ಪರಿಪೂರ್ಣವೆನಿಸುತ್ತದೆ. ಸಾತ್ವಿಕ (ಭಾವಾಭಿನಯ) ಆಂಗಿಕ(ಅಂಗಾಗಳ ಚಲನವಲನ)ಗಳೆಂಬ ಅಭಿನಯಗಳಿಗೆ ಶರೀರವೇ ಮಾಧ್ಯಮ ಇವುಗಳಲ್ಲಿ ಸಾತ್ವಿಕವು ಮುಖಕ್ಕೆ ಸಂಬಂಧಿಸಿದ್ದುದು. ಆಂಗಿಕವು ಮುಖವೂ ಒಳಗೊಂಡಂತೆ ಎಲ್ಲ ಅಂಗಗಳಿಗೆ ಸಂಬಂಧಿಸುದುದು. ಇವೆರಡರಲ್ಲಿ ಆಂಗಿಕಕ್ಕಿಂತ ಸಾತ್ವಿಕ ಸಹಜವಾದದು. ಒಬ್ಬ ನಟನ ಶ್ರೇಷ್ಠತೆ ಈ ಸಾತ್ವಿಕವೇ ಆಗಿದೆ"(ನಾಟ್ಯಭೂಷಣ- ಎಂ.ಎಂ. ಕಲಬುರ್ಗಿ ಪುಟ ೯೮). ಈ ಅಭಿಪ್ರಾಯವನ್ನು ಪುಷ್ಟೀಕರಿಸುವಂತೆ ಬಿ.ಆರ್. ಅರಿಷಿಣಗೋಡಿಯವರೂ ಕೂಡ ನಟನು ಅನುಕರಣೆಯಿಂದ ಬೆಳೆಯುತ್ತಾನೆ ಎಂದು ಹೇಳುವರು.

ಅರಿಷಿಣಗೋಡಿಯವರ ಅಭಿಪ್ರಾಯದಂತೆ ನಟನಿಗೆ ಮಾತಿಗೆ ತಕ್ಕಂತೆ ದೇಹದ ಅಂಗಾಂಗಗಳ ಚಲನೆ ತುಂಬಾ ಮುಖ್ಯವಾದುದು. ಅದರಲ್ಲಿಯೂ ಕಣ್ಣು, ಮೂಗು, ಬಾಯಿ, ನಾಲಿಗೆ ನಟನ ಯಶಸ್ಸಿಗೆ ಕಾರಣವಾಗುತ್ತವೆ. ಕೈಕಾಲು, ಬೆರಳು ಕೂಡ ಪ್ರಮುಖವಾಗಿ ನಿಲ್ಲುತ್ತವೆ. ಆಡಿದ ಮಾತು ಗಟ್ಟಿಯಾಗಿ ಹೊರ ಹೊಮ್ಮಬೇಕಾದರೆ ನಟನಿಗೆ ಮೊದಲು ಭಾಷೆಯ ಸಂಪೂರ್ಣ ಅರಿವಿರಬೇಕಾದದ್ದು ತುಂಬಾ ಅವಶ್ಯ. ಜೊತೆಗೆ ಸ್ಪಷ್ಟವಾದ ಉಚ್ಚಾರ ಬರಬೇಕು. ಕೆಲವರ ನಾಲಿಗೆ ದಪ್ಪಗಿದ್ದು ಸ್ಪಷ್ಟ ಉಚ್ಚಾರ ಮಾಡಲಿಕ್ಕೆ ಸಾಧ್ಯವಾಗವದಿಲ್ಲ. ಇನ್ನೂ ಕೆಲವರು 'ಳ'ಕಾರವನ್ನು 'ಲ'ಕಾರವನ್ನಾಗಿ 'ಳ'ಕಾರವನ್ನು 'ಹ'ಕಾರವನ್ನಾಗಿ ಉಚ್ಚರಿಸುತ್ತಾರೆ. ಇನ್ನೂ ಕೆಲವರು ರಂಗಭೂಮಿಯ ಮೇಲೆ ಕಂಠಪಾಠ ಮಾಡಿದ ಮಾತುಗಳನ್ನು ಒಪ್ಪಿಸುವಂತೆ ಒಪ್ಪಿಸುತ್ತಾರೆ. ಪಾತ್ರಕ್ಕೆ ತಕ್ಕಂತೆ ಧ್ವನಿ ಏರಿಳಿತಗಳಾಗಲಿ, ಭಾವನೆಗಳಾಗಲಿ, ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಹೀಗಾದಾಗ ನಟನು ಅನಿವಾರ್ಯವಾಗಿ ಪ್ರೇಕ್ಷಕರ ಮುಂದೆ ಸೋಲಲೇ

ಬೇಕಾಗುತ್ತದೆ. ನಟನು ಸೋತರೆ ನಾಟಕವೇ ಸೋತಂತೆ. ಇದರ ಪರಿಣಾಮ ಪ್ರೇಕ್ಷಕನ ಮೇಲೆ ಆಗಿ ಅವನು ಬೇಸರ ಪಟ್ಟುಕೊಳ್ಳುತ್ತಾನೆ. ನಟ-ನಟಿಯರ ಸಂಭಾಷಣೆ (ಮಾತು) ನಾಟಕದ ಯಶಸ್ಸಿಗೆ ಕಾರಣೀಭೂತವಾಗಿರುತ್ತದೆ. ಇದೇ ರೀತಿ ಪಾತ್ರಕ್ಕೆ ತಕ್ಕಂತೆ ವೇಷ-ಭೂಷಣಗಳು ಕೂಡ ಯಶಸ್ವಿ ನಾಟಕಗಳಿಗೆ ಅವಶ್ಯ. ವೃತ್ತಿರಂಗಭೂಮಿಯಲ್ಲಂತೂ ವೇಷ-ಭೂಷಣಗಳಾದ ಜರಿ ಕೋಟು, ಜಾಕೇಟು, ನಡುಕಟ್ಟು, ಉತ್ತರೀಯ, ದುಪ್ಪಟ್ಟ, ಗೌನು, ರುಮಾಲು, ಟೊಪ್ಪಿಗೆ, ಪೀತಾಂಬರ, ಕುಪ್ಪಸ, ಪರಕಾರ, ಸ್ಕರ್ಟ ಈ ರೀತಿಯ ವೇಷ ಭೂಷಣದಲ್ಲಿ ನಟ-ನಟಿಯರನ್ನು ನೋಡುವುದೇ ಪ್ರೇಕ್ಷಕರಿಗೆ ಆನಂದ. ಆದ್ದರಿಂದ ನಾಟಕಕಾರನಾಗಲಿ, ನಿರ್ದೇಶಕನಾಗಲಿ ಹೇಳಿದ ಸಲಹೆ-ಸೂಚನೆಗಳನ್ನು ನಟ ಮೀರಬಾರದು. ಅಲ್ಲದೆ ನಟನೆಗೆ ನಾಟಕ ಕೃತಿಯ ಸಂಪೂರ್ಣ ಅರಿವಿರಬೇಕು. ಹಾಗೆಯೇ ನಾಟಕಕ್ಕೆ ಇರುವ ಲಯ, ತಾಳಗಳಿಗೆ ತಕ್ಕಂತೆ ನಟನು ಅಭಿನಯಿಸಬೇಕಾಗುತ್ತದೆ ಎನ್ನುವರು.

ಅರಿಷಿಣಗೋಡಿಯವರ ನಿರ್ದೇಶನದಲ್ಲಿ ತಯಾರಾದ ನಾಟಕದಲ್ಲಿ ಕಡಿಮೆ ಹಾಡುಗಳು, ಸರಳ, ಸಣ್ಣ ವಾಕ್ಯಗಳ ಸಂಭಾಷಣೆ, ಪ್ರಯೋಗಾನುಕೂಲ ಸಾಮಾಜಿಕ ವಸ್ತುಗಳಿರುವುದರಿಂದ ಹಾಗೂ ಜನ ರಂಜನೆಯ ಧ್ಯೆಯಗಳನ್ನಿರಿಸಿಕೊಂಡ ರಂಗ ಪ್ರಯೋಗ ಅರಿಷಿಣಗೋಡಿಯವರ ಗುರಿಯಾಗಿರುವುದರಿಂದ ಇವರು ಮೌಲ್ಯಯುಕ್ತ ಉತ್ತಮ ನಿರ್ದೇಶಕರೆಂದು ವೃತ್ತಿರಂಗ ಭೂಮಿಯಲ್ಲಿ ಹೆಸರು ಗಳಿಸಿದ್ದಾರೆ.

ಮಾಲಿಕ

ಬಿ.ಆರ್. ಅರಿಷಿಣಗೋಡಿಯವರು ೧೯೬೧ರಲ್ಲಿ ಬಾಗಲಕೋಟೆಯಲ್ಲಿ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿಯನ್ನು ಸ್ವಂತ ಮಾಲಿಕತ್ವದಲ್ಲಿಯೇ ಪ್ರಾರಂಭ ಮಾಡಿದರು. ಒಂದು ಕಂಪನಿಯ ಮಾಲಿಕರಾದ ಬಿ.ಆರ್. ಅರಿಷಿಣಗೋಡಿಯವರು ಮುಂದೆ ೨೩ ವರ್ಷಗಳಲ್ಲಿ ಒಟ್ಟು ನಾಲ್ಕು ಕಂಪನಿಯ ಮಾಲಿಕರಾಗಿ ಕರ್ನಾಟಕದಾದ್ಯಂತ ಸಂಚರಿಸಿ ಕಂಪನಿಯನ್ನು ದೀರ್ಘಕಾಲ ನಡೆಸಿದ್ದು ಕರ್ನಾಟಕ ವೃತ್ತಿರಂಗಭೂಮಿಯಲ್ಲಿ ಉಲ್ಲೇಖನಾರ್ಹ ವಿಷಯವೆನಿಸಿದೆ.

ವೃತ್ತಿರಂಗಭೂಮಿಯಲ್ಲಿ ಸ್ವತಂತ್ರವಾಗಿ ಇಲ್ಲವೆ ಪಾಲುದಾರಿಕೆಯಲ್ಲಿ ಕಂಪನಿಯನ್ನು ಕಟ್ಟಿದ್ದನ್ನು ನೋಡುತ್ತೇವೆ. ಆದರೆ ಬಹಳಷ್ಟು ಕಂಪನಿ ಮಾಲಿಕರು ಯಶಸ್ವಿಯಾಗಿದ್ದು ಕಡಿಮೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಾಟಕಕಾರ ಸಾಮಾನ್ಯವಾಗಿ ಯಶಸ್ವಿ ಮಾಲಿಕನಾಗಲಾರ ಎನ್ನುವ ಮಾತನ್ನು ಹುಸಿಗೊಳಿಸಿದ ಬಿ.ಆರ್. ಅರಿಷಿಣಗೋಡಿಯವರು, ನಾಟಕಕಾರ ಮತ್ತು ಕಂಪನಿ ಮಾಲಿಕರಾಗಿ ಯಶಸ್ವಿಯಾಗಿದ್ದು ಇವರ ವೈಶಿಷ್ಟ್ಯಗಳಲ್ಲೊಂದು. ವೃತ್ತಿರಂಗ ಭೂಮಿಯಲ್ಲಿ ಯಾವುದೇ ಗಳಿಗೆಯಲ್ಲಿ ಎಂಥಾದ್ದೊ ಸಮಸ್ಯೆ ಯಾವುದೇ ರೂಪದಲ್ಲಿ ಕಂಪನಿ ಮಾಲಿಕರ ಮುಂದೆ ಬಂದುಬಿಡಬಹುದು. ಯಾವುದೇ ಸಮಸ್ಯೆ ಎಷ್ಟೇ ಗಂಭೀರವಾಗಿದ್ದರೂ ಅರಿಷಿಣಗೋಡಿಯವರು ಕಂಪನಿಯ ಮಾಲಿಕರಾಗಿ ಸಮಾಧಾನ ಚಿತ್ತದಿಂದ ಯೋಚಿಸಿ ವಿವೇಕದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು. ದುಡುಕಿನ ನಿರ್ಧಾರಗಳನ್ನು ಎಂದೂ ತೆಗೆದುಕೊಂಡಿಲ್ಲ.

ಹೆಚ್ಚಾಗಿ ನಟ-ನಟಿಯರ ವಲಸೆ ಮಾಲಿಕರಿಗೆ ಒಂದು ದೊಡ್ಡ ಸಮಸ್ಯೆ, ಒಂದಿಷ್ಟು ಹೆಸರು ಮಾಡಿದ ನಟ-ನಟಿಯರಂತೂ ಯಾವಾಗ ಕೈ ಕೊಡುತ್ತಾರೆ ಎನ್ನುವ ಭಯ ಮಾಲಿಕರಿಗೆ ಇದ್ದದ್ದೇ. ಯಾವುದೇ ಆಸೆ-ಆಮಿಷಗಳಿಗೆ ಒಳಗಾಗಿ ಇಲ್ಲವೇ ಸಹ ಕಲಾವಿದರ ಜೊತೆ ಹೊಂದಾಣಿಕೆಯಾಗದೆ ಒಮ್ಮೊಂದೊಮ್ಮೆಲೆ ನಟ-ನಟಿಯರು ಕಂಪನಿ ಬಿಟ್ಟು ಹೋದಾಗ ನಾಟಕ ಮಾಡುವುದಾದರೂ ಹೇಗೆ? ಮುಂಜಾನೆ ಇದ್ದವ ರಾತ್ರಿ ೧೦-೩೦ಕ್ಕೆ ಇರುತ್ತಾನೆಂದು ಹೇಳಲಾಗದು. ಹೆಚ್ಚುವರಿ ನಟರಿದ್ದರೆ ಕಂಪನಿ ನಾಟಕ ಪ್ರದರ್ಶನ ಮಾಡಬಹುದು. ಇಲ್ಲದಿದ್ದರೆ ಕಂಪನಿಯ ಮಾಲಿಕನಿಗೆ ಸಮಸ್ಯೆಯಾಗಿ ನಾಟಕ ನಿಲ್ಲಿಸಬೇಕಾಗುತ್ತದೆ. ಕಂಪನಿಯು ಕ್ಯಾಂಪಿನಲ್ಲಿ ಒಂದೂ ದಿನ ನಾಟಕ ನಿಲ್ಲಿಸದೆ ಮುನ್ನಡೆಸಿಕೊಂಡು ಹೋಗುವುದರಲ್ಲಿಯೇ ಕಂಪನಿಯ ಯಶಸ್ಸಿನ ರಹಸ್ಯ ಅಡಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಂಪನಿಯ ಮಾಲಿಕನಾದವನು ಪಾತ್ರವನ್ನು ಮಾಡುವಂತಹವನಾಗಿದ್ದರೆ ಒಳ್ಳೆಯದು. ಏಕಾಏಕಿ ನಟರು ಕಂಪನಿ ಬಿಟ್ಟು ಹೋದಾಗ ಪರಿಸ್ಥಿತಿಯ ಕೈಗೊಂಬೆಯಾಗಿ ಬಿಟ್ಟು ಹೋದ ನಟರ ಪಾತ್ರಗಳನ್ನು ಮಾಡಿ ಪ್ರೇಕ್ಷಕರಿಂದ ಅರಿಷಿಣಗೋಡಿ ಯವರು ಸೈ ಎನಿಸಿಕೊಂಡು ಮಾಲಿಕ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ.

ಕಂಪನಿ ನಾಟಕಗಳಲ್ಲಿಯ ಸ್ಪರ್ಧೆ ಯಾವುದೇ ಮಾಲಿಕರಿಗೆ ಹಿತಕರವಾಗಿರಲಿಲ್ಲ ಎಂದು ಅರಿಷಿಣಗೋಡಿ ಯವರು ನೊಂದು ನುಡಿಯುತ್ತಾರೆ. ಒಂದು ಕಂಪನಿಯ ನಟ-ನಟಿಯರನ್ನು ಒಮ್ಮೊಂದೊಮ್ಮೆಲೇ ಪಲಾಯನ ಮಾಡಿಕೊಂಡು ಹೋಗುತ್ತಿದ್ದ ಪದ್ಧತಿಯನ್ನು ಮೊದಲು ಮಾಲಿಕರು ಬಿಡಬೇಕು ಎನ್ನುವರು.

ಅನೇಕ ಕಂಪನಿಗಳು ಪ್ರದರ್ಶನ ಮಾಡಲಿಕ್ಕೆ ಬೇರೆ ಬೇರೆ ಊರುಗಳಲ್ಲಿ ರಂಗಮಂದಿರಗಳು ಇಲ್ಲದ್ದರಿಂದ ಕಂಪನಿ ಮಾಲಿಕರಿಗೆ ರಂಗಪ್ರದರ್ಶನ ಮಾಡಲು ತೊಂದರೆಯಾಗುತ್ತಿತ್ತು. ಇದನ್ನು ಗಮನಿಸಿದ ಬಿ.ಆರ್. ಅರಿಷಿಣಗೋಡಿಯವರು ಗುಲಬರ್ಗಾ, ಬಾಗಲಕೋಟೆ, ಜಮಖಂಡಿ, ಗೋಕಾಕ ನಗರಗಳಲ್ಲಿ ಸ್ವಂತ ರಂಗಮಂದಿರಗಳನ್ನು ಕಟ್ಟಿಸಿ ಕಂಪನಿ ಮಾಲಿಕನಾಗಿ ಮಾಲಿಕರ ಸಮಸ್ಯೆಗಳಿಗೆ ಸ್ಪಂದಿಸಿದ್ದಾರೆ. ಬಾಡಿಗೆ ಆಧಾರದ ಮೇಲೆ ಬೇರೆ ಕಂಪನಿ ಮಾಲಿಕರಿಗೆ ರಂಗ ಪ್ರದರ್ಶನ ಮಾಡಲು ಅವಕಾಶ ಕಲ್ಪಿಸಿದ್ದರು. ಬಿ.ಆರ್. ಅರಿಷಿಣಗೋಡಿಯವರು ಕಂಪನಿ ಪ್ರಾರಂಭ ಮಾಡಿದಾಗ ೧೦-೧೫ ಪ್ರಸಿದ್ಧ ಕಂಪನಿಗಳು ಮಾಲಿಕರ ಚಾಣಾಕ್ಷತನದಿಂದ ಪ್ರಸಿದ್ಧವಾಗಿದ್ದವು. ಹಾಗೆ ನೋಡಿದರೆ ಸಣ್ಣ ಪುಟ್ಟ ಎಲ್ಲಾ ಕಂಪನಿಗಳು ಸೇರಿ ಸುಮಾರು ೬೦ ಕಂಪನಿಗಳಿದ್ದವು. ಸುಳ್ಳದ ದೇಸಾಯಿಯವರು, ಗುಬ್ಬಿ ವೀರಣ್ಣ ಕಂಪನಿಯವರು, ಗರುಡ ಸದಾಶಿವರಾಯರು. ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ಭವ್ಯ ರಂಗ ಸಜ್ಜಿಕೆಯಲ್ಲಿ ಪ್ರದರ್ಶನ ಮಾಡುತ್ತಿದ್ದರು. ಆದರೆ ಬಿ.ಆರ್. ಅರಿಷಿಣಗೋಡಿಯವರು ಕಂಪನಿಯ ಮಾಲಿಕರಾಗಿ ತಮ್ಮ ಕಂಪನಿಯ ಇತಿ-ಮಿತಿಗಳನ್ನು ಅರ್ಥಮಾಡಿಕೊಂಡು ಸಾಮಾನ್ಯ ತರಗತಿಯ ರಂಗ ಪರಿಕರಗಳ ಸಹಾಯದಿಂದ ಕೆಲವೇ ದಿನಗಳಲ್ಲಿ ಒಂದು ನಾಟಕವನ್ನು ಪ್ರದರ್ಶನಕ್ಕೆ ಸಜ್ಜುಗೊಳಿಸಬಹುದು ಎಂಬುದನ್ನು ಅರಿತವರಾಗಿದ್ದರು. ದಿನಗಳದಂತೆ ಕಂಪನಿ ಆದಾಯ ಮತ್ತು ಕೀರ್ತಿಯನ್ನು ಹೊಂದಿದಂತೆ ಚಾರಮಿನಾರ್ ಬ್ರಾಂಡಿನ

ಬಟ್ಟೆಗಳನ್ನು ೨.೫೦ ರೂ.ಗೆ ಮೀಟರದಂತೆ ಸೋಲ್ಲಾಪುರದಿಂದ ತರಿಸಿ ರಂಗಚಿತ್ರ ಕಲಾವಿದರಿಂದ ಪರದೆಗಳನ್ನು ಬರೆಯಿಸಿ ವೃತ್ತಿ ಸ್ಪರ್ಧೆಯನ್ನು ಮಾಲಿಕರಾಗಿ ನಿಭಾಯಿಸುತ್ತ ಬಂದರು. ನಾಟಕದ ನಟ-ನಟಿಯರಿಗೆ ಪಾತ್ರಗಳಿಗೆ ಅನುಗುಣವಾದ ವೇಷ-ಭೂಷಣಗಳನ್ನು ಬೇರೆ ಕಂಪನಿ ಮಾಲಿಕರ ಹಾಗೆ ಕೊಡುವ ರೂಢಿಯನ್ನು ಇಟ್ಟುಕೊಂಡಿದ್ದರು. ನಾಟಕಕಾರ, ನಟ, ನಿರ್ದೇಶಕ ಇವೆಲ್ಲಕ್ಕಿಂತ ನನಗೆ ಕಂಪನಿ ಮಾಲಿಕನಾಗಿ ವೃತ್ತಿರಂಗಭೂಮಿ ತೃಪ್ತಿ ತಂದುಕೊಟ್ಟಿದೆ ಎಂದು ಅರಿಷಿಣಗೋಡಿಯವರು ಹೇಳುವರು.

ಅರಿಷಿಣಗೋಡಿಯವರು ತಮ್ಮ ಕಂಪನಿಯಲ್ಲಿ ಮಾಲಿಕರಾಗಿ ಅನಾವಶ್ಯಕ ದೃಶ್ಯಗಳಿಗೆ ಮತ್ತು ನೃತ್ಯಗಳಿಗೆ ಅವಕಾಶವನ್ನು ಕೊಡುತ್ತಿದ್ದಿಲ್ಲ. ಬೇರೆ ಕಂಪನಿಗಳ ಜೊತೆ ಇವರ ಸಂಬಂಧ ಚೆನ್ನಾಗಿತ್ತು. ತಂಟೆ-ತಕರಾರುಗಳಿಂದ ಇವರು ಬಲುದೂರ. ಬದಾಮಿಯ ಬನಶಂಕರಿ ಜಾತ್ರೆಯಲ್ಲಿ ಅನೇಕ ಕಂಪನಿಗಳು ಕ್ಯಾಂಪ್ ಹಾಕುತ್ತಿದ್ದವು. ಅಲ್ಲಿ ಬೇರೆ ಕಂಪನಿಗಳಿಗಿಂತ ಇವರ ಕಂಪನಿಯ ಆದಾಯ ಚೆನ್ನಾಗಿರುತ್ತಿದ್ದಾಗಲೂ ಯಾವ ಕಂಪನಿಯ ಮಾಲಿಕರು ಇವರ ಜೊತೆ ಕೆಟ್ಟದಾಗಿ ನಡೆದುಕೊಂಡಿಲ್ಲದಿರುವುದು ಇವರ ಒಳ್ಳೆಯ ವ್ಯಕ್ತಿತ್ವವನ್ನು ತೋರಿಸುತ್ತದೆ. ನಾಟಕದಲ್ಲಿ ಸಾಮಾನ್ಯವಾಗಿ ಪ್ರೇಕ್ಷಕರ ಗಮನವೆಲ್ಲ ನಾಯಕ, ಖಳನಾಯಕನಿಗಿಂತ ಹಾಸ್ಯ ಪಾತ್ರದ ಕಡೆಗೆ ಇರುತ್ತದೆ ಎಂಬುದನ್ನು ತಿಳಿದವರಾಗಿದ್ದರು. ಆದ್ದರಿಂದ ಇವರ ಕಂಪನಿಯಲ್ಲಿ ಹಾಸ್ಯ ಪಾತ್ರದಾರಿಗೆ ಹದ್ದು ಮೀರಿ ನಡೆಯದಂತೆ ತಾಕೀತು ಇರುತ್ತಿತ್ತು. ಮಾಲಿಕರಾಗಿ ಅರಿಷಿಣಗೋಡಿಯರು ಅಶ್ಲೀಲ, ದ್ವಂದ್ವ ಸಂಭಾಷಣೆಗೆ ಪಾತ್ರಧಾರಿಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಅರಿಷಿಣಗೋಡಿಯರ ದೃಷ್ಟಿ ರಂಗಭೂಮಿ ಪಾವಿತ್ರ್ಯವನ್ನು ಎತ್ತಿ ಹಿಡಿಯುವದರ ಕಡೆಗೆ ಇರುತ್ತಿತ್ತು. ಸಾಮಾನ್ಯವಾಗಿ ಒಂದೊಂದು ಕಂಪನಿಯಲ್ಲಿ ಕಲಾವಿದರು, ರಂಗಕರ್ಮಿಗಳು ಕೂಡಿ ೩೦ರಿಂದ ೪೦ ಜನ ಇರುತ್ತಿದ್ದರು. ಕಂಪನಿಯಲ್ಲಿದ್ದ ಇವರು ಅನಾರೋಗ್ಯಕ್ಕೆ ಬಿದ್ದರೆ, ಇವರೇ ವೈದ್ಯರಲ್ಲಿ ಕರೆದುಕೊಂಡು ಹೋಗಿ ತೋರಿಸುತ್ತಿದ್ದರು. ನಟ-ನಟಿಯರಲ್ಲಿ ಒಮ್ಮೊಮ್ಮೆ ಮನಸ್ತಾಪ ಉಂಟಾದಾಗ ಮಾಲಿಕರಾದ ಅರಿಷಿಣಗೋಡಿಯವರು ಮಧ್ಯಸ್ಥಿಕೆ ವಹಿಸಿ ಮನಸ್ತಾಪವನ್ನು ತಿಳಿಗೊಳಿಸುತ್ತಿದ್ದರು. ಒಮ್ಮೊಮ್ಮೆ ಕಲಾವಿದರು ೨೦೦೦ದಿಂದ ೮೦೦೦ ಸಾವಿರದವರೆಗೆ ಬಾಕಿ ಇರುವಾಗಲೇ ಬಿಟ್ಟು ಹೋದಾಗ ಕಠಿಣಕ್ರಮಗಳನ್ನು ತೆಗೆದುಕೊಳ್ಳದೆ ಮೃದುಧೋರಣೆ ತೋರಿ ಬೇರೆ ಕಂಪನಿಯ ಮಾಲಿಕರ ಸಂಬಂಧವನ್ನು ಕೆಡಿಸಿಕೊಂಡಿಲ್ಲ. ಚಂಚಲ ಸ್ವಭಾವದ ಕಲಾವಿದರು ಕೊನೆಯವರೆಗೆ ಒಂದೇ ಕಂಪನಿಯಲ್ಲಿ ಉಳಿಯುವುದಿಲ್ಲ ಎಂಬ ಸತ್ಯವನ್ನು ಮನಗಂಡಿದ್ದಾರೆ. ನಿಷ್ಠೆ ಇಲ್ಲದ ನಟರಿಂದ ಎಷ್ಟೋ ಕಂಪನಿಗಳು ಬಂದ್ ಆದದ್ದನ್ನು ನೋಡಿ ಅದರ ಬಗ್ಗೆ ಅರಿಷಿಣಗೊಂಡಿಯವರು ಮರುಗುತ್ತಾರೆ. ನಿಷ್ಠೆ ಇಲ್ಲದ ಕಲಾವಿದರಿಂದ ಕಂಪನಿ ಮಾಲಿಕನಾಗಿ ಅನೇಕ ತೊಂದರೆಗಳನ್ನು ಅನುಭವಿಸಿದ್ದಾರೆ. ನಟರು ದುಶ್ಚಟಕ್ಕೆ ಬಲಿಯಾಗಲಿಕ್ಕೆ ರಂಗಭೂಮಿ ಕಾರಣವೆನ್ನುವದನ್ನು ಅರಿಷಿಣಗೋಡಿಯವರು ಒಪ್ಪುವುದಿಲ್ಲ. ಅದು ನಟನ ವೈಯಕ್ತಿಕ ದೌರ್ಬಲ್ಯವೇ ಹೊರತು ನಾಟಕ ಅಲ್ಲವೆನ್ನುವರು.

ಕಂಪನಿ ಮಾಲಿಕರು ಹಾಳಾಗಿದ್ದರೆ ಅದು ಕೂಡ ಆ ಕಂಪನಿಯ ಮಾಲಿಕನ ವೈಯಕ್ತಿಕ ದೌರ್ಬಲ್ಯವೇ ಕಾರಣ ಹೊರತು, ರಂಗಭೂಮಿಯ ವಾತಾವರಣವಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಯಾವುದೇ ಕಂಪನಿ ಬದುಕಬೇಕಾದರೆ ಜನರ ಅಭಿರುಚಿಗೆ ತಕ್ಕಂತೆ ಅನಿವಾರ್ಯವಾಗಿ ೨-೪ ಡ್ಯಾನ್ಸ್ (ಐಟಂ ಸಾಂಗ್)ಗಳು ಇರಬೇಕು ಎನ್ನುವರು. ಅಲ್ಲದೆ ಹಾಸ್ಯ ಪಾತ್ರವನ್ನು ಮಾಡುವವನು ಚೆನ್ನಾಗಿ ಪಾತ್ರ ನಿರ್ವಹಣೆ ಮಾಡಿದರೆ ಕಂಪನಿಯ ಮಾಲಿಕನಿಗೆ ನಷ್ಟ-ಲಾಭಗಳ ಚಿಂತೆಗಳಿರುವುದಿಲ್ಲ ಎನ್ನುವರು.

ಕಂಪನಿಯಲ್ಲಿ ಸಮರ್ಥ ವ್ಯವಸ್ಥಾಪಕರನ್ನು ಇಟ್ಟುಕೊಂಡ ಅರಿಷಿಣಗೋಡಿಯವರು. ಒಂದೊಂದು ಊರಿನಲ್ಲಿ ಕ್ಯಾಂಪ್ ಮಾಡುವ ಪೂರ್ವದಲ್ಲಿಯೇ ಪೊಲೀಸ್, ಕಂದಾಯ, ವಿದ್ಯುತ್ ಇಲಾಖೆಗಳಿಂದ ನಿರಪೇಕ್ಷಣಾ ಪತ್ರಗಳನ್ನು ಮ್ಯಾನೇಜರನ ಮುಖಾಂತರ ತೆಗೆಸಿಕೊಳ್ಳುವುದರ ಕಡೆಗೆ ಗಮನ ಹರಿಸುತ್ತಿದ್ದರು.

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕಂಪನಿಯಲ್ಲಿ ೨೫ ವರ್ಷಗಳವರೆಗೆ ಹಾಸ್ಯ ಪಾತ್ರಗಳನ್ನು ಮಾಡಿರುವ ಅಣ್ಣಪ್ಪ ಕಟಗೇರಿ ಕಲಾವಿದರಿಂದ ಮಾಲಿಕ ಅರಿಷಿಣಗೋಡಿಯವರ ಬಗ್ಗೆ ತಿಳಿದುಕೊಂಡಿದ್ದನ್ನು ಈ ಕೆಳಗಿನಂತೆ ಸಂಗ್ರಹಿಸಿ ಹೇಳಬಹುದು:

'ಅರಿಷಿಣಗೋಡಿಯವರು ಸರಳ ಸಾದಾ ಮನುಷ್ಯರಾಗಿದ್ದರು. ಮಾಲಿಕರು ಎಂಬ ಅಹಂ ಅವರಲ್ಲಿ ಇರಲಿಲ್ಲ. ಕಂಪನಿಯಲ್ಲಿ 'ಆಲ್‌ರೌಂಡರ್' ಆಗಿದ್ದರು. ಅವರೇ ಹಾರ್ಮೋನಿಯಂ ನುಡಿಸುತ್ತ, ಚಾಲ ಅವರೇ ಕೂಡಿಸುತ್ತಿದ್ದರು. ನಿರ್ದೇಶನ ಅವರದೇ, ಇಂತಹ ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು. ಅರಿಷಿಣಗೋಡಿಯವರ ಕಂಪನಿಯಲ್ಲಿ ಸೇರುವುದೆಂದರೆ ಸರಕಾರದಲ್ಲಿ ನೌಕರಿ ಸೇರಿದಂಗ, ಸರಕಾರದಲ್ಲಿ ನೌಕರದಾರರ ಸಂಬಳ ತಡವಾದೀತು ಆದರೆ ಅರಿಷಿಣಗೋಡಿಯವರ ಕಂಪನಿಯಲ್ಲಿ ಕಲಾವಿದರ ಸಂಬಳ ವಾರಕ್ಕೊಮ್ಮೆ ತಪ್ಪುತ್ತಿದ್ದಿಲ್ಲ. ಹಾಗೆಯೇ ನಟ-ನಟಿಯರ ಜೊತೆ ಮಧುರವಾದ ಸಂಬಂಧವನ್ನು ಇಟ್ಟುಕೊಂಡಿದ್ದರು. ಇವರಿಂದ ಮೇಲೆ ಬಂದ ಕಲಾವಿದರು ಬಹಳ. ಅಂತಹದ್ದರಲ್ಲಿ ತಾವೂ ಒಬ್ಬರು' ಎನ್ನುವುದು ಅಣ್ಣಪ್ಪ ಕಟಗೇರಿಯವರ ಅಭಿಮಾನ.

ಸುಮಾರು ೩೦ ವರ್ಷಗಳವರೆಗೆ ಕಂಪನಿಯಲ್ಲಿ ಕಲಾವಿದೆಯಾಗಿ ರಂಗಕಲಾಸೇವೆಯನ್ನು ಮಾಡಿ ಕಂಪನಿ ಬಂದಾದ ನಂತರ ಕಿರು ಧಾರಾವಾಹಿಯಲ್ಲಿ ಅಭಿನಯಸುತ್ತಿರುವ ಮಾಲತಿ ಮೈಸೂರು ಅವರು ಮಾಲಿಕರ ಬಗ್ಗೆ ಹೇಳಿದ ಅಭಿಪ್ರಾಯಗಳನ್ನು ವಿಶ್ಲೇಷಿಸಿ ನೋಡಿದರೆ ಅರಿಷಿಣಗೋಡಿಯವರ ಮೇರು ವ್ಯಕ್ತಿತ್ವದ ಪರಿಚಯವಾಗುತ್ತದೆ. ಮೇರು ವ್ಯಕ್ತಿತ್ವವನ್ನು ಹೊಂದಿದ ಅರಿಷಿಣಗೋಡಿಯವರಿಗೆ ಸಮಕಾಲೀನ ಮಾಲಿಕರಾದ ಎನ್. ಬಸವರಾಜ, ಪ್ರಕಾಶ ಕಡಪಟ್ಟಿ, ಪಿ.ಬಿ. ಧುತ್ತರಗಿ ಮುಂತಾದವರು ಗೌರವ ಕೊಡುತ್ತಿದ್ದರು. ಕಂಪನಿಯ ಕಲಾವಿದರು, ರಂಗಕರ್ಮಿಗಳು ಅರಿಷಿಣಗೋಡಿಯವರನ್ನು 'ಅಪ್ಪಾಜಿ'ಯೆಂದೇ ಕರೆಯುತ್ತಿದ್ದುದು ಇವರು ಕಲಾವಿದರ ಜೊತೆ ಯಾವ ರೀತಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು

ತೋರಿಸುತ್ತದೆ. ವೃತ್ತಿಜೀವನದಲ್ಲಿ ಮಾಲಿಕರಾಗಿ ಇವರಿಗೆ ಜಗಳ, ತಂಟೆ, ತಕರಾರುಗಳು ಬಂದಿಲ್ಲ. ಅಕಸ್ಮಾತ್ ತಕರಾರುಗಳು ಬಂದರೆ ಇವರೇ ಸರಿದುಕೊಳ್ಳುತ್ತಿದ್ದರು. ಇದು ವೃತ್ತಿರಂಗಭೂಮಿಯ ಸಮಕಾಲೀನ ಕಂಪನಿ ಮಾಲಿಕರು, ನಟ-ನಟಿಯರು ಇವರ ಬಗ್ಗೆ ಮೃದುಧೋರಣೆ ತಾಳಲು ಸಹಾಯವಾಗುತ್ತಿತ್ತು.

ಗಂಗಾಧರ ಶಾಸ್ತ್ರಿಗಳು ಅರಿಷಿಣಗೋಡಿಯರ ಪರವಾನಿಗೆ ಇಲ್ಲದೇ 'ಬಸ್ ಕಂಡಕ್ಟರ' ನಾಟಕ ಆಡುತ್ತಿದ್ದರು. ಹೀಗಾಗಿ ಅರಿಷಿಣಗೋಡಿಯವರು ಗಂಗಾಧರ ಶಾಸ್ತ್ರಿಗಳ ಮೇಲೆ ಕೇಸ್ ಹಾಕಿದರು. ಗುಳೇದಗುಡ್ಡ ಸಮೀಪದ ಕೋಟೆಕಲ್‌ಮಠದ ಸ್ವಾಮಿಗಳು ಹಾಗೂ ಕಮತಗಿಯ ಹುಚ್ಚೇಶ್ವರ ಸ್ವಾಮಿಗಳ ಮುಖಾಂತರ ರಾಜಿ ಸಂಧಾನಕ್ಕೆ ಒಪ್ಪಿ ಗಂಗಾಧರ ಶಾಸ್ತ್ರಿಗಳ ಮೇಲೆ ಹಾಕಿದ ಕೇಸನ್ನು ವಾಪಸ್ ಪಡೆದು ತಮ್ಮ ಹೃದಯ ಶ್ರೀಮಂತಿಕೆಯನ್ನು ಮೆರೆದಿದ್ದಾರೆ. ಇದು ಅರಿಷಿಣಗೋಡಿಯರ ವೃತ್ತಿರಂಗಭೂಮಿ ಮಾಲಿಕರ ಬಗ್ಗೆ ಇದ್ದ ಗೌರವವನ್ನು ತೋರಿಸುತ್ತದೆ.

ಪ್ರಕಾಶ ಕಡಪಟ್ಟಿಯವರ ಗುರುಪ್ರಸಾದ ನಾಟ್ಯ ಸಂಘ ಆರ್ಥಿಕವಾಗಿ ದಿವಾಳಿಯಾಗಿ ನಿಂತಿತ್ತು. ಆ ಕಂಪನಿಯಲ್ಲಿದ್ದ ಪ್ರಮುಖ ಕಲಾವಿದರೆಲ್ಲ ಅರಿಷಿಣಗೋಡಿಯವರ ಕಂಪನಿಗೆ ಬಂದರು. ಕಂಪನಿಯ ಮಾಲಿಕ ಹಾಗೂ ಕಲಾವಿದರನ್ನು ವೃತ್ತಿ ಸ್ಪರ್ಧೆಯಿಂದ ನೋಡದೆ ಗುರು ಪ್ರಸಾದ ನಾಟ್ಯ ಸಂಘ ಕಡಪಟ್ಟಿ ಕಂಪನಿಗೆ ಆಶ್ರಯ ಕೊಟ್ಟರು. ನಟ-ನಟಿಯರಲ್ಲಿ ಇತ್ತೀಚಿಗೆ ಕಲಿತು ಕಲಾವಿದರಾಗಬೇಕೆಂದು ಬರುವವರ ಸಂಖ್ಯೆ ಕಡಿಮೆ. ತರಬೇತಿ ಕೊಡುವ ವ್ಯವಸ್ಥೆ ಮಾಲಿಕರಲ್ಲಿ ಈಗ ಕಡಿಮೆಯಾಗಲಿಕ್ಕೆ ಹತ್ತಿದೆ ಎನ್ನುವರು. ೭೦ರ ದಶಕದಲ್ಲಿ ವೃತ್ತಿರಂಗಭೂಮಿಯನ್ನು ಅವಲೋಕಿಸಿದಾಗ ಬಹಳಷ್ಟು ಕಂಪನಿಗಳು ನಷ್ಟ ಅನುಭವಿಸಿವೆ. ಪ್ರಾರಂಭವಾದ ಒಂದೇ ವರ್ಷದಲ್ಲಿ ನೆಲ ಕಚ್ಚಿವೆ. ಅನೇಕ ಕಂಪನಿಯ ಮಾಲಿಕರು ಹೇಳ ಹೆಸರಿಲ್ಲ ದಂತಾಗಿದ್ದಾರೆ. ಹತ್ತಾರು ವರ್ಷ ಚೆನ್ನಾಗಿ ನಡೆಸಿಕೊಂಡು ಬಂದ ಕಂಪನಿಗಳು ಹೇಳ ಹೆಸರಿಲ್ಲದಂತೆ ದಿವಾಳಿಯಾಗಿ ಮಾಲಿಕರು ಸಾಲದ ಶೂಲಕ್ಕೆ ಅಂಜಿ ತಲೆ ಮರೆಸಿಕೊಂಡಿದ್ದಾರೆ. ಕಂಪನಿಯನ್ನು ನೆಚ್ಚಿ ನೆಲೆ ನಿಂತ ಕಲಾವಿದರು, ರಂಗಕರ್ಮಿಗಳು ಒಪ್ಪತ್ತಿನ ಊಟಕ್ಕೂ ದಿಕ್ಕೆಡಿಯಾಗಿ ಕಣ್ಮರೆಯಾಗಿದ್ದಾರೆ. ಆದರೆ ಅರಿಷಿಣಗೋಡಿಯವರು ಸಮರ್ಥ ಮಾಲಿಕರಾಗಿ ೪೩ ವರ್ಷಗಳವರೆಗೆ ಕಂಪನಿ ನಡೆಸಿಕೊಂಡು ಬಂದದ್ದು ಸಾಮಾನ್ಯ ವಿಷಯವಲ್ಲ. ನಟರ ಪಲಾಯನ, ಆರ್ಥಿಕ ಮುಗ್ಗಟ್ಟು, ಕೌಟುಂಬಿಕ ಕಲಹ, ಕುಟುಂಬದಲ್ಲಿ ನಡೆದ ಆಘಾತಗಳು ಯಾವುದೇ ಕಾರಣಕ್ಕೂ ಕಂಪನಿ ನಿಲ್ಲಲಿಲ್ಲ ಎನ್ನುವುದಕ್ಕೆ ಬಿ.ಆರ್. ಅರಿಷಿಣಗೋಡಿಯವರಲ್ಲಿದ್ದ ವೃತ್ತಿ ಕೌಶಲ್ಯವೇ ಕಾರಣ.

ಒಬ್ಬ ಸಮರ್ಥ ಕಂಪನಿ ಮಾಲಿಕರಾಗಿ ತಮ್ಮ ಕಂಪನಿ ನಾಟಕಗಳಲ್ಲಿ ಅತಿರೇಕದ ಸನ್ನಿವೇಶಗಳಿಗೆ ಅವಕಾಶ ಕೊಟ್ಟವರಲ್ಲ. ಸಮಕಾಲೀನ ವೃತ್ತಿ ಮಂಡಳಿಗಳು ತೆಗೆದುಕೊಳ್ಳುವ ಹೊಸ ಹೊಸ ಪ್ರಯೋಗಗಳನ್ನು ಅನುಕರಣೆ ಮಾಡಿ ಕೈಸುಟ್ಟುಕೊಂಡವರಲ್ಲ. ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ಪ್ರೇಕ್ಷಕರ ಮನಗೆದ್ದಿದ್ದಾರೆ. ಕಂಪನಿ ಬದುಕಬೇಕು ಕಂಪನಿಯನ್ನು ನೆಚ್ಚಿಕೊಂಡು ಬಂದ ಕಲಾವಿದರು ಬದುಕಬೇಕೆನ್ನುವ ಕನಿಷ್ಠ

ಎಚ್ಚರಿಕೆಯನ್ನು ಕಂಪನಿ ಮಾಲಿಕರಾಗಿ ಇಟ್ಟುಕೊಂಡ್ದಾರೆ. ಒಂದು ಸಾರಿ ಮಾತ್ರ 'ಗರೀಬಿ ಹಟಾವೊ' ನಾಟಕವನ್ನು ಮಹಾರಾಷ್ಟ್ರದ ಸಾಂಗಲಿಯ ದೀನನಾಥ ಮಂಗೇಶಕರ್ ರಂಗಮಂದಿರದಲ್ಲಿ ಪ್ರಯೋಗ ಮಾಡಿದ್ದನ್ನು ಬಿಟ್ಟರೆ ತಮ್ಮ ಕಂಪನಿಯ ರಂಗಕಲಾ ಯಾತ್ರೆಯನ್ನು ಕರ್ನಾಟಕದಲ್ಲಿಯೇ ಮಾಡಿದ್ದಾರೆ. ಕರ್ನಾಟಕದ ಪ್ರೇಕ್ಷಕರು ತಮ್ಮ ವೃತ್ತಿರಂಗಭೂಮಿಯನ್ನು ಚೆನ್ನಾಗಿ ಪೋಷಿಸುತ್ತಿರುವಾಗ ಹೊರಗಡೆ ಹೋಗಿ ಅದೃಷ್ಟವನ್ನು ಏಕೆ ಪರೀಕ್ಷಿಸಿಕೊಳ್ಳಬೇಕೆಂದು ತಿಳಿದು ತಮ್ಮ ನಾಲ್ಕು ಕಂಪನಿಗಳನ್ನು ಕರ್ನಾಟಕದಲ್ಲಿಯೇ ಪ್ರದರ್ಶಿಸಿ ಹೆಸರು ಗಳಿಸಿದ್ದಾರೆ.

ಅರಿಷಿಣಗೋಡಿಯವರು ಕಂಪನಿ ಮಾಲಿಕರಾಗಿ ೪೩ ವರ್ಷಗಳಲ್ಲಿ ಮಾಡಿದ ರಂಗ ಪ್ರಯೋಗಗಳನ್ನು ಲೆಕ್ಕ ಹಾಕಿದರೆ ಒಂದು ಸಮಷ್ಟಿ ಮಾಡುವ ಕೆಲಸವನ್ನು ಒಂದು ವ್ಯಕ್ತಿಯಾಗಿ ನಿರ್ವಹಿಸಿದ್ದಾರೆ. ವೃತ್ತಿರಂಗ ಭೂಮಿಯ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಕೆಲವೇ ಕೆಲವು ಕೈಬೆರಳಿನಲ್ಲಿ ಎಣಿಸಬಹುದಾದ ಉತ್ತಮ ಮಾಲಿಕರಲ್ಲಿ ಬಿ.ಆರ್. ಅರಿಷಿಣಗೋಡಿಯವರೂ ಒಬ್ಬರು.

ವೃತ್ತಿ ಮಂಡಳಿಗಳ ಏಳಿಗೆಗೆ ಚಿಂತಿಸಿ, ಸಂಕಷ್ಟದಲ್ಲಿದ್ದ ಕಂಪನಿಗಳನ್ನು ಎತ್ತರಿಸಲು ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಕಂಪನಿಯ ಮಾಲಿಕರನ್ನು ಸಮಾಜ ಗೌರವದಿಂದ ಕಾಣಬೇಕು ಎಂದು ಚಿಂತಿಸಿದ್ದಾರೆ. ಡಾ. ಚಂದ್ರಶೇಖರ ಕಂಬಾರರು ನಾಟಕ ಅಡಾಡೆಮಿಯ ಅಧ್ಯಕ್ಷರಾಗಿದ್ದಾಗ ಅರಿಷಿಣಗೋಡಿಯವರು ಅಕಾಡೆಮಿಯ ಸದಸ್ಯರಾಗಿದ್ದರು. ವೃತ್ತಿ ಮಂಡಳಿಯ ಮಾಲಿಕರು ಎದುರಿಸುವ ಸಮಸ್ಯೆಗಳನ್ನು ಕುರಿತು ಒಂದು ಕಾರ್ಯ ಯೋಜನೆಯನ್ನು ರೂಪಿಸಿಕೊಟ್ಟರು. ಆದರೆ ಈ ವಿಷಯದಲ್ಲಿ ಇಬ್ಬರಿಗೂ ಭಿನ್ನಾಭಿಪ್ರಾಯ ಬಂದು ಅರಿಷಿಣಗೋಡಿಯವರು ಅಕಾಡೆಮಿ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರು.

ವೃತ್ತಿರಂಗಭೂಮಿ ಮಾಲಿಕರ ಸಂಘ ಹುಬ್ಬಳ್ಳಿಯಲ್ಲಿ ಅಸ್ತಿತ್ವಕ್ಕೆ ಬಂದಾಗ ಸಂಘದ ಖಜಾಂಚಿಯಾಗಿ ಅರಿಷಿಣಗೋಡಿಯವರು ಸೇವೆಸಲ್ಲಿಸಿದ್ದಾರೆ. ಅವರು ಕಂಪನಿ-ಕಂಪನಿಗಳ ನಡುವೆ ಸೌಹಾರ್ದಯುತ ಬಾಂಧವ್ಯ ಬೆಳೆಯಲು ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ಒಂದು ಕಂಪನಿಯಿಂದ ಇನ್ನೊಂದು ಕಂಪನಿಗೆ ಹಾರಿಹೋಗುವ ಕಲಾವಿದರನ್ನು ನಿಯಂತ್ರಿಸಲು ಮಾಲಿಕರು ಯಾವ ರೀತಿ-ನಿಯಮಗಳನ್ನು ಪಾಲಿಸಬೇಕೆಂಬುದರ ಬಗ್ಗೆ ಸೂಚನೆಗಳನ್ನು ನೀಡಿದ್ದಾರೆ. ಕಂಪನಿಗಳು ಹಣಕಾಸಿನ ಸೌಲಭ್ಯ ಪಡೆಯಲು ಸಹಕಾರಿ ಸಂಸ್ಥೆಯನ್ನು ಹುಟ್ಟು ಹಾಕುವುದರ ಬಗ್ಗೆ ಚರ್ಚಿಸಿದ್ದಾರೆ. ಆದರೆ ಮಾಲಿಕರು ಸರಿಯಾಗಿ ಸಭೆಗೆ ಹಾಜರಾಗದೇ ಇದ್ದುದರಿಂದ ಮಾಲಿಕರ ಸಂಘ ಸರಿಯಾಗಿ ಕಾರ್ಯ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಸರಕಾರದಿಂದಂತೂ ವೃತ್ತಿರಂಗಭೂಮಿಗೆ, ಕಲಾವಿದರಿಗೆ, ಕಂಪನಿ ಮಾಲಿಕರಿಗೆ ಯಾವುದೇ ಪ್ರಾಮಾಣಿಕ ಸಹಾಯವಾಗಿಲ್ಲವೆಂದು ಅರಿಷಿಣಗೋಡಿಯವರು ಸರಕಾರವನ್ನು ದೂರುತ್ತಾರೆ. ಕಂಪನಿ ಯಾವ ಊರಿನಲ್ಲಿ ಕ್ಯಾಂಪ್ ಮಾಡುತ್ತದೆ ಆ ಊರಿನ ಪರಿಸರಕ್ಕೆ ಹೊಂದಿಕೊಂಡು ಕಲಾವಿದರು ಬದುಕಬೇಕು. ಕಲಾವಿದರು ಕಂಪನಿ, ಮಾಲಿಕರಿಗೆ ಮೋಸ ಮಾಡಬಾರದು. ಮಾಲಿಕರಾದರೂ ಕಲಾವಿದರ ಸುಖ-ದುಃಖಗಳನ್ನು

ಅರ್ಥೈಸುವಂತಿರಬೇಕು. ಸಂಗಡವೇ ನಟ-ನಟಿಯನ್ನು ತರಬೇತುಗೊಳಿಸಿ ಒಳ್ಳೆಯ ಕಲಾವಿದರನ್ನಾಗಿ ಮಾಡಬೇಕು. ಮಾಲಿಕರಾದವರು ಸಿದ್ಧ ನಟ-ನಟಿಯರನ್ನು ಹುಡುಕಿಕೊಂಡು ಹೋಗುವ ಪರಿಪಾಠವನ್ನು ನಿಲ್ಲಿಸಬೇಕು. ಕಂಪನಿ-ಮಾಲಿಕರ ಮಧ್ಯ ಆರೋಗ್ಯಕರ ಸ್ಪರ್ಧೆಯಿರಬೇಕು. ವೃತ್ತಿರಂಗಭೂಮಿಯ ಮಾಲಿಕನನ್ನು ಕುರಿತಾಗಿರುವ ಅರಿಷಿಣಗೋಡಿಯವರ ತಿಳುವಳಿಕೆಗಳಿವು; ಅವರು ಹಾಗೆ ಬದುಕಿದ್ದಾರೆ.

ಕೆ.ಬಿ.ಆರ್. ಡ್ರಾಮಾ ಕಂಪನಿ ದಾವಣಗೆರೆ ಕಂಪನಿಯ ಮಾಲಿಕರಾದ ಚಿಂದೋಡಿ ಲೀಲಾ ಅವರು ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ೧೯೯೩-೯೪ರಲ್ಲಿ ೮೦,೦೦೦ ರೂಪಾಯಿಗಳನ್ನು ಕಂಪನಿ ಮಾಲಿಕರಾಗಿ ಸರಕಾರದಿಂದ ಅರಿಷಿಣಗೋಡಿಯವರು ಅನುದಾನ ಪಡೆದಿದ್ದಾರೆ. ಮರು ವರ್ಷ ಅಂದರೆ ೧೯೯೪-೯೫ರಲ್ಲಿ ಮತ್ತೊಮ್ಮೆ ಚಿಂದೋಡಿ ಲೀಲಾ ಅವರು ಅಧ್ಯಕ್ಷರಾಗಿದ್ದಾಗಲೇ ೮೦,೦೦೦ ರೂಪಾಯಿಗಳನ್ನು ಅನುದಾನ ಪಡೆದುಕೊಂಡಿದ್ದಾರೆ. ಕೆ. ಮರುಳುಸಿದ್ದಪ್ಪನವರು ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾಗಲೂ ೮೦,೦೦೦ ರೂಪಾಯಿಗಳನ್ನು ಅರಿಷಿಣಗೋಡಿಯವರು ಸರಕಾರದಿಂದ ಅನುದಾನ ಪಡೆದಿದ್ದಾರೆ. ಸರಕಾರದಿಂದ ಅನುದಾನ ಪಡೆದು, ಆ ಅನುದಾನವನ್ನು ಕಂಪನಿ ಕಲಾವಿದರ ಶ್ರೇಯೋಭಿವೃದ್ಧಿಗೆ ವಿನಿಯೋಗಿಸಿದ್ದಾರೆ. ಈ ರೀತಿ ಪ್ರತಿ ವರ್ಷ ಸರಕಾರ ಅನುದಾನವನ್ನು ಕಂಪನಿ ಮಾಲಿಕರಿಗೆ ನಿಯಮಿತವಾಗಿ ತಪ್ಪದೇ ಕೊಟ್ಟರೆ ವೃತ್ತಿರಂಗಭೂಮಿಯಲ್ಲಿ ಕಂಪನಿಗಳು ಉಳಿಯುತ್ತವೆ ಎನ್ನುವರು. ನಟ-ನಟಿಯರನ್ನು ಸಿದ್ಧಗೊಳಿಸುತ್ತಿರುವ ಗೋಕಾಕ ಕಂಪನಿಯ ಮಾಲಿಕ ಬಸವರಾಜ ಹೊಸಮನಿಯವರ ಬಗ್ಗೆ ಅರಿಷಿಣಗೋಡಿಯವರು ಮೆಚ್ಚುಗೆಯ ಮಾತುಗಳನ್ನು ಹೇಳುತ್ತಾರೆ. ನಾಟಕದಲ್ಲಿಯ ಪಾತ್ರಗಳು ಒಬ್ಬನಿಗೆ ಸೀಮಿತವಾಗಬಾರದು. ಮಾಲಿಕರು ಕೊಟ್ಟ ಪಾತ್ರಗಳನ್ನು ಕಲಾವಿದನು ಮಾಡಲು ಸಿದ್ಧನಾಗಬೇಕೆನ್ನುವರು. ಒಂದು ನಾಟಕದಲ್ಲಿ ನಾಯಕ ಪಾತ್ರವನ್ನು ನಟಿಸಿದ ಕಲಾವಿದ ಇನ್ನೊಂದು ನಾಟಕದಲ್ಲಿ ಪೋಷಕ ಪಾತ್ರವನ್ನು ಮಾಡುವಂತೆ ಕಲಾವಿದರ ಮನಸ್ಸನ್ನು ಪರಿವರ್ತಿಸುವ ಕೆಲಸವನ್ನು ಮಾಲಿಕನಾದವನು ಮಾಡಬೇಕೆನ್ನುವರು. ಇದರಿಂದ ಹೊಸ ಕಲಾವಿದನು ಬೆಳೆಯಲಿಕ್ಕೆ ಸಾಧ್ಯವಾಗುವುದಲ್ಲದೆ ವೃತ್ತಿರಂಗಭೂಮಿಯು ಸಮರ್ಥ ಕಲಾವಿದರ ಕೊರತೆಯನ್ನು ತುಂಬಿಸಿಕೊಂಡು ಮುನ್ನಡೆಯಲು ಸಾಧ್ಯವಾಗುವುದು ಎನ್ನುವರು. ಮಾಲಿಕರಾಗಿ ತಾವು ವೃತ್ತಿರಂಗಭೂಮಿಯಲ್ಲಿ ಕಂಡು ಉಂಡ ಅನುಭವಗಳ ಬಗ್ಗೆ ಸಲಹೆ-ಸೂಚನೆಗಳನ್ನು ಹೇಳುವುದನ್ನು ನೋಡಿದರೆ ಅವರ ಚಿಂತನಾಶೀಲ ಮನಸ್ಸನ್ನು ಮೆಚ್ಚಲೇಬೇಕು.

ಓದು

ವಿದ್ಯಾರ್ಥಿ ಜೀವನದಲ್ಲಿಯೇ ಅರಿಷಿಣಗೋಡಿಯವರು ಹೆಚ್ಚಾಗಿ ಎಡಪಂಥಿಯ ಧೋರಣೆಯ ಕಾದಂಬರಿಗಳನ್ನು ಓದುವ ಹವ್ಯಾಸಗಳನ್ನು ಇಟ್ಟುಕೊಂಡಿದ್ದರು. ಅ.ನ.ಕೃ., ಬಸವರಾಜ ಕಟ್ಟೀಮನಿ, ತ.ರಾ.ಸು., ನಿರಂಜನ ಮುಂತಾದವರು ಇವರ ನೆಚ್ಚಿನ ಕಾದಂಬರಿಕಾರರಾಗಿದ್ದರು. ಇವರ ಕಾದಂಬರಿಗಳು ತರುಣ ಅರಿಷಿಣಗೋಡಿಯವರನ್ನು ವಿಶೇಷವಾಗಿ ಆಕರ್ಷಿಸಿದ್ದವು. ಹಾಗೆಯೇ ತುಷಾರ, ಮಲ್ಲಿಗೆ,

ಮಯೂರ, ಕಸ್ತೂರಿ, ಕರ್ಮವೀರ ಮುಂತಾದ ಮಾಸ ಪತ್ರಿಕೆಗಳನ್ನು ಓದುತ್ತಿದ್ದರು. ಅನೇಕ ಬಾರಿ ಓದುವಾಗಲೇ ಇವರ ನಾಟಕಗಳಿಗೆ ಪ್ಲಾಟುಗಳು ಹೊಳೆದಿವೆ. ಇವತ್ತು ಕೂಡ ಊರು ಬಿಟ್ಟು ಹೊರಗಡೆಗೆ ಹೋದಾಗ ಅವರ ಬ್ಯಾಗಿನಲ್ಲಿ ಯಾವುದಾದರೊಂದು ಕಾದಂಬರಿಯೋ, ಇಲ್ಲವೆ ಒಂದು ಮಾಸ ಪತ್ರಿಕೆಯೋ ಇರುವುದನ್ನು ಕಾಣಬಹುದು.

ನಾಟಕಕಾರರು, ಸಾಹಿತಿಗಳ ಒಡನಾಟ

ಬಿ.ಆರ್. ಅರಿಷಿಣಗೋಡಿಯವರು ಸಮಕಾಲೀನ ನಾಟಕಾರರ ಹಾಗೂ ಸಾಹಿತಿಗಳ ಸಂಪರ್ಕದಿಂದ ತಮ್ಮ ಜ್ಞಾನದ ಹರವನ್ನು ವಿಸ್ತರಿಸಿಕೊಂಡಿದ್ದಾರೆ. ಕಂದಗಲ್ ಹನುಮಂತರಾಯ್, ಪಿ.ಬಿ. ಧುತ್ತರಗಿ, ಎಚ್.ಟಿ. ಮಹಾಂತೇಶ ಶಾಸ್ತ್ರಿ, ಎಚ್.ಎನ್. ಹೂಗಾರ, ಮಾರುತೇಶ ಮಾಂಡ್ರೆ, ಎನ್.ಎಸ್. ಜೋಶಿ, ಕೆ.ಎನ್. ಸಾಳುಂಕೆ, ಎಚ್.ಆರ್. ಭಸ್ಮೆ, ನಾ.ದೇ. ನರಸಿಂಹಮೂರ್ತಿ, ಎನ್.ಎಂ. ಕಣವಿ, ಗಂಗಾಧರ ಶಾಸ್ತ್ರಿಗಳು, ಟಿ.ಕೆ. ಮಹಮದ್ ಅಲಿ, ಬಿ.ವ್ಹಿ. ಈಶ, ಪ್ರಕಾಶ ಕಡಪಟ್ಟಿ, ಎನ್. ಬಸವರಾಜ ಮುಂತಾದ ನಾಟಕಾರರ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಎಚ್.ಟಿ. ಮಹಾಂತೇಶ ಶಾಸ್ತ್ರಿಗಳ ಜೊತೆಗೆ ತಾವು ಬರೆದ ನಾಟಕಗಳನ್ನು ಚರ್ಚಿಸಿ ಅವರ ಸಲಹೆ-ಸೂಚನೆಗಳನ್ನು ಸ್ವೀಕರಿಸುತ್ತಿದ್ದರು. ಸಿಂಪಿ ಲಿಂಗಣ್ಣ, ವರಕವಿ ಬೇಂದ್ರೆ, ಸದಾಶಿವ ಒಡೆಯರ, ದು.ನಿಂ. ಬೆಳಗಲಿ, ಡಾ. ಮ.ಗು. ಬಿರಾದಾರ, ಕುಂ. ವೀರಭದ್ರಪ್ಪ, ಗುಡಿಹಳ್ಳಿ ನಾಗರಾಜ, ಗವೀಶ ಹಿರೇಮಠ ಮುಂತಾದ ಸಾಹಿತಿಗಳ ಜೊತೆಗೆ ಮುಕ್ತ ಮನಸ್ಸಿನಿಂದ ವೃತ್ತಿರಂಗಭೂಮಿಯ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಇಂತಹ ನಾಟಕಕಾರರ ಮತ್ತು ಸಾಹಿತಿಗಳ ಸಂಪರ್ಕದಿಂದ ತಮ್ಮ ವ್ಯಕ್ತಿತ್ವದ ಛಾಪನ್ನು ವೃತ್ತಿರಂಗಭೂಮಿಯ ಮೇಲೆ ಮೂಡಿಸಿದ್ದಾರೆ.

ಗುಣ ಸ್ವಭಾವಗಳು

ಬಿ.ಆರ್. ಅರಿಷಿಣಗೋಡಿಯವರು ಸ್ವಭಾವತ ಮೃದು. ರಂಗಕಲಾ ಸೇವೆಯ ಸಂದರ್ಭದಲ್ಲಿ ಅನೇಕ ಜನರು, ಕಲಾವಿದರ ಜೊತೆ ವ್ಯವಹರಿಸುವಾಗ ಇವರ ಗುಣ-ಸ್ವಭಾವಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ. ಕಂಪನಿಯ ರಂಗ ಸಂಚಾರದಲ್ಲಿ ಬಂದ ಅನೇಕ ಸ್ಪರ್ಧೆ-ಸವಾಲುಗಳನ್ನು ನಯವಾಗಿ ಸ್ವೀಕರಿಸಿ ಯಶಸ್ಸು ಹೊಂದಿದ್ದಾರೆ. ಜಿದ್ದು ಹಟಗಳಿಂದ ಬಿ.ಆರ್. ಅರಿಷಿಣಗೋಡಿಯವರು ಬಲುದೂರ.

ವೃತ್ತಿರಂಗಭೂಮಿಯಲ್ಲಿ ಒಂದು ಕಂಪನಿ ಇನ್ನೊಂದು ಕಂಪನಿಯ ಜೊತೆ ಸ್ಪರ್ಧೆಗೆ ನಿಲ್ಲುವುದು ಸಹಜ. ಆದರೆ ಬಿ.ಆರ್. ಅರಿಷಿಣಗೋಡಿಯವರ ಕಂಪನಿಯ ಜೊತೆ ಸಮಕಾಲೀನ ವೃತ್ತಿ ಮಂಡಳಿಯ ಒಂದೆರಡು ಕಂಪನಿಗಳು ಒಂದೊಂದು ಸಾರಿ ಸ್ಪರ್ಧೆಯನ್ನು ಒಡ್ಡಿದ್ದನ್ನು ಬಿಟ್ಟರೆ ಅಂತಹ ಯಾವುದೇ ಘಟನೆಗಳು ಜರುಗಿಲ್ಲ. ಹಾಗೆ ಸ್ಪರ್ಧೆಯನ್ನು ಒಡ್ಡಿದಾಗ ಸ್ಪರ್ಧೆಯನ್ನು ಸ್ವೀಕರಿಸಿ ಸ್ಪರ್ಧೆ ಒಡ್ಡಿದ ಕಂಪನಿಗಳಿಗೆ ಸಕಾರಾತ್ಮಕ ಧೋರಣೆಯಿಂದ ಉತ್ತರ ಕೊಟ್ಟಿದೆ. ಇದು ಬಿ.ಆರ್. ಅರಿಷಿಣಗೋಡಿಯವರ

ವಿಶೇಷತೆ. ಸ್ಪರ್ಧೆಯನ್ನು ಸೇಡಿನ ಮನೋಭಾವನೆಯಿಂದ ನೋಡದೇ ಕಂಪನಿಯ ಯಶಸ್ಸಿನ ಕಡೆಗೆ ಲಕ್ಷ ಹರಿಸುತ್ತಿದ್ದರು. ಇಂತಹ ಮನೋಧರ್ಮವನ್ನು ಬಿ.ಆರ್. ಅರಿಷಿಣಗೋಡಿಯವರು ಹೊಂದಿದ್ದರಿಂದ ವೃತ್ತಿಜೀವನದಲ್ಲಿ ಸಮಕಾಲೀನ ಕಂಪನಿ ಮಾಲಿಕರ ಪ್ರೀತಿ, ಗೌರವಗಳಿಗೆ ಪಾತ್ರರಾಗಿದ್ದರು.

ಸುಮಾರು ೩೦ ವರ್ಷಗಳ ವರೆಗೆ ಕಂಪನಿಯಲ್ಲಿ ಕಲಾವಿದೆಯಾಗಿ ರಂಗಸೇವೆ ಮಾಡಿದ ಮಾಲತಿ ಮೈಸೂರು ಅವರು ಅರಿಷಿಣಗೋಡಿಯವರ ಬಗ್ಗೆ ಹೀಗೆ ಹೇಳುತ್ತಾರೆ:

'ಮಾಲಿಕರು ಕಂಪನಿಯ ಎಲ್ಲ ಕಲಾವಿದರನ್ನು ಒಂದೇ ತರದ ಪ್ರೀತಿಯಿಂದ ಕಾಣುತ್ತಿದ್ದರು. ಕಂಪನಿಯ ಯಾರಾದರು ರಂಗಕರ್ಮಿಗಳು ತಪ್ಪು ಮಾಡಿದಾಗ 'ದನ ಕಾಯುವವರೇ' ಎಂದು ಬೈಯುತ್ತಿದ್ದರು. ಅವರಿಗೆ ಗೊತ್ತಿದ್ದ ಬೈಗುಳ ಅದೊಂದೇ. ಕಲಾವಿದರನ್ನು ಬೈದಾಗ ಅವರ ಮನಸ್ಸಿಗೆ ಸಮಾಧಾನವಿರುತ್ತಿರಲಿಲ್ಲ. ಅಷ್ಟು ಮೃದುಸ್ವಭಾವ ಅವರದು'.

ಕಂಪನಿ ಹೆಚ್ಚು ಹೆಚ್ಚು ಪ್ರಯೋಗ ಮಾಡಿದಾಗಲೆಲ್ಲ ಕಂಪನಿ ಕಲಾವಿದರನ್ನು ಸನ್ಮಾನಿಸುವುದು ಅರಿಷಿಣಗೋಡಿಯವರಿಗೆ ಪ್ರೀತಿಯ ಕೆಲಸ. ಒಮ್ಮೆ 'ಬಸ್ ಕಂಡಕ್ಟರ್' ನಾಟಕದ ೧೫೧೧ನೆಯ ಪ್ರಯೋಗಕ್ಕೆ ಚಲನಚಿತ್ರ ತಾರಾಪತ್ನಿಗಳಾದ ಅಂಬರೀಷ ಹಾಗೂ ಸುಮಲತಾರನ್ನು ಕರೆಸಿ ಅವರಿಂದ ಕಲಾವಿದರೆಲ್ಲರಿಗೂ ಸನ್ಮಾನ ಮಾಡಿಸಿ, ತಲಾ ಒಂದು ಸಾವಿರ ರೂಪಾಯಿಗಳನ್ನು ನೀಡಿದರು. ಇದು ಅರಿಷಿಣಗೋಡಿಯವರ ಕಲಾವಿದರ ಬಗ್ಗೆ ಇದ್ದ ಗೌರವವನ್ನು ಸೂಚಿಸುತ್ತದೆ.

ಬಿ.ಆರ್. ಅರಿಷಿಣಗೋಡಿಯವರ ಸೋದರಳಿಯ ರಮೇಶ ಮೆಳ್ಳಿಯವರು ಇವರ ಗುಣ ಸ್ವಭಾವಗಳ ಬಗ್ಗೆ ಹೀಗೆ ಹೇಳುವರು:

'ಬಿ.ಆರ್. ಅರಿಷಿಣಗೋಡಿಯವರು ಸ್ವಲ್ಪ ಮೃದುಸ್ವಭಾವದರು. ಸಾದಾ ಸೀದಾ ಸರಳ ಜೀವಿಗಳು. ಬಿ.ಆರ್. ಅರಿಷಿಣಗೋಡಿಯವರು ಒಂದು ಸಾರಿ ಒಬ್ಬರ ಬಗ್ಗೆ ಅಪನಂಬಿಕೆಯಾದರೆ ಜೀವನ ಪೂರ್ತಿ ಅವರನ್ನು ಅಪನಂಬಿಕೆಯಿಂದಲೇ ಕಾಣುವ ಸ್ವಭಾವದವರು. ತನ್ನವರು ಎನ್ನುವವರಿಗೆ ಆರ್ಥಿಕ ಸಹಾಯ ಮಾಡಿದ್ದಾರೆ. ಹೆಚ್ಚಾಗಿ ಕಂಪನಿ ಸಂಗಡ ಇರುತ್ತಿದ್ದರಿಂದ ಹೆಂಡಿರ ಮಕ್ಕಳ ಸಂಪರ್ಕ ಕಡಿಮೆ. ಕಂಪನಿ ಬಂದು ಮಾಡಿ ಬಂದ ನಂತರ ಕೌಟುಂಬಿಕ ಬದುಕಿಗೆ ಹೊಂದಿಕೊಳ್ಳುತ್ತಾರೋ ಇಲ್ಲವೋ ಅಂತ ತಿಳಿದುಕೊಂಡಿದ್ವಿ, ಆದರೂ ಹೊಂದಿಕೊಂಡಿದ್ದಾರೆ. ಕುಟುಂಬ ವರ್ಗದವರ ವ್ಯವಹಾರದಲ್ಲಿ ನಿರ್ಲಿಪ್ತರಾಗಿದ್ದಾರೆ. ಮಕ್ಕಳು ದೊಡ್ಡವರಾಗಿದ್ದಾರೆ. ಅವರ ಬಾಳ್ವೆ ಅವರಿಗೆ ಎಂದು ಹೇಳುತ್ತಾ ಅತ್ತ ತಲೆ ಹಾಕದೇ ಇರುವುದು ಅವರ ಸ್ಥಿತ ಪ್ರಜ್ಞೆಯನ್ನು ತೋರಿಸುತ್ತದೆ. ಹೆಂಡಿರು ಮಕ್ಕಳಾರೂ ಅವರ ಎದುರಿಗೆ ನಿಂತು ಮಾತಾಡಿದ್ದು ಇಲ್ಲ. ಬಿ.ಆರ್. ಅರಿಷಿಣಗೋಡಿಯವರು ಅಕ್ಕ ಲಕ್ಷ್ಮೀಬಾಯಿ ಸಾಯುವವರೆಗೆ ಅಕ್ಕನ ಮುಂದೆ ನಿಂತು ಎಂದೂ ಬೀಡಿ ಸೇದಿದವರಲ್ಲ.' ಇದು ಅಕ್ಕನ ಬಗ್ಗೆ ಇದ್ದ ಗೌರವವನ್ನು

ಸೂಚಿಸುತ್ತದೆ. ರಮೇಶ ಮೆಳ್ಳಿಯವರ ಇಂತಹ ಮಾತುಗಳಿಂದ ಬಿ.ಆರ್. ಅರಿಷಿಣಗೋಡಿಯವರ ಗುಣ ಸ್ವಭಾವಗಳನ್ನು ಅರ್ಥೈಸಬಹುದು.

ಹೀಗೆ ಬಿ.ಆರ್. ಅರಿಷಿಣಗೋಡಿಯವರು ತಮ್ಮ ಸಂಪರ್ಕಕ್ಕೆ ಬಂದ ವ್ಯಕ್ತಿಗಳ, ಕಲಾವಿದರ, ಕುಟುಂಬವರ್ಗದವರ ಬಗ್ಗೆ ತೋರುವ ಪ್ರೀತಿ-ಗೌರವಗಳಿಂದ ತಮ್ಮ ವ್ಯಕ್ತಿತ್ವಕ್ಕೆ ಮೆರಗನ್ನು ತಂದು ಕೊಂಡಿದ್ದಾರೆ.

ಅಧ್ಯಾಯ ೫

ನಾಟಕ ರಚನೆ

ಅ. ನಾಟಕಗಳ ಸಮೀಕ್ಷೆ

ಗರೀಬಿ ಹಟಾವೊ-ಲಂಚ ಸಾಮ್ರಾಜ್ಯ-ಗಂಡೆದೆಯ ಗೌರಿ-
ಬಡವರೂ ನಗಬೇಕು-ಸಂಗ್ಯಾ-ಬಾಳ್ಯಾ-ಮಾವನ ಮನೆ-ಬಸ್ ಕಂಡಕ್ಟರ್-
ಹೆಣ್ಣುಮಗಳು-ಕಣ್ಣೆದ್ದೂ ಕುರುಡ-ಸೈನಿಕನ ಸಹೋದರಿ-ಇಲ್ಲಿಗೆ ಬಂತೋ
ಸಂಗಯ್ಯಾ-ಗೀಗೀ ಮೇಳದ ಗಂಗವ್ವ

ಆ. ನಾಟಕಗಳ ಭಾಷಿಕ, ಸಾಹಿತ್ಯಿಕ ವಿಶ್ಲೇಷಣೆ

ಭಾಷೆ-ಸಂಭಾಷಣೆ-ಹಾಡು ಮತ್ತು ಸಂಗೀತ-ನಾಟಕದ ಪದ್ಯಗಳು-
ಪ್ರಾಸ-ಅನ್ಯ ಭಾಷಾ ಬಳಕೆ-ಆಡುಮಾತುಗಳು-ಅಲಂಕಾರ-ಬೈಗುಳಗಳು-
ಗಾದೆಗಳು

ಅರಿಷಿಣಗೋಡಿಯವರ ನಾಟಕಗಳ ಒಟ್ಟು ನೋಟ

ಅಧ್ಯಾಯ ೫

ನಾಟಕಗಳ ರಚನೆ

ಅರಿಷಿಣಗೋಡಿಯವರು ೧೯೬೧ರಿಂದ ಇಲ್ಲಿಯವರೆಗೆ ಅಂದರೆ ೨೦೧೧ರವರೆಗೆ ಒಟ್ಟು ಹದಿನಾಲ್ಕು ನಾಟಕಗಳನ್ನು ಬರೆದಿದ್ದಾರೆ. ಇವುಗಳಲ್ಲಿ 'ಗೀಗೀ ಮೇಳದ ಗಂಗವ್ವ' ಎಂಬ ನಾಟಕ ಅಪೂರ್ಣವಾಗಿದೆ. 'ಆಸ್ತಿಯ ಪಾಲು' ಮತ್ತು 'ನಕಲಿ ಸಂಪನ್ನರು' ಎಂಬ ಎರಡು ನಾಟಕಗಳು ಲಭ್ಯವಿಲ್ಲ.

ಲಂಚ ಸಾಮ್ರಾಜ್ಯ, ಹೆಣ್ಣುಮಗಳು ನಾಟಕಗಳ ರಚನೆಗೆ ಕಮತಗಿಯಲ್ಲಿ ನಡೆದ ಘಟನೆಗಳು ಕಾರಣವಾಗಿವೆ. ಜೀವನದಲ್ಲಿ ತಾವು ಸ್ವತಃ ಅನುಭವಿಸಿದ ಅನುಭವಗಳು, ನೋಡಿ ಕೇಳಿ ಸ್ವಾಧ್ಯಾಯದಿಂದ ತಿಳಿದ ಹಲವಾರು ವಿಷಯಗಳು ಉಳಿದ ನಾಟಕಗಳ ರಚನೆಗೆ ಕಾರಣೀಭೂತವಾಗಿವೆ. ಕಂಪನಿ ನಾಟಕಕಾರರು ಸಾಮಾನ್ಯವಾಗಿ ಕಥೆಯನ್ನು ಹುಡುಕುತ್ತಾ ದೂರ ಹೋಗುವುದಿಲ್ಲ. ಪಿ.ಬಿ. ಧುತ್ತರಗಿಯವರು ಹೇಳಿದಂತೆ 'ನನ್ನ ನಾಟಕದ ಪಾತ್ರ ಸನ್ನಿವೇಶಗಳು ನಮ್ಮೂರ ಸೀಮೆಯಿಂದ ೨೦-೩೦ ಕಿ.ಮೀ. ವ್ಯಾಪ್ತಿಯೊಳಗೇ ಸುತ್ತುತ್ತವೆ'[೧] ಎನ್ನುವರು. ಈ ಮಾತು ಕಂಪನಿ ನಾಟಕಕಾರರಾದ ಬಿ.ಆರ್. ಅರಿಷಿಣಗೋಡಿಯವರಿಗೂ ಅನ್ವಯಿಸುತ್ತದೆ. ತಮ್ಮ ಮನೆಯಲ್ಲಿ ನಡೆದ ಘಟನೆ, ಪಕ್ಕದ ಊರಿನಲ್ಲಿ ಸಂಭವಿಸಿದ ಘಟನೆಗಳನ್ನು ಎತ್ತಿಕೊಂಡು ನಾಟಕದ ರೂಪಕೊಟ್ಟು ಊರುಗಳಲ್ಲಿ ಘಟಿಸಿದ ಮನೆಮನೆಯ ಘಟನೆಗಳು ನಾಟಕಗಳಾಗಿ ರಂಗಪ್ರಯೋಗಕ್ಕೆ ಒಳಪಟ್ಟಿರುವುದನ್ನು ಕಾಣುತ್ತೇವೆ.

ಅರಿಷಿಣಗೋಡಿಯವರಿಗೆ ಸುತ್ತಲಿನ ಘಟನೆಗಳ ಜೊತೆ ಕಾದಂಬರಿ, ಕಥೆ, ಪತ್ರಿಕೆಗಳ ಓದಿನಿಂದ ನಾಟಕಕ್ಕೆ ಬೇಕಾದ ಕಥಾದ್ರವ್ಯ ದೊರೆತದ್ದುಂಟು. ವಿದ್ಯಾರ್ಥಿ ಜೀವನದಲ್ಲಿ ಮಯೂರ, ತುಷಾರ, ಮಲ್ಲಿಗೆ, ಕಸ್ತೂರಿ, ಕರ್ಮವೀರ ಮುಂತಾದ ಪತ್ರಿಕೆಗಳನ್ನು ಓದುವ ಹವ್ಯಾಸವನ್ನಿಟ್ಟುಕೊಂಡಿದ್ದರು. ಇವುಗಳಲ್ಲದೆ ಕಥೆ, ಕಾದಂಬರಿಗಳನ್ನು ಓದುವಾಗ ಅರಿಷಿಣಗೋಡಿಯವರಿಗೆ ನಾಟಕಕ್ಕೆ ಬೇಕಾದ ಪ್ಲಾಟುಗಳು, ಪಾತ್ರಗಳು ಸೃಷ್ಟಿಯಾಗಿವೆ. ಇವತ್ತೂ ಕೂಡ ಅರಿಷಿಣಗೋಡಿಯವರ ಬ್ಯಾಗನ್ನು ನೋಡಿದರೆ ಅದರಲ್ಲಿ ಯಾವುದಾದರೊಂದು ಮಾಸಿಕ ಪತ್ರಿಕೆ ಇಲ್ಲವೆ ಒಂದು ಕಾದಂಬರಿ ಇರುವದನ್ನು ಕಾಣುತ್ತೇವೆ.

ಎಚ್.ಟಿ. ಮಹಾಂತೇಶ ಶಾಸ್ತ್ರಿ ಎಚ್.ಎನ್. ಹೂಗಾರ, ಎಚ್.ಆರ್. ಭಸ್ಮೆ, ಟಿ.ಕೆ. ಮೊಹಮದ್ ಅಲಿ, ಎಸ್.ಎಸ್. ಜೋಶಿ, ಕೆ.ಎನ್. ಸಾಳುಂಕೆ, ಪಿ.ಬಿ. ಧುತ್ತರಗಿ ಇವರ ನಾಟಕಗಳನ್ನು ನೋಡಿ, ಓದಿ ನನ್ನ ಅನುಭವ ದ್ರವ್ಯಗಳನ್ನು ಹೆಚ್ಚಿಸಿಕೊಂಡಿದ್ದೇನೆ ಎನ್ನುವರು.

ಅರಿಷಿಣಗೋಡಿಯವರು ಏಕಾಂಗಿಯಾಗಿ ಕುಳಿತು ಬರೆದರೆ ರಂಗನಾಟಕ ಸೃಷ್ಟಿಯಾಗುವುದಿಲ್ಲ ಎನ್ನುತ್ತಾರೆ. ರಚಿಸಿದ ನಾಟಕವನ್ನು ರಂಗಾಸಕ್ತರ ಮುಂದೆ ಓದಬೇಕು, ಅವರ ಜೊತೆ ರಂಗಪ್ರಯೋಗ ಸಾಧ್ಯತೆಯ ಬಗ್ಗೆ ಚರ್ಚಿಸಬೇಕು, ಚರ್ಚೆಯಲ್ಲಿ ಬಂದ ಸಲಹೆಗಳನ್ನು ನಾಟಕದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವರು. ಅರಿಷಿಣಗೋಡಿಯವರ ನಾಟಕಗಳ ಜನಪ್ರಿಯತೆಗೆ ಈ ಒಂದು ಸೂತ್ರವೂ ಕಾರಣವಾಗಿರಬೇಕು. ಅರಿಷಿಣಗೋಡಿಯವರು ಬಹಳಷ್ಟು ನಾಟಕಗಳನ್ನು ಬರೆದಿದ್ದು ಗದುಗಿನಲ್ಲಿಯೇ.

ಆವತ್ತಿನ ಕಾಲದಲ್ಲಿ ಕಂಪನಿ ನಾಟಕಗಳಿಗೆ ಬೇಕಾದ ನಟ-ನಟಿಯರು, ನಾಟಕಕಾರರು, ನಿರ್ದೇಶಕರು ಗದಗದಲ್ಲಿಯೇ ಹೆಚ್ಚು ಸಂಖ್ಯೆಯಲ್ಲಿ ಇರುತ್ತಿದ್ದರು. ತಾವು ಬರೆದ ನಾಟಕದ ಸನ್ನಿವೇಶ, ಪಾತ್ರಗಳ ಬಗ್ಗೆ ಚರ್ಚಿಸಿ ಅಲ್ಲಿಯೇ ನನ್ನ ನಾಟಕದ ತಾಲೀಮಿನ ಸಂದರ್ಭದಲ್ಲಿ ವಿದ್ವಾಂಸರಿಂದ ತಿದ್ದಿಸಿಕೊಂಡು ರಂಗಪ್ರಯೋಗಕ್ಕೆ ಒಳಪಡಿಸುತ್ತಿದ್ದೆ ಎಂದು ಅರಿಷಿಣಗೋಡಿಯವರು ನಮ್ರವಾಗಿ ಹೇಳುವರು.

ಇಷ್ಟು ಹಿನ್ನೆಲೆಯಲ್ಲಿ ಬಿ.ಆರ್. ಅರಿಷಿಣಗೋಡಿಯವರ ಎಲ್ಲಾ ನಾಟಕಗಳನ್ನು ಈ ಮುಂದೆ ಸಮೀಕ್ಷಿಸಲಾಗಿದೆ.

ಅ. ನಾಟಕಗಳ ಸಮೀಕ್ಷೆ

ಗರೀಬಿ ಹಟಾವೊ

ವೀರನಗೌಡ ತರುಣ ಶ್ರೀಮಂತ ರೈಸ ಮಿಲ್ ಹಾಗೂ ಆಯಿಲ್ ಮಿಲ್‌ಗಳ ಮಾಲಿಕ ಬಿಳುಪು ಹತ್ತಿದ ಹೆಂಡತಿಯನ್ನು ನಿರಾಕರಿಸಿ ರೈಸಮಿಲ್ ಹಾಗೂ ಆಯಿಲ್ ಮಿಲ್ಲಿನ ಮಾಲಿಕನಾಗಿ ಬಡವರ, ಕಾರ್ಮಿಕರ, ಕೂಲಿಕಾರರ ಭಾವನೆಗಳಿಗೆ ಸ್ಪಂದಿಸದೆ ಅವರ ಶೋಷಣೆಯನ್ನು ಶಂಕ್ರಣ್ಣ ಎಂಬ ಮ್ಯಾನೇಜರನ ಮುಖಾಂತರ ನಿರಂತರವಾಗಿ ಮಾಡುತ್ತ ನಡೆದ ದುಷ್ಟ ಕಾಮಾಂಧ. ಅವನ ತಂಗಿ ಡಾ. ಸರೋಜಾ ಮಾನವೀಯತೆಯ ಸಾಕಾರಮೂರ್ತಿಯಾಗಿ ಈ ನಾಟಕದಲ್ಲಿ ಕಂಡುಬರುತ್ತಾಳೆ. ಬಡವರ, ಕೂಲಿ ಕಾರ್ಮಿಕರ, ಅಸಹಾಯಕರ ಸೇವೆಯನ್ನು ಮಾಡುತ್ತಾ ಅಣ್ಣನಾದ ವೀರನಗೌಡನ ಎಲ್ಲ ಕೃತ್ಯಗಳನ್ನು ಪ್ರತಿಭಟಿಸುತ್ತಾ ಅಣ್ಣನಿಂದ ದೂರವಾಗಿ ದವಾಖಾನೆಯಲ್ಲಿಯೇ ಇದ್ದು ಬಡ ರೋಗಿಗಳ ಸೇವೆ ಮಾಡುತ್ತ ದಿನ ಕಳೆಯುತ್ತಿರುವ ಆದರ್ಶ ಹೆಣ್ಣುಮಗಳು.

ಗುರುಬಸಪ್ಪ ಶೆಟ್ಟಿ ದೊಡ್ಡಹೊಟ್ಟೆಯ ಬೊಜ್ಜು ಬೆಳೆಸಿದ ಕಳ್ಳಸಂತೆ, ಕಲಬೆರಕೆಯನ್ನು ಮಾಡಿ ಆಹಾರ ಧಾನ್ಯಗಳನ್ನು ಮಾರಾಟ ಮಾಡುವ ನಕಲಿ ನೋಟಿನ ಏಜೆಂಟನಾಗಿದ್ದನು. ವೀರನಗೌಡನ

ಜೊತೆಗೆ ಕೂಡಿ ಅವನ ಎಲ್ಲ ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತ ಬಡವರ ಶೋಷಣೆ ಮಾಡುವ ಗುರುಬಸಪ್ಪ ಶೆಟ್ಟಿ ವಯಸ್ಸಾದರೂ ಹೆಣ್ಣುಗಳನ್ನು ನೋಡಿದರೆ ಹಗುರವಾಗಿ ಭಾವಿಸುವ ಸ್ವಭಾವದವನಾಗಿ ಕೊನೆಗೆ ಜೈಲು ಸೇರುವನು.

ರಾಜೇಶ ಆದರ್ಶ ತತ್ವಗಳನ್ನು ಇಟ್ಟುಕೊಂಡ ಬಿ.ಇ. ಪದವೀಧರ ಗುರುಬಸಪ್ಪ ಶೆಟ್ಟಿಯ ಮುಖಾಂತರ ಶ್ರೀಮಂತ ವೀರನಗೌಡನ ಫ್ಯಾಕ್ಟರಿಯಲ್ಲಿ ನೌಕರಿಯನ್ನು ಪಡೆದುಕೊಂಡ ತರುಣ. ಕಾರ್ಮಿಕರ ಮುಂದಾಳು, ಕಾರ್ಮಿಕರ ಪರವಾಗಿ ಹೋರಾಟ, ಸಂಘಟನೆಯಲ್ಲಿ ತೊಡಗಿ ವೀರನಗೌಡನ ಫ್ಯಾಕ್ಟರಿಯಿಂದ ನೌಕರಿ ಕಳೆದುಕೊಂಡವ. ಇವನ ತಂಗಿ ಶೋಭಾ ಅಪ್ರತಿಮ ಚೆಲುವೆ, ಆದರ್ಶಗಳನ್ನು ಅಳವಡಿಸಿಕೊಂಡ ತರುಣಿ. ರಾಮು ಶ್ರೀಮಂತ ವೀರನಗೌಡನ ಮನೆಯ ಅಡುಗೆ ಆಳು ಹಾಗೂ ಡಾ. ಸರೋಜಾಳಲ್ಲಿದ್ದ ನರ್ಸ್ ಕಮಲಾಳ ಪ್ರೇಮಿ. ರಂಗ, ಚಂದ್ರು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಲಿದ್ದ ಕೂಲಿ ಕಾರ್ಮಿಕರು ಹಾಗೂ ವೀರನಗೌಡರ ಕಾರಸ್ಥಾನಕ್ಕೆ ಬಲಿಯಾದ ಅಸಹಾಯಕ ಪಾತ್ರಗಳಾಗಿ ಈ ನಾಟಕದಲ್ಲಿ ಕಂಡುಬರುತ್ತವೆ.

ಫ್ಯಾಕ್ಟರಿಯ ಬೆಳ್ಳಿ ಹಬ್ಬದ ಆಚರಣೆ ಹಾಗೂ ಆಯಿಲ್ ಮಿಲ್ ಹೊಸದಾಗಿ ಪ್ರಾರಂಭಿಸುವ ಸಂಭ್ರಮದ ಉದ್ದೇಶದಿಂದ ವೀರನಗೌಡರು ಬೆಂಗಳೂರಿಗೆ ಅತಿಥಿಗಳನ್ನು ಹಾಗೂ ಮಂತ್ರಿಗಳನ್ನು ಆಹ್ವಾನಿಸಲು ಹೋಗಿದ್ದಾರೆ. ಇತ್ತ ವೃತ್ತಪತ್ರಿಕೆಗಳಲ್ಲಿ ಕಲಕತ್ತಾ ಹಾಗೂ ಮುಂಬಯಿ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಮಾಲಿಕರ ವಿರುದ್ಧ ಕಾರ್ಮಿಕರ ಸತ್ಯಾಗ್ರಹದ ಪರಿಣಾಮಗಳನ್ನು ತಿಳಿದುಕೊಂಡ ವೀರನಗೌಡ ಹಾಗೂ ಮ್ಯಾನೇಜರ ಶಂಕ್ರಣ್ಣ ಕಾರ್ಮಿಕರನ್ನು ಕಾರ್ಮಿಕ ನಾಯಕರನ್ನು ಯಾವ ರೀತಿ ಬಗ್ಗುಬಡಿಯಬೇಕು ಅನ್ನುವ ತಂತ್ರಗಾರಿಕೆಯನ್ನು ರೂಪಿಸುತ್ತ ಫ್ಯಾಕ್ಟರಿಯ ಬೆಳ್ಳಿಹಬ್ಬದ ಆಚರಣೆ ಹಾಗೂ ಹೊಸದಾಗಿ ಆಯಿಲ್ ಮಿಲ್ ಪ್ರಾರಂಭದ ಸಮಾರಂಭಕ್ಕೆ ಕಾರ್ಮಿಕರಿಂದ ತೊಂದರೆಯಾಗಬಾರದೆಂದು ಅವರಿಗೆ ಕೊಡುವ ಸಂಬಳವನ್ನು ಸರಿಯಾದ ರೀತಿಯಲ್ಲಿ ಕೊಡುವರು.

ದೂರದ ಬೇರೆ ಬೇರೆ ನಗರಗಳಲ್ಲಿ ಮಾಲಿಕರ ವಿರುದ್ಧ ಕಾರ್ಮಿಕರು ತಮ್ಮ ಬೇಡಿಕೆಗಾಗಿ ಸಂಘಟಿತರಾಗಿ ಹೋರಾಡುವದನ್ನು ಅರಿತುಕೊಂಡ ಕಾರ್ಮಿಕರು ಇಲ್ಲಿಯೂ ವೀರನಗೌಡರ ವಿರುದ್ಧ ಹೋರಾಟ ಮಾಡಲು ಹೊಸದಾಗಿ ನೌಕರಿಗೆ ಸೇರಿಕೊಂಡ ರಾಜೇಶನ ಮುಂದಾಳತ್ವದಲ್ಲಿ ಸತ್ಯಾಗ್ರಹ ಮಾಡುವರು. ಹೋರಾಟದಲ್ಲಿ ಲಾಟಿ ಚಾರ್ಜ್ ಆಗಿ ರಾಜೇಶನ ತಲೆಗೆ ಪೆಟ್ಟು ಬೀಳುವದು, ಮನುಷ್ಯ ಸ್ವಾರ್ಥಿ ಯಾರೂ ಬೆನ್ನು ಹತ್ತುವುದಿಲ್ಲ ಎಂಬ ವಿಚಾರವನ್ನು ರಾಜೇಶನಿಗೆ ತಂಗಿ ಶೋಭಾ ಮನವರಿಕೆ ಮಾಡಿಕೊಡಲು ಪ್ರಯತ್ನಿಸುವಳು. ಇವಳ ಮಾತನ್ನು ಕೇಳದ ರಾಜೇಶ ಕಾರ್ಮಿಕರಿಗೆ ಧ್ವನಿ ಕೊಡಬೇಕು ಅವರ ಎಲ್ಲ ಬೇಡಿಕೆಗಳು ಈಡೇರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುವನು.

ಇತ್ತ ದುರಹಂಕಾರಿ ಮಾಲಿಕ ವೀರನಗೌಡ ರಾಜೇಶನನ್ನು ನೌಕರಿಯಿಂದ ತೆಗೆದುಹಾಕುವನು. ನೌಕರಿಯನ್ನು ಕಳೆದುಕೊಂಡ ರಾಜೇಶ ನಿರ್ಗತಿಕನಾಗುವನು. ತಂಗಿ ಶೋಭಾ ಡಾ. ಸರೋಜಾಳ ಸಹಾಯದಿಂದ ಶಿಶುವಿಹಾರದ ಸಹಾಯಕಳಾಗಿ ಕೆಲಸಕ್ಕೆ ಸೇರುವಳು. ಶೋಭಾಳ ಮೇಲೆ ಮನಸಿಟ್ಟ ವೀರನಗೌಡ ಅವಳನ್ನು ಬಯಸಿ ಪ್ರಯತ್ನಪಟ್ಟು ಪೆಟ್ಟು ತಿಂದು ಮರಳುವನು. ಹೇಗಾದರೂ ಮಾಡಿ ಆಕೆಯನ್ನು ತನ್ನ ತೆಕ್ಕೆಯಲ್ಲಿ ಬಳಸಿಕೊಳ್ಳುವ ಯೋಜನೆ ಮಾಡುವನು. ಸರ್ಕಾರದ ಗರೀಬಿ ಹಟಾವೊ ಹೇಳಿಕೆಗಳಿಂದ ಪ್ರೇರಿತರಾದ ಕಾರ್ಮಿಕ ಸಂಘಟನೆಯ ಚಂದ್ರು, ರಂಗ ಮುಂತಾದವರಿಗೆ ಆಮಿಶಗಳನ್ನು ತೋರಿಸಿ ಅವರನ್ನು ವೀರನಗೌಡನು ತನ್ನತ್ತ ಸೆಳೆದುಕೊಳ್ಳುವನು. ಇತ್ತ ನಿರುದ್ಯೋಗಿಯಾಗಿ ಅಲೆಯುವ ರಾಜೇಶ ಪಟ್ಟಣಕ್ಕೆ ಹೋಗಿ ಸರಕಾರಿ ಸಿಮೆಂಟ ಕಂಪನಿಯಲ್ಲಿ ಸುಪರವೈಜರ್ ಹುದ್ದೆಯನ್ನು ಪಡೆದು ಮರಳಿ ಊರಿಗೆ ಬರುವನು.

ಇತ್ತ ನಾಟಕೀಯವೆನ್ನುವಂತೆ ವೀರನಗೌಡನ ಹೆಂಡತಿ ಮುಂಬಯಿಯಲ್ಲಿ ಸತ್ತ ಸುದ್ದಿ ತಾರಿನ ಮುಖಾಂತರ ಬರುವುದು. ಮುಂಬಯಿಗೆ ಡಾ. ಸರೋಜಾ ಹೋಗಲು ತಯಾರಾಗುವಳು, ಆಗ ಒಂಟಿಯಾದ ಶೋಭಾಳನ್ನು ಇದೆ ವೇಳೆಯಲ್ಲಿ ಹೇಗಾದರೂ ಮಾಡಿ ತನ್ನ ಕಾಮದ ದಾಹವನ್ನು ತಣಿಸಿಕೊಳ್ಳಲು ಕಾರ್ಮಿಕರಾದ, ಕುಡುಕರಾದ ಚಂದ್ರು ಮತ್ತು ರಂಗರನ್ನು ಕಳಿಸಿ ಶೋಭಾಳನ್ನು ಕೈಕಾಲು ಕಟ್ಟಿ ಎತ್ತಿಕೊಂಡು ಬರುವ ವಿಚಾರವನ್ನು ವೀರನಗೌಡನು ಅವರಿಗೆ ಹೇಳುವನು. ಈ ವಿಷಯವನ್ನು ಕೇಳಿಸಿಕೊಂಡ ಮನೆ ಅಡಿಗೆಯವನಾದ ರಾಮು ಇಲ್ಲಿ ನಡೆದ ಎಲ್ಲ ವಿಚಾರವನ್ನು ಡಾ. ಸರೋಜಾಳ ಮುಂದೆ ತಿಳಿಸುವನು. ಹೆಂಡ ಕುಡಿದ ಅಮಲಿನಲ್ಲಿದ್ದ ರಂಗ, ಚಂದ್ರು, ಶೋಭಾಳ ವೇಷಭೂಷಣದಲ್ಲಿದ್ದ ಡಾ. ಸರೋಜಾಳನ್ನು ಹೊತ್ತುಕೊಂಡು ವೀರನಗೌಡನ ಮುಂದೆ ಅವನ ಮನೆಯಲ್ಲಿ ತಂದು ನಿಲ್ಲಿಸುವರು, ಶೋಭಾಳ ಬದಲಾಗಿ ತಂಗಿಯಾದ ಡಾ. ಸರೋಜಾಳನ್ನು ನೋಡಿ ಅಣ್ಣ ವೀರನಗೌಡನಿಗೆ ತನ್ನ ತಪ್ಪಿನ ಅರಿವಾಗಿ ತಂಗಿ ಡಾ. ಸರೋಜಾಳಿಂದ ಹಿತನುಡಿಗಳನ್ನು ಕೇಳಿ ಪರಿವರ್ತನೆಯಾಗಿ ತನ್ನ ಆಸ್ತಿಯಲ್ಲಿ ತನಗೆ ಬೇಕಾದಷ್ಟು ಇಟ್ಟುಕೊಂಡು ಉಳಿದ ಸ್ಥಿರ ಹಾಗೂ ಚರಾಸ್ತಿಗಳನ್ನು ಬಡವರಿಗೆ ದಾನ ರೂಪದಲ್ಲಿ ಕೊಟ್ಟು, ಆ ದಾನದ ದುರ್ಬಳಕೆಯಾಗದಂತೆ ನೋಡುತ್ತಾ ಶೋಭಾಳ ಕ್ಷಮೆ ಕೇಳುವನು. ಆ ವೇಳೆಯಲ್ಲಿ ರಾಜೇಶನಿಗೆ ತನ್ನ ತಂಗಿ ಡಾ. ಸರೋಜಾಳನ್ನು ಕೊಟ್ಟು ಮದುವೆ ಮಾಡುವ ವಿಚಾರವನ್ನು ಹಾಗೆಯೇ ತಾನು ಮನಸ್ಸು ಮಾಡಿದ ಶೋಭಾಳನ್ನು ತಂಗಿಯ ಆಶೆಯಂತೆ ಮದುವೆಯಾಗಲು ನಿರ್ಧರಿಸಿ ಈ ಎಲ್ಲ ವಿಚಾರಗಳನ್ನು ಶೋಭಾಳ ಅಣ್ಣ ರಾಜೇಶನ ಮುಂದೆ ತಿಳಿಸುವನು. ಹಾಗೆಯೇ ತಂಗಿ ಡಾ. ಸರೋಜಾಳನ್ನು ಮದುವೆಯಾಗಿ ಸರ್ಕಾರಿ ನೌಕರಿಗೆ ರಾಜಿನಾಮೆ ಕೊಟ್ಟು ಫ್ಯಾಕ್ಟರಿಯ ಜವಾಬ್ದಾರಿಯನ್ನು ಹೊರಲು ರಾಜೇಶನನ್ನು ವೀರನಗೌಡನು ಕೇಳಿಕೊಳ್ಳುವನು. ಡಾ. ಸರೋಜಾಳಲ್ಲಿದ್ದ ಕಮಲಾ ಹಾಗೂ ವೀರನಗೌಡನ ಮನೆಯಲ್ಲಿದ್ದ ರಾಮು ಅವರ ಪ್ರೀತಿಯ ವಿಷಯವನ್ನು ತಿಳಿದುಕೊಂಡ ಡಾ. ಸರೋಜಾ

ಅವರಿಬ್ಬರಿಗೂ ಮಾಲೆಗಳ ವಿನಿಮಯದ ರೂಪದಲ್ಲಿ ಮದುವೆಗೆ ಸಿದ್ಧಗೊಳಿಸುವಳು. ಇಲ್ಲಿ ಒಂದೇ ವೇದಿಕೆಯ ಮೇಲೆ ಮೂರು ಮದುವೆಗಳು ಆಗಬಾರದು ಎಂದು ರಾಮು ಮೂಢನಂಬಿಕೆಯ ವಿಚಾರವನ್ನು ವ್ಯಕ್ತಪಡಿಸಿದಾಗ ಸರೋಜಾ ೩ ಅಂಕಿಯ ಗುಣಗಳನ್ನು ಹೇಳುವಳು. ಆಗ ಮೂರು ದಂಪತಿಗಳ ಮದುವೆ ನೆರವೇರುವುದು. ಅತ್ತ ಗುರುಪಾದ ಶೆಟ್ಟಿ ಹಾಗೂ ಅವನ ನಕಲಿ ನೋಟಿನ ಜಾಲದಲ್ಲಿ ರಂಗ, ಚಂದ್ರು ಸರ್ಕಾರದ ಅಧಿಕಾರಿಗಳಿಂದ ಜೈಲಿಗೆ ಹೋಗುವರು. ಇತ್ತ ಡಾ. ಸರೋಜಾ ರಾಜೇಶ, ವೀರನಗೌಡ ಹಾಗೂ ಶೋಭಾ ಮದುವೆಯಾಗಿ ಸುಖ ಸಂಸಾರದಲ್ಲಿ ಮುನ್ನಡೆಯುವರು. ಇದರೊಂದಿಗೆ ನಾಟಕ ಅಂತ್ಯ ಪಡೆಯುತ್ತದೆ.

ಸಮಕಾಲೀನ ಸಮಸ್ಯೆಗಳಾದ ಬಡವರಿಗೆ ಅಂಟಿಕೊಂಡ ಓ.ಸಿ. ಹೆಂಡ, ಬಡತನದ ನಿವಾರಣೆ ಮಾಡುವದಕ್ಕಾಗಿ ಸರ್ಕಾರದ ಯೋಜನೆಗಳು ಆ ಯೋಜನೆಗಳನ್ನು ಜನರಲ್ಲಿ ಜಾಗ್ರತಿ ಮೂಡಿಸುವದೇ ಈ ನಾಟಕದ ಪ್ರಮುಖ ವಿಚಾರವಾಗಿದೆ. ಶ್ರೀಮಂತರ ಶೋಷಣೆಯನ್ನು ಪ್ರತಿಭಟಿಸುವ ಹೋರಾಟ, ಸತ್ಯಾಗ್ರಹ, ಸಂಘಟನೆ, ಏಳುಬೀಳುಗಳನ್ನು ಈ ನಾಟಕದ ಮುಖಾಂತರ ಸಮಾಜಕ್ಕೆ ತಿಳಿಸಿ ಈ ತಿಳುವಳಿಕೆಯ ಸಂದೇಶವನ್ನು ಸಾರುವದು ನಾಟಕಕಾರರ ಆಶಯವಾಗಿದೆ.

ನಿರೂಪಣಾಶೈಲಿ ನಾಟಕ ನೋಡುಗರನ್ನು ಅಥವಾ (ಓದುಗರನ್ನು) ಓದಿಸಿಕೊಂಡು ಹೋಗುವ ಅವರ ಸರಳ ಗ್ರಾಮ್ಯ ಮತ್ತು ಶಿಷ್ಟ ಪದಗಳ ಜೋಡಣೆಯಿಂದ ಪ್ರೇಕ್ಷಕರನ್ನು ರಂಜಿಸುವುದರ ಜೊತೆಗೆ ತಿಳುವಳಿಕೆಯನ್ನು ಕೊಡಲು ಸಹಾಯವಾಗುವದು. ನಾಟಕದ ತಂತ್ರಗಾರಿಕೆಗೆ ಅನುಗುಣವಾಗಿ ನಾಟಕಕಾರರು ಇಲ್ಲಿಯ ಪಾತ್ರಗಳ ಸೃಷ್ಟಿ ಮಾಡಿರುವದನ್ನು ಕಾಣುತ್ತೇವೆ.

ಸಂದರ್ಭ ಸನ್ನಿವೇಶಕ್ಕೆ ತಕ್ಕಂತೆ ನಾಟಕದಲ್ಲಿ ಎಲ್ಲ ಪಾತ್ರಗಳಿಗೆ ಸರಿಸಮಾನವಾದ ಅವಕಾಶಗಳನ್ನು ಕೊಟ್ಟಿರುವುದನ್ನು ಕಾಣುತ್ತೇವೆ. ವೃತ್ತಿನಾಟಕದ ಧ್ಯೇಯವಾದ ಮನರಂಜನೆ ಹಾಗೂ ಸಮಾಜದಲ್ಲಿಯ ನಂಬಿಕೆ, ಆಚರಣೆ ಹಾಗೂ ಹಾಸ್ಯದ ಮುಖಾಂತರ ಜನರಲ್ಲಿ ತಿಳುವಳಿಕೆಯನ್ನು ಉಂಟುಮಾಡುವುದರ ಕಡೆಗೆ ಪಾತ್ರಗಳ ಸೃಷ್ಟಿ ಮಾಡಿರುವದನ್ನು ನೋಡುತ್ತೇವೆ. ಪಾತ್ರಗಳು ರಂಗದ ಮೇಲೆ ಸ್ಪಷ್ಟ, ಸರಳ ಹಾಗೂ ಪರಿಣಾಮಕಾರಿಯಾದ ಸಂಭಾಷಣೆಯ ಮುಖಾಂತರ ಗೌರವವನ್ನು ತಂದುಕೊಳ್ಳುತ್ತವೆ. ಈ ನಾಟಕದಲ್ಲಿಯೂ ಕೂಡ ಪಾತ್ರಗಳು ತಮ್ಮ ಇತಿಮಿತಿಯಲ್ಲಿಯೇ ಮುಂದುವರಿಯುವುದನ್ನು ಕಾಣುತ್ತೇವೆ. ಗುರುಬಸಪ್ಪ ಶೆಟ್ಟಿಯ ಪಾತ್ರಕ್ಕೆ ಇನ್ನಷ್ಟು ಅವಕಾಶಗಳನ್ನು ಕೊಟ್ಟಿದ್ದರೆ ಈ ನಾಟಕಕ್ಕೆ ಇನ್ನೂ ಹೆಚ್ಚಿನ ಮೆರುಗು ಬರುತ್ತಿತ್ತೇನೋ ಅನ್ನುವ ಭಾವನೆ ಬರುವುದುಂಟು. ವೀರನಗೌಡ ಇಲ್ಲಿ ದುರಹಂಕಾರಿ, ಕಾಮಾಂಧನಾದರೂ ಕೊನೆಯಲ್ಲಿ ಒಬ್ಬ ಸಾತ್ವಿಕ ಸಮಾಜ ಸುಧಾರಕನಾಗಿ ಪರಿವರ್ತನೆಗೊಂಡಿದ್ದು ದುಷ್ಟನಿಗೂ ಕೂಡ ಪರಿವರ್ತನೆಯಿಂದ ಜನಮಾನಸದಲ್ಲಿ ಗೌರವವಿದೆ ಎಂಬ ನಂಬಿಕೆಯನ್ನು ನಾಟಕಕಾರರು ಸಾಕಾರಗೊಳಿಸಿರುವರು.

ಪ್ರಾಮಾಣಿಕತೆ, ನೈತಿಕತೆ, ಸಮಕಾಲೀನ ಸಮಸ್ಯೆಗಳು, ಸಮಾಜ ಮುಖಿಯಾದ ಸರ್ಕಾರದ ಯೋಜನೆಗಳು, ಹೋರಾಟ, ಸಂಘರ್ಷ, ಸಂಘಟನೆ, ಸತ್ಯಾಗ್ರಹ, ಬಡತನ, ಶೋಷಣೆ ಮುಂತಾದ ವಿಷಯಗಳಿಗೆ ಧ್ವನಿ ತುಂಬಲು ನಾಟಕಕಾರರು ನಾಟಕದಲ್ಲಿ ಪ್ರಯತ್ನಿಸಿರುವುದನ್ನು ಗಮನಿಸಬಹುದು.

೧೯೭೨ರಲ್ಲಿ ಮಾಜಿ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರು ಭಾರತದಿಂದ ಬಡತನವನ್ನು ಕಿತ್ತೊಗೆಯಬೇಕೆಂದು ದೃಢಸಂಕಲ್ಪ ಮಾಡಿದರು. ದೇಶದಲ್ಲಿಯ ಬಡತನವನ್ನು ನಿವಾರಿಸಲು ಅನೇಕ ಯೋಜನೆಗಳನ್ನು ಕೇಂದ್ರ ಸರಕಾರದಿಂದ ತಂದರು. ಅಂತಹ ಯೋಜನೆಗಳಲ್ಲಿ "ಗರೀಬಿ ಹಟಾವೊ" ಎಂಬ ಯೋಜನೆಯು ಒಂದು. ಈ ಯೋಜನೆಯನ್ನೇನೋ ಇಂದಿರಾ ಗಾಂಧಿಯವರು ತಂದರು. ಆದರೆ ಈ ಯೋಜನೆ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳದೆ ವಿಫಲವಾಯಿತು.

ಈ ಯೋಜನೆ ಕೇವಲ ಜಾಹಿರಾತುಗಳಲ್ಲಿ, ಸರಕಾರಿ ಕಡತಗಳಲ್ಲಿ ಕಾಣಿಸಿಕೊಂಡಿತು. ಬಡವರಿಗೆ ಈ ಗರೀಬಿ ಹಟಾವೊ ಯೋಜನೆಯ ಲಾಭ ಎಳ್ಳಷ್ಟೂ ತಟ್ಟಲಿಲ್ಲ. ಈ ಜನಪ್ರಿಯ ಸ್ಲೋಗನ್ನನ್ನು ಬಳಸಿಕೊಂಡು ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಅರಿಷಿಣಗೋಡಿಯವರು ಈ ನಾಟಕವನ್ನು ರಚಿಸಿದರು. ತಲೆಬರಹವನ್ನು ಸಮರ್ಥಿಸುತ್ತ ಕಥೆಯನ್ನು ಸೃಷ್ಟಿ ಮಾಡಿದರು. ಕಥೆಗೆ ಪೂರಕವಾಗುವಂತೆ ಸನ್ನಿವೇಶ, ಘಟನೆ, ಪಾತ್ರಗಳನ್ನು ಸೃಷ್ಟಿಸಿ ರಂಗಪ್ರಯೋಗಕ್ಕೆ ಒಳಪಡಿಸಿದರು.

ದೇಶದಲ್ಲಿ ಅವತ್ತು (ಇವತ್ತು) ಕಾರ್ಮಿಕರು ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಹೋರಾಟ, ಚಳುವಳಿ, ಸತ್ಯಾಗ್ರಹಗಳ ಮುಖಾಂತರ ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇನ್ನೊಂದೆಡೆ ಕಾರ್ಮಿಕರ ಸಂಘಟನೆಗಳನ್ನು ಬಂಡವಾಳಶಾಹಿಗಳು ಸಂಘಟನೆಯ ಮುಖಂಡರಿಗೆ ಆಸೆ-ಆಮಿಷಗಳನ್ನು ತೋರಿಸಿ ಸಂಘಟನೆಗಳನ್ನು ಮುರಿಯುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದರು. ಬಂಡವಾಳಶಾಹಿ ಮತ್ತು ಕಾರ್ಮಿಕರ ನಡುವೆ ನಡೆಯುವ ಸಂಘರ್ಷವನ್ನು ಬಯಲಿಗೆಳೆಯುವುದೇ ಈ ನಾಟಕದ ಉದ್ದೇಶ.

ಈ ನಾಟಕದಲ್ಲಿ ಕಥೆಗೆ ಪೂರಕವಾಗುವಂತೆ ಎಂಟು ಪುರುಷ ಪಾತ್ರಗಳು, ಮೂರು ಸ್ತ್ರೀ ಪಾತ್ರಗಳು ಬರುತ್ತವೆ. ನಾಟಕ ಒಟ್ಟು ಹದಿಮೂರು ಪ್ರವೇಶವನ್ನು ಒಳಗೊಂಡಿದೆ.

ಲಂಚ ಸಾಮ್ರಾಜ್ಯ

ಶ್ರೀಮಂತರ ಕಾಳ ಸಂತೆಯ ವ್ಯವಹಾರವನ್ನು ಬಯಲಿಗೆಳೆಯುವುದೇ ನಾಟಕದ ಉದ್ದೇಶ. ಸಂಪತ್‌ರಾವ ಶಾಸಕ. ಅಧಿಕಾರದ ಬೆನ್ನುಹತ್ತಿದ ಊರ ಮುಖಂಡ, ಕಳ್ಳ ಸಂತೆಯ ವ್ಯವಹಾರದಿಂದ ಎಲ್ಲ ಗಳಿಸಿದವ, ಲಂಚಕೊಟ್ಟಾದರೂ ಅಧಿಕಾರದ ಮಂಚವನ್ನೇರಬೇಕೆಂಬ ಸ್ವಾರ್ಥಿ. ಅದೇ ಊರಿನ ಶಿಲಾಧರ ಬಿ.ಎ. ಪದವೀಧರ. ಶಿಲಾಧರ ಬಡವನಾದರೂ ನ್ಯಾಯ, ನೀತಿ, ಧರ್ಮ, ಆದರ್ಶ, ದೇಶಪ್ರೇಮದ ಹಾದಿಯಲ್ಲಿ ನಡೆಯುವ ನಿಷ್ಠುರವಾದಿ. ಬಡ ನೇಕಾರ ನಿಂಗಪ್ಪ ಹಾಗೂ ಗಂಗವ್ವನ ಒಬ್ಬನೇ ಒಬ್ಬ ಮಗ. ಮೀನಾಕ್ಷಿ

ಎಂ.ಎಲ್.ಎ. ಸಂಪತ್‌ರಾವರ ಒಬ್ಬಳೇ ಮಗಳು. ಪಾರ್ವತಿ ಸಾವುಕಾರ ಸಂಪತ್‌ರಾವರ ಮನೆ ಕೆಲಸದ ಆಳು. ಸಿದ್ಧ ಕುಳ್ಳುಮಾರಿ ಹೊಟ್ಟೆ ಹೊರೆದುಕೊಳ್ಳುವ ಪಾರ್ವತಿಯ ಗಂಡ. ನಂಜಪ್ಪ ಸಂಪತ್‌ರಾವ ಮನೆ ಕೆಲಸದ ಜೊತೆಗೆ ಸಾಹುಕಾರರ ಮನೆಯ ಪೂಜಾರಿಯಾಗಿದ್ದನು. ಪಿ.ಎಸ್.ಐ. ಲಂಚ ರುಸುವತ್ತುಗಳಿಗೆ ಬಲಿಯಾದ ದುಷ್ಟ ಪೊಲೀಸ್ ಅಧಿಕಾರಿ. ಹವಾಲ್ದಾರ, ಕಾನಸ್ಟೇಬಲ್‌ರು, ಲಂಚಗಳಿಗೆ ಬಲಿಯಾಗಿ ಕರ್ತ್ಯವ್ಯ ಮರೆತ ಸರಕಾರಿ ನೌಕರದಾರರು. ರಮೇಶ, ಸಂಪತರಾವರ ಹೆಂಡತಿಯ ತಮ್ಮ ಹಾಗೂ ಸಂಪತರಾವರ ಮಗಳ ಭಾವಿ ಪತಿಯೆಂದು ಭಾವಿಸಿ ಅವರ ಎಲ್ಲಾ ಕಳ್ಳದಂಧೆ ವ್ಯವಹಾರಕ್ಕೆ ಸಹಕಾರಿಯಾಗಿದ್ದನು. ಸಂಪತರಾವರ ಜ್ಯೋತಿ ಆಯಿಲ್ ಮಿಲ್ ಮ್ಯಾನೇಜರನಾಗಿ ಅಧಿಕಾರ ಸ್ವೀಕರಿಸಿದವನು. ತನ್ನ ಅಧಿಕಾರದಿಂದ ಕಾರ್ಮಿಕರನ್ನು ಶೋಷಣೆಗೆ ಒಳಪಡಿಸುತ್ತಾ ಕಾರ್ಮಿಕರ ಮೇಲೆ ಹಿಡಿತ ಸಾಧಿಸಿದವನು.

ಶಿಲಾಧರ ಬಿ.ಎ. ಪದವಿಯನ್ನು ಮುಗಿಸಿ ನೌಕರಿಗಾಗಿ ಅಲೆದಾಡುತ್ತಿರುತ್ತಾನೆ. ನೌಕರಿ ಪಡೆದು ಕಿತ್ತು ತಿನ್ನುವ ಬಡತನ ನಿವಾರಿಸಿಕೊಂಡು ವೃದ್ಧಾಪ್ಯದಲ್ಲಿದ್ದ ತಂದೆ-ತಾಯಿಗಳನ್ನು ಆರೈಕೆ ಮಾಡಬೇಕೆಂಬ ಆಸೆಯಲ್ಲಿರುವನು. ಒಂದು ಕಂಪನಿಯಲ್ಲಿ ನೌಕರಿಗಾಗಿ ಅರ್ಜಿ ಹಾಕುವನು. ಅರ್ಜಿಯ ಮುನ್ನಾ ದಿನ ಅಲ್ಲಿಯ ಅಧಿಕಾರಿಗಳನ್ನು ಭೆಟ್ಟಿಯಾಗುವನು. ಅಲ್ಲಿಯ ಅಧಿಕಾರಿಯು ೨೦೦ ರೂ. ಲಂಚ ಕೊಡುವದಾದರೆ ನಿನ್ನ ಅರ್ಜಿಯನ್ನು ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಕಳಿಸುವೆನು ಎನ್ನುವನು. ಬಡವನಾದ ಶಿಲಾಧರನಿಗೆ ೨೦೦ ರೂ.ಗಳನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ತನ್ನ ಕುಟುಂಬದ ಅಳಲನ್ನು ಪರಿಪರಿಯಾಗಿ ಅಧಿಕಾರಿಗಳಿಗೆ ತಿಳಿಹೇಳಿದರೂ ದುಡ್ಡು ಕೊಟ್ಟರೆ ಮಾತ್ರ ನಿನಗೆ ನೌಕರಿ ಕೊಡಲಿಕ್ಕೆ ಸಾಧ್ಯವೆಂದು ಹೇಳುವನು. ಮನನೊಂದ ಶಿಲಾಧರ ಮನೆಗೆ ಬಂದು ತಂದೆ-ತಾಯಿಗಳಿಗೆ ಎಲ್ಲಿಯೂ ನೌಕರಿ ಸಿಗದ್ದನ್ನು ಮನವರಿಕೆ ಮಾಡಿಕೊಡುವನು. ತಂದೆ-ತಾಯಿಗಳ ಸಲಹೆಯಂತೆ ತಮ್ಮ ಕುಲಕಸುಬಾದ ನೇಕಾರಿಕೆಯಲ್ಲಿ ಶಿಲಾಧರ ಮುಂದುವರೆಯುವನು.

ಸಂಪತರಾವರು ವಿಧಾನಸಭಾ ಕ್ಷೇತ್ರಕ್ಕೆ ಸಾರ್ವತ್ರಿಕ ಚುನಾವಣೆಗೆ ಸ್ಪರ್ಧಿಸಿದ್ದರು. ಚುನಾವಣಾ ಪ್ರಚಾರಕ್ಕೆ ಅಳಿಯ ರಮೇಶನ ಜೊತೆ ನಿಂಗಪ್ಪ-ಗಂಗವ್ವರ ಮನೆಗೆ ಬಂದು ಮತ ಕೇಳುವರು. ನಿರುದ್ಯೋಗಿಯಾದ ನಮ್ಮ ಮಗ ಶಿಲಾಧರನಿಗೆ ಯಾವುದಾದರೂ ಒಂದು ಕೆಲಸವನ್ನು ಕೊಡಿರೆಂದು ತಮ್ಮ ಬೇಡಿಕೆಯನ್ನು ಸಂಪತರಾವರ ಮುಂದೆ ಇಡುವರು. ಚುನಾವಣೆ ಮುಗಿಯಲಿ ನೋಡೋಣವೆಂಬ ಆಶ್ವಾಸನೆಯೊಂದಿಗೆ ೫೦ ರೂ.ಗಳನ್ನು ನಿಂಗಪ್ಪ-ಗಂಗವ್ವರ ಕೈಯಲ್ಲಿ ಸಂಪತರಾವರು ಕೊಡುವರು. ಈ ಸನ್ನಿವೇಶವನ್ನು ನೋಡಿದ ಶಿಲಾಧರ ನೋಟಿಗಾಗಿ ವೋಟುಗಳನ್ನು ಮಾರಿಕೊಳ್ಳುವುದನ್ನು ಪ್ರತಿಭಟಿಸಿ ೫೦ ರೂ.ಗಳನ್ನು ಸಂಪತರಾವರಿಗೆ ಮರಳಿಸುವನು. ನೋಟನ್ನು ಮರಳಿ ಪಡೆದ ಸಂಪತರಾವರು ಕೋಪಿಸಿಕೊಂಡಾಗ ಚಾಣಾಕ್ಷಮತಿಯಾದ ಅಳಿಯ ರಮೇಶ ಸನ್ನಿವೇಶವನ್ನು ತಿಳಿಗೊಳಿಸಿ ಮತ ಯಾಚಿಸಲು ಸಫಲನಾಗುವನು. ಚುನಾವಣೆಯಲ್ಲಿ ಗೆದ್ದುಬಂದ ಸಂಪತರಾವ ಆನಂದದಲ್ಲಿ ಕಾಲಕಳೆಯುತ್ತಿದ್ದನು.

ದೇಶದಲ್ಲಿ ಬೇರುಬಿಟ್ಟ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಲು ಸರಕಾರ ಚಿಂತಿಸಿ 'ಬ್ಲ್ಯಾಕ್ ಮಾರ್ಕೆಟ್ ಕಂಟ್ರೋಲ್' ಎಂಬ ಇಲಾಖೆಯನ್ನು ಪ್ರಾರಂಭಿಸಿತು. ಇಲಾಖೆ ಸಿಬ್ಬಂದಿಯನ್ನು ನೇಮಿಸಿ ಕೊಳ್ಳುವುದಾಗಿ ಜಾಹಿರಾತಿನ ಮುಖಾಂತರ ಕರೆ ಮಾಡಿತ್ತು. ಇದನ್ನು ತಿಳಿದ ಬಿ.ಎ. ಪದವೀಧರನಾದ ಶಿಲಾಧರ ಅರ್ಜಿಯನ್ನು ಹಾಕಿ ಬ್ಲ್ಯಾಕ್ ಮಾರ್ಕೆಟ್ ಕಂಟ್ರೋಲ್ ಇಲಾಖೆಯಲ್ಲಿ ನೌಕರಿ ಪಡೆದುಕೊಳ್ಳುವನು. ಮಗನಿಗೆ ನೌಕರಿ ಬಂದಿದ್ದರಿಂದ ತಮ್ಮ ವ್ರತ ತೀರಿಸಿಕೊಳ್ಳಲು ನಿಂಗಪ್ಪ-ಗಂಗವ್ವರು ಕಾಶಿ ವಿಶ್ವನಾಥನ ದರ್ಶನ ಪಡೆದುಬರಲು ಕಾಶಿಗೆ ಹೋಗುವರು. ಬ್ಲ್ಯಾಕ್ ಮಾರ್ಕೆಟ್ ಕಂಟ್ರೋಲ್ ಇಲಾಖೆಯಲ್ಲಿ ತರಬೇತಿ ಪಡೆದ ಶಿಲಾಧರ ಇದ್ದೂರಿನಲ್ಲೇ ವೃತ್ತಿಜೀವನವನ್ನು ಪ್ರಾರಂಭ ಮಾಡಿದ. ನ್ಯಾಯ, ನೀತಿ, ಧರ್ಮ, ದೇಶಪ್ರೇಮಗಳನ್ನು ಮೈಗೂಡಿಸಿಕೊಂಡ ಶಿಲಾಧರ ಒಬ್ಬ ದಕ್ಷ, ಪ್ರಾಮಾಣಿಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಇತ್ತ ವಿದ್ಯಾರ್ಥಿ ಜೀವನದಲ್ಲಿ ಶಿಲಾಧರನ ತತ್ವ ಆದರ್ಶಗಳನ್ನು ಮೆಚ್ಚಿಕೊಂಡ ಸಂಪತರಾವರ ಮಗಳು ಮೀನಾಕ್ಷಿ ಶಿಲಾಧರನನ್ನು ಪ್ರೀತಿಸುತ್ತಿದ್ದಳು.

ಸಂಪತರಾವರ ಮನೆಗೆಲಸದ ಆಳು ಪಾರ್ವತಿ ಆಕೆಯ ಗಂಡ ಸಿದ್ಧ ಊರಲ್ಲಿ ಕುಳ್ಳುಮಾರಿ ಜೀವನ ನಡೆಸುತ್ತಿದ್ದರು. ಸಂಪತರಾವರ ಕಳ್ಳದಂಧೆ ವ್ಯವಹಾರವನ್ನು ನೋಡಿದ ಸಿದ್ಧ ವೇಳೆ ಸಿಕ್ಕಾಗಲೆಲ್ಲ ತನ್ನ ಅಭಿಪ್ರಾಯವನ್ನು ಹೆಂಡತಿ ಪಾರ್ವತಿ ಮುಂದೆ ವ್ಯಕ್ತಪಡಿಸುತ್ತಿದ್ದನು. ಅಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಒಂದು ವಾರದಲ್ಲಿ ಶಿಲಾಧರ, ಜನರಿಗೆ ಹಂಚಬೇಕಾದ ಸಕ್ಕರೆ ಚೀಲಗಳನ್ನು ತುಂಬಿಕೊಂಡು ಹೋಗುತ್ತಿರುವ ಟ್ರಕ್ಕನ್ನು ಜಪ್ತಿಮಾಡಿ ಅದರಲ್ಲಿದ್ದ ಸಂಪತರಾವ ಮತ್ತು ಅಳಿಯ ರಮೇಶನನ್ನು ಬಂದಿಸಿ ಕೇಸು ಹಾಕುವನು. ಕೇಸು ದಾಖಲು ಮಾಡದಂತೆ ಸಂಪತರಾವ ಹಾಗೂ ರಮೇಶ ಉಪಾಯದಿಂದ ಶಿಲಾಧರನ ಮನವೊಲಿಸಲು ಪ್ರಯತ್ನಿಸಿ ವಿಫಲರಾಗುವರು. ಉಪಾಯದಿಂದ ಮಣಿಯದಿದ್ದಾಗ ೧೦,೦೦೦ ರೂ. ಲಂಚದ ಆಮಿಷವನ್ನು ತೋರಿಸುವರು. ಇವು ಯಾವುದಕ್ಕೂ ಮಣಿಯದ ಶಿಲಾಧರ ಕೇಸು ದಾಖಲು ಮಾಡಿ ಕೋರ್ಟಿಗೆ ಕಳಿಸುವನು. ಕೋಪಗೊಂಡ ಸಂಪತರಾವ, ಅಳಿಯ ರಮೇಶರು ಶಿಲಾಧರನ ನೌಕರಿಗೇನೆ ಸಂಚಕಾರ ತರಲು ಹೊಂಚು ಹಾಕುವರು.

ಕಾಶಿ ವಿಶ್ವನಾಥನ ದರ್ಶನಕ್ಕೆ ಹೋದ ಶಿಲಾಧರನ ತಂದೆ-ತಾಯಿಗಳು ಬೇಗನೆ ಮರಳಿ ಬರುವರು. ದಾರಿ ಮಧ್ಯದಲ್ಲಿ ತಂದೆ ನಿಂಗಪ್ಪನಿಗೆ ವಿಷಮಶೀತ ಜ್ವರ ಬರಲು ಯಾತ್ರೆಯನ್ನು ಮೊಟಕುಗೊಳಿಸಿ ದರ್ಶನ ಪಡೆಯದೇ ಬಂದರು. ಇತ್ತ ಮಗನು ಸಂಪತರಾವ ಮತ್ತು ಅಳಿಯ ರಮೇಶನ ಮೇಲೆ ಹಾಕಿದ ಕೇಸು ತಿಳಿದ ಶಿಲಾಧರನ ತಂದೆ ನಿಂಗಪ್ಪ ಮಗನಿಗೆ ಅಂತಹ ದುಷ್ಟ ವ್ಯಕ್ತಿಗಳೊಡನೆ ವೈರತ್ವ ಕಟ್ಟಿಕೊಳ್ಳಬಾರದಿತ್ತು ಎಂದು ಲೋಕಾನುಭವದ ಮಾತುಗಳನ್ನು ಹೇಳುವನು.

ಹೊಂಚು ಹಾಕಿ ಕುಳಿತ ಸಂಪತರಾವ ಹಾಗೂ ಅಳಿಯ ರಮೇಶ ಕೋರ್ಟಿಗೆ ಕೇಸು ಬಂದಾಗ ಮತ್ತೆ ಕಾರ್ಯಪ್ರವೃತ್ತರಾಗುವರು. ವಕೀಲರ ಮುಖಾಂತರ ಸಾಕ್ಷಿದಾರರನ್ನು ಲಂಚಕೊಟ್ಟು ಒಲಿಸಿಕೊಳ್ಳಲು

ಪ್ರಯತ್ನಿಸಿ ಸಫಲರಾಗುವರು. ಪೊಲೀಸ್ ಸಬ್ ಇನಸ್ಪೆಕ್ಟರನಿಗೆ ೨೦,೦೦೦ ರೂ.ಗಳನ್ನು ಲಂಚಕೊಟ್ಟು ಅವನನ್ನು ತಮ್ಮ ಒಳಗೆ ತಗೆದುಕೊಳ್ಳುವರು. ಹಾಗೆಯೇ ಟ್ರಕ್ ಜಪ್ತಿ ಮಾಡಿದಾಗ ಇದ್ದ ಕೆಳಹಂತದ ಅಧಿಕಾರಿಗಳಾದ ಹವಾಲ್ದಾರ, ಪೊಲೀಸರಿಗೂ ಸ್ವಲ್ಪ ಪ್ರಮಾಣದ ಲಂಚದ ರುಚಿ ತೋರಿಸಿ ತಮ್ಮೆಡೆಗೆ ಸೆಳೆದುಕೊಳ್ಳುವರು. ಲಂಚತಿಂದ ಅಧಿಕಾರಿಗಳು ಕೋರ್ಟಿನಲ್ಲಿ ಸರಿಯಾದ ರೀತಿಯಲ್ಲಿ ಸಾಕ್ಷಿ ಹೇಳದೆ ಇದ್ದುದರಿಂದ ಸಂಪತರಾವರ ಮೇಲೆ ಹಾಕಿದ ಕೇಸು ಬಿದ್ದುಹೋಗುವುದು.

ಇದರ ಪರಿಣಾಮ ಶಿಲಾಧರ ನೌಕರಿಯನ್ನು ಕಳೆದುಕೊಳ್ಳುವನು. ನೌಕರಿ ಕಳೆದುಕೊಂಡ ದುಃಖದಲ್ಲಿ ಶಿಲಾಧರನನ್ನು ಸಂಪತರಾವ ಮತ್ತು ರಮೇಶ ಸುಮ್ಮನೆ ಬಿಡುವುದಿಲ್ಲ. ತಮ್ಮ ಸೇಡನ್ನು ತೀರಿಸಿಕೊಳ್ಳಲು ಸಮಯಕ್ಕಾಗಿ ಕಾಯುತ್ತಿದ್ದರು. ಇತ್ತ ಮಗನ ನೌಕರಿ ಹೋದ ದುಃಖದಲ್ಲಿ ಶಿಲಾಧರನ ತಂದೆ ನಿಂಗಪ್ಪ ತೀರಿಕೊಳ್ಳುವನು. ನಿಂಗಪ್ಪ ಜೀವಂತವಾಗಿದ್ದಾಗ ಶಿಲಾಧರನ ವಿದ್ಯಾಭ್ಯಾಸಕ್ಕೆ ಸಂಪತರಾವರ ಹತ್ತಿರ ಮನೆ ಬರೆದುಕೊಟ್ಟು ಸಾಲ ಮಾಡಿದ್ದರು. ಸಾಲದ ಕರಾರು ಪತ್ರದಂತೆ ಶಿಲಾಧರ ಹಾಗೂ ವೃದ್ಧ ತಾಯಿ ಗಂಗವ್ವನನ್ನು ಮನೆಬಿಟ್ಟು ಹೊರಗೆ ಹಾಕುವರು. ವೃದ್ಧ ಅಶಕ್ತ ತಾಯಿಯನ್ನು ಕರೆದುಕೊಂಡು ಊರಿನ ಪಕ್ಕದಲ್ಲಿದ್ದ ಗೋಮಾಳದಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ತಾಯಿಯೊಂದಿಗೆ ವಾಸಿಸಲಿಕ್ಕೆ ಹತ್ತಿದನು. ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಕಟ್ಟಿಗೆ ಕಡಿದು ಊರಲ್ಲಿ ಮಾರಾಟಮಾಡಿ ಜೀವನ ಸಾಗಿಸಲಿಕ್ಕೆ ಹತ್ತಿದನು.

ಸಂಪತರಾವ ತನ್ನ ಒಬ್ಬಳೇ ಒಬ್ಬ ಮಗಳಾದ ಮೀನಾಕ್ಷಿಯನ್ನು ಅಳಿಯ ರಮೇಶನಿಗೆ ಕೊಟ್ಟು ಮದುವೆ ಮಾಡಲು ನಿರ್ಧರಿಸಿದ್ದನು. ತಮ್ಮ ತಂದೆ ಮತ್ತು ಮಾವನವರಿಂದ ತೊಂದರೆಗೆ ಸಿಲುಕಿದ ಶಿಲಾಧರನ ಗುಡಿಸಲಿಗೆ ಮೀನಾಕ್ಷಿ ಬಂದು ಸಹಾನುಭೂತಿಯ ಮಾತುಗಳನ್ನು ಗಂಗವ್ವ ಮತ್ತು ಶಿಲಾಧರನಿಗೆ ಹೇಳಿ ಸಮಾಧಾನಪಡಿಸುವಳು. ಶಿಲಾಧರ ಮತ್ತು ಮೀನಾಕ್ಷಿಯರು ಪದೇ ಪದೇ ಬೆಟ್ಟಿಯಾಗಿ ಉಭಯ ಕುಶಲೋಪರಿ ಮಾಡಿಕೊಳ್ಳುತ್ತಿದ್ದರು. ಇದನ್ನರಿತ ಸಂಪತರಾವ ಮಗಳ ಮದುವೆಯನ್ನು ರಮೇಶನ ಜೊತೆ ಮಾಡಲು ಕಾರ್ಯಪ್ರವೃತ್ತನಾಗುವನು. ತಂದೆಯ ಮದುವೆಯ ಚಟುವಟಿಕೆಯನ್ನು ಅರ್ಥಮಾಡಿಕೊಂಡ ಮೀನಾಕ್ಷಿ ರಮೇಶನನ್ನು ಮದುವೆ ಆಗುವುದಿಲ್ಲವೆಂದು ಹೇಳುವಳು. ಸದ್ಗುಣಗಳ ಸಾಕಾರಮೂರ್ತಿಯಾದ, ವಿದ್ಯಾವಂತನೂ ಆದ ಶಿಲಾಧರನನ್ನು ಮದುವೆಯಾಗುವುದಾಗಿ ಮೀನಾಕ್ಷಿ ತಂದೆಗೆ ಹೇಳುವಳು. ಕೋಪಗೊಂಡ ಸಂಪತರಾವರು ಒತ್ತಾಯಪೂರ್ವಕವಾಗಿ ರಮೇಶನ ಜೊತೆ ಮದುವೆ ಮಾಡಲು ಮದುವೆ ಮಂಟಪ ಸಿದ್ಧಗೊಳಿಸುವರು. ಇದನ್ನು ತಿಳಿದ ಮೀನಾಕ್ಷಿ ಮದುವೆ ಮಂಟಪದಿಂದ ತಪ್ಪಿಸಿಕೊಂಡು ಶಿಲಾಧರನ ಮನೆಗೆ ಓಡಿ ಬರುವಳು. ತಪ್ಪಿಸಿಕೊಂಡ ಮೀನಾಕ್ಷಿಯ ಶೋಧಕ್ಕೆ ಈ ಮೊದಲೇ ಲಂಚತಿಂದ ಪೊಲೀಸ್ ಅಧಿಕಾರಿಯ ಸಹಾಯದಿಂದ ಸಂಪತರಾವ ಮತ್ತು ರಮೇಶ ಪ್ರಯತ್ನಿಸುವರು. ಮೀನಾಕ್ಷಿ ಮದುವೆ ಮಂಟಪದಿಂದ ತಪ್ಪಿಸಿಕೊಂಡು ಹೋಗಲಿಕ್ಕೆ ಶಿಲಾಧರನ ಕುಮ್ಮಕ್ಕು ಇದೆ ಎಂದು ಆರೋಪಿಸಿ ಶಿಲಾಧರನನ್ನು

ಬಂಧಿಸುವಂತೆ ಪೊಲೀಸ್ ಅಧಿಕಾರಿಗೆ ಸಂಪತರಾವ ಹೇಳುವರು. ಏನೂ ತಪ್ಪು ಮಾಡದ ಶಿಲಾಧರನನ್ನು ಪಿ.ಎಸ್.ಐ. ಬಂಧಿಸಲು ಕಾರ್ಯ ಪ್ರವೃತ್ತನಾಗುವನು. ಶಿಲಾಧರನ ಮನೆಗೆ ಓಡಿ ಬಂದ ಮೀನಾಕ್ಷಿ ಮನೆಯಲ್ಲಿ ಶಿಲಾಧರನು ಇಲ್ಲದ್ದರಿಂದ ನಿರಾಶೆಗೊಂಡು ಮರಳಿ ಬರುವಾಗ ದಾರಿಯಲ್ಲಿ ಶಿಲಾಧರನ ಭೇಟಿಯಾಗುವುದು. ಅದೇ ವೇಳೆಗೆ ಸರಿಯಾಗಿ ಶಿಲಾಧರ ಮತ್ತು ಮೀನಾಕ್ಷಿಯನ್ನು ಪೊಲೀಸರು ಎಳೆದುಕೊಂಡು ಸಂಪತರಾವರ ಮನೆಗೆ ತರುವರು. ಸಿಟ್ಟಿನ ಭರದಲ್ಲಿದ್ದ ಸಂಪತರಾವರು ಮಗಳು ಮಾಡಿದ ಅಪಮಾನಕ್ಕೆ ತಕ್ಕ ಶಿಕ್ಷೆ ಕೊಡಲು ಕೈಯಲ್ಲಿಯ ರಿವಾಲ್ವರ್‌ನಿಂದ ಗುಂಡು ಹಾರಿಸುವರು. ಮಗಳು ಮೀನಾಕ್ಷಿಗೆ ಬೀಳಬೇಕಾದ ಗುಂಡು ಮಧ್ಯಬಂದ ಅಳಿಯ ರಮೇಶನಿಗೆ ಬಿದ್ದು ಪ್ರಾಣಬಿಡುವನು. ಗಾಭರಿಗೊಂಡ ಸಂಪರಾವರು ಪೊಲೀಸ್ ಅಧಿಕಾರಿಗಳೊಡನೆ ಶಾಮೀಲಾಗಿ ರಮೇಶನ ಕೊಲೆಯನ್ನು ಮುಚ್ಚಿಹಾಕಲು ಪ್ರಯತ್ನಿಸುವರು. ತಂದೆಯ ದುಷ್ಟತನವನ್ನು ಅರಿತಿದ್ದ ಮೀನಾಕ್ಷಿ ತಂದೆಗೆ ಶಿಕ್ಷೆಯಾಗುವಂತೆ ಪೊಲೀಸರಿಗೆ ಹೇಳುವಳು. ಪೊಲೀಸರು ತಂದೆಯನ್ನು ಬಂಧಿಸಲು ಹಿಂದೇಟು ಹಾಕಿದಾಗ ತಾನೇ ಮುಂದೆ ಬಂದು ತಂದೆಯನ್ನು ಬಂಧಿಸುವಂತೆ ಪೊಲೀಸರ ಮೇಲೆ ಒತ್ತಡ ತಂದು ಜೈಲಿಗೆ ಕಳಿಸುವಳು. ತಂದೆಯ ಕಾರಸ್ಥಾನದಿಂದ ನೊಂದು ಬೆಂದು ಹೋದ ಶಿಲಾಧರನನ್ನು ಮದುವೆಯಾಗುವಳು. ಹೀಗೆ ನಾಟಕ ಸುಖಾಂತ್ಯ ಪಡೆಯುತ್ತದೆ.

ಕಥೆಗೆ ಪೂರಕವಾಗುವಂತೆ ಪಾತ್ರಗಳ ಸೃಷ್ಟಿ ಮಾಡಿರುವುದು ಗಮನಾರ್ಹವಾಗಿದೆ. ಸಂಪತರಾವ (ಗೌಡ) ಅಳಿಯ ರಮೇಶ, ಗೌಡನ ಮಗಳು ಮೀನಾಕ್ಷಿ, ಬಡ ನೇಕಾರನಾಗಿ ನಿಂಗಪ್ಪ, ಅವನ ಹೆಂಡತಿ ಗಂಗಮ್ಮ, ಇವರಿಬ್ಬರ ಮಗ ಶಿಲಾಧರ, ಸಿದ್ಧ, ಪಾರ್ವತಿ ಹಾಸ್ಯ ಪಾತ್ರಧಾರಿಗಳಾಗಿ ಕಥೆಯನ್ನು ಮುನ್ನಡೆಸಿಕೊಂಡು ಹೋಗುವರು.

ಭಾಷೆ ಸರಳ, ಕೇವಲ ಪ್ರಾದೇಶಿಕ ಭಾಷೆ ಬಳಸಿದರೆ ಎಲ್ಲ ಪ್ರದೇಶದ ಜನರಿಗೆ ಅರ್ಥವಾಗದೇ ಹೋಗಬಹುದೆಂಬ ಅರಿವಿನಿಂದ ಎಲ್ಲರಿಗೂ ಅರ್ಥವಾಗುವಂತೆ ಭಾಷೆಯನ್ನು ಬಳಸಿದ್ದಾರೆ.

ಈ ನಾಟಕದಲ್ಲಿ ಉದ್ದುದ್ದ ಬೇಸರ ತರಿಸುವ ಶಬ್ದಾಡಂಬರದ ಸಂಭಾಷಣೆಗಳಿಗೆ ಅವಕಾಶವಿಲ್ಲದಿರುವುದು ವಿಶೇಷ. ಎಲ್ಲವೂ ಹಿತಮಿತ ಚುಟುಕು ಮಾತಿನಲ್ಲಿ ಚುರುಕು ಮುಟ್ಟಿಸುವ, ಪ್ರತಿ ಮಾತು ಅರ್ಥಪೂರ್ಣ, ರಸಪೂರ್ಣ. ಕಥೆಯನ್ನು ಲವಲವಿಕೆಯಿಂದ ಮುನ್ನಡೆಸಿಕೊಂಡು ಹೋಗುವ ಗುಣ ಎದ್ದು ಕಾಣುತ್ತದೆ. ಒಟ್ಟು ಪೂರ್ವಾರ್ಧ ೭ ಅಂಕಗಳು, ಉತ್ತರಾರ್ಧ ೬ ಅಂಕಗಳು.

ಸ್ವಾತಂತ್ರ್ಯ ಸಿಕ್ಕ ಒಂದೇ ಒಂದು ದಶಕದಲ್ಲಿ ದೇಶದ ಎಲ್ಲಾ ಕ್ಷೇತ್ರಗಳಲ್ಲೂ ಭ್ರಷ್ಟಾಚಾರ ತಾಂಡವ ವಾಡಲಿಕ್ಕೆ ಹತ್ತಿತು. ಜನಪ್ರತಿನಿಧಿಗಳು, ಅಧಿಕಾರಿಗಳು, ಭ್ರಷ್ಟಾಚಾರದ ಕಬಂಧ ಬಾಹುಗಳಿಗೆ ಸಿಕ್ಕು ಭ್ರಷ್ಟರಾದರು. ಗಾಂಧೀಜಿಯವರ ರಾಮರಾಜ್ಯದ ಪರಿಕಲ್ಪನೆ ಬುಡಮೇಲಾದದ್ದನ್ನು ಕಂಡ ಬಹುಸಂಖ್ಯಾತ

ಸಾಮಾನ್ಯ ಜನರು ಭ್ರಮನಿರಸನಕ್ಕೆ ಒಳಗಾದರು. ನಿರುದ್ಯೋಗ, ಬಡತನ, ದಾರಿದ್ರ್ಯ ತಾಂಡವವಾಡುತ್ತಿರುವ ಕಾಲದಲ್ಲಿ ಕಾಳಸಂತೆಕೋರರ, ಜಮೀನ್ದಾರರ ಶೋಷಣೆಯಿಂದ ಜನತೆ ತತ್ತರಿಸಿ ಹೋಗಿದ್ದರು.

ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಸರಕಾರ, ಬ್ಲಾಕ್ ಮಾರ್ಕೀಟ ಕಂಟ್ರೋಲ್ ಇಲಾಖೆಯನ್ನು ಪ್ರಾರಂಭಿಸಿತು. ಕಡಿಮೆ ದರದಲ್ಲಿ ಬಡವರಿಗೆ ಆಹಾರ ಧಾನ್ಯಗಳನ್ನು ಪೂರೈಕೆ ಮಾಡುವ ಜವಾಬ್ದಾರಿಯನ್ನು ಸರಕಾರ ಹೊತ್ತುಕೊಂಡಿತು. ಕಾಳಸಂತೆಕೋರರ ಮಧ್ಯಸ್ಥಿಕೆಯಿಂದ ಬಡವರಿಗೆ ಮುಟ್ಟಬೇಕಾದ ಆಹಾರ ಧಾನ್ಯಗಳು ಕಳ್ಳಪೇಟೆಗೆ ಪೂರೈಕೆಯಾಗಹತ್ತಿದವು. ಇಲಾಖಾ ಅಧಿಕಾರಿಗಳನ್ನು ಲಂಚ-ರುಸುವತ್ತುಗಳ ಮುಖಾಂತರ ಕಾಳಸಂತೆಕೋರರು ತಮ್ಮೆಡೆಗೆ ಸೆಳೆದುಕೊಂಡು ಅಧಿಕಾರಿಗಳನ್ನು ಭ್ರಷ್ಟರನ್ನಾಗಿ ಮಾಡಿದರು.

ಒಂದು ಕಡೆ ನಿರುದ್ಯೋಗ, ಇನ್ನೊಂದು ಕಡೆ ಬಡತನ, ಅವಿದ್ಯಾವಂತರಿಂದ ತುಂಬಿದ ಸಮಾಜದಲ್ಲಿ ಕಾಳಸಂತೆಕೋರರು ರಾಜಾರೋಷವಾಗಿ ತಮ್ಮ ವ್ಯವಹಾರವನ್ನು ಮುಂದುವರಿಸಿದ್ದರು. ಇಂತಹ ಕಾಳಸಂತೆಕೋರರ ವ್ಯವಹಾರದಲ್ಲಿ ಸಾಮಾನ್ಯವಾಗಿ ಊರಿನಲ್ಲಿಯ ಗೌಡನೋ, ಜಮೀನ್ದಾರನೋ, ಜನಪ್ರತಿನಿಧಿಯೋ ಭಾಗಿಯಾಗಿರುತ್ತಿದ್ದನು. ಸಮಾಜದಲ್ಲಿಯ ಗಣ್ಯವ್ಯಕ್ತಿಗಳೇ ಇಂತಹ ನೀಚ ಕೆಲಸಕ್ಕೆ ನಿಂತಾಗ ಸರಕಾರ ಎಚ್ಚೆತ್ತುಕೊಂಡಿತು. ದಕ್ಷ ಪ್ರಾಮಾಣಿಕ ಅಧಿಕಾರಿಗಳನ್ನು ಸಿದ್ಧಗೊಳಿಸಲು ಬ್ಲಾಕ್ ಮಾರ್ಕೇಟ್ ಕಂಟ್ರೋಲ್ ಇಲಾಖೆಯು ಅನೇಕ ತರುಣರನ್ನು ಆಯ್ಕೆ ಮಾಡಿಕೊಂಡಿತು. ಇಷ್ಟಾಗಿಯೂ ಭ್ರಷ್ಟಾಚಾರವನ್ನು ಸಂಪೂರ್ಣ ನಿರ್ಮೂಲನೆ ಮಾಡಲಿಕ್ಕೆ ಸರಕಾರಕ್ಕೆ ಸಾಧ್ಯವಾಗಲಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದ ಅನೇಕ ಪ್ರಾಮಾಣಿಕ ಅಧಿಕಾರಿಗಳು ಭ್ರಷ್ಟ ಅಧಿಕಾರಿಗಳಿಂದ ನೌಕರಿ ಕಳೆದುಕೊಂಡು ಮನೆಗೆ ಹೋದರು. ನಿರುದ್ಯೋಗಿಗಳು ಲಂಚ ಕೊಡಲಿಕ್ಕೆ ಸಾಧ್ಯವಾಗದೆ ನೌಕರಿಯಿಂದ ವಂಚಿತರಾದರು.

ಸರಕಾರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಲಿಕ್ಕೆ ೬೦ರ ದಶಕದಲ್ಲಿ ಶತಾಯಗತಾಯ ಪ್ರಯತ್ನಿಸಬೇಕಾಯಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅನೇಕ ಚಿಂತಕರು ತಮ್ಮ ಅಭಿಪ್ರಾಯಗಳನ್ನು ಹೇಳಿ ಸರಕಾರವನ್ನು ಎಚ್ಚರಿಸಿದ್ದಾರೆ. ಇನ್ನೂ ಕೆಲವರು ಜನಜಾಗೃತಿಯನ್ನು ಉಂಟುಮಾಡಿದ್ದಾರೆ.

ಬಡತನ, ನಿರುದ್ಯೋಗ, ವಿದ್ಯಾವಂತರ ಸಮಸ್ಯೆಗಳು ಸಮಾಜವನ್ನು ಯಾವ ರೀತಿ ಅದೋಗತಿಗೆ ಒಯ್ಯುತ್ತವೆ ಎಂಬುದನ್ನು ಅರಿಷಿಣಗೋಡಿಯವರು ಮನಗಂಡರು. ಸಮಕಾಲೀನ ಸಂವೇದನೆಗಳಿಗೆ ಸ್ಪಂದಿಸಿದ ಬಿ.ಆರ್.ಅರಿಷಿಣಗೋಡಿಯವರು ಜಮೀನ್ದಾರರ, ಅಧಿಕಾರಿಗಳ, ಜನಪ್ರತಿನಿಧಿಗಳ ದೌರ್ಜನ್ಯವನ್ನು ಬಯಲಿಗೆ ಎಳೆದು ಜನಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದರು.

ಸಮಾಜದಲ್ಲಿ ಬೇರುಬಿಟ್ಟ ಭ್ರಷ್ಟಾಚಾರವನ್ನು ಬಯಲಿಗೆಳೆದು ಜನಜಾಗೃತಿಯನ್ನುಂಟುಮಾಡುವ ಪಣತೊಟ್ಟು ಜನರ ಮೇಲೆ ಪ್ರಭಾವ ಬೀರತಕ್ಕಂತಹ ದೃಶ್ಯ ಮತ್ತು ಶ್ರವ್ಯ ಮಾಧ್ಯಮವಾದ ನಾಟಕ ಕಲೆಯನ್ನು ಅರಿಷಿಣಗೋಡಿಯವರು ಆಯ್ದುಕೊಂಡರು. ಭ್ರಷ್ಟಾಚಾರದ ಕರಾಳಮುಖವನ್ನು

ಪರಿಚಯಿಸುವುದಕ್ಕಾಗಿ 'ಲಂಚ ಸಾಮ್ರಾಜ್ಯ' ಎಂಬ ಈ ನಾಟಕವನ್ನು ಬರೆದರು. ನಾಟಕದ ತಲೆಬರಹಕ್ಕೆ ಎಲ್ಲಿಯೂ ಚ್ಯುತಿ ಬರದ ಹಾಗೆ ಪಾತ್ರಗಳನ್ನು ಸೃಷ್ಟಿಸಿದರು. ಸಂಪತರಾವ, ರಮೇಶರಂತಹ ಶ್ರೀಮಂತ ಕಾಳಸಂತೆಕೋರರ ಪಾತ್ರಗಳು, ಬಡವರ, ನಿರುದ್ಯೋಗಿಗಳ, ಅಸಹಾಯಕತೆಯನ್ನು ಬಳಸಿಕೊಂಡು ಅವರ ಶೋಷಣೆಗೆ ನಿಂತರೆ, ವಿದ್ಯಾವಂತ ಶಿಲಾಧರನ ಪಾತ್ರವು ನಾಟಕದುದ್ದಕ್ಕೂ ಪ್ರತಿಭಟನೆ, ಹೋರಾಟದ ಮುಖಾಂತರ ದೇಶಪ್ರೇಮವನ್ನು ಹೆಚ್ಚಿಸುವುದರ ಕಡೆಗೆ ಬಂದು ನಿಲ್ಲುವುದು. ಮನುಷ್ಯ ಬದುಕಬೇಕಾದರೆ ಒಂದು ಉದ್ಯೋಗ ಬೇಕು. ಅದರಲ್ಲಿಯೂ ಸರಕಾರಿ ಉದ್ಯೋಗದಲ್ಲಿದ್ದ ವ್ಯಕ್ತಿಯು ವೃತ್ತಿಗೌರವವನ್ನು ಹೆಚ್ಚಿಸಬೇಕು. ಲಂಚ ರುಸುವತ್ತುಗಳಿಗೆ ಬಲಿಯಾಗಿ ತನ್ನ ವೃತ್ತಿಗೌರವವನ್ನು ಮಣ್ಣುಪಾಲು ಮಾಡಿದರೆ ದಕ್ಷ ಪ್ರಾಮಾಣಿಕ ಅಧಿಕಾರಿಗಳಿಗೆ ತೊಂದರೆಯಾಗುವುದಲ್ಲದೆ ದೇಶದ ಪ್ರಗತಿಯು ಕುಂಠಿತಗೊಳ್ಳುವುದೆಂಬುದನ್ನು ಬಿ.ಆರ್.ಅರಿಷಿಣಗೋಡಿಯವರು ಈ ನಾಟಕದಲ್ಲಿ ತೋರಿಸಿರುವುದನ್ನು ಕಾಣುತ್ತೇವೆ.

ಈ ನಾಟಕದಲ್ಲಿ ಬರುವ ಶ್ರೀಮಂತರು, ಜಮೀನ್ದಾರರು ದುಷ್ಟರಾಗಿ ಬಿಂಬಿತರಾದರೆ, ಬಡವರು ಒಳ್ಳೆಯವರಾಗಿ ದೇಶಪ್ರೇಮಿಯಾಗಿ ತೋರುವರು.

ಈ ಲಂಚ ಸಾಮ್ರಾಜ್ಯ ನಾಟಕ ಆವತ್ತಿನ ಕಾಲದಲ್ಲಿ ಜನರನ್ನು ಆಕರ್ಷಿಸಿ ಭ್ರಷ್ಟಾಚಾರದ ಬಗ್ಗೆ ಜನರ ಧೋರಣೆಯನ್ನು ಗಮನಾರ್ಹವಾಗಿ ಬದಲಿಸಿತು.

ಇಲ್ಲಿ ಪಾತ್ರಗಳೆಲ್ಲವೂ ರಂಗಪ್ರಯೋಗಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿಗೊಂಡಿರುವುದನ್ನು ಕಾಣುತ್ತೇವೆ. ೬೦ರ ದಶಕದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮತ್ತು ದೇಶಾಭಿಮಾನವನ್ನು ನಾಟಕ ನೋಡಿದ ಪ್ರತಿಯೊಬ್ಬನಲ್ಲೂ ಬಿ.ಆರ್. ಅರಿಷಣಗೋಡಿಯವರು ಬೆಳೆಸಿದರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರಂಗಪ್ರಯೋಗದ ದೃಷ್ಟಿಯಿಂದ ಯಶಸ್ವಿ ನಾಟಕವೆನಿಸಿಕೊಂಡು ಜನಾನುರಾಗಿಯಾಯಿತು. ಸಂಪತರಾವರ ಮಗಳು ಮೀನಾಕ್ಷಿಯ ಪಾತ್ರ ಕೇವಲ ಶಿಲಾಧರನ ಆದರ್ಶಗಳನ್ನು ಮೆಚ್ಚಿಕೊಂಡು ಅವನನ್ನು ಪ್ರೀತಿಸಿ ಮದುವೆಯಾಗುವುದಕ್ಕೆ ಸೀಮಿತವಾಗುತ್ತದೆ. ಮೀನಾಕ್ಷಿ ಭ್ರಷ್ಟಾಚಾರದ ಬಗ್ಗೆ ಯಾವೊಂದು ಧ್ವನಿ ಎತ್ತದೆ ಇರುವುದು ಎದ್ದು ಕಾಣುತ್ತದೆ. ಸಂಪತರಾವರ ಮನೆಯ ಆಳುಗಳಾದ ಸಿದ್ಧ ಮತ್ತು ಪಾರ್ವತಿಯ ಪಾತ್ರಗಳು ಭ್ರಷ್ಟಾಚಾರದ ಬಗ್ಗೆ ಯಾವೊಂದೂ ಧ್ವನಿಯೆತ್ತದೆ ವ್ಯವಸ್ಥೆಯನ್ನು ಒಪ್ಪಿಕೊಂಡಂತೆ ತೋರುವುದು. ಏನಿದ್ದರೂ ಲಂಚಸಾಮ್ರಾಜ್ಯ ಭ್ರಷ್ಟಾಚಾರವನ್ನು ಬಯಲಿಗೆಳೆಯುವಲ್ಲಿ ಸಫಲವಾಗಿದೆಯೆಂದು ಹೇಳಬಹುದು.

ಗಂಡೆದೆಯ ಗೌರಿ

ರುದ್ರಗೌಡ ತನ್ನ ಕಾರಸ್ತಾನದಿಂದ ಊರಿನಲ್ಲಿ ಹರೆಯಕ್ಕೆ ಬಂದ ಹೆಣ್ಣುಮಕ್ಕಳನ್ನು ಬಯಸಿ ತನ್ನ ಮನದಾಸೆಯನ್ನು ತೀರಿಸಿಕೊಳ್ಳಲು ಕಾಳಿಂಗನಂತಹ ಅಸಹಾಯಕರನ್ನು ಬಳಸಿಕೊಳ್ಳುತ್ತಿದ್ದನು. ತನ್ನ ಬೇಳೆ ಬೇಯಿಸಿಕೊಳ್ಳಲು ರುದ್ರಗೌಡನು ಅನೇಕ ತಂತ್ರ-ಕುತಂತ್ರಗಳನ್ನು ಮಾಡಿ ನಿರಪರಾಧಿಗಳನ್ನು

ಅಪರಾಧಿಗಳನ್ನಾಗಿ, ಅಪರಾಧಿಗಳನ್ನು ನಿರಪರಾಧಿಗಳನ್ನಾಗಿ ಮಾಡುತ್ತ ತನ್ನ ಕಾಮವಾಂಛೆಯನ್ನು ತೀರಿಸಿಕೊಳ್ಳಲು ಯಾವಾಗಲೂ ಹವಣಿಸುತ್ತಾನೆ. ತನ್ನ ತಂಗಿಯಾದ ಗಿರಿಜಾಳನ್ನೇ ಹುಚ್ಚಿ ಎಂಬ ಪಟ್ಟಕಟ್ಟಿ ಆಕೆಯ ಮಾತಿಗೆ ಗೌರವ ಇಲ್ಲದಂತೆ ಮಾಡಿದ್ದನು. ಗಿರಿಜಾ ಹುಚ್ಚಿಯ ಪಟ್ಟಕಟ್ಟಿಕೊಂಡಿದ್ದರೂ ಅಣ್ಣ ರುದ್ರಗೌಡನ ಕುತಂತ್ರಗಳನ್ನು ಬಯಲಿಗೆ ಎಳೆಯುತ್ತಿದ್ದಳು. ಶಿವಣ್ಣ ಒಬ್ಬ ದುಡಿದು ತಿನ್ನುವ ೩ ಎಕರೆ ಜಮೀನು ಹೊಂದಿದ ರೈತ. ಅವನ ತಂಗಿ (ಈ ನಾಟಕದ ನಾಯಕಿ) ಗೌರಿ ಅಣ್ಣ ಶಿವಣ್ಣನ ಹೊಲ-ಮನೆ ಕೆಲಸದಲ್ಲಿ ಸಹಾಯ ಮಾಡುತ್ತಾ ಅಣ್ಣನಿಗೆ ಆಸರೆಯಾಗಿದ್ದಳು. ಹರೆಯಕ್ಕೆ ಬಂದ ಗೌರಿ ಅಪ್ರತಿಮ ಚೆಲುವೆಯಾಗಿದ್ದಳು. ಇದು ಸುಂದರಿಯಾದ ಗೌರಿಯ ಮೇಲೆ ರುದ್ರಗೌಡನ ಕಣ್ಣು ಬೀಳಲು ಕಾರಣವಾಯಿತು. ಗೌರಿಯಾದರೂ ರುದ್ರಗೌಡರ ಮನೆಯನ್ನು ಬಿಟ್ಟುಬಂದ ಸಿದ್ಧನನ್ನು ಪ್ರೇಮಿಸುತ್ತಿರುವಳು. ರುದ್ರಗೌಡರು ಗೌರಿಯನ್ನು ಒಲಸಿಕೊಳ್ಳಲು ಮಾಡಿದ ಪ್ರಯತ್ನವೆಲ್ಲ ವಿಫಲವಾಗುವುದು. ಕೊನೆಗೆ ಒಮ್ಮೆ ಗೌರಿಯ ಅಣ್ಣ ರಾತ್ರಿ ವೇಳೆ ಹೊಲಕಾಯಲು ಹೋದಾಗ ಗೌರಿಯ ಮನೆಗೆ ರುದ್ರಗೌಡನು ಬರುವನು. ಗೌರಿ ಹೆಸರು ಕೂಗಿಕರೆದರೆ ಕದ ತೆಗೆಯಲಿಕ್ಕಿಲ್ಲವೆಂದು ಅಣ್ಣ ಶಿವಣ್ಣನ ಹೆಸರು ಕೂಗಿ ಕದ ತೆಗೆಸುತ್ತಾನೆ. ಕದ ತೆಗೆದ ಗೌರಿಯನ್ನು ರುದ್ರಗೌಡರು ಸಾಮೋಪಾಯದಿಂದ ಮನ ಒಲಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಯಾವಾಗ ಗೌರಿ ರುದ್ರಗೌಡರನ್ನು ಕೂಡಲು ನಿರಾಕರಿಸುತ್ತಾಳೋ, ಆಗ ಗೌಡರು ಗೌರಿಯ ಮೇಲೆ ಬಲಾತ್ಕಾರ ಮಾಡಲು ಪ್ರಯತ್ನಿಸುವರು. ಧೈರ್ಯವಂತಳಾದ ಗೌರಿ ಕುಡುಗೋಲು ತೆಗೆದುಕೊಂಡು ಗೌಡನ ಕಾಲಿಗೆ ಹೊಡೆಯುವಳು, ಗಾಯಗೊಂಡ ಗೌಡ ಮನೆಯಿಂದ ಕುಂಟುತ್ತಾ ಓಡಿ ಹೋಗಿ ಪರಾರಿಯಾಗುವನು.

ಗೌಡನು ಮನಸ್ಸು ಮಾಡಿದ ಹುಡುಗಿ ಗೌರಿಯನ್ನು ತನ್ನ ಮನೆಯಲ್ಲಿದ್ದ ಆಳು ಸಿದ್ಧ ಮದುವೆ ಯಾಗುತ್ತಾನೆಂದು ತಿಳಿದು ಕುತಂತ್ರದಿಂದ ಬೆಂಕಿ ಹಚ್ಚಿದ ಅಪವಾದವನ್ನು ಸಿದ್ಧನ ಮೇಲೆ ಹೊರಿಸಿ ಜೈಲಿಗೆ ಹೋಗುವಂತೆ ಮಾಡುತ್ತಾನೆ. ಸರಿಯಾದ ಸಾಕ್ಷ್ಯಾಧಾರಗಳು ಇಲ್ಲದ್ದರಿಂದ ಸಿದ್ಧ ಜೈಲಿನಿಂದ ಬಿಡುಗಡೆಯಾಗಿ ಬರುವನು. ಬಿಡುಗಡೆಯಾಗಿ ಬಂದ ಸಿದ್ಧನನ್ನು ಹೇಗಾದರೂ ಮಾಡಿ ಕೊಲೆ ಮಾಡಿಸಿ ಗೌರಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಗೌಡನು ವಿಚಾರದಲ್ಲಿದ್ದನು. ತನ್ನ ಮನದಾಸೆಯನ್ನು ತೀರಿಸಿಕೊಳ್ಳಲು ಗೌರಿಯ ಗಂಡ ಸಿದ್ಧನನ್ನು ಕೊಲ್ಲಲು ಕಾಳಿಂಗ, ನಿಂಗ ಮುಂತಾದವರನ್ನು ಕಳಿಸುವನು. ತನ್ನ ಅಣ್ಣ ರುದ್ರಗೌಡನ ವಿಚಾರವನ್ನು ತಿಳಿದುಕೊಂಡ ತಂಗಿ ಗಿರಿಜಾ ಸಮಯೋಚಿತ ನಿರ್ಣಯ ತೆಗೆದುಕೊಳ್ಳುವಳು. ಅವಳ ಸಮಯ ಪ್ರಜ್ಞೆಯಿಂದ ಗೌರಿಯ ಗಂಡ ಸಿದ್ಧನ ಜೀವ ಉಳಿಯುವದು.

ಅದೂ ಕಾಲಿನ ಪೈಲ್ವಾನ ಸತ್ಯಪ್ಪನ ಮಗಳು ಈರವ್ವ ಸತ್ಯಪ್ಪನ ತಂಗಿಯ ಮಗ ವಿರೇಶಿಯಾದರೂ ನಗರ ಜೀವನದ ಬೆನ್ನುಹತ್ತಿ ನಗರದಲ್ಲಿ ಹುಟ್ಟಿ ಬೆಳೆದ ತರುಣಿಯನ್ನು ಮದುವೆಯಾಗಬೇಕೆಂಬ ಆಸೆವುಳ್ಳವನು. ತನ್ನ ಭಾವಿ ಪತ್ನಿಯಾದ ಈರವ್ವಳ ಒಂದೊಂದು ದೈಹಿಕ ದೌರ್ಬಲ್ಯಗಳನ್ನು ಎತ್ತಿತೋರಿಸಿ

ಕೊಂಕು ನುಡಿಗಳಿಂದ ಈರವ್ವಳ ಮನಸ್ಸನ್ನು ನೋಯಿಸುತ್ತಿದ್ದನು. ಸತ್ಯಪ್ಪನಾದರೂ ತನ್ನ ಮಗಳು ಈರವ್ವನನ್ನು ಹೇಗಾದರೂ ಮಾಡಿ ವೀರೇಶನಿಗೆ ಕೊಡಬೇಕೆಂದು ನಿರ್ಧರಿಸಿದ್ದನು. ಹಳ್ಳಿಯಲ್ಲಿದ್ದ ಈರವ್ವನಾದರೂ ವೀರೇಶಿಯ ಕೊಂಕು ನುಡಿಗಳಿಗೆ ನೊಂದುಕೊಂಡರೂ ಅವನನ್ನೇ ಇಷ್ಟಪಟ್ಟು, ಮದುವೆಯಾದರೆ ವೀರೇಶನನ್ನೇ ಮದುವೆಯಾಗುವೆ ಎನ್ನುವಳು. ಗುರುಹಿರಿಯರ ಹಾಗೂ ಸತ್ಯಪ್ಪನ ಒತ್ತಡಕ್ಕೆ ಮಣಿದ ವೀರೇಶಿ ಈರವ್ವಳನ್ನು ಮದುವೆಯಾಗುವನು. ಮದುವೆಯಾಗಿ ಈರವ್ವಳನ್ನು ಮಧುಚಂದ್ರಕ್ಕೆ ಕರೆದುಕೊಂಡು ಹೋಗುವನು. ಮಧುಚಂದ್ರದಿಂದ ಬಂದ ಈರವ್ವ ನಗರ ಜೀವನದ ಎಲ್ಲಾ ಕೌಶಲ್ಯಗಳನ್ನು ತಿಳಿದುಕೊಂಡು ಗಂಡನ ಆಸೆಯನ್ನು ಈಡೇರಿಸುವಳು.

ರುದ್ರಗೌಡ ಏನೆಲ್ಲ ಕಾರಸ್ಥಾನಗಳನ್ನು ಮಾಡಿದರೂ ಕೊನೆಗೆ ಬುದ್ಧಿ ಕಲಿತು ಶಿವಣ್ಣನಿಂದ ಹಾಗೂ ತಂಗಿ ಗಿರಿಜಾಳಿಂದ ಪರಿವರ್ತನೆ ಹೊಂದುವನು. ಸ್ವತಃ ತಾನೆ ನಿಂತು ಗಿರಿಜಾ ಹಾಗೂ ಶಿವಣ್ಣನ ಮದುವೆ ಮಾಡಿ ತನ್ನ ಎಲ್ಲ ಹಿಂದಿನ ದುರ್ಗುಣಗಳನ್ನು ಬಿಟ್ಟು ರುದ್ರಗೌಡ ಒಬ್ಬ ಸಾತ್ವಿಕ ಮನುಷ್ಯನಾಗಿ ಬದಲಾವಣೆಯಾಗುವುದು ನಾಟಕದ ಕೊನೆಯಲ್ಲಿ ಕೊಡುವ ಸಂದೇಶ.

ಸರಳ ಆಡುಮಾತು ಮತ್ತು ಶಿಷ್ಟ ಮಾತುಗಳ ಹಿತಮಿತ ಬಳಕೆ, ಆಡಂಬರದ ಉದ್ದುದ್ದ ಪದಗಳ ಬಳಕೆ ಇರದಿರುವುದು ನಾಟಕಕ್ಕೆ ಮೆರಗನ್ನು ಉಂಟುಮಾಡಿದೆ.

ನಾಟಕದ ಪೂರ್ವಾರ್ಧದಲ್ಲಿ ಕಥೆಗೆ ಪೂರಕವಾದ ವಾತಾವರಣ ಉತ್ತರಾರ್ಧದಲ್ಲಿ ಪರಿಣಾಮವನ್ನು ಉಂಟುಮಾಡುವುದು, ದುಷ್ಟರನ್ನು ಕೊಲ್ಲುವುದು ಒಂದೇ ಪರಿಹಾರವಲ್ಲ. ದುಷ್ಟರಿಗೂ ಪರಿವರ್ತನೆ ಮಾಡಿ ಸಮಾಜದಲ್ಲಿ ಒಳ್ಳೆಯ ನಾಗರಿಕರನ್ನಾಗಿ ಪರಿವರ್ತಿಸುವುದೇ ಈ ನಾಟಕದ ಆಶಯವಾಗಿದೆ. ಶಿಕ್ಷೆ ಎಂದರೆ ಸಾವೇ ಪರಿಹಾರವಲ್ಲ. ದುಷ್ಟನಾದ ರುದ್ರಗೌಡನು ಪರಿಸ್ಥಿತಿಗೆ ಅನುಗುಣವಾಗಿ ಪರಿವರ್ತನೆ ಹೊಂದಿ ಸಭ್ಯ ನಾಗರಿಕನಾಗುವನು.

ಈ ನಾಟಕ ಗ್ರಾಮೀಣ ಬದುಕಿನಲ್ಲಿ ನಡೆಯುವ ವಿವಿಧ ಮುಖಗಳನ್ನು ಅನಾವರಣಗೊಳಿಸುವುದು. ರೈತಾಪಿ ಕುಟುಂಬಗಳ ಸಂಘರ್ಷ, ಗೌಡನ ದರ್ಪ, ಅವಿಭಕ್ತ ಕುಟುಂಬಗಳ ಸಾಮರಸ್ಯ ಮುಂತಾದ ವಿಷಯಗಳ ಮೇಲೆ ನಾಟಕಕಾರರು ಕ್ಷ-ಕಿರಣ ಬೀರಿ ಬದುಕಿನಲ್ಲಿ ಬರುವ ಒಳಿತು-ಕೆಡಕುಗಳಿಗೆ ಪರಿಹಾರವನ್ನು ಸೂಚಿಸಿ ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಪ್ರೇರಣೆ ಉಂಟಾಗುವಂತೆ ಕಥಾ ಸಂವಿಧಾನವನ್ನು ರಚಿಸಿದಂತೆ ತೋರುವುದು.

ರಂಗಪ್ರಯೋಗಕ್ಕೆ ಅನುಕೂಲವಾಗುವಂತೆ ಪ್ರಮುಖವಾಗಿ ಏಳು ಪುರುಷ ಪಾತ್ರ, ನಾಲ್ಕು ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿರುವುದನ್ನು ಕಾಣುತ್ತೇವೆ. ನಾಟಕ ದೀರ್ಘವಾಗಿ ಪ್ರೇಕ್ಷಕರಲ್ಲಿ ಬೇಸರ ತರಿಸಬಾರದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಕೇವಲ ೧೧ ದೃಶ್ಯಗಳಲ್ಲಿ ನಾಟಕವನ್ನು ಮುಗಿಸುತ್ತಾರೆ. ಕಥೆಗೆ ಪೂರಕವಾಗುವಂತೆ

ಪಾತ್ರಗಳು, ಪಾತ್ರಕ್ಕೆ ತಕ್ಕಂತೆ ತಮ್ಮ ಗುಣ-ಸ್ವಭಾವಗಳನ್ನು ವ್ಯಕ್ತಪಡಿಸಲು ಸನ್ನಿವೇಶ, ಘಟನೆಗಳನ್ನು ನಾಟಕದಲ್ಲಿ ಸೃಷ್ಟಿಸಿ ಪಾತ್ರಗಳು ಜೀವಂತಿಕೆಯಿಂದ ಮೆರೆಯುವಂತೆ ಮಾಡಿ ಕಲಾ ಕೌಶಲವನ್ನು ತೋರಿಸಿರುವುದು ಅರಿಷಿಣಗೋಡಿಯವರ ವೈಶಿಷ್ಟ್ಯ.

ಈ ನಾಟಕ ಗ್ರಾಮೀಣ ಬದುಕಿನ ರೈತಾಪಿ ಕುಟುಂಬಗಳ ಸುತ್ತ ತಿರುಗುವುದು. ಗ್ರಾಮದಲ್ಲಿ ನಡೆಯುವ ಹೊಡೆದಾಟ, ಬಡಿದಾಟಗಳ ಚಿತ್ರಣವನ್ನು ಪರಿಣಾಮಕಾರಿಯಾಗಿ ಸೆರೆಹಿಡಿದಿದ್ದನ್ನು ಕಾಣುತ್ತೇವೆ. ರೈತಾಪಿ ವರ್ಗದ ಮಹಿಳೆ ಕೇವಲ ಹೊಲಗೆಲಸಗಳನ್ನು ಮಾಡಿದರೆ ಸಾಲದು, ಆಕೆಯು ಧೈರ್ಯಶಾಲಿಯೂ ಆಗಿರಬೇಕು. ಹೆಣ್ಣುಮಕ್ಕಳು ಧೈರ್ಯಶಾಲಿಗಳಾದರೆ ಪುರುಷ ವರ್ಗದಿಂದ ನಡೆಯುವ ಶೋಷಣೆಯನ್ನು ತಡೆಯಲು ಸಾಧ್ಯವಾಗುವುದೆಂಬ ಆಶಯವನ್ನು ನಾಟಕಕಾರರು ಗೌರಿಯ ಪಾತ್ರದ ಮುಖಾಂತರ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ.

ಒಟ್ಟಾರೆ ಗಂಡೆದೆಯ ಗೌರಿ ನಾಟಕವು ಗ್ರಾಮೀಣ ಬದುಕಿನ ಚಿತ್ರಣವನ್ನು ಹಿತ-ಮಿತ ಪಾತ್ರಗಳ ಮುಖಾಂತರ ಮನವರಿಕೆ ಮಾಡುವಲ್ಲಿ ಸಫಲವಾಗಿರುವುದನ್ನು ಕಾಣುತ್ತೇವೆ.

ಬಡವರೂ ನಗಬೇಕು (ಅಪ್ರತಿಮ ಅಳಿಯ)

ನಾಗೇಗೌಡ ಅವಿವಾಹಿತ ದುಷ್ಟ ತರುಣ. ತಮ್ಮ ಶೇಖರ ಸುಶಿಕ್ಷಿತ, ವಿದ್ಯಾವಂತ, ಆದರ್ಶವಾದಿ. ಊರಲ್ಲಿ ನಾಗೇಗೌಡ ತನ್ನ ದುಡ್ಡಿನ ದರ್ಪದಿಂದ ಬಡವರ ಆಸ್ತಿ ನುಂಗುತ್ತಾ ಕಂಡ ಕಂಡ ಹೆಂಗಸರ ಸಹವಾಸಕ್ಕೆ ಹಾತೊರೆಯುತ್ತ ತನಗೆ ಅಡ್ಡ ಬಂದವರನ್ನು ಆಳುಗಳಾದ ಭೈರನ ಮುಖಾಂತರ ಬಗ್ಗು ಬಡಿಸುತ್ತಿದ್ದನು. ಗೌಡನ ದುರ್ವರ್ತನೆಯಿಂದ ಬೇಸತ್ತ ಮಾದ ಗೌಡರ ಮನೆಬಿಟ್ಟು ಕೂಲಿನಾಲಿ ಮಾಡುತ್ತ ಬದುಕುತ್ತಿದ್ದನು. ನಾಗೇಗೌಡನ ತಮ್ಮ ಶೇಖರ ಸರಕಾರಿ ನೌಕರಿ ಮಾಡಲು ಮನಸ್ಸು ಮಾಡದೆ ಪ್ರೊಫೆಸರರ ಉಪನ್ಯಾಸದ ಪ್ರಭಾವಕ್ಕೊಳಗಾಗಿ ಊರಿಗೆ ಬಂದು ಕೃಷಿ ಚಟುವಟಿಕೆಯಲ್ಲಿ ತೊಡಗುವನು. ಪ್ರಗತಿಪರ ಕೃಷಿ ಚಟುವಟಿಕೆಗಳಾದ ತೋಟಗಾರಿಕೆ, ಸುಸ್ಥಿರ ಕೃಷಿ ಕಡೆಗೆ ಒಲವು ತೋರಿಸುತ್ತಾ ಬಡವರ ಬಗ್ಗೆ ವಿಶೇಷ ಕಾಳಜಿ ವಹಿಸಿ ಊರು ಊರು ಸುತ್ತುತ್ತಾ ಒಳ್ಳೆಯ ಹುಡುಗರ ಸಂಗ ಮಾಡುವನು. ಹಾಗೆಯೇ ಊರಲ್ಲಿ ನೆಲೆಸಿದ್ದ ಮೂಢನಂಬಿಕೆ, ಕಂದಾಚಾರ, ಮಾಟ, ಮಂತ್ರ ಇತ್ಯಾದಿಗಳನ್ನು ವೈಚಾರಿಕ ನೆಲೆಗಟ್ಟಿನ ಮೇಲೆ ಪಂಡಿತ ಪಾಪಣ್ಣನ ಪವಾಡಗಳನ್ನು ಟೊಳ್ಳು ಎಂದು ಬಯಲಿಗೆ ಎಳೆಯುವನು. ಅಣ್ಣ ನಾಗೇಗೌಡನ ಕಾರಬಾರಿಯಾದ ಬಾಲಣ್ಣ ಒಳ್ಳೆಯವನಿದ್ದರೂ ಗೌಡನ ದರ್ಪಕ್ಕೆ ಅಂಜಿ ಗೌಡ ಹೇಳಿದಂತೆ ಕೇಳುವ ಹಾಗೇ ಗೌಡನ ಎಲ್ಲ ಅನ್ಯಾಯಕ್ಕೆ ಸಹಕರಿಸುವನು. ಆದರೆ ಬಾಳಣ್ಣ ತನ್ನ ಮಗಳನ್ನು ಭೈರನಿಗೆ ಕೊಡಬಾರದೆಂದು ನಿರ್ಧರಿಸಿ ಪರದೇಶಿಯಾದ ತ್ಯಾರಮಲ್ಲನಿಗೆ ಕೊಡಬೇಕೆಂದು ನಿರ್ಧರಿಸಿದನು. ತ್ಯಾರಮಲ್ಲನಾದರೂ ಸಿನಿಮಾದ ಹುಚ್ಚು ಹಿಡಿಸಿಕೊಂಡು ಬೆಂಗಳೂರಿಗೆ ಹೋಗಿ ಸಿ.ಐ.ಡಿ. ಇನ್‌ಸ್ಪೆಕ್ಟರನಾಗುವವನು(ಬಾಳಣ್ಣನಿಗೆ ಗೊತ್ತಿಲ್ಲದಂತೆ). ಬಡವರ ಬಗ್ಗೆ ಕಾಳಜಿ ಹೊಂದಿದ ಶೇಖರ

ಬಡವನಾದ ರಾಮಜ್ಜನ ಹೊಲವನ್ನು ಅಣ್ಣ ಗೌಡನಿಂದ ಬಿಡಿಸಿಕೊಡಲು ಪ್ರಯತ್ನಿಸಿ ಅಣ್ಣನ ಮನಸ್ತಾಪಕ್ಕೆ ಕಾರಣನಾಗುವನು. ಮುಂದೆ ಊರಲ್ಲಿ ಶೇಖರ ಜನಾನುರಾಗಿಯಾಗಿ ಅಣ್ಣನ ವಿರುದ್ಧ ನಿಂತು ಚುನಾವಣೆಯಲ್ಲಿ ಗೆದ್ದು ಬರುವನು.

ಯಾವಾಗ ಗೌಡನ ವಿರುದ್ಧ ರಾಮಜ್ಜ ಧ್ವನಿ ಎತ್ತುವನೋ ಅವನ ಹೊಲದಲ್ಲಿದ್ದ ಮೇವಿನ ಬಣವಿಗೆ ಬೈರನಿಂದ ಬೆಂಕಿ ಹಚ್ಚಿಸುವನು, ಗುಂಡಾ, ಕುಡುಕ, ಬೈರನ ಕೆಲಸವನ್ನು ಮಾದ ಊರವರಿಗೆ ಹೇಳುವನು. ಇದರಿಂದ ವ್ಯಗ್ರನಾದ ಗೌಡ ಹೆಡೆ ತುಳಿದ ಸರ್ಪದಂತೆ ಹಾರಾಡುತ್ತಾನೆ. ರಾಮಜ್ಜನ ಬಣವಿಯ ಲುಕ್ಸಾನು ಶೇಖರ ತುಂಬಿಕೊಡುವನು. ರಾಮಜ್ಜನ ಮಗಳು ಪಾರ್ವತಿ ಶೇಖರನ ಗುಣ ಮೆಚ್ಚಿ ಪ್ರೀತಿಸುವಳು, ಶೇಖರ-ಪಾರ್ವತಿ ಪ್ರೀತಿಸುವ ಸುದ್ದಿ ಊರಲ್ಲಿ ಗುಸುಗುಸು ಶುರುವಾಗುವುದು. ಇದನ್ನು ತಿಳಿದ ಗೌಡ ಶೇಖರನಿಗೆ ಬುದ್ಧಿವಾದ ಹೇಳಲು ಪ್ರಯತ್ನಿಸಿ ವಿಫಲನಾಗುವನು. ಗ್ರಾಮಸೇವಕಿಯಾಗಿ ಬಂದ ಮಾಲತಿ ಊರಿನ ಮಕ್ಕಳಿಗೆಲ್ಲ ತಿಳುವಳಿಕೆಯನ್ನು ಕೊಡುತ್ತಿದ್ದಳು. ವೇಷಧಾರಿಯಾದ ಈ ಮಾಲತಿ (ಸಿ.ಐ.ಡಿ.) ಗೌಡನ ಎಲ್ಲಾ ಚಟುವಟಿಕೆಗಳ ಮೇಲೆ ನಿಗಾ ಇಟ್ಟಿರುತ್ತಾಳೆ.

ಪಂಡಿತ ಪಾಪಣ್ಣ ತನ್ನ ಬೂಟಾಟಿಕೆ, ಮಂತ್ರ, ತಂತ್ರ, ಮಾತುಗಳ ಮುಖಾಂತರ ಜನರನ್ನು ನಂಬಿಸಿ ನೂರಾರು ಭಕ್ತರನ್ನು ಪಡೆದು ಊರಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದನು. ಊರಿನ ಯಾರಿಗೆ ಯಾವುದೇ ಪೀಡೆ ಬಂದರೂ ಅದಕ್ಕೆ ಪರಿಹಾರವನ್ನು ಸೂಚಿಸುತ್ತ ಭಕ್ತರಿಂದ ಹಣ ಸಂಪಾದನೆ ಮಾಡುತ್ತಿದ್ದನು. ದನಕರುಗಳಿಗೆ ರೋಗರುಜಿನಗಳು ಬಂದರೆ ಅದಕ್ಕೆ ಧನಪೀಡೆಯಿಂದು ಹೇಳಿ ಬಸ್ಮವನ್ನು ಕೊಟ್ಟುಕಳಿಸುತ್ತಿದ್ದನು. ಕೆಲವು ಶಿಷ್ಯರನ್ನು ಇಟ್ಟುಕೊಂಡು ಭಕ್ತರಿಂದ ಹಣ ಸಂಗ್ರಹ ಮಾಡುತ್ತಾ ಮುಗ್ಧ ಜನರನ್ನು ಶೋಷಿಸುತ್ತಿದ್ದನು. ಅವಿದ್ಯಾವಂತರಾದ ಜನರನ್ನು ಶೋಷಣೆಗೆ ಒಳಪಡಿಸುವುದರಲ್ಲಿ ಪಂಡಿತ ಪಾಪಣ್ಣ ಪರಿಣತಿಯನ್ನು ಪಡೆದಿದ್ದನು. ಅಲ್ಲದೆ ನಾಗೇಗೌಡರನ್ನು ಒಲಿಸಿಕೊಂಡಿದ್ದನು. ನಾಗೇಗೌಡರ ಕಾರಬಾರಿ ಬಾಲಣ್ಣನಂತೂ ಯಾವುದಕ್ಕೂ ಪಂಡಿತ ಪಾಪಣ್ಣನವರ ಸಲಹೆಯಂತೆ ಕೆಲಸ ಮಾಡುತ್ತಿದ್ದನು. ಯಾವಾಗ ನಾಗೇಗೌಡರ ತಮ್ಮ ಶೇಖರ ವಿದ್ಯಾವಂತನಾಗಿ ಊರಿಗೆ ಬಂದನೋ ಆವಾಗ ಪಂಡಿತ ಪಾಪಣ್ಣನ ಆಟ ನಡೆಯ ದಂತಾಯಿತು.

ಪ್ರಗತಿಶೀಲ ಮನೋಭಾವನೆಯನ್ನು ಬೆಳೆಸಿಕೊಂಡ ನಾಗೇಗೌಡರ ತಮ್ಮ ಶೇಖರ ಬಡವರ, ಅವಿದ್ಯಾವಂತರ ಮೇಲೆ ನಡೆಯುವ ಪಂಡಿತ ಪಾಪಣ್ಣನ ಬೂಟಾಟಿಕೆಯನ್ನು ವಿರೋಧಿಸಲಿಕ್ಕೆ ಹತ್ತಿದನು. ಪಂಡಿತ ಪಾಪಣ್ಣನ ಮಂತ್ರ, ಯಂತ್ರ, ತಂತ್ರಗಳನ್ನು ಬಯಲು ಮಾಡುವ ಪಣ ತೊಟ್ಟ ಶೇಖರ ಪಂಡಿತ ಪಾಪಣ್ಣನ ವಿರೋಧ ಕಟ್ಟಿಕೊಳ್ಳಬೇಕಾಯಿತು. ಊರಿಗೆ ಶೇಖರನ ಆಗಮನದಿಂದ ಪಂಡಿತರ ಬೇಳೆ ಬೇಯದಂತಾಯಿತು. ಶೇಖರನು ಊರಲ್ಲಿನ ಎಲ್ಲಾ ಸಮಸ್ಯೆಗಳ ಕಡೆಗೆ ಲಕ್ಷ್ಯಹರಿಸಿ ಊರಿನ ಸುಧಾರಣೆ ಮಾಡಹತ್ತಿದನು. ಅಣ್ಣ ನಾಗೇಗೌಡನ ಬಗ್ಗೆಯೂ ಜನರಲ್ಲಿ ಜಾಗೃತಿಯನ್ನುಂಟು ಮಾಡಿದನು. ಇದರಿಂದ

ಊರಲ್ಲಿ ಶೇಖರ ಎಲ್ಲರಿಗೂ ಅಚ್ಚುಮೆಚ್ಚಿನವನಾದನು. ಶೇಖರನ ವಿಚಾರವನ್ನು ತಿಳಿದುಕೊಂಡ ಊರು ಎಲ್ಲ ರೀತಿಯಿಂದಲೂ ಸುಧಾರಣೆಯಾಯಿತು. ಇದನ್ನು ಸಹಿಸದ ಅಣ್ಣ ನಾಗೇಗೌಡ, ಪಂಡಿತ ಪಾಪಣ್ಣ, ಶೇಖರನನ್ನು ಹೇಗಾದರೂ ಮಾಡಿ ಊರು ಬಿಡಿಸಬೇಕೆಂದು ಯೋಜನೆ ಹಾಕಿ ವಿಫಲರಾಗುವರು. ಪಂಡಿತ ಪಾಪಣ್ಣನಿಗೆ ಯಾರಾದರೂ ವಿರುದ್ಧ ಮಾತನಾಡಿದರೆ ಭವಿಷ್ಯದಲ್ಲಿ ನಿನಗೆ ತೊಂದರೆಯಾಗುವದು ಇಲ್ಲವೆ ನೀನು ಹಾಳಾಗಿ ಹೋಗು ಎಂದು ಶಾಪ ಹಾಕುತ್ತಾ ಬೆದರಿಸುತ್ತಿದ್ದನು. ಶೇಖರ ಇಂತಹ ಶಾಪ, ಮಂತ್ರಗಳನ್ನು ಬಯಲಿಗೆ ಎಳೆದು ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಿದನು. ನಾಗೇಗೌಡರ ಕಾರಬಾರಿಯಾದ ಬಾಳಣ್ಣನು ಒಳ್ಳೆಯ ಸ್ವಭಾವದ ಸಾತ್ವಿಕ ಮನುಷ್ಯ. ನಾಗೇಗೌಡರ ಕುಮ್ಮಕ್ಕಿನಿಂದ ಅವರಿಗೆ ಅಂಜಿ ಗೌಡರು ಹೇಳಿದ ಕೆಟ್ಟಕೆಲಸಗಳನ್ನು ಮಾಡಿ ಮನಸ್ಸಿನಲ್ಲಿ ಪಶ್ಚಾತ್ತಾಪ ಪಡುತ್ತಿದ್ದನು. ರಾಮಜ್ಜನ ಬಣವಿಗೆ ಬೆಂಕಿ ಹಚ್ಚಿಸಿದ್ದು ಭೈರನ ಮುಖಾಂತರ ಬಯಲಾದದ್ದು ರಾಮಜ್ಜನಿಗೆ ಅಣ್ಣನ ಪರವಾಗಿ ಶೇಖರ ಸಮಾಧಾನದ ಮಾತುಗಳನ್ನು ಹೇಳಿದ್ದು ರಾಮಜ್ಜನಿಗೆ ಕೊಡಬೇಕಾದ ಹೊಲವನ್ನು ಅಣ್ಣನಿಂದ ಬಿಡಿಸಿಕೊಟ್ಟಿದ್ದು ಶೇಖರನ ವ್ಯಕ್ತಿತ್ವಕ್ಕೆ ಮೆರಗು ತಂದುಕೊಡುತ್ತದೆ. ಅಲ್ಲದೆ ರಾಮಜ್ಜನ ಮಗಳು ಪಾರ್ವತಿಯನ್ನು ಶೇಖರ ಪ್ರೀತಿಸುವನು. ಶೇಖರನ ಗುಣಕ್ಕೆ ಮೆಚ್ಚಿ ಪಾರ್ವತಿಯೂ ಶೇಖರನನ್ನು ಮದುವೆಯಾಗಲು ಸಿದ್ಧಳಾಗುವಳು.

ತ್ಯಾರಮಲ್ಲ ಹಾಗೂ ಗ್ರಾಮ ಸೇವಕಿ ಮಾಲತಿ ಗುರ್ಜಿ, ಭವಿಷ್ಯ ಹೇಳುವ ನೆಪದಲ್ಲಿ ಗೌಡನ ಹಿಂದಿನ ರಹಸ್ಯವನ್ನು ಟೇಪ್‌ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳುವರು. ಭವಿಷ್ಯಗಾರರನ್ನು ನಂಬಿದ ಗೌಡ ತಾನು ಹಿಂದೆ ಮಾಡಿದ ತಂದೆ ಶಿವಗೌಡನ ಕೊಲೆಯನ್ನು ಒಪ್ಪಿಕೊಳ್ಳುವನು, ತನಗೆ ವಿರೋಧವಾಗಿ ನಿಂತ ತಮ್ಮ ಶೇಖರನ ಕೊಲೆಯನ್ನು ಮಾಡಲು ಸಂಚು ರೂಪಿಸಿದ್ದನ್ನು ತನಗರಿವಿಲ್ಲದೆ ಆ ವೇಷಧಾರಿ ತ್ಯಾರಮಲ್ಲ ಹಾಗೂ ಮಾಲತಿಯರ ಮುಂದೆ ಹೇಳುವನು. ಇದೆಲ್ಲವನ್ನು ಟೇಪ್‌ರೆಕಾರ್ಡ್‌ನಲ್ಲಿ ರಿಕಾರ್ಡ ಮಾಡಿದ ವೇಷಧಾರಿಗಳು ಪೊಲೀಸರನ್ನು ಕರಿಸಿ ವೇಷ ಕಳಚುವರು. ಕೊನೆಯಲ್ಲಿ ಪಂಡಿತ ಪಾಪಣ್ಣ, ಪೊಲೀಸರ ಜೊತೆ ಬಂದ ಭೈರ ಹಾಗೂ ಗೌಡ ನಾಗೇಗೌಡರನ್ನು ಪೊಲೀಸರು ಎಳೆದುಕೊಂಡು ಹೋಗುವರು. ಇತ್ತ ಶೇಖರ, ರಾಮಜ್ಜನ ಮಗಳು ಪಾರ್ವತಿ ಮದುವೆಯಾಗುವರು. ಮುಂದೆ ತ್ಯಾರಮಲ್ಲ ಲಕ್ಷ್ಮಿಯರ ಮದುವೆಯು ನೆರವೇರುವುದರೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ.

ಗ್ರಾಮೀಣ ಬದುಕಿನಲ್ಲಿ ನಡೆಯುವ ಬಡವರ ಮೇಲಿನ ದಬ್ಬಾಳಿಕೆ, ಬಡವರಿಗೆ ಕಾನೂನಿನ ಅರಿವು ಕೊಡುವ ಪ್ರಯತ್ನ, ಹಳ್ಳಿಯಲ್ಲಿ ಬೇರು ಬಿಟ್ಟಿದ್ದ ಯಂತ್ರ, ಮಂತ್ರ, ತಂತ್ರ ಮುಂತಾದ ಮೂಢನಂಬಿಕೆ, ಕಂದಾಚಾರಗಳನ್ನು ವೈಚಾರಿಕ ನೆಲೆಗಟ್ಟಿನ ಮೇಲೆ ಜನರಿಗೆ ತಿಳುವಳಿಕೆ ಕೊಡುವುದು. ಅದೇ ತಾನೇ ಬಂದ ವಿಜ್ಞಾನ ಸಲಕರಣೆಗಳ ಮುಖಾಂತರ (ಧ್ವನಿಸುರುಳಿ) ಅಪರಾಧಿಗಳನ್ನು ಆಧಾರ ಸಮೇತ ಸೆರೆ ಹಿಡಿಯುವುದು, ಕೌಟುಂಬಿಕ ಕಲಹಗಳನ್ನು ಪ್ರೀತಿಯಿಂದ ಬಗೆಹರಿಸುವುದು. ಹೆಣ್ಣು-ಗಂಡಿನ ಪ್ರೀತಿ

ಪ್ರೇಮಕ್ಕೆ ಗೌರವ ಕೊಡುವುದು. ಇವೆಲ್ಲ ವಿಚಾರಗಳಿಂದ ನಾಟಕ ಸಮಾಜದ ಪರಿವರ್ತನೆಯನ್ನು ಮಾಡಲು ಉದ್ದೇಶಿಸಿದೆ.

ಕಥೆಗೆ ತಕ್ಕಂತೆ ಸಂದರ್ಭೋಚಿತವಾಗಿ ಪಾತ್ರ ಸೃಷ್ಟಿಮಾಡಿರುವದನ್ನು ಕಾಣುತ್ತೇವೆ. ಯಾವ ಪಾತ್ರವೂ ನಾಟಕದಲ್ಲಿ ಸಪ್ಪೆಯಾಗಿ ಕಾಣುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ನಾಟಕದ ಎಲ್ಲಾ ಪಾತ್ರಗಳು ತಮ್ಮ ತಮ್ಮ ಧ್ಯೇಯ, ಗುಣಧರ್ಮ, ನಡವಳಿಕೆಗಳನ್ನು ಸಮರ್ಥವಾಗಿ ಬಿಂಬಿಸುತ್ತವೆ. ಇಲ್ಲಿ ಬರುವ ಪಂಡಿತ ಪಾಪಣ್ಣನಾಗಲಿ, ಬಾಲಣ್ಣನಾಗಲಿ, ಸಣ್ಣ ಪಾತ್ರವಾದ ಮಾದನಾಗಲಿ ತಾವು ಏನನ್ನು ಹೇಳಬೇಕು ಅದನ್ನೆಲ್ಲ ಆಡುಮಾತಿನ ಮುಖಾಂತರ ವ್ಯಕ್ತಪಡಿಸಿರುವದನ್ನು ಕಾಣುತ್ತೇವೆ (ಈ ನಾಟಕದಲ್ಲಿ ೯-೧೦ ಪುರುಷ ಪಾತ್ರಗಳು, ೩-೪ ಸ್ತ್ರೀ ಪಾತ್ರಗಳು ಇರುವದನ್ನು ಕಾಣಬಹುದಾಗಿದೆ).

ಆಧುನಿಕ ಶಿಕ್ಷಣ ಪದ್ಧತಿಯಿಂದ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಾಗುತ್ತಿದ್ದ ಕಾಲವದು. ಸಾಕ್ಷರತೆಯ ಪ್ರಮಾಣ ಹೆಚ್ಚಾಯಿತೆ ಹೊರತು ಜನರು ನಿಜವಾದ ವಿದ್ಯಾವಂತರಾಗಿ ಪರಿವರ್ತನೆಯಾಗಲಿಲ್ಲ. ದೇಶದ ಪ್ರಗತಿಗೆ ಮಾರಕವಾದ ಮೂಢನಂಬಿಕೆ, ಕಂದಾಚಾರ, ಸ್ವಜನಪಕ್ಷಪಾತ, ಸ್ವಾರ್ಥ ರಾಜಕೀಯದಿಂದ ಗ್ರಾಮೀಣ ಬದುಕು ಕಲುಷಿತಗೊಂಡಿತು. ಬಹುಸಂಖ್ಯಾತ ವಿದ್ಯಾವಂತರಲ್ಲಿ ಕೆಲವೇ ಕೆಲವು ವಿದ್ಯಾವಂತರು ದೇಶದ ಬಗ್ಗೆ ಚಿಂತಿಸುತ್ತಿದ್ದರು. ಇಡೀ ವಿದ್ಯಾವಂತ ಸಮೂಹ ಒಟ್ಟಾಗಿ ದೇಶದ ಪ್ರಗತಿಯತ್ತ ಧ್ವನಿ ಎತ್ತದೆ ಸ್ವಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲು ನಿರತರಾಗಿದ್ದರು. ಇಂತಹ ಸಂದರ್ಭದಲ್ಲಿ ಬಿ.ಆರ್. ಅರಿಷಿಣಗೋಡಿಯವರು ಸಮಕಾಲೀನ ಸಂವೇದನೆಗಳನ್ನು ಅರ್ಥಮಾಡಿಕೊಂಡು ಈ ನಾಟಕವನ್ನು ರಚಿಸಿದರು.

ನಾಟಕ ಒಟ್ಟು ೧೦ ದೃಶ್ಯಗಳನ್ನು ಒಳಗೊಂಡಿದೆ. ೧೦ ಪುರುಷ ಪಾತ್ರಗಳು ೩-೪ ಸ್ತ್ರೀ ಪಾತ್ರಗಳು ಸಂದರ್ಭಕ್ಕೆ ತಕ್ಕಂತೆ ತಮ್ಮ ಗುಣಸ್ವಭಾವಗಳನ್ನು ಪ್ರಕಟಿಸುತ್ತ ಕಥೆಯನ್ನು ಮುನ್ನಡೆಸಿಕೊಂಡು ಹೋಗುತ್ತವೆ.

ಈ ನಾಟಕದಲ್ಲಿ ಬರುವ ನಾಗೇಗೌಡನ ಪಾತ್ರ ಗ್ರಾಮೀಣ ಬದುಕಿನಲ್ಲಿ ನಡೆಯುವ ಶ್ರೀಮಂತಿಕೆಯ ದರ್ಪ, ಗುಂಡಾಗಿರಿ ಮುಂತಾದ ಕೃತ್ಯಗಳನ್ನು ಪ್ರತಿನಿಧಿಸುವಂತೆ ಕಂಡುಬರುವುದು. ಶೇಖರನ ಪಾತ್ರದ ಮುಖಾಂತರ ನಾಟಕಕಾರರು ಆದರ್ಶ ಸಮಾಜವನ್ನು ನಿರ್ಮಾಣ ಮಾಡುವ ಕನಸುಕಂಡಂತೆ ಕಾಣುತ್ತದೆ. ಸಮಾಜದಲ್ಲಿ ಬೇರುಬಿಟ್ಟ ಮೂಢನಂಬಿಕೆ, ಕಂದಾಚಾರದಿಂದ ಸಾಮಾನ್ಯ ಜನರನ್ನು ಶೋಷಿಸುತ್ತಿದ್ದ ಪಂಡಿತ ಪಾಪಣ್ಣನ ಬೂಟಾಟಿಕೆಗಳನ್ನು ಬಯಲಿಗೆಳೆದು ಜನಜಾಗೃತಿಯನ್ನು ಉಂಟುಮಾಡುವ ಉದ್ದೇಶಕ್ಕಾಗಿ ಪಂಡಿತ ಪಾಪಣ್ಣನ ಪಾತ್ರವನ್ನು ನಾಟಕಕಾರರು ಸೃಷ್ಟಿಸಿದ್ದಾರೆ. ತ್ಯಾರಮಲ್ಲ-ಮಾಲತಿ ಪಾತ್ರಗಳು ಅದೇ ತಾನೆ ಬಂದ ವಿಜ್ಞಾನ ಸಲಕರಣೆಗಳ ಮುಖಾಂತರ ಅಪರಾಧಿಗಳನ್ನು ಆಧಾರ ಸಮೇತ ಸೆರೆಹಿಡಿಯುವ ದೃಶ್ಯ ನಾಟಕಕಾರರಿಗೆ ಇದ್ದ ಅಪರಾಧಶಾಸ್ತ್ರದ ಜ್ಞಾನವನ್ನು ತಿಳಿಸುತ್ತದೆ.

ಸಂಗ್ಯಾ ಬಾಳ್ಯಾ

೧೯೮೮ರ ಅಥಣಿ ಕ್ಯಾಂಪನಲ್ಲಿ ರಚಿಸಿದ ನಾಟಕವಿದು. ಒಂದು ಶತಮಾನದ ಹಿಂದೆ ನಡೆದ ಸತ್ಯಕಥೆಯನ್ನು ಆಧರಿಸಿ ಇಂದಿನ ಸಮಾಜಕ್ಕೂ ಕೈಗನ್ನಡಿ ಆಗಿರುವ ಈ ಸಂಗ್ಯಾ ಬಾಳ್ಯಾ ಐತಿಹಾಸಿಕ ಬಯಲಾಟವನ್ನು ವೃತ್ತಿರಂಗಭೂಮಿಗೆ ಹೊಂದಿಕೆಯಾಗುವ ರೀತಿಯಲ್ಲಿ ಬಿ.ಆರ್. ಅರಿಷಿಣಗೋಡಿಯವರು ರಚಿಸಿದ್ದಾರೆ. ಈ ನಾಟಕವನ್ನು ನೋಡಿದಾಗ ಇವರು ಸಮಕಾಲೀನ ವೃತ್ತಿರಂಗಭೂಮಿಗೆ ಹೊಸತನವನ್ನು ತಂದುಕೊಡಲು ಪ್ರಯತ್ನಿಸಿದಂತೆ ತೋರುವದಲ್ಲದೇ ಅವರ ಕಲಾಪ್ರತಿಭೆಗೆ ಇದು ಸಾಕ್ಷಿಯಾಗುವಂತಿದೆ.

ಬೈಲಹೊಂಗಲದ ಆಗರ್ಭ ಶ್ರೀಮಂತ ಮನೆತನ ಲಗಳೇರ ಮನೆತನ; ಆ ಮನೆತನದಲ್ಲಿ ಈರಣ್ಣ, ವಿರೂಪಾಕ್ಷಿ, ಬಸವಂತ ಎಂದು ಮೂವರು ಸಹೋದರರು. ಹಿರಿಯವನಾದ ಈರಣ್ಣ ವ್ಯಾಪಾರ ಹಾಗೂ ಮನೆತನದ ಜವಾಬ್ದಾರಿ ಹೊತ್ತಿರುವ ಯಜಮಾನ, ತಮ್ಮಂದಿರಾದ ವಿರೂಪಾಕ್ಷ ಹಾಗೂ ಬಸವಂತ ಮನೆತನದ ವೃತ್ತಿಯಾದ ಒಕ್ಕಲುತನವನ್ನು ನಿಭಾಯಿಸಿಕೊಂಡು ಹೋಗುವವರು. ಸಣ್ಣವನಾದ ಬಸವಂತನು ಕುಸ್ತಿ ಆಟಗಾರನಾಗಿ ಸುತ್ತಲಿನ ಹಳ್ಳಿಯಲ್ಲಿಯೇ ಕಡೆದಾದ (ಪ್ರಸಿದ್ಧ) ಕುಸ್ತಿಪಟುವಾಗಿದ್ದನು. ಹಿರಿಯವನಾದ ಈರಣ್ಣನ ಮದುವೆ ಆಗಿತ್ತು. ಅವನ ಹೆಂಡತಿ ಅಪ್ರತಿಮ ಚೆಲುವೆ, ಗರತಿ ಗಂಗಮ್ಮನಾದ ಗಂಗೂ ಕೊನೆಗೆ ಬೇರೆ ಬೇರೆ ಒತ್ತಡಗಳಿಗೆ ಸಿಕ್ಕು ತನ್ನ ಪಾವಿತ್ರ್ಯತೆಯನ್ನು ಹಾಳುಮಾಡಿಕೊಂಡು ತವರುಮನೆ ಸೇರಿದ ಹಾದರದ ಹೆಣ್ಣಾಗುವಳು. ಸಂಗ್ಯಾ ಉರ ಶ್ರೀಮಂತ, ಶೋಕಿ ಮನುಷ್ಯ, ಹೆಣ್ಣುಗಳ ಖಯ್ಯಾಲಿ, ಮೋಜುಗಾರನಾಗಿದ್ದ ಸಂಗ್ಯಾ ಈರಣ್ಣನ ಹೆಂಡತಿ ಗಂಗಾಳ ರೂಪಕ್ಕೆ ಮಾರುಹೋಗಿ ಗಂಗಾಳನ್ನು ಹೇಗಾದರೂ ಮಾಡಿ ತನ್ನ ವಶಪಡಿಸಿಕೊಳ್ಳಬೇಕೆಂಬ ಛಲಗಾರ. ತನ್ನ ಛಲ ಸಾಧಿಸುವದಕ್ಕಾಗಿ ಗೆಳೆಯ ಬಾಳ್ಯಾ ಹಾಗೂ ಕುಂಟಲಗಿತ್ತಿಯ ಕೆಲಸ ಮಾಡುವ ಪರಮ್ಮನ ಮುಖಾಂತರ ತನ್ನ ಛಲವನ್ನು ಸಾಧಿಸಿ ಕೊಳ್ಳುವನು.

ಸಂಗ್ಯಾ-ಬಾಳ್ಯಾ ಅಂದರೆ ಸುತ್ತಲಿನ ಹಳ್ಳಿಯಲ್ಲಿ ಅಪರೂಪವಾದ ಜೋಡಿ, ಸ್ನೇಹಿತರು, ಜೀವಕ್ಕೆ ಜೀವ ಕೊಡುವ ಮಾದರಿಯಾದ ಗೆಳೆಯರಾಗಿದ್ದರು. ಬಾಳ್ಯಾ ಕಡುಬಡವ. ಬಡತನದ ಜೊತೆಗೆ ಕುಟುಂಬದ ಜವಾಬ್ದಾರಿ ಅವನ ಹೆಗಲ ಮೇಲೆ ಬಿದ್ದಿತ್ತು. ಶ್ರೀಮಂತ ಸಂಗ್ಯಾ, ಬಾಳ್ಯಾನನ್ನು ಅಗಲದ ಸ್ನೇಹಿತ. ಸಂಗ್ಯಾನು ತನಗೆ ಯೋಗ್ಯವಾದ ಬಟ್ಟೆಬರೆಗಳನ್ನು ತೆಗೆದುಕೊಂಡರೂ ಬಾಳ್ಯಾನಿಗೂ ಅಷ್ಟೇ ಬೆಲೆಬಾಳುವ ಬಟ್ಟೆಗಳನ್ನು ಕೊಡಿಸುತ್ತಿದ್ದನು. ಬಿಟ್ಟು ಅಗಲದ ಸ್ನೇಹಜೀವಿಗಳು. ನಾಟಕಕ್ಕೆ ತಕ್ಕಹಾಗೆ ಚೆನ್ನನ ಪಾತ್ರವು ಇಲ್ಲಿ ಸಂದರ್ಭೋಚಿತವಾಗಿ ಬರುವುದು. ಚೆನ್ನ ಲಗಳೇರ ಮನೆತನದ ಆಳು, ಮಾನಿಂಗಿ ಸಣ್ಣ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ಮರುಮದುವೆಗಾಗಿ ಪರಿತಪಿಸುವ ಮೊಸರು ಮಾರುವ ತರುಣಿಯಾಗಿ ಈ ನಾಟಕದಲ್ಲಿ ಕಾಣಿಸಿಕೊಳ್ಳುವಳು. ನೀಲಗಂಗಿ ಲಗಳೇರ ಮನೆಯ ಆಳುಮನುಷ್ಯನಾದ ಚೆನ್ನನನ್ನು ಪ್ರೀತಿಸಿ ತಂದೆ-ತಾಯಿಗಳಿಂದ ಒಪ್ಪಿಗೆ ಪಡೆದು ಮದುವೆಯಾಗುವಳು.

ನಾಟಕ ಸಂಗ್ಯಾ-ಬಾಳ್ಯಾ ಹಾಗೂ ವ್ಯಾಪಾರಿಯಾದ ಸೋಮಪ್ಪನಿಂದ ಪ್ರಾರಂಭವಾಗುವುದು. ವ್ಯಾಪಾರಿ ಸೋಮಪ್ಪನಲ್ಲಿ ಉದ್ರಿ ತೆಗೆದುಕೊಂಡ ಬಾಳ್ಯಾ ಸೋಮಪ್ಪನ ಕಣ್ಣುತಪ್ಪಿಸಿ ಇತ್ತ ಸಂಗ್ಯಾನಿಗೂ ಭೆಟ್ಟಿಯಾದೇ ಒಂದು ವಾರ ಊರುಬಿಟ್ಟು ಹೋಗಿರುವನು, ಅವನನ್ನು ಹುಡುಕುತ್ತಾ ವ್ಯಾಪಾರಿ ಸೋಮಪ್ಪ ಬೈಯುತ್ತಾ ಬರುವಾಗ ಬೈಗುಳಗಳು ಸಂಗ್ಯಾನ ಕಿವಿಗೆ ಬೀಳುವವು, ಇಂತಹ ಗಳಿಗೆಯಲ್ಲಿ ಅಲ್ಲಿಗೆ ಬಾಳ್ಯಾನ ಆಗಮನ. ಸೋಮಪ್ಪ ಮತ್ತು ಬಾಳ್ಯಾ ಉದ್ರಿ ವಿಷಯವಾಗಿ ಮಾತಿನ ಸಂಘರ್ಷಕ್ಕೆ ನಿಲ್ಲುವರು. ಸಂಗ್ಯಾನು ಮಧ್ಯಸ್ಥಿಕೆ ವಹಿಸಿ ಬಾಳ್ಯಾನಿಗೆ ಧೈರ್ಯ ಹೇಳಿ ಪೇಟೆಗೆ ಕರೆದುಕೊಂಡು ಹೋಗುವನು. ಇಬ್ಬರೂ ಒಂದೊಂದು ಜೋಡು ಪೇಟಾ ದಡಿದೋತರ, ಬಿಳಿಯ ಅಂಗಿಯನ್ನು ತೆಗೆದುಕೊಳ್ಳುವರು. ಬಾಳ್ಯಾ ತನಗೆ ಈ ವಸ್ತುಗಳು ಬೇಡವೆಂದರೂ ಕೇಳದೆ ಸಂಗ್ಯಾ ಎಲ್ಲವುಗಳನ್ನು ಕೊಡಿಸುವನು. ಸಂಗ್ಯಾ ಬೇರೆ ಅಲ್ಲ ಬಾಳ್ಯಾ ಬೇರೆ ಅಲ್ಲ ನಾನು ಹಾಕಿದಂತೆ ವೇಷಭೂಷಣಗಳು ನಿನಗೂ ಇರಲಿ ಎಂದು ಒತ್ತಾಯಮಾಡಿ ಕೊಡಿಸುವನು.

ಇತ್ತ ಈರಣ್ಣನ ಮದುವೆ ಆಗಿ ಅನೇಕ ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ವ್ಯಾಪಾರ ನಿಮಿತ್ಯವಾಗಿ ಮೇಲಿಂದ ಮೇಲೆ ಊರು ಊರು ತಿರುಗುತ್ತಿದ್ದನು. ಜಾತ್ರೆಯ ಸಂದರ್ಭದಲ್ಲಿ ಬಳ್ಳಾರಿಯ ಒಬ್ಬ ವ್ಯಾಪಾರಿಯಿಂದ ಬೇಗ ಬಂದು ಹೋಗಬೇಕು ಎಂಬ ಆಮಂತ್ರಣದ ಮೇರೆಗೆ ಬಳ್ಳಾರಿಗೆ ಈರಣ್ಣ ಹೋಗಲು ತಯಾರಾಗುವನು. ಲಗಳೇರ ದೊಡ್ಡ ಮನೆಯಲ್ಲಿ ಇರುವವರು ಮೂರು ಜನರು ಹಾಗೂ ಆಳುಮನುಷ್ಯನಾದ ಚೆನ್ನನೊಬ್ಬ. ಜಾತ್ರೆಯ ಸಂದರ್ಭವಿದ್ದರೂ ಊರಲ್ಲಿ ನಿಲ್ಲದೆ ವ್ಯಾಪಾರದ ನಿಮಿತ್ತವಾಗಿ ಬಳ್ಳಾರಿಗೆ ಹೋಗಲು ತಯಾರಾದ ಗಂಡ ಈರಣ್ಣನಿಗೆ ಹೆಂಡತಿ ಗಂಗೂ ಜಾತ್ರೆ ಮುಗಿದ ನಂತರ ಹೋಗಿರೆಂದು ಹೇಳುವಳು, ಹಾಗೆಯೇ ತಮ್ಮಂದಿರಾದ ವಿರೂಪಾಕ್ಷಿ, ಬಸವಂತರು ಹೇಳುತ್ತಾರೆ. ಮಹತ್ವದ ವ್ಯಾಪಾರವಿದ್ದುದರಿಂದ ನಾನು ಹೋಗಲೇಬೇಕು ನೀವು ನಿಮ್ಮ ನಿಮ್ಮ ಒಕ್ಕಲುತನದ ಜವಾಬ್ದಾರಿಯನ್ನು ನಾನು ಬರುವವರೆಗೆ ನಿಭಾಯಿಸಿಕೊಂಡು ಹೋಗಿರಿ, ಹಾಗೆಯೇ ಜಾತ್ರೆ ಎಂದು ಊರು ಊರು ತಿರುಗುತ್ತಾ ಕುಸ್ತಿ ಆಡಲು ತಿರುಗುವುದನ್ನು ಕಡಿಮೆ ಮಾಡಿ ಮನೆಯ ಕೆಲಸದ ಕಡೆಗೆ ಗಮನವಿರಲಿ ಎಂದು ತಮ್ಮ ಬಸವಂತನಿಗೆ ಬುದ್ಧಿ ಹೇಳುವನು. ಹೆಂಡತಿಯಾದ ಗಂಗವ್ವಳನ್ನು ಸಮಾಧಾನಪಡಿಸಿ ಬೇಜಾರಾದರೆ ಆ ಮುದುಕಿಯಾದ ಪರಮ್ಮನನ್ನು ಕರೆದುಕೊಂಡು ಮರಡಿ ಬಸವಣ್ಣನಿಗೆ, ಸಂತೆಗೆ ಹೋಗಿ ಬರುತ್ತಾ ಇರು ಎಂದು ಸಮಾಧಾನ ಹೇಳಿ ಈರಣ್ಣ ಬಳ್ಳಾರಿಗೆ ಹೋಗುತ್ತಾನೆ.

ಪರವ್ವನ ಜೊತೆಗೆ ಮರಡಿ ಬಸವಣ್ಣನ ದರ್ಶನ ಪಡೆಯಲು ಹೋದ ಗಂಗೂನನ್ನು ನೋಡಿ ಆ ಜಾತ್ರೆಯ ಗದ್ದಲದಲ್ಲಿ ಗಂಗೂನ ಮೇಲೆ ಮನಸ್ಸಿಟ್ಟ ಸಂಗ್ಯಾ ಆಕೆಯ ಸರವನ್ನು ಕದಿಯುವನು. ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ಕೊರಳು ನೋಡಿಕೊಂಡಾಗ ಗಂಗೂನ ಕೊರಳಲ್ಲಿದ್ದ ಸರ ಕಾಣುವುದಿಲ್ಲ, ಆಗ ಗಂಗೂ ಗಾಬರಿಯಾಗಿ ಏನು ಅಪಶಕುನವೋ ಏನೊ ಎಂದು ಕಣ್ಣೀರ ಹಾಕುತ್ತಿರಲು ಪರಮ್ಮ

ಗಂಗೂನನ್ನು ಸಮಾಧಾನಪಡಿಸಿಕೊಂಡು ಮನೆಗೆ ಕರೆತರುವಳು. ಮುಂದೆ ಸಂಗ್ಯಾ ಹೇಗಾದರೂ ಮಾಡಿ ಬಾಳ್ಯಾನ ಮುಖಾಂತರ ಗಂಗೂನನ್ನು ಸೇರಲು ಪ್ರಯತ್ನಮಾಡಿ ಬಾಳ್ಯಾನನ್ನು ಯಾರೂ ಇಲ್ಲದ ವೇಳೆಯಲ್ಲಿ ಗಂಗೂನ ಮನೆಗೆ ಕಳಿಸಿದನು. ಬಾಳ್ಯಾ ಕದ್ದ ಸರವನ್ನು ತೋರಿಸುವನು. ಅದು ತನ್ನದೇ ಸರವೆಂದಾಗ ನನ್ನ ಗೆಳೆಯ ಶ್ರೀಮಂತ ಸುಂದರ ಧೈರ್ಯವಂತನಾದ ಸಂಗ್ಯಾನ ಜೊತೆ ಪ್ರೀತಿ ಮಾಡುವುದಾದರೆ ಈ ಸರವನ್ನು ನಿನಗೆ ಕೊಡುತ್ತೇನೆಂದು ಗೆಳೆಯನ ಮನದಾಸೆಯನ್ನು ಮನಸ್ಸಿಲ್ಲದ ಮನಸ್ಸಿನಿಂದ ಗಂಗೂಗೆ ಹೇಳುತ್ತಾನೆ. ಗರತಿ ಗಂಗೂ ಈ ಬಾಳ್ಯಾನ ಕುಂಟಲತನವನ್ನು ತಿಳಿದು ಬೈಯ್ದು ಕಳಿಸುವಳು. ಮತ್ತು ಚಪ್ಪಲಿ ತೆಗೆದುಕೊಂಡು ಹೊಡೆಯುವಳು. ನನ್ನ ಹುಲಿಯಂತ ಇಬ್ಬರು ಮೈದುನರಿಗೆ ಗೊತ್ತಾದರೆ ನಿನ್ನ ಕಡಿದು ಅಗಸಿ ಬಾಗಿಲಿಗೆ ರುಂಡವನ್ನು ಕಟ್ಟುವರು ಎಂದು ಉತ್ತರ ಕೊಟ್ಟಾಗ ಅಲ್ಲಿಂದ ಬಾಳ್ಯಾ ಕಾಲ್ತೆಗೆಯುವನು.

ಗಂಗವ್ವ ತನ್ನ ಮೈದುನರನ್ನು ಪ್ರೀತಿಯಿಂದ ನೋಡುತ್ತಿದ್ದಳು. ತಾಯಿ ಕಳೆದುಕೊಂಡು ತಬ್ಬಲಿಯಾದ ವಿರೂಪಾಕ್ಷ ಮತ್ತು ಬಸವಂತರು ಗಂಗೂನನ್ನು ತಮ್ಮ ತಾಯಿಯೆಂದು ಭಾವಿಸಿದ್ದರು. ದಿನಾಲೂ ತಮ್ಮ ಒಕ್ಕಲುತನದ ಕೆಲಸವಾಯಿತು, ತಾವಾಯಿತು ಎನ್ನುವ ರೀತಿಯಲ್ಲಿದ್ದರು. ಮುಂಜಾನೆ ಬುತ್ತಿ ಕಟ್ಟಿಸಿಕೊಂಡು ತೋಟಕ್ಕೆ ಹೋದವರು ಮತ್ತೆ ಮರಳಿ ಮನೆಗೆ ಬರುವದು ಸಾಯಂಕಾಲದಲ್ಲಿ.

ಬಾಳ್ಯಾನಿಂದ ಮನದಾಸೆ ಈಡೇರದಾದಾಗ ಕುಂಟಲತನವನ್ನು ಮಾಡುವ ಪರವ್ವನನ್ನು ಹಿಡಿದುಕೊಂಡು ಸಂಗ್ಯಾ ತನ್ನ ಮನದಾಸೆಯನ್ನು ಈಡೇರಿಸಿಕೊಳ್ಳಲು ಹಣದ ಆಸೆಯನ್ನು ತೋರಿಸುವನು. ಪರವ್ವ ಗರತಿಯಾದ ಗಂಗೂಗೆ ಸಂಗ್ಯಾನ ವಿಚಾರವನ್ನು ತಿಳಿಸಿದಾಗ ಗಂಗೂ ಪರವ್ವನ ಮೇಲೆ ಸಿಟ್ಟಾಗಿ ಅನೇಕ ರೀತಿ ಕೆಟ್ಟ ಪದಗಳ ಮುಖಾಂತರ ಮೂದಲಿಸಿ ಪರವ್ವನಿಗೆ ಮನಸ್ಸಿಗೆ ಹತ್ತುವ ರೀತಿಯಲ್ಲಿ ಬೈಯ್ಯುವಳು. ಇದನ್ನು ಮನಸ್ಸಿಗೆ ಹಚ್ಚಿಕೊಂಡ ವಾಚಾಳಿ, ಕುಂಟಲಗಿತ್ತಿಯಾದ ಪರವ್ವ ನಿನ್ನ ಮೈದುನರಿಗೆ ನೀನು ಸಂಗ್ಯಾನ ಜೊತೆ ಇರುವಿಯೆಂದು ಈಗಲೇ ಹೊಲಕ್ಕೆ ಹೋಗಿ ಹೇಳುವೆನು ಎಂದು ಅಂಜಿಸಿದಾಗ ಭಯಗೊಂಡ ಗಂಗೂ ಸಂಗ್ಯಾನ ಜೊತೆ ಮನಸ್ಸು ಮಾಡುವಳು. ಮೈದುನರು ಇಲ್ಲದಾಗ ತನ್ನ ಕಾಮದಾಸೆಯನ್ನು ತೀರಿಸಿಕೊಳ್ಳುತ್ತಿರಲು ಊರಲ್ಲಿ ಸಂಗ್ಯಾ ಹಾಗೂ ಗಂಗೂಳ ಸುದ್ದಿ ಗುಸುಗುಸು ಪ್ರಾರಂಭವಾಗುವುದು. ಒಕ್ಕಲುತನ, ದನಕರುಗಳ ಕಡೆ ಮನಸ್ಸು ಮಾಡಿದ ಮೈದುನರಿಗೆ ಈ ವಿಷಯ ಗೊತ್ತಾಗುವುದಿಲ್ಲ.

ಮಾನಿಂಗಿ ಮೊಸರು ಮಾರುತ್ತ ಚೆನ್ನನನ್ನು ಮಾಂವಾ ಎಂದು ಸಂಬೋಧಿಸುತ್ತಾ ಮದುವೆಯಾಗಬೇಕೆಂಬ ಆಸೆಯಿಂದ ಚೆನ್ನನನ್ನು ಮೇಲಿಂದ ಮೇಲೆ ಸಂಪರ್ಕಿಸುತ್ತಾ ನೀಲಗಂಗಿಯ ಜೊತೆಗೆ ಸಂಘರ್ಷಕ್ಕೆ ಇಳಿಯುತ್ತಾಳೆ. ಕೊನೆಗೆ ಮಾನಿಂಗಿ ಕುಂಟಲಗಿತ್ತಿಯಾದ ಪರವ್ವನಿಗೆ ಚೆನ್ನನನ್ನು ಮದುವೆಯಾಗಲು ಒಪ್ಪಿಸು ಎಂದಾಗ ಚೆನ್ನ ನಿರಾಕರಿಸಿ ನೀಲಗಂಗಿಯನ್ನು ಪ್ರೀತಿಸುವನು, ಕುಂಟಲಗಿತ್ತಿಯಾದ ಮುದುಕಿ ಪರವ್ವನಿಗೆ ಊರಿನ ಎಲ್ಲ ಸಂಗತಿಗಳು ಗೊತ್ತು. ಎಲ್ಲರ ದೌರ್ಬಲ್ಯಗಳನ್ನು ಅರಿತ ಪರವ್ವ ತನ್ನ ಬೇಳೆ

ಬೇಯಿಸಿಕೊಳ್ಳುತ್ತ ಅನೇಕ ಗೌರವಾನ್ವಿತ ಹೆಣ್ಣುಮಕ್ಕಳ ಶೀಲಹರಣ, ಪಾವಿತ್ರ್ಯವನ್ನು ಹಾಳುಮಾಡಿದ ದುಷ್ಟ ವ್ಯಕ್ತಿಯಾಗಿ ಹೆಣ್ಣಿನ ಇನ್ನೊಂದು ಮುಖವನ್ನು ತೋರಿಸುತ್ತಾಳೆ.

ಇಲ್ಲಿ ಕಥೆಗೆ ಪೂರಕವಾಗಿ ಬರುವ ಪೂಜಾರಿಯ ದೌರ್ಬಲ್ಯವನ್ನು ತಿಳಿದುಕೊಂಡ ಪರವ್ವ ಅವನನ್ನು ಕೂಡ ತನ್ನ ಅಂಕಿತದಲ್ಲಿಟ್ಟುಕೊಂಡವಳು. ಪೂಜಾರಿ ಕುರುಬರ ಸಿದ್ದವ್ವನ ಜೊತೆ ಇದ್ದದ್ದನ್ನು ತಿಳಿದುಕೊಂಡು ನಿನ್ನ ವ್ಯಭಿಚಾರದ ಕೆಲಸವನ್ನು ಊರವರ ಮುಂದೆ ಹೇಳಿ ಊರು ಬಿಡಿಸುತ್ತೇನೆ ಎಂದು ಪೂಜಾರಿಗೂ ಅಂಜಿಕೆ ಹಾಕುವಳು.

ಇತ್ತ ಬಳ್ಳಾರಿಯಿಂದ ಊರಿಗೆ ಬಂದ ಈರಣ್ಣನಿಗೆ ವಿಷಯ ಗೊತ್ತಾಗಿ ಮನೆಗೆ ಹೋಗದೆ ತೋಟದ ಕಡೆ ಹೋಗುತ್ತಿರುವಾಗ ತಮ್ಮಂದಿರೇ ಇದಿರು ಬಂದರು. ಮರಳಿ ಮನೆಗೆ ಬರಲು ನಡುಮನೆಯ ಕದವನ್ನು ಹಾಕಲಾಗಿತ್ತು. ಮನೆಯಲ್ಲಿ ಗಂಗೂ ಕಾಣಲಿಲ್ಲ. ಪಡಸಾಲೆಯ ಪಲ್ಲಂಗದ ಮೇಲೆ ಇಟ್ಟ ಪೇಟಾ ಮತ್ತಾರದೂ ಅಲ್ಲ ಇಂತಹ ಪೇಟಾ ನಮ್ಮೂರಲ್ಲಿ ಇರುವುದು ಆ ಸಂಗ್ಯಾಂದು ಎಂದು ಈರಣ್ಣ ಮನವರಿಕೆ ಮಾಡಿಕೊಳ್ಳುವನು. ಇದರಿಂದ ವ್ಯಗ್ರನಾದ ಈರಣ್ಣ ತನ್ನ ತಮ್ಮಂದಿರಾದ ವಿರೂಪಾಕ್ಷ ಬಸವಂತರನ್ನು ಕುರಿತು "ಕೋಣದ ಹಾಗೆ ದುಡಿಯುವದು, ಶೆಗಣೆ ತಿಂದು ಕುಸ್ತಿ ಮಾಡುವುದನ್ನು ಬಿಟ್ಟರೆ ಮನೆಯಲ್ಲಿ ಏನು ನಡೆಯುತ್ತಿದೆ ಏನಾಯಿತು ಎಂಬುದನ್ನು ತಿಳಿದುಕೊಳ್ಳದ ಮೂರ್ಖರು ನೀವು" ಎಂದು ಬಯ್ಯುವನು. ನಡುಮನೆಯ ಅಗಳಿಯನ್ನು ತೆಗೆ ಎಂದು ಗಂಗೂವನ್ನು ಕೂಗಿದರೂ ಕದ ತೆಗೆಯದೆ ಇದ್ದಾಗ ಒಳಗೆ ಸಂಗ್ಯಾ ಮತ್ತು ಗಂಗೂ ಹಾದರ ಮಾಡುತ್ತಿದ್ದಾರೆ ಬೇಟೆಯನ್ನು ಇಂದೆ ಮುಗಿಸಿಬಿಡೋಣ ಎಂದು ಅಣ್ಣತಮ್ಮಂದಿರು ತಮಗೆ ತೋಚಿದ ಕೊಡಲಿ, ಕುಡಗೋಲು, ಬಡಿಗೆ ತೆಗೆದುಕೊಂಡು ಸಂಗ್ಯಾನನ್ನು ಮುಗಿಸಲು ನಿಲ್ಲುವರು. ಹೇಗೋ ಸಂಗ್ಯಾ ಆವತ್ತು ತಪ್ಪಿಸಿಕೊಂಡು ಹೋಗುವನು. ಇತ್ತ ಗಂಗೂಳನ್ನು ಸಾಯಿಸಲು ಅಣ್ಣ ಈರಣ್ಣ ಮನಸ್ಸು ಮಾಡುವನು. ತಮ್ಮಂದಿರು ಬೇಡ ಹೆಣ್ಣು ಕೊಂದು ಪಾಪ ಕಟ್ಟಿಕೊಳ್ಳುವುದು ಬೇಡ ಈಕೆಯನ್ನು ತವರುಮನೆಗೆ ಬಿಟ್ಟುಬಿಡೋಣ ಎನ್ನುವರು. ಹೆಣ್ಣು ಕೆಟ್ಟರೆ ತವರು, ಹೊನ್ನು ಕೆಟ್ಟರೆ ಪತ್ತಾರನ ಮನೆಗೆ ಎನ್ನುವ ಗಾದೆಯಂತೆ ಗಂಗೂಳನ್ನು ತವರೂರಾದ ಭೈರವಾಡಗಿಗೆ ಅಟ್ಟುವರು.

ಲಗಳೇರ ಮನೆತನಕ್ಕೆ ಅಂಟಿದ ಅಪವಾದವನ್ನು ಕಳೆದುಕೊಳ್ಳಲು ಸಂಗ್ಯಾನ ಮೇಲೆ ಸೇಡು ತೀರಿಸಿಕೊಳ್ಳಲು ಅಣ್ಣತಮ್ಮಂದಿರು ಸಿದ್ಧರಾಗುತ್ತಾರೆ. ಎಲ್ಲ ಆಸ್ತಿ ಹೋಗಲಿ, ದನಕರುಗಳು ಹೋಗಲಿ, ನಮ್ಮ ಮನೆತನಕ್ಕೆ ಆದ ಅಪಮಾನದ ಸೇಡು ತೀರಿಸಿಕೊಳ್ಳಲು ನಾವು ಸಂಗ್ಯಾನ ಬೇಟೆಯಾಡಲೇಬೇಕು ಎಂದು ನಿರ್ಧರಿಸಿ ಸಂಗ್ಯಾನನ್ನು ಕೊಲ್ಲಲು ಕಾಯುತ್ತಿರುತ್ತಾರೆ. ಆದರೆ ಸಂಗ್ಯಾ ಮಾತ್ರ ಇವರ ಸಮೀಪವೂ ಸುಳಿಯುವುದಿಲ್ಲ. ಅವನ ಹತ್ತಿರ ಹೋಗಿ ಮಾತಿಗೆ ನಿಂತರೆ ನಮ್ಮ ಮರ್ಯಾದೆ ಹೋಗುವುದೆಂದು ತಿಳಿದು ಅವನ ಆತ್ಮೀಯ ಗೆಳೆಯನಾದ ಬಾಳ್ಯಾನ ಮುಖಾಂತರ ಅಣ್ಣ ಹೇಳಿದಂತೆ ಉಪಾಯದಿಂದ ಸಂಗ್ಯಾನನ್ನು

ಕೊಲ್ಲಬೇಕೆಂದು ನಿರ್ಧರಿಸುತ್ತಾರೆ. ಅರಸುತ್ತಿರುವ ಬಳ್ಳಿ ಕಾಲಿಗೆ ತೊಡಗಿದಂತೆ ಬಾಳ್ಯಾ ಬರುವುದನ್ನು ನೋಡಿದರು. ಸಂಗ್ಯಾನನ್ನು ತಮಗೆ ತಂದುಕೊಡಬೇಕೆಂದು ಆಸ್ತಿಯ ಆಸೆಯನ್ನು ಹಚ್ಚುವರು. ಬಾಳ್ಯಾ ಒಪ್ಪದೆ ಇದ್ದಾಗ ಅವನನ್ನು ಕೊಲ್ಲಲು ನಿರ್ಧರಿಸುವರು. ಅಸಹಾಯಕನಾದ ಬಾಳ್ಯಾ ಜೀವಭಯದಿಂದ ಒಪ್ಪುವನು. ಹೊಳಿಯ ಪಕ್ಕದಲ್ಲಿದ್ದ ಮಿಂಡಾದ ೧೮ ಎಕರೆ ತೋಟವನ್ನು ಬಿಟ್ಟುಕೊಡುವುದಾಗಿ ಕಾಗದ ಪತ್ರಕ್ಕೂ ಸಹಿಮಾಡಿ ಬಾಳ್ಯಾನಿಗೆ ಕೊಡುವರು. ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದ ಬಾಳ್ಯಾ ಒಂದು ವಾರದ ವೇಳೆ ಕೇಳುವನು. ಒಂದು ವಾರಕ್ಕೂ ಒಂದು ದಿನ ಕಡಿಮೆ ಇದ್ದಾಗ ಅಣ್ಣತಮ್ಮಂದಿರು ಬಾಳ್ಯಾನನ್ನು ಕರೆದು ಕೇಳುವರು. ನಾಳೆಯ ಹೊತ್ತಿಗೆ ನೀನು ಸಂಗ್ಯಾನನ್ನು ತಂದುಕೊಡದಿದ್ದರೆ ನಿನ್ನನ್ನು ಕೊಲ್ಲುವೆವೆಂದು ಹೇಳುವರು. ಗಂಗೂನ ಹತ್ತಿರ ಹೋದ ಸಂಗ್ಯಾನನ್ನು ಪಂಚಮಿಹಬ್ಬ ನೆವ ಮಾಡಿಕೊಂಡು ಮನೆಯವರು ಕರೆಯಲಿಕ್ಕೆ ನನ್ನನ್ನು ಇಲ್ಲಿಗೆ ಕಳಿಸಿದ್ದಾರೆಂದು ಹೇಳಿದನು. ಸಂಗ್ಯಾ ಬಾಳ್ಯಾನೊಂದಿಗೆ ಹೊರಟನು. ಸಂಗ್ಯಾ-ಬಾಳ್ಯಾ ಊರಿಗೆ ಬರುವ ದಾರಿಯಲ್ಲಿ ಬಾಳ್ಯಾನು ನೆಪಮಾಡಿಕೊಂಡು ಬೈಲಕಡೆಗೆ ಹೋಗುವನು. ಬೈಲಕಡಿಗೆ ಹೋದ ಬಾಳ್ಯಾ ಸಿಳ್ಳಿ ಹಾಕುವನು, ಅದೇ ವೇಳೆಗೆ ಸರಿಯಾಗಿ ಅಣ್ಣತಮ್ಮಂದಿರು ಬಂದು ಸಂಗ್ಯಾನ ಬೇಟೆಯಾಡುವರು. ಅದೇ ರೋಷದಲ್ಲಿ ಬಂದು ಸಂಗ್ಯಾನ ಮನೆಯನ್ನು ಸುಟ್ಟು ಅಲ್ಲಿಂದ ಪೊಲೀಸ್ ಸ್ಟೇಷನ್ನಿಗೆ ಬಂದು ಸಂಗ್ಯಾನನ್ನು ಕೊಂದದ್ದು ಮತ್ತು ಅವನ ಮನೆಯನ್ನು ಅಗ್ನಿಗಾಹುತಿ ಮಾಡಿದ್ದು ತಾವೇ ಎಂದು ಹೇಳುವರು. ಇಲ್ಲಿಗೆ ನಾಟಕದ ಅಂತಿಮ ತೆರೆ ಬೀಳುವುದು.

ಈ ನಾಟಕದಲ್ಲಿ ನಾಟಕಕಾರರು ತಮ್ಮ ಸುತ್ತಲಿನ ಭಾಷೆಯನ್ನು ಬಳಸಿರುವುದನ್ನು ಕಾಣುತ್ತೇವೆ. ಬಕುವ, ಪಿಸು ಮುಂತಾದ ಗ್ರಾಮ್ಯರು ಬಳಸಿರುವ ಶಬ್ದಗಳನ್ನು ಕಾಣುತ್ತೇವೆ. ಅತ್ತ ಗ್ರಾಮ್ಯ ಇತ್ತ ನಗರ ಭಾಷೆಯನ್ನು ಬಳಸಿರುವುದು ಕಂಡುಬರುವುದು. ಇಲ್ಲಿ ಯಾವುದೇ ರೀತಿಯಾದ ಅಶ್ಲೀಲ ಪದಗಳ ಬಳಕೆ ಹದ್ದುಮೀರಿ ಬಳಸಲ್ಪಡದಿರುವದು ಕಂಡುಬರುತ್ತದೆ.

ಆವತ್ತು ಮತ್ತು ಇವತ್ತು ಸಮಾಜದಲ್ಲಿ ಕುಂಟಲತನವನ್ನು ಮಾಡುವ ಕುಂಟಲಗಿತ್ತಿಯರು ಹಾಗೂ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ತಮ್ಮ ಪಾವಿತ್ರ್ಯತೆಯನ್ನು ಕಳೆದುಕೊಳ್ಳುವ ನಾರಿಯರು, ಹೇಗೋ ತಮ್ಮ ಕಾಮದಾಸೆಗಾಗಿ ಹೆಣ್ಣುಮಕ್ಕಳ ಬಾಳನ್ನು ನರಕಕೂಪಕ್ಕೆ ತಳ್ಳುವ ಪುರುಷರು ಇಂದಿಗೂ ಸಮಾಜದಲ್ಲಿ ಇರುವರು ಎಂಬ ಎಚ್ಚರಿಕೆ, ತಿಳುವಳಿಕೆಯನ್ನು ಕೊಡುವದು ನಾಟಕಕಾರರ ಇಲ್ಲಿಯ ಸಂದೇಶವಾಗಿದೆ.

ಈ ನಾಟಕದಲ್ಲಿ ದುಷ್ಟನಿಗೆ ಮರಣವೇ ತಕ್ಕ ಶಿಕ್ಷೆ ಎಂಬುದನ್ನು ಲೇಖಕರಿಲ್ಲಿ ಸಾರಿ ಹೇಳುತ್ತಾರೆ. ಈ ನಾಟಕದ ಮೂಲ ಇತಿಹಾಸಕ್ಕೆ ಭಂಗ ಬರದ ರೀತಿಯಲ್ಲಿ ಮನರಂಜನೆಯ ಮುಖಾಂತರ ಜನರಿಗೆ ಐತಿಹಾಸಿಕ ಸತ್ಯವನ್ನು ಹೇಳಲು ನಾಟಕಕರರು ಇಲ್ಲಿ ಪ್ರಯತ್ನಿಸಿರುವದನ್ನು ಕಾಣುತ್ತೇವೆ.

ಬಯಲಾಟದ ಮೂಲಕ ಉತ್ತರ ಕರ್ನಾಟಕದಲ್ಲಿ ಜನರ ಮನಸೂರೆಗೊಂಡ ಕಥೆಯನ್ನು ಕಂಪನಿ ನಾಟಕದ ತಂತ್ರಗಳಿಗನುಗುಣವಾಗಿ ಸಂಗ್ಯಾ ಬಾಳ್ಯಾ ನಾಟಕವನ್ನು ರಚಿಸಿದ್ದು ಬಿ.ಆರ್. ಅರಿಷಿಣಗೋಡಿಯವರ

ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ. ಕಂಪನಿ ನಾಟಕಕಾರರು ಸಿದ್ಧಮಾದರಿಯ ಕಥಾವಸ್ತುವನ್ನು ತೆಗೆದುಕೊಂಡು ನಾಟಕ ರಚಿಸುವುದು ಸರ್ವಸಾಮಾನ್ಯ ಪದ್ಧತಿ. ವ್ಯವಹಾರ ಬುದ್ಧಿಯ ಬಿ.ಆರ್. ಅರಿಷಿಣಗೋಡಿಯವರು ಈ ಜನಪ್ರಿಯ ಬಯಲಾಟದ ಕಥೆಯನ್ನು ಕಂಪನಿ ನಾಟಕವನ್ನಾಗಿ ಪರಿವರ್ತಿಸಿರುವದು ಅವರ ವ್ಯವಹಾರಿಕ ಜಾಣ್ಮೆಯನ್ನು ತೋರಿಸುವುದು, ಬಯಲಾಟದಲ್ಲಿದ್ದ ಕುಣಿತ-ಹಾಡುಗಳನ್ನು ತೆಗೆದು ಕಂಪನಿಯ ನಾಟಕಗಳಿಗೆ ಯೋಗ್ಯವಾಗುವ ರೀತಿಯಲ್ಲಿ ಹಾಡು-ಸಂಭಾಷಣೆಗಳು ರಚಿಸಲ್ಪಟ್ಟದ್ದು ಇಲ್ಲಿಯ ವಿಶೇಷತೆ.

ಇಂತಹ ಘಟನೆಗಳು ಇವತ್ತಿಗೂ ಸಮಾಜದಲ್ಲಿ ನಡೆಯುತ್ತಿರವುದನ್ನು ಸೂಕ್ಷ್ಮವಾಗಿ ಅವಲೋಕಿಸಿದ ನಾಟಕಕಾರರು ಸಮಾಜಕ್ಕೆ ಅರಿವನ್ನುಂಟು ಮಾಡುವ ಉದ್ದೇಶದಿಂದ ಈ ನಾಟಕವನ್ನು ರಚಿಸಿ, ರಂಗಪ್ರಯೋಗಕ್ಕೆ ಒಳಪಡಿಸಿರುವುದನ್ನು ಕಾಣುತ್ತೇವೆ. ಈ ನಾಟಕದ ಮುಖಾಂತರ ಸಮಕಾಲೀನ ವೃತ್ತಿರಂಗಭೂಮಿಯಲ್ಲಿ ಹೊಸತನವನ್ನು ತರಲು ಪ್ರಯತ್ನಿಸಿದಂತೆ ಕಾಣುತ್ತದೆ. ರಂಗಪ್ರಯೋಗಕ್ಕೆ ಪೂರಕವಾಗುವಂತೆ ಕೆಲವೊಂದು ಪಾತ್ರಗಳನ್ನು ಸೃಷ್ಟಿಸಿಕೊಂಡಿರುವುದು ಇವರ ಸೃಜನಶೀಲ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ.

ಇಲ್ಲಿಯ ಪಾತ್ರಗಳು ಮನಸ್ಸಿಗೆ ನಾಟುವಂತೆ ಮಾತನಾಡುವ ರೀತಿಯನ್ನು ನೋಡಿದರೆ ಬಿ.ಆರ್. ಅರಿಷಿಣಗೋಡಿಯವರು ಈ ನಾಟಕದಲ್ಲಿ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದು ಕಂಡುಬರುವದು. ಗ್ರಾಮೀಣ ಜನರು ಬಳಸುವ ಆಡುಮಾತುಗಳನ್ನು ಹೆಚ್ಚಾಗಿ ಈ ನಾಟಕದಲ್ಲಿ ಬಳಸಿರುವುದು ಒಂದು ವೈಶಿಷ್ಟ್ಯ.

ಮಾವನ ಮನೆ ಅನುರಾಧಾ-ತಂಗಿಯ ಸೌಭಾಗ್ಯ-ಕಣ್ಣು ತೆರೆಸಿದ ಹೆಣ್ಣು

ಪ್ರಭುರಾಯ ಧನಪುರದ ಆಗರ್ಭ ಶ್ರೀಮಂತ, ಹೆಂಡತಿಯನ್ನು ಕಳೆದುಕೊಂಡ ವಿಧುರ. ಒಬ್ಬನೆ ಒಬ್ಬ ಮಗನನ್ನು ಪಡೆದುಕೊಂಡು ಮಗನ ಜೊತೆ ಮನೆಯಲ್ಲಿ ಅಡಿಗೆಯವರನ್ನು ಇಟ್ಟುಕೊಂಡು ಮರುಮದುವೆಯಾಗದೆ ಇರುವನು. ಮಗನಾದ ಧನೇಶನಿಗೆ ವಿದ್ಯೆಯನ್ನು ಕೊಡಲು ಪ್ರಯತ್ನಿಸುವನು. ಮಗನ ತಲೆಗೆ ವಿದ್ಯೆ ಹತ್ತದಿದ್ದಾಗ ಮೆಟ್ರಿಕವರೆಗೆ ಓದಿಸಿ ಒಂದು ಸುಸಂಸ್ಕೃತ ಮನೆತನದ ಹೆಣ್ಣು ನೋಡಿ ಮಗನ ಮದುವೆ ಮಾಡಿ ಸೊಸೆಯಿಂದ ಮನೆತುಂಬಿಸಿಕೊಳ್ಳುವ ವಿಚಾರದಲ್ಲಿರುವನು.

ಇತ್ತ ವಿದ್ಯಾಧರ ಬಡವ ಬಿ.ಎ. ಪದವೀಧರ. ಅಕ್ಕ ಸರೋಜಾಳು ಗಂಡನನ್ನು ಕಳೆದುಕೊಂಡು ವಿಧವೆಯಾಗಿ ತವರು ಮನೆಯಾದ ವಿದ್ಯಾಧರನಲ್ಲಿದ್ದಳು. ತಂಗಿಯಾದ ಗಿರಿಜಾ ತಕ್ಕಮಟ್ಟಿಗೆ ಅಂದರೆ ಳನೇ ಇಯತ್ತೆಯವರೆಗೆ ಕಲಿತು ಮನೆಗೆಲಸದಲ್ಲಿ ತೊಡಗಿದ ನಿರ್ಭಾಗ್ಯ ಹೆಣ್ಣುಮಗಳು. ತಂದೆ-ತಾಯಿಗಳನ್ನು ಕಳೆದುಕೊಂಡ ಈ ಕುಟುಂಬದ ಜವಾಬ್ದಾರಿಯನ್ನು ನಿರುದ್ಯೋಗಿ ಪದವೀಧರ ವಿದ್ಯಾಧರ ಹೊತ್ತಿದ್ದನು. ಈಗಾಗಲೇ ಗಂಡನನ್ನು ಕಳೆದುಕೊಂಡು ಮನೆಸೇರಿದ ಅಕ್ಕ ಸರೋಜಾ ಹಾಗೂ ಮದುವೆಯ ವಯಸ್ಸಿಗೆ ಬಂದ ಗಿರಿಜಾ ಇವರೆಲ್ಲರ ಭಾರವನ್ನೂ ಹೊತ್ತು ಬದುಕು ಸಾಗಿಸುತ್ತಿದ್ದವನು ವಿದ್ಯಾಧರ.

ಹೇಗಾದರೂ ಮಾಡಿ ಒಂದು ಸರಕಾರಿ ನೌಕರಿ ಹತ್ತಿ ವಯಸ್ಸಿಗೆ ಬಂದ ತಂಗಿಯಾದ ಗಿರಿಜಾಳನ್ನು ಒಳ್ಳೆಯ ವರನಿಗೆ ಕೊಟ್ಟು ತಕ್ಕಮಟ್ಟಿಗೆ ವರೋಪಚಾರವನ್ನು ಮಾಡಿ ಕಳಿಸಬೇಕೆಂಬ ವಿಚಾರದಲ್ಲಿದ್ದ ವಿದ್ಯಾಧರನಿಗೆ ಧನಪುರದ ಪರಿಚಯದ ಡಾಕ್ಟರರಿಂದ ತಂತಿ ಬರುವುದು. ನಿನ್ನ ತಂಗಿ ಗಿರಿಜಾಳನ್ನು ನೋಡಲು ನಮ್ಮೂರಿನ ಆಗರ್ಭ ಶ್ರೀಮಂತರಾದ ಪ್ರಭುರಾಯರು ಹಾಗೂ ಅವರ ಮಗ ಧನೇಶ ಕನ್ಯಾ ಪರೀಕ್ಷೆಗಾಗಿ ಬರುವರು ಎಂಬ ವಿಷಯವನ್ನು ತಂತಿಯಿಂದ ತಿಳಿದ ವಿದ್ಯಾಧರ ಅವರ ವ್ಯವಸ್ಥೆಗಾಗಿ ಹಣ್ಣು-ಹಂಪಲಗಳನ್ನು ತರಲು ಮಾರ್ಕೆಟಿಗೆ ಹೋಗುವನು.

ಕನ್ಯಾ ಪರೀಕ್ಷೆಗೆ ಬಂದ ಸುದ್ದಿ ತಿಳಿದ ಗಿರಿಜಾ ನಿರಾಸಕ್ತಿಯಿಂದ ಹೀಗೆ ಹೇಳುತ್ತಾಳೆ: "ಕನ್ಯಾ ಪರೀಕ್ಷೆಗೆ ಬರುತ್ತಾರೆ ಕೆಂಪಾಗಿಲ್ಲ, ಎತ್ತರವಿಲ್ಲ, ಮತ್ತಿನ್ನೇನೊ ನೆಪ ಹೇಳಿ ತಿಂಡಿ ತಿನಿಸು ತಿಂದು ಹೋಗುತ್ತಾರೆ ಇತ್ತ ನಮ್ಮ ಮನೆಯ ಕಿರಾಣಿ ಅಂಗಡಿಯ ಬಾಕಿ ೧೦೦-೧೨೦ ರೂ. ಏರುತ್ತದೆ ವಿನಹ ನಮ್ಮಂತ ಬಡವರ ಮನೆಯ ಕನ್ಯೆಯನ್ನು ಯಾರು ಮದುವೆ ಆಗುತ್ತಾರೆ" ಆದರೂ ಅಣ್ಣನ ಒತ್ತಾಸೆಗೆ ಕನ್ಯಾ ಪರಿಕ್ಷೆಗೆ ಸಿದ್ಧಳಾಗುವಳು. ಗಿರಿಜಾಳನ್ನು ನೋಡಿ ಧನೇಶ ಒಪ್ಪಿಕೊಳ್ಳುವನು. ಬಡವನಾದರೂ ಸಂಸ್ಕಾರವಂತ ಇಂತಹ ಕುಟುಂಬದ ಜೊತೆಗೆ ಸಂಬಂಧವನ್ನು ಬೆಳೆಸಲು ಪ್ರಭುರಾಯರು ಮನಸ್ಸು ಮಾಡುವರು. ಗಿರಿಜಾಳ ಅಣ್ಣ ವಿದ್ಯಾಧರನಿಂದ ಏನನ್ನೂ ನೀರಿಕ್ಷಿಸದೆ ಪ್ರಭುರಾಯರು ಮಗ ಧನೇಶನೊಂದಿಗೆ ಗಿರಿಜಾಳ ಮದುವೆ ಮಾಡುವರು. ಹಾಗೆಯೇ ಆ ಕುಟುಂಬದ ಜವಾಬ್ದಾರಿಯನ್ನು ಹೊತ್ತು ತಮ್ಮ ಮನೆಯಲ್ಲಿಯೇ ವಿಧವೆಯಾದ ಗಿರಿಜಾಳ ಅಕ್ಕ ಸರೋಜಾಳನ್ನೂ ಹಾಗೂ ನಿರುದ್ಯೋಗಿಯಾಗಿದ್ದ ಇನ್ನೂ ಕಲಿಯುತ್ತಿರುವ ವಿದ್ಯಾಧರನನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುವರು. ವಿದ್ಯಾಧರನನ್ನು ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಕಳಿಸುವರು.

ಗಿರಿಜಾ ಹಾಗೂ ಧನೇಶರು ಸಾಮರಸ್ಯದ ಸರಳ, ಸುಂದರ, ಮೌಲ್ಯಾಧಾರಿತ ಜೀವನ ನಡೆಸುತ್ತಾರೆ. ಗಿರಿಜಾ ಗರ್ಭವತಿಯಾಗುವಳು. ಇದನ್ನು ತಿಳಿದ ಗಂಡ ಹಾಗೂ ಪ್ರಭುರಾಯ ಸಂತೋಷಪಡುತ್ತಿರಲು ಇತ್ತ ವಿಧವೆಯಾದ ಗಿರಿಜಾಳ ಅಕ್ಕ ಸರೋಜಳಲ್ಲಿ ಒಂದು ರೀತಿಯ ತಳಮಳ ಹಾಗೂ ನಿಸರ್ಗ ಸಹಜವಾದ ಲೈಂಗಿಕ ವಾಂಛೆ ಮೂಡುವುದು. ಇನ್ನೊಂದು ಕಡೆ ಭಾರತೀಯ ಸಮಾಜದ ಸ್ತ್ರೀ ಮೌಲ್ಯಗಳ ಪರಿಪಾಲನೆ ವಿಧವೆಯಾದ ನಂತರದ ಸ್ತ್ರೀ ಬದುಕು ಹೇಗಿರಬೇಕು ಎಂಬುದನ್ನು ಹೇಳಿದ ಸಮಾಜದ ಮಾತುಗಳು ಮನಸ್ಸಿನಲ್ಲಿ ರಿಂಗಣಿಸಿದರೂ ಸರೋಜಾ ಬುದ್ದಿಗೇಡಿಯಾಗಿ ತಂಗಿಯ ಗಂಡನ ಜೊತೆ ಸಂಬಂಧ ಬೆಳೆಸಲು ನಿರ್ಧರಿಸುವಳು. ಇದಕ್ಕೆ ಸಹಾಯವಾಗಿ ಸಿದ್ದಲಿಂಗವ್ವ ಎಂಬ ತಲೆಹಿಡುಕ, ಆಸೆಬುರುಕ ನಿಂಗಪ್ಪನ ಹೆಂಡತಿಯನ್ನು ಬಳಸಿಕೊಳ್ಳುವಳು. ಇತ್ತ ತುಂಬು ಗರ್ಭಿಣಿಯಾದ ಗಿರಿಜಾ ಹೆರಿಗೆಗಾಗಿ ದವಾಖಾನೆಗೆ ಹೋದ ಸಂದರ್ಭವನ್ನು ನೋಡಿ ಧನೇಶನ ಜೊತೆ ಸರಸ-ಸಲ್ಲಾಪ ಆಡುವ ಮನಸ್ಸು ಮಾಡುವಳು. ಧನೇಶನಿಗೆ ಸರೋಜಾ ತನ್ನ ಮನಸ್ಸಿನಲ್ಲಿದ್ದ ವಿಚಾರವನ್ನು ಹೇಳಿದಾಗ ಅನುರೂಪವಾದ

ಪ್ರೀತಿಯ ಹೆಂಡತಿಗೆ ದ್ರೋಹ ಬಗೆಯದೇ ಸರೋಜಾಳಿಗೆ ಬುದ್ಧಿವಾದ ಹೇಳಲು ಮುಂದಾದಾಗ ಸರೋಜಾ ಧನೇಶನ ಮೇಲೆಯೇ ತಿರುಗಿ ಬೀಳುವಳು. ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ತನ್ನನ್ನು ಬಲತ್ಕರಿಸಲು ಬಂದಿದ್ದಾನೆ ಎಂದು ಸುತ್ತಲಿನ ಜನರಿಗೆ ತಿಳಿಸುವೆನೆಂದು ಚೀರಲು ಅಣಿಯಾಗುವಳು, ಮರ್ಯಾದೆಗೆ ಅಂಜಿ ಧನೇಶ ಹಾಗೆಲ್ಲ ಮಾಡಬೇಡವೆಂದು ಕೈಹಿಡಿದು ಕೇಳಿಕೊಳ್ಳುತ್ತಿರುವಾಗ ಹೊರಗಿನಿಂದ ಬಂದ ತಂದೆ ಪ್ರಭುರಾಯರು ನೋಡುತ್ತಾರೆ. ಇದನ್ನು ತಿಳಿದ ಪ್ರಭುರಾಯರು ಸರೋಜಾಳಿಗೆ ಬುದ್ಧಿ ಹೇಳುವರು. ಪ್ರಭುರಾಯರ ಉಪದೇಶದಿಂದ ರೋಷಗೊಂಡ ಸರೋಜಾ ತನ್ನ ಮನಸ್ಸಿನಲ್ಲಿ ಉದ್ಭವಿಸಿದ ಬಯಕೆಯನ್ನು ಧನೇಶನಲ್ಲಿ ತೀರಿಸಿಕೊಳ್ಳುವ ಹಾಗೂ ಮಾವ ಪ್ರಭುರಾಯರ ಮೇಲೆ ಅಪವಾದ ಹೊರಿಸುವ ಸಂಚು ರೂಪಿಸುವಳು.

ಗಿರಿಜಾ ದವಾಖಾನೆಯಲ್ಲಿ ಅನುರಾಧಾ ನಕ್ಷತ್ರದಲ್ಲಿ ಸುಲಕ್ಷಣವಾದ ಗಂಡುಮಗುವಿಗೆ ಜನ್ಮ ನೀಡುವಳು. ಇನ್ನು ಮನೆಗೆ ಬರಬೇಕೆಂಬುವಷ್ಟರಲ್ಲಿ ಇತ್ತ ಸರೋಜಾ ಸಿದ್ದಲಿಂಗಪ್ಪನ ಮುಖಾಂತರ ವೈದ್ಯಭಟ್ಟನೊಬ್ಬನಿಗೆ ಹಣದ ಆಸೆ ತೋರಿಸಿ ಮಗು ಹುಟ್ಟಿದ ನಕ್ಷತ್ರ ಸರಿಯಿಲ್ಲ ಹಾಗೂ ಮಗುವಿನ ಮುಖ ನೋಡಿದರೆ ತಂದೆಗೆ ಸಾವಿನ ಭಯ ಎಂಬ ಜನ್ಮಕುಂಡಲಿಯನ್ನು ಬರೆಸಿಕೊಂಡು ಬರುವಳು. ಇತ್ತ ದವಾಖಾನೆಯಿಂದ ಮಾವ ಪ್ರಭುರಾಯರು ಗಿರಿಜಾಳನ್ನು ಮನೆಗೆ ಕರೆತರುವರು. ಮಗುವಿನ ಕೊರಳಿಗೆ ಬಂಗಾರದ ಪದಕ ತಂದು ಹಾಕುವರು. ಸರೋಜ ಹಾಗೂ ಧನೇಶ ಈಗಾಗಲೇ ಸರಸ ಸಲ್ಲಾಪದಲ್ಲಿ ತೊಡಗಿದ್ದರು. ಸರೋಜಾ ಪ್ರಭುರಾಯರ ಮೇಲೆ ಅಪವಾದವನ್ನು ಧನೇಶನ ಮುಖಾಂತರ ಹೇಳಿಸುವಳು. ಸೊಸೆಯ ಜೊತೆಗೂಡಿ ಅಕ್ರಮ ಸಂತಾನ ಇದರ ತಂದೆ ನೀನು ಎಂದು ತಂದೆಗೆ ಧನೇಶ ಉತ್ತರಿಸುವನು. ಇಂತಹ ಹೇಸಿಗೆ ಕೆಲಸ ಮಾಡಲು ನಾಚಿಕೆಯಾಗುವದಿಲ್ಲವೇ ನಿನಗೆ ಅಂದಾಗ ಪ್ರಭುರಾಯರಿಗೆ ಬರಸಿಡಿಲು ಬಡಿದಷ್ಟು ಆಘಾತವಾಗುವದು. ಆಗ ತಂದೆ ಮಗನಲ್ಲಿ ನಡೆದ ತಾರ್ಕಿಕ, ನೈತಿಕ ಮುಖಿಯಾದ ಮಾತುಗಳು ಎಂತಹವರೂ ಕೂಡ ನವಿರೇಳುವಂತೆ ಮಾಡುತ್ತವೆ. ತಂದೆ-ಮಗನ ನಡುವೆ ನಡೆದ ಮಾತಿನ ಸಂಘರ್ಷದಲ್ಲಿ ಗಿರಿಜಾ ತನ್ನ ಪತಿಯನ್ನು ಪರಿಪರಿಯಾಗಿ ಬೇಡಿಕೊಂಡು ನಾನು ನಿರಪರಾಧಿ ಅವರು ನಿರಪರಾಧಿ ಸುಮ್ಮನೆ ಭ್ರಮೆಯೊಳಗೆ ನನಗೆ ಜಾರಿಣೆಯ ಪಟ್ಟಕೊಟ್ಟು ನನ್ನನ್ನು ಹಾಗೂ ಮಾವನವರನ್ನು ಸಮಾಜದಲ್ಲಿ ತಲೆ ತಗ್ಗಿಸುವಂತೆ ಮಾಡಬೇಡಿ ಎಂದು ಕೇಳಿದರೂ ಕೇಳದೆ ಧನೇಶ ತನ್ನಲ್ಲಿದ್ದ ಪಿಸ್ತೂಲಿನಿಂದ ಗುಂಡುಹಾರಿಸಿ ತಂದೆ ಪ್ರಭುರಾಯರನ್ನು ಕೊಲ್ಲುವನು. ಶವವನ್ನು ತೋಟದಲ್ಲಿ ಹೂಳುವರು. ಇತ್ತ ಗಿರಿಜಾ ಹಾಗೂ ಗಿರಿಜಾಳ ಮಗುವನ್ನು ಮನೆಬಿಟ್ಟು ಹೊರದಬ್ಬುವರು. ಈ ಅವಘಡಕ್ಕೆ ಕಾರಣಳಾದ ಸರೋಜಾ ಏನನ್ನೂ ಹೇಳದೆ ಹಾಗೆಯೇ ನಿಂತುಬಿಡುವಳು. ಮನೆಬಿಟ್ಟು ಬಂದ ಗಿರಿಜಾ ಮಾನಸಿಕ ಆಘಾತಕ್ಕೆ ಒಳಗಾಗಿ ತನ್ನ ಹಸುಗೂಸಿನ ಸಮೇತ ಒಂದು ಪಾಳುಬಿದ್ದ ಬಾವಿಯಲ್ಲಿ ಬಿದ್ದು ಸಾಯುವ ನಿರ್ಧಾರ ಮಾಡಿ ಬಾವಿಯ ಕಡೆಗೆ ಹೋದಾಗ ನಿಂಗಪ್ಪ ಬಂದು

ಗಿರಿಜಾಳ ಮನಸ್ಸು ಪರಿವರ್ತನೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವದು ಹಾಗೂ ಹತ್ಯೆ ಮಾಡುವದು ಪಾಪದ ಕೆಲಸ ಇದ್ದು ಜೈಸಬೇಕು ಕಾಲ ಯಾವಾಗಲೂ ಒಂದೇ ರೀತಿ ಇರುವದಿಲ್ಲ ಅದಕ್ಕಾಗಿ ಮುಂದೆ ನಿನಗೆ ಅನುಕೂಲ ಕಾಲ ಬರುವವರೆಗೆ ತಡೆ ಎನ್ನುವನು. ಗಿರಿಜಾ ಹಾಗೂ ಆ ಕೂಸಿನ ಜವಾಬ್ದಾರಿಯನ್ನು ಹೊತ್ತು ಊರುಬಿಟ್ಟು ಅರಣ್ಯದಲ್ಲಿ ಒಂದು ಗುಡಿಸಲು ಹಾಕಿಕೊಂಡು ತಾನು ಕೂಲಿ ಮಾಡುತ್ತಾ ಆಕೆಯ ಆ ಮನೆಯ ಅನ್ನದ ಋಣ ತೀರಿಸಲು ಸಿದ್ಧನಾಗಿ ಅರಣ್ಯದಲ್ಲಿ ಗುಡಿಸಲು ಹಾಕಿ ಅವರ ಜವಾಬ್ದಾರಿಯನ್ನು ಹೊರುವನು.

ಯಾವಾಗ ನಿಂಗಪ್ಪ ಊರಲ್ಲಿ ಕಾಣುವುದಿಲ್ಲವೊ ಆವಾಗ ಕುಂಟಲಗಿತ್ತಿಯಾದ ಸಿದ್ದಲಿಂಗವ್ವ ಹಾಗೂ ಮಹಾ ಮುಠ್ಠಾಳ ಹೆಣ್ಣುಬಾಕ, ಅನೇಕ ಗರತಿಯರ ಮಾಂಗಲ್ಯಕ್ಕೆ ಮಸಿ ಬಳಿದ ವೈದ್ಯಭಟ್ಟ ಇಬ್ಬರೂ ಸರಸದಲ್ಲಿ ಇತ್ತ ಕಾಲ ಕಳೆಯುವರು. ಅತ್ತ ಧನೇಶ ಸರೋಜಾಳ ಜೊತೆ ಸರಸ ಸಲ್ಲಾಪದಲ್ಲಿರಲು ವಿದ್ಯಾಧರ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಬೆಂಗಳೂರಿನಿಂದ ಊರಿಗೆ ಬರುವನು. ಕುಟುಂಬದ ತನ್ನ ಸಹೋದರಿಯ ಜಾರಿಣಿಯ ಕಾರ್ಯದಿಂದ ಜರ್ಜಿತನಾದ ವಿದ್ಯಾಧರನಿಗೆ ಆಘಾತವಾಗುವದು. ಗಿರಿಜಾಳನ್ನು ಮನಸ್ಸಿನಲ್ಲಿ ಅನೇಕ ರೀತಿಯಿಂದ ಹಳಿಯುವನು. ತನಗಾದ ಅಪಮಾನವನ್ನು ಸಹಿಸಿಕೊಳ್ಳಲು ಸಾಧ್ಯವಾಗದೆ ಊರೊಳಗೆ ತಿರುಗಾಡಲು ಕೂಡ ಮನಸ್ಸು ಬಾರದೆ ಮನೆಯಲ್ಲಿಯೇ ಕುಳಿತುಕೊಳ್ಳುವನು. ಮಾವನವರು ಸತ್ತಿದ್ದು ಗಿರಿಜಾಳ ವ್ಯಭಿಚಾರ ಇವುಗಳಿಂದ ವಿದ್ಯಾಧರ ಆಘಾತಕ್ಕೆ ಒಳಗಾದರೂ ಸರೋಜಾ ಮಾತ್ರ ಎಂದಿನಂತೆ ಏನೂ ಆಗದ ಗಯ್ಯಾಳಿಯ ಹಾಗೆಯೇ ಇರುವಳು. ಅತ್ತ ಗುಪ್ತವಾಗಿ ತಂದೆಗೆ ಗೊತ್ತಿಲ್ಲದಂತೆ ವಿದ್ಯಾಧರನನ್ನು ಪ್ರೀತಿಸುತ್ತಿದ್ದ ಅನುರಾಧಾ ವಿದ್ಯಾಧರನ ಸಾಮೀಪ್ಯ ಬಯಸುವಳು. ಈ ವಿಚಾರವನ್ನು ತನ್ನ ತಂದೆ ಡಾಕ್ಟರನಿಗೆ ಹೇಳುವಳು. ಡಾಕ್ಟರ ಆ ವಿದ್ಯಾಧರನನ್ನು ಮರೆತುಬಿಡು ಎಂದು ಬುದ್ಧಿವಾದ ಹೇಳಿ ಅನುರಾಧಾಳ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಲು ಪ್ರಯತ್ನಿಸುವನು.

ನಾಟಕೀಯವೆಂಬಂತೆ ಭೂತದ ಮುಖಾಂತರ ಕುಟುಂಬದಲ್ಲಿ ನಡೆದ ವಿಷಯವನ್ನು ನಾಟಕದಲ್ಲಿ ನಾಟಕಕಾರರು ಮರಳಿ ತರುವ ಪ್ರಯತ್ನ ನಡೆಯುತ್ತದೆ. ಮಾವನಾದ ಪ್ರಭುರಾಯ ಭೂತವಾಗಿ ಬಂದು ಮನೆಯಲ್ಲಿ ನಡೆದ ಘಟನೆಯನ್ನು ವಿದ್ಯಾಧರನಿಗೆ ಹೇಳುತ್ತಾನೆ.

ಇತ್ತ ವೈದ್ಯಭಟ್ಟ ಹಾಗೂ ಸಿದ್ದಲಿಂಗವ್ವ ಇಬ್ಬರೂ ಮದುವೆಯಾಗಿ ಬೇರೆ ಊರಿಗೆ ಹೋಗಲು ತಯಾರಿ ನಡೆಸಿ ಮೊದಲನೆಯ ಗಂಡ ನಿಂಗಪ್ಪನಿಗೆ ಸಿದ್ಲಿಂಗವ್ವನ ಮುಖಾಂತರ ಸೋಡ ಚೀಟಿ ಕಳಿಸಿ ವೈದ್ಯಭಟ್ಟ ವಿಫಲನಾಗುತ್ತಾನೆ. ಈ ವಿಷಯವನ್ನು ತಿಳಿದ ಸಿದ್ದಲಿಂಗವ್ವನ ಹಾಗೂ ವೈದ್ಯಭಟ್ಟನ ಬಂಡವಾಳ ಹೊರಗೆಡುವುದಕ್ಕಾಗಿ ನಿಂಗಪ್ಪ ಗಿರಿಜಾಳನ್ನು ಒಪ್ಪಿಸಿ ಊರಿಗೆ ಕರೆದುಕೊಂಡು ಬರುವನು. ನಿಂಗಪ್ಪ ಊರಿಗೆ ಬಂದದ್ದರಿಂದ ವೈದ್ಯಭಟ್ಟ ಹಾಗೂ ಸಿದ್ದಲಿಂಗವ್ವನ ಕಪಟ ಕುಂಟಲತನ ಗೊತ್ತಾಗುವುದು.

ಇದರಿಂದ ಅವಮಾನಿತನಾದ ವೈದ್ಯಭಟ್ಟ ಊರುಬಿಡುವನು. ಇತ್ತ ದುಷ್ಟ ಹೊಟ್ಟೆಕಿಚ್ಚಿನ ತನ್ನ ಸ್ವಾರ್ಥ ಲೈಂಗಿಕ ಬಯಕೆಗಾಗಿ ಸಿದ್ದಲಿಂಗವ್ವನಂತಹ ಕುಂಟಲಗಿತ್ತಿಯಿಂದ ತನ್ನ ಕೆಲಸ ಸಾಧಿಸಿಕೊಂಡ ಸರೋಜಾಳ ದುರ್ಗುಣ, ತಂಗಿ ಗಿರಿಜಾಳ ಗಂಡ ಧನೇಶನಿಗೆ ಮನವರಿಕೆಯಾಗುವುದು. ಇದನ್ನರಿತ ಸರೋಜಾ ಮನೆಬಿಟ್ಟು ಹೋಗಲು ತಯಾರಾಗುವಳು. ಇತ್ತ ಅನುರಾಧಾ ಗುಣಸಂಪನ್ನ, ಸ್ನಾತಕೋತ್ತರ ಪದವೀಧರನಾದ ವಿದ್ಯಾಧರನನ್ನು ಮದುವೆಯಾಗುವಳು. ಕೊನೆಗೆ ನಾಟಕವು ಸುಖಾಂತ್ಯ ಕಾಣುವುದು.

ಗ್ರಾಮೀಣ ಹಾಗೂ ಶಿಷ್ಟ ಭಾಷೆಗಳೆರಡನ್ನೂ ಈ ನಾಟಕದಲ್ಲಿ ಬಳಸಿರುವುದನ್ನು ಕಾಣುತ್ತೇವೆ. ಸನ್ನಿವೇಶ, ಘಟನೆ ಹಾಗೂ ಪಾತ್ರಕ್ಕೆ ತಕ್ಕಂತೆ ಭಾಷೆಯನ್ನು ಸಮರ್ಪಕವಾಗಿ ಬಳಸಿರುವುದನ್ನು ಕಾಣುತ್ತೇವೆ. ಗ್ರಾಮೀಣರಾಡುವ ಸರಳ ಸುಂದರ ಗಾದೆ ಮಾತುಗಳು, ಕೊಂಕುನುಡಿಗಳ ಬಳಕೆಯನ್ನು ಕಾಣುತ್ತೇವೆ.

ಸನ್ನಿವೇಶದಿಂದ ಸನ್ನಿವೇಶಕ್ಕೆ ಪಾತ್ರಗಳ ಘನತೆಗೆ ತಕ್ಕಂತೆ ನಿರೂಪಣೆ ಮಾಡಿದ ರೀತಿ ಗಮನಿಸುವಂತಹದು. ಯಾವುದೇ ಪಾತ್ರಕ್ಕೂ ಘಟನೆಗೂ ಸನ್ನಿವೇಶಕ್ಕೂ ತೊಡಕಾಗದಂತೆ ನಿರೂಪಿಸುವ ಶೈಲಿ ಅರಿಷಿಣಗೋಡಿಯವರಿಗೆ ಸಾಧಿಸಿದೆ ಎಂದರೆ ಅದು ಅತಿಶಯೋಕ್ತಿಯಾಗಲಿಕ್ಕಿಲ್ಲ.

ಕುಟುಂಬದಲ್ಲಿ ನಡೆಯುವ ಅನೈತಿಕ ಸಂಬಂಧಗಳನ್ನು ಎತ್ತಿ ತೋರಿಸುವುದು ಹಾಗೂ ಅದರ ಪರಿಣಾಮದಿಂದ ಕುಟುಂಬ ಯಾವರೀತಿ ಛಿದ್ರವಾಗುವುದು ಎಂಬುದು ಇಲ್ಲಿ ಮುಖ್ಯವಾಗುವ ವಿಷಯ. ಸಂಗಡವೇ ಸಾಧುಗಳ ಢೋಂಗಿತನವನ್ನು ಸಮಾಜಕ್ಕೆ ತೋರಿಸುವದು ಇಲ್ಲಿದೆ.

ಸಮಾಜದಲ್ಲಿ ಬೇರುಬಿಟ್ಟ ಪುರೋಹಿತಶಾಹಿಯ ಢೋಂಗಿತನ, ವರದಕ್ಷಿಣೆ ಪಿಡುಗು, ನಿರುದ್ಯೋಗ ಸಮಸ್ಯೆ ಮುಂತಾದ ಸಮಸ್ಯೆಗಳಿಂದ ಆವತ್ತು ಸಮಾಜ ತಲ್ಲಣಗೊಂಡಿತ್ತು. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಳಾಗಿ ಮಾನವ ಸಂಬಂಧಗಳು ಯಾಂತ್ರಿಕವಾಗಲಿಕ್ಕೆ ಹತ್ತಿದ್ದವು. ಸಂವೇದನಾಶೀಲ ಬಿ.ಆರ್. ಅರಿಷಿಣಗೋಡಿಯವರು ಸಮಾಜದಲ್ಲಿ ಬೇರುಬಿಟ್ಟ ಸಮಸ್ಯೆಗಳನ್ನು ಬಯಲಿಗೆ ಎಳೆದು. ರಂಗಪ್ರಯೋಗ ಗಳಿಂದ ಜನಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ ೧೯೬೭ರಲ್ಲಿ ಈ ನಾಟಕವನ್ನು ಬರೆದರು.

ಸಮಾಜದಲ್ಲಿ ಹಿಂದಿನಿಂದಲೂ ಆಚರಣೆಯಲ್ಲಿದ್ದ ಕೆಲವೊಂದು ಪದ್ಧತಿಗಳು ವ್ಯಕ್ತಿಸ್ವಾತಂತ್ರ್ಯದ ಮೇಲೆ ಹೇಗೆ ಪರಿಣಾಮವನ್ನು ಬೀರುತ್ತವೆ ಎಂಬುದನ್ನು ನಾಟಕಕಾರರು ಪರಿಣಾಮಕಾರಿಯಾಗಿ ಚಿತ್ರಿಸಿರುವದನ್ನು ಕಾಣುತ್ತೇವೆ.

ಪ್ರಭುರಾಯರಂತಹ ಸಾತ್ವಿಕ ವ್ಯಕ್ತಿ ಕೊನೆಗೆ ಅಪವಾದವನ್ನು ಹೊತ್ತು ಮಗ ಧನೇಶನಿಂದಲೇ ಮರಣವಪ್ಪುವ ಸನ್ನಿವೇಶ ದಾರುಣವಾದುದು. ಇದು ಕೇವಲ ಒಬ್ಬ ಪ್ರಭುರಾಯರ ಸಾವಲ್ಲ. ಸಮಾಜದಲ್ಲಿ ಸಾತ್ವಿಕ ವ್ಯಕ್ತಿಗಳಿಗೂ ಕೆಟ್ಟ ವ್ಯಕ್ತಿಗಳಿಂದ ತೊಂದರೆಯಾಗುವದು ಸಹಜವೆನ್ನುವಂತೆ ನಾಟಕಕಾರರು ಚಿತ್ರಿಸಿರುವುದನ್ನು ಕಾಣುತ್ತೇವೆ.

ವಿಧವೆಯಾದ ಸರೋಜಾಳಿಗೆ ವಿಧವಾ ವಿವಾಹದ ಅವಕಾಶವನ್ನು ಸಮಾಜ ಕಲ್ಪಿಸಿದ್ದರೆ ಅವಳು ಈ ಪರಿಯ ವಿಕಾರಕ್ಕೆ ಒಳಗಾಗುತ್ತಿರಲಿಲ್ಲವೇನೋ. ಮರುವಿವಾಹ ಅವಕಾಶವಿಲ್ಲದ್ದರಿಂದ ತನ್ನ ತಂಗಿಯ ಗಂಡನಾದ ಧನೇಶನಲ್ಲಿ ಅನುರಕ್ತಳಾಗಿ ಕುಟುಂಬದ ಸ್ವಾಸ್ಥ್ಯವನ್ನು ಕೆಡಿಸುವಳು. ವೈದ್ಯಭಟ್ಟನ ಪಾತ್ರದ ಮೂಲಕ ಢೋಂಗಿ-ಸಾಧುಗಳ ಕಾರಸ್ತಾನವನ್ನು ತೋರಿಸುವದು ನಾಟಕಕಾರರ ವೈಚಾರಿಕ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ. ಒಂದು ಕಡೆ ವೈದ್ಯಭಟ್ಟನ ಢೋಂಗಿತನವನ್ನು ಬಯಲಿಗೆಳೆಯುವಲ್ಲಿ ನಾಟಕಕಾರರ ವೈಚಾರಿಕತೆಯನ್ನು ಕಂಡರೆ ಇನ್ನೊಂದೆಡೆ ಸತ್ತ ನಂತರ ಪ್ರಭುರಾಯರು ಭೂತವಾಗಿ ಬಂದು ಮನೆಯಲ್ಲಿ ನಡೆದ ಘಟನೆಯನ್ನು ವಿದ್ಯಾಧರನಿಗೆ ಹೇಳುವ ಸನ್ನಿವೇಶ ನಾಟಕಕಾರರಿಗೆ ಇದ್ದ ವೈಚಾರಿಕ ಪ್ರಜ್ಞೆಯ ಕೊರತೆಯನ್ನು ತೋರಿಸುವದು. ನಾಟಕದಲ್ಲಿ ನಿರೂಪಗೊಂಡ ಅನೇಕ ಸಮಸ್ಯೆಗಳು ನಿವಾರಣೆಯಾಗಬೇಕಾದರೆ ವಿದ್ಯಾಧರನ ಹಾಗೆ ಉನ್ನತ ಶಿಕ್ಷಣ ಎಲ್ಲರಿಗೂ ಸಿಗಬೇಕು. ಅಂದರೆ ಮಾತ್ರ ಸ್ವಸ್ಥ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವೆಂಬುದನ್ನು ನಾಟಕದಲ್ಲಿ ಅರಿಷಿಣಗೋಡಿಯವರು ಹೇಳಲು ಪ್ರಯತ್ನಿಸಿದ್ದಾರೆ. ಅನುರಾಧಾನ ಪಾತ್ರ ಇಲ್ಲಿ ಸಪ್ಪೆಯಾಗಿ ಮೂಡಿಬಂದಿರುವದನ್ನು ಕಾಣುತ್ತೇವೆ.

ಬಸ್ ಕಂಡಕ್ಟರ್

ರಂಗಣ್ಣ ಒಂದು ಕುಟುಂಬದ ಹಿರಿಯ ಜೀವ. ಅವನಿಗೆ ಮೂರು ಮಂದಿ ಮಕ್ಕಳು. ಹಿರಿಯವ ಜಗದೀಶ ಕಂಡಕ್ಟರ್, ಎರಡನೆಯವ ಪ್ರಕಾಶ ಹಾಗೂ ಮೂರನೆಯ ಮಗಳು ಕುಂಟಿಯಾದ ಶಾಂತಾ. ಬಡತನದಲ್ಲಿ ಬೆಂದು ಹೋದ ಕುಟುಂಬ. ಹಿರಿಯವನಾದ ಜಗದೀಶ ನೌಕರಿಯಿಂದ ಕುಟುಂಬ ನಿರ್ವಹಣೆ ಮಾಡಬೇಕು. ಅಲ್ಲದೆ ಬೆಂಗಳೂರಿನಲ್ಲಿ ಎಂ.ಬಿ.ಬಿ.ಎಸ್. ಕಲಿಯುವ ತಮ್ಮ ಪ್ರಕಾಶನ ಖರ್ಚನ್ನು ನಿಭಾಯಿಸಬೇಕು. ಹೀಗಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತ ಜಗದೀಶ ತನ್ನ ಮದುವೆಯನ್ನು ಮುಂದೂಡತ್ತಲೇ ಬರುವನು. ತನ್ನ ತಮ್ಮ ಮುಂದೊಂದು ದಿನ ಡಾಕ್ಟರನಾಗುತ್ತಾನೆ ಹಾಗೂ ಅನಾರೋಗ್ಯದಿಂದ ಬಳಲುವ ತನ್ನ ತಂದೆಯನ್ನು ನೋಡುತ್ತಾನೆ, ಕುಂಟಿಯಾದ ತಂಗಿಯ ಮದುವೆ ಮಾಡುತ್ತಾನೆ ಎಂಬ ಆಶಾ ಮನೋಭಾವದಿಂದ ಸಾಲ ಮಾಡಿ ತಮ್ಮ ಪ್ರಕಾಶನ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಹಣವನ್ನು ಕಳಿಸುತ್ತಿರುತ್ತಾನೆ. ಅತ್ತ ಬೆಂಗಳೂರಿನಲ್ಲಿ ಕಲಿಯುತ್ತಿರುವ ತಮ್ಮ ಪ್ರಕಾಶ ತನ್ನ ಕುಟುಂಬದ ಜವಾಬ್ದಾರಿಯನ್ನು ಮರೆತು ಬೆಂಗಳೂರಿನ ಶ್ರೀಮಂತ ಹುಡುಗಿ ಉಮಾಳನ್ನು ಪ್ರೀತಿಸಿ ಮನೆಯವರ ಒಪ್ಪಿಗೆ ಇಲ್ಲದೆ ರಿಜಿಸ್ಟರ್ ಮದುವೆಯಾಗಿ ಊರಿಗೆ ಕರೆದುಕೊಂಡು ಬರುತ್ತಾನೆ. ಮನೆಗೆ ಸೊಸೆಯಾಗಿ ಬಂದ ಉಮಾ ಮಾವ ಹಾಗೂ ಕುಂಟಿ ಶಾಂತಾಳ ಜೊತೆ ಹೊಂದಿಕೊಳ್ಳದೆ ತನ್ನ ಶ್ರೀಮಂತಿಕೆಯ ದರ್ಪದ ವರ್ತನೆಗಳನ್ನು ಮುಂದುವರಿಸುತ್ತಾಳೆ. ಅವರ ವರ್ತನೆಯಿಂದ ಮನೆಯವರಿಗೆ ಬೇಜಾರಾಗುತ್ತದೆ.

ಬೆಂಗಳೂರಿನಂತಹ ಥಳಕು ಬಳುಕಿನ ಜೀವನ ಶೈಲಿಯನ್ನು ಕಂಡ ಉಮಾಳಿಗೆ ಹಳ್ಳಿಯ ವಾತಾವರಣ ರುಚಿಸುವುದಿಲ್ಲ, ಗಂಡ ಪ್ರಕಾಶನನ್ನು ಕರೆದುಕೊಂಡು ಬೆಂಗಳೂರಿಗೆ ಹೋಗುತ್ತಾಳೆ. ಹೆಂಡತಿ ಉಮಾಳ ಬಣ್ಣದ ಮಾತುಗಳಿಗೆ ಮರುಳಾದ ಪ್ರಕಾಶ ತನ್ನ ತಂದೆ, ಕುಂಟ ತಂಗಿ, ತನ್ನ ವಿದ್ಯಾಭ್ಯಾಸದ ಖರ್ಚು ವೆಚ್ಚಗಳನ್ನು ನೋಡಿದ ಅಣ್ಣ ಜಗದೀಶ, ಇವರನ್ನು ಮರೆತು ಬೆಂಗಳೂರಿನಲ್ಲಿ ಉಮಾಳ ಜೊತೆ ಬದುಕುವನು. ಪ್ರಕಾಶನ ವರ್ತನೆಯಿಂದ ತಂದೆ ರಂಗಣ್ಣನ ಆರೋಗ್ಯ ಮತ್ತಷ್ಟು ಹದಗೆಡುವುದು. ಹೇಗಾದರೂ ಮಾಡಿ ತಮ್ಮ ಪ್ರಕಾಶನನ್ನು ಬೆಂಗಳೂರಿನಿಂದ ಊರಿಗೆ ಕರೆತಂದು ತಂದೆಯ ಉಪಚಾರ ಮಾಡಿಸಬೇಕೆಂದು ನಿರ್ಧರಿಸಿ ಜಗದೀಶ ಬೆಂಗಳೂರಿಗೆ ಬರುವನು. ಹೆಂಡತಿಯ ಮೋಹದಲ್ಲಿ ಬಿದ್ದ ಪ್ರಕಾಶ ಅಣ್ಣನ ಮಾತುಗಳಿಗೆ ಬೆಲೆ ಕೊಡದೆ ಊರಿಗೆ ಬರಲು ನಿರಾಕರಿಸುವನು. ಬೇಸತ್ತ ಜಗದೀಶ ಬೆಂಗಳೂರಿನ ರಸ್ತೆಯಲ್ಲಿ ಹೋಗುತ್ತಿರುವಾಗ ಪ್ರಕಾಶನ ಸಹಪಾಠಿ ಪ್ರದೀಪ ಭೆಟ್ಟಿಯಾಗುವನು. ಜಗದೀಶನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಪ್ರದೀಪ ಜಗದೀಶನ ಊರಿಗೆ ಸರ್ಜನ್ ಆಗಿ ಬರುವನು. ಊರಿಗೆ ಬಂದ ಡಾ. ಪ್ರದೀಪ ರಂಗಣ್ಣವರ ಆರೋಗ್ಯವನ್ನು ಉತ್ತಮಗೊಳಿಸುವನು. ಕುಂಟಿಯಾದ ಶಾಂತಾಳಿಗೆ ಸರ್ಜರಿ ಮಾಡಿ ಅಶಕ್ತಗೊಂಡ ಕಾಲನ್ನು ಸಶಕ್ತ ಮಾಡುವನು. ಶಾಂತಾಳ ಸಾಮೀಪ್ಯದಿಂದ ಪ್ರದೀಪನಲ್ಲಿ ಪ್ರೇಮ ಅಂಕುರಿಸುವದು. ಶಾಂತಾಳ ಗುಣಸ್ವಭಾವಗಳನ್ನು ಅರಿತ ಡಾ. ಪ್ರದೀಪ ಅವಳನ್ನು ಮದುವೆಯಾಗಲು ನಿರ್ಧರಿಸುವನು. ಮನನೊಂದ ರಂಗಣ್ಣನ ಕುಟುಂಬಕ್ಕೆ ನೆಮ್ಮದಿ ತರಬೇಕೆಂದು ನಿರ್ಧರಿಸಿ ಪ್ರಕಾಶನ ಹೆಂಡತಿ ಉಮಾಳ ಮನಸ್ಸನ್ನು ಕೆಡಿಸುವ ವೇದಿಕೆಯೊಂದನ್ನು ಸಿದ್ಧಪಡಿಸುವನು. ಪ್ರಕಾಶ ನರ್ಸಗಳ ಜೊತೆ ಒಡನಾಟ ಆಡುವನೆಂದು ಸುಳ್ಳು ವಿಚಾರಗಳನ್ನು ಉಮಾಳಿಗೆ ಹೇಳಿ ನಂಬಿಸುವನು. ತನ್ನ ಗಂಡ ಪ್ರಕಾಶನನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಉಮಾ ಗಂಡನಿಂದ ದೂರವಾಗುವಳು ಹಾಗೂ ಡಾ. ಪ್ರದೀಪನನ್ನು ಪ್ರೀತಿಸಲು ಪ್ರಯತ್ನಿಸುವಳು. ಡಾ. ಪ್ರದೀಪನೂ ಕೂಡಾ ಉಮಾಳ ಜೊತೆ ಪ್ರೀತಿಯ ನಾಟಕವಾಡಿ ಆಕೆಯ ಆಸ್ತಿಯನ್ನು ತನ್ನ ಹೆಸರಿಗೆ ಬರೆಯಿಸಿಕೊಳ್ಳುವನು. ಇದರಿಂದ ಬೇಸತ್ತ ಡಾ. ಪ್ರಕಾಶ ಉಮಾಳಿಂದ ವಂಚಿತನಾಗಿ ಊರಿಗೆ ಬರುವನು. ಅತ್ತ ಡಾ. ಪ್ರದೀಪನಿಂದ ವಂಚಿತಗೊಂಡ ಉಮಾ ಪಶ್ಚಾತಾಪಪಡುವಳು. ಕೊನೆಗೆ ಡಾ. ಪ್ರದೀಪ ಸತ್ಯ ಸಂಗತಿಯನ್ನು ಹೇಳುವನು. ಹಿರಿಯರಿಗೆ ಗೌರವ ಕೊಡದೆ, ಕುಟುಂಬದ ಜವಾಬ್ದಾರಿ ಅರಿಯದೆ ಇದ್ದದ್ದರಿಂದ ಈ ರೀತಿ ನಾಟಕವಾಡಬೇಕಾಯಿತೆಂದು ಪ್ರದೀಪನು ಹೇಳಿದಾಗ ಡಾ. ಪ್ರಕಾಶ ಮತ್ತು ಉಮಾ ಒಂದಾಗುವರು.

ನಾಟಕದ ಕಥೆಗೆ ಪೂರಕವಾಗಿ ಖಾನಾವಳಿ ದೇವಣ್ಣನ ಕಥೆಯೊಂದು ಸೇರಿಕೊಂಡು ನಾಟಕಕ್ಕೆ ಹಾಸ್ಯದ ಮೆರಗು ತುಂಬುತ್ತದೆ. ಮಗಳು ಚೆನ್ನವ್ವ(ಚೆನ್ನಿ)ಳನ್ನು ಡಾ. ಪ್ರದೀಪನಿಗೆ ಕೊಟ್ಟು ಮದುವೆ ಮಾಡಬೇಕೆಂಬ ಬಲವಾದ ಆಶೆ ದೇವಣ್ಣನಿಗೆ ಇರುತ್ತದೆ. ಖಾನಾವಳಿ ಗಿರಾಕಿ ತರುಣ ಕಂಡಕ್ಟರ್ ರಾಜು ಚೆನ್ನವ್ವಳ ಮೇಲೆ ಮನಸ್ಸಿಟ್ಟು ಅವಳನ್ನು ಒಲಿಸಿಕೊಳ್ಳಲು ಯಶಸ್ವಿಯಾಗುವನು. ಕೊನೆಯಲ್ಲಿ ನಾಟಕ ಸುಖಾಂತವಾಗಿ

ಕೊನೆಗೊಳ್ಳುವುದು. ಶಾಂತಾ-ಪ್ರದೀಪ, ಚೆನ್ನವ್ವ-ರಾಜು ಕಂಡಕ್ಟರ್ ಮದುವೆ ನೆರವೇರುವುದು. ಮುನಿದು ಮನಸ್ತಾಪ ಮಾಡಿಕೊಂಡ ಉಮಾ- ಡಾ. ಪ್ರಕಾಶ ಒಂದಾಗುವರು. ಜಗದೀಶನ ಪಾತ್ರದ ಬಗ್ಗೆ ಕೊನೆಯಲ್ಲಿ ನಾಟಕಕಾರರು ಏನನ್ನೂ ಹೇಳದೆ ಇರುವದು ಪ್ರೇಕ್ಷಕರಲ್ಲಿ ಪ್ರಶ್ನೆಗೆ ಎಡೆಮಾಡಿಕೊಡುವುದು. ಕುಟುಂಬಕ್ಕೆ ತ್ಯಾಗ ಮಾಡಿದ ಕಂಡಕ್ಟರನ ಬಗ್ಗೆಯೂ ನಾಟಕಕಾರರು ಮೌನವಹಿಸಿದ್ದಾರೆ.

ಮಾತಿನ ದಾಟಿ, ಪದಗಳ ಪ್ರಯೋಗ, ಆಡುಮಾತಿನ ಸಹಜ ಸೌಂದರ್ಯ ಮನಸೆಳೆಯುತ್ತವೆ. ಕೆಲವು ಕಡೆ ಶಿಷ್ಟ ಮತ್ತು ಆಡುಮಾತನ್ನು ನಾಟಕದಲ್ಲಿ ಹದವಾಗಿ ಬಳಸಿರುವುದನ್ನು ಕಾಣುತ್ತೇವೆ. ಉಚ್ಚಾರಕ್ಕೆ ಪದಗಳು ಕ್ಲಿಷ್ಟವೆನಿಸುವದಿಲ್ಲ. ಗ್ರಾಮೀಣ ಬದುಕಿನ ಆಡುಮಾತಿನ ಬಳಕೆಯನ್ನು ಸಮರ್ಪಕ ವಾಗಿಯೇ ನಾಟಕದಲ್ಲಿ ಬಳಸಿಕೊಂಡಿರುವದನ್ನು ಕಾಣುತ್ತೇವೆ. ಹಾಸ್ಯದ ಸನ್ನಿವೇಶಗಳಲ್ಲಿಯೂ ಶಿಷ್ಟ ಸಂಪ್ರದಾಯವನ್ನು ಮೀರದಂತೆ ಭಾಷೆ ಬಳಕೆಯಾಗಿರುವುದನ್ನು ಕಾಣುತ್ತೇವೆ.

ದುಷ್ಟರಿಗೆ ಶಿಕ್ಷೆ ಹಾಗೂ ಶಿಷ್ಟರಿಗೆ ಒಳ್ಳೆಯದಾಗುವ ಸಂದೇಶವನ್ನು ನಾಟಕಕಾರರು ಕೊಟ್ಟಿರುವುದನ್ನು ಕಾಣುತ್ತೇವೆ. ನಮ್ಮ ಭಾರತೀಯ ನಾರಿ ಸಮಾಜದಲ್ಲಿ ಯಾವ ರೀತಿ ಬದುಕಬೇಕು ಎಂಬ ಸಂದೇಶವನ್ನು ವ್ಯಕ್ತಪಡಿಸುತ್ತಾರೆ. ಒಟ್ಟು ಇಲ್ಲಿ ಗ್ರಾಮೀಣ ಬದುಕಿನ ಚಿತ್ರಣದೊಂದಿಗೆ ನಗರ ಬದುಕನ್ನು ತಳುಕು ಹಾಕಲು ಪ್ರಯತ್ನಿಸಿದಂತೆ ತೋರುವುದು. ಅವತ್ತಿನ ಜನಾಂಗದ ಮನೋಧರ್ಮವೂ ನಗರದೆಡೆ ಒಲಿಯುತ್ತಿರುವುದರ ಪ್ರತೀಕವಾಗಿ ಕೆಲವು ಪಾತ್ರಗಳು ಇಲ್ಲಿ ಕಂಡುಬರುತ್ತವೆ.

೧೯೬೦ರ ಸುಮಾರಿಗೆ ಆಧುನಿಕ ಶಿಕ್ಷಣದ ಪ್ರಭಾವದಿಂದ ಗ್ರಾಮೀಣ ಜನರು ನಗರ ಜೀವನದೆಡೆಗೆ ಒಲಿಯುತ್ತಿರುವ ಜನರ ಮನೋಭಾವನೆಯನ್ನು ತೋರಿಸಿಕೊಡುವುದು ಈ ನಾಟಕದ ಮುಖ್ಯ ಉದ್ದೇಶ ಗಳಲ್ಲೊಂದಾಗಿದೆ.

ಬಿ.ಆರ್. ಅರಿಷಿಣಗೋಡಿಯವರ ನಾಟಕಗಳಲ್ಲಿಯೇ ಇದು ಅತ್ಯಂತ ಜನಪ್ರಿಯ ಕೃತಿಯಾಗಿದೆ. ಕರ್ನಾಟಕದಲ್ಲಿ ಅನೇಕ ಕಂಪನಿಗಳು, ಹವ್ಯಾಸಿ ತಂಡಗಳು ಈ ನಾಟಕವನ್ನು ಅನೇಕ ಸಲ ಪ್ರದರ್ಶಿಸಿವೆ. ಅರಿಷಿಣಗೋಡಿಯವರ ಕಂಪನಿಯ ಎಲ್ಲಾ ನಾಟಕಗಳು ಕರ್ನಾಟಕದಲ್ಲಿಯೇ ತನ್ನ ರಂಗಯಾತ್ರೆಯನ್ನು ಮಾಡಿದರೆ ಈ ಬಸ್ ಕಂಡಕ್ಟರ್ ನಾಟಕ ನಾಡಿನ ಹೊರಗಡೆ ಪ್ರದರ್ಶನಗೊಂಡಿರುವದು ಇದರ ಜನಪ್ರಿಯತೆಗೆ ಸಾಕ್ಷಿ. ಹೊರನಾಡ ಕನ್ನಡಿಗರಾದ ಮುಂಬಯಿ ಜನರು ಈ ನಾಟಕವನ್ನು ಮುಂಬಯಿಯಲ್ಲಿ ಪ್ರದರ್ಶನ ಮಾಡಿದ್ದಾರೆ. ಹಳ್ಳಿ-ಹಳ್ಳಿಗಳಲ್ಲಿ ಈ ನಾಟಕ ಹವ್ಯಾಸಿ ರಂಗತಂಡಗಳಿಂದ ಪ್ರದರ್ಶನಗೊಂಡಿದೆ. ಹತ್ತು ಸಾವಿರಕ್ಕಿಂತಲೂ ಹೆಚ್ಚು ರಂಗಪ್ರಯೋಗವನ್ನೊಳಗೊಂಡ ನಾಟಕವಿದು. ವಿದ್ಯಾಭ್ಯಾಸವನ್ನು ಪಡೆದು ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿ ತಮ್ಮ ವ್ಯಕ್ತಿತ್ವವನ್ನು ದೊಡ್ಡದು ಮಾಡಿಕೊಂಡರೆ ಸಾಲದು. ತಾವು ಆ ಹುದ್ದೆಗೆ ಏರಲಿಕ್ಕೆ ಸಹಾಯ, ಸಹಕಾರವನ್ನು ಮಾಡಿದ ಕುಟುಂಬದ, ಸಮಾಜದ ಋಣವನ್ನು ತೀರಿಸಬೇಕು ಎಂಬುದು ನಾಟಕದ ಒಟ್ಟು ಆಶಯವಾಗಿರುವದನ್ನು ಇಲ್ಲಿ ಕಾಣುತ್ತೇವೆ.

ಹೆಣ್ಣು ಮಗಳು

ಕಾಮಾಕ್ಷಿ ಹಾಗೂ ವಿನಾಯಕರ ಕಾಮುಕತೆಯ ವಿಷಯವನ್ನು ತೋರಿಸುವುದೇ ನಾಟಕದ ಉದ್ದೇಶ. ಚಿತ್ತಾಪೂರದ ಪ್ರಭಾಕರನೊಂದಿಗೆ ಸೋಮೇಶನ ಮಗಳಾದ ಕಾಮಾಕ್ಷಿಯ ಮದುವೆಯಾಗುತ್ತದೆ. ಕಾಮಾಕ್ಷಿ ಹಾಗೂ ಪ್ರಭಾಕರರ ದಾಂಪತ್ಯದ ಫಲವಾಗಿ ರವೀಂದ್ರ ಹುಟ್ಟುತ್ತಾನೆ. ರವೀಂದ್ರ ಬೆಳೆದು ದೊಡ್ಡವನಾಗಿ ಶಾಲೆಗೆ ಹೋಗುತ್ತಿರುವಾಗ ಕಾಮಾಕ್ಷಿಯ ಗಂಡನಿಗೆ ಕ್ಷಯರೋಗ ಅಂಟಿಕೊಂಡು ಇವರ ದಾಂಪತ್ಯ ಜೀವನದಲ್ಲಿ ಬಿರುಕು ಕಾಣಿಸಿಕೊಳ್ಳುವುದು. ಗಂಡ ಪ್ರಭಾಕರ ಅನಾರೋಗ್ಯದಿಂದ ಬಳಲುತ್ತಿದ್ದಾಗ ಮಗ ವಿದ್ಯಾಭ್ಯಾಸಕ್ಕಾಗಿ ಹೋಗುವನು. ಕಾಮಾಕ್ಷಿಯು ತನ್ನ ಮನದಾಳದಲ್ಲಿ ಬೇರುಬಿಟ್ಟ ಕಾಮ ವಾಂಛೆಯನ್ನು ತೀರಿಸಿಕೊಳ್ಳಲು ತನ್ನ ಗಂಡನ ಗೆಳೆಯನಾದ ವಿನಾಯಕನಲ್ಲಿ ಅನುರಕ್ತಳಾಗುವಳು. ತನ್ನ ಮನದ ವಾಂಛೆಯನ್ನು ತೀರಿಸಿಕೊಳ್ಳಲು ಗಂಡ ಪ್ರಭಾಕರನಿಂದ ತೊಂದರೆಯಾಗಬಾರದೆಂದು ಕ್ಷಯರೋಗದ ನೆಪಮಾಡಿ ಗಂಡನನ್ನು ಬಿಟ್ಟು, ಕಾಮಾಕ್ಷಿ ತವರುಮನೆಯನ್ನು ಸೇರುವಳು. ತಂದೆಗೆ ಮಗಳು ಕಾಮಾಕ್ಷಿ ಎಂದರೆ ಎಲ್ಲಿಲ್ಲದ ಪ್ರೀತಿ. ತಂದೆಯ ಈ ಸಲುಗೆಯನ್ನು ದುರ್ಬಳಕೆ ಮಾಡಿಕೊಂಡ ಕಾಮಾಕ್ಷಿ ತವರುಮನೆಯಲ್ಲಿ ಅಧಿಕಾರ ನಡೆಸುವಳು. ಇತ್ತ ಚಿತ್ತಾಪೂರದಲ್ಲಿ ಕ್ಷಯರೋಗ ಉಲ್ಬಣಗೊಂಡು ಪ್ರಭಾಕರ ಮರಣವನ್ನಪ್ಪುವನು. ಮರಣದ ನಂತರ ಕಾಮಾಕ್ಷಿ ತವರುಮನೆಗೆ ಬಂದು ಸೇರುವಳು. ಕೆಲಕಾಲದ ನಂತರ ಕಾಮಾಕ್ಷಿಯ ಮಗ ರವೀಂದ್ರ ತಮ್ಮ ಆಸ್ತಿಯನ್ನು ಹುಚ್ಚೇಶ್ವರ ಹೈಸ್ಕೂಲಿಗೆ ದಾನ ಕೊಟ್ಟು ದೂರದ ಬೆಂಗಳೂರಿಗೆ ಬಂದು ತಾನು ಪಡೆದ ಪ್ರಥಮದರ್ಜೆಯ ಪದವಿಯ ಅರ್ಹತೆಯಿಂದ ಅರಣ್ಯ ಇಲಾಖೆಯಲ್ಲಿ ನೌಕರಿಯನ್ನು ಹಿಡಿಯುವನು.

ತವರುಮನೆಯಲ್ಲಿ ಅಣ್ಣನಾದ ಗಿರೀಶನ ಹೆಂಡತಿ ದಮಯಂತಿಯ ಮೇಲೆ ಕಾಮಾಕ್ಷಿ ಅಧಿಕಾರ ಚಲಾಯಿಸುವಳು. ಗಿರೀಶ ಬ್ಯಾಂಕಿನ ತರಬೇತಿಗೆಂದು ಬೆಂಗಳೂರಿಗೆ ಹೋದಾಗ ಇಲ್ಲಸಲ್ಲದ ಅಪವಾದಗಳನ್ನು ದಮಯಂತಿಯ ಮೇಲೆ ಹೊರಿಸುವಳು. ತನಗೆ ವಿಷಹಾಕಿ ಸಾಯಿಸಲು ಪ್ರಯತ್ನಿಸಿದಳು ಎಂಬ ಆರೋಪವನ್ನು ಹೊರಿಸಿ ದಮಯಂತಿಯನ್ನು ಮನೆಯಿಂದ ಹೊರಹಾಕುವಳು. ಇತ್ತ ವಿನಾಯಕನೊಂದಿಗೆ ಸರಸಸಲ್ಲಾಪದಿಂದ ಕಾಮಾಕ್ಷಿ ಗರ್ಭವತಿಯಾಗುವಳು, ವಿನಾಯಕನಾದರೂ ಮದುವೆಯಗುವೆನೆಂದು ನಂಬಿಸಿ ತನ್ನ ಕಾಮದಾಹವನ್ನು ತಣಿಸಿಕೊಳ್ಳುವನು. ತಂದೆ ಸೋಮೇಶ ನಮ್ಮ ಮದುವೆಗೆ ಅಡ್ಡ ಬರುವನೆಂದು ಕಾಮಾಕ್ಷಿಯನ್ನು ನಂಬಿಸಿ ಆಕೆಯ ಕೈಯಿಂದಲೇ ವಿಷ ಹಾಕಿಸಿ ಅವಳ ತಂದೆಯನ್ನು ಕೊಲ್ಲಿಸುವನು. ವಿನಾಯಕನದು ಕೇವಲ ತೋರಿಕೆಯ ಪ್ರೀತಿ. ಅವನಿಗೆ ಬೇಕಾಗಿದ್ದು ಕಾಮಾಕ್ಷಿ ಅಲ್ಲ, ಅವಳ ಆಸ್ತಿ. ಕಾಮಾಕ್ಷಿಯ ತಂದೆ ಸತ್ತ ನಂತರ ಆಕೆಯ ಸಂಪತ್ತನ್ನು ವಶಪಡಿಸಿಕೊಂಡು ಮೈಸೂರಿಗೆ ಕರೆದುಕೊಂಡು ಹೋಗುವೆನೆಂದು ಹೇಳಿ ದಾರಿಯಲ್ಲಿ ಕಾಮಾಕ್ಷಿಯ ಕೊಲೆಗೈಯ್ಯುವನು. ಮೈಸೂರಿನ ಅರಣ್ಯದಲ್ಲಿ ಕಾಮಾಕ್ಷಿಯ ಮಗ ಗುಂಡು ಹಾರಿಸಿ ವಿನಾಯಕನನ್ನು ಸಾಯಿಸುವನು. ದಾರಿಬಿಟ್ಟ ಹೆಣ್ಣಾದ ಕಾಮಾಕ್ಷಿ ಒಂದು ಕಡೆ ಬಲಿಯಾದರೆ,

ಅನೀತಿ, ಅನಾಚಾರ, ಸಂಪತ್ತಿನ ಆಶೆಗಾಗಿ ವಿನಾಯಕ ಬಲಿಯಾಗುವನು. ಕಥೆಯು ಇಲ್ಲಿಗೆ ನಿಲ್ಲುವದಿಲ್ಲ ಬೆಂಗಳೂರಿನ ಶ್ರೀಮಂತ ಧನದತ್ತನ ಮಗಳಾದ ಸುಮಿತ್ರಾಳನ್ನು ಪ್ರೀತಿಸಿ ರವೀಂದ್ರ ಮದುವೆಯಾಗುವನು. ಕಾಮಾಕ್ಷಿಯ ಕಾರಸ್ಥಾನದಿಂದ ಅಗಲಿದ ಗಿರೀಶ ಮತ್ತು ದಮಯಂತಿಯರು ನಾಟಕೀಯ ರೀತಿಯಲ್ಲಿ ಒಂದಾಗುವರು. ಇದಿಷ್ಟು ನಾಟಕದ ಸಾರ.

ಕಥೆಗೆ ಪೂರಕವಾಗುವಂತೆ ಪಾತ್ರಗಳ ಸೃಷ್ಟಿಯಾಗಿರುವದನ್ನು ಕಾಣುತ್ತೇವೆ. ಸೋಮೇಶ, ಸೋಮೇಶನ ಮಗ ಗಿರೀಶ, ಮಗಳು ಕಾಮಾಕ್ಷಿ, ನಿಜಗುಣಿ, ಗಿರೀಶನ ಹೆಂಡತಿ ದಮಯಂತಿ, ಕಾಮಾಕ್ಷಿಯ ಗಂಡ ಪ್ರಭಾಕರ, ಪ್ರಭಾಕರನ ಗೆಳೆಯ ವಿನಾಯಕ, ಕಾಮಾಕ್ಷಿಯ ಮಗ ರವೀಂದ್ರ ಮುಂತಾದ ಪಾತ್ರಗಳನ್ನು ಕಥಾನಕಕ್ಕೆ ಪೂರಕವಾಗುವ ರೀತಿಯಲ್ಲಿ ದುಡಿಸಿಕೊಂಡಿರುವುದನ್ನು ಕಾಣುತ್ತೇವೆ. ನಾಟಕದ ಕೊನೆಗೆ ಬರುವ ಬೆಂಗಳೂರಿನ ಶ್ರೀಮಂತ ಧನದತ್ತ ಹಾಗೂ ಅವನ ಮಗಳು ಸುಮಿತ್ರಾ

ಈ ಪಾತ್ರಗಳು ಕಥೆಗೆ ಹೊಂದಿಕೊಂಡಂತೆ ಕಾಣುವುದಿಲ್ಲ. ನಾಟಕವನ್ನು ಸುಖಾಂತ್ಯ ಮಾಡಲು ಮಾತ್ರ ನಾಟಕಕಾರರು ಈ ಪಾತ್ರಗಳನ್ನು ಸೃಷ್ಟಿಸಿದ್ದಾರೆ.

ಸರಳವಾದ ಮಾತುಗಳು, ಆಡುನುಡಿಯ ಬಳಕೆಯಾಗಿರುವುದನ್ನು ಕಾಣುತ್ತೇವೆ. ಕೀಳಲು ಪದಗಳು ಹಿತಮಿತ, ಅರ್ಥಪೂರ್ಣವಾಗಿ ಕಾಣುತ್ತವೆ. ಗ್ರಾಮೀಣ ಬದುಕಿನ ಅನುಭವಗಳ ಮಾತುಗಳು ನಾಟಕಕ್ಕೆ ಗಾಂಭೀರ್ಯ ತಂದುಕೊಡುತ್ತವೆ.

ಬಿ.ಆರ್.ಅರಿಷಿಣಗೋಡಿಯವರು ಲಂಚ ಸಾಮ್ರಾಜ್ಯ ನಾಟಕವನ್ನು ರಚಿಸಿದ ಮೂರು-ನಾಲ್ಕು ತಿಂಗಳ ನಂತರ ಈ ನಾಟಕವನ್ನು ರಚಿಸಿದರು. ಲಂಚ ಸಾಮ್ರಾಜ್ಯ ನಾಟಕವನ್ನು ರಂಗಪ್ರಯೋಗಕ್ಕೆ ಅಳವಡಿಸುವಾಗ ಅನೇಕ ತಿದ್ದುಪಡಿಗೆ ಒಳಪಟ್ಟಿತು. ಲಂಚ ಸಾಮ್ರಾಜ್ಯ ನಾಟಕದಲ್ಲಿಯ ರಂಗತಂತ್ರಗಳ ಕೊರತೆಯನ್ನು ಮನವರಿಕೆ ಮಾಡಿಕೊಂಡ ಅರಿಷಿಣಗೋಡಿಯವರು ಈ ಹೆಣ್ಣುಮಗಳು ನಾಟಕವನ್ನು ರಂಗಪ್ರಯೋಗಕ್ಕೆ ಅನುಕೂಲವಾಗುವ ರೀತಿಯಲ್ಲಿ ರಚಿಸಿರುವುದನ್ನು ಕಾಣುತ್ತೇವೆ. ಕಥೆಗೆ ಪೂರಕವಾಗುವಂತೆ ಏಳು ಪುರುಷ ಪಾತ್ರಗಳು, ಐದು ಸ್ತ್ರೀ ಪಾತ್ರಗಳನ್ನು ಸೃಷ್ಟಿಸಿ ಕಥೆಯನ್ನು ಮುನ್ನಡೆಸಿಕೊಂಡು ಹೋಗಿದ್ದಾರೆ. ಅತಿಯಾದ ಪಾತ್ರಗಳಿಂದ ಕಥೆ ಸಂಕೀರ್ಣವಾಗಿ ಅರ್ಥೈಸಲು ತೊಂದರೆಯಾಗುವುದನ್ನು ತಪ್ಪಿಸಲು ತಮ್ಮ ನಾಟಕದಲ್ಲಿ ಹಿತ-ಮಿತ ಪಾತ್ರಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆ.

ನಾಟಕಕಾರರು ನಾಟಕವನ್ನು ಸುಖಾಂತ್ಯ ಮಾಡಲು ಕಾಮಾಕ್ಷಿಯ ಕುಟಿಲತನಕ್ಕೆ ಬಲಿಯಾಗಿ ಅಗಲಿದ ಗಿರೀಶ ಮತ್ತು ದಮಯಂತಿಯರು ಒಂದಾಗುವುದನ್ನು ಚಿತ್ರಿಸಿದ್ದಾರೆ. ಕೊನೆಗೆ ಬೆಂಗಳೂರಿನ ಶ್ರೀಮಂತ ಧನಪಾಲನ ಮಗಳು ಸುಮಿತ್ರಾ-ರವೀಂದ್ರರ ನಡುವೆ ಮದುವೆ ಏರ್ಪಡುವುದು.

ನೈತಿಕತೆಯನ್ನು ಕಳೆದುಕೊಂಡ ಕಾಮಾಕ್ಷಿ ತನ್ನ ದೈಹಿಕ ವಾಂಛೆಯನ್ನು ತೀರಿಸಿಕೊಳ್ಳುವುದಕ್ಕೆ ಎರಡೂ ಕುಟುಂಬದ ಸಾಮರಸ್ಯವನ್ನು ಕೆಡಿಸುವಳು. ಅಲ್ಲದೆ ಕೊನೆಗೆ ತಾನು ಕೊಲೆಯಾಗುವಳು. ನೈತಿಕತೆಯನ್ನು ಕಳೆದುಕೊಂಡ ಸ್ತ್ರೀ ಬದುಕಬಾರದು ಅವಳಿಗೆ ಸಾವೇ ಗತಿ ಎನ್ನುವುದು ನಾಟಕಕಾರರ ಆಶಯವಿದ್ದಂತೆ ತೋರುತ್ತದೆ.

ಕಣ್ಣಿದ್ದೂ ಕುರುಡ ಅರ್ಥಾತ್ ಗೋಪಿ-ಗೌರಿ

ಸಿರಿಯೂರಿನ ನಾಗೇಗೌಡ ಸಕ್ಕರೆ ಕಾರ್ಖಾನೆಯ ಮಾಲಿಕ ಹಾಗೂ ಆಗರ್ಭ ಸಿರಿವಂತ. ಅವನಿಗೆ ವಯಸ್ಸಿಗೆ ಬಂದ ಒಬ್ಬಳೇ ಮಗಳು, ಅವಳ ಹೆಸರು ಮಂಜುಳಾ ಬಿ.ಎ. ಪದವೀಧರೆ, ಸ್ವಚ್ಛಂದ ಮನಸ್ಸಿನ ಮಂಜುಳಾ ಚಲನಚಿತ್ರರಂಗದಲ್ಲಿ ನಟಿಯಾಗಬೇಕು ಇಲ್ಲವೇ ಸರಕಾರಿ ನೌಕರಿ ಮಾಡಿ ಸ್ವತಂತ್ರವಾಗಿರಬೇಕು ಎನ್ನುವ ಮನಸ್ಸಿನವಳಾಗಿರುತ್ತಾಳೆ. ಬಣ್ಣದ ಬದುಕಿನ ಜೀವನಶೈಲಿಯನ್ನು ರೂಢಿಸಿಕೊಂಡ ಮಂಜುಳಾ ಅದೇ ಊರಿನಲ್ಲಿದ್ದ ಫೋಟೊ ಸ್ಟುಡಿಯೋದ ಮಾಲಿಕ ಆನಂದನ ಜೊತೆ ಸಖ್ಯ ಬೆಳೆಸುವಳು. ಆನಂದನಾದರೂ ಬಿ.ಎಸ್ಸಿ.(ಆನರ್ಸ್) ಪದವಿ ಪಡೆದ ವಿದ್ಯಾವಂತ. ವಿದ್ಯಾವಂತನಾದರೂ ಆನಂದ ಊರಿನ ಅನೇಕ ಸ್ತ್ರೀಯರ ಸಂಗ ಮಾಡಿದ ರಸಿಕ. ಮಂಜುಳಾ ಮತ್ತು ಆನಂದರ ಸುದ್ದಿ ಊರಲ್ಲಿ ಗುಸುಗುಸು ಹರಡಲು, ಇದನ್ನು ಅರಿತ ನಾಗೇಗೌಡರು ಹೇಗಾದರೂ ಮಾಡಿ ಒಬ್ಬ ಸಭ್ಯ ವಿದ್ಯಾವಂತ ವರನಿಗೆ ಮದುವೆ ಮಾಡಿಕೊಡಬೇಕೆಂದು ನಿರ್ಧರಿಸಿ ವರ ಹುಡುಕಲು ಪ್ರಾರಂಭ ಮಾಡುವರು. ಅನೇಕ ಕಡೆಗೆ ವರ ಹುಡುಕಾಡಿದರೂ ಮಂಜುಳಾಳನ್ನು ಮದುವೆಯಾಗಲು ಯಾರೂ ಸಿದ್ಧರಿರಲಿಲ್ಲ. ಆಗರ್ಭ ಶ್ರೀಮಂತನಾದ ನನ್ನ ಮಗಳಿಗೆ ವರ ದೊರೆಯದೇ ಇರುವದೆಂದರೇನು? ಎಂದು ಚಿಂತಿಸುತ್ತಿರುವಾಗ ನಾಗೇಗೌಡರ ಕಾರಿನ ಚಾಲಕ ಹೊಕ್ರಾಣಿ ಮಂಜುಳಾಳ ಸ್ವಚ್ಛಂದದ ತಿರುಗಾಟ ಹಾಗೂ ಆನಂದನ ಜೊತೆಗೆ ಇದ್ದ ಸಂಬಂಧವನ್ನು ಗೌಡರಿಗೆ ತಿಳಿಸುವನು. ಆನಂದ ಮಂಜುಳಾಳ ಸ್ವಭಾವವನ್ನು ಅರಿತು ಆಕೆಗೆ ಆಸಕ್ತಿಯಿದ್ದ ಚಿತ್ರರಂಗದ ಆಸೆಯನ್ನು ತೋರಿಸುತ್ತಾ ಮಂಜುಳಾಳ ಜೊತೆಗೆ ಚಕ್ಕಂದ ಆಡುತ್ತಾ ತಿರುಗುತ್ತಿರುವನು. ತಂದೆ ನಾಗೇಗೌಡರು ಇದ್ದೊಬ್ಬ ಮಗಳನ್ನು ಚಿತ್ರರಂಗಕ್ಕಾಗಲಿ, ಸರಕಾರಿ ನೌಕರಿಗಾಗಲಿ ಕಳಿಸಲು ಸಿದ್ಧರಿಲ್ಲ. ಆನಂದ ಮತ್ತು ಮಂಜುಳಾರ ತಿರುಗಾಟದ ಸುದ್ದಿಯನ್ನು ಅರಿತ ನಾಗೇಗೌಡರು ಮಗಳು ಮಂಜುಳಾಳ ಮದುವೆಯನ್ನು ಬೇಗನೆ ಮಾಡಿ ಮುಗಿಸಬೇಕೆಂದು ನಿರ್ಧರಿಸುವರು. ತಮ್ಮ ಫ್ಯಾಕ್ಟರಿಯಲ್ಲಿದ್ದ ಇಂಜಿನೀಯರ್ ಹುದ್ದೆಯ ಮೇಲೆ ನಾಗೇಗೌಡರ ಕಣ್ಣು ಬೀಳುತ್ತದೆ. ಈ ಮೊದಲು ಫ್ಯಾಕ್ಟರಿಯಲ್ಲಿದ್ದ ಇಂಜಿನೀಯರನಿಗೆ ನಾಗೇಗೌಡ ಕುಂಟುನೆಪ ಹೇಳಿ ರಾಜಿನಾಮೆ ಕೊಟ್ಟು ಹೋಗುವಂತೆ ಮಾಡುತ್ತಾನೆ. ಹೊಸದಾಗಿ ಇಂಜಿನೀಯರ್ ಹುದ್ದೆಯನ್ನು ತುಂಬಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಹುದ್ದೆಗೆ ಅರ್ಜಿ ಕರೆಯುತ್ತಾನೆ. ಅನೇಕ ಜನ ಅರ್ಹ ಅಭ್ಯರ್ಥಿಗಳು ಇಂಜಿನೀಯರ್ ಹುದ್ದೆಯನ್ನು ಅಲಂಕರಿಸಲು ಬರುವರು. ಅದರಲ್ಲಿ ನಾಗೇಗೌಡರು ಅವಿವಾಹಿತ ಇಂಜಿನೀಯರನನ್ನು ನೇಮಿಸಿಕೊಂಡು

ಅವನಿಗೆ ತನ್ನ ಮಗಳು ಮಂಜುಳಾಳನ್ನು ಕೊಡಬೇಕೆಂದು ನಿರ್ಧರಿಸುವರು. ಈ ಮೊದಲು ಸರಕಾರಿ ಸ್ಟೀಲ್ ಫ್ಯಾಕ್ಟರಿಯಲ್ಲಿದ್ದ ಶೇಖರ ರಾಜಿನಾಮೆ ನೀಡಿ ನಿರುದ್ಯೋಗಿಯಾಗಿ ಅಲೆಯುತ್ತಿದ್ದ. ಬಾಲ್ಯದಲ್ಲಿ ಅಕ್ಕನ ಮಗಳು ಗಿರಿಜಾಳನ್ನು ಮದುವೆ ಮಾಡಿಕೊಂಡಿದ್ದನು. ಅವಿವಾಹಿತನೆಂದು ಸುಳ್ಳು ಹೇಳಿ ನಾಗೇಗೌಡರ ಸಕ್ಕರೆ ಫ್ಯಾಕ್ಟರಿಯಲ್ಲಿ ಇಂಜಿನೀಯರ್‌ನಾಗಿ ನೇಮಕಗೊಳ್ಳುತ್ತಾನೆ.

ಅದೇ ಊರಿನಲ್ಲಿ ಕಲಿತು ಅಲ್ಲಿಯ ಹೈಸ್ಕೂಲ ಶಿಕ್ಷಕನಾದ ಶಿವರಾಜನಿಗೆ ಶೇಖರ ದಾರಿಯಲ್ಲಿ ಹೋಗುತ್ತಿರುವಾಗ ಭೆಟ್ಟಿಯಾಗುವನು. ಇದೇ ಊರಿನಲ್ಲಿಯ ನಾಗೇಗೌಡರ ಫ್ಯಾಕ್ಟರಿಯಲ್ಲಿ ಸೇರಿದ ವಿಷಯವನ್ನು ಶಿವರಾಜನಿಗೆ ಹೇಳುವನು. ಮೊದಲು ಇದ್ದ ಸರಕಾರಿ ಸ್ಟೀಲ್ ಫ್ಯಾಕ್ಟರಿಗೆ ರಾಜಿನಾಮೆ ಕೊಟ್ಟಿದ್ದೇನೆ ಎನ್ನುವ ವಿಷಯವನ್ನು ಹೇಳುವನು. ಇದನ್ನೆಲ್ಲ ಶೇಖರನ ಬಾಯಿಂದ ಕೇಳಿದ ಗೆಳೆಯ ಶಿವರಾಜ ನಾಗೇಗೌಡರ ದುರ್ಗುಣಗಳನ್ನು ಶೇಖರನಿಗೆ ಹೇಳುವನು. ಸರಕಾರಿ ನೌಕರಿಗೆ ರಾಜಿನಾಮೆ ಕೊಡಬಾರದಿತ್ತು ಎಂದು ಹೇಳುವನು. ಸರಕಾರಿ ನೌಕರದಾರನಿಗೆ ಇದ್ದಷ್ಟು ಬೆಲೆ ಖಾಸಗಿ ಒಡೆತನದಲ್ಲಿದ್ದ ಈ ನೌಕರಿಗೆ ಎಂದಾದರೂ ಬಂದಿತೇ ಎಂದು ಶಿವರಾಜ ನಾಗೇಗೌಡರ ಬಗ್ಗೆ ಇದ್ದ ತನ್ನ ಅಭಿಪ್ರಾಯವನ್ನು ತಿಳಿಸುವನು. ನಾನಾಯಿತು ನನ್ನ ನೌಕರಿಯಾಯಿತು ಇಲ್ಲದ ಉಸಾಬರಿಗೆ ಹೋಗದಿದ್ದರೆ ನೆಮ್ಮದಿಯಿಂದ ಇರಬಹುದೆಂದು ಶೇಖರ ನಿರ್ಣಯಿಸಿ ಗೆಳೆಯ ಶಿವರಾಜನಿಗೆ ಸಮಾಧಾನದ ಮಾತುಗಳನ್ನು ಹೇಳುವನು.

ಪ್ರತಿ ವರ್ಷದಂತೆ ಈ ವರ್ಷವೂ ಮಂಜುಳಾಳ ಹುಟ್ಟುಹಬ್ಬವನ್ನು ನಾಗೇಗೌಡರು ಅದ್ದೂರಿಯಾಗಿ ಆಚರಿಸಿದರು. ಹುಟ್ಟುಹಬ್ಬಕ್ಕೆ ಅನೇಕ ಗಣ್ಯರನ್ನು ಆಮಂತ್ರಿಸಿದ್ದರು. ಹೊಸದಾಗಿ ನೌಕರಿಗೆ ಸೇರಿದ ಇಂಜಿನೀಯರ್ ಶೇಖರನೂ ಮಂಜುಳಾಳ ಹುಟ್ಟುಹಬ್ಬದ ಸಮಾರಂಭದಲ್ಲಿ ಭಾಗವಹಿಸಿದನು. ಬಂದ ಅತಿಥಿಗಳೆಲ್ಲರೂ ಹೋದ ನಂತರ ಶೇಖರನಿಗೆ ವಿಶೇಷ ಕಾಳಜಿ ಮಾಡಿ ಊಟ ಮುಗಿಸಿಕೊಂಡು ಹೋಗಿರೆಂದು ಒತ್ತಾಯಮಾಡಿ ನಿಲ್ಲಿಸುವರು. ಮಗಳು ಮಂಜುಳಾಳ ಕೈಯಿಂದ ಮಾಡಿದ ರುಚಿಕಟ್ಟಾದ ಅಡುಗೆಯನ್ನು ಶೇಖರನಿಗೆ ಊಟ ಮಾಡಿಸುವರು. ಹಾಗೆಯೇ ನಾಗೇಗೌಡರು ಮಗಳು ಮಂಜುಳಾಳನ್ನು ಮದುವೆಯಾಗಬೇಕೆಂದು ಪ್ರಸ್ತಾಪಿಸುವರು. ಬಾಲ್ಯದಲ್ಲಿ ವಿವಾಹವಾದ ಅಕ್ಕನ ಮಗಳು ಗಿರಿಜಾ ಹಳ್ಳಿಯ ಗುಗ್ಗು ಆಗಿ ಶೇಖರನಿಗೆ ಕಾಣುವಳು. ಕಾಲೇಜು ಕಲಿಯುವಾಗ ಬೆಂಗಳೂರು ಮುಂತಾದ ಊರಿಗಳಿಗೆ ತಿರುಗಾಡಿ ನಗರ ಜೀವನದ ಆಕರ್ಷಣೆಗೆ ಒಳಗಾದ ಶೇಖರನಿಗೆ ಈಗ ಗಿರಿಜಾ ಅನಾಕರ್ಷಕವಾಗಿ ಕಾಣುವಳು. ಫ್ಯಾಶನ್ ಪ್ರಿಯನಾದ ಶೇಖರನಿಗೆ ನಗರ ಜೀವನದ ಬಣ್ಣದ ಬದುಕು ಆಕರ್ಷಿಸಿತ್ತು. ಹೀಗಾಗಿ ಬಾಲ್ಯದಲ್ಲಿ ವಿವಾಹವಾದ ಅಕ್ಕನ ಮಗಳನ್ನು ಬಿಟ್ಟುಬಿಡುವ ನಿರ್ಧಾರಕ್ಕೆ ಬಂದು, ನಾಗೇಗೌಡರ ಮಗಳು ಮಂಜುಳಾಳನ್ನು ಮದುವೆಯಾಗಲು ಸಿದ್ಧನಾಗುವನು. ಮಂಜುಳಾ-ಆನಂದರ ಬಗ್ಗೆ ತಿಳಿದುಕೊಂಡಿದ್ದ ಗೆಳೆಯ ಶಿವರಾಜ ಎಚ್ಚರಿಸಿದನಾದರೂ ಅವನ ಮಾತನ್ನು ಕೇಳದೆ ಮಂಜುಳಾಳನ್ನು ಇಷ್ಟಪಡಲಿಕ್ಕೆ ಹತ್ತಿದನು.

ಶಂಕ್ರೆಪ್ಪ ಸಾಹುಕಾರರ ಮಗ ಗೋಪಿ. ಗೋಪಿಯ ಮದುವೆಯನ್ನು ವರದಕ್ಷಿಣೆಯ ಆಸೆಗಾಗಿ ಶಂಕ್ರೆಪ್ಪ ಮುಂದೂಡುತ್ತಿದ್ದನು. ಊರಲ್ಲಿ ಹೊಲ, ತೋಟ, ಮೂರು ಮನೆಗಳನ್ನು ಹೊಂದಿದ ಶಂಕ್ರೆಪ್ಪ ಸಾಹುಕಾರ ನಿದ್ದರೂ ಹೆಂಡತಿಯನ್ನು ಕಳೆದುಕೊಂಡ ವಿಧುರ. ಮರುಮದುವೆಯಾಗದೇ ಮಗನಿಗೆ ವರದಕ್ಷಿಣೆ ತೆಗೆದುಕೊಂಡು ಮದುವೆ ಮಾಡಿ ಸೊಸೆಯನ್ನು ಮನೆ ತುಂಬಿಸಿಕೊಳ್ಳಬೇಕೆಂಬ ಮನದಾಸೆಯನ್ನು ಹೊಂದಿದ್ದನು. ಶಂಕ್ರೆಪ್ಪನ ಮಗ ಗೋಪಿ ಎಸ್.ಎಸ್.ಎಲ್.ಸಿ. ಮೂರು ಸಾರಿ ಡುಮಕಿ ಹೊಡೆದು ಅರ್ಧಕ್ಕೆ ವಿದ್ಯಾಭ್ಯಾಸವನ್ನು ನಿಲ್ಲಿಸಿ ಹೊಲ, ತೋಟಗಳನ್ನು ನೋಡಿಕೊಂಡು ಹೋಗುತ್ತಿದ್ದನು. ವರದಕ್ಷಿಣೆಯ ಆಸೆಗಾಗಿ ಶಂಕ್ರೆಪ್ಪ ಸಾಹುಕಾರರು ಬೇಗನೆ ಮದುವೆಯನ್ನು ಮಾಡದಾದಾಗ ಮದುವೆಯ ಹುಚ್ಚು ಹಿಡಿಸಿಕೊಂಡು ಹರೆಯದ ಹೆಣ್ಣುಗಳನ್ನು ನೋಡಿ ಮನದಲ್ಲಿ ಮಮ್ಮಲ ಮರಗುತ್ತಾ ತಂದೆಯ ವರದಕ್ಷಿಣೆ ಆಸೆಗೆ ರೋಸಿಹೋದ ತರುಣ ಗೋಪಿ.

ಶ್ರೀನಿವಾಸ-ಸುಶೀಲಾರ ಏಕಮಾತ್ರ ಪುತ್ರಿ ಗಿರಿಜಾ. ಶ್ರೀನಿವಾಸ ಮಧ್ಯವಯಸ್ಸಿನಲ್ಲಿದ್ದಾಗ ಕಾರ್ ಅಪಘಾತದಲ್ಲಿ ಕಣ್ಣು ಕಳೆದುಕೊಂಡ ಕುರುಡ. ಅವನ ಹೆಂಡತಿ ಸುಶೀಲಾ ರೋಗದಿಂದ ಬಳಲುತ್ತಿದ್ದಳು. ತಾನು ಸಾಯುವುದರೊಳಗಾಗಿ ಮಗಳು ಗಿರಿಜಾಳ ಮದುವೆ ಮಾಡಬೇಕೆಂದು ನಿರ್ಧರಿಸುವಳು. ತನ್ನ ತಮ್ಮ ಪರದೇಶಿಯಾದ ಶೇಖರನ ಜೊತೆ ಬಾಲ್ಯ ವಿವಾಹವನ್ನು ಮಾಡಿ ಕಣ್ಮುಚ್ಚುವಳು. ಶೇಖರ ಮಾವ ಶ್ರೀನಿವಾಸರ ಸಹಾಯದಿಂದ ಇಂಜಿನೀಯರಿಂಗ್ ಪದವಿ ಪಡೆದು ನೌಕರಿಗೆ ಹತ್ತುವನು. ವಿದ್ಯಾಭ್ಯಾಸದ ಸಲುವಾಗಿ ಬೆಂಗಳೂರು, ತುಮಕೂರು, ಹೊಸಪೇಟೆ ನಗರಗಳ ಸಂಪರ್ಕಕ್ಕೆ ಬರುವನು. ಯಾವಾಗ ನಗರ ಜೀವನದ ವೇಶಭೂಷಣ ಹಾಗೂ ಫ್ಯಾಶನ್‌ಗಳಿಗೆ ಮರುಳಾಗುವನೋ ಏನೂ ಕಲಿಯದ ಹಳ್ಳಿಯ ಗೌರಮ್ಮನಂತಿದ್ದ ಬಾಲ್ಯದಲ್ಲಿ ಮದುವೆಯಾದ ಗಿರಿಜಾಳನ್ನು ಶೇಖರ ನಿರಾಕರಿಸಲು ಮುಂದಾಗುವನು. ಇತ್ತ ಶೇಖರನ ಗೆಳೆಯ ಶಿವರಾಜ ಬಿ.ಎ. ಪದವಿ ಮಾಡಿ ಇದ್ದೂರಿನ ಹೈಸ್ಕೂಲಿನಲ್ಲಿ ಆದರ್ಶ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತ ಜನರ ವಿಶ್ವಾಸವನ್ನು ಗಳಿಸಿದ್ದ. ನಾಗೇಗೌಡರ ಶುಗರ್ ಫ್ಯಾಕ್ಟರಿಯಲ್ಲಿ ಸೇವೆ ಸಲ್ಲಿಸಲು ಊರಿಗೆ ಬಂದಾಗ ಹೆಂಡತಿ ಗಿರಿಜಾಳ ಬಗ್ಗೆ ಶಿವರಾಜ ಉಪದೇಶದ ಮಾತುಗಳನ್ನು ಶೇಖರನಿಗೆ ಹೇಳಿದನು. ಶಿವರಾಜನ ಮಾತುಗಳನ್ನು ಲಕ್ಷ್ಯಕ್ಕೆ ಹಾಕಿಕೊಳ್ಳದೆ ಶೇಖರ ಗಿರಿಜಾಳನ್ನು ಕರೆದುಕೊಂಡು ಹೋಗಲು ನಿರಾಕರಿಸಿದ.

ಕೊನೆಗೂ ಶಂಕ್ರೆಪ್ಪ ಸಾಹುಕಾರ ಬಿಜವಾಡದ ಶ್ರೀಮಂತ ವ್ಯಾಪಾರಿಯ ಮಗಳನ್ನು ೩೦ ಸಾವಿರ ವರದಕ್ಷಿಣೆಯ ಮಾತುಕತೆಯೊಂದಿಗೆ ಮಗ ಗೋಪಿಯ ಮದುವೆ ಮಾಡಲು ಲಗ್ನಪತ್ರಿಕೆಯನ್ನು ಪ್ರಿಂಟ್ ಮಾಡಿ ಮದುವೆಯ ತಯಾರಿ ನಡೆಸುವನು. ಮುಂದೆ ಬಿಜವಾಡದ ವ್ಯಾಪಾರಿ ವರದಕ್ಷಿಣೆಯನ್ನು ಕೊಡಲಿಕ್ಕೆ ಸಾಧ್ಯವಾಗದ್ದರಿಂದ ಮದುವೆ ಸಂಬಂಧ ಮುರಿದುಕೊಳ್ಳುವನು. ಇದರಿಂದ ಶಂಕ್ರೆಪ್ಪ ಸಾಹುಕಾರರಿಗೆ ಊರಲ್ಲಿ ಅಪಮಾನವಾಗುವುದು. ಅದೇ ಬಿಜವಾಡದ ಊರಿನ ಬೇರೆ ಕನ್ಯೆಯನ್ನು ತೆಗೆದುಕೊಂಡು

ಗೋಪಿಯ ಮದುವೆ ಮಾಡಲು ಪ್ರಯತ್ನಿಸಿ ವಿಫಲನಾಗುವನು. ಕೊನೆಗೆ ಶಂಕ್ರೆಪ್ಪ ಸಾಹುಕಾರನ ಮನೆಯ ಅಡಿಗೆ ಆಳು ಗಂಗವ್ವನ ಮಗಳು ಗೌರಿಯ ಮೇಲೆ ಮನಸ್ಸು ಮಾಡಿ ಗೌರಿಯನ್ನು ಮದುವೆಯಾಗಲು ಗೋಪಿ ನಿರ್ಧರಿಸುವನು. ಗೌರಿ ನಮ್ಮ ಅಂತಸ್ತಿಗೆ ತಕ್ಕವಳಲ್ಲ ಎಂಬ ವಿಚಾರವನ್ನು ಶಂಕ್ರೆಪ್ಪ ಸಾಹುಕಾರ ಮಗ ಗೋಪಿಗೆ ಕಿವಿಮಾತುಗಳನ್ನು ಹೇಳುವನು. ತಂದೆಗೆ ವರದಕ್ಷಿಣೆಯ ಹುಚ್ಚು ಬಿಡದು ನನಗೆ ಮದುವೆಯ ಹುಚ್ಚು ಬಿಡದು ಎಂದು ತನ್ನ ಅಳಲನ್ನು ಶಿವರಾಜನ ಮುಂದೆ ಗೋಪಿ ತೋಡಿಕೊಳ್ಳುವನು. ಶಿವರಾಜ ಶಂಕ್ರೆಪ್ಪ ಸಾಹುಕಾರರ ವರದಕ್ಷಿಣೆಯ ಹುಚ್ಚು ಬಿಡಿಸಲು ಒಂದು ಉಪಾಯವನ್ನು ಹೇಳುವನು. ಶಿವರಾಜನ ಸಲಹೆಯಂತೆ ತನ್ನ ಮನೆಯಲ್ಲಿದ್ದ ಸಂಪತ್ತನ್ನು ದರೋಡೆ ಮಾಡಿದ ಹಾಗೆ ಮಾಡಿ ಆ ಸಂಪತ್ತನ್ನು ತಂದು ಗೌರಿಯ ಮನೆಯಲ್ಲಿ ಇಡುವನು. ಮನೆ ದರೋಡೆಯಿಂದ ಸಂಪತ್ತು ಕಳೆದುಕೊಂಡು ಕಂಗಾಲಾದ ಶಂಕ್ರೆಪ್ಪ ದ್ರವ್ಯ ಸಂಗ್ರಹದ ಚಿಂತೆಯಲ್ಲಿದ್ದಾಗ ಒಮ್ಮಿಂದೊಮ್ಮೆಲೆ ಸಂಪತ್ತಿನ ಸಮೇತ ಗೌರಿ-ಗೋಪಿ ಪ್ರತ್ಯಕ್ಷರಾಗುವರು. ಏನೇನೋ ನೆಪಗಳನ್ನು ಹೇಳುತ್ತಾ ನಮ್ಮ ಹಳೆಮನೆಯಲ್ಲಿ ನನಗೆ ದೊರೆತ ಸಂಪತ್ತನ್ನು ಮದುವೆಯಾಗುವ ಗಂಡಿಗೆ ಕೊಡುತ್ತೇನೆಂದು ಹೇಳುವಳು. ಸಂಪತ್ತನ್ನು ಕಳೆದುಕೊಂಡು ಚಿಂತಾಕ್ರಾಂತನದ ಶಂಕ್ರೆಪ್ಪ ಗೌರಿಯನ್ನು ತನ್ನ ಸೊಸೆಯನ್ನಾಗಿ ಮಾಡಿಕೊಳ್ಳಲು ಒಪ್ಪಿ ಅಂದೇ ಗೋಪಿಯ ಮಾತಿನಂತೆ ಮದುವೆ ಮಾಡಿ ಮುಗಿಸುವನು.

ಇತ್ತ ನಾಗೇಗೌಡನ ಮಗಳು ಮಂಜುಳಾ ತನ್ನ ಮನೋಭಿಲಾಷೆಯನ್ನು ಆನಂದನೆಂಬ ಯುವಕನೊಂದಿಗೆ ತೀರಿಸಿಕೊಳ್ಳುತ್ತಾ ಊರಲ್ಲಿ ಹೆಸರು ಕೆಡಿಸಿಕೊಂಡಿದ್ದಳು. ಆನಂದ-ಮಂಜುಳಾರ ತಿರುಗಾಟವನ್ನು ಶೇಖರ ಹಗುರವಾಗಿ ತಿಳಿಯುವನು. ಆಧುನಿಕ ಬದುಕಿನಲ್ಲಿ ಹೆಣ್ಣು ಸ್ವಚ್ಛಂದವಾಗಿ ತಿರುಗುವುದು ತಪ್ಪೇನಲ್ಲ ಎಂಬ ಭಾವನೆಯನ್ನು ಶೇಖರ ತಾಳುವನು. ಒಂದು ಕಡೆ ನಾಗೇಗೌಡರ ಪ್ರೀತಿ, ಗೌರವ ಮತ್ತೊಂದೆಡೆ ಹಳ್ಳಿ ಗುಗ್ಗು ಏನನ್ನೂ ಅರಿಯದ ನಗರ ಜೀವನದ ಗಂಧವರಿಯದ ಅಕ್ಕನ ಮಗಳು ಗಿರಿಜಾ. ಮಂಜುಳಾಳ ಮುಂದೆ ಸಪ್ಪೆ ಎನಿಸುವಳು. ನಾಗೇಗೌಡರ ಆಸೆಯಂತೆ ಶೇಖರ ಮಂಜುಳಾಳನ್ನು ಮದುವೆಯಾಗಲು ನಿರ್ಧರಿಸುವನು.

ಶಂಕರ ನೌಕರಿ ಹತ್ತಿ ಇಷ್ಟು ದಿನವಾದರೂ ಮದುವೆಯಾದ ಮಗಳು ಗಿರಿಜಾಳನ್ನು ಕರೆದುಕೊಂಡು ಹೋಗಿ ಮನೆ ಮಾಡದಿದ್ದುದು ಶ್ರೀನಿವಾಸರಲ್ಲಿ ಚಿಂತೆಯನ್ನು ಹುಟ್ಟಿಸಿತು. ಮಗಳನ್ನು ಕರೆದುಕೊಂಡು ಹೋಗಿ ಮನೆಮಾಡು ಎಂದಾಗಲೆಲ್ಲ ನೆಪಹೇಳುತ್ತ ಶೇಖರ ಮುಂದೂಡುತ್ತಿದ್ದನು. ಕೊನೆಗೆ ಶ್ರೀನಿವಾಸರು ಹಿರಿಯರನ್ನು ಕೂಡಿಸಿ ಹೇಳಿದ್ದು ಆಯಿತು. ಬಾಲ್ಯದ ಗೆಳೆಯ ಶಿವರಾಜನ ಮುಖಾಂತರ ಹೇಳಿಸಿದರೂ ಮನೆ ಮಾಡಿ ಗಿರಿಜಾಳನ್ನು ಕರೆದುಕೊಂಡು ಹೋಗಲು ನಿರಾಕರಿಸುವನು. ಕೋಪಗೊಂಡ ಶ್ರೀನಿವಾಸರು ಶೇಖರನು ನೌಕರಿ ಮಾಡುವ ಫ್ಯಾಕ್ಟರಿಗೆ ಮಗಳ ಸಮೇತ ಹೊರಟರು. ಫ್ಯಾಕ್ಟರಿಯ ಮಾಲಕನಾದ ನಾಗೇಗೌಡರ ಮಗಳ ಹುಟ್ಟುಹಬ್ಬದ ನಿಮಿತ್ಯ ಫ್ಯಾಕ್ಟರಿಗೆ ರಜೆ ಘೋಷಿಸಲಾಗಿದೆ ಎಂಬ ವಿಷಯ

ತಿಳಿಯುವುದು. ಇಂದು ಹೇಗಾದರೂ ಮಾಡಿ ಶೇಖರಿಗೆ ತನ್ನ ಮಗಳನ್ನು ಒಪ್ಪಿಸಿಬಿಡಬೇಕೆಂದು ನಿರ್ಣಯಿಸಿ ನಾಗೇಗೌಡರ ಮನೆಗೆ ಗಿರಿಜೆಯೊಂದಿಗೆ ಕಣ್ಣುಕಾಣದ ಮಾವ ಶ್ರೀನಿವಾಸ ಬರುವರು. ಬಣ್ಣದ ಬದುಕಿಗೆ ಮಾರುಹೋದ ಅಳಿಯ ಶೇಖರ ಶ್ರೀನಿವಾಸರಿಗೆ ಇಲ್ಲಸಲ್ಲದಮಾತುಗಳನ್ನು ಆಡುವನು. ಹಾಗೆಯೇ ಗಿರಿಜಾಳ ಕೊರಳಲ್ಲಿದ್ದ ತಾಳಿಯನ್ನು ಕಿತ್ತುಕೊಳ್ಳುವನು. ಅಸಹಾಯಕರಾದ ಶ್ರೀನಿವಾಸರು ಮಗಳನ್ನು ಮರಳಿ ಊರಿಗೆ ಕರೆದುಕೊಂಡು ಬರುವರು. ಮಾನಸಿಕ ಮಾಡಿಕೊಂಡು ಶ್ರೀನಿವಾಸರು ಊರಲ್ಲಿ ಹಾಸಿಗೆ ಹಿಡಿಯುವರು. ಗಂಡ ಕಿತ್ತುಕೊಂಡ ತಾಳಿಯಿಂದ ಗಿರಿಜಾಳು ಕೂಡ ಮಾನಸಿಕ ಕ್ಷೋಭೆಗೆ ಒಳಗಾಗುವಳು. ಪತಿಯೇ ದೇವರೆಂದು ತಿಳಿದು ಗಿರಿಜಾ ಅರಿಷಿಣ ಕೊಂಬಿನಿಂದ ಮಾಡಿದ ತಾಳಿಯನ್ನು ಕೊರಳಲ್ಲಿ ಕಟ್ಟಿ ಕೊಳ್ಳುವಳು. ಇಂದಿಲ್ಲ ನಾಳೆ ಎಂದಾದರೂ ಗಂಡ ಶೇಖರ ನನ್ನನ್ನು ವರಿಸುವನು ಎಂಬ ಆಶಾಭಾವನೆಯಲ್ಲಿ ಕಾಲದೂಡುವಳು.

ಅತ್ತ ನಾಗೇಗೌಡರು ತಮ್ಮ ಇದ್ದೊಬ್ಬ ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡಲು ನಿರ್ಧರಿಸಿದರು. ಮಗಳು ಮಂಜುಳಾ ಮತ್ತು ಶೇಖರನ ಮದುವೆಯ ಕಾರ್ಡಗಳನ್ನು ಸುಂದರವಾಗಿ ಪ್ರಿಂಟ್ ಮಾಡಿಸಿದರು. ತಮಗೆ ಗೊತ್ತಿದ್ದ ಎಲ್ಲರಿಗೂ ಮದುವೆಯ ಆಮಂತ್ರಣ ಕೊಟ್ಟು, ಅತಿಥಿಗಳನ್ನು ಕರೆಸಿದರು. ಇನ್ನೇನು ವಧು ಬಂದು ಆಸನದಲ್ಲಿ ಕುಳಿತುಕೊಳ್ಳುವುದೊಂದೇ ಬಾಕಿ ಇತ್ತು ಮದುವೆ ಮಂಟಪದ ಆಸನದಲ್ಲಿ ಕುಳಿತುಕೊಳ್ಳಲು ಮಂಜುಳಾ ಬರುತ್ತಿರುವಾಗ ಒಮ್ಮಿಂದೊಮ್ಮೆಲೆ ಕಣ್ಣಿಗೆ ಕತ್ತಲು ಆವರಿಸಿ ಮಂಟಪ ದಲ್ಲಿಯೇ ಮೂರ್ಛೆ ಹೋಗಿ ಬೀಳುವಳು. ಗಾಬರಿಗೊಂಡ ನಾಗೇಗೌಡರು ಹೊರ್ಕ್ರಾಣೆಯ ಮುಖಾಂತರ ಬೇಗನೆ ಡಾಕ್ಟರರನ್ನು ಮಂಟಪಕ್ಕೆ ಕರೆಸಿದರು. ತಪಾಸಣೆ ಮಾಡಿದ ಡಾಕ್ಟರ ಮಾತಿನಿಂದ ಮಂಜುಳಾ ಗರ್ಭವತಿಯಾಗಿರುವುದನ್ನು ತಿಳಿದುಕೊಂಡರು. ವಿಷಯವನ್ನು ನಾಗೇಗೌಡರಿಗೆ ಡಾಕ್ಟರ ಹೇಳುವಾಗ ಅಲ್ಲಿಯೇ ಇದ್ದ ಶೇಖರನೂ ಡಾಕ್ಟರ ಮಾತುಗಳನ್ನು ಕೇಳಿಸಿಕೊಳ್ಳುವನು. ದಿಗ್ಭ್ರಾಂತರಾದ ನಾಗೇಗೌಡರು ಏನೇನೋ ವಿಚಾರಮಾಡಿ ಅಪಮಾನವನ್ನು ಸಹಿಸದೆ ಗುಂಡು ಹೊಡೆದುಕೊಂಡು ಸಾಯುವರು. ಮೂರ್ಛೆಯಿಂದ ಎಚ್ಚೆತ್ತ ಮಂಜುಳಾ ಮದುವೆ ಮಂಟಪದಲ್ಲಿಯ ದೃಶ್ಯ ನೋಡಿ ತಂದೆ, ಶೇಖರಾ ಎಂದು ಚೀರುತ್ತಾ ಹುಚ್ಚಿಯಾಗಿ ಕೆರೆಗೋ, ಬಾವಿಗೋ ಬೀಳಲು ಓಡಿ ಹೋಗುವಳು. ಬಣ್ಣದ ಬದುಕಿನ ವಂಚನೆ, ಮೋಸವನ್ನು ತಿಳಿದ ಶೇಖರ ಕುರುಡು ಮಾವ ಶ್ರೀನಿವಾಸ, ಹೆಂಡತಿ ಗಿರಿಜಾಳನ್ನು ಸೇರಲು ಗೆಳೆಯ ಶಿವರಾಜನನ್ನು ನೆನೆಸುತ್ತಾ ಊರ ದಾರಿ ಹಿಡಿಯುವನು.

ಹಳ್ಳಿ ಗುಗ್ಗು, ಏನೂ ಅರಿಯದ ಮಳ್ಳಿ ಎಂದು ತಿಳಿದುಕೊಂಡ ಗಿರಿಜಾಳೇ ಒಳ್ಳೆಯವಳು ಎಂದು ಶೇಖರನಿಗೆ ಮನವರಿಕೆಯಾಗುವದು. ಮಾವ ಮತ್ತು ಹೆಂಡತಿಗೆ ತಾನು ಕೊಟ್ಟ ತೊಂದರೆಗೆ ಪಶ್ಚಾತ್ತಾಪಪಟ್ಟು ಹೆಂಡತಿ ಗಿರಿಜಾಳನ್ನು ಸೇರುವನು. ಇದಿಷ್ಟು ನಾಟಕದ ಕಥೆ.

ನಾಟಕಕಾರರು ಸಮಕಾಲೀನ ಯುವಜನಾಂಗದ ಫ್ಯಾಶನ್ ಪ್ರಿಯ ಬಣ್ಣದ ಬದುಕಿನ ಆಕರ್ಷಣೆಯ ದುಷ್ಪರಿಣಾಮಗಳನ್ನು ಶೇಖರನ ಪಾತ್ರದ ಮುಖಾಂತರ ವ್ಯಕ್ತಪಡಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಗೋಪಿ ಮತ್ತು ಗೌರಿ ಪಾತ್ರದ ಮುಖಾಂತರ ಆದರ್ಶ ಸಮಾಜದ ನಿರ್ಮಾಣದ ಕಡೆಗೆ ಒತ್ತುಕೊಟ್ಟಿರುವುದನ್ನು ನೋಡುತ್ತೇವೆ. ಒಟ್ಟಾರೆ ಸಮಕಾಲೀನ ಪರಿಸ್ಥಿತಿಯನ್ನು ನಾಟಕಕಾರರು ಚಿತ್ರಿಸಿದ್ದು ಗಮನಾರ್ಹ. ನಮ್ಮ ಕುಟುಂಬಗಳು ಹೇಗೆ ಇರಬೇಕು ಹೇಗೆ ಇದ್ದರೆ ಸಮಾಜದಲ್ಲಿ ನೆಮ್ಮದಿ ಕಾಪಾಡಿಕೊಳ್ಳಲು ಸಾಧ್ಯ ಎಂಬುದನ್ನು ಶೇಖರ-ಗಿರಿಜಾ, ಗೋಪಿ-ಗೌರಿ ಪಾತ್ರಗಳ ಮುಖಾಂತರ ತೋರಿಸಿಕೊಟ್ಟಿದ್ದಾರೆ.

ಆಧುನಿಕ ಶಿಕ್ಷಣದ ಪ್ರಭಾವದಿಂದ ದೇಶದ ಜನತೆಯಲ್ಲಿ ಅನೇಕ ಬದಲಾವಣೆಗಳಾದವು. ಈ ಬದಲಾವಣೆಯ ಗಾಳಿಯಿಂದ ನಗರ ಜೀವನದ ಆಕರ್ಷಣೆ ಹೆಚ್ಚಾಯಿತು. ನಗರ ಜೀವನಕ್ಕೆ ಅಂಟಿಕೊಂಡ ಜನರು ಸ್ವಾರ್ಥಿಗಳಾದರು. ನಗರೀಕರಣದ ಪ್ರಭಾವಕ್ಕೆ ಒಳಗಾಗಿ ಗ್ರಾಮೀಣ ಬದುಕಿನಲ್ಲಿ ಇದ್ದ ಪ್ರೀತಿ, ವಿಶ್ವಾಸ, ನಂಬಿಕೆಗಳು ಕಣ್ಮರೆಯಾಗಲಿಕ್ಕೆ ಹತ್ತಿದವು. ಉನ್ನತ ವ್ಯಾಸಂಗವನ್ನು ಪಡೆದ ವಿದ್ಯಾವಂತರು ಫ್ಯಾಶನ್ ಪ್ರಿಯರಾಗಿ ಹಳ್ಳಿಗಳ ಕಡೆಗೆ ಬೆನ್ನು ಮಾಡಿದರು. ಬಾಲ್ಯವಿವಾಹ, ವರದಕ್ಷಿಣೆಯಂತಹ ಅನಿಷ್ಟ ಪದ್ಧತಿಗಳು ಸಮಾಜವನ್ನು ಅಧೋಗತಿಗೆ ಇಳಿಸಿದ್ದವು. ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ಸ್ತ್ರೀಯರು ಫ್ಯಾಶನ್ ಪ್ರಿಯರಾಗಿ ಸ್ವಚ್ಛಂದ ಮನಸ್ಸಿನವರಾಗಿ ಭಾರತೀಯ ಸ್ತ್ರೀ ಮೌಲ್ಯಗಳನ್ನು ನಾಶಪಡಿಸುವಂತೆ ವರ್ತಿಸುತ್ತಿದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಅವಲೋಕಿಸಿ ಬಿ.ಆರ್. ಅರಿಷಿಣಗೋಡಿಯವರ ಕವಿ ಮನಸ್ಸು ಕಣ್ಣಿದ್ದೂ ಕುರುಡ ಎಂಬ ನಾಟಕವನ್ನು ಬರೆಯಲು ಪ್ರೇರೇಪಿಸಿತು.

ಹುಚ್ಚುಕಲಾಪದ ಫ್ಯಾಶನ್‌ಪ್ರಿಯ ಹೆಣ್ಣಿನ ವಾಸನೆ ಮತ್ತು ವರದಕ್ಷಿಣೆಯ ಆಸೆಗಾಗಿ ಕಣ್ಣಿದ್ದೂ ಕುರುಡರಾಗಿ ಸಮಾಜವನ್ನು ಅಧೋಗತಿಗೆ ಇಳಿಸಿ ಅಂಧರಂತೆ ಬದುಕುವ ಮಾನವರಿಗೆ ಯಾವಾಗ ಬುದ್ಧಿ ಬರುವುದೋ ಎಂಬ ಪ್ರಶ್ನೆಯನ್ನು ನಾಟಕಕಾರರು ಪ್ರೇಕ್ಷಕರ ಮುಂದೆ ಇಡುತ್ತಾರೆ. ಈ ನಾಟಕದಲ್ಲಿ ರಂಗಪ್ರಯೋಗಕ್ಕೆ ಅನುಕೂಲವಾಗುವಂತೆ ಪಾತ್ರಗಳ ಸೃಷ್ಟಿ ಮಾಡಿರುವುದು ತೋರುತ್ತದೆ. ಸಮಾಜದಲ್ಲಿ ಬೇರುಬಿಟ್ಟ ಬಾಲ್ಯವಿವಾಹ, ವರದಕ್ಷಿಣೆಯಂತಹ ಅನಿಷ್ಟ ಪದ್ಧತಿಗಳ ಮೇಲೆ ನಾಟಕಕಾರರು ಕ್ಷಕಿರಣ ಬೀರುವುದನ್ನು ನೋಡಬಹುದು.

ಸೈನಿಕನ ಸಹೋದರಿ

ನಾಗೇಶರಾವ ಮತ್ತು ಲಿಂಗಶೆಟ್ಟಿ ಒಂದು ಊರಿನ ಗಣ್ಯ ವ್ಯಕ್ತಿಗಳು. ನಾಗೇಶರಾವ ಶ್ರೀಮಂತ ಹಾಗೂ ಎಂ.ಎಲ್.ಎ., ಸಹಜವಾಗಿ ನಾಗೇಶರಾವರಲ್ಲಿ ಶ್ರೀಮಂತಿಕೆಯ ಗತ್ತು ಇದೆ. ನಾಗೇಶರಾವರು ಮಗ ವಸಂತನನ್ನು ಇಂಜಿನೀಯರಿಂಗ್ ಓದಿಸಲು ರಾಜಧಾನಿ ಬೆಂಗಳೂರಿಗೆ ಕಳುಹಿಸುತ್ತಾನೆ. ನಾಗೇಶರಾವರ ಒಬ್ಬನೇ ಗಂಡುಮಗನಾಗಿ ಬೆಳೆದ ವಸಂತ ಇಂಜಿನೀಯರಿಂಗ್ ಒಂದೇ ವರ್ಗದಲ್ಲಿ ಆರು ವರ್ಷ ಕುಳಿತರೂ ಪಾಸಾಗುವುದಿಲ್ಲ.

ವ್ಯಾಪಾರಿ ಲಿಂಗಶೆಟ್ಟಿ ಜಿಪುಣ ಹಾಗೂ ವಿಷಯಲಂಪಟ ನಾಗೇಶರಾವರ ಗೆಳೆಯ. ನಾಗೇಶರಾವರ ಸಂಪತ್ತಿನ ಮೇಲೆ ಕಣ್ಣಿಟ್ಟ ಲಿಂಗಶೆಟ್ಟಿ ತನ್ನ ಮಗಳು ಪದ್ಮಾಳನ್ನು ನಾಗೇಶರಾವರ ಮಗ ವಸಂತನಿಗೆ ಕೊಟ್ಟು ರಕ್ತಸಂಬಂಧ ಬೆಳೆಸಬೇಕೆಂದು ಹೊಂಚು ಹಾಕಿರುವನು. ಲಿಂಗಶೆಟ್ಟಿ ಮತ್ತು ನಾಗೇಶರಾವ್ ಇಬ್ಬರೂ ಕೂಡಿ ಗ್ರಾಮದ ಅಭಿವೃದ್ಧಿಯ ಹೆಸರಿನಲ್ಲಿ ಜನರಿಂದ ಹಣ ಎತ್ತಿ, ಎತ್ತಿದ ಹಣವನ್ನು ಗ್ರಾಮದ ಅಭಿವೃದ್ಧಿಗೆ ಬಳಸದೆ ತಮ್ಮ ಜೇಬಿಗೆ ಇಳಿಸುತ್ತಿದ್ದರು. ತಮ್ಮ ಪ್ರಭಾವವನ್ನು ಬಳಸಿ ಕಡು ಬಡವರಿಂದಲೂ ಹಣ ಎತ್ತುತ್ತಿದ್ದರು. ಬಡವ ನಿವೃತ್ತ ರಾಮಣ್ಣ ಮಾಸ್ತರರಿಂದಲೂ ಒತ್ತಾಯದಿಂದ ಹಣ ಎತ್ತುವರು. ಬಡ ನಿವೃತ್ತ ಮಾಸ್ತರ ರಾಮಣ್ಣನವರ ಮಗ ಸುಭಾಸ ಸಿವ್ಹಿಲ್ ಡಿಪ್ಲೋಮಾ ಮುಗಿಸಿ ಪಿ.ಡಬ್ಲ್ಯು.ಡಿ.ಯಲ್ಲಿ ಜ್ಯೂನಿಯರ್ ಇಂಜಿನೀಯರನಾಗಿ ನೌಕರಿ ಪಡೆದಿದ್ದನು. ರಾಮಣ್ಣ ಮಾಸ್ತರರ ಮಗಳು ಸಾವಿತ್ರಿ ಗುಣವತಿ, ಅಪ್ರತಿಮ ಚೆಲುವೆ. ಇವಳೊಂದಿಗೆ ನಾಗೇಶರಾವರ ಮಗ ವಸಂತನ ಸಖ್ಯ. ಬೆಂಗಳೂರಿನಿಂದ ರಜೆ ಕಳೆಯಲು ಬಂದ ವಸಂತ ಹಾಗೂ ಸಾವಿತ್ರಿಯರಲ್ಲಿ ಪ್ರೇಮ ಅಂಕುರಿಸುವುದು. ಅತ್ತ ಲಿಂಗಶೆಟ್ಟಿಯ ಮಗಳು ಪದ್ಮಾ ಹಾಗೂ ರಾಮಣ್ಣ ಮಾಸ್ತರರ ಮಗ ಸುಭಾಸರಲ್ಲಿ ಪ್ರೇಮ ಬೆಳೆದಿತ್ತು. ಸಮಾಜಸೇವೆ, ದೇಶಪ್ರೇಮ, ಶೋಷಿತರ ಧ್ವನಿಯಾಗಿ ಸುಭಾಸ ರೂಪುಗೊಂಡದ್ದು ಸುಭಾಸನಲ್ಲಿ ಪದ್ಮಾಳಿಗೆ ಪ್ರೇಮ ಬೆಳೆಯಲು ಪ್ರೇರಣೆಯಾಗಿತ್ತು. ಹೀಗಿರುವಾಗ ಭಾರತ ಮತ್ತು ಚೀನಾ ಯುದ್ಧ ಪ್ರಾರಂಭವಾಯಿತು. ದೇಶಪ್ರೇಮವನ್ನು ಮೈಗೂಡಿಸಿಕೊಂಡ ಸುಭಾಸ ಮನೆಬಿಟ್ಟು ಬೆಳಗಾವಿಗೆ ಬಂದು ಸೈನ್ಯದಲ್ಲಿ ಭರ್ತಿಯಾಗಿ ಸೇನೆ ಸೇರುತ್ತಾನೆ. ತಂದೆ ರಾಮಣ್ಣ ಮಾಸ್ತರರು ಮಗ ಸೇನೆ ಸೇರಿದ್ದನ್ನು ತಿಳಿದು ದುಃಖಿಸದೆ ಆನಂದಪಡುತ್ತಾರೆ. ಸುಭಾಸ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವಾಗ ರಾಮಣ್ಣ ಮಾಸ್ತರರ ಮನೆಯಲ್ಲಿ ಅವಘಡಗಳು ಸಂಭವಿಸುತ್ತವೆ. ಒಂದು ದಿನ ಸ್ವತಃ ನಾಗೇಶರಾವರು ಸಾವಿತ್ರಿ ಮತ್ತು ಮಗ ವಸಂತರು ಪ್ರೇಮ ಸಲ್ಲಾಪದಲ್ಲಿ ತೊಡಗಿದ್ದನ್ನು ಕಣ್ಣಾರೆ ಕಂಡು "ಮುಗಿಯಿತೆ ನಿನ್ನ ಕಾಮಶೃಂಗಾರದ, ಸ್ನೇಹ ಸಲಿಗೆಯ ವೈಖರಿ, ಅಭ್ಯಾಸ ಮಾಡುವ ನೆಪ ಹೇಳಿ ಊರಲ್ಲಿ ಉಳಿದುಕೊಂಡು ಗೂಳಿಯಂತೆ ಸಿಕ್ಕ ಸಿಕ್ಕವರ ಹೆಣ್ಣಿನೊಂದಿಗೆ ತಿರುಗುತ್ತಿರುವೆಯಲ್ಲ ವಸಂತ, ನಿನಗಾಗಿ ಕಾಯ್ದಿರುವ ಸಾವಿರಾರು ಶ್ರೀಮಂತರ ಸಂಬಂಧವನ್ನು ಬಿಟ್ಟು, ಒಂದು ತಿಪ್ಪೆಯ ತೊಪ್ಪಲಕ್ಕೆ ಅಪ್ಪಿಕೊಳ್ಳುವ ಆಸೆ ಮಾಡಿದೆಯಾ ಅವಿವೇಕಿ" ಎಂದು ನಾಗೇಶರಾವರು ಬೈಯ್ಯುವರು. "ನಾನೀಗ ಸಾವಿತ್ರಿಗೆ ಮಾತು ಕೊಟ್ಟಿದ್ದೇನಪ್ಪ" ಎಂದು ವಸಂತನು ತನ್ನ ಮನದ ನಿರ್ಧಾರವನ್ನು ಹೇಳುವನು. "ತನ್ನ ಬಡತನ ತೀರುವುದೆಂಬ ಹೇಸಿ ವಿಚಾರದಿಂದ ನಿನ್ನನ್ನು ಪ್ರೀತಿಸುವ ನಾಟಕವಾಡುತ್ತಿದ್ದಾಳೆ, ಬೆಳ್ಳಗಿರುವುದೆಲ್ಲ ಹಾಲೆಂದು ತಿಳಿದು ಕಳ್ಳಿಯ ಹಾಲನ್ನು ಕುಡಿದು ಕಳ್ಳು ಸುಟ್ಟುಕೊಳ್ಳಬೇಡ ವಸಂತ" ಎನ್ನುವರು. "ಸಮಾಜದಲ್ಲಿ ನಮಗಿದ್ದ ಸ್ಥಾನ-ಮಾನಗಳ ಮರ್ಯಾದೆಗೆ ಮಣ್ಣೆರಚಿ ಒಂದು ಭಿಕಾರಿ ಹೆಣ್ಣಿನ ದಾಸನಾಗಬೇಕೆಂದಿರುವೆಯಾ, ಸಾವಿತ್ರಿಯನ್ನು ಹೆಂಡತಿಯೆಂದು ಸ್ವೀಕರಿಸಿ ಮನೆಗೆ ಬಂದರೆ ನಿನ್ನ ಕಣ್ಣಿಗೆ ಕಾದ ಸಲಾಕೆಯಿಂದ ಚುಚ್ಚಿಸಿಕೊಂಡು

ಕುರುಡನಾಗಬೇಕಾದೀತು" ಎಂದು ವಸಂತನನ್ನು ಹೆದರಿಸಿ, ಬೆದರಿಸಿ ಸಾವಿತ್ರಿಯನ್ನು ಮರೆತುಬಿಡುವಂತೆ ಮಾಡುವರು.

ವಂತಿಗೆ ಕೇಳುವ ನೆಪಮಾಡಿ ನಾಗೇಶರಾವ ಮತ್ತು ಲಿಂಗಶೆಟ್ಟಿಯವರು ರಾಮಣ್ಣ ಮಾಸ್ತರರ ಮನೆಗೆ ಬರುವರು. ರಾಮಣ್ಣನವರ ಆರೋಗ್ಯದ ಬಗ್ಗೆ ನಾಗೇಶರಾವ ಮತ್ತು ಲಿಂಗಶೆಟ್ಟರು ಔಪಚಾರಿಕವಾಗಿ ಮಾತನಾಡುವರು. ಮನೆಗೆ ಬಂದ ಅತಿಥಿಗಳಿಗೆ ರಾಮಣ್ಣ ಮಾಸ್ತರರು ಮಗಳು ಸಾವಿತ್ರಿಯಿಂದ ಚಹಾ ಮಾಡಿಸಿಕೊಡುವರು. ನಾಗೇಶರಾವರು ಸಾವಿತ್ರಿಯ ಮದುವೆಯ ವಿಷಯವನ್ನು ಪ್ರಸ್ತಾಪಿಸುವರು. "ಬೆಳೆದು ನಿಂತ ನಿಮ್ಮ ಮಗಳು ಸಾವಿತ್ರಿಗೆ ಬೇಗನೆ ಒಂದು ವರ ನೋಡಿ ಮದುವೆ ಮಾಡಿಬಿಡಿ ಮಾಸ್ತರರೆ" ಎಂದು ನಾಗೇಶರಾವರು ಹೇಳುವರು. "ಬೆಳೆದು ದೊಡ್ಡವಳಾದ ಮಗಳನ್ನು ಹಾಗೆಯೇ ಮನೆಯಲ್ಲಿ ಇಟ್ಟುಕೊಂಡರೆ ಇಲ್ಲದ ಅಪವಾದಗಳು ಬರುತ್ತವೆ" ಎಂದು ಲಿಂಗಶೆಟ್ಟರೂ ನಾಗೇಶರಾವರ ಮಾತಿಗೆ ಧ್ವನಿಗೂಡಿಸುವರು. ಮಧ್ಯೆ ಪ್ರವೇಶಿಸಿದ ಸಂಜೀವ "ಬಡವರ ಬಗ್ಗೆ ದಯಾಳುಗಳಾದ ನೀವೇ ಏಕೆ ಸಾವಿತ್ರಿಯನ್ನು ನಿಮ್ಮ ಮಗ ವಸಂತನಿಗೆ ತೆಗೆದುಕೊಳ್ಳಬಾರದು? ಒಂದು ಬಡ ಕುಟುಂಬವನ್ನು ಉದ್ಧಾರ ಮಾಡಿದಂತೆ ಆಗುತ್ತದೆ. ಅಲ್ಲದೆ ಓರ್ವ ಸೈನಿಕನ ಸಹೋದರಿಗೆ ಮಾಂಗಲ್ಯ ಭಾಗ್ಯ ನೆರವೇರಿಸಿದಂತೆ ಆಗುತ್ತದೆ" ಎನ್ನುವನು. ಸಂಜೀವನ ಮಾತಿನಿಂದ ಒಮ್ಮಿಂದೊಮ್ಮೆಲೆ ಸಿಟ್ಟಿಗೆದ್ದ ನಾಗೇಶರಾವರು ಇಂತಹ ಬಡಗೂಬೆಗಳ ಜೊತೆ ಬೀಗತನ ಮಾಡಿ ಮುಖಕ್ಕೆ ಮಸಿಹಚ್ಚಿಕೊಳ್ಳಬೇಕಾದೀತು ಎಂದು ಹೇಳುತ್ತಾ ಲಿಂಗಶೆಟ್ಟರನ್ನು ಕರೆದುಕೊಂಡು ಹೊರ ನಡೆದುಬಿಡುವರು.

ಅನ್ಯರ ಕಣ್ಣಲ್ಲಿ ಕೀಳು ಜಾತಿಯವಳಾದ ಚಂದ್ರಿಯನ್ನು ಕುರುಬ ಸಂಜೀವ ಪ್ರೀತಿಸುತ್ತಿದ್ದುದೇನೊ ನಿಜ. ಆದರೆ ಚಂದ್ರಿಯೂ ಸಂಜೀವನನ್ನು ಅಷ್ಟೇ ಹಚ್ಚಿಕೊಂಡವಳಾಗಿದ್ದಳು. ರೂಪವತಿಯಾದ ಚಂದ್ರಿಯ ಮೇಲೆ ಕಚ್ಚೆಹರಕ ಲಿಂಗಶೆಟ್ಟರು ಕಣ್ಣು ಇಟ್ಟಿದ್ದರು. ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಸುಭಾಸನ ತಂಗಿಯ ಜವಾಬ್ದಾರಿಯನ್ನು ಹೊತ್ತ ಸಂಜೀವ ವಸಂತನನ್ನು ಹುಡುಕಲು ಬೆಂಗಳೂರಿಗೆ ಹೋಗಲು ಸಿದ್ಧನಾಗುವನು. ಬೆಂಗಳೂರಿನಲ್ಲಿ ಸಾವಿತ್ರಿಯ ಬಸುರಿಗೆ ಕಾರಣನಾದ ವಸಂತನನ್ನು ಹುಡುಕಿ ಅವನ ಜೊತೆ ಮದುವೆ ಮಾಡಬೇಕೆಂದು ನಿರ್ಧರಿಸಿ ಬೆಂಗಳೂರಿಗೆ ಹೋಗಲು ಹಣದ ಸಿದ್ಧತೆಯಲ್ಲಿದ್ದ ಸಂಜೀವನ ತಲೆಗೆ ಒಂದು ಹೊಸ ವಿಚಾರ ಹೊಳೆಯುವುದು. ಚಂದ್ರಿಯ ಸಹಾಯದಿಂದ ಲಿಂಗಶೆಟ್ಟಿಯಿಂದ ಹಣ ಇಸಿದುಕೊಳ್ಳುವ ಉಪಾಯವನ್ನು ಮಾಡುವನು. "ಚಂದ್ರಿ ನಿನ್ನ ಮ್ಯಾಗ ಹ್ಯಾಂಗೂ ಆ ಲಿಂಗಶೆಟ್ಟಿ ಕಣ್ಣ ಐತಿ, ಸ್ವಲ್ಪ ಅವನ ಮುಂದೆ ಒನಪು, ವೈಯ್ಯಾರ ತೋರಿಸಿ ಮಳ್ಳು ಮಾಡಿ ಬಿಡು. ಹೆಣ್ಣಂದ್ರ ಮೊದಲ ಬಾಯಿ ಬಿಡತಾನ. ನಮಗ ಬೆಂಗಳೂರಿಗೆ ಹೋಗಾಕ ಇದು ಒಂದು ಒಳ್ಳೆ ಚಾನ್ಸು" ಎಂದು ಹೇಳಿ ಚಂದ್ರಿಯನ್ನು ಲಿಂಗಶೆಟ್ಟರ ಕಡೆಗೆ ಕಳಿಸಿ ಮರೆಯಲ್ಲಿ ನಿಲ್ಲುವನು. ಹೆಂಗಸರ ವಿಷಯದಲ್ಲಿ ಸಡಿಲು ಇದ್ದ ಲಿಂಗಶೆಟ್ಟರು ಚಂದ್ರಿಯ ಒನಪು, ವೈಯ್ಯಾರಕ್ಕೆ ಮಾರುಹೋಗಿ ಕೈಗಡ ಬೇಡಿದ ಒಂದು

ಸಾವಿರ ರೂಪಾಯಿಗಳನ್ನು ಕೊಡುವರು. ಚಂದ್ರಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುವ ಹೊತ್ತಿಗೆ ಸರಿಯಾಗಿ ಬಂದು ಲಿಂಗಶೆಟ್ಟರನ್ನು ಸಂಜೀವ ಒಂದು ಸಾವಿರ ರೂಪಾಯಿಗಳನ್ನು ಕೇಳುವನು. ಲಿಂಗಶೆಟ್ಟರು ಸಾವಿರ ರೂಪಾಯಿಗಳನ್ನು ಕೊಡಲು ನಿರಾಕರಿಸಿದಾಗ ಚಂದ್ರಿಯೇ ಮುಂದೆ ಬಂದು ಲಿಂಗಶೆಟ್ಟರಿಗೆ ಹೇಳುವಳು. ಚಂದ್ರಿಯ ಮಾತಿಗೆ ಮನಸೋತ ಲಿಂಗಶೆಟ್ಟರು ಸಂಜೀವನಿಗೂ ಒಂದು ಸಾವಿರ ರೂಪಾಯಿಗಳನ್ನು ಕೊಡುವನು. ಚಂದ್ರಿಗೆ ನಾಳೆ ಮನೆಕಡೆಗೆ ಬಾ ಎಂದು ಹೇಳಿ ಹೋಗುವನು. ಲಿಂಗಶೆಟ್ಟರು ಹೋದ ನಂತರ ಚಂದ್ರಿ-ಸಂಜೀವ ತಮ್ಮ ಉಪಾಯಕ್ಕೆ ಮಾರುಹೋಗಿ ಹಣಕೊಟ್ಟ ಶೆಟ್ಟಿಯ ಮೂರ್ಖತನವನ್ನು ಕಂಡು ನಗುವರು. ಸೈನ್ಯದಲ್ಲಿ ಸೇರಿದ ಸುಭಾಸ ಲಿಂಗಶೆಟ್ಟರ ಮಗಳನ್ನು ಪ್ರೀತಿಸುತ್ತಿದ್ದನು. ಲಿಂಗಶೆಟ್ಟರ ಮಗಳು ಪದ್ಮಾ ಕೂಡ ಸುಭಾಸನನ್ನು ಪ್ರೀತಿಸುತ್ತಿದ್ದಳು. ಸೈನ್ಯಕ್ಕೆ ಸೇರಿದ ಬಹಳ ದಿನಗಳ ನಂತರ ಪದ್ಮಾಳ ನೆನಪಾಗಿ ಸುಭಾಸ ಪದ್ಮಾಳಿಗೆ ಸೈನ್ಯದಲ್ಲಿಯ ಅನುಭವಗಳನ್ನು ಹಂಚಿಕೊಳ್ಳಲು ಪತ್ರ ಬರೆಯುತ್ತಾನೆ. "ನನ್ನ ಜೊತೆ ಸೈನ್ಯಕ್ಕೆ ಸೇರಿದವರಿಗೆ ಬೆಳಗಾವಿಯಿಂದ ಸೈನ್ಯದ ಮಧ್ಯದಲ್ಲಿ ಯುದ್ಧದ ಕೌಶಲ್ಯಗಳನ್ನು ತಿಳಿದುಕೊಳ್ಳುವ ತರಬೇತಿ ಕೊಡುತ್ತಿದ್ದಾರೆ. ಮೇಲಿಂದ ಮೇಲೆ ನಮ್ಮ ಕ್ಯಾಂಪು ಬದಲಾವಣೆಯಾಗುತ್ತಿರುವುದರಿಂದ ನಿಶ್ಚಿತ ಪತ್ತಾವನ್ನು ನಿನಗೆ ತಿಳಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ದಳದಲ್ಲಿ ನಾನೇ ಗನ್‌ಮನ್‌ನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಮೊನ್ನೆ ನಮ್ಮ ಟ್ರೇನಿಂಗ ಶಿಬಿರದ ಸಮೀಪ ವೈರಿದಳದ ಒಂದು ವಿಮಾನ ಗುಂಡಿನ ದಾಳಿಯನ್ನು ಮಾಡಿತು. ಆ ವೈರಿದಳದ ವಿಮಾನವನ್ನು ಪತ್ತೆಹಚ್ಚುವದರಲ್ಲಿ ಅಕಸ್ಮಾತ್ ನನ್ನ ಎಡಭುಜಕ್ಕೆ ಗುಂಡು ತಾಗಿ ಸಧ್ಯ ಮಿಲಿಟರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಅಷ್ಟೇನೂ ಭಯಪಡಬೇಕಾಗಿಲ್ಲ. ಒಂದು ವಾರದಲ್ಲಿ ಚೇತರಿಸಿಕೊಳ್ಳುತ್ತೇನೆ. ನನ್ನ ಸಾಹಸಕ್ಕೆ ಮೆಚ್ಚಿದ ನಮ್ಮ ಕಂಪನಿಯ ಕ್ಯಾಪ್ಟನ್ ನನ್ನನ್ನು ಒಳ್ಳೆಯ ಆದರದಿಂದ ಕಾಣುತ್ತಿದ್ದಾರೆ. ನನ್ನ ಮೇಲಿರಿಸಿದ ನಿನ್ನ ಪ್ರೇಮಕ್ಕೆ ಅವಕಾಶ ಕೊಡದೇ ನಾನು ಒಬ್ಬನೇ ದೂರಾಗಿಬಂದು ಸೈನ್ಯಕ್ಕೆ ಸೇರಿದ್ದು ನಿನಗೆ ಎಲ್ಲಿಲ್ಲದ ನೋವಾಗಿರಬೇಕಲ್ಲವೇ ಪದ್ಮಾ" ಎಂದು ಪತ್ರದ ಮುಖಾಂತರ ತನ್ನ ಸೈನ್ಯದ ಅನುಭವಗಳನ್ನು ಪ್ರೇಮಿಯಾದ ಪದ್ಮಾಳಿಗೆ ತಿಳಿಸುತ್ತಾನೆ.

ಇತ್ತ ಪದ್ಮಾ ಸುಭಾಸನ ಪತ್ರವನ್ನೋದಿ ಆನಂದದಿಂದ ಹಾಡುತ್ತಾ ಕುಣಿದಾಡುವಳು. ಮಗಳು ಪದ್ಮಾ ಸುಭಾಸನ ಪ್ರೀತಿಯನ್ನು ತಿಳಿದುಕೊಂಡ ಲಿಂಗಶೆಟ್ಟರು ಬೇಗನೇ ನಾಗೇಶರಾವರ ಮಗ ವಸಂತನ ಜೊತೆ ಮದುವೆ ಮಾಡಲು ನಿರ್ಧರಿಸುವರು. ವಸಂತನನ್ನೇ ಮದುವೆಯಾಗಬೇಕೆಂದು ಲಿಂಗಶೆಟ್ಟರು ಪದ್ಮಾಳ ಮನಸ್ಸು ಬದಲಿಸಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಈಗಾಗಲೇ ಸಾವಿತ್ರಿಯ ಬಾಳನ್ನು ಹಾಳು ಮಾಡಿದ ಆ ನೀತಿಬಾಹಿರ ವಸಂತನನ್ನು ನಾನೆಂದೂ ಮದುವೆಯಾಗುವುದಿಲ್ಲವೆಂದು ತನ್ನ ಅಭಿಪ್ರಾಯವನ್ನು ಪದ್ಮಾ ತಂದೆಗೆ ಸ್ಪಷ್ಟಪಡಿಸುತ್ತಾಳೆ. ಪದ್ಮಾಳ ಅಭಿಪ್ರಾಯಕ್ಕೆ ಬೆಲೆ ಕೊಡದ ಲಿಂಗಶೆಟ್ಟರು ನಾಗೇಶರವರ ಮಗ ವಸಂತನ ಜೊತೆಗೆ ಮದುವೆ ಮಾಡಲು ನಿರ್ಧರಿಸುವರು. ವಸಂತ ಹಾಗೂ

ಸಾವಿತ್ರಿಯರ ಪ್ರೇಮದ ವಿಷಯ ಊರಲ್ಲಿ ಎಲ್ಲರಿಗೂ ಗೊತ್ತಾಗುತ್ತದೆ. ಇದನ್ನು ತಿಳಿದ ನಾಗೇಶರಾವ ಮಗ ವಸಂತನನ್ನು ಬೆಂಗಳೂರಿಗೆ ಒತ್ತಾಯಪೂರ್ವಕವಾಗಿ ಕಳುಹಿಸುವನು. ಪ್ರೇಮದ ಆತುರದಲ್ಲಿ ಸಾವಿತ್ರಿ ದಾರಿತಪ್ಪಿ ವಸಂತನಿಂದ ಗರ್ಭವತಿಯಾಗುವಳು. ಮಗಳ ಈ ಅವಘಡದ ಸುದ್ದಿ ತಿಳಿದ ರಾಮಣ್ಣ ಮಾಸ್ತರರು ಆಘಾತಕ್ಕೊಳಗಾಗಿ ಮರಣವನ್ನಪ್ಪುವರು. ಆಗ ಬೀದಿಗೆ ಬಿದ್ದ ಸಾವಿತ್ರಿಯ ಜೀವನಕ್ಕೆ ಕುರುಬರ ಸಂಜೀವ ನೆರವಾಗುತ್ತಾನೆ. ಆಗ ಲಿಂಗಶೆಟ್ಟಿ ಹಾಗೂ ನಾಗೇಶರಾವ ಇಬ್ಬರೂ ಸೇರಿ ಸಾವಿತ್ರಿಯ ಬಸುರಿಗೆ ಸಂಜೀವನೇ ಕಾರಣ ಎಂಬ ಸುದ್ದಿಯನ್ನು ಹಬ್ಬಿಸುತ್ತಾರೆ.

ಸಂಜೀವ ಒಬ್ಬ ಪ್ರಾಮಾಣಿಕ, ಸಭ್ಯ, ಶೋಷಣೆಯ ವಿರುದ್ಧ ಧ್ವನಿ ಎತ್ತುವವ. ತಕ್ಕಮಟ್ಟಿಗೆ ಆಸ್ತಿ ಇದ್ದರೂ ಕಾಯಕ ನಿಷ್ಠೆಯನ್ನು ಮರೆಯದೆ, ಕಾಯಕದಲ್ಲಿ ಮೇಲು ಕೀಳೆಂದು ಬಗೆಯದೆ ಹಮಾಲಿ ಹಾಗೂ ಕುರಿ ಸಾಕಾಣಿಕೆಯನ್ನು ಮಾಡುತ್ತಿದ್ದನು. ತರುಣ ಸಂಜೀವ ವಯೋಮಾನಕ್ಕೆ ತಕ್ಕಂತೆ ಚಂದ್ರಿಯನ್ನು ಪ್ರೀತಿಸುತ್ತಿದ್ದ. ಕೆಳಜಾತಿಯ ಚಂದ್ರಿಯ ತಾಯಿ ಅವಳನ್ನು ದೇವದಾಸಿಯನ್ನಾಗಿ ಬಿಡಬೇಕೆಂದಿದ್ದಾಗ ಆಕೆಯಿಂದ ತಪ್ಪಿಸಿಕೊಂಡಿದ್ದಳು. ಚಂದ್ರಿಯ ಲಾವಣ್ಯಕ್ಕೆ ಮಾರುಹೋದ ವಿಷಯಲಂಪಟನಾದ ಲಿಂಗಶೆಟ್ಟಿಯ ಕಣ್ಣು ಬಿದ್ದಿರುತ್ತದೆ. ಈ ಲಿಂಗಶೆಟ್ಟಿಯ ದೌರ್ಬಲ್ಯವನ್ನು ಚಂದ್ರಿ-ಸಂಜೀವ ಸರಿಯಾಗಿ ಉಪಯೋಗಿಸಿ ಕೊಂಡು ಲಿಂಗಶೆಟ್ಟಿಯಿಂದ ಹಣವನ್ನು ತೆಗೆದುಕೊಂಡು ವಸಂತನಿಂದ ಗರ್ಭವತಿಯಾದ ಸಾವಿತ್ರಿಯನ್ನು ಬೆಂಗಳೂರಿಗೆ ಕರೆದುಕೊಂಡು ಬರುವರು. ಬೆಂಗಳೂರಿನಲ್ಲಿ ಸಂಜೀವ ವಸಂತನ ಹುಡುಕಾಟದಲ್ಲಿರುವಾಗ ವಸಂತ ಹಾಗೂ ಪದ್ಮಾರ ಮದುವೆಯ ದಿನಾಂಕ ನಿಶ್ಚಯವಾದದ್ದು ಸಂಜೀವನಿಗೆ ತಿಳಿಯುತ್ತದೆ. ಕಷ್ಟಪಟ್ಟು ವಸಂತನ ಪತ್ತೆಹಚ್ಚಿ ಅವನನ್ನು ಸಾವಿತ್ರಿಯ ಹತ್ತಿರ ಕರೆತರುತ್ತಾನೆ. ರಾಗ ಬದಲಾಯಿಸಿದ ವಸಂತ ನಿನ್ನ ಬಸುರಿಗೆ ಸಂಜೀವನೇ ಕಾರಣ ಎಂದು ಹೇಳಿದಾಗ ಸಾವಿತ್ರಿಗೆ ದಿಗ್ಭ್ರಮೆಯಾಗುತ್ತದೆ.

ಸೈನ್ಯದಲ್ಲಿದ್ದ ಸುಭಾಸ ಒಂದು ವಾರದ ಮಟ್ಟಿಗೆ ರಜೆ ತೆಗೆದುಕೊಂಡು ಊರಿಗೆ ಬಂದಿರುತ್ತಾನೆ. ಇನ್ನೇನು ವಸಂತ ಮದುವೆಯ ಮಂಟಪದಲ್ಲಿ ಲಿಂಗಶೆಟ್ಟಿಯ ಮಗಳು ಪದ್ಮಾಳಿಗೆ ತಾಳಿ ಕಟ್ಟಬೇಕು ಎನ್ನುವಾಗ ಸಂಜೀವ, ಸುಭಾಸ, ಸಾವಿತ್ರಿ ಮಗುವಿನೊಂದಿಗೆ ಮದುವೆ ಮಂಟಪಕ್ಕೆ ಬರುತ್ತಾರೆ. ಮದುವೆಯನ್ನು ನಿಲ್ಲಿಸಲು ಕೋರ್ಟಿನಿಂದ ತಡೆಯಾಜ್ಞೆ ತಂದಿರುವರು. ಆ ತಡೆಯಾಜ್ಞೆಯ ಆದೇಶದಲ್ಲಿ ಮಗುವಿನ ಹಾಗೂ ವಸಂತನ ರಕ್ತಪರೀಕ್ಷೆಯಾಗಬೇಕೆಂದಿರುತ್ತದೆ. ವಿಧಿ ಇಲ್ಲದೆ ವಸಂತ ಸಾವಿತ್ರಿಯನ್ನು ಮದುವೆಯಾಗುತ್ತಾನೆ. ಪದ್ಮಾ ಹಾಗೂ ಸುಭಾಸರ ಪ್ರೇಮದ ಬಗ್ಗೆ ನಾಟಕದಲ್ಲಿ ಕೊನೆಯವರೆಗೂ ಏನೂ ತಿಳಿಯುವುದಿಲ್ಲ. ಚಂದ್ರಿ ಸಂಜೀವ ಮದುವೆಯಾಗುತ್ತಾರೆ. ನಾಗೇಶರಾವ ಮತ್ತು ಲಿಂಗಶೆಟ್ಟಿ ತಮ್ಮ ತಪ್ಪು ತಿದ್ದಿಕೊಂಡು ಸಜ್ಜನರಾಗಿ ಪರಿವರ್ತಿತರಾಗುವುದರೊಂದಿಗೆ ನಾಟಕ ಮಂಗಳ ಪಡೆಯುತ್ತದೆ.

ನಾಟಕಕಾರರು ಜಾತಿಯತೆಯನ್ನು ತೊಡಗಿಸಲು ಮೇಲ್ಜಾತಿಯ ಸಂಜೀವ ಹಾಗೂ ಕೆಳಜಾತಿಯ ಚಂದ್ರಿಯರ ಮೂಲಕ ಪ್ರಯತ್ನಿಸುವರು. ಕೆಳವರ್ಗದ ಸಮಾಜದಲ್ಲಿ ಬಳಕೆಯಲ್ಲಿರುವ ದೇವದಾಸಿ

ಪದ್ಧತಿ ನಿಲ್ಲಬೇಕು. ದುಷ್ಟರಿಗೆ ಪಾಠ ಕಲಿಸಿ ಶಿಷ್ಟರಾಗುವಂತೆ ತಿಳುವಳಿಕೆಯನ್ನು ಕೊಟ್ಟು ಅವರಿಗೆ ಬದುಕಲು ಅವಕಾಶವನ್ನು ಕೊಡಬೇಕು ಎನ್ನುವ ಆಶಯವನ್ನು ನಾಟಕಕಾರರು ವ್ಯಕ್ತಪಡಿಸಿದ್ದಾರೆ. ನಾಟಕದಲ್ಲಿ ಬರುವ ರಕ್ತಪರೀಕ್ಷೆ, ನ್ಯಾಯಾಲಯದ ಆದೇಶ ಮುಂತಾದ ವಿಷಯಗಳು ನಾಟಕಕಾರರ ಸಮಕಾಲೀನ ಜ್ಞಾನದ ಅರಿವನ್ನು ತಿಳಿಸುತ್ತವೆ.

ಎಲ್ಲ ವರ್ಗದ ಜನರಿಗೂ ಅರ್ಥವಾಗುವಂತೆ ಸರಳವಾದ ಪದಗಳನ್ನು ಬಳಸಿರುವದನ್ನು ಇಲ್ಲಿ ಕಾಣುತ್ತೇವೆ. ಸಂಜೀವ ಮತ್ತು ಚಂದ್ರಿಯ ವಿಡಂಬನಾಶೈಲಿಯನ್ನು ಅವರ ಸಂಭಾಷಣೆಯಲ್ಲಿ ಧಾರಾಳವಾಗಿ ನೋಡಬಹುದು.

ಒಟ್ಟು ನಾಟಕದಲ್ಲಿ ೧೨ ಪ್ರವೇಶಗಳಿವೆ. ೬ ಪುರುಷ ಪಾತ್ರಗಳು, ೩ ಸ್ತ್ರೀ ಪಾತ್ರಗಳು ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್, ಇನ್ನೊಬ್ಬ ಡಾಕ್ಟರ ಒಟ್ಟು ೧೧ ಪಾತ್ರಗಳು ನಾಟಕದಲ್ಲಿ ಇರುವುದನ್ನು ಕಾಣುತ್ತವೆ.

ಇತ್ತೀಚಿನ ದಿನಗಳಲ್ಲಿ ಸೈನಿಕರ ಸಾಹಸ ಬಲಿದಾನಗಳಿಗೆ ವ್ಯಾಪಕ ಪ್ರಚಾರ ಸಿಗುತ್ತಿದೆ. ಬಲಿಯಾದ ಸೈನಿಕನ ಕುಟುಂಬಕ್ಕೆ ಸಾಕಷ್ಟು ಆರ್ಥಿಕ ನೆರವು ಸರಕಾರದಿಂದ, ಸಂಘ-ಸಂಸ್ಥೆಗಳಿಂದ ಹರಿದುಬರುತ್ತಿದೆ. ಇದು ಒಂದು ಒಳ್ಳೆಯ ಬೆಳವಣಿಗೆ, ಸಮೂಹ ಮಾಧ್ಯಮಗಳು ಇವತ್ತು ಸೈನಿಕರಿಗೆ ಒಳ್ಳೆಯ ಪ್ರಚಾರ ಕೊಡುತ್ತಿರುವದರಿಂದ ಸೈನಿಕರ ಗೌರವ ಹೆಚ್ಚಾಗಲು ಕಾರಣವಾಗಿದೆ.

ಆದರೆ ಭಾರತ-ಚೀನಾ ಯುದ್ಧ ನಡೆದಾಗ ಈ ರೀತಿ ಸೈನಿಕರಿಗೆ ಸರಕಾರದಿಂದ, ಸಂಘ-ಸಂಸ್ಥೆಗಳಿಂದ ಆರ್ಥಿಕ ನೆರವು ದೊರೆತಿದ್ದಿಲ್ಲ. ಸೈನಿಕನ ಕುಟುಂಬಕ್ಕೆ ಭದ್ರತೆಯೂ ಇದ್ದಿದ್ದಿಲ್ಲ. ಇವೆಲ್ಲ ಅಂಶಗಳ ಹಿನ್ನೆಲೆಯಲ್ಲಿ ಈ ನಾಟಕ ಬಿ.ಆರ್. ಅರಿಷಿಣಗೋಡಿಯವರಿಂದ ರಚಿಸಲ್ಪಟ್ಟಿತು.

ದೇವದಾಸಿಯಂತಹ ಅನಿಷ್ಟ ಪದ್ಧತಿ ನಿಲ್ಲಬೇಕು. ಅಂತರಜಾತಿಯ ವಿವಾಹಗಳು ನಡೆಯಬೇಕು. ಜಾತಿಗಿಂತ ಪ್ರೀತಿಗೆ ಗೌರವ ಕೊಡಬೇಕು. ದುಷ್ಟರಿಗೆ ಸಾವೇ ಪರಿಹಾರವಲ್ಲ ಎಂಬ ವಿಚಾರಗಳನ್ನು ನಾಟಕ ಸಮರ್ಥವಾದ ರೀತಿಯಲ್ಲಿ ಬಿಂಬಿಸುತ್ತದೆ. ಕುರಿ ಕಾಯುವ ಕುರುಬ ದಡ್ಡನೆಂಬುದು ರೂಢಿಯ ಮಾತು. ಆದರೆ ಈ ನಾಟಕದಲ್ಲಿ ನಾಟಕಕಾರರು ಕುರುಬರು ಚತುರಮತಿಗಳಾಗಿರುವರೆಂಬುದನ್ನು ಸಂಜೀವನ ಪಾತ್ರದ ಮುಖಾಂತರ ತೋರಿಸಿದ್ದಾರೆ. ಈ ನಾಟಕ ಚಂದ್ರಿಯ ಚಲ್ಲಾಟ ಶೆಟ್ಟಿಯ ಹಾರಾಟ ಎಂಬ ಹೆಸರಿನ ಮೇಲೆಯೂ ರಂಗಪ್ರಯೋಗಗೊಂಡಿದೆ.

ಇಲ್ಲಿಗೆ ಬಂತೋ ಸಂಗಯ್ಯಾ

ಆಗರ್ಭ ಶ್ರೀಮಂತನಾದ ಶಾಮಣ್ಣ ಮಡದಿ ತೀರಿಕೊಂಡ ನಂತರ ಮರುಮದುವೆಯ ಮುಖಾಂತರ ಕೈಹಿಡಿದ ಲಕ್ಷ್ಮಕ್ಕಳ ಜೊತೆಗೆ ಮಂಗಳಾಪೂರದಲ್ಲಿ ವಾಸಿಸುತ್ತಿದ್ದನು. ಮೊದಲ ಪತ್ನಿಯ ಮಗಳು ಗೀತಾ,

ಎರಡನೆಯ ಪತ್ನಿ ಲಕ್ಷ್ಮಕ್ಕಳ ಮಗಳು ಲಲಿತಾ. ಮರುಮದುವೆಯಾದರೂ ಶಾಮಣ್ಣ ಮೊದಲ ಹೆಂಡತಿಯ ಮಗಳಾದ ಗೀತಾಳ ಬಗ್ಗೆ ವಿಶೇಷ ಗೌರವ ಪ್ರೀತಿಯನ್ನು ಇಟ್ಟುಕೊಂಡಿದ್ದರು. ಗೀತಾ ಸುಂದರಿ, ಗುಣಸಂಪನ್ನೆಯಾಗಿದ್ದು ತಾಯಿಯನ್ನು ಕಳೆದುಕೊಂಡ ತಬ್ಬಲಿಯಾಗಿದ್ದಳು. ಮಲತಾಯಿ ಲಕ್ಷ್ಮಕ್ಕನ ಕಾಟದಿಂದ ದೂರವಿಡಲು ಶಾಮಣ್ಣನವರು ನಿರ್ಧರಿಸಿ ಶೇಷಾಪೂರದಲ್ಲಿದ್ದ ಗೆಳೆಯ ಡಾ. ರಂಗಣ್ಣನವರ ಮನೆಯಲ್ಲಿ ವಿದ್ಯಾಭ್ಯಾಸಕ್ಕೆ ಇಡುವರು. ಗೀತಾ ಶೇಷಾಪೂರದ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಚಿತ್ರಕಲಾವಿದನಾದ ವಿಶ್ವನಾಥನ ಪರಿಚಯವಾಗುವುದು, ಪರಿಚಯ ಪ್ರೇಮಕ್ಕೆ ತಿರುಗುವುದು. ಪ್ರೇಮದ ಪಯಣದಲ್ಲಿ ಬಹುದೂರ ಹೋದ ಗೀತಾ ಮತ್ತು ವಿಶ್ವನಾಥ ಒಬ್ಬರನ್ನೊಬ್ಬರು ಬಿಟ್ಟು ಇರದ ಪರಿಸ್ಥಿತಿಗೆ ಬರುವರು.

ಡಾ. ರಂಗಣ್ಣನವರ ಮಗಳು ರೂಪಾ ಶಾಮಣ್ಣನವರ ಎರಡನೆಯ ಪತ್ನಿಯ ತಮ್ಮ ಮೋಹನನನ್ನು ಪ್ರೀತಿಸುತ್ತಿದ್ದಳು. ಲಕ್ಷ್ಮಕ್ಕನ ತಮ್ಮ ಮೋಹನ ಮಹಾಕುಡುಕ, ಜೂಜುಕೋರ, ವ್ಯಸನಿಯಾಗಿ ತನಗಿದ್ದ ಎಲ್ಲ ಆಸ್ತಿಯನ್ನು ಮಾರಿಕೊಂಡು ಭಿಕಾರಿಯಾಗಿದ್ದನು. ಹಣದ ಅವಶ್ಯಕತೆ ಬಂದಾಗಲೆಲ್ಲ ಅಕ್ಕ ಲಕ್ಷ್ಮಕ್ಕನಿಗೆ ತೊಂದರೆ ಕೊಟ್ಟು ಹಣ ಇಸಿದುಕೊಂಡು ತನ್ನ ದುಶ್ಚಟಗಳನ್ನು ಪೂರೈಸಿಕೊಳ್ಳುತ್ತಿದ್ದ ಇಂತಹ ತಮ್ಮನಿಗೆ ಗೀತಾಳನ್ನು ಕೊಟ್ಟು ಮದುವೆ ಮಾಡಬೇಕೆಂದು ಲಕ್ಷ್ಮಕ್ಕ ನಿರ್ಣಯಿಸಿ ತನ್ನ ಗಂಡ ಶಾಮಣ್ಣನಿಗೆ ದುಂಬಾಲು ಬಿದ್ದು ಗೀತಾಳನ್ನು ಮೋಹನನಿಗೆ ಕೊಡಲು ಒಪ್ಪಿಸುತ್ತಾಳೆ.

ಈಗಾಗಲೇ ಪ್ರೀತಿಸಿದ ವಿಶ್ವನಾಥನನ್ನು ಬಿಡುವ ಮನಸ್ಸಿಲ್ಲದ ಗೀತಾ ಮಾನಸಿಕವಾಗಿ ತಳಮಳಗೊಳ್ಳುವಳು. ಕೊನೆಗೆ ತಂದೆ, ಮಲತಾಯಿಯ ಒತ್ತಾಯಕ್ಕೆ ಮಣಿದು ಮೋಹನನನ್ನು ಮದುವೆಯಾಗುವಳು. ಮನಸ್ಸಿಲ್ಲದ ಮನಸ್ಸಿನಿಂದ ತಂದೆ, ಮಲತಾಯಿ ಲಕ್ಷ್ಮಕ್ಕನ ಒತ್ತಾಯಕ್ಕೆ ಮಣಿದು ಮೋಹನನ ಕೈಹಿಡಿದು ಗೀತಾ ಸಂಸಾರ ಮಾಡುತ್ತಿರಲು ಕುಡುಕ ಜೂಜುಕೋರನಾದ ಮೋಹನ ಔಷಧ ಅಂಗಡಿಯ ಕಡೆಗೆ ಲಕ್ಷ್ಯ ವಹಿಸದೆ ವ್ಯಾಪಾರದಲ್ಲಿ ಲುಕ್ಸಾನು ಮಾಡಿಕೊಂಡು ಹೆಂಡತಿ ಗೀತಾಳಿಗೆ ಹಣಕಾಸಿನ ವಿಷಯವಾಗಿ ತೊಂದರೆ ಕೊಡುತ್ತಿದ್ದನು. ಹಣದ ಅವಶ್ಯಕತೆ ಬಂದಾಗಲೆಲ್ಲ ತವರು ಮನೆಯ ಕಡೆಯಿಂದ ಹಣ ತರುವಂತೆ ಮೋಹನ ಒತ್ತಾಯ ಮಾಡುವನು. ಸ್ವಾಭಿಮಾನಿಯಾದ ಗೀತಾಳಿಗೆ ತವರುಮನೆಗೆ ಹೋಗಿ ತಾಯಿಗೆ ಕೈ ಒಡ್ಡಿ ಕೇಳುವುದಕ್ಕೆ ಮನಸ್ಸು ಒಪ್ಪುತ್ತಿದ್ದಿಲ್ಲ. ಹಾಗೆಯೇ ಕುಡುಕ ಹಾಗೂ ಕುಟುಂಬದ ಜವಾಬ್ದಾರಿಯನ್ನು ಅರಿಯದ ಮೋಹನನಿಂದ ಗೀತಾ ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು.

ಗೀತಾ ಮಾನಸಿಕವಾಗಿ ಜರ್ಜರಿತಳಾಗಿ ದಿನದಿಂದ ದಿನಕ್ಕೆ ಅಶಕ್ತಳಾಗಲಿಕ್ಕೆ ಹತ್ತಿದಳು. ಮೊದಲು ಪ್ರೇಮಿಸಿದ ವಿಶ್ವನಾಥನಿಗೆ ತನ್ನ ತಾಯಿಯ ಒಂದು ಭಾವಚಿತ್ರವನ್ನು ದೊಡ್ಡದಾಗಿ ತೆಗೆದುಕೊಡು ಎಂದು ಕೇಳಿದ್ದಳು. ಈಗ ವಿಶ್ವನಾಥ ತಾಯಿಯ ಭಾವಚಿತ್ರವನ್ನು ಸುಂದರವಾಗಿ ತನ್ನ ಕಲಾಕೌಶಲ್ಯತೆಯಿಂದ

ಚಿತ್ರಿಸಿ ಗೀತಾಳ ಮನೆಗೆ ತೆಗೆದುಕೊಂಡು ಬರುವನು. ಗೀತಾಳ ಕಳಾಹೀನ ದೇಹವನ್ನು ನೋಡಿ ಮರುಗಿ ವಿಶ್ವನಾಥ ತನ್ನ ಹಳೆಯ ಪ್ರೇಮವನ್ನು ಮುಂದುವರಿಸುವಂತೆ ಕೇಳುವನು. "ಈಗ ಒಬ್ಬನ ಹೆಂಡತಿಯಾಗಿ ಬಾಳುತ್ತಿರುವಾಗ ಅವನು ಕಟ್ಟಿದ ಮಾಂಗಲ್ಯ ಕೊರಳಲ್ಲಿ ಶೋಭಿಸುತ್ತಿರುವಾಗ ಅಲ್ಲಿ ಮತ್ತೊಬ್ಬರಿಗೆ ಸ್ಥಾನಕೊಟ್ಟು ಸೂಳೆಯಂತೆ ಬಾಳಬೇಕೆ ನಾನು? ಬೇಡ ವಿಶ್ವನಾಥ, ಈ ಹುಚ್ಚು ವಿಚಾರಗಳನ್ನು ಮರೆತು ಮರೆಯಾಗಿ ಬಿಡು. ಇನ್ನೆಂದೂ ಈ ಕಡೆ ಸುಳಿಯುವ ಸಾಹಸ ಮಾಡಬೇಡ" ಎಂದು ವಿಶ್ವನಾಥನಿಗೆ ಉಪದೇಶ ಹೇಳುವಳು. "ಒಲ್ಲದ ಗಂಡನೊಂದಿಗೆ ಒತ್ತಾಯದ ಮದುವೆ ಮಾಡಿ ನಿನ್ನ ಬಾಳನ್ನೇ ಹಾಳು ಮಾಡಿದ್ದಾರೆ. ಈ ಮೊದಲೇ ಒಂದು ಹೆಣ್ಣಿನ ಬಾಳನ್ನು ಮಣ್ಣುಗೂಡಿಸಿದ ಮೋಹನನಿಂದ ನಿನ್ನ ಬಾಳು ಎಂದೂ ಉದ್ಧಾರವಾಗುವುದಿಲ್ಲ" ಎನ್ನುವನು. "ಕೈಹಿಡಿದ ಪತಿ ಎಂತವನೇ ಇರಲಿ ದೇವರು ನೀಡಿದ ವರಪ್ರಸಾದವೆಂದು ಸಂತೋಷವಾಗಿ ಸ್ವೀಕಾರ ಮಾಡಿ ಬಾಳು ಸಾಗಿಸುತ್ತಿದ್ದೇನೆ." "ಸುಳ್ಳು, ಎಲ್ಲವೂ ಸುಳ್ಳು, ಬಾಡಿಹೋದ ನಿನ್ನ ಮುಖ, ಅತ್ತು ಅತ್ತು ಊದಿಕೊಂಡಿರುವ ನಿನ್ನ ಹೊಳಪಿಲ್ಲದ ಕಣ್ಣುಗಳೆ ಹೇಳುತ್ತವೆ. ಬೇಡ ಗೀತಾ, ದಿನವೂ ಈ ರೀತಿ ನೂರಾರು ವ್ಯಸನದ ಅಗ್ನಿಯಿಂದ ಸುಟ್ಟುಕೊಳ್ಳುವುದು ನಿನಗೂ ಬೇಡಾ ನನ್ನ ವಿರಹದುರಿಯನ್ನು ನುಂಗಿ ನಾನು ಜೀವಿಸಲಾರೆ. ಇಬ್ಬರೂ ಒಂದಾಗೋಣ, ಒಟ್ಟಾಗಿಯೇ ಬಾಳೋಣ" ಎಂದು ವಿಶ್ವನಾಥ ತನ್ನ ಅಂತರಂಗವನ್ನು ತೆರೆದಿಡುವನು. "ಓರ್ವ ಸಂಸಾರಸ್ಥ ಹೆಣ್ಣುಮಗಳ ಮಾನ-ಮರ್ಯಾದೆಗೆ ಧಕ್ಕೆಯಾಗುವ ರೀತಿಯಲ್ಲಿ ಮನಸ್ಸಿನಲ್ಲಿಟ್ಟುಕೊಂಡು ಮನೆಗೆ ಬರಲಿಕ್ಕೆ ನಾಚಿಕೆಯಾಗುವುದಿಲ್ಲವೆ ನಿನಗೆ ಮೇಲಾಗಿ ಬಿ.ಎ. ಪದವಿ ಪಡೆದ ವಿದ್ಯಾವಂತ ಹಾಗೂ ಸಚ್ಚಾರಿತ್ರ್ಯದ ಚಿತ್ರಕಲಾವಿದನೆಂದು ಕರೆಸಿಕೊಳ್ಳುವ ನಿನ್ನ ವರ್ತನೆ ನನ್ನಲ್ಲಿ ನಿನ್ನ ಬಗ್ಗೆ ಇದ್ದ ಗೌರವವನ್ನು ನೀನೇ ಕಳೆದುಕೊಂಡೆ. ನನ್ನ ಕುಂಕುಮ ಸೌಭಾಗ್ಯ ಶೋಭಿಸಬೇಕು ಪತಿ ನೀಡಿದ ಮಾಂಗಲ್ಯ ಉಳಿಯಬೇಕೆಂದಿದ್ದರೆ ಇನ್ನೆಂದೂ ಈ ಮನೆಯ ಕಡೆಗೆ ಕಣ್ಣೆತ್ತಿ ನೋಡಬೇಡಾ" ಎಂದು ವಿಶ್ವನಾಥನಿಗೆ ಎಚ್ಚರಿಕೆಯನ್ನು ಕೊಡುವಳು. ತನ್ನ ಸಂಸಾರದಲ್ಲಿ ಬಂದ ಕಷ್ಟ-ನಷ್ಟಗಳನ್ನು ಸಹಿಸುತ್ತಾ ಪತಿಯನ್ನೇ ಪರದೈವವೆಂದು ಗರತಿಯಾಗಿ ತನ್ನೆಲ್ಲ ನೋವುಗಳನ್ನು ನುಂಗಿಕೊಂಡು ಬದುಕುವಳು ಗೀತಾ. ಮೋಹನ ವಿಲಾಸಿ ಜೀವನದ ಬೆನ್ನುಹತ್ತಿ ಕುಡಿತದ ಚಟದಿಂದ ಆರೋಗ್ಯ ಕೆಡಿಸಿಕೊಂಡು ಪಶ್ಚಾತ್ತಾಪಪಟ್ಟು ಮಾವ ಶಾಮಣ್ಣಾರಲ್ಲಿಗೆ ಬರುವನು. ಮೋಹನನನ್ನು ನೋಡಿದ ಮಾವ ಶಾಮಣ್ಣನವರು "ಮತ್ತ್ಯಾವ ಅನಾಹುತ ಮಾಡಲಿಕ್ಕೆ ಮತ್ತೆ ಬಂದೆ" ಎಂದು ಕೇಳುವರು. "ಮತ್ತ್ಯಾವ ಅನಾಹುತ ಮಾಡಲಿಕ್ಕೆ ಬಂದಿಲ್ಲ. ಯಾವ ಅನಾಹುತ ಮಾಡಲಿಕ್ಕೆ ನನ್ನಲ್ಲಿ ಶಕ್ತಿಯಾದರೂ ಎಲ್ಲಿದೆ ಸಾಯುವ ಹೆಣವಾಗಿ ಇಲ್ಲಿಗೆ ಬಂದಿದ್ದೇನೆ. ನಿಮ್ಮೆಲ್ಲರ ಕ್ಷಮಾಪಣೆ ಕೇಳಲು ಬಂದಿದ್ದೇನೆ. ಮತ್ತೆ ಕರುಳಿನ ರೋಗ ಉಲ್ಬಣಿಸಿದೆ. ಇದ್ದೂರಿನ ಯಾವ ಡಾಕ್ಟರರು ನನ್ನ ಗುಣಕ್ಕೆ ಕರುಣೆ ತೋರಲಿಲ್ಲ. ಡಾಕ್ಟರ ರಂಗಣ್ಣಾ ಹಾಗೂ ಡಾಕ್ಟರ ಶಂಕರರಿಗೆ ಹೇಳು ಇದೊಂದು ಸಲ ಈ ಬೇನೆಯಿಂದ ಉಳಿಸಿಕೊಳ್ಳುವ ಉಪಕಾರ ಮಾಡಬೇಕು. ಇನ್ನೆಂದಿಗೂ ಹೆಂಡ-

ಖಂಡದ ಅನಾಚಾರಕ್ಕೆ ಮನಸ್ಸು ಮಾಡುವುದಿಲ್ಲ. ನಿಮ್ಮ ಪಾದಸಾಕ್ಷಿಯಾಗಿ ಕಾಲಿಗೆ ಬೀಳುತ್ತೇನೆ" ಎಂದು ಪಶ್ಚಾತ್ತಾಪಪಡುವನು. ಗೀತಾಳನ್ನು ಪ್ರೀತಿಸುತ್ತಿದ್ದ ವಿಶ್ವನಾಥ ಭಗ್ನಪ್ರೇಮಿಯಾಗುವನು. ಮೋಹನನನ್ನು ಪ್ರೀತಿಸುತ್ತಿದ್ದ ರೂಪಾಳ ದಾರಿಯೇ ಬೇರೆಯಾಗುವುದು. ಭಗ್ನಪ್ರೇಮಿಯಾದ ವಿಶ್ವನಾಥ ಒಬ್ಬ ಶ್ರೇಷ್ಠಮಟ್ಟದ ಚಿತ್ರಕಲಾವಿದನಾಗಿ ಪರಿವರ್ತನೆ ಹೊಂದುವನು. ಡಾ. ರಂಗಣ್ಣವರ ಒಬ್ಬಳೆ ಒಬ್ಬ ಮಗಳು ರೂಪಾ ತನ್ನ ವರ್ತನೆಯಿಂದ ತಂದೆಯಿಂದ ದೂರವಾಗುವಳು. ಮದುವೆಯಾಗುತ್ತೇನೆಂದು ನಂಬಿಸಿ ಮೋಸಮಾಡಿ ಗೀತಾಳನ್ನು ಕೈಹಿಡಿದಾಗ ರೂಪಾ ಅರೆಹುಚ್ಚಿಯಾಗಿ ತಿರುಗುತ್ತಿರುವಳು. ಕೊನೆಗೆ ಜೀವನದಲ್ಲಿ ಜಿಗುಪ್ಸೆಹೊಂದಿ ಬಾವಿಗೆ ಹಾರಿ ಸಾಯುವಳು.

ಕುಡುಕ ಮೋಹನನಿಗೆ ಗೀತಾಳನ್ನು ಮದುವೆ ಮಾಡಿದ ಲಕ್ಷ್ಮಕ್ಕ ತನ್ನ ಮಗಳು ಲಲಿತಾಳನ್ನು ಸಿರಿವಂತ ವರನಿಗೆ ಮದುವೆ ಮಾಡಿಕೊಡಲು ಪ್ರಯತ್ನಿಸಿ ವಿಫಲಳಾಗುವಳು. ಆರ್.ಎಂ.ಪಿ. ಡಾಕ್ಟರ ಶಂಕರನು ಲಲಿತಾಳನ್ನು ಒಲಿಸಿಕೊಂಡಿರುವನು. ಮಂಗಳಾಪೂರದಲ್ಲಿಯೇ ಪ್ರಸಿದ್ಧಿ ಪಡೆದ ಡಾ. ದೇಶಪಾಂಡೆಯವರ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ಶಂಕರ ಮಹತ್ವಾಕಾಂಕ್ಷೆಯ ತರುಣ. ಒಂದು ದಿನ ಇದ್ದಕ್ಕಿದ್ದ ಹಾಗೆ ಮನೆಯಲ್ಲಿಯ ಬಂಗಾರ-ಹಣವನ್ನು ತೆಗೆದುಕೊಂಡು ಲಲಿತಾ ಶಂಕರನನ್ನು ರಿಜಿಸ್ಟರ್ ಮ್ಯಾರೇಜ್ ಆಗುವಳು. ತವರುಮನೆಯಿಂದ ತಂದ ಲಲಿತಾಳ ಸಂಪತ್ತಿನಲ್ಲಿ ಅದೇ ಊರಿನಲ್ಲಿ ದವಾಖಾನೆ ತೆಗೆದು ಶಂಕರ ಸುಖವಾಗಿದ್ದನು. ಶಂಕರ ಮತ್ತು ಲಲಿತಾಳ ಸಂಬಂಧವನ್ನು ಮುರಿಯಲು ಕುಡುಕ ತಮ್ಮ ಮೋಹನನ ಮುಖಾಂತರ ಲಕ್ಷ್ಮಕ್ಕ ಬೆದರಿಕೆ ಹಾಕಿಸುವಳು. ಶಂಕರನ ಚಾಣಾಕ್ಷತನಕ್ಕೆ ಅಸಹಾಯಕಳಾಗಿ ಲಕ್ಷ್ಮಕ್ಕ ಶಂಕರನ ಆಶ್ರಯ ಪಡೆಯುವಳು. ಡಾಕ್ಟರ ರಂಗಣ್ಣ ಹಾಗೂ ಶಂಕರರ ಬುದ್ಧಿ ಮಾತಿನಿಂದ ಮೋಹನ ಕುಡಿಯುವ ಚಟ ಬಿಟ್ಟು ಗೀತಾಳ ಜೊತೆಗೆ ಪ್ರೀತಿಯಿಂದ ಬದುಕುವನು. ಇಲ್ಲಿಗೆ ನಾಟಕ ಮುಗಿಯುತ್ತದೆ.

ಕುಡಿತದ ದುಷ್ಪರಿಣಾಮ, ಮಲತಾಯಿಯ ದುಷ್ಟತನ, ಹಿರಿಯರ ಒಪ್ಪಿಗೆ ಇಲ್ಲದ ಹಾಗೂ ಸ್ವಚ್ಛಂದ ಮನಸ್ಸಿನ ಪ್ರೇಮದ ದುರಂತದ ಘಟನೆಗಳನ್ನು ನಾಟಕಕಾರರು ರೂಪಾಳ ಪಾತ್ರ ಹಾಗೂ ವಿಶ್ವನಾಥನ ಪಾತ್ರದ ಮುಖಾಂತರ ತೋರಿಸಿರುವದನ್ನು ಕಾಣಬಹುದು.

ಮಲತಾಯಿಯ ದರ್ಪ, ಮಲಮಗಳ ಶೋಷಣೆ, ಕುಡಿತದ ದುಷ್ಪರಿಣಾಮದಿಂದ ಕುಟುಂಬ ಹೇಗೆ ಸಾಮರಸ್ಯವನ್ನು ಕಳೆದುಕೊಳ್ಳುತ್ತದೆ ಎಂಬುದನ್ನು ಅನಾವರಣಗೊಳಿಸುವುದೇ ಈ ನಾಟಕದ ಉದ್ದೇಶ. ವಿಲಾಸಿ ಜೀವನ, ಜೂಜಾಟ ಮುಂತಾದ ದುಶ್ಚಟಗಳಿಂದ ಕುಟುಂಬಗಳು ಆರ್ಥಿಕವಾಗಿ ದಿವಾಳಿ ಎದ್ದು ಸಂಕಷ್ಟಕ್ಕೆ ಒಳಗಾಗುವ ಚಿತ್ರಣವನ್ನು ಪಾತ್ರಗಳ ಮುಖಾಂತರ ನಾಟಕಕಾರರು ತೋರಿಸಲು ಪ್ರಯತ್ನಿಸಿದಂತೆ ಕಾಣುತ್ತದೆ.

ಮಲತಾಯಿಯ ದುಷ್ಟತನವನ್ನು ಲಕ್ಷ್ಮಕ್ಕನ ಪಾತ್ರದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿರುವುದು ನಾಟಕಕಾರರ ಕೌಶಲ್ಯವನ್ನು ತೋರಿಸುತ್ತದೆ. ಮಲಮಗಳಾಗಿ ಗೀತಾಳ ಪಾತ್ರವೂ ಪ್ರೇಕ್ಷಕರಲ್ಲಿ ಕರುಣ ರಸವನ್ನು ಉಕ್ಕಿಸುತ್ತದೆ. ಕುಡುಕ ಮೋಹನ ಕುಡಿತದ ಚಟಕ್ಕಾಗಿ ತನ್ನತನವನ್ನೇ ಮಾರಿಕೊಳ್ಳುವ ವ್ಯಕ್ತಿತ್ವದವನಾಗಿ ಕಂಡುಬರುವನು. ಕುಡಿತ, ಜೂಜಾಟದ ದುಷ್ಪರಿಣಾಮಗಳನ್ನು ನಾಟಕಕಾರರು ಸಮರ್ಥವಾಗಿ ಸೆರೆಹಿಡಿದಿದ್ದನ್ನು ಈ ನಾಟಕದಲ್ಲಿ ಕಾಣುತ್ತೇವೆ.

ಮಲತಾಯಿಯ ಧೋರಣೆ, ಮಲಮಗಳ ಸಂಕಷ್ಟ, ಭಗ್ನಪ್ರೇಮಿಗಳ ಬದುಕು, ಕುಡಿತ, ಜೂಜು ಮುಂತಾದ ವಿಷಯಗಳ ಮೇಲೆ ಈ ನಾಟಕ ಕ್ಷ-ಕಿರಣ ಬೀರಿ ಪ್ರೇಕ್ಷಕರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗುತ್ತದೆ.

ಗೀಗೀ ಮೇಳದ ಗಂಗಮ್ಮ

ಇತ್ತೀಚಿನ ದಿನಗಳಲ್ಲಿ ರಾಜ್ಯ ಸರಕಾರಗಳು ಅನೇಕ ಯೋಜನೆಗಳನ್ನು ತಂದಿರುವುದನ್ನು ಕಾಣುತ್ತೇವೆ. ಸರಕಾರದ ಯೋಜನೆಗಳು ಜನರಿಗೆ ತಲುಪಬೇಕೆಂದು ಸರಕಾರಗಳು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವದನ್ನೂ ಕಾಣುತ್ತೇವೆ. ಗ್ರಾಮೀಣ ಜನರಿಗೆ ತಿಳುವಳಿಕೆಗಳನ್ನು ಕೊಡಲು ಅವರು ಇಷ್ಟಪಡುವ ಜನಪದ ಮೇಳಗಳಿಂದ ಜನಜಾಗೃತಿಯನ್ನು ಮಾಡುತ್ತಿರುವದನ್ನೂ ಕಾಣುತ್ತೇವೆ.

ಪರಿಸರದ ಬಗ್ಗೆ ಕಾಳಜಿ, ಆರೋಗ್ಯದ ಬಗ್ಗೆ, ಸಾಕ್ಷರತೆ ಬಗ್ಗೆ, ಕುಟುಂಬ ಯೋಜನೆ, ಏಡ್ಸ್, ಎಚ್-೧ ಎನ್-೧ ಮುಂತಾದ ವಿಷಯಗಳ ಬಗ್ಗೆ ಜನರಿಗೆ ಮಾಹಿತಿ ಕೊಡಲು ಜಿಲ್ಲಾ ಕಂದಾಯ ಇಲಾಖೆ, ಆರೋಗ್ಯ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳು ಪರಸ್ಪರ ಸಹಯೋಗದೊಂದಿಗೆ ಪ್ರಸಿದ್ಧ ಕಲಾಮೇಳಗಳನ್ನು ಆಯ್ಕೆ ಮಾಡಿಕೊಂಡು ಅವುಗಳ ಮುಖಾಂತರ ಕಾರ್ಯಕ್ರಮ ನಡೆಸುತ್ತಿವೆ.

ಸರಕಾರಗಳು ಕಲಾಮೇಳಗಳ ಮುಖಾಂತರ ಜನಜಾಗೃತಿಯನ್ನು ಮಾಡುತ್ತಿರುವುದು ಸುತ್ತಾರ್ಹ. ಆದರೆ ಆ ಕಲಾಮೇಳದಲ್ಲಿ ದುಡಿಯುವ ಕಲಾವಿದರ ಕಡೆಗೆ ಸರಕಾರಗಳು ಯಾವುದೇ ಲಕ್ಷ್ಯವಹಿಸಿಲ್ಲದಿರುವುದು ವಿಷಾದನೀಯ. ಈ ಹಿನ್ನೆಲೆಯಲ್ಲಿ ನಾಟಕಕಾರ ಅರಿಷಿಣಗೋಡಿಯವರ ಸಂವೇದನಾಶೀಲ ಮನಸ್ಸು ಕಲಾವಿದರ ಬದುಕನ್ನು ಆಧರಿಸಿ ಈ ನಾಟಕವನ್ನು ರಚಿಸಿದೆ.

ಪರೂತಪ್ಪ ೫೦ ವರ್ಷದ ಗೀಗೀಮೇಳದ ಮುಖಂಡ, ಅವನ ಮಗಳು ಗಂಗೂ, ಸಾಕು ಮಗ ಈರಣ್ಣ. ಗಂಗೂವಿಗೆ ಜನ್ಮವಿತ್ತು ಪರೂತಪ್ಪನ ಹೆಂಡತಿ ಸಾಯುವಳು. ಹೆಂಡತಿಯ ನೆನಪನ್ನು ಮರೆಯಲು ಪರೂತಪ್ಪ ಆಗಾಗ ಮದ್ಯವನ್ನು ಸೇವಿಸುತ್ತಿದ್ದ. ಗಂಗೂ ಬೆಳೆದು ದೊಡ್ಡವಳಾಗುತ್ತಿರುವಾಗಲೇ ಗೀಗೀಮೇಳದ ಹಿಂದೆ ಕರೆದುಕೊಂಡು ಹೋಗುತ್ತ ಮಗಳು ಗಂಗವ್ವನಿಗೆ ಒಳ್ಳೆಯ ತರಬೇತಿ ಕೊಟ್ಟು ಶ್ರೇಷ್ಠ ಕಲಾವಿದೆಯನ್ನಾಗಿ ತಯಾರು ಮಾಡಿದ್ದನು. ಗಂಗವ್ವಳ ಜನಪ್ರಿಯತೆಯನ್ನು ಬಳಸಿಕೊಳ್ಳಲು

ಜಿಲ್ಲಾ ಆಡಳಿತ ಪ್ರಯತ್ನಿಸಿ ಸಫಲವಾಯಿತು. ಗೀಗೀಮೇಳದಲ್ಲಿದ್ದ ಗಂಗವ್ವಳ ಕುಣಿತ, ಮಧುರ ಕಂಠದಿಂದ ಹಾಡುವ ಹಾಡುಗಳು, ಸುಂದರ ಮೈಮಾಟ, ಮೇಳದ ಪ್ರಮುಖ ಆಕರ್ಷಣೆಯಾಗಿದ್ದವು. ಪಕ್ಕದ ಊರಿನ ಗ್ರಾಮಪಂಚಾಯತಿಯ ಅಧ್ಯಕ್ಷ ಪರಮೇಶ್ವರಪ್ಪನ ಮಗ ರಾಜಶೇಖರ ಮೇಳದಲ್ಲಿದ್ದ ಗಂಗವ್ವನ ರೂಪಕ್ಕೆ ಮಾರುಹೋಗುವನು. ದೂರದ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ರಾಜಶೇಖರ ರಜಾದಿನಗಳಲ್ಲಿ ಊರಿಗೆ ಬಂದಾಗ ಗಂಗವ್ವಳ ಮೇಳ ಎಲ್ಲಿಗೆ ಹೋಗುತ್ತದೆ ಅಲ್ಲಿಗೆ ಗಂಗವ್ವಳ ಜೊತೆ ಹೋಗುತ್ತಿದ್ದನು. ಮದುವೆಯಾಗುತ್ತೇನೆಂದು ನಂಬಿಸಿ ಗಂಗವ್ವನ ಜೊತೆ ದೈಹಿಕ ಸಂಬಂಧ ಬೆಳೆಸುವನು. ಇದರ ಪರಿಣಾಮ ಗಂಗವ್ವ ಗರ್ಭವತಿಯಾಗುವಳು. ಮದುವೆಗಿಂತ ಮುಂಚೆ ಬಸುರಿಯಾದ ಗಂಗವ್ವನ ಸ್ಥಿತಿಯನ್ನು ನೋಡಿ ಪರೂತಪ್ಪ ಮಾನಸಿಕವಾಗಿ ತಲ್ಲಣಗೊಳ್ಳುವನು. ಇತ್ತ ಮಗ ರಾಜಶೇಖರನ ವರ್ತನೆಯಿಂದ ರೋಸಿಹೋದ ಪರಮೇಶ್ವರಪ್ಪ ಗಂಗವ್ವನ ತಂದೆಯನ್ನು ಹೊಡೆದು ಬೆದರಿಸಿ ಊರು ಬಿಡುವಂತೆ ಮಾಡುವನು. ಹೊಡೆತದಲ್ಲಿ ತಲೆಗೆ ಪೆಟ್ಟುಬಿದ್ದು ಪರೂತಪ್ಪ ಸಾಯುವನು.

ಚಂದ್ರಣ್ಣ ಗೀಗೀಮೇಳದಲ್ಲಿದ್ದ ಇನ್ನೊಬ್ಬ ಕಲಾವಿದ. ಮೊದಲನೆಯ ಹೆಂಡತಿ ಬಾಗವ್ವನಿಗೆ ಮಕ್ಕಳು ಆಗಲಿಲ್ಲವೆಂದು ತಿಳಿದು ಆಕೆಯ ತಂಗಿ ನಾಗವ್ವನನ್ನು ಮದುವೆಯಾಗುವನು. ತಂಗಿ ನಾಗವ್ವನಿಗೂ ಬಹಳ ದಿನಗಳಾದರೂ ಮಕ್ಕಳು ಆಗಲಿಲ್ಲ. ಗ್ರಾಮ ಪಂಚಾಯತಿಯ ಚೆನಬಸುವಿನ ಸಲಹೆಯಂತೆ ಬಾಗವ್ವ, ನಾಗವ್ವರನ್ನು ಪ್ರತಿಷ್ಠಿತ ವೈದ್ಯರಲ್ಲಿ ತೋರಿಸುವನು. ವೈದ್ಯರ ಉಪಚಾರದಿಂದ ಬಾಗವ್ವ, ನಾಗವ್ವರು ಗರ್ಭವತಿಯರಾಗುವರು. ಹೆರಿಗೆಯ ಸಂದರ್ಭದಲ್ಲಿ ಭಾಗವ್ವ ಮತ್ತು ಆಕೆಯ ಕೂಸು ಸಾಯುವರು. ಹಾಗೆಯೇ ಮುಂದೆ ನಾಗವ್ವನೂ ಕೂಡ ಹೆರಿಗೆಯ ಸಂದರ್ಭದಲ್ಲಿ ಹೆಣ್ಣುಕೂಸಿಗೆ ಜನ್ಮ ಕೊಟ್ಟು ಮರಣವನ್ನಪ್ಪುವಳು. ಹೀಗಾಗಿ ಚಂದ್ರಣ್ಣ ತನ್ನ ಆಸ್ತಿಯನ್ನು ನಾಗವ್ವನ ತವರುಮನೆಯವರಿಗೆ ಬರೆದುಕೊಟ್ಟು ಹೆಣ್ಣುಮಗುವಿನ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿ ಆಧ್ಯಾತ್ಮದ ಕಡೆಗೆ ಒಲಿಯುವನು. ಇತ್ತ ಪಂಚಾಯತಿಯ ಅಧ್ಯಕ್ಷ ಪರಮೇಶ್ವರಪ್ಪ, ಮಗ ರಾಜಶೇಖರನು ಗಂಗವ್ವಳನ್ನು ಮರೆಯುವಂತೆ ಬುದ್ಧಿವಾದ ಹೇಳಿ ವಿದ್ಯಾಭ್ಯಾಸಕ್ಕಾಗಿ ಮತ್ತೆ ಬೆಂಗಳೂರಿಗೆ ಕಳಿಸುವನು.

ಇತ್ತ ಅಪಘಾತವೊಂದರಲ್ಲಿ ಈರಣ್ಣ ಸಾಯುವನು. ಮೊದಲೇ ತಂದೆಯನ್ನು ಕಳೆದುಕೊಂಡು ಅನಾಥಳಾಗಿದ್ದ ಗಂಗೂ ಹೊಟ್ಟೆ ತುಂಬಿಸಿಕೊಳ್ಳಲು ಬೇರೆ ಊರಿಗೆ ಬಂದು ನೆಲೆಸುವಳು. ಪರಊರಿನಲ್ಲಿ ಶ್ರೀಮಂತರ ಮನೆಯ ಕಸ, ಮುಸುರೆ ಕೆಲಸವನ್ನು ಮಾಡುತ್ತಾ ಅಶೋಕನಿಗೆ ಜನ್ಮ ನೀಡುವಳು. ಮಗ ಅಶೋಕ ದೊಡ್ಡವನಾಗಿ ಕಾಲೇಜಿಗೆ ಹೋಗುತ್ತಿದ್ದನು. ಎಂದಾದರೂ ಒಂದು ದಿನ ಅಶೋಕನ ಹುಟ್ಟಿಗೆ ಕಾರಣನಾದ ರಾಜಶೇಖರ ತನ್ನಲ್ಲಿ ಬರುವನೆಂದು ನಿರೀಕ್ಷೆಯಲ್ಲಿ ಗಂಗವ್ವ ಕಾಲ ಕಳೆಯುತ್ತಿದ್ದಳು. ಮಗ ಅಶೋಕ ತಂದೆಯ ಬಗ್ಗೆ ಕೇಳಿದಾಗ ಹಾರಿಕೆಯ ಉತ್ತರವನ್ನು ಹೇಳುತ್ತಾ ಮಗ ಅಶೋಕನ ಬಾಯಿ ಮುಚ್ಚಿಸುತ್ತಿದ್ದಳು. ಪ್ರಸ್ತುತ ನಾಟಕ ಪೂರ್ಣಗೊಳ್ಳದೆ ಇಲ್ಲಿಗೆ ನಿಂತಿದೆ.

ನಾಟಕದಲ್ಲಿ ಬರುವ ಗಂಗವ್ವ ಒಬ್ಬ ದುರಂತ ನಾಯಕಿಯಾಗಿ ಕಾಣುತ್ತಾಳೆ. ಆಕೆಯ ಬದುಕಿನ ಗೋಳಿನಲ್ಲಿ ಯಾರೂ ಭಾಗಿಯಾಗುವದಿಲ್ಲ. ಕಲಾರಸಿಕನೆಂದು ನಂಬಿಸಿ ಗಂಗವ್ವಳ ದೈಹಿಕ ಸುಖ ಅನುಭವಿಸಿ ದೂರವಾಗಿ ಹೋಗುವ ರಾಜಶೇಖರ ಒಬ್ಬ ಸ್ವಾರ್ಥ ಕಾಮುಕನಾಗಿ ಇಲ್ಲಿ ಕಾಣುತ್ತಾನೆ. ಇದು ಒಬ್ಬ ರಾಜಶೇಖರನ ಗುಣಸ್ವಭಾವವಲ್ಲ, ಇದು ಕಲಾವಿದೆಯರನ್ನು ಕಾಣುವ ಪುರುಷ ಸಮಾಜದ ಪ್ರತಿನಿಧಿಯೆಂಬಂತೆ ರಾಜಶೇಖರನ ಪಾತ್ರವನ್ನು ಬೆಳೆಸಲಾಗಿದೆ.

೭೭ ವರ್ಷದ ಈ ಇಳಿವಯಸ್ಸಿನಲ್ಲಿಯೂ ಬಿ.ಆರ್. ಅರಿಷಿಣಗೋಡಿಯವರು ಈ ನಾಟಕವನ್ನು ರಚಿಸಿದ್ದಾರೆ. ನಾಟಕ ರಚಿಸುವ ಹವ್ಯಾಸ ಕಡಿಮೆಯಾಗದೇ ಇರುವುದು ಇದು ಅವರ ರಂಗಶ್ರದ್ಧೆಯನ್ನು ತೋರಿಸುತ್ತದೆ.

ಆ. ನಾಟಕಗಳ, ಭಾಷಿಕ, ಸಾಹಿತ್ಯಿಕ ವಿಶ್ಲೇಷಣೆ

ಬಿ.ಆರ್. ಅರಿಷಿಣಗೋಡಿಯವರ ನಾಟಕಗಳ ಇದುವರೆಗಿನ ಸಮೀಕ್ಷೆ ಕೇವಲ ಕಥಾನಕಕ್ಕೆ ಸಂಬಂಧಿಸಿದ್ದು ಯಾವುದೇ ಸೃಜನ ಸಾಹಿತ್ಯ ಪ್ರಕಾರ ಕೇವಲ ಕಥೆಯಿಂದ ಜನಪ್ರಿಯಗೊಳ್ಳುವುದಿಲ್ಲ. ಕಥೆಯ ಒಡಲಲ್ಲಿ ತೋರುವ ಭಾಷಾ ಬಳಕೆ ಮತ್ತು ಸಾಹಿತ್ಯಾಂಶಗಳು ಒಂದು ಕಥೆಯನ್ನು ಕಲಾಕೃತಿಯಾಗಿಸುವಲ್ಲಿ ಕೈಗೂಡಿಸುತ್ತವೆ. ಈಗ ಅರಿಷಿಣಗೋಡಿಯವರ ನಾಟಕಗಳಲ್ಲಿ ಭಾಷೆ ಸಂಹನಗೊಂಡ ಬಗೆ, ಸಂಭಾಷಣೆಯ ರೀತಿ, ಪ್ರಾಸ, ಅನ್ಯ ಭಾಷಾ ಬಳಕೆ, ಆಡು ಮಾತಿನ ರೀತಿ, ಬೈಗುಳ, ಅಲಂಕಾರ, ಗಾದೆಯ ಮಾತುಗಳೆಲ್ಲ ಹೇಗೆ ಮೈದುಂಬಿಕೊಂಡು ನಿಂತಿವೆ ಎಂಬುದನ್ನು ಈಗ ಪರಿಶೀಲಿಸಬಹುದು.

ಭಾಷೆ

ಕೃತಿಕಾರ ತನ್ನ ವಿಚಾರಗಳನ್ನು ಭಾಷೆಯ ಮುಖಾಂತರ, ಓದುಗರಿಗೆ ತಲುಪಿಸುತ್ತಾನೆ. ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ ಯಾವುದೇ ಇರಲಿ, ಅಲ್ಲಿಯ ವಿಚಾರಗಳು ಸಂವಹನಗೊಳ್ಳುವುದು ಭಾಷಾ ಮಾಧ್ಯಮದ ಮೂಲಕವಾಗಿ. ಸಾಹಿತ್ಯದಲ್ಲಿ ಪ್ರಮುಖವೆನಿಸುವ ಈ ಭಾಷೆಯನ್ನುವುದು ಕಾವ್ಯ, ಕಥೆ, ಕಾದಂಬರಿಗಿಂತ ನಾಟಕದಲ್ಲಿ ಭಿನ್ನ ಸ್ವರೂಪವನ್ನು ಪಡೆಯುತ್ತದೆ. ನಾಟಕ ಏಕಕಾಲಕ್ಕೆ ಸಾಹಿತ್ಯ ಕೃತಿ ಪ್ರದರ್ಶನ ಕೃತಿ ಎರಡು ಆಗಿರುವುದರಿಂದ ಕೃತಿಕಾರ ತುಂಬ ಪ್ರಜ್ಞಾಪೂರ್ವಕವಾಗಿ ಭಾಷೆಯನ್ನು ಬಳಸುತ್ತಾನೆ.

ಅದರಲ್ಲೂ ವೃತ್ತಿರಂಗಭೂಮಿಗಾಗಿ ರಚಿತವಾದ ನಾಟಕ ಕೃತಿಗಳು ವಿಶೇಷವಾಗಿ ಗ್ರಾಮೀಣ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದವುಗಳು. ಈ ಹಿನ್ನೆಲೆಯಲ್ಲಿ ಭಾಷೆ ಸಾಮಾನ್ಯ ಪ್ರೇಕ್ಷಕರ ಪ್ರಜ್ಞೆಗೆ ಸಿಲುಕುವ ಮಟ್ಟದಲ್ಲಿಯೇ ಇರಬೇಕಾಗುತ್ತದೆ. ಹೀಗೆ ಗ್ರಾಮೀಣ ಸಮುದಾಯವನ್ನು ಅನುಲಕ್ಷಿಸಿ ಬರೆಯುವ ನಾಟಕಕಾರ ಭಾಷೆಯ ವಿಷಯದಲ್ಲಿ ಪ್ರಮುಖವಾಗಿ ಈ ಮೂರು ಅಂಶಗಳ ಮೇಲೆ ಗಮನವಿರಿಸಿ ಮುಂದುವರೆಯುತ್ತಾನೆ.

೧. ತಾನು ನಾಟಕದ ಮುಖಾಂತರ ಅಥವಾ ಪಾತ್ರಗಳಾಡುವ ಭಾಷೆಯ ಮುಖಾಂತರ ಯಾವ ಸಂದೇಶವನ್ನು ಕೊಡಬೇಕಾಗಿದೆಯೋ ಅದು ಸ್ಪಷ್ಟವಾಗಿರುವ ರೀತಿಯಲ್ಲಿ ಭಾಷೆ ರಚನೆಗೊಳ್ಳಬೇಕು.

೨. ಭಾಷೆ ಕೇವಲ ಶುಷ್ಕವಾಗಿರದೆ ಅದು ಕೆಲವು ಸಲವಾದರೂ ವಿಶೇಷವಾಗಿ ನಾಯಕ, ನಾಯಕಿ, ಖಳನಾಯಕರ ಮುಖಾಂತರ ಪ್ರೌಢವಾಗಿರಬೇಕು.

೩. ಜನ ಸಮುದಾಯ ನಿತ್ಯವೂ ತಮ್ಮ ಭಾಷೆಯಲ್ಲಿ ಬಳಸುವ ಗಾದೆಮಾತು, ಪಡೆನುಡಿ ಮುಂತಾದವುಗಳು ನಾಟಕದ ಭಾಷೆಯಲ್ಲಿ ತುಂಬಿರಬೇಕು.

ಹೀಗೆ ನಾಟಕಕಾರ ನಾಟಕದಲ್ಲಿ ಕೇವಲ ಕಥೆಯನ್ನು ಹೇಳುವುದಿಲ್ಲ. ಸುಂದರ ಪರಿಣಾಮಕಾರಿಯಾದ ಭಾಷೆಯ ಮುಖಾಂತರ ಅದನ್ನು ಓರಣಗೊಳಿಸುತ್ತಾನೆ. ವೃತ್ತಿರಂಗಭೂಮಿಯ ಕೆಲವು ನಾಟಕಕಾರರಾದರೂ ತಮ್ಮ ನಾಟಕದ ಆಶಯದೊಂದಿಗೆ ಭಾಷಾ ವಿಷಯದ ಕಡೆಗೂ ಲಕ್ಷ್ಯವಿರಿಸಿ ಭಾಷೆಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡಿದ್ದಾರೆ. ನಾಟಕದಲ್ಲಿ ಭಾಷೆ ಪರಿಣಾಮಕಾರಿಯಾಗಿರಬೇಕು. ಅದನ್ನು ಹೇಗೆ ದುಡಿಸಿಕೊಳ್ಳಬೇಕು ಎಂಬುದನ್ನು ಕುರಿತು ಮೊದಲಿನಿಂದಲೂ ಒಂದು ಚಿಂತನೆ ಇದ್ದೇ ಇದೆ.

ವೃತ್ತಿರಂಗಭೂಮಿಗಾಗಿ ಹುಟ್ಟಿಕೊಂಡ ನಮ್ಮ ನಾಟಕಗಳಿಗೆ ತನ್ನದೇ ಆದ ಭಾಷಿಕ ಅನನ್ಯತೆಯಿದೆ. ಪ್ರಸಂಗಾವಧಾನವಾಗಿ ಭಾಷಾ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಹೋಗುವುದು ನಾಟಕಗಳ ವಿಶೇಷತೆ. ಭಾಷಾ ಬಳಕೆಯ ರೀತಿಯನ್ನು ಪಾತ್ರಗಳು ಬೆಳೆದು ಬಂದ ಪರಿಸರ ನಿರ್ಧರಿಸುತ್ತದೆ. ಒಬ್ಬ ವಿದ್ಯಾವಂತ ಮಾತನಾಡುವ ರೀತಿಗೂ ಸಾಮಾನ್ಯನೊಬ್ಬನು ಮಾತನಾಡುವ ರೀತಿಗೂ ಅಂತರವಾಗುವುದು ಅತ್ಯಂತ ಸಹಜ. ಒಮ್ಮೆ ಪ್ರೌಢವಾಗಿ, ಒಮ್ಮೆ ಸಾಮಾನ್ಯವಾಗಿ, ಇನ್ನೊಮ್ಮೆ ಎರಡೂ ರೀತಿಯ ಮಿಶ್ರಣವಾಗಿ ಹರಿದು ಬರುವ ನಾಟಕ ಭಾಷೆಗೆ ತನ್ನದೇ ಆದ ಸೊಗಸಿದೆ. ವೃತ್ತಿರಂಗಭೂಮಿಯ ನಾಟಕಗಳು ಆರಂಭದ ದಿನಗಳಲ್ಲಿ ಕಾವ್ಯಾತ್ಮಕ ಭಾಷೆಯನ್ನು ಬಳಸಿಕೊಂಡದ್ದಿದೆ. ಈ ಕಾವ್ಯಾತ್ಮಕ ಭಾಷೆಗೆ ಕಂದಗಲ್ ಹನುಮಂತರಾಯರು ಒಳ್ಳೆಯ ಉದಾಹರಣೆ. ಹಳಗನ್ನಡ ಕಾವ್ಯವನ್ನು ಓದಿದ ಅನುಭವ ಇವರ ನಾಟಕ ಭಾಷೆಯಿಂದಾಗುತ್ತದೆ. ಇವರ ಭಾಷೆಯ ವರಸೆಯನ್ನು ಅಲ್ಲಲ್ಲಿ ಎಚ್.ಎನ್. ಹೂಗಾರ ಅವರ ಭಾಷೆಯಲ್ಲಿ ನೋಡಬಹುದು. ಇದನ್ನು ಬಿಟ್ಟರೆ ಉಳಿದ ನಾಟಕಕಾರರ ಭಾಷಾ ಬಳಕೆಯ ರೀತಿ ಒಂದೇ ಬಗೆಯಾಗಿದೆ. ಕೆಲವರು ಕಾವ್ಯಾತ್ಮಕವಲ್ಲದಿದ್ದರೂ ಪ್ರೌಢ ಭಾಷೆಯನ್ನು ಬಳಸಿಕೊಂಡಿದ್ದಾರೆ. ಹಾಸ್ಯ ಪಾತ್ರಗಳಿಗಂತೂ ದೇಸಿ ಭಾಷೆಯೇ ಯೋಗ್ಯವಾದ ಮಾಧ್ಯಮವೆನಿಸಿದೆ.

ಸಂಭಾಷಣೆ

ಸಂಭಾಷಣೆಯೆನ್ನುವುದು ಯಾವುದೇ ನಾಟಕದ ಜೀವಾಳ. ನಾಟಕದಲ್ಲಿ ಪಾತ್ರಗಳು ಮುಖಾಮುಖಿಯಾಗಿ ನಿಂತು ಉದ್ದೇಶಿತ ವಸ್ತುವನ್ನು ಮುನ್ನಡೆಸಬೇಕಾಗುತ್ತದೆ. ನಾಟಕಕಾರ ಪ್ರತಿ ಹಂತದಲ್ಲಿಯೂ ಪಾತ್ರಗಳಾಡುವ

ಮಾತುಗಳನ್ನು ದುಡಿಸಿಕೊಳ್ಳುತ್ತ ಹೋಗುತ್ತಾನೆ. ಒಂದು ರೀತಿಯಲ್ಲಿ ಪಾತ್ರಗಳಾಡುವ ಪ್ರತಿಯೊಂದು ಮಾತಿಗೂ ಒಳಸ್ಪರ್ಧೆಯೊಂದು ಏರ್ಪಡುವ ರೀತಿಯಲ್ಲಿ ಸಂಭಾಷಣೆ ಹೆಣಿಕೆ ಇರುತ್ತದೆ. ನಾರಿನ ಪಾಚಿ ಹಾಕಿ ಹಗ್ಗವನ್ನು ಹುರಿಗೊಳಿಸುವ ರೀತಿಯಲ್ಲಿ ಸಂಭಾಷಣೆಗಳು ಮುಂದುವರಿಯುತ್ತವೆ.

ಪ್ರತಿಯೊಂದು ಪಾತ್ರಕ್ಕೂ ತನ್ನದೆಯಾದ ಭಾವನೆ, ಸಂದರ್ಭಗಳಿರುತ್ತವೆ. ಭಾವನೆಗಳು ತಾಕಲಾಟ ಮಾಡುವುದು ಸಂದರ್ಭ ಒದಗಿದಾಗ ಮಾತ್ರ. ಕೋಪ, ಕರುಣೆ, ಪ್ರೀತಿ ಮುಂತಾದ ಭಾವನೆಗಳು ಪಾತ್ರಗಳ ಒಡಲಲ್ಲಿ ಬೆಳೆಬೆಳೆದಂತೆ ಅವು ಸಂಭಾಷಣೆಯ ಮುಖಾಂತರ ಅಭಿವ್ಯಕ್ತಗೊಳ್ಳಬೇಕು. ಈ ಹೊತ್ತಿನಲ್ಲಿ ಸಂಭಾಷಣೆಯ ರಚನೆಗೆ ಶ್ರೇಷ್ಠ ನಾಟಕಕಾರ ಭಾಷೆಯನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾನೆ.

ಸಂಭಾಷಣೆ ವ್ಯಕ್ತಿಗತವಾಗಿರುವಂತೆಯೇ ಪ್ರಾದೇಶಿಕವಾಗಿಯೂ ಸೊಗಡನ್ನು ಹೊಂದಿರುತ್ತದೆ. ಕನ್ನಡದ ಮಟ್ಟಿಗೆ ನಮ್ಮ ಬಹಳಷ್ಟು ನಾಟಕಕಾರರು ಪ್ರಮುಖ ಪಾತ್ರಗಳಿಗೆ ಶಿಷ್ಟ ಭಾಷೆಯನ್ನು ಬಳಸಿಕೊಳ್ಳುವುದುಂಟು. ಪ್ರಾದೇಶಿಕ ಭಾಷೆಯನ್ನು ಬಳಸಿಕೊಳ್ಳುವ ಹಾಸ್ಯ ಪಾತ್ರಗಳ ಸಂಭಾಷಣೆಯನ್ನು ಕುರಿತು ಇಲ್ಲಿಯೇ ಎರಡು ಮಾತುಗಳನ್ನು ಹೆಚ್ಚಿಗೆ ಹೇಳಬೇಕೆನಿಸುತ್ತದೆ. ವೃತ್ತಿ ನಾಟಕಗಳನ್ನು ಬರೆಯಲು ವೃತ್ತಿ ನಾಟಕಕಾರ ತನ್ನ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಆಡುಭಾಷೆಯ ಸಂಭಾಷಣೆಗಳನ್ನೇ ಹೆಣೆದಿರುತ್ತಾನೆ. ಆದರೆ ಬೇರೊಂದು ಪ್ರದೇಶದಲ್ಲಿ ಆ ನಾಟಕ ಪ್ರದರ್ಶನಗೊಳ್ಳುವಾಗ ಪ್ರೇಕ್ಷಕರಿಗೆ ಸ್ಪಷ್ಟವಾಗಲೆಂದು ಪ್ರದರ್ಶನ ಗೊಳ್ಳುವ ಪ್ರದೇಶದ ಸಂಭಾಷಣೆಗೆ ಪ್ರಯತ್ನಿಸುವುದುಂಟು. ಇಂತಹದೊಂದು ಪ್ರಯತ್ನದಲ್ಲಿ ನಟ-ನಟಿಯರು ಎಷ್ಟರಮಟ್ಟಿಗೆ ಸಫಲರಾಗುತ್ತಾರೊ ಆ ಮಾತು ಬೇರೆ. ಈ ಸಫಲತೆ-ಅಸಫಲತೆಗಳು ನಟ-ನಟಿಯರ ಬುದ್ಧಿಶಕ್ತಿಯನ್ನು ಅವಲಂಬಿಸುತ್ತವೆ.

ಮುಂಚೆ ಹೇಳಿದಂತೆ ಪಾತ್ರಗಳ ಭಾವನೆಗಳನ್ನು ಸಂಭಾಷಣೆಯಲ್ಲಿ ಬಿಂಬಿಸುವಾಗ ಆಯಾ ಪಾತ್ರಗಳ ಸ್ಥಾನಮಾನ, ಸಂಸ್ಕಾರ, ಮುಂತಾದವುಗಳನ್ನು ಅವಲಂಬಿಸಿ ಸಂಭಾಷಣೆ ಮುಂವದುರಿಯುತ್ತವೆ. ಬಿ.ಆರ್. ಅರಿಷಿಣಗೋಡಿಯವರು ಸಂಭಾಷಣೆಯ ಈ ರಚನಾಕೌಶಲ್ಯವನ್ನು ಚೆನ್ನಾಗಿ ಬಲ್ಲವರು. ಒಂದು ಪಾತ್ರದ ಮಾತು ಎದುರು ಪಾತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದುವರಿಯಬೇಕೆನ್ನುವುದು ಬಿ.ಆರ್. ಅರಿಷಿಣಗೋಡಿಯವರ ಸಂಭಾಷಣೆಗಳ ಉದ್ದೇಶ. ಇದರ ಸ್ಪಷ್ಟೀಕರಣಕ್ಕಾಗಿ ಪಾತ್ರಗಳಾಡುವ ಸಂಭಾಷಣೆಯನ್ನು ಬೇರೆ ಬೇರೆ ನಾಟಕಗಳಿಂದ ಉದಾಹರಿಸಬಹುದು.

ಸಾಮಾನ್ಯವಾಗಿ ಬೇರೆ ಬೇರೆ ಸ್ವಭಾವದ ಪಾತ್ರಗಳು ಮುಖಾ-ಮುಖಿಯಾಗಿ ಸಂಭಾಷಿಸುವುದು ಹೀಗೆ

೧. ನಾಯಕ-ನಾಯಕಿ

೨. ನಾಯಕ-ಖಳನಾಯಕ

೩. ನಾಯಕಿ-ಖಳನಾಯಕ

೪. ನಾಯಕ-ಹಾಸ್ಯ ಪಾತ್ರ

೫. ಖಳನಾಯಕ-ಹಾಸ್ಯ ಪಾತ್ರ

ಅರಿಷಿಣಗೋಡಿಯವರ ನಾಟಕಗಳಿಂದ ಬೇರೆ ಬೇರೆ ಉದಾಹರಣೆಗಳನ್ನು ಕೊಡುವ ಮೂಲಕ ಸಂಭಾಷಣೆಯ ವಿಷಯವನ್ನು ವಿಸ್ತರಿಸಬಹುದು.

ನಾಯಕ-ನಾಯಕಿ

ನಾಯಕ-ನಾಯಕಿ ಪಾತ್ರಗಳು ಜೀವನದ, ಸಮಾಜದ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಸಾಮಾನ್ಯವಾಗಿ ಈ ಪಾತ್ರಗಳು ಶಿಷ್ಟ ಭಾಷೆಯನ್ನು ಬಳಸಿ ತಮ್ಮ ಧ್ಯೇಯಗಳನ್ನು ಇಡೇರಿಸಿಕೊಳ್ಳುವತ್ತ ಪ್ರಯತ್ನಿಸುತ್ತವೆ. ಲಂಚ ಸಾಮ್ರಾಜ್ಯ ನಾಟಕದಲ್ಲಿ ನಾಯಕ-ನಾಯಕಿಯರ ಸಂಭಾಷಣೆಯನ್ನು ಈ ರೀತಿ ನೋಡಬಹುದು.

ಶೀಲಾಧರಃ ಹೇಳು ಮೀನಾಕ್ಷಿ ಅದಕ್ಕೇನಂತೆ.

ಮೀನಾಕ್ಷಿಃ ಬಿ.ಎ.ವರೆಗೆ ಓದಿದ ನೀನು ನೇಯಲಿಕ್ಕೆ ಕುಳಿತದ್ದು ನೋಡಿ ನನಗೆ ಬಹಳೇ ವಿಷಾದವೆನಿಸಿದೆ. ನಮ್ಮ ತಂದೆಯವರಿಗೆ ಸಾಕಷ್ಟು ಜನರ ಪರಿಚಯವಿದೆ. ಸುತ್ತಲೂ ವರ್ಚಸ್ಸು ಇದೆ. ನೀನೊಮ್ಮೆ ಬಂದು ಅವರಿಗೆ ಭೆಟ್ಟಿಯಾದರೆ ಎಲ್ಲಿಯಾದರೊಂದು ನೌಕರಿ ವ್ಯವಸ್ಥೆ ಮಾಡುತ್ತಾರೆ. ಅದರಂತೆ ನಾನೂ ನಮ್ಮ ತಂದೆಯವರಿಗೆ ಹೇಳುತ್ತೇನೆ.

ಶೀಲಾಧರಃ ಬಡವರ ದುಃಖದಲ್ಲಿ ಭಾಗಿಯಾಗಲು ಪ್ರಪಂಚವಿನ್ನೂ ಸಿದ್ಧವಾಗಿಲ್ಲ ಮಿನಾಕ್ಷಿ, ಆ ಪುಣ್ಯಕಾಲ ಪ್ರಾಪ್ತವಾಗಬೇಕಾದರೆ ಈಗಿನ ಲಂಚ ಪ್ರಪಂಚ ಸಂಪೂರ್ಣ ಅಳಿದು ಹೋಗಬೇಕು.

ಮೀನಾಕ್ಷಿಃ ಅದೇನೆ ಇರಲಿ ಶಿಲಾಧರ ನೀನು ಬಂದು ಭೆಟ್ಟಿಯಾಗು ನಾನೂ ಹೇಳುತ್ತೇನೆ. ಒಟ್ಟಿನಲ್ಲಿ ನಿನಗೊಂದು ನೌಕರಿಯ ಸ್ಥಾನ ಪ್ರಾಪ್ತವಾದರೆ ಅದೇ ಒಂದು ಭಾಗ್ಯತಾನೆ.

ಶಿಲಾಧರಃ ಆ ಭಾಗ್ಯವನ್ನು ಪಡೆಯಲೆಂದೇ ಈಗ ೨-೩ ವರ್ಷಗಳಿಂದಲೂ ಪ್ರಯತ್ನಿಸಿ ಯಾವ ನೆಲೆ ಕಾಣದೆ ಕೊನಗೆ ನೇಕಾರನಾಗಿ ದುಡಿಯುತ್ತಾ ನಡೆದಿರುವೆ ಮಿನಾಕ್ಷಿಯವರೇ.

ಮೀನಾಕ್ಷಿಃ ಇನ್ನೂ ಮುಂದಾದರೂ ಇದೇ ಉದ್ಯೋಗದಲ್ಲಿಯೇ ಸಾಗುವ ನಿರ್ಧಾರ ಮಾಡಿದ್ದೀರಾ?

ಶಿಲಾಧರಃ ಏನೋ ಅಲ್ಲಲ್ಲಿ ಪ್ರಯತ್ನಪಡುತ್ತಲೇ ಇದ್ದೇನೆ. ಮೊನ್ನೆ ಸರಕಾರದವರು ಮೈಸೂರಿನಲ್ಲಿ ಹೊಸದಾಗಿ ಒಂದು ಟ್ರೇನಿಂಗ್ ಕೋರ್ಸ್ ಓಪನ್ ಮಾಡಿದ್ದಾರಂತೆ. ದೇಶದಲ್ಲಿ ನಡೆದ ಅನ್ಯಾಯ-ಅತ್ಯಾಚಾರಗಳ ವಿರುದ್ಧ ನಿಷ್ಠೆಯಿಂದ ಹೊರಾಡಬಯಸುವ ತರುಣರಿಗೆ ಟ್ರೇನಿಂಗ್ ಕೊಟ್ಟು ನೌಕರಿಗೆ ನೇಮಿಸಿಕೊಳ್ಳುತ್ತಾರೆ ಅಂತ ತಿಳಿಸಿದ್ದರು. ನಾನೂ ಅಪ್ಲಿಕೇಶನ್ ಹಾಕಿದ್ದೇನೆ. ಏನಾಗುವುದೋ ದೇವರ ಇಚ್ಛೆ.

ಮೀನಾಕ್ಷಿ: ಆಗಲಿ ಶಿಲಾಧರ ನಿನ್ನ ಪ್ರಯತ್ನಕ್ಕೆ ಬೇಗನೇ ಫಲ ದೊರೆಯಲೆಂದು ನಾನೂ ಆ ಭಗವಂತನಲ್ಲಿ ಬೇಡಿಕೊಳ್ಳುತ್ತೇನೆ.

ಇಲ್ಲಿ ಬದುಕನ್ನು ಕಟ್ಟಿಕೊಳ್ಳುವ ಶಿಲಾಧರನ ವಿಚಾರಗಳಿಗೆ ನಾಯಕಿಯಾದ ಮೀನಾಕ್ಷಿ ತನ್ನ ಸಲಹೆ ಸೂಚನೆಗಳನ್ನು ಕೊಡುವುದನ್ನು ಕಾಣುತ್ತೇವೆ.

'ಹೆಣ್ಣುಮಗಳು' ನಾಟಕದಲ್ಲಿಯ ನಾಯಕ ರವೀಂದ್ರ ಹಾಗೂ ನಾಯಕಿ ಸುಮಿತ್ರಾರ ನಡುವೆ ನಡೆದ ಸಂಭಾಷಣೆಯನ್ನು ಈ ರೀತಿ ನೋಡಬಹುದು.

ರವೀಂದ್ರ: ಯಾರು? ಓ ಸುಮಿತ್ರಾ ಮತ್ತೇನು ಸುಮಿತ್ರಾ ವಿಶೇಷ?

ಸುಮಿತ್ರಾ: ವಿಶೇಷವೇನಿಲ್ಲ ಸಾಹೇಬರೆ, ಅಂದು ತಾವೇ ನನ್ನನ್ನು ಮನೆಗೆ ಮುಟ್ಟಿಸಿ ಹೋದನಂತರ ತಮ್ಮ ಭೆಟ್ಟಿಯೇ ಇಲ್ಲದಾಗಿದೆ. ಅದೊಂದೆ ಒಂದು ಉಪಕಾರ ಮಾಡಿದ ನಂತರ ಮತ್ತೆ ನನ್ನ ಮುಖ ನೋಡಬಾರದೆಂದು ಮಾಡಿರುವಿರೋ ಏನೋ

ರವೀಂದ್ರ: ಹಾಗೆನಿಲ್ಲ ಸುಮಿತ್ರಾ, ಈಗ ೩-೪ ತಿಂಗಳಿಂದಲೂ ನನ್ನ ಡ್ಯೂಟಿಯಲ್ಲಿ ಪುರಸತ್ತೇ ಇಲ್ಲದಾಗಿದೆ. ಹೆಚ್ಚಿನ ಪ್ರಶಸ್ತಿ ಪಡೆಯಬೇಕಾದರೆ ನಾವು ಕಡ್ಡಾಯವಾಗಿ ಟ್ರೇನಿಂಗ್ ಹೊಂದಬೇಕು. ಅದಕ್ಕಾಗಿ ಹಗಲು ರಾತ್ರಿಯೆನ್ನದೇ ಅರಣ್ಯದಲ್ಲಿಯೇ ತಿರುಗುತ್ತಿದ್ದೇನೆ.

ಸುಮಿತ್ರಾ: ಅರಣ್ಯದಲ್ಲಿ ಡ್ಯೂಟಿ ಮಾಡುವದನ್ನು ಬಿಟ್ಟು ಇಂದೆಕೋ ಊರಲ್ಲಿ ಬಂದಿರುವಿರಲ್ಲಾ ಹಾಗಾದರೆ?

ರವೀಂದ್ರ: ಅಹುದು ಸುಮಿತ್ರಾ, ಇಂದು ನಾನು ಡ್ಯೂಟಿ ಮಾಡುತ್ತಿರುವ ಅರಣ್ಯ ಭಾಗದಲ್ಲಿ ಒಂದು ವಿಚಿತ್ರ ಘಟನೆ ನಡೆದು ಹೋಯಿತು. ಆ ಘಟನೆಯಿಂದ ದೊರೆತ ಈ ಹಣವನ್ನು ಬ್ಯಾಂಕಿಗೆ ಸೇರಿಸಬೇಕೆಂದು ಮೇಲಿನ ಸಾಹೇಬರಿಗೆ ಹೇಳಿ ಒಪ್ಪತ್ತಿನ ರಜೆ ಪಡೆದುಕೊಂಡು ಬಂದಿರುವೆ.

ಸುಮಿತ್ರಾ: ಚೆನ್ನಾಗಾಯಿತು ಸಾಹೇಬರೆ, ತಮಗೆ ದೊರೆತ ಈ ಒಪ್ಪತ್ತಿನ ರಜೆಯಲ್ಲಿಯೇ ನಮ್ಮ ಮನೆಗಷ್ಟು ಬಂದು ಹೋಗುವ ಅನುಗ್ರಹ ಮಾಡುವಿರಾ?

ರವೀಂದ್ರ: ಆಗಲಿ ಸುಮಿತ್ರಾ ಬರುತ್ತೇನೆ. ಮೇಲಾಗಿ ನನ್ನ ಹಳ್ಳಿಯಿಂದ ಇವರು ಬಂದಿದ್ದಾರೆ. ಅವರಿಗೆಲ್ಲಾ ವ್ಯವಸ್ಥೆಮಾಡಿ, ಸಮಯ ಸಿಕ್ಕರೆ ನಿಮ್ಮ ಮನೆಗೂ ಬಂದು ಹೋಗುತ್ತೇನೆ.

ಸುಮಿತ್ರಾ: ಸಮಯ ಸಿಕ್ಕರೆ ಬರುತ್ತೇನೆ ಎಂಬ ಸಂಶಯದ ಹೇಳಿಕೆ ಬೇಡ ಸಾಹೇಬರೆ ಇಂದು ನನ್ನ ಹುಟ್ಟುಹಬ್ಬ. ಹಿಂದೊಮ್ಮೆ ನನ್ನ ಜೀವ ಕಾಪಾಡಿದ ನೀವೇ ಇಲ್ಲದಿದ್ದರೆ ನನ್ನ ಹುಟ್ಟುಹಬ್ಬ ವ್ಯರ್ಥವಲ್ಲವೇ? ಅದಕ್ಕಾಗಿ ನೀವಿಂದು ನಮ್ಮ ಮನೆಗೆ ಬರಲೇಬೇಕು. ಜನ್ಮದಿನೋತ್ಸವದ ಮಂಗಲಕಾರ್ಯದಲ್ಲಿ ಭಾಗವಹಿಸಿ ತಮ್ಮ ಕೃಪಾಶೀರ್ವಾದ ನೀಡಬೇಕು.

ರವೀಂದ್ರ: ಆಗಲಿ ಸುಮಿತ್ರಾ ಬರುತ್ತೇನೆ.

ಸುಮಿತ್ರಾ: ನೋಡಿ ಸಧ್ಯ ನಮ್ಮ ತಂದೆಯವರು ಸಾಮಾನು ತರಲಿಕ್ಕೆಂದು ಮಾರ್ಕೆಟಿಗೆ ಹೋಗಿದ್ದಾರೆ. ಅವರು ಬಂದ ಕೂಡಲೇ ನಿಮ್ಮನ್ನು ಕರೆಯಲಿಕ್ಕೆ ಕಳಿಸುತ್ತೇನೆ.

ರವೀಂದ್ರ: ಛೆ ಛೇ ಮತ್ತೇಕೆ ಕರೆಯಲಿಕ್ಕೆ ಕಳಿಸುವಿರಿ. ಸುಮಿತ್ರಾ ನಾನೇ ಬರುತ್ತೇನೆ ಆಯಿತಿಲ್ಲೋ.

ಸುಮಿತ್ರಾ: ಸಾಹೇಬರೇ ಇಂದಿನ ಹಬ್ಬಕ್ಕೆ ನೀವೊಬ್ಬರೇ ಬರಬೇಡಿ ಮತ್ತೆ ನಿಮ್ಮ ಹಳ್ಳಿಯಿಂದ ಬಂದ ಇವರನ್ನೂ ಕರೆದುಕೊಂಡು ಬನ್ನಿ.

ರವೀಂದ್ರ: ಆಗಲಿ ಸುಮಿತ್ರಾ ಎಲ್ಲರನ್ನೂ ಕರೆದುಕೊಂಡು ಬಂದು ನಿಮ್ಮ ಮನೆಯಲ್ಲಿಯೇ ಊಟ ಮಾಡುತ್ತೇನೆ ಆಯಿತಿಲ್ಲೋ.

'ಗರೀಬಿ ಹಟಾವೊ' ನಾಟಕದಲ್ಲಿ ನಾಯಕ ಮತ್ತು ನಾಯಕಿಯರ ನಡುವೆ ನಡೆಯುವ ಸಂವಾದ ಹೀಗಿದೆ:

ರಾಜೇಶ: ನಮಸ್ಕಾರ ಸರೋಜಾದೇವಿ.

ಸರೋಜ: ಯಾಕೆ ರಾಜೇಶ ನಮ್ಮೊಂದಿಗೆ ಮಾತನಾಡಬಾರದೆಂದು ಹಟವೇ.

ರಾಜೇಶ: ಹಾಗೇನಿಲ್ಲ ಸರೋಜಾದೇವಿ. ಇಂದು ಬೆಳಗಿನಿಂದ ಮನಸ್ಸಿಗೆಕೊ ಸಮಾಧಾನವಿರಲಿಲ್ಲ. ಹಾಗೆ ತಿರುಗಾಡುತ್ತಾ ನಡೆದಿದ್ದೆ, ತಾವು ಊರಲ್ಲಿ ಇಲ್ಲ ಅಂತ ಕೇಳಿದ್ದೆ

ಸರೋಜ: ಹೌದು ರಾಜೇಶ, ನನಗೂ ನಮ್ಮ ಅಣ್ಣನಿಗೂ ಪೂರ್ವ ಪಶ್ಚಿಮ ಎಂಬ ಮಾತು ನಿಮಗೆ ತಿಳಿದೇ ಇದೆ. ಮೊನ್ನೆ ನಡೆದ ಸಂಪು, ಸತ್ಯಾಗ್ರಹದ ವಿಷಯ ನನಗೊಂದು ನುಂಗಲಾರದ ತುತ್ತಾಯಿತು. ಯಾವನೇ ಕೂಲಿಕಾರ ನನ್ನೆಡೆಗೆ ಅರ್ಜಿಕೆಗಾಗಿ ಬರಬೇಕು. ನಾನವರ ಮನೆಗೆ ಹೋಗಬೇಕು. ಇವಳದೇ ಅವರಿಗೆ ಪುರಸ್ಕಾರ ಅಂತ ನಮ್ಮಣ್ಣನಿಂದ ನನಗೆ ಅಪವಾದ ಬರಬೇಕು. ಈ ಗಲಾಟೆಯಲ್ಲಿ ನಾನಿಲ್ಲಿ ಇರುವುದೇ ಬೇಡಾ ಅಂತ. ಊರಿಂದ ದೂರಾಗಬೇಕಾಯ್ತು. ಈಗ ಸಂಪು ಮುಕ್ತಾಯವಾಗಿದೆ. ಎಂದಿನಂತೆ ಕಾರ್ಮಿಕರು ಮಿಲ್ಲಿನ ಕೆಲಸಕ್ಕೆ ಹಾಜರಾಗಿದ್ದಾರೆ ಅಂತ ಪೇಪರಿನಲ್ಲಿ ಓದಿ, ನಿನ್ನೆ ರಾತ್ರಿಯೇ ಮುಂಬೈಯಿಂದ ಬಂದೆ. ಈಗ ಇಲ್ಲಿಯ ಹಳ್ಳಿಯಲ್ಲಿ ಒಂದು ಮಗುವಿಗೆ ಕಾಯಿಲೆ ಅಂತ ಕರೆಯಲಿಕ್ಕೆ ಬಂದಿದ್ದರು. ನೀನಿಂದು ಮಿಲ್ಲಿನ ಕೆಲಸಕ್ಕೆ ಹೋಗಲಿಲ್ಲವೆ, ಕಾರ್ಮಿಕರ ಎಲ್ಲ ಬೇಡಿಕೆಗಳಿಗೂ ಪರಿಹಾರ ನೀಡಲಿಲ್ಲವೆಂದು ಕೇಳಿದ್ದೇನೆ.

ರಾಜೇಶ: ಅದಾವುದು ನನಗೆ ಗೊತ್ತಿಲ್ಲ. ಸರೋಜಾದೇವಿ ನನಗೂ ಮಿಲ್ಲಿನ ಕೆಲಸಕ್ಕೆ ಹಾಜರಾಗಲಿಕ್ಕೆ ಆರ್ಡರ್ ಬಂದಿತ್ತು. ನನಗೆ ಬೇಡವೆನಿಸಿ ನಾನೇ ಬಿಟ್ಟುಬಿಟ್ಟೆ.

ಸರೋಜ: ರಾಜೇಶ ಒಡೆಯರಲ್ಲಿ ಕಾರ್ಮಿಕರಲ್ಲಿ ತಿಕ್ಕಾಟ ನಡೆಯವುದು ಸ್ವಾಭಾವಿಕ. ಅಲ್ಲದೇ ಸಂಪು, ಸತ್ಯಾಗ್ರಹಗಳ ವಿಷಯ ಹೊಸದೇನಲ್ಲ. ಅವನ್ನೇ ಮನಸ್ಸಿನಲ್ಲಿ ಹಿಡಿದು ನೌಕರಿ ಬಿಟ್ಟು ಕುಳಿತರೆ ನಿನ್ನ ಉಪಜೀವನಕ್ಕೆ ಮಾರ್ಗ ಬೇಡವೆ?

ರಾಜೇಶ: ಉಪ ಜೀವನದ ಮಾರ್ಗವೆಂದು ಒಡೆಯರಿಂದ ದೊರೆಯುವ ಬಡಿತ, ಹೊಡೆತಗಳನ್ನು ತಿಂದು ಅಲ್ಲಿರುವುದು ನನಗೆ ಬೇಡವಾಗಿದೆ ಸರೋಜಾದೇವಿ. ಅವರೇನೆ ಪರಿಹಾರ ನೀಡಿ ನಮ್ಮನ್ನು ಕರೆದರೂ ಒಮ್ಮೆ ರಕ್ತ ಹೀರಿ ರುಚಿಕಂಡ ನಾಯಿ ಮತ್ತೊಮ್ಮೆ ಕಚ್ಚದೇ ಇರಲಾರದು. ಮನಸ್ಸು ಮುರಿದು ಮಾಲಿಕರ ಬಗ್ಗೆ ಇರಬೇಕಾದ ನಂಬಿಕೆ, ಆತ್ಮೀಯತೆಯ ಅಂಕುರವೇ ಅಳಿದು ಹೋದಾಗ ಇನ್ನಾವ ಭಾವನೆಯಿಂದ ನಾವಲ್ಲಿ ದುಡಿಯಬೇಕು. ಕೇವಲ ಕಾಯಿದೆ ಕಾನೂನಿನ ಆಧಾರದ ಮೇಲೆ ನಮ್ಮ ಬೇಡಿಕೆ, ನೀಡಿಕೆ ನೆರವೇರುತ್ತವೆ ವಿನಃ ದುಡಿಸಿಕೊಳ್ಳುವವರ ಹೃದಯದಲ್ಲಿ ಸಹೃದಯತೆ, ದಯಾಳುತನ, ಮಾನವಿಯ ಪ್ರಜ್ಞೆ ಮೂಡದ ಹೊರತು ಬಡವರ ಬಾಳು ಎಂದೂ ಉದ್ಧಾರವಾಗಲಾರದು.

ಸರೋಜ: ನೀನೆನ್ನುವುದೆಲ್ಲಾ ನಿಜ ರಾಜೇಶ. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ನೀನೇನು ಮಾಡುವೆ. ನಿನ್ನ ಹಾಗೂ ನಿನ್ನ ತಂಗಿಯ ಹೊಟ್ಟೆ ಬಟ್ಟೆಯ ಸಮಸ್ಯೆಗೆ ಯಾವ ಪರಿಹಾರ.

ರಾಜೇಶ: ಈಗಂತೂ ಹೇಗೋ ನಡೆದಿದೆ. ನನ್ನದಾಗಿದ್ದ ಇನ್ನೊಂದು ಮುರುಕು ಮನೆ ಇದೆ. ಅದೊಂದನ್ನು ಮಾರಿ ದೈವ ಸೆಳೆದತ್ತ ನನ್ನ ದಾರಿ ಹುಡುಕಿಕೊಳ್ಳುತ್ತೇನೆ.

ಲಂಚ ಸಾಮ್ರಾಜ್ಯದ ನಾಯಕ-ನಾಯಕಿಯರ ಸಂಭಾಷಣೆಯಲ್ಲಿ ತೋರುವ ನಿರುದ್ಯೋಗ ಸಮಸ್ಯೆ ಯಿಂದಾಗಿ ಭಾಷೆಗೊಂದು ಗಂಭೀರತೆ ಪ್ರಾಪ್ತವಾಗಿದೆ. ನಿರಾಶೆ, ವಿಷಾದಗಳಿಲ್ಲಿ ಒಡೆದು ತೋರುವಂತೆ ಭಾಷಾ ಬಳಕೆಯಿದೆ. ಹೆಣ್ಣುಮಗಳು ನಾಟಕದ ಉದಾಹರಣೆಯಲ್ಲಿ ನಾಯಕ ನಾಯಕಿಗೆ ಭೆಟ್ಟಿಯಾಗದೆ ಇರುವುದರಿಂದ ಅವಳು ಆಕ್ಷೇಪಿಸುತ್ತಾಳೆ. ಈ ಆಕ್ಷೇಪಣೆಯ ಎಳೆಯಲ್ಲಿಯೇ ಸಂಭಾಷಣೆ ಮುಂದು ವರಿಯುತ್ತದೆ. ನಾಯಕ-ನಾಯಕಿಯರು ಸದಾ ಕಾಲ ಗಂಭೀರವಾಗಿಯೇ ಮಾತನಾಡಬೇಕು ಸಾರ್ವಕಾಲಿಕ ಮೌಲ್ಯಗಳೇ ಅಲ್ಲಿರಬೇಕೆಂದೇನಿಲ್ಲ. ಸಣ್ಣ ಸಣ್ಣ ಭಾವಗಳಿಗೂ ಕೂಡಾ ಹೇಗೆ ಮಾತುಕತೆಯನ್ನು ದೀರ್ಘವಾಗಿಸಬಹುದು ಎಂಬುದಕ್ಕಿದು ಒಳ್ಳೆಯ ಉದಾಹರಣೆ. ಸಾಮಾನ್ಯ ಮಾತಿನ ನಡುವೆಯೂ ವ್ಯಕ್ತಿಗತ ನಿಲುವನ್ನು ಸ್ಥಿರೀಕರಿಸುವ ರೀತಿಗೆ 'ಗರೀಬಿ ಹಟಾವೊ'ದ ಮೂರನೆಯ ಸಂಭಾಷಣೆ ಉದಾಹರಣೆಯಾಗಿದೆ.

ಖಳನಾಯಕ-ಹಾಸ್ಯ ಪಾತ್ರ

ಹೆಣ್ಣುಮಗಳು ನಾಟಕದಲ್ಲಿ ಖಳನಾಯಕ ವಿನಾಯಕ ಕಾಮಾಕ್ಷಿಯ ಕುಟುಂಬದಲ್ಲಿ ತಲೆಹಾಕಿ ತನ್ನ ಆಸೆ-ಆಕಾಂಕ್ಷೆಗಳನ್ನು ಇಡೇರಿಸಿಕೊಳ್ಳುತ್ತ ಹಾಸ್ಯ ಪಾತ್ರದಾರಿಯಾದ ಗೂರನಿಗೆ ಭೆಟ್ಟಿಯಾಗುವನು. ಆಗ ವಿನಾಯಕ ಗೂರನ ನಡುವೆ ನಡೆಯುವ ಸಂವಾದವನ್ನು ಈ ರೀತಿ ನೋಡಬಹುದು.

ವಿನಾಯಕ: ಏನಪ್ಪಾ ಗೂರ, ಎಷ್ಟು ದೊಡ್ಡದಾತಲ್ಲ ನಿನ್ನ ನಮಸ್ಕಾರ

ಗೂರ: ಭಾಳ ದಿವ್ಸ ತಮ್ಮ ಭೆಟ್ಟಿಯಾಗಿದ್ದಲ್ಲರ್ರಿ ಅದಕ ಹಿಂದ್ಲುದ್ದು ಮುಂದ್ಲುದ್ದು ಎಲ್ಲಾ ಕೂಡ್ಸೆ ಒಮ್ಮೆಗೆ ದೊಡ್ಡ ನಮಸ್ಕಾರ ಮಾಡಿದೇನರಿ.

ವಿನಾಯಕ: ಮತ್ತೇನಪ್ಪಾ ಗೂರಾ, ವಿಶೇಷ ಸಮಾಚಾರ?

ಗೂರ: ಎಲ್ಲಾ ನಿಮ್ಮದರಿಯಪ್ಪ ವಿಚಾರ, ಮತ್ತೇನ್ರಿ ಎಲ್ಲಾ ಬೇಸ್ ನಡೆದೈತರಿ ನಿಮ್ಮ ವ್ಯಾಪಾರ.

ವಿನಾಯಕ: ಏನು ನಡೆಯೊದಪ್ಪಾ ಗೂರಾ, ಪರರಿಗೆ ಸಹಾಯ ಮಾಡಲೆಂದು ನಡೆದ ನಮ್ಮಂಥವರಿಗೆ ಅಪವಾದದ ನುಡಿಗಳೇ ಕೇಳ ಬರುತ್ತವೆ. ಸಮಾಜದಿಂದ.

ಗೂರ: ಹೌದಪೊಯಪ್ಪಾ, ದೇವರಂಥ ಮನಸೇರ ನೀವು, ನಿಮ್ಮಂಥವರಿಗೆ ಸುಮಸುಮ್ನ ಅಂದ ಪಾಪ ಕಟಕೊಂತಾರಯಪ್ಪಾ..... ನಿಮಗ ಅವ್ವಾರು?

ವಿನಾಯಕ: ಮನೆಗೆ ಬಾ ಅಂತ ಹೇಳಿರಬೇಕಲ್ಲವೇ?

ಗೂರ: ಹೂನ್ರಿ ಆದೇನ ಈಗ ೫-೬ ದಿವ್ಸದಿಂದ ನೀವು ಮನಿಗೆ ಬಂದಿಲ್ಲಂತ ಬಾಳ ವ್ಯಸನ ಆಗೇತರಿಯಪ್ಪ. ಅವ್ವಗ ೩-೪ ದಿವ್ಸಾತ ಕೂಳಿಲ್ಲ-ನೀರಿಲ್ಲಾ, ನಿಮ್ಮ ದಾರೀನ ಕಾಯ್ಕೊಂತ ಕುಂತ ಬಿಟ್ಟಾರ...... ಯಪ್ಪಾ... ಹ, ಹೇ ನೀವು ಬಹಳ ಪುಣ್ಯವಂತರ್ರೀ, ಏನ ದುಡಿಯುವಂಗಿಲ್ಲ, ದೇಕುವಂಗಿಲ್ಲ, ರಂಡೆ ಮುಂಡೇರ ಗಂಟಿನಮ್ಯಾಗ ಯಲ್ಲಾ ಚೈನಿ ನಡೆದ ಬಿಟ್ಟೈತಿ.

ವಿನಾಯಕ: ಲೇ ಗೂರಾ ಯಾರೋ ಮಗನ, ಮಂದಿ ಗಂಟಿನಮ್ಯಾಗ ಚೈನಿ ಮಾಡುವುದು, ಮೂರ್ಖ ಜನ ಮನಬಂದಂತೆ ಬೊಗಳುತ್ತಾರೆ ಅಂತ ನೀನು ಅವರಂತೆ ಬಾರಿ ಸುತ್ತಿಯೇನು? ಇದೇ ಕೇಳಿದ್ದು ಇನ್ನೊಮ್ಮೆ ಈ ಮಾತು ನಿನ್ನಿಂದ ಹೊರಬಿದ್ದರೆ.

ಗೂರ: ಅಲೆಲೆ ನನ್ನ ಮ್ಯಾಗ ಯಾಕರಿ ಸಿಟ್ಟಿಗಿ ಬರ್ತೀರಿ ಜನರು ಹಾಗೂ ಹಿಂಗೂ ಕೂಡೇ ಅಂತಾರ್ಯಪಾ ಅಂತ ಹೇಳಿದೆ.

ವಿನಾಯಕ: ಹೂ ಅನ್ನುತ್ತಾರೆ ಜನ, ಸಿಗಲಾರದ ಹಣ್ಣಿಗೆ ಹುಳಿಯೆಂದು ಬೊಗಳುವ ನರಿಕುಲದ ಮಾನವರೆ ಹೆಚ್ಚಾಗಿದ್ದಾರೆ ಸಮಾಜದಲ್ಲಿ. ತಮ್ಮ ಮನೆಯಲ್ಲಿ ಸೂಳೆತನ ನಡೆದರೂ ಪರಮನೆಯ ಗರತಿಯರನ್ನು ನಿಂದಿಸಿ ನುಡಿಯುವ ಸಮಾಜಕ್ಕೆ ನಾನು ಹೆದರಲಾರೆ ಗೂರಾ.

ಗೂರ: (ಸ್ವಗತ) ಭಪ್ಪರೇ ಮುಡದಾರ, ಇವನ ಮಾತಿಗೆ ಹಚ್ಚೆತರಿ ಮಸದಾಲಿ ಬಾಣ. ಹೆಚ್ಚ ಗೆಳೆತನ ಬೆಳೆಸಿದರ ಕೂಡಸ್ತಾನ್ರಿ ಇವ ಸುಂಬಳ ಖಾರಾ...... ಇರ್ಲಿ ಹೋಗಲೇ ಜೋಕುಮಾರಾ....... (ಹೋಗುವನು)

ಖಳನಾಯಕ ಹಾಸ್ಯ ಪಾತ್ರದೆದುರು ಮಾತನಾಡುತ್ತಿರುವುದರಿಂದ ಆಡುಮಾತಿನ ಜಾಡಿನಲ್ಲಿಯೇ ಅವನ ಮಾತು ಇದೆ. ಹಾಸ್ಯ ಪಾತ್ರದ್ದು ಶುದ್ಧ ಆಡುಮಾತು. ಇಲ್ಲಿ ಖಳನಾಯಕನ ಸ್ವಭಾವವನ್ನು ಗೂರನ ವ್ಯಂಗ್ಯಾರ್ಥದ ಮಾತುಗಳಿಂದ ತಿಳಿದುಕೊಳ್ಳಬಹುದು.

'ಗರೀಬಿ ಹಟಾವೊ' ನಾಟಕದಲ್ಲಿಯ ಖಳನಾಯಕ ರುದ್ರಗೌಡರ ದಬ್ಬಾಳಿಕೆಯನ್ನು ಸಿದ್ಧನ ಪಾತ್ರದ ಮುಖಾಂತರ ನಾಟಕಕಾರರು ಪ್ರತಿಭಟಿಸುವುದನ್ನು ರುದ್ರಗೌಡ-ಸಿದ್ಧನ ಸಂವಾದದಲ್ಲಿ ಈ ರೀತಿ ಕಾಣುತ್ತೇವೆ.

ರುದ್ರಗೌಡ: (ತಿರುಗಿ, ಸಿದ್ಧನನ್ನು ದುರುಗುಟ್ಟಿ ನೋಡಿ) ಹೂಂ. ಈ ಮಗಾ ಒಬ್ಬ ಬಂದ್ನಲ್ಲಾ ಆ ಶಿವ್ಯಾನ್ ಯಾಕ ಹಿಡಿದ ತರಲಿಲ್ಲಾ.

ಸಿದ್ಧ: ಏನೂ ಮಾಡಲಾರದಾಂವ ಆ ಶಿವಣ್ಣ ಯಾಕ ಬೇಕು ಗೌಡ್ರ? ನಿಮ್ಮ ಹುಡುಗ ಆಳಮಗಾ ತಿಮ್ಮನಿಗೆ ಹೊಡೆದಾವ ನಾನು, ಅದಕ್ಕ ನಾನು ಬಂದೆ.

ರುದ್ರಗೌಡ: ಹೌದೇನು? ಹಿಡಿ ಕಾಳಿಂಗ ಬೆನ್ನಬಗ್ಗಿಸಿ ದುಡಿಯೋ ದುಗಾಣಿ ನನ ಮಗನ, ನನ್ನೆದರ ಎದಿಯುಬ್ಬಿಸಿ ನಿಂತು, ಇಷ್ಟೊಂದು ಮಾತಾಡೋ ಸೊಕ್ಕ ಬಂತೆನೋ ನಿನಗ; ಗೌರಿ ಹೊಲದ ಕಾಳಜಿ ಮಾಡಲಿಕ್ಕೆ ನಿನ್ಯಾರೋ ಮಗನ!

ಸಿದ್ಧ: ನಾನ್ಯಾರರ ಇರ್ಲಿ ಗೌಡ್ರ! ಅದರ ವಿಷಯ ಏನು ಅನ್ನುವುದನ್ನು ಮೊದ್ಲ ಪೂರ್ತಿ ತಿಳಿಕೊಳ್ರೀ. ನನ್ನ ತಪ್ಪಂತ ಆದ್ರ ನೀವು ಬೇಕಾದ್ರ ಶಿಕ್ಷಾ ಕೊಡ್ರಿ ಅನುಭೋಗಿಸ್ತೇನಿ, ನಾನು ಕೂಲಿ ಕೆಲಸ ಮುಗಿಸಿ ಗೌರಿ ಹೊಲದಾಗ ಬಂದು, ಶಿವಣ್ಣನ ಕೂಡ ಮಾತಾಡ್ತಾ ನಿಂತಿದ್ದೆ. ಅಷ್ಟರಾಗ ನಿಮ್ಮ ಆರೇಳು ಎತ್ತುಗೋಳು ಬಂದು, ಒಮ್ಮೆಗೆ ಹೊಲದಾಗ ಹೊಕ್ಕು ಬೆಳಿ ತಿನ್ನಾಕ ನಿಂತು. ಹೊಡಕೊರ್ರೆಪ ಯಾರದರೀ; ಅಂತ ಕೂಗಿದರ ಎತ್ತಿನ ಹಿಂದ ಯಾರೂ ಇರ್ಲಿಲ್ಲ. ಯಾರೊಂದಿಗೂ ಮಾತಾಡುತ್ತ ನಿಂತಿದ್ದ ತಿಮ್ಮ ಆಮ್ಯಾಲ ಬಂದ. ಎತಗೋಳ ಹಿಂದ ಇರಬೇಕಿಲ್ಲೋ, ಹಿಂಗಾದರ ಬಡವರ ಬದುಕೀನ ಗತಿ ಏನು ಅಂತ ನಾನಂದ್ರ, ನನಗ ಹಗರ ಶಬ್ದ ಬಳಸಾಕ ನಿಂತ ತಿಮ್ಮ.

ರುದ್ರಗೌಡ: ಅಂದ್ರ ನೀನು ಎತಗೋಳಿಗೆ, ತಿಮ್ಮಗ ಕೂಡೇ ಬಡದ ಕಳಿಸಿದೇನ ಮಗನ.

ಸಿದ್ಧ: ಎತಗೋಳಿಗಂತೂ ನಾ ಹೊಡೆದಿಲ್ಲ ಗೌಡ್ರ, ನಿಮ್ಮೆದುರು ತಿಮ್ಮ ಸುಳ್ಳ ಹೇಳಿರಬೇಕು. ತಪ್ಪು ನನ್ನದ ಆಗಿದ್ದರೂ, ನನಗ ಎದರ ಮಾತಾಡಿದ್ನಲ್ಲಾ.... ಅಂತ ಸಿಟ್ಟುಬಂತು, ತಿಮ್ಮನಿಗೆ ಮಾತ್ರ ಎರಡೇಟು ಹೊಡದದ್ದು ನಿಜಾ.

ರುದ್ರಗೌಡ: ಅವರ ಹೊಲಾ ಹಾಳಾದರ ನಿಂದೇನ ಹೋಗತಿತ್ತೊ ಮಗನ ಗಂಟು? ಅವರ್ನ ಮೇಲಗಟ್ಟಿ ನನ್ನ ಆಳಗಿ ಹೊಡಿಯಾಕ ನೀನೇನ ಸಂಬಂಧ?

ಸಿದ್ಧ: ಸಂಬಂಧ ಇರ್ಲಿ ಇರ್ದಿರಲಿ ಗೌಡ್ರ, ನೆರೆ-ಹೊರಿಯವರ ಬದಕ ಹಾಳಾಗ್ತಾ ಇರುವಾಗ, ಅದನ ನೋಡಿನೂ ಕಣ್ಮುಚ್ಚಿಕೊಂಡ ಸುಮ್ಮಿರಬೇಕಂತ ಯಾರೂ ಹೇಳುವುದಿಲ್ಲ. ನಮ್ಮ ಬದುಕಿನಂಗ ಇನ್ನೊಬ್ಬರ ಬದುಕು ಇರುತ್ತ ಅನ್ನೊ ತಿಳುವಳಿಕೆ ಇದ್ದವರು ಯಾರು ಆ ರೀತಿ ಮಾಡೂದಿಲ್ಲ. ನಾಳಿಂದ ಈ ರೀತಿ ಮಾಡಬೇಡಪ್ಪಾ, ಎತ್ತಿನ ಹಿಂದ ಇರ್ರಿ ಅಂತ ಹೇಳಿದರ ನಮ್ಮ ಎತ್ತು ಅಡ್ಡಾಡುದಾರ್‍ಯಾಗ, ಹೊಲ ಯಾಕ ಇಟ್ಟಿರೋ ಮಕ್ಕಳ ಕಿತಕೊಂಡ ಬ್ಯಾರೆ ಕಡೆ ಒಯ್ಯಿರಿ ಅಂದಾ ನಿಮ್ಮ ತಿಮ್ಮ.

ರುದ್ರಗೌಡ: ಲೇ.... ನನ್ನ ಮನೆಯಲ್ಲಿಯೇ ನಿಂತು, ನನ್ನ ಮೇಲೇ ಬಾಯಿಗೆ ಬಂದಂಗ ಮಾತಾಡ್ತಿಯಾ ಹಲ್ಯಾನನ ಮಗನ.

ಸಿದ್ಧ: ಏನ ಮಾಡಬೇಕೊ ಅನ್ನೂದನ್ನ ಇಷ್ಟೊತ್ತಿಗೆ ಮಾಡಿ ಮುಗಿಸಿ ಬಿಡ್ತಿದ್ದ ಗೌಡ್ರ, ಅದರ ನಾನೂ ಕೆಲವೊಂದು ದಿನ ಈ ಮನಿ ಉಪ್ಪುಂಡು ಬೆಳೆದಾವಂತ ಉಕ್ಕಿ ಬರೋ ಸಿಟ್ಟ ನುಂಗಿಕೊಂಡು, ನಿನಮ್ಯಾಲ ಕೈಮಾಡಬಾರದು ಅಂತ ತಡದಿನ್ರಿ.

ಖಳನಾಯಕನ ಮಾತಿನಲ್ಲಿ ಒರಟುತನವಿದೆ. ಸಿದ್ಧ ಸಾಮಾನ್ಯನಾಗಿರುವುದರಿಂದ ಸಿಟ್ಟು ಬಂದರೂ ಶಬ್ದದ ಬಳಕೆಯಲ್ಲಿ ಸಂಯಮವಿದೆ. ವರ್ಗಮೂಲ ಅಂತರದೊಂದಿಗೆ ಉಂಟಾಗುವ ಭಾಷಿಕ ಏರುಪೇರು ಇಲ್ಲಿದೆ.

ನಾಯಕ-ಹಾಸ್ಯ ಪಾತ್ರ

'ಹೆಣ್ಣುಮಗಳು' ನಾಟಕದಲ್ಲಿ ನಾಯಕನಾದ ರವೀಂದ್ರ, ತಾಯಿ ಕಾಮಾಕ್ಷಿಯ ಅನೈತಿಕತೆಯನ್ನು ಕಣ್ಣಾರೆ ಕಂಡು ಅವಳನ್ನು ಮನೆಬಿಟ್ಟು ಹೊರಗಟ್ಟುತ್ತಾನೆ. ಆಗ ರವೀಂದ್ರ ಹಾಗೂ ಹಾಸ್ಯ ಪಾತ್ರಧಾರಿಯಾದ ಗೂರನ ನಡುವೆ ನಡೆಯುವ ಸಂವಾದ ಈ ರೀತಿ ಇದೆ.

ರವೀಂದ್ರ: ಇನ್ನು ಅವಳ ಹೆಸರೇತ್ತಬೇಡ ಗೂರಣ್ಣಾ, ಮನೆಯ ಮರ್ಯಾದೆಯನ್ನು ಮಸಣಕ್ಕೆ ಸೇರಿಸಿ ಸತ್ತು ಹೋದಳು ನನ್ನ ತಾಯಿ.

ಗೂರ: ಅಲೆಲೆ, ಇದೇನ ಹೇಳ್ತಿರಿಯಪ್ಪಾ.

ರವೀಂದ್ರ: ಪ್ರತ್ಯಕ್ಷ ಕಂಡ ತಾಯಿಯ ಬಂಢತನವನ್ನೇ ಹೇಳುತ್ತಿರುವೆನಪ್ಪಾ. ಇದುವರೆಗೆ ನನ್ನ ತಾಯಿ ಹಾಗೂ ಈ ಮನೆಯ ಒಡತಿಯಾಗಿದ್ದ ಕಾಮಾಕ್ಷಿ ತನ್ನ ಗಂಡನ ಗೆಳೆಯನಾದ ವಿನಾಯಕನಲ್ಲಿ ಬೆರೆತುಕೊಂಡು..... ಬೀದಿಯ ಬಸವಿಯಾಗಿ ಹೋದಳು.

ಗೂರ: ವಿನಾಯಕಪ್ಪಾ...... ಇದನ್ನೇನ ಹೇಳ್ತಿರಿ ನೀವು.

ರವೀಂದ್ರ: ನಿಜವಾದ ಸಂಗತಿಯನ್ನೇ ಹೇಳುತ್ತಿರುವೆ. ಗೂರಣ್ಣ, ಪವಿತ್ರವಾದ ನಮ್ಮ ಬಾಳಿನಲ್ಲಿ ಹಾಲಾಹಲ ಕೂಡ್ಡಿದ ತಾಯಿಯ ಹೆಸರೂ ಬೇಡ, ಈ ಮನೆಯೂ ಬೇಡ, ಊರು ಬೇಡ, ನನಗಾವುದು ಬೇಡಾಗಿದೆ.

ಗೂರ: ಅಲೇ ಇದೇನ್ರಿ ಹೊಂಟ್ರಿ, ಆಗಲೇ ಅಪ್ಪಾರನ್ನೂ ಹೊರ ಹಾಕಿದಿರಿ. ಇಲ್ಲಿದ್ದ ಆಸ್ತಿ-ಪಾಸ್ತಿ ಗತಿಯೇನು?

ರವೀಂದ್ರ: ಆಸ್ತಿಯ ಆಸೆಯಿಂದಲೇ ಮಾನವ ಇಲ್ಲಸಲ್ಲದ ಕೆಲ್ಸಕ್ಕೆ ಕೈ ಹಾಕುತ್ತಾನೆ.

ಗೂರ: ಹಾಗಾದರೆ ನಾನಾವ ದಡಕ್ಕೆ ಸೇರಬೇಕು.

ರವೀಂದ್ರ: ನಾನೇ ಈಗ ಮನೆಯಿಂದ ದೂರಾಗಿ ನಡೆದಿರುವೆ. ಹೆಚ್ಚಿನ ವಿಚಾರ ಮಾಡುತ್ತಾ ನಿಲ್ಲುವ ತಾಳ್ಮೆ ನನಗಿಲ್ಲ.

ಗೂರ: ಹೌದ್ರಿಯಪ್ಪಾ ಕಾಮವ್ವರನ್ನು ಯಾವಾಗ ದಬ್ಬಿ ಬಂದಿರಿ.

ರವೀಂದ್ರ: ಇದೇ ತಾನೆ ಹೊರದಬ್ಬಿ ಬಂದಿದ್ದೇನೆ. ಮರಳಿ ನಿನ್ನ ದಾರಿಯನ್ನು ನೀನು ಹಿಡಿ.

ಗೂರ: ಅಲ್ರಿ ರವೀಂದ್ರಪ್ಪಾರ, ಸೋಮಪ್ಪನ ಮನಿಗೆ ಹೊದ್ನಂತ ಸಿಟಾಗಬೇಡ್ರಿಯಪ್ಪಾ. ನನ್ನ ಲಗ್ನದನ್ನ ಸಾಲ ತಿರೂತನಕ ಸೋಮಪ್ಪ ಮನಿ ಬಿಡದಂಗ ಐತರಿ ನನ್ನ ಬಾಳೇ. ನಾ ಇನ್ನ ಬರ್ತೀನ್ರಿ ನಮಸ್ಕಾರ್ರಿ.

ರವೀಂದ್ರ: ತಾಯಿ ಹಾದರದ ಹೊಂಡದಲ್ಲಿ ಬಿದ್ದು ಸತ್ತು ಹೋದಳು. ತಂದೆಯನ್ನು ಕಳೆದುಕೊಂಡು ದುಃಖದಲ್ಲಿದ್ರು ನಾನು ಇಂದು ತಾಯಿ ಜೀಂತವಿದ್ದರೂ ತಂದೆ-ತಾಯಿಯನ್ನು ಕಳೆದುಕೊಂಡ ಪರದೇಶಿಯಾದೆ. ಆಗಲಿ ನನ್ನಂತೆ ಅದೆಷ್ಟು ಪರದೇಶಿ ಮಕ್ಕಳು ಭೂಮಿಯ ಮೇಲೆ ಜೀವಿಸಿಲ್ಲ. ೪೦ ಕೋಟಿ ಮಕ್ಕಳ ಹಿತಚಿಂತನೆ ಮಾಡುವ ಭಾರತಾಂಬೆಯ ಮಡಿಲಲ್ಲಿ ನನ್ನೊಬ್ಬನಿಗೆ ಸ್ಥಾನ ಸಿಗಲಾರದೆ? ಸಿಕ್ಕೆ ಸಿಗುತ್ತದೆ. ಈ ಮನೆಯಿಂದ ಹೊರದಬ್ಬಿಸಿಕೊಂಡು ಹೋದ ಆ ಹೇಸಿ ಹೆಣ್ಣಿಗೆ ಈ ಮನೆಯ ಬಿಡಿಕಾಸೂ ಕೂಡ ದೊರೆಯದಂತೆ ಮಾಡಿ, ನನ್ನ ಜೀವನೋಪಾಯದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲೇಬೇಕು.

ನಾಯಕ ಸಾತ್ವಿಕನಾಗಿರುವುದರಿಂದ ಹಾಸ್ಯ ಪಾತ್ರ ಪ್ರಾಮಾಣಿಕವಾಗಿರುವದರಿಂದ ಸಂಭಾಷಣೆಯಲ್ಲಿ ಆತ್ಮೀಯ ಭಾವ ಒಡೆದು ತೋರುತ್ತದೆ. ಹಾಸ್ಯದ ಗೂರ ಹೋದ ಮೇಲೆ ಕೊನೆಯಲ್ಲಿ ರವೀಂದ್ರನಾಡುವ ಮಾತಿನಲ್ಲಿ ಸಮಸ್ಯೆಯನ್ನು ಎದುರಿಸಿ ನಿಲ್ಲುವ ಸ್ಥೈರ್ಯ ತೋರುವದರಿಂದ ಭಾಷೆಗೊಂದು ಬಿಗುವು ಪ್ರಾಪ್ತವಾಗಿದೆ.

'ಗರೀಬಿ ಹಟಾವೊ' ನಾಟಕದಲ್ಲಿ ನಾಯಕ ರಾಜೇಶ ಮರಳಿ ಊರಿಗೆ ಬಂದಾಗ ರಾಮು ಪಾತ್ರಧಾರಿಯ ಜೊತೆ ನಡೆಯುವ ಸಂಭಾಷಣೆಯನ್ನು ಈ ಕೆಳಗಿನಂತೆ ನೋಡಬಹುದು.

ರಾಮುಃ ಓಹೋ...... ರಾಜೇಶಣ್ಣಾ, ನಮಸ್ಕಾರ ಯಾವಾಗ ಬಂದ್ರಿ.

ರಾಜೇಶಃ ಇದೇ ಈಗ ಬಂದ್ನೆಪಾ, ರಾಮು ಇದೇನೊ ಊರಲ್ಲಿ ಮತ್ತಾವ ಸತ್ಯಾಗ್ರಹ ನಡೆದಿದೆ. ಇಗೇ ಈಗ ಕಮಲ ಹೇಳಿದ್ಲು. ನಿಮ್ಮ ಧಣಿ ದಯಾವಂತನಾಗಿದ್ದಾನೆ ಅಂತ.

ರಾಮುಃ ಇದು ನಮ್ಮ ಸಾವಕಾರದಸಿಯಿಂದಲ್ಲ ರಾಜೇಶಣ್ಣ. ಊರಾಗ ಅದಾರಲ್ಲ ಇನ್ನೂ ಅನೇಕರು ಅದರಾಗ ಅಗ್ರಗಣ್ಯರು ಅಂದ್ರ ನಮ್ಮ ಹೊಟ್ಟೆ ಗುರುಬಸಪ್ಪ ಶೆಟ್ರು ಅವರ ಸಲುವಾಗಿ ಹೂಡಿದ ಸತ್ಯಾಗ್ರಹ.

ರಾಜೇಶಃ ಯಾಕೆ ಅವರೇನು ಮಾಡಿದ್ರು?

ರಾಮುಃ ಇನ್ನೇನು ಮಾಡ್ತಾರ ಇತ್ತಲ್ಲ ಅವರ ಗುಪ್ತ ಲಕ್ಷ್ಮೀ ಪ್ರಸನ್ನ ಕಳ್ಳ ನೋಟಿನ ವ್ಯವಹಾರ ಅದರಾಗ ಸಿಕ್ಕಿಬಿದ್ದಾರ. ಅವರು ಒಬ್ಬರ ಅಲ್ಲ. ರಂಗ, ಚಂದ್ರೂವನ್ನೂ ಹಿಡಿದಾರ.

ರಾಜೇಶಃ ರಂಗ, ಚಂದ್ರೂ ಅವರು ಕಳ್ಳ ನೋಟಿನ ಚಲಾವಣೆ ನಡೆಸಿದ್ರೆ?

ರಾಮುಃ ಅಯ್ಯೋ ಇತ್ತಿತ್ತಲಾಗಿ ಅವರೂ ಅರ್ಧಮರ್ದ ಶ್ರೀಮಂತರು ಆಗಿದ್ದರು. ನೋಡಣ್ಣ ನಮ್ಮ ಮಿಲ್ಲಿನ ಕೂಲಿಕಾರರು ಕುಡಿಯುವುದು, ಓಸಿ, ಇಸ್ಪೇಟ್ ಆಡೋದು ಎಲ್ಲಿ ಕಂಡುಬಂದರೂ ಅದೇ ತಕ್ಷಣ ಅವರನ್ನ ನೌಕರಿಯಿಂದ ತೆಗೆದು ಬಿಡ್ತೀವಿ ಅಂತ ಸಾವುಕಾರ್ರು ತಿಳಿಸಿಬಿಟ್ರು. ಇದು ರಂಗ, ಚಂದ್ರೂನಂಥವರಿಗೆ ಸರಿ ಬೀಳಲಿಲ್ಲ. ಒಡೆದು ಹೋಗಿ ಒಳಗಿಂದ ಒಳಗ ಶೆಟ್ರ ಗುಂಪಿನ್ಯಾಗ ಸೇರಿದರು. ಅವರು ಇವರ್ನ ಖೋಟಾ ನೋಟು ಸಪ್ಲಾಯ ಮಾಡುದು. ಎಲ್ಲಿಗೆ ಬಾ ಅಂತಾರ ಅಲ್ಲಿಗೆ ಕಳಸೋದು ನೋಟ ತರಿಸೋದು ನಡೀತು. ಕಡಿಗೆ ಅದು ಹ್ಯಾಂಗ ಸರಕಾರಕ್ಕೆ ತಿಳಿತೊ ಏನೋ ಗುಪ್ತ ರೀತಿಯಿಂದ ಬಂದು ಪತ್ತೆ ಹಚ್ಚಿ ಹಿಡಿದಬಿಟ್ರು. ಈಗ ಅಂಥವರ್ನ ಜಾಮೀನ ಮ್ಯಾಲೆ ಬಿಡಸಬೇಕೂ ಅಂತ ಊರಾಗ ಕೆಲವರ ಪ್ರಯತ್ನ. ಅದರ ವಿರುದ್ಧವಾಗಿ ನಮ್ಮ ಸತ್ಯಾಗ್ರಹ. ಒಟ್ಟ ಯಾರೂ ಜಾಮೀನ ಆದ್ರು ಅವರನ್ನು ಬಿಡಬಾರದು ಅಂತ. ನಮ್ಮ ಸತ್ಯಾಗ್ರಹದ ಗುಂಪು. ಅನ್ನ ಸತ್ಯಾಗ್ರಹ ಹೂಡಿ ಕಛೇರಿ ಮುಂದ ಕೂತ್ಯೆತಿ. ಸಧ್ಯ ನಿರ್ಣಯ ಆಗತಿತ್ತು. ಆದ್ರ ನಮಗ

ರಾಜೇಶಃ ಅಲ್ಲೇ ನಡೆಸಿರೊ ಅನ್ನ ಸತ್ಯಾಗ್ರಹ. ಈಗ ನೀನು ನಡೆದಿರೋದು ಊಟಕ್ಕೆ.

ರಾಮುಃ ಹೌದು ನಾ ಉಂಡು ಹೋಗಿ ಅವರನ್ನ ಕಳಿಸೋದು. ಅವರು ಉಂಡು ಮತ್ತೊಬ್ಬರಿಗೆ ಕಳಸೋದು.

ಇಲ್ಲಿ ನಾಟಕಕಾರರು ಉಪವಾಸ ಸತ್ಯಾಗ್ರಹದಲ್ಲಿಯೂ ನಡೆಯಬಹುದಾದ ಟೊಳ್ಳುತನವನ್ನು ರಾಮುನ ಮಾತುಗಳಿಂದ ತೋರಿಸಿ ಕೊಟ್ಟಿದ್ದನ್ನು ಕಾಣುತ್ತೇವೆ. ಹಿಂದಿನ ಸಂಭಾಷಣೆಯ ರೀತಿಯಲ್ಲಿ ಇಲ್ಲಿಯೂ ನಾಯಕ ಮತ್ತು ಹಾಸ್ಯ ಪಾತ್ರದಲ್ಲಿಯ ಆತ್ಮೀಯತೆ ಮುಂದುವರೆಯುತ್ತದೆ.

ನಾಯಕ-ಖಳನಾಯಕ

ಬಿ.ಆರ್. ಅರಿಷಿಣಗೋಡಿಯವರ ನಾಯಕ-ಖಳನಾಯಕ ಪಾತ್ರಗಳು ಗ್ರಂಥಸ್ಥ, ಶಿಷ್ಟ ಪದಗಳನ್ನು ಹೆಚ್ಚಾಗಿ ಬಳಸಿರುವುದನ್ನು ಕಾಣುತ್ತೇವೆ.

'ಗಂಡೆದೆಯ ಗೌರಿ' ನಾಟಕದಲ್ಲಿ ನಾಯಕ ಶಿವಣ್ಣ, ಖಳನಾಯಕ ರುದ್ರಗೌಡರ ನಡುವೆ ನಡೆಯುವ ಸಂವಾದವನ್ನು ಈ ರೀತಿ ನೋಡಬಹುದು.

ಶಿವಣ್ಣ: ನಮಸ್ಕಾರ ಗೌಡ್ರ.

ರುದ್ರಗೌಡ: ಓಹೋ, ಯಾರು ಶಿವ್ಯಾ ಅಲ್ಲಾ, ನಮಸ್ಕಾರಪ್ಪಾ ಶಿವ್ಯಾ, ಈಕಡೀಂದ ಬಂದೆಲ್ಲಲೇ ಹೊಲಕ್ಕ ಹೋಗಿದ್ದೇನ

ಶಿವಣ್ಣ: ಹೌದ ಗೌಡ್ರ.

ರುದ್ರಗೌಡ: ಮತ್ಯಾಕ ದೌಡ ಮನಿಕಡಿಗಿ ಬಂದಿಯಲೇ ನಿಮ್ಮ ಹೊಲದ ಮುಂದ ಯಾರು?

ಶಿವಣ್ಣ: ನನ್ನ ತಂಗಿ ಗೌರಿ ಅದಾಳ ಗೌಡ್ರ ನಾನು ಸ್ವಲ್ಪ ತಾಲೂಕ ಕಛೇರಿ ಕೆಲ್ಸಕ್ಕಂತ ಪ್ಯಾಟಿಗೆ ಹೋಗಬೇಕಾಗಿತ್ತು ಅದಕ ಬಂದೆ.

ರುದ್ರಗೌಡ: ತಾಲೂಕ ಕಛೇರಿ ಕೆಲಸಾ, ಓಹೋ ಅದ ಹೌದಲ್ಲೋ ನಿಮ್ಮ ಹೊಲದಾಗ ಭಾವಿ ತಗಿಸಿ ಪಂಪಸೆಟ್ಟು ಕೂಡ್ರಸಬೇಕಾಗಿತ್ತು. ಅದಕ ಅರ್ಜಿ ಹಾಕೀವಿ ಅಂತಿದ್ರೀ. ಅದಕ್ಕಾಗಿ ಹೌದಲ್ಲೋ ನಿನ್ನ ತಿರಗಾಟ. ಏಹ್ (ನಕ್ಕು) ಏನ್ ಮಳ್ಳ ಬುದ್ದಿ ನನ್ನ ಮಕ್ಕ, ಕಛೇರಿ ಕೆಲಸ ಅಷ್ಟು ಸರಳ ಆಗತಾವ ಅಂತ ತಿಳಿದಿರೇನ್ಲೆ, ನಮ್ಮಂಥವರ ಒಮ್ಮೊಮ್ಮೆ ಲಗಾ ಹೊಡಿಮುಂದ, ಕಳ್ಳಾನ ದೇವರ್‍ನ ಯಾರ ಕೇಳ್ತಾರ. ಅದಕ್ ಯಾರ್‍ನ ಹಿಡಿಬೇಕು, ಏನ ಮಾಡಬೇಕು ನನ್ನ ಮಾತ ಎಲ್ಲಿ ಕೇಳ್ತೀರಿ, ಕಡೀಗಿ ಅದಷ್ಟು ಹೊಲ ಯಾವುದರ ಬ್ಯಾಂಕಿಗೆ ಒತ್ತಿ ಹಾಕಿ ಮೂಲಿ ಹಿಡಿತೀರಿ ತೀರಿತು.

ಶಿವಣ್ಣ: ಏನೋ ಪ್ರಯತ್ನಾ ಅಂತೂ ನಡೆಸಿವಿ ಗೌಡ್ರ, ಆಗದಿದ್ರ ಅದಕೇನ ಮಾಡೋದು. ಬರ್‍ತೀನಿ ನಮಸ್ಕಾರ(ಹೋಗುವನು).

ರುದ್ರಗೌಡ: ಸೊಕ್ಕಿನ ಮಕ್ಳು, ಮದಲ ಬಂದ ನನ್ನ ಹತ್ರ ದುಡ್ಡ ಕೇಳಿದ್ರ ಇಷ್ಟೊತ್ತಿಗೆ ಇವರ ಹೊಲದಾಗ ಭಾವಿ ಆಗಿ ಹಳೆ ಮಾತ ಆಗ್ತಿತ್ತು. ಗುಡ್ಡದಂಥ ಗೌಡ ನಾನಿದ್ದೂ ಮಕ್ಳು ದೂರ ದೂರ

ಅಡ್ಡಾಡತಾರ. ಅವಳ ಅದಾಳ ಇವನ ತಂಗೀ ಗೌರಿ, ಅಂತ ಏನ ಹೇಳ್ಲೀ ಅವಳು? ಯಾರದರ ಭಿಕ್ಷುಕರ ಸಹಾಯ ಪಡಿತಿನಿ ಆದರ ಗೌಡನ ನೆಳ್ಳಸೈತ ಹೊಳ್ಳಿ ನೋಡುದಿಲ್ಲ ಅಂತಾಳಂತ ಮಂದಿ ಮುಂದ!.. ಅನ್ನೀ, ಏನು ಸೊಕ್ಕು, ಏನ್ ದಿಮಾಕು ಎದೀ ಉಬ್ಬಿಸಿ ಅಡ್ಡಾಡುದು. ಸಧ್ಯ ಊರಾಗ ನನ್ನ ಬಲೀಗಿ ಬೀಳಲಾರದ ಉಳಿದೀರೊ ಹಕ್ಕಿ ಅಂದ್ರ ಅದೊಂದೆ ಈಗ, ನೋಡೋಣ, ನೋಡೋಣ, ಈ ರುದ್ರಗೌಡ ಕಣ್ಣಿಟ್ಟ ಹೆಣ್ಣು ವಶಾ ಆಗಬೇಕು. ಇಲ್ಲಾ ಸ್ಮಶಾನ ಸೇರಬೇಕು.

ಶ್ರೀಮಂತಿಕೆ-ಬಡತನದ ಅಂತರ ಭಾಷೆಯಲ್ಲಿಯೂ ಒಡೆದು ತೋರುತ್ತದೆ. ಶ್ರೀಮಂತರು ಹೆಸರು ಕೆಡಿಸಿ (ಶಿವ್ಯಾ) ಮಾತು ಆರಂಭಿಸುವುದರಲ್ಲೇ ಇದು ಸ್ಪಷ್ಟವಾಗುತ್ತದೆ.

'ಗರೀಬಿ ಹಟಾವೊ' ನಾಟಕದಲ್ಲಿ ನಾಯಕ ರಾಜೇಶ ಮತ್ತು ಖಳನಾಯಕ ವೀರನಗೌಡನ ನಡುವೆ ನಡೆಯುವ ಸಂವಾದ ಈ ರೀತಿ ಇದೆ.

ರಾಜೇಶಃ ನಮಸ್ಕಾರ ಶ್ರೀಮಂತರೇ..

ವೀರನಗೌಡಃ ಬಾರಪಾ ರಾಜೇಶ ನಮಸ್ಕಾರ, ಶಂಕ್ರಣ್ಣ ರಾಜೇಶ ಬಂದಿದ್ದಾನೆ. ಆ ಕುರ್ಚಿ ಈ ಕಡೆ ಹಾಕಿ ಕೊಡು.

ರಾಜೇಶಃ ಛೇ... ಛೇ..... ಬೇಡಿ ಶಂಕ್ರಣ್ಣನವರೇ ಒಡೆಯರ ಮುಂದೆ ನಾನು ಕುರ್ಚಿಯ ಮೇಲೆ ಕುಳಿತುಕೊಳ್ಳುವುದೇ, ಬೇಡಿ. ನೀವು ಕುಳಿತುಕೊಳ್ಳಿ ಶ್ರೀಮಂತರೆ, ಅದೇಕೋ ಮನೆಗೆ ಬಂದು ಭೆಟ್ಟಿಯಾಗಲಿಕ್ಕೆ ಹೇಳಿದ್ದಿರಂತೆ. ಇದೀಗ ಶಂಕ್ರಣ್ಣವರು ತಿಳಿಸಿದ್ರೂ ಏನ ವಿಷಯ ಕೇಳಿಕೊಂಡು ಹೋಗೋಣ ಅಂತ ಬಂದೆ.

ವೀರನಗೌಡಃ ಏನಿಲ್ಲ ರಾಜೇಶ ನಿನ್ನೊಂದಿಗೆ ಸ್ವಲ್ಪ ಮಾತಾಡಬೇಕಿತ್ತು ಅಷ್ಟೆ. ರಾಜೇಶ ನೀನು ನಮ್ಮ ಮಿಲ್ಲಿನಲ್ಲಿ ನೌಕರಿ ಸೇರಿ ಇಂದಿಗೆ ಎರಡು ವರ್ಷಗಳಾದವು. ಮೊದಲು ೧೫೦೦ ರೂಪಾಯಿ ಸಂಬಳ ಪಡೆಯುತ್ತಿದ್ದ ನೀನು ಈಗ ೨೫೦೦ ರೂಪಾಯಿ ಪಡೆಯುತ್ತಿರುವಿ. ಅಲ್ಲದೇ ಮೆಕ್ಯಾನಿಕಲ್ ಸುಪ್ರವೈಜರ್ ಅಂತ ಹೆಚ್ಚಿನ ಸ್ಥಾನವನ್ನು ಗಳಿಸಿಕೊಂಡಿದ್ದೀಯಾ. ನಿನ್ನಂತೆ ಎಲ್ಲರಿಗೂ ಕೊಡಬೇಕಾಗಿದ್ದ ಪಗಾರ, ಪ್ರತಿ ವರ್ಷಕ್ಕೂ ಕೊಡಬೇಕಾಗಿದ್ದ ಬಡ್ತಿ ಸಿಗುತ್ತಾ ಬಂದರೂ ಮತ್ತೂ ಕಿಟಲೆ ಕೊಡುತ್ತಿರುವ ಈ ಕಾರ್ಮಿಕರ ಹಿನ್ನೆಲೆಯಾದರೂ ನಿನಗೆ ಗೊತ್ತುಂಟೆ ರಾಜೇಶ.

ರಾಜೇಶಃ ಶ್ರೀಮಂತರೆ ೨೫ ವರ್ಷಗಳಿಂದಲೂ ಮಿಲ್ಲು ನಡೆಸುತ್ತ ಬಂದವರು ನೀವು, ಕಾರ್ಮಿಕರ ಸಂಬಳ, ದುಡಿತ, ಅವರನ್ನು ನೌಕರಿಗೆ ಸೇರಿಸಿಕೊಳ್ಳುವ ಅಥವಾ ತೆಗೆದು ಹಾಕುವ ಸಂಪೂರ್ಣ ಅಧಿಕಾರ ನಿಮ್ಮದೇ ಇರುವಾಗ, ಕೇವಲ ಎರಡು ವರ್ಷಗಳ ಹಿಂದೆ ಬಂದು ನೌಕರಿಗೆ ಸೇರಿರುವ ನನಗೆಂತು ಗೊತ್ತಾಗಬೇಕು ತಮ್ಮ ಅಂತರಂಗದ ವಿಷಯ.

ವೀರನಗೌಡ: ಗೊತ್ತಿದ್ದು ಇಲ್ಲದವರಂತೆ ವರ್ತಿಸುವ ನಟನೆಯ ಮಾತು ನನ್ನೆದುರು ಬೇಡ ರಾಜೇಶ. ಹಾಲು ಕೊಡುತ್ತಿರುವ ಕೆಚ್ಚಲನ್ನೇ ಕೊಯ್ದು ತಿನ್ನುವ ಮೂರ್ಖತನಕ್ಕೆ ನಿಂತಿದ್ದೀರಿ ನೀವು. ಮಿಲ್ಲಿನಲ್ಲಿ ನಡೆಯುವ ಪ್ರತಿ ಒಂದು ಗಲಾಟೆಗೂ ನೀನೇ ಮುಂದಾಳು ಕಾರ್ಮಿಕ ವರ್ಗದಲ್ಲಿ ಗುಂಪುಗಾರಿಕೆ ನಡೆಸಿ, ನನ್ನಿಂದ ಬರುವ ಪ್ರತಿಯೊಂದು ವಿಚಾರಕ್ಕೂ ಎದುರಾಗಿ ನಿಲ್ಲುವ ವಾತಾವರಣ ಹಬ್ಬಿಸಲಿಕ್ಕೆ ನೀನೇ ಕಾರಣ. ನೀನೇ ಅವರ ಬೆಂಬಲಿಗ ಅಂತ ನಾನು ಕೇಳಿದ್ದೇನೆ.

ರಾಜೇಶ: ನೀವೇನೆ ತಿಳಿದುಕೊಳ್ಳಿ ಶ್ರೀಮಂತರೆ, ಅನ್ನ ಹಾಕುವ ಒಡೆಯರಿಗೆ ಅನ್ಯಾಯವೆಸಗುವ ಯಾವ ಕಾರ್ಯವೂ ಇದುವರೆಗೂ ನನ್ನಿಂದಾಗಿಲ್ಲ. ಆದರೆ ತಮ್ಮ ದೇಹದ ರಕ್ತವನ್ನೇ ಹರಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಕಾರ್ಮಿಕರ ಕಷ್ಟ, ಕಾರ್ಪಣ್ಯ ಕಂಡಾಗ ಮಾತ್ರ ನನ್ನ ಮನಸ್ಸು ಮಿಡಿಯುತ್ತದೆ, ಹೃದಯ ಕರಗುತ್ತದೆ.

ವೀರನಗೌಡ: ಅಂತೆಯೇ ಅವರ ಸಹಾಯಕ್ಕೆ ನಿಂತು, ಶ್ರೀಮಂತರ ಸಂಪತ್ತನ್ನೆಲ್ಲ ಹರಿದು ಹಂಚಿ ತಿನ್ನುವ ಸಾಹಸ ನಡೆಸಿದ್ದೀರಲ್ಲವೇ ನೀವು?

ರಾಜೇಶ: ದುಡುಮೆಗೆ ತಕ್ಕ ಪ್ರತಿಫಲ ನೀವು ನೀಡುತ್ತಿದ್ದರೆ ನಿಮ್ಮ ಹಣದ ರಾಶಿಯ ಕಡೆಗೆ ಯಾರೂ ಕಣ್ಣೆತ್ತಿ ನೋಡುತ್ತಿರಲಿಲ್ಲ ಶ್ರೀಮಂತರೆ. ಬಡವರ ದುಡಿಮೆಯೇ ಬಲ್ಲಿದರ ಬೊಕ್ಕಸ ಈ ಮಾತನ್ನು ಮೊದಲು ತಿಳಿದಿರಬೇಕು ನೀವು. ಮಾತು ಬಿರುಸಾಯಿತೆಂದು ಕೋಪಿಸಿಕೊಳ್ಳಬೇಡಿರಿ ಶ್ರೀಮಂತರೆ ಪ್ರಗತಿಪರ ೨೫ನೇ ವರ್ಷದಲ್ಲಿ ತಮ್ಮ ಮಿಲ್ಲು ಮುನ್ನಡೆಯುತ್ತಿದ್ದರೂ, ಅದರ ಯಶಸ್ಸಿಗಾಗಿ ಹೋರಾಡಿದ ಕಾರ್ಮಿಕರ ಹೊಟ್ಟೆ ಮಾತ್ರ ಬರಿದಾಗಿಯೇ ಉಳಿಯಬಾರದು. ನಿಮ್ಮ ತಂದೆಯವರಿದ್ದಾಗ ಎಲ್ಲ ಕಾರ್ಮಿಕರನ್ನು ತಮ್ಮ ಹೊಟ್ಟೆಯ ಮಕ್ಕಳಂತೆ ನೋಡುತ್ತಿದ್ದರು. ಅವರ ಕಷ್ಟ-ಸುಖಗಳನ್ನು ಅರಿತು ಅದನ್ನು ನಿವಾರಿಸುವ ಧರ್ಮವಂತರಾಗಿದ್ದರು. ಅಂತ ಜನರಾಡುವುದನ್ನು ನಾನು ಕೇಳಿದ್ದೇನೆ. ಅವರು ಗತಿಸಿ ಹೋಗಿ ಮಿಲ್ಲಿನ ಅಧಿಕಾರ ನಿಮ್ಮ ಕೈಗೆ ಬಂದಾಗಿನಿಂದಲೂ ಕಾರ್ಮಿಕರ ಯಾವ ಬೇಡಿಕೆಗಳೂ ಸರಳವಾಗಿ ಈಡೇರುತ್ತಿಲ್ಲ. ಆ ಆಸೆಯನ್ನು ಹೊತ್ತು ಯಾವನೇ ಕೂಲಿಕಾರ ನಿಮ್ಮೆಡೆಗೆ ಬಂದರೂ ಅವನ ನೌಕರಿಗನೇ ಧಕ್ಕೆ ತರುವ ವಿಚಾರ ನೀವು ಮಾಡುತ್ತೀರಿ. ಈ ವಿಚಾರವೇ ಕಾರ್ಮಿಕರ ಅಸಂತೋಷಕ್ಕೆ ಕಾರಣವಾದದ್ದು. ಅದನ್ನೇ ತಾವು ಗುಂಪುಗಾರಿಕೆ ಅಂತ ತಪ್ಪು ಕಲ್ಪನೆ ಮಾಡಿಕೊಂಡಿದ್ದೀರಿ ನೀವು.

ವೀರನಗೌಡ: ನನ್ನ ತಪ್ಪು ಒಪ್ಪಿಗೆ ವಿಷಯ ನಿನ್ನಿಂದಾಗಬೇಕಿಲ್ಲಾ ರಾಜೇಶ. ನೌಕರಿ ಬೇಕಾದಾಗ ನಿರ್ಜೀವಗೊಂಬೆಯಂತೆ ಬರುವುದು, ನೌಕರಿ ದೊರೆತ ಮೇಲೆ ವಿಷಭರಿತ ಹಾವಿನಂತೆ ತಿರುಗಿ ನಿಲ್ಲುವುದು ಕಾರ್ಮಿಕ ವರ್ಗದಲ್ಲಿ ಮನೆ ಮಾಡಿಕೊಂಡಿರುವ ಈ ಹೀನ ಪ್ರವೃತ್ತಿ ನನಗೇನು ಅರಿಯದ ವಿಷಯವಲ್ಲ. ನೋಡು ರಾಜೇಶ, ಇದೊಂದು ಬಾರಿ ನಿನಗೆ ಸೂಚನೆ ಕೊಟ್ಟು ಹೇಳುತ್ತೇನೆ. ನಿನ್ನ ವೈಯಕ್ತಿಕ ಸಂಸಾರಕ್ಕೆ

ಕೊರತೆ ಇದ್ದರೆ ೮೦೦೦-೧೦೦೦೦ ರೂ. ಕೊಡುತ್ತೇನೆ. ತೆಗೆದುಕೊಂಡು ನೆಮ್ಮದಿಯಿಂದ ಇದ್ದುಬಿಡು. ಆದರೆ ಕಾರ್ಮಿಕರ ಗುಂಪಿನಲ್ಲಿ ಮಾತ್ರ ತಲೆ ಹಾಕಬೇಡ.

ರಾಜೇಶಃ ನನ್ನೊಬ್ಬನ ಕೈ ತುಂಬಿಸಿಕೊಂಡು ಉಳಿದೆಲ್ಲ ಕಾರ್ಮಿಕರ ಸಂಸಾರಕ್ಕೆ ಕೊಳ್ಳಿ ಇಡುವ ವಿಚಾರ ನನಗೆ ಬೇಡಿ ಶ್ರೀಮಂತರೆ. ದಯವಿಟ್ಟು ಈ ವಿಷಯದಲ್ಲಿ ಯಾವ ಆಸೆ ಆಮಿಷವನ್ನು ನನಗೆ ತೋರಿಸಬೇಡಿ.

ವೀರನಗೌಡಃ ರಾಜೇಶ, ನಿರಾಕರಿಸಿ ನಡೆದರೆ ಮುಂದೆ ಪ್ರಸಂಗ ವಿಪರೀತಕ್ಕೆ ನಿಂತೀತು. ಈಗಿದ್ದ ನೌಕರಿಯನ್ನು ಕಳೆದುಕೊಂಡು ಮುಂದೆ ಬೀದಿಯ ಭಿಕಾರಿಯಾಗಿ ಅಲೆಯುವ ಪ್ರಸಂಗ ಬಂದೀತು.

ರಾಜೇಶಃ ಈ ಮಾತು ನಿಮ್ಮಿಂದ ಬಂದೇ ಬರುತ್ತದೆಂಬ ವಿಷಯ ನನಗೆ ಮೊದಲೇ ತಿಳಿದಿತ್ತು ಶ್ರೀಮಂತರೆ, ಅದಕ್ಕೆಂದೆ ನಾನು ನೌಕರಿಗೆ ಹಾಜರಾಗುವ ನನ್ನಿಂದ ಮುಂಗಡವಾಗಿ ರಾಜಿನಾಮೆ ಪತ್ರ ಬರೆಸಿಕೊಂಡಿದ್ದೀರಿ ನೀವು. ಆದರೆ ಶ್ರೀಮಂತರೆ ನಿರಪರಾಧಿ ನೌಕರರನ್ನು ಈ ರೀತಿ ಅನ್ಯಾಯವಾಗಿ ನೌಕರಿಯಿಂದ ಕಿತ್ತು ಹಾಕುತ್ತಾ ಹೋದರೆ ಅದರ ಕಿಚ್ಚಿನಲ್ಲಿ ಬಿದ್ದು ನಿಮ್ಮನ್ನು ನೀವೇ ಸುಟ್ಟುಕೊಳ್ಳುತ್ತೀರಿ. ನಿಮ್ಮ ವೈಭವದ ಬಾಳಿಗೆ ನೀವೇ ಬೆಂಕಿ ಹಚ್ಚಿಕೊಳ್ಳುತ್ತೀರಿ.

ವೀರನಗೌಡಃ ರಾಜೇಶ ತುತ್ತು ಕೂಳಿಗಾಗಿ ಬಂದು ನೌಕರಿ ಸೇರಿದ ನಾಯಿ ನೀನು. ಹೊರಟು ಹೋಗು ಮೊದಲು ಇಲ್ಲಿಂದ ನನ್ನೆದುರಿಗೆ ನಿಲ್ಲಬೇಡ. ನಾಳೆಯಿಂದ ನೀನು ನೌಕರಿಗೂ ಬರಬೇಕಾಗಿಲ್ಲ.

ರಾಜೇಶಃ ಬರುತ್ತೇನೆ ಶ್ರೀಮಂತರೆ, ನಮಸ್ಕಾರ..

ವೀರನಗೌಡಃ ಶಂಕ್ರಣ್ಣ.. ಶಂಕ್ರಣ್ಣ ಇವನಿಂದ ಮೊದಲೇ ಬರೆಸಿಕೊಂಡ ಸರಂಡೆರ್ ಅಪ್ಲಿಕೇಶನ ಎಲ್ಲಿದೆ...?

ಮೊದ ಮೊದಲು ಅತ್ಯಂತ ಆತ್ಮೀಯವಾಗಿ ನಡೆದ ಇಲ್ಲಿಯ ಮಾತುಕತೆ ಕ್ರಮೇಣ ಗಂಭೀರವಾಗುತ್ತ ಸಂಘರ್ಷಕ್ಕೇ ಇಳಿಯುತ್ತದೆ. ಆದರೆ ಈ ಸಂಘರ್ಷದ ಬಹುಪಾಲು ಖಳನಾಯಕನಿಗೆ ಸೇರಿದ್ದು- ಭಿಕಾರಿ, ನಾಯಿ ಮುಂತಾದ ಶಬ್ದಗಳಲ್ಲಿ ಇದು ಸ್ಪಷ್ಟವಾಗುತ್ತದೆ. ನಾಯಕ ಪ್ರತಿಭಟಿಸುತ್ತಾನಾದರೂ ಅವನ ಮಾತಿನಲ್ಲಿ ಯಾವುದೇ ಬಗೆಯ ಕೀಳು ಶಬ್ದಗಳಿಲ್ಲ. ಆಯಾ ಪಾತ್ರಗಳ ಅಭಿಪ್ರಾಯ ಮಾತಾಗಿ ಹೊರಬರುವಲ್ಲಿ ತೋರುವ ಅಂತರ ಅವರವರ ಸಂಸ್ಕಾರವನ್ನು ಖಚಿತಪಡಿಸುತ್ತದೆ.

ಪ್ರತಿನಾಯಕಿ-ಖಳನಾಯಕ

'ಗರೀಬಿ ಹಟಾವೊ' ನಾಟಕದಲ್ಲಿ ನಾಯಕಿ ಶೋಭಾ ಹಾಗೂ ಖಳನಾಯಕ ವೀರನಗೌಡನ ನಡುವೆ ನಡೆಯುವ ಸಂವಾದವನ್ನು ಈ ರೀತಿ ನೋಡಬಹುದು. ಶೋಭಾ ಶಿಶುವಿಹಾರದಲ್ಲಿ ಕಸಗೂಡಿಸುತ್ತ ಹಾಡುತ್ತ ಇರುವಳು. ಆಗ ಅಲ್ಲಿಗೆ ವೀರನಗೌಡ ಬರುವನು.

ವೀರನಗೌಡ: ಪಾಪ ಇನ್ನೂ ಯಾವ ಮಕ್ಕಳು ಬಂದಂತಿಲ್ಲ.

ಶೋಭಾ: ಬನ್ರಿ ಶ್ರೀಮಂತರೆ.. ನಮಸ್ಕಾರ.

ವೀರನಗೌಡ: ಶಿಶುವಿಹಾರಕ್ಕೆ ಶಿಕ್ಷಕಿಯಾಗಿಬಂದ ನೀವೇ ಕಸ ಹೊಡೆಯುವ ಕೆಲಸಕ್ಕೆ ನಿಂತಿದ್ದೀರಲ್ಲ ಶೋಭಾದೇವಿ. ಇಂತಹ ಸಣ್ಣಮಟ್ಟ ಕೆಲಸಕ್ಕಾಗಿ ಒಂದು ಆಳೂ ಇಲ್ಲವೆ?

ಶೋಭಾ: ಇದ್ದಾರೆ ಶ್ರೀಮಂತರೆ ಇಂದು ಅವನ ಆರೋಗ್ಯ ಸರಿಯಿಲ್ಲ ಅಂತ ಕೆಲಸಕ್ಕೆ ಬಂದಿಲ್ಲ. ಮಕ್ಕಳು ಬರುವ ಹೊತ್ತಾಯಿತು ನಾನೇ ಕಸಗೂಡಿಸಿ, ಸ್ವಚ್ಛಗೊಳಿಸಲೆಂದು ನಿಂತಿದ್ದೆ ಬನ್ನಿ ಶ್ರೀಮಂತರ ಕುಳಿತುಕೊಳ್ಳಿ(ಖುರ್ಚಿ ಹಾಕುವಳು).

ವೀರನಗೌಡ: ಹೆಸರಿಗೆ ತಕ್ಕಂತೆ ಎಲ್ಲ ಕೆಲಸಗಳು ಶೋಭಾಯಮಾನವಾಗಿವೆ. ಜೊತೆಗೆ ವಿನಯಶೀಲ ಗುಣ. ದೊಡ್ಡವರಲ್ಲಿರಬೇಕಾದ ಭಕ್ತಿ, ಇನೇ ಗುಣ ನಿನ್ನಣ್ಣನಲ್ಲಿದ್ದಿದ್ದರೆ ಇಷ್ಟೊತ್ತಿಗೆ ನಿಮ್ಮ ಬಾಳು ಬಂಗಾರವಾಗುತ್ತಿತ್ತು ಶೋಭಾ. ಅಲ್ಲದೆ ನೀನಿಂದು ಇಂಥ ಸಣ್ಣಮಟ್ಟ ಕೆಲಸಕ್ಕೆ ಬಂದು ಸೇರುವ ಪ್ರಸಂಗವೂ ಬರುತ್ತಿರಲಿಲ್ಲ.

ಶೋಭಾ: ನಮ್ಮಣ್ಣನ ಸ್ವಭಾವವೇ ವಿಚಿತ್ರವಾಗಿದೆ ಶ್ರೀಮಂತರೆ, ಅನ್ಯರ ಮಾತು ಕೇಳುವಂತಿಲ್ಲ. ತಾನು ಹಿಡಿದ ಹಟ. ಆ ವಿಷಯ ಹೋಗಲಿ ಬಿಡಿ ಶ್ರೀಮಂತರೆ ತಾವೀಗ ಇಲ್ಲಿಗೆ ಬಂದದ್ದು

ವೀರನಗೌಡ: ಯಾವ ಕಾರಣಕ್ಕಾಗಿ ಅಂತ ಕೇಳುತ್ತಿರುವಿಯಲ್ಲ ಹ.. ಹ.. ಹ.. ಮುರಿದು ಹೋದ ನಿಮ್ಮ ಬಾಳವೃಕ್ಷಕ್ಕೊಂದು ನೆಮ್ಮದಿಯ ಹಾದಿಯನ್ನು ತೋರಿಸಬೇಕೆಂದೇ ನಾನೀಗ ಇಲ್ಲಿಗೆ ಬಂದಿದ್ದು ನೋಡು ಶೋಭಾ ಈಗಲೂ ನಿನ್ನಣ್ಣ ನೌಕರಿಗೆ ಬರಲು ಒಪ್ಪಿದರೆ ನಾನು ಮತ್ತೆ ಅವನಿಗೆ ಅವಕಾಶ ಕೊಡುತ್ತೇನೆ. ಸನ್ಮಾನ, ಸಂಭಾವನೆ ಎಲ್ಲವನ್ನೂ ನೀಡಿ ಹೆಚ್ಚಿನ ಸ್ಥಾನವನ್ನು ಕೊಡುತ್ತೇನೆ. ಇದಕ್ಕೆ ನಿನ್ನ ವಿಚಾರ ಏನಿದೆಯೋ ಅಂತ ಕೇಳಿ ತಿಳಿಯಲಿಕ್ಕೆಂದು ಬಂದೆ.

ಶೋಭಾ: ಆ ವಿಚಾರವೆಲ್ಲ ನನ್ನಣ್ಣನಿಗೆ ಸೇರಿದ್ದು ಶ್ರೀಮಂತರೆ, ಚಿಕ್ಕವಳಾದ ನಾನು ಅವನಿಗೆ ಏನೂ ಹೇಳುವುದಿಲ್ಲ. ಹೇಳಿದರೂ ಕೇಳುತ್ತಾನೆ ಎನ್ನುವ ಭರವಸೆಯೂ ನನಗಿಲ್ಲ.

ವೀರನಗೌಡ: ಅವನ ಹಟವಾದಿತನದ ಅಗ್ನಿಯಲ್ಲಿ ಬಿದ್ದು ನೀನು ಸುಟ್ಟುಕೊಂಡು ಸಾಯಬೇಡ ಶೋಭಾ. ಒಡಹುಟ್ಟಿದ ತಂಗಿಯನ್ನು ದುಡಿಯಲಿಕ್ಕೆ ಹಚ್ಚಿ ತಾನು ನಿರುದ್ಯೋಗಿಯಾಗಿ ತಿರುಗುತ್ತಿದ್ದಾನೆ ಅವಿವೇಕಿ. ಇತ್ತಿತ್ತಲಾಗಿ ಕುಡಿತ, ಕಚ್ಚಾಟದಂತಹ ದುರಭ್ಯಾಸಕ್ಕೆ ಬಲಿಯಾಗಿದ್ದಾನೆ ಅಂತ ನಾನು ಕೇಳಿದ್ದೇನೆ.

ಶೋಭಾ: ನಮ್ಮಣ್ಣ ಕುಡಿತ, ಕಚ್ಚಾಟಕ್ಕೆ ಬಲಿಯಾಗಿದ್ದಾನೆಯೇ ಶ್ರೀಮಂತರೆ ತಾವು ಯಾರ ವಿಷಯವಾಗಿ ಈ ಮಾತು ಹೇಳುತ್ತಿದ್ದಿರೋ, ನನಗೊಂದೂ ಅರ್ಥವಾಗುತ್ತಿಲ್ಲ. ಈಗ ಮಕ್ಕಳು ಬರುವ ಹೊತ್ತಾಯಿತು. ದಯಮಾಡಿ ನನ್ನ ಕೆಲಸಕ್ಕೆ ಆತಂಕಪಡಿಸಬೇಡಿ.

ವೀರನಗೌಡ : ಆದಷ್ಟು ಬೇಗ ಇಲ್ಲಿಂದ ಹೊರಟು ಬಿಡಿ ಅಂತ ಹೇಳುವ ವಿಚಾರವಲ್ಲವೇ ನಿನ್ನದು. ಹ.. ಹ.. ಹ.. ನಾನೀಗ ಬಂದದ್ದು ಹಾಗೆ ಹಿಂದಿರುಗಿ ಹೋಗುವುದಕ್ಕಾಗಿಯಲ್ಲ ಶೋಭಾ, ಬಹು ದಿನಗಳಿಂದಲೂ ತಡೆ ಹಿಡಿದಿದ್ದ ನನ್ನಾಸೆಯನ್ನು ತೀರಿಸಿಕೊಳ್ಳುವುದಕ್ಕಾಗಿ. ಸುಮಧುರವಾಗಿ ಬೆಳೆದುನಿಂತ ಈ ಪುಷ್ಪಲತೆಯನ್ನು ಅಪ್ಪಿ ಆನಂದಪಡುವುದಕ್ಕಾಗಿ.

ಶೋಭಾ: ಶ್ರೀಮಂತರ ಮೈಮೇಲೆ ಎಚ್ಚರವಿಟ್ಟುಕೊಂಡು ಮಾತನಾಡಿ. ನಾನಾಗಲೇ ತಿಳಿದುಕೊಂಡಿದ್ದೆ ಈ ವೇಳೆಯಲ್ಲಿ ನೀವೇಕೆ ಇಲ್ಲಿಗೆ ಬಂದಿದ್ದೀರಿ ಅಂತ. ನೀವು ಯಾರೆದುರು ನಿಂತಿದ್ದೀರಿ, ಯಾವ ಸ್ಥಾನಕ್ಕೆ ಬಂದಿದ್ದೀರಿ ಅನ್ನುವ ಪ್ರಜ್ಞೆಯು ನಿಮಗಿಲ್ಲ. ಇದು ಮಕ್ಕಳಿಗೆ ಶಿಕ್ಷಣ ಕೊಡುವ ಪುಣ್ಯದ ಸ್ಥಳ. ಇಲ್ಲಿ ಅಕೃತ್ಯ, ಅನಾಚಾರ ನಡೆಸುವ ಯಾವ ಪ್ರಾಣಿಗೂ ದೇವರು ಒಳ್ಳೆಯದನ್ನು ಮಾಡಲಾರ.

ವೀರನಗೌಡ: ಜನ ಬಲವಿಲ್ಲ, ಧನಬಲವಿಲ್ಲ ಈಗ ಇಲ್ಲಿ ನಿನ್ನ ಬೆಂಬಲಕ್ಕೆ ಬರುವವರಂತೂ ಮೊದಲೇ ಇಲ್ಲ. ಇನ್ನು ದೇವರ ಬಲವಿದೆಯಲ್ಲವೇ ನಿನಗೆ, ಸುಮ್ಮನೆ ವ್ಯರ್ಥ ಸಾಹಸಕ್ಕಿಳಿದು ನಿನ್ನ ಸಾವನ್ನು ನೀನೇ ಬರಮಾಡಿಕೊಳ್ಳಬೇಡಾ ಶೋಭಾ. ನಿರುದ್ಯೋಗಿಯಾಗಿ ತಿರುಗುವ ನಿನ್ನಣ್ಣನಿಗಂತೂ ತಂಗಿಯ ಮದುವೆ ಮಾಡುವ ವಿಚಾರವಿಲ್ಲ. ಥತ್ ಆ ಯೋಗ್ಯತೆಯೂ ಇಲ್ಲ. ನೀನು ನೀರು ಕಾಣದ ಬಳ್ಳಿಯಂತೆ ಬಾಡಿ ಹೋಗುವುದು ಬೇಡ. ನನ್ನವಳಾಗಿದ್ದುಕೊಂಡು, ನೀನೆಲ್ಲ ಸುಖವನ್ನು ಪಡೆಯಬಹುದು ಶೋಭಾ. ಸಿರಿಸಂಪತ್ತಿನ ಸ್ವರ್ಗವೇ ನಿನ್ನದಾಗುತ್ತದೆ.

ಶೋಭಾ: ಭಾರತದ ನಾರಿಗೆ, ತನ್ನ ಶೀಲ ಪಾವಿತ್ರ್ಯಕ್ಕಿಂತ ಹೆಚ್ಚಿನ ಸ್ವರ್ಗ ಬೇರೊಂದಿಲ್ಲ ಶ್ರೀಮಂತರೆ.. ಪರಸ್ತ್ರೀಯರನ್ನು ತಮ್ಮ ಅಕ್ಕ, ತಂಗಿಯರಂತೆ ಕಾಣುವುದು ಪ್ರತಿಯೊಬ್ಬ ಪುರುಷನ ಧರ್ಮ. ನೋಡಿ ಶ್ರೀಮಂತರೆ, ನಾವು ಬಡವರು, ಬಲ್ಲಿದರೆದುರು ನಿಂತು ಅಲ್ಪ ನುಡಿದರೂ ಅದು ಬೃಹದಾಕಾರವಾಗಿ ತೋರುತ್ತದೆ ನಿಮ್ಮ ದೃಷ್ಟಿಯಲ್ಲಿ. ನಿಮಗೆ ಕೈಮುಗಿದು ಬೇಡಿಕೊಳ್ಳುತ್ತೇನೆ. ನಾನೊಬ್ಬ ನಿಮ್ಮ ಮಗಳು ಅಂತ ತಿಳಿದು ಕಾಪಾಡಿ ಶ್ರೀಮಂತರೆ. ತಮ್ಮ ಕಾಲಿಗೆ ಬಿದ್ದು ಬೇಡುವೆ.

ವೀರನಗೌಡ: ಮಗಳು ಹ.. ಹ.. ಹ.. ನನ್ನ ಹೆಂಡತಿಯನ್ನೆ ನಾನು ಕರೆದುಕೊಂಡು ಬಂದಿಲ್ಲ. ಇನ್ನು ಮಗಳೆಲ್ಲಿಂದ ಬರಬೇಕು. ಈಗ ನಿನ್ನಾವ ಆರ್ತನಾದವು ನನ್ನ ಕಿವಿಗೆ ಮುಟ್ಟಲಾರದು ಶೋಭಾ. ನಾನೀಗ ಬಂದಿದ್ದು ನಿನ್ನ ಹಿತೋಪದೇಶ ಕೇಳುವುದಕ್ಕಾಗಿ ಅಲ್ಲ. ತುಂಬು ಯೌವನದ ನಲ್ಲೆಯ ಗಲ್ಲ ಹಿಂಡುವುದಕ್ಕಾಗಿ.

ಶೋಭಾ: ಥೂ ಪಾಪಿ, ಕೈ ಮುಗಿದು ಕೇಳಿಕೊಂಡರೂ ಕಣ್ತೆರೆಯದ, ಕಾಲಿಗೆ ಬಿದ್ದು ಬೇಡಿಕೊಂಡರೂ ಕರುಣೆ ತೋರದ ನೀನೊಬ್ಬ ನೀಚ, ಕಟುಕ, ರಾಕ್ಷಸ. ಊರಿನ ವೇಶ್ಯೆಯರಲ್ಲದೇ ಮಿಲ್ಲಿಗೆ ಬರುವ ಕಾರ್ಮಿಕರ ಹೆಂಡಂದಿರಲ್ಲಿಯೂ ನಿಮ್ಮ ಚೆಲ್ಲಾಟ, ಶಾಲೆಯ ಶಿಕ್ಷಕಿಯ ಮೇಲೂ ನಿಮ್ಮ ಕಣ್ಣು,

ಆದರ್ಶ ಗೃಹಿಣಿಯರ ಮೇಲೂ ನಿಮ್ಮ ಅತ್ಯಾಚಾರ. ನಿಮ್ಮಂಥಹ ಚಾಂಡಾಲರನ್ನು ಜೀವಂತ ಸುಟ್ಟರೂ ಸಿಟ್ಟು ತೀರಲಾರದು. ಶ್ರೀಮಂತರೆ, ಇಷ್ಟಕ್ಕೆ ಇಲ್ಲಿಂದ ಹೋದರೆ ಒಳಿತು ಇಲ್ಲದಿದ್ದರೆ........

ವೀರನಗೌಡ: ಇಲ್ಲದಿದ್ದರೆ...... ಲೇ ಲೇ ನನ್ನ ಕೆನ್ನೆಗೆ ಹೊಡೆಯುವಷ್ಟು ಬಲಿಷ್ಟಳಾಗಿ ಬಿಟ್ಟಿರುವೆಯಲ್ಲವೆ ನೀನು.

ಶೋಭಾ: ಬೇಡಿ ಶ್ರೀಮಂತರೆ ಮುಂದೆ ಬರಬೇಡಿ ಎನ್ನುತ್ತಾ (ಪೇಪರ್‌ವೇಟ್‌ನ್ನು ತೆಗೆದುಕೊಂಡು ವೀರನಗೌಡನ ತಲೆಗೆ ಒಗೆಯುವಳು)

'ಹೆಣ್ಣುಮಗಳು' ನಾಟಕದಲ್ಲಿಯ ಒಂದು ದೃಶ್ಯದಲ್ಲಿ ನಾಯಕಿ ಖಳನಾಯಕರ ನಡುವೆ ನಡೆಯುವ ಸಂವಾದ ಈ ರೀತಿ ಇದೆ.

ವಿನಾಯಕ: ರವೀಂದ್ರ, ರವೀಂದ್ರ ಯಾರೂ ಇಲ್ಲವೇ ಮನೆಯಲ್ಲಿ.

ಕಾಮಾಕ್ಷಿ: ಬನ್ನಿ ವಿನಾಯಕರೇ ಕುಳಿತುಕೊಳ್ಳಿ.

ವಿನಾಯಕ: ರವೀಂದ್ರನಿಲ್ಲವೇ ಮನೆಯಲ್ಲಿ.

ಕಾಮಾಕ್ಷಿ: ಆಗಲೇ ೨-೩ ತಿಂಗಳಾಯಿತಲ್ಲ ರವೀಂದ್ರನು ಬೆಂಗಳೂರಿಗೆ ಹೋಗಿದ್ದಾನೆ. ಕಲಿಯೋಕೆಂದು.

ವಿನಾಯಕ: ಹಾಗಾದರೆ ಈಗ ಸಧ್ಯ ನೀವೊಬ್ಬರೇ ಇರುವಿರೇನು ಮನೆಯಲ್ಲಿ. ಸರಿ ನಾನೀಗ ಬರುತ್ತೇನೆ ಕಾಮಾಕ್ಷಿ ಮತ್ತೊಮ್ಮೆ ಬಂದು ಭೆಟ್ಟಿಯಾಗುತ್ತೇನೆ.

ಕಾಮಾಕ್ಷಿ: ಅದೇಕೆ ವಿನಾಯಕರೇ, ಮನೆಯಲ್ಲಿ ನಾನೊಬ್ಬಳೇ ಇದ್ದರೇನಾಯಿತು. ನೀವೇನು ಈ ಮನೆಗೆ ಹೊಸಬರೇ ನನ್ನ ಗಂಡನಿದ್ದಾಗಿನಿಂದಲೂ ಬರುತ್ತಾ ಇರುವಿರಿ, ಆದರೂ ಅಪರಿಚಿತರಂತೆ ಮಾಡುವಿರಲ್ಲ. ಕುಳಿತುಕೊಳ್ಳಿ ಸ್ವಲ್ಪ ಕಾಫಿಯನ್ನಾದರೂ ತಯಾರಿಸುತ್ತೇನೆ.

ವಿನಾಯಕ: (ಸ್ವಗತ) ಕಾಮಾಕ್ಷಿ ಈ ಮನೆಯಲ್ಲಿ ಮೊದಲ ದಿನ ಕಾಲಿಟ್ಟಾಗಲೇ ಇವಳ ಚಂಚಲವಾದ ಕಣ್ಣುಗಳು ನನ್ನ ಮನಸ್ಸನ್ನು ಸೆಳೆದುಕೊಂಡಿದ್ದವು. ಈ ಮೊದಲು ಅದೆಷ್ಟೊ ಸಾರಿ ಇವಳನ್ನು ಬಯಸಿ ಬರುತ್ತಿದ್ದೆನಾದರೂ ಗೆಳೆಯನಾದ ಪ್ರಭಾಕರನ ಮುಖ ನೋಡಿ ಹೆದರಿ ಹಿಂಜರಿದು ಹೋಗುತ್ತಿದ್ದೆ ಆದರೆ ಇಂದು ಕಾಮಾಕ್ಷಿ ಜತೆ ಇಲ್ಲದ ವಿಧವಾ ಪಕ್ಷಿ. ಹಿಂದೊಮ್ಮೆ ತಲೆಯೆತ್ತಿ ಕೆಳಗಾದ ನನ್ನ ಆಶಾಗ್ನಿಯೀಗ ಮತ್ತೆ ಹೊತ್ತಿ ಉರಿಯುತ್ತಿದೆ ಕಾಮಾಕ್ಷಿಯ ಸಾನಿಧ್ಯದಿಂದ. ಏನು ಮಾಡಲಿ, ಒಂದೆಡೆ ಗೆಳೆತನ ಪತ್ನಿಯೆಂಬ ಅಳುಕಿನ ಅನುಮಾನ ಇನ್ನೊಂದೆಡೆಗೆ ಕಾಮಾಕ್ಷಿಯ ರಸಭರಿತ ದೇಹ ರುಚಿಯ ಆಸ್ವಾದನ. ಗೆಳೆಯನ ಪತ್ನಿಯಾದರೇನು? ಮನದಾಸೆಯನ್ನು ಹತ್ತಿಕ್ಕಿ ಸಿಗುವ ಸುಖಕ್ಕೆ ಎರವಾಗಿ ಬಾಳುವುದೇ? ಎಲ್ಲರಂತೆ ಇವಳೂ ಒಬ್ಬ ಸ್ತ್ರೀ.... ಉಪಾಯದಿಂದ ಇವಳ ಮನ ಒಲಿಸಿಕೊಂಡು ಸುಮಧುರವಾಗಿ ಬೆಳೆದುನಿಂತ ಅವಳ ದೇಹ ಸೌಗಂಧವನ್ನು ಸವಿದು ತಣಿಯಲೇಬೇಕು.

ಕಾಮಾಕ್ಷಿ: ಕಾಫಿ ರುಚಿಯಾಗಿದೆಯೇ?

ವಿನಾಯಕ: ತಯಾರಿಸಿದ ಕೈಗಳೇ ರುಚಿಕಟ್ಟಾಗಿರುವಾಗ ಇನ್ನೂ ಕಾಫಿ ರುಚಿಯಾಗದೆ.. ಕಾಮಾಕ್ಷಿ, ಇಷ್ಟು ದಿನ ವಿರಹದ ಅಗ್ನಿಯಲ್ಲಿ ಬೆಂದು ವ್ಯರ್ಥವಾಗಿ ಬಾಡಿ ಹೋಯಿತು ನಿನ್ನ ಕೋಮಲ ಶರೀರ. ರೋಗಿಯಾದ ಪ್ರಭಾಕರನ ಕೈ ಹಿಡಿದು ಬಂದು ನಿನ್ನ ಜೀವನದಲ್ಲಿ ಅದಾವ ಸುಖ ಕಂಡಿರುವೆ ನೀನು.

ಕಾಮಾಕ್ಷಿ: ನೀವೆನ್ನುವುದೆಲ್ಲವೂ ದಿಟವಾದ ವಿಷಯ ವಿನಾಯಕ. ಈ ಮನೆಗೆ ನಡೆಯಲಿಕ್ಕೆ ಬಂದು, ಒಂದೇ ಒಂದು ಮಗುವಿನ ತಾಯಿಯಾದ ಮರುಕ್ಷಣದಲ್ಲಿಯೇ ಸುಖದ ಮಾರ್ಗಕ್ಕೆ ಎರವಾಗಿ ಕೊನೆಗೆ ವಿಧವೆಯಾಗಿ ನಿಂತೆ.

ವಿನಾಯಕ: ನೋಡು ಕಾಮಾಕ್ಷಿ, ನೀನು ಬಯಸಿದರೆ, ಎರವಾದ ಮಾರ್ಗ ತೆರೆದು ಸುಖದ ಸಮುದ್ರವೇ ದೊರೆಯಬಹುದು. ಜಗತ್ತಿನಲ್ಲಿ ಸುಖದ ಹೊಳೆಯೇ ತುಂಬಿ ಹರಿಯುತ್ತಿರುವಾಗ, ವಿಧವೆಯಾದ ನೀನೊಬ್ಬಳು ಮಾತ್ರ ನೀರು ನೀರು ಎಂದು ಹಂಬಲಿಸಿ ಸಾಯುವುದು ಬೇಡ. ನಿನ್ನ ಹಣೆಯ ಕುಂಕುಮ ಅಳಿಸಿ ಹೋಗಿದ್ದರೂ ಯೌವನದಲ್ಲಿ ಮೂಡುವ ದೇಹದ ಆಸೆ ಮಾತ್ರ ಅಳಿದು ಹೋಗಿಲ್ಲ.

ಕಾಮಾಕ್ಷಿ: ಆದರೆ ವಿನಾಯಕ ಹಣೆಯಲ್ಲಿ ಕುಂಕುಮವಿಲ್ಲದ ಹೆಣ್ಣು ಜೀವವಿಲ್ಲದ ದೇಹವಿದ್ದಂತೆ. ನಾನೀಗ ತಿರುಗಿ ಕುಂಕುಮ ಹಚ್ಚಿಕೊಂಡರೆ ಜಗತ್ತಿಗೆಲ್ಲ ತಿರಸ್ಕಾರದ ಮೊಟ್ಟೆಯಾಗಿ ಬಾಳಬೇಕಾಗುತ್ತದೆ.

ವಿನಾಯಕ: ಸಧ್ಯಕ್ಕೆ ತಿರುಗಿ ಕುಂಕುಮ ಹಚ್ಚಿಕೊಳ್ಳುವುದು ಬೇಡ ಕಾಮಾಕ್ಷಿ. ಬರಿ ಹಣೆಯಿಂದಲೇ ನನ್ನಲ್ಲಿ ಬೆರೆತು ಕಾಮಸುಖ ಸಗ್ಗವನು ಗಳಿಸು. ವಿಧವೆಯ ವಡವಾಗ್ನಿಯಲ್ಲಿ ಬಿದ್ದು ಬಾಡಿ ಹೋಗಿರುವ ನಿನ್ನ ಯೌವನದ ಬಳ್ಳಿಗೆ ತೃಪ್ತಿಯ ನೀರೆರೆದು ಅದು ಚಿಗುರುವಂತೆ ಮಾಡುವುದೇ ನನ್ನ ಮನದಾಸೆ. ಬಹುದಿನಗಳಿಂದಲೂ ನೀನು ನನ್ನ ಕಣ್ಣಂಚಿನಲ್ಲಿ ಕೊರೆಯುತ್ತಿರುವೆ. ಸುಮಧುರವಾಗಿ ಬೆಳೆದು ನಿಂತ ನಿನ್ನ ಸುಂದರ ದೇಹ ನನಗೆ ಹಸಿವನ್ನುಂಟು ಮಾಡಿದೆ. ಮೇಲೆ ಕುಂಕುಮವಿಲ್ಲದ ನಿನ್ನ ಹಣೆ ನನ್ನಾಸೆಯನ್ನು ಮತ್ತಷ್ಟು ಕೆರಳಿಸಿರುವುದು ಕಾಮಾಕ್ಷಿ. ನಿನ್ನ ಸುಖಕ್ಕಾಗಿಯೇ ಕೈ ನೀಡಿ ನಿಂತ ನನ್ನನ್ನು ತೃಪ್ತಿಪಡಿಸು.

ಕಾಮಾಕ್ಷಿ: ವಿನಾಯಕ, ನಿನ್ನಂತೆ ನನ್ನಲ್ಲಿ ಸುಖದಾಸೆ ಮೂಡುತ್ತಿದೆಯಾದರೂ ವಯಸ್ಸಿಗೆ ಬಂದ ಮಗನಾದ ರವೀಂದ್ರನ ಮುಖ ನೋಡಿ ಹೆದರಬೇಕಾಗಿದೆ. ನಾಳೆ ನಮ್ಮೀರ್ವರ ಮಿಲನದ ಅರಿವು ಉಂಟಾದರೆ ಉರಿದು ಬೀಳಲಿಕ್ಕಿಲ್ಲವೇ ಅವನು.

ವಿನಾಯಕ: ಎಲ್ಲಿಯೋ ಕಲಿತು, ಇಂದಿಲ್ಲ ನಾಳೆ ನೌಕರಿಯ ಮೇಲೆ ಹೋಗುವ ಆ ನಿನ್ನ ಮಗನಿಗಾಗಿ ಹೇದರಬೇಕಿಲ್ಲ ಕಾಮಾಕ್ಷಿ. ಒಂದು ವೇಳೆ ಅವನಿಗೆ ನಮ್ಮ ಪ್ರೇಮದ ಅರಿವಾದರೂ ಏನು? ತಾಯಿಯ ಸುಖಕ್ಕೆ ತಡೆಯಾಗಿ ಬಂದರೆ ಮಗನನ್ನು ಕೂಡ ದಿಕ್ಕರಿಸಿ ಬಾಳುವ ಧೈರ್ಯ ಬೇಕು

ನಿನ್ನಲ್ಲಿ. ತೆರೆಯ ಮರೆಯಲ್ಲಿ ನಡೆಯುವ ನಮ್ಮಿರ್ವರ ಪ್ರೇಮ ಪಥದಲ್ಲಿ ನೀನು ಗರ್ಭವತಿಯಾದರೂ ಅದನ್ನು ದಕ್ಕಿಸಿಕೊಳ್ಳುವ ಧೈರ್ಯ ನನ್ನಲ್ಲಿದೆ.

ಕಾಮಾಕ್ಷಿ: ವಿನಾಯಕ!

ವಿನಾಯಕ: ಅಳುಕದಿರು ಕಾಮಾಕ್ಷಿ ಮುಂಬರುವ ಎಲ್ಲ ಸಮಸ್ಯೆಗಳನ್ನು ಎದುರಿಸಲು ನಾನಿದ್ದೇನೆ. ನಿರ್ಭೀತಿಯಿಂದ ಪ್ರೇಮದ ಗಿರಿಶಿಖರದಲ್ಲಿ ಸಾಗಿ ಸೌಖ್ಯ ಪಡೆಯೋಣ.

ವೃತ್ತಿರಂಗಭೂಮಿ ನಾಟಕಗಳಲ್ಲಿ ಸಾಮಾನ್ಯವಾಗಿ ಖಳನಾಯಕನೊಬ್ಬ ಇದ್ದೇ ಇರುತ್ತಾನೆ. ನಾಟಕದ ನಾಯಕಿಯ ಸುತ್ತ ಈತನ ವಿಕೃತ ಭಾವನೆಗಳು ಕುಣಿಯುತ್ತವೆ. ಅವನು ತನ್ನ ಪ್ರೇಮದ ಆಲಾಪವನ್ನು ವ್ಯಕ್ತಪಡಿಸುವಲ್ಲಿ ಉತ್ಥಾನ ಶೃಂಗಾರವೇ ಮೈದೋರುತ್ತದೆ. ನಾಯಕಿ ಇದನ್ನು ಪ್ರತಿಭಟಿಸುವ ಶಬ್ದಗಳಲ್ಲಿ ವ್ಯಂಗ್ಯದ ಮೊನಚು ತುಂಬಿಕೊಂಡಿರುತ್ತದೆ. ಇದು ಮೊದಲನೆಯ ಉದಾಹರಣೆಗಾದರೆ ಎರಡನೆಯದರಲ್ಲಿ ಖಳನಾಯಕನನ್ನು ಸ್ವೀಕರಿಸುವ ರೀತಿ ಸಂಭಾಷಣೆಯ ನೇಯ್ಗೆಯಲ್ಲಿಯೇ ಇದೆ. ಇಲ್ಲಿಯೂ ಖಳನಾಯಕನ ಮಾತು ಶೃಂಗಾರಪೂರಿತವೇ ಆಗಿವೆ. ಆದರೆ ಸಮಾಜಕ್ಕೆ ಹೆದರುವ ಪ್ರತಿ ನಾಯಕಿಯ ಮಾತುಗಳು ಅಧೈರ್ಯದಿಂದ ಕೂಡಿರುವುದನ್ನು ಗುರುತಿಸಬಹುದು. ಹೀಗೆ ಸಂಭಾಷಣೆಗಳು ಆಡುವವರ ಸ್ವಭಾವ ಮತ್ತು ಸಂದರ್ಭವನ್ನವಲಂಬಿಸಿ ಮುಂದುವರೆಯುತ್ತವೆ.

ಹಾಡು ಮತ್ತು ಸಂಗೀತ

ನಾಟಕಕಾರನೇ ತನ್ನ ನಾಟಕಗಳಿಗೆ ಸಂದರ್ಭಾನುಸಾರ ಹಾಡುಗಳನ್ನು ಬರೆದು ಸೇರಿಸುವುದು ವೃತ್ತಿರಂಗ ಭೂಮಿಯ ವಿಶೇಷತೆ. ಹೀಗೆ ವೃತ್ತಿರಂಗಭೂಮಿ ನಾಟಕಕಾರ ಏಕಕಾಲಕ್ಕೆ ನಾಟಕಕಾರನೂ ಆಗುತ್ತಾನೆ, ಕವಿಯೂ ಆಗುತ್ತಾನೆ. ಆದ್ದರಿಂದಲೇ ನಾಟಕಕಾರನನ್ನು 'ಕವಿ'ಯೆಂದು ಗುರುತಿಸುವುದು, ಹಾಗೆ ಸಂಬೋಧಿಸುವುದು ವೃತ್ತಿರಂಗಭೂಮಿಯಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದೆ.

ಬಿ.ಆರ್. ಅರಿಷಿಣಗೋಡಿಯವರು ತಮ್ಮ ಬಹುತೇಕ ನಾಟಕಗಳಿಗೆ ಎಲ್ಲಾ ಹಾಡುಗಳನ್ನು ತಾವೇ ಬರೆದಿದ್ದಾರೆ. ಅವರ ೧೪ ನಾಟಕಗಳನ್ನು ಪರಿಶೀಲಿಸಿದಾಗ ಸಾಕಷ್ಟು ಹಾಡುಗಳು ಇಲ್ಲಿ ದೊರೆಯುತ್ತವೆ. ಈ ಹಾಡುಗಳು ದೀರ್ಘವಾಗಿರುವುದಿಲ್ಲ. ಒಂದು ನುಡಿ, ಹೆಚ್ಚೆಂದರೆ ಎರಡು ನುಡಿ, ಅರಿಷಿಣಗೋಡಿಯವರ ಹಾಡುಗಳ ಭಾಷೆ ಕುರಿತು ಈಗಾಗಲೇ ಚರ್ಚಿಸಲಾಗಿದೆ. ಸಧ್ಯದ ವಿವೇಚನೆಯೆಂದರೆ ಈ ಹಾಡುಗಳ ಬಳಕೆ ಕುರಿತು.

ಬಿ.ಆರ್. ಅರಿಷಿಣಗೋಡಿಯವರೆ ಹೇಳುವಂತೆ ಅವರ ನಾಟಕಗಳ ರಂಗ ಪ್ರಯೋಗದಲ್ಲಿ ಎಲ್ಲಾ ಹಾಡುಗಳನ್ನು ಅಳವಡಿಸಿಲ್ಲ. ಅಳವಡಿಸಲ್ಪಟ್ಟ ಎಲ್ಲಾ ಹಾಡುಗಳೂ ಲೇಖಕ ಬರೆದ ರೂಪದಲ್ಲಿಲ್ಲ. ನಾಟಕ ರಚನೆಯ ಕಾಲಕ್ಕೆ ಸನ್ನಿವೇಶಕ್ಕನುಗುಣವಾಗಿ ಅರಿಷಿಣಗೋಡಿಯವರೆನೋ ಪದ್ಯ ರಚಿಸುತ್ತಾರೆ.

ರಂಗ ಪ್ರಯೋಗದಲ್ಲಿ ಯಾವ ಯಾವುದೋ ಕಾರಣಕ್ಕೆ ಆ ಹಾಡು ಕೈಬಿಟ್ಟು ಹೋಗಬಹುದು ಅಥವಾ ಆ ಹಾಡಿನ ಸ್ಥಾನವನ್ನು ಅದೇ ಮಾದರಿಯ ಬೇರೊಂದು ಹಾಡು ಅತಿಕ್ರಮಿಸಬಹುದು. ಹೀಗಾಗುವುದಕ್ಕೆ ಬಹಳಷ್ಟು ಸಲ ಕಲಾವಿದರ ಅಭಿರುಚಿ, ಆಸಕ್ತಿಗಳು ಕಾರಣವಾಗುತ್ತವೆ. ಬೇರೊಂದು ಕಂಪನಿಯಿಂದ ವಲಸೆ ಬಂದ ಕಲಾವಿದ ಈ ಹಿಂದಿನ ಕಂಪನಿಯಲ್ಲಿ ತಾನು ಹಾಡಿದ, ತನಗೆ ಬಹಳ ಹಿಡಿಸಿದ ಹಾಡನ್ನು ಇಲ್ಲಿ ಬಳಸಿಕೊಳ್ಳಬಹುದು. ಕಲಾವಿದನ ಈ ಹಾಡು ಖಂಡಿತವಾಗಿಯೂ ಅರಿಷಿಣಗೋಡಿಯವರೊಂದಿಗೆ ಚರ್ಚಿಸಲ್ಪಡುತ್ತಿತ್ತು. ಅದು ಪ್ರಸ್ತುತ ಸಂದರ್ಭಕ್ಕೆ ಅನುಗುಣವಾಗಿದೆ ಎಂಬುದು ಖಚಿತವಾದಾಗ ಮಾತ್ರ ಅವರು ಒಪ್ಪಿಗೆ ಕೊಡುತ್ತಿದ್ದರು. ಹೀಗೆಯೇ ಅರಿಷಿಣಗೋಡಿಯವರು ಬರೆದ ಹಾಡು, ಹಾಡಿನ ರಾಗ ಸಂಯೋಜನೆ ಬೇರೆ ಕಂಪನಿಗಳಿಗೆ ವರ್ಗಾಯಿಸಲ್ಪಟ್ಟಿದ್ದರೂ ಆಶ್ಚರ್ಯವಿಲ್ಲ.

ವೃತ್ತಿರಂಗಭೂಮಿಯ ಹಾಡಿಗೆ ಸಂಬಂಧಪಟ್ಟ ಈ ಚಲನವಲನ ಮೌಖಿಕ ಪರಂಪರೆಯ ಜಾನಪದ ಸಾಹಿತ್ಯದ ಸ್ವರೂಪವನ್ನೇ ಪಡೆಯುತ್ತದೆ. ಮುಂದೊಂದು ಕಾಲದಲ್ಲಿ ಈ ನಾಟಕಗಳ ಗೀತರಚನಾಕಾರರನ್ನು ಗುರುತಿಸುವುದೇ ಕಷ್ಟವಾಗುತ್ತದೆ.

ಬಿ.ಆರ್. ಅರಿಷಿಣಗೋಡಿಯವರು ನಾಟಕ ರಚನೆಯ ಕಾಲಕ್ಕೆ ರಚಿಸಿದ ಪದ್ಯಗಳು ಸ್ವತಃ ಅರಿಷಿಣಗೋಡಿ ಯವರಿಂದಲೇ ರಚಿಸಲ್ಪಟ್ಟಂತವುಗಳು. ಇದು ಪ್ರಕಟಿತ ಅಪ್ರಕಟಿತ ಎರಡೂ ನಾಟಕಗಳಿಗೆ ಅನ್ವಯಿಸಿ ಹೇಳುವ ಮಾತು. ಆದರೆ ರಂಗಪ್ರಯೋಗ ಸಂದರ್ಭದಲ್ಲಿ ಹಾಡಲ್ಪಡುವ ಹಾಡು ಅದು ಅರಿಷಿಣಗೋಡಿ ಯವರದೇ ಆಗಿರಬಹುದು ಅಥವಾ ಅನ್ಯರದು ಆಗಿರಬಹುದು. ಇಂತಹ ಸೇರ್ಪಡೆಗೆ ಕಲಾವಿದರು ಕಾರಣವಾಗುತ್ತಾರೆಂಬುದನ್ನು ಈ ಮೊದಲೇ ಹೇಳಿಯಾಗಿದೆ.

ಅರಿಷಿಣಗೋಡಿಯವರು ತಮ್ಮ ನಾಟಕಗಳಿಗೆ ನಾಂದಿ ಮತ್ತು ಮಂಗಲ ಪದ್ಯಗಳನ್ನು ತಾವೇ ರಚಿಸಿದ್ದಾರೆ.

ನಾಂದಿ ಮತ್ತು ಮಂಗಲ ಪದ್ಯಗಳು ಭಾರತೀಯ ರಂಗಪ್ರಯೋಗ ಪರಂಪರೆಯ ವಿಶೇಷತೆ, ಜಾನಪದ, ವೃತ್ತಿ, ಹವ್ಯಾಸಿ ಯಾವುದೆ ಪ್ರಕಾರವಿರಲಿ ಇವಕ್ಕೆ ನಾಂದಿ ಮತ್ತು ಮಂಗಲ ಪದ್ಯಗಳು ಅವಶ್ಯಕ. ವೃತ್ತಿರಂಗಭೂಮಿ ನಾಟಕ ರಚನಕಾರರು ರಚಿಸಿದ ಪದ್ಯಗಳು ನಾಟಕದಿಂದ ನಾಟಕಕ್ಕೆ ಭಿನ್ನ ವಾಗಿರುತ್ತವೆ. ಈ ನಾಟಕಗಳನ್ನು ಆಡುವ ಕಂಪನಿಗಳು ಅವೇ ಪದ್ಯಗಳನ್ನು ಬಳಸಿಕೊಳ್ಳಬೇಕೆಂಬ ನಿರ್ಬಂದವೇನಿಲ್ಲ. ಆಯಾ ಕಂಪನಿಗಳು ತಮ್ಮ ತಮ್ಮ ಇಷ್ಟ ದೇವತೆಗಳ ಸ್ತುತಿಗೈದು ಸ್ತೋತ್ರ ರೂಪದ ಪದ್ಯಗಳನ್ನು ನಾಂದಿ, ಮಂಗಲ ಪದ್ಯಗಳೆಂದು ಹಾಡುವುದಿದೆ. ಸಾಮಾನ್ಯವಾಗಿ ಕಂಪನಿಯೊಂದು ತನ್ನೆಲ್ಲಾ ನಾಟಕ ಪ್ರಯೋಗಗಳಿಗೆ ಅದೇ ನಾಂದಿ ಅದೇ ಮಂಗಲ ಪದ್ಯಗಳನ್ನು ಇಟ್ಟುಕೊಳ್ಳುವುದುಂಟು. ಅಪವಾದಾತ್ಮಕವಾಗಿ ಒಮ್ಮೊಮ್ಮೆ ಇದು ಸಡಿಲಗೊಂಡು ಬೇರೆ ನಾಂದಿ, ಮಂಗಲಗಳು ಸೇರಿಸಿಕೊಳ್ಳಬಹುದು.

ಬಿ.ಆರ್. ಅರಿಷಿಣಗೋಡಿಯವರು ತಮ್ಮ ಎಲ್ಲಾ ನಾಟಕಗಳ ರಂಗಪ್ರಯೋಗಗಳಿಗೆ ಒಂದೇ ನಾಂದಿ ಒಂದೇ ಮಂಗಲ ಪದ್ಯವನ್ನು ಇಟ್ಟುಕೊಂಡಿದ್ದಾರೆ. ಕಮತಗಿ ಗ್ರಾಮದ ಅಧಿದೈವವಾದ ಹುಚ್ಚೇಶ್ವರನನ್ನು ನಾಂದಿ ಪದ್ಯದಲ್ಲಿ ಸ್ಮರಿಸಿದರೆ ತಮ್ಮ ಮನೆ ದೇವರಾದ ಕೆಲವಡಿ ರಂಗನಾಥನನ್ನು ಮಂಗಲ ಪದ್ಯದಲ್ಲಿ ಸ್ಮರಿಸಲಾಗಿದೆ.

ಬಿ.ಆರ್. ಅರಿಷಿಣಗೋಡಿಯವರು ಪ್ರಸಿದ್ಧ ನಾಟಕಕಾರರಾದಂತೆ ಉತ್ತಮ ಹಾಡುಗಳನ್ನು ರಚಿಸಿ ಕವಿಗಳೂ ಎನಿಸಿಕೊಂಡಿದ್ದಾರೆ. ಅವರು ಪ್ರತ್ಯೇಕವಾಗಿ ಕವನಗಳನ್ನು ರಚಿಸಲಿಲ್ಲ. ಆದರೆ ತಾವು ರಚಿಸಿದ ನಾಟಕಗಳಿಗೆ ಸಂದರ್ಭಾನುಸಾರ ಹಾಡುಗಳನ್ನು ರಚಿಸಿದರು. ಅವರು ರಚಿಸಿದ ಹಾಡುಗಳನ್ನು ಗಮನಿಸಿದಾಗ ಬಿ.ಆರ್. ಅರಿಷಿಣಗೋಡಿಯವರು ಒಬ್ಬ ಉತ್ತಮಮಟ್ಟದ ಕವಿತಾ ಪ್ರತಿಭೆಯನ್ನು ಹೊಂದಿದವರು ಎಂಬುದು ಸ್ಪಷ್ಟವಾಗುತ್ತದೆ. ಅವರು ಕವಿತೆ ಬರೆಯುವ ಉದ್ದೇಶ ಕೇವಲ ನಾಟಕದ ಸಾಂದರ್ಭಿಕ ಭಾವಪುಷ್ಟಿಗೆ ಮಾತ್ರ ಸೀಮಿತವಾಗಿದ್ದರೂ ಅವರ ಕವಿತೆಗಳು ರಸ, ಭಾವ, ಅಲಂಕಾರಗಳಿಂದಲೂ ಅಧ್ಯಯನ ಯೋಗ್ಯವಾಗಿವೆ ಎಂಬುದು ಗಮನಾರ್ಹ ಸಂಗತಿ.

ಅವರ ಒಟ್ಟು ೧೪ ನಾಟಕಗಳಲ್ಲಿ ಕತೆಗೆ ಸಂಬಂಧಿಸಿದಂತೆ, ಸನ್ನಿವೇಶಕ್ಕೆ ಅನುಗುಣವಾಗಿ ಸುಮಾರು ಒಂದು ನೂರು ಹಾಡುಗಳು ರಚನೆಗೊಂಡಿವೆ. ಅವರ ಹಾಡುಗಳು ಸಂಗೀತ ಗುಣ ಹೊಂದಿರುವ ಹಾಗೆ ಸಾಹಿತ್ಯ ಗುಣಗಳನ್ನು ಪಡೆದಂತಹುಗಳಾಗಿವೆ. ಇವು ಸಾಂದರ್ಭಿಕ ಪದ್ಯಗಳಾಗಿರುವುದರಿಂದ ಎಲ್ಲ ಪದ್ಯಗಳು ಉತ್ತಮವಾದವುಗಳೆಂದು ಹೇಳಲಾಗದು. ಅಂದರೂ ಅಲ್ಲಲ್ಲಿ ಕಾವ್ಯ ಗುಣ ಕಂಗೊಳಿಸುತ್ತವೆ.

ಬಿ.ಆರ್. ಅರಿಷಿಣಗೋಡಿಯವರು ನಾಟಕ ರಚನೆಗೆ ತಮ್ಮನ್ನು ತೊಡಗಿಸಿಕೊಂಡದ್ದು ನವೋದಯ ಸಾಹಿತ್ಯದ ಅಂತ್ಯ ಮತ್ತು ನವ್ಯ ಸಾಹಿತ್ಯದ ಪ್ರಾರಂಭದ ಕಾಲದಲ್ಲಿ. ಕುವೆಂಪು, ಬೇಂದ್ರೆ, ಗೋಕಾಕರ ಪ್ರಭಾವ ಇವರ ಮೇಲೆ ಬಿದ್ದಿರುವದನ್ನು ಕಾಣುತ್ತೇವೆ. ಆದುದರಿಂದಲೆ ಅವರಿಗೆ ಉತ್ತಮಮಟ್ಟದ ಕೆಲವೊಂದು ಪದ್ಯಗಳನ್ನು ರಚಿಸಲು ಸಾಧ್ಯವಾಯಿತು.

ಕೆಲವು ನಾಟಕಕಾರರು ಒಂದೊಂದು ನಾಟಕಕ್ಕೆ ಒಂದೊಂದು ಬೇರೆಯದಾದ ನಾಂದಿ, ಮಂಗಲ ಪದ್ಯಗಳನ್ನು ರಚಿಸಿದ್ದಾರೆ. ಆದರೆ ಅರಿಷಿಣಗೋಡಿಯವರು ತಮ್ಮ ಒಟ್ಟು ಹದಿನಾಲ್ಕು ನಾಟಕಕ್ಕೆ ಒಂದೇ ನಾಂದಿ ಪದ್ಯ ಹಾಗೂ ಒಂದೇ ಮಂಗಲ ಪದ್ಯವನ್ನು ರಚಿಸಿ ರಂಗಪ್ರಯೋಗಕ್ಕೆ ಒಳಪಡಿಸಿದ್ದು ಇವರ ವೈಶಿಷ್ಟ್ಯ.

ಅರಿಷಿಣಗೋಡಿಯವರು ಕಂಪನಿ ಕಟ್ಟುವ ಪೂರ್ವದಲ್ಲಿ ಗದುಗಿನ ಪಂಚಾಕ್ಷರಿ ಗವಾಯಿಗಳ ಶಿಷ್ಯರಾದ ಕಮತಗಿಯ ಗದಿಗೆಯ್ಯನವರಲ್ಲಿ ಆರು ತಿಂಗಳು ಸಂಗೀತ ಅಭ್ಯಾಸ ಮಾಡಿದರು. ಐದಾರು ರಾಗಗಳನ್ನು ತಿಳಿದುಕೊಂಡು ಇವರು ನಾಟಕಗಳಿಗೆ ಬೇಕಾದಷ್ಟು ಸಂಗೀತ ಜ್ಞಾನವನ್ನು ಪಡೆದಿದ್ದಾರೆ. ಈ ಸಂಗೀತ

ಲಯದ ಚೌಕಟ್ಟು ಮತ್ತು ಕವಿತಾಶಕ್ತಿಗಳ ಸಂಯೋಜನೆಯಿಂದಾಗಿ ಉತ್ತಮಮಟ್ಟದ ಕವಿತಾ ರಚನೆ ಅರಿಷಿಣಗೋಡಿಯವರಿಗೆ ಸಾಧ್ಯವಾಗಿದೆ. ಒಂದೊಂದು ನಾಟಕದಲ್ಲಿ ಎಂಟರಿಂದ ಒಂಭತ್ತು ಹಾಡುಗಳನ್ನು ಬರೆದಿದ್ದಾರೆ.

ನಾಂದಿ ಪದ್ಯ ನಾಟಕಕ್ಕೆ ಒಂದು ಭಕ್ತಿ ಪೂರಿತ ಶಾಂತ ವಾತಾವರಣವನ್ನು ಸೃಷ್ಟಿಸುತ್ತದೆ. ಅರಿಷಿಣಗೋಡಿಯವರು ಬರೆದಿರುವ ಈ ನಾಂದಿ ಪದ್ಯ ಕಲಾವಿದರಲ್ಲಿ, ಪ್ರೇಕ್ಷಕರಲ್ಲಿ ಭಕ್ತಿ ಭಾವವನ್ನು ತುಂಬುತ್ತಿತ್ತು. ಶ್ರೀ ಹುಚ್ಚೇಶ್ವರನ ಸ್ತುತಿಪರ ಪದ್ಯವು ಅವರ ಎಲ್ಲ ನಾಟಕಗಳಿಗೂ ಬಳಕೆಯಾಗಿದೆ.

ನಾಂದಿ

ಹುಚ್ಚೇಶ ಶ್ರೀ ಮಹೇಶ
ಕಮತಗಿಯ ನಿವಾಸ
ಕೋಟೆಕಲ್ ಮಠಾಧೀಶ
ಅಸಮಬಲ ತೋಷ ನೀ
ಕಾಶಿ ಸ್ವಾಮಿ ಎನಿಸಿದಾತ
ಹುಚ್ಚೇಶ ಶ್ರೀ ಮಹೇಶ

ಇಲ್ಲಿ ಬರುವ ನಾಂದಿ ಪದ್ಯ ಕಮತಗಿಯಲ್ಲಿ ನೆಲೆನಿಂತ ಹುಚ್ಚೇಶ್ವರ, ಕೋಟೆಕಲ್ ಮಠದ ಒಡೆಯನಾದ ಕಾಶಿ ವಿಶ್ವನಾಥನ ಸ್ತುತಿಯಾಗಿದೆ.

ನಾಟಕದ ಪದ್ಯಗಳು

ಅನ್ಯರಿಗೆ ಹೋಲಿಸಿದರೆ ಬಿ.ಆರ್. ಅರಿಷಿಣಗೋಡಿಯವರ ನಾಟಕಗಳಲ್ಲಿ ದೇವಸ್ತುತಿ ಪರವಾದ ಪದ್ಯಗಳು ಕಡಿಮೆಯಂದೇ ಹೇಳಬಹುದು. ಡಾ. ಮೃತ್ಯುಂಜಯ ಹೊರಕೇರಿಯವರು ಹೇಳಿರುವಂತೆ "ವೃತ್ತಿ ನಾಟಕಗಳಲ್ಲಿ ಶೃಂಗಾರ ಭರಿತವಾದ ಹಾಡುಗಳಿರುವುದು ನಾಟಕದ ಒಂದು ಅಂಗ ಎನಿಸಿದೆ" (ನಲವಡಿ ಶ್ರೀಕಂಠ ಶಾಸ್ತ್ರಿಗಳ ಜೀವನ ಮತ್ತು ಕೃತಿಗಳು- ಡಾ. ಮೃತ್ಯುಂಜಯ ಹೊರಕೇರಿ, ಪುಟ ೧೬೨) ಇದಕ್ಕೆ ಬಿ.ಆರ್. ಅರಿಷಿಣಗೋಡಿಯವರು ಹೊರತಾಗಿಲ್ಲ. ಸಂಗ್ಯಾ-ಬಾಳ್ಯಾ ನಾಟಕದಲ್ಲಿಯ ಒಂದು ಹಾಡನ್ನು ನೋಡಬಹುದು.

ಮಾನಿಂಗಿ: ಬೇಡಿದ ಹೆಣ್ಣು ಬಳಿಯಲ್ಲಿರಲು
ಬೇರೆ ಕಡೆಗೆ ನಿನ್ನ ಕಣ್ಯಾಕ
ಕಾಣದ ಹೂವಿಗೆ ಆಸೆ ಪಟ್ಟು
ಕೈಗೆ ಮುಳ್ಳು ಚುಚಗೊಳ್ಳುವದ್ಯಾಕ

ಚೆನ್ನ: ಹೆಣ್ಣಿನ ಮನಸು ತಿಳಿಯುವದಕ
ಬಲು ಜಾಣ ಬುದ್ದಿ ನಮಗಿರಬೇಕ
ಶೀಲ ಧರ್ಮ ನೀತಿ ನಡತೆ
ಕೂಡಿದ ಹೆಂಡತಿ ಬೇಕ

ಮಾನಿಂಗಿ: ನಾಚಿಕೆ ಏಕೆ - ಹೆದರಿಕೆ ಇನ್ನಾಕೆ
ಮನೆ ಹಿರಿಯ ಒಪ್ಪಿದಾಗ
ಮನಸ್ಸು ಮನಸ್ಸು ಒಂದಾದಾಗ

ಚೆನ್ನ: ಎಂದಿಗೂ ನೀ ನನ್ನಾಕೆ
ಚೆಲು ಚಿಮ್ಮುವ ಕಣ್ಣಿನಾಕೆ
ಮನಸಾರೆ ನನ್ನ ಮೆಚ್ಚಿದಾಕೆ
ಕೆನೆ ಹಾಲು ಮೊಸರು ಉಣಿಸುವಾಕೆ

ಮಾನಿಂಗಿ: ಮಣ್ಣಿನಾ ಮಗನಾಗಿ ದುಡಿಯುವ ಧೀರ
ಮೈಬೆವರು ಹರಿಸಿ ಮೆರೆವ ಕಂಭೀರ

ಚೆನ್ನ: ಸಂಸಾರ ನೋಡು ಸರಳಲ್ಲಾ ನಾರಿ
ಸಾವಿರ ಹರದಾರಿ ಬಹುದೂರ ದಾರಿ

ಮಾನಿಂಗಿ: ಕೈಗೆ ಕೈ ಕೂಡಿಸಿ ನಾವಿನ್ನು
ಸೊಗಸಿಂದ ನಡೆಸಬೇಕು ಬಾಳನ್ನು

ಚೆನ್ನ: ಇನ್ನೊಬ್ರ ಹಂಗು ನಮಗ್ಯಾಕೆ ಇನ್ನು
ಬಂಗಾರದ ಬಾಳು ನಮಗಾಯಿತಿನ್ನು

ಹೆಣ್ಣು-ಗಂಡಿನ ಶೃಂಗಾರ, ಲೋಕಾನುಭವಗಳೆರಡನ್ನೂ ಈ ಮೇಲಿನ ಪದ್ಯ ಸೊಗಸಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಇಲ್ಲಿ ಹೆಣ್ಣು-ಗಂಡಿನ ಪ್ರೇಮ ಭಾವನೆಗಳು ಚಿಗುರೊಡೆದು ಪ್ರೇಮಸುಧೆಯನ್ನು ಹರಿಸುವುದು ಆಕರ್ಷಕವಾಗಿ ಕಾಣುತ್ತದೆ.

'ಬಸ್ ಕಂಡಕ್ಟರ್' ನಾಟಕದಲ್ಲಿ ಹೆಣ್ಣಿನ ಆಕರ್ಷಣೆ ಸುಂದರವಾಗಿ ಈ ರೀತಿ ಚಿತ್ರಣಗೊಂಡಿರುವುದನ್ನು ಕಾಣುತ್ತೇವೆ.

ಕಾಮರೂಪದ ಹೆಣ್ಣು ಅವಳ ಮೇಲೆ ಎಲ್ಲಾರ ಕಣ್ಣು
ಕಾಮನ ಬಿಲ್ಲಿನ ಮಿಂಚು ಅವಳ ಕಣ್ಣಿನ ಸಂಚು

ಹೆಣ್ಣಿಗಾಗಿ ಮುಕ್ಕಣ್ಣನು ಸೋತು
ಕಣ್ಣುಬಾಯಿ ಬಿಡುವಂತ ಮಾತು
ರಾಮ ರಾವಣರ ಯುದ್ಧವೂ ಆಯ್ತು
ಕೌರವ-ಪಾಂಡವರ ಕಾಳಗವೂ ಆಯ್ತು

ಹೆಣ್ಣಿನ ಚೆಲುವು ಮತ್ತು ಆ ಸೆಳೆತದಿಂದಾಗುವ ಪರಿಣಾಮ ಇಲ್ಲಿ ಚಿತ್ರಿತವಾಗಿದೆ.

'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕದಲ್ಲಿ ಆರ್.ಎಂ.ಪಿ. ಡಾಕ್ಟರ್ ಶಂಕರನ ಹಾಡೊಂದು ಆಧುನಿಕತೆಯ ಆಡಂಬರವನ್ನು ವಿಡಂಬಿಸುವ ಪರಿ ಬಲು ಮೋಜಿನದಾಗಿದೆ.

ಸುತ್ತಲು ಸುಧಾರಣೆಯ ಚಿತ್ರಗಳೋ ಅಣ್ಣಾ
ನಮ್ಮ ಬಾಳಿಗಿಲ್ಲವಾಯ್ತು ಭವ್ಯವಾದ ಕಣ್ಣಾ
ಪಾಶ್ಚಿಮಾತ್ಯ ದೇಶಗಳ ಫ್ಯಾಶನ್ ಬಣ್ಣಾ
ಭಾರತೀಯರಾದ ನಾವು ಮರಳಾದಿವಣ್ಣಾ
ವಸ್ತು ಒಡವಿ ಗಡಿಗೆ ಮಡಿಕಿಯೆಲ್ಲಾ ಹಗುರಣ್ಣಾ
ಭಾರವಿಲ್ಲದಾ ವಸ್ತು ಪಾಸ್ಟಿಕ್ಕು ಬಂತಣ್ಣಾ
ನಮ್ಮ ಹಿರಿಯರಾ ಶಕ್ತಿ ನಮಗಿಂದ ಇಲ್ಲಣ್ಣಾ
ಒನ್ ಬಾಯ್ ಟು, ಟು ಬಾಯ್ ತ್ರಿ ಚಹಾ ಕಾಫಿ ಆಯ್ತಣ್ಣಾ
ದಿನಕ್ಕೊಂದು ಹೊಸ ನಮೂನಿ ಉಡಿಗೆ ತೊಡಿಗೆ ಟರ್ಲಿನ್
ಇಲಿಬೂಟು ಮುಂಗ್ಲಿಸೂಟು ದೇಹಕಾಯ್ತು ಫ್ಯಾಶನ್
ಹಿಂದೂ ನಾರಿ ತಾನುಟ್ಟ ಮೈ ಕಾಣುವ ಪ್ರಾಕ್ಲೀನ್
ಗಾಳಿ ಬೀಸಿ ಹಾರಿ ಹೋಯ್ತು ಉಟ್ಟ ಸೀರೆ ನೈಲಾನ್
ಹೊಸ ನಮೂನಿ ಪಾದರಕ್ಷೆ ಹಿಂಬಡಕ್ಕೆ ಹಾಯಿಲ್ಡ್
ಬೆಡಗು ಮಾಡಿ ತೂಗಿ ಬಾಗಿ ನಡೆಯುವುದೇ ಟಿಕ್ಸ್
ಗಾಳಿ ಮೇಲೆ ನಡೆದಂತೆ ಹವಾಯಿ ಚಪ್ಪಲ್ಸ್
ಮಳೆಗಾಲದ ಕೆಸರಿನಲ್ಲಿ ರಟಕ ಪಟಕ ರಾಡೀಸ್

ವೃತ್ತಿ ನಾಟಕ ಕಂಪನಿಗಳಲ್ಲಿ ಹಾಸ್ಯ ರೂಪದ ಪ್ರೇಮ ಕವನಗಳನ್ನು ಗಂಡು ಪಾತ್ರಗಳು ಹೆಚ್ಚಾಗಿ ಹಾಡಿದ್ದನ್ನು ಕಾಣುತ್ತೇವೆ. ಗಂಡು-ಹೆಣ್ಣು ಎರಡು ಕೂಡಿ ಸಂವಾದ ರೂಪದಲ್ಲಿ ಹಾಡುವುದನ್ನು ಬಿ.ಆರ್. ಅರಿಷಿಣಗೋಡಿಯವರ ಬಹಳಷ್ಟು ನಾಟಕಗಳಲ್ಲಿಯೂ ಕಾಣಬಹುದಾಗಿದೆ. ಅವರ 'ಸೈನಿಕನ ಸಹೋದರಿ' ನಾಟಕದಲ್ಲಿ ಚಂದ್ರಿ-ಸಂಜೀವ ಜೋಡಿ ಕೂಡಿ ಹಾಡುವ ಹಾಡು ಈ ರೀತಿಯಿದೆ.

ಚಂದ್ರಿ: ಹಣ ಹಣ ಎಂದು ನಿನ್ನ ಬಾಯಿ ಬಿಡಬೇಡ

ಹಣ ಹಣ ಎಂದು ನಿನ್ನ ಕಣ್ಣು ಕಣ್ಣು ಬಿಡಬೇಡ

ಸಂಜೀವ: ದೀನ ಜನರ ದಾಸನಾಗಿ ದುಡಿಯುವದನ್ನು ಮರೆಯಬೇಡ

ದಾನ ಧರ್ಮ ಮಾಡದೆ ಹೇಸಿ ನರಕ ಸೇರಬೇಡ

ಚಂದ್ರಿ: ಹೆಣ್ಣಿನಾಸೆ ಮಾಡಿದಂತ ರಾವಣನ ರುಂಡ ಹೋಯ್ತು

ಮಣ್ಣಿನಾಸೆ ಮಾಡಿದಂತ ಕೌರವನ ರುಂಡ ಹೋಯ್ತು

ಸಂಜೀವ: ಪಾಂಡವರ ಪುಣ್ಯದೀಪ ಧರ್ಮದಾರಿ ಬೆಳಗಿ ಬಂತು

ಸತ್ಯಮೇವ ಜಯತೆ ಎಂಬ ದಿವ್ಯ ನುಡಿಯು ನಿಜವಾಯ್ತು

ಚಂದ್ರಿ: ದೇಶಮಾತೆ ಉಳಿಯಲೆಂದು

ಈಶನಲ್ಲಿ ಬೇಡಿಕೊಂಡು

ನೀಡು ನಿನ್ನ ತನು ಮನ ಧನ

ವೈರಿಯನ್ನು ನೀಗಲೆಂದು

ಸಂಜೀವ: ಸೈನ್ಯ ಸಮರ ಎಂದು ನಮ್ಮ

ಸ್ವರ್ಗ ಭೂಮಿ ಎಂದೆಂದು

ರಾಷ್ಟ್ರವೀರನಾಗು ನಮ್ಮ

ಸ್ವಾತಂತ್ರ್ಯ ಉಳಿಯಲೆಂದು

ಬಿ.ಆರ್. ಅರಿಷಿಣಗೋಡಿಯವರ ಕಂಪನಿ ನಾಟಕಗಳಲ್ಲಿ ರಂಗಪ್ರಯೋಗಕ್ಕೆ ಒಳಪಟ್ಟ ಎಲ್ಲಾ ನಾಟಕಗಳಿಗೆ ಮಂಗಲ ಗೀತೆಯಾಗಿ ಈ ಕೆಳಗಿನ ಪದ್ಯವನ್ನು ಬಳಸಿರುವುದು ವಿಶೇಷವಾಗಿದೆ.

ಮಂಗಲಗೀತೆ

ಪೊರೆ ನೀನೆ ರಂಗನಾಥ

ಕರುಣದಿ ನಿ ಕಾಯುತಾನಿರತ

ನಾಂದಿ ಆಗು ನೀ ನಾಟ್ಯರಂಗಕೆ

ಹೊಳೆಹುಚ್ಚೇಶ ಗಿರಿಮಠದೀಶ

ಶ್ರೀ ಧನಕೇಶ ಕರುಣಪಾಶ

ಪೊರೆ ನೀನೆ ರಂಗನಾಥ

ಸಂಗೀತವಿಲ್ಲದೆ ನಾಟಕ ರಂಜಿಸುವುದಿಲ್ಲ ಎಂಬ ಸತ್ಯವನ್ನು ಕಂಡುಕೊಂಡ ಕಂಪನಿ ನಾಟಕಗಳಲ್ಲಿ ಇಂದು ಕನ್ನಡ, ಹಿಂದೀ ಚಿತ್ರಗೀತೆಗಳು, ಕವ್ವಾಲಿ, ಗಜಲ್‌ಗಳು ಬಂದು ಸೇರಿಕೊಂಡಿವೆ. ಆದರೆ ಅರಿಷಿಣಗೋಡಿಯವರು ಪ್ರದರ್ಶಿಸುತ್ತಿದ್ದ ನಾಟಕಗಳಲ್ಲಿ ಇವುಗಳ ಬಳಕೆ ವಿಪರೀತವಾಗಿದ್ದಿಲ್ಲ. ಕವಿತ್ವದ ದೃಷ್ಟಿಯಿಂದ ಬಿ.ಆರ್. ಅರಿಷಿಣಗೋಡಿಯವರ ಹಾಡುಗಳು ಗಮನಾರ್ಹವಾಗಿರದಿದ್ದರೂ ರಂಗದ ಮೇಲೆ ನಾಟಕದ ಸನ್ನಿವೇಶಕ್ಕೆ ರಂಗು ತರುವಲ್ಲಿ ಪರಿಣಾಮಕಾರಿಯಾಗಿದ್ದವು. ಪ್ರೇಕ್ಷಕರನ್ನು ರಂಜಿಸುವಲ್ಲಿ ಪ್ರೇಕ್ಷಕರಿಂದ 'ಒನ್ಸ್ ಮೋರ್' ಎನಿಸಿಕೊಳ್ಳುವ ಶಕ್ತಿಯನ್ನು ಪಡೆದವುಗಳಾಗಿದ್ದವು. ಅವರ ಎಲ್ಲಾ ಹಾಡುಗಳು ಹಾಡುಗಬ್ಬಗಳಾಗಿವೆ. ಬದುಕಿನ ನಾನಾ ಮಜಲುಗಳನ್ನು ತಮ್ಮ ಹಾಡುಗಳಲ್ಲಿ ಸೆರೆ ಹಿಡಿದಿದ್ದಾರೆ. ನಾಡು-ನುಡಿ ಪ್ರೇಮ, ಸಾಮಾಜಿಕ ದೋಷಗಳ ಕುರಿತು ಪರಿಣಾಮಕಾರಿಯಾದ ಅನೇಕ ಪದ್ಯಗಳನ್ನು ರಚಿಸಿರುವುದು ಅವರ ಹೆಗ್ಗಳಿಕೆಯಾಗಿದೆ.

ಪ್ರಾಸ

ಬಿ.ಆರ್. ಅರಿಷಿಣಗೋಡಿಯವರು ಪ್ರಾಸದ ಮಹತ್ವವನ್ನು ಅರಿತವರಾಗಿದ್ದರು. ಪ್ರಾಸವಿಲ್ಲದ ಪದ ತಾಸು ಹಾಡಿದರೇನು ಎಂದು ಸರ್ವಜ್ಞ ಕವಿ ಪ್ರಾಸದ ಮಹತ್ವವನ್ನು ಹೇಳಿದರೆ. ಬಿ.ಆರ್. ಅರಿಷಿಣ ಗೋಡಿಯವರು ಪ್ರಾಸವಿಲ್ಲದ ಗದ್ಯ ಎಷ್ಟಿದ್ದರೇನು ಎಂಬುದನ್ನು ಅರಿತು ತಮ್ಮ ನಾಟಕಗಳಲ್ಲಿ ಸಂದರ್ಭೋಚಿತವಾಗಿ ಪ್ರಾಸದ ಬಳಕೆಯನ್ನು ತಕ್ಕ ಮಟ್ಟಿಗೆ ಬಳಸಿರುವುದನ್ನು ಕಾಣುತ್ತೇವೆ. ಪ್ರಾಸದ ಬಳಕೆಗೆಗಾಗಿ ಬಿ.ಆರ್. ಅರಿಷಿಣಗೋಡಿಯವರು ತ್ರಾಸು ತೆಗೆದುಕೊಂಡವರಲ್ಲ. ಕಾವ್ಯಗಳಲ್ಲಾದರೆ ಆದಿಪ್ರಾಸ, ಅಂತ್ಯಪ್ರಾಸ ಸಾಮಾನ್ಯವಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ಆದರೆ ಅದೂ ಗದ್ಯ ಪ್ರಕಾರವಾದ ನಾಟಕಗಳಲ್ಲಿ ನಿಯತವಾಗಿ ಪ್ರಾಸವನ್ನು ಕಾಪಾಡಿಕೊಂಡು ಬರುವದು ಕಷ್ಟ ಸಾಧ್ಯವೇ.

ಪ್ರಾಸದ ಬಳಕೆ

ಬಡವ ಬಡವ, ಬಡವ ನಮ್ಮಂತವರಿಗಾಗಿಯೇ ಹುಟ್ಟಿ ಬಂದಿದ್ದಿರೇನು ನೀವು ಬಡಪಾಯಿಗಳು (ಲಂಚ ಸಾಮ್ರಾಜ್ಯ, ಪುಟ ೪)

ಮಾವನ ಮಗಳೆಂಬ ಮಮತೆ (ಲಂಚ ಸಾಮ್ರಾಜ್ಯ, ಪುಟ ೪೮)

ಹೇಡಿ ಹೆಂಗಸು ನಾನಲ್ಲ (ಹೆಣ್ಣುಮಗಳು ಪುಟ ೧೯)

ಪುಂಡರ ಗಂಡ ಸೋಟ ಮಿಂಡ (ಸೈನಿಕನ ಸಹೋದರಿ, ಪುಟ ೩೨)

ಮಾತೆಯ ಮಾನರಕ್ಷಣೆ (ಸೈನಿಕನ ಸಹೋದರಿ, ಪುಟ ೫೪)

ವರದಕ್ಷಿಣೆ ಹುಚ್ಚ ಹೆಚ್ಚಾಗಿತ್ತು, ನಮಗ ಮದವಿ ಅವಸರ ಹೆಚ್ಚಾಗಿತ್ತು(ಕಣ್ಣಿದ್ದೂ ಕುರುಡ, ಪುಟ ೧೦೧).

ಗುಣಕಲ್ಲ ಶೇಖರ ಹಣಕ್ಕೆ (ಬಡವರೂ ನಗಬೇಕು ಪುಟ ೧೮)

ನಮಗೇನ ಹತ್ತೈತಿ ನಿನಗೇನು ಹತ್ತೈತಲೇ (ಗರೀಬಿ ಹಟಾವೊ, ಪುಟ ೨೬)

ಕಡ್ಡಿ ಹೋಗಿ ಗುಡ್ಡ (ಗರೀಬಿ ಹಟಾವೊ, ಪುಟ ೩೯)

ಅಡಗಿ ಮಾಡಿ ಹಾಕೊ ಒಂದು ಹುಡುಗಿ ನೋಡಿ ಮದವಿ ಮಾಡಕೊ ಬೇಕು (ಗಂಡೆದೆಯ ಗೌರಿ, ಪುಟ ೧೧)

ಬಾಳು ಬರಿ ಗೋಳು (ಮಾವನ ಮನೆ-ಅನುರಾಧಾ, ಪುಟ ೧)

ಕೂಸು ನನ್ನ ಹೊಟ್ಟೆಯಲ್ಲಿ ಹುಟ್ಟಿದಾಗಲೇ ಪಾಪದ ಗಂಟನ್ನು ಕಟ್ಟಿಕೊಂಡು (ಮಾವನ ಮನೆ ಅನುರಾಧಾ, ಪುಟ ೧೭)

ಕಳ್ಳ ನನ್ನ ಮಕ್ಕಳು ಸುಳ್ಳ ನನ್ನ ಮಕ್ಕಳು (ಸಂಗ್ಯಾಬಾಳ್ಯಾ, ಪುಟ ೧)

ಬುಬ್ಬನಿ-ಗಿಬ್ಬನಿ (ಸಂಗ್ಯಾಬಾಳ್ಯಾ, ಪುಟ ೧೫)

ಏಕೆ ಭಿಕಾರಿಯ ಬೆಂಬತ್ತಿಬಂದ ಬಯಕೆ ಕೈಗೂಡಲಿಲ್ಲವೇ (ಲಂಚ ಸಾಮ್ರಾಜ್ಯ, ಪುಟ ೪೩)

ಇಗಾಳ್ರಿಯಪ್ಪಾ ತಾಳಿ ತಗೊಳ್ರಿ (ಲಂಚ ಸಾಮ್ರಾಜ್ಯ, ಪುಟ ೫೩)

ರೊಟ್ಟಿ ಇದ್ರ ಕೊಟ್ಟ ಬಿಡ್ರಿ (ಹೆಣ್ಣುಮಗಳು, ಪುಟ ೪)

ಅನ್ಯಭಾಷಾ ಬಳಕೆ

ಬಿ.ಆರ್. ಅರಿಷಿಣಗೋಡಿಯವರು ಕನ್ನಡ ಭಾಷೆಯಲ್ಲದೆ ಇಂಗ್ಲಿಷ್, ಹಿಂದಿ ಭಾಷೆಯ ಶಬ್ದ ವಾಕ್ಯಗಳನ್ನು ಧಾರಾಳವಾಗಿ ಬಳಸಿದ್ದಾರೆ.

ಹಿಂದಿ ಭಾಷೆಯನ್ನು ಬಿ.ಆರ್. ಅವರು ಹೆಣ್ಣುಮಗಳು ನಾಟಕದಲ್ಲಿ ಟಾಂಗಾವಾಲಾನ ಮುಖಾಂತರ ಬಳಸಿರುವುದನ್ನು ಈ ಕೆಳಗೆ ನೋಡಬಹುದು.

ಚುಪ್ ತೇರಿ ಮಾಕಿ ಚಿಲ್ಲಾಯಿತೊ ಮಾರ್ ಡಾರ್ಲಿಂಗ್..... ತಲಾಶ ರ..... ಏಕ್ ದಂಪತಿ ಶಿಖಾರಿ ಕೇಲಿಯೇ ದಿನಭರ್ ಟಾಂಗಾ ಚಲಾಯಿತೋ ಭೀ ಪೇಟ ಭರ ಆಚಾ ನಹಿ ಮಿಲ್ತಾ ಹೈ, ಭರಧಮೇ (ಹೆಣ್ಣುಮಗಳು, ಪುಟ ೨೬)

ನಾಟಕಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಖಳನಾಯಕ, ಹಾಸ್ಯ, ನಾಯಕ ಪಾತ್ರಗಳ ಮುಖಾಂತರ ಸಣ್ಣ, ಸಣ್ಣ ಇಂಗ್ಲೀಷ ಪದಗಳನ್ನು ಬಳಸಿರುವುದನ್ನು ಕಾಣುತ್ತೇವೆ.

ಇದನ್ನು ಎನ್‌ಲಾರ್ಜ್ ಮಾಡಿ ಆಯಿಲ್ ಪಂಪ ಹಾಕಿಕೊಡಬೇಕು. (ಇಲ್ಲಿಗೆ ಬಂತೋ ಸಂಗಯ್ಯಾ, ಪುಟ ೫)

ಆದೇರೀ ನೀವು ಹಮೇಶಾ ಬರ್‍ತಾ ಇರೋ ದೇಶಪಾಂಡೆ (ಇಲ್ಲಿಗೆ ಬಂತೋ ಸಂಗಯ್ಯಾ, ಪುಟ ೧೩)

ಯು ಫೂಲ್ ರಾಸ್ಕಲ್ (ಇಲ್ಲಿಗೆ ಬಂತೋ ಸಂಗಯ್ಯಾ, ಪುಟ ೮೫)

ಬೇಷ್, ಬೇಷ್ ಕಣೋ (ಕಣ್ಣಿದ್ದೂ ಕುರುಡ-ಗೌರಿ ಗೋಪಿ, ಪುಟ ೧೦)

ಪ್ರೈವೇಟ್ ಫ್ಯಾಕ್ಟರಿಯಲ್ಲಿ ಚೀಫ್ ಇಂಜನೀಯರ್ ಅಂತಾ ಅಪಾಯಿಂಟ್ ಆಗಿದ್ದೇನೆ (ಕಣ್ಣಿದ್ದೂ ಕುರುಡ-ಗೋಪಿ-ಗೌರಿ, ಪುಟ - ೧೧)

ಅಫ್-ಟು ಡೇಟ್ ಆಗಿರಬೇಕು (ಕಣ್ಣಿದ್ದೂ ಕುರುಡ, ಪುಟ ೧೯)

ಆಡು ಮಾತುಗಳು

ವೃತ್ತಿರಂಗಭೂಮಿಯ ಬಹಳಷ್ಟು ಸತ್ವ ಆಡುಮಾತಿನಲ್ಲಿದೆ. ತಮ್ಮ ನಿತ್ಯದ ಭಾಷೆಯನ್ನೇ ರಂಗದ ಮೇಲೆ ಅನುಭವಿಸುವ ಪ್ರೇಕ್ಷಕ ಅತ್ಯಂತ ಸಹಜವಾಗಿ ನಾಟಕವನ್ನು ಸುಖಿಸುತ್ತಾನೆ.

ಹೋಗ ನಿನ ನಾಚಿಗ್ಗೇಡಿ ಗಂಡ್ಸ ಹೋಗು (ಲಂಚ ಸಾಮ್ರಾಜ್ಯ, ಪುಟ ೨೬)

ಪರಿಚಯ ಆಯಿತೋ ಏನ ಅಲ್ಲೆ ಕತ್ತರಿ ಪೇಚ ಅತೊ (ಲಂಚ ಸಾಮ್ರಾಜ್ಯ, ಪುಟ ೨೬)

ಕಲ್ಲ ಒಗದ ಹ್ಯಾಂಗ ನಿಂತಾರ ಕಲ್ಲ ಮೂರ್ತಿಗತೆ (ಲಂಚ ಸಾಮ್ರಾಜ್ಯ, ಪುಟ ೨೮)

ಅಂತೂ ಇಂತೂ ರಂಡಿ ಮಕ್ಕಳ ವನವಾಸ ಮುಗದ ರಾಜದಾನಿ ಸಿಕ್ಕಂಗ ಆತ್ರೇಪ ನಮಗ (ಲಂಚ ಸಾಮ್ರಾಜ್ಯ, ಪುಟ ೩೦)

ಹೊಂ ಹೊಸದಾಗಿ ಹೊಕ್ಕಾಳ ಆಗದೇನ ಮಾಡಿತರಿ ದುಃಖ ಹಂಗಿಯಲ್ಲಾ ಮುಗಿಸಿ ಗಂಡನ ಮನಿ ಜಂತಿಯಲ್ಲಾ. ಪೂರಾ ಎಣಿಸಿ ಬಂದವಳನ್ನೂ ಕಳಸಬೇಕಾದ್ರ (ಹೆಣ್ಣುಮಗಳು, ಪುಟ ೫೧)

ಏ ಹುಂಬ ಗಂಡ್ಸ ಏನಿದು ಅವತಾರ, ಕೊಡಾ ಹೊತ್ತ ಕುಣಿಯಾಕ ಹತ್ತಿದಲ್ಲಿ (ಹೆಣ್ಣುಮಗಳು, ಖಬರಗೇಡಿ ನಿಂದ್ರಿಲ್ಲೆ ಒದರಕೊಂತ ನಿನಗೇನ ಹ್ವಾರೇ (ಹೆಣ್ಣುಮಗಳು, ಪುಟ ೨)

ಆಕೀ ಸಾಲಿ ಪಾಲಿ ಕಲ್ತಾಳೇನು (ಇಲ್ಲಿಗೆ ಬಂತೋ ಸಂಗಯ್ಯಾ, ಪುಟ ೫೮)

ಲಾಟ್ರ ಅಂದ್ರ ಬಲ್ಪ ಇಲ್ಲದ ಬ್ಯಾಟ್ರೀ (ಗರೀಬಿ ಹಟಾವೊ, ಪುಟ ೯)

ಏನಪ ಬಿಳಿಬಂಟಾ ಆಕೀನ್ನ ಕರಕೊಂಡ ಹೋಗಿ ತ್ವಾಟದಾಗದುಡಿಯಾಕ ಹಚ್ಚತೀದ್ಯಾ (ಕಣ್ಣಿದ್ದೂ ಕುರುಡ, ಪುಟ ೫೫)

ಮೈ ಹುಳಿ ಥಳಿಸಿಕೊಂಡು ಬೀದಿ ಹೆಣ ಆಗಬೇಕಂತೀದ್ಯೋ (ಕಣ್ಣಿದ್ದೂ ಕುರುಡ, ಪುಟ ೮೦)

ಮಣ್ಣಲ್ಲಿ ಉರುಳಾಡಿ ಬಂದ ಕತ್ತೆ ಹಾಗೆ ಕಾಣ್ತಾ ಅದೀದಿ (ಗರೀಬಿ ಹಟಾವ್ಹೊ, ಪುಟ ೧೪)

ನಿನ್ನ ಹೊಟ್ಟೆ ಹರದ ಹಳ್ಳಕ್ಕ ಚೆಲ್ಲತೀನಿ (ಗರೀಬಿ ಹಟಾವ್ಹೊ, ಪುಟ ೪೧)

ಬರ‍್ತಾ ಬರ‍್ತಾ ಮುದಿ ಹುಚ್ಚು ಹಿಡಿದೈತಿ ಆ ಮುಳಗ (ಗರೀಬಿ ಹಟಾವ್ಹೊ, ಪುಟ ೪೧)

ನಾಳೆ ಮನಿಗ್ವಾಡಿ ಒಡದು ತುಡುಗು ಮಾಡತಾನ (ಗರೀಬಿ ಹಟಾವ್ಹೊ, ಪುಟ ೪೬)

ಅಲಂಕಾರಗಳು

ಒಬ್ಬ ಲೇಖಕ ತಾನು ಹೇಳಬೇಕೆಂಬ ವಿಷಯಗಳನ್ನು ಪರಿಣಾಮಕಾರಿಯಾಗಿ ಹಾಗೂ ಸುಂದರವಾಗಿ ಹೇಳುವ ಉದ್ದೇಶವನ್ನು ಇಟ್ಟುಕೊಂಡಿರುತ್ತಾನೆ. ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳಲು ಲೇಖಕ ಅಲಂಕಾರಗಳನ್ನು ಬಳಸಿಕೊಳ್ಳುತ್ತಾನೆ. ಬಿ.ಆರ್. ಅರಿಷಿಣಗೋಡಿಯವರು ತಮ್ಮ ನಾಟಕಗಳಲ್ಲಿ ಅಲ್ಲಲ್ಲಿ ಅಲಂಕಾರಗಳನ್ನು ಬಳಸಿರುವುದನ್ನು ಕಾಣುತ್ತೇವೆ.

ಜತೆ ಇಲ್ಲದ ವಿಧವಾ ಪಕ್ಷಿ- ರೂಪಕ (ಹೆಣ್ಣುಮಗಳು, ಪುಟ ೧೪)

ಸತಿಪತಿಗಳಾದ ನಾವು ಜತೆಗೂಡಿ ಬಾಳುವ ಹಕ್ಕಿಗಳಿದ್ದಂತೆ- ಉಪಮಾ(ಹೆಣ್ಣುಮಗಳು, ಪುಟ ೧೦)

ನಾಯಿಯ ಹಾಗೆ ನಾನೇನ ಓಡಿ ಬಂದಿಲ್ಲ- ಉಪಮಾ(ಇಲ್ಲಿಗೆ ಬಂತೋ ಸಂಗಯ್ಯಾ, ಪುಟ ೨೨)

ನೌಕರಿ ದೊರೆತ ಮೇಲೆ ವಿಷಭರಿತ ಹಾವಿನಂತೆ ತಿರುಗಿ ನಿಲ್ಲುವುದು(ಗರೀಬಿ ಹಟಾವ್ಹೊ, ಪುಟ ೧೯)

ಹಾಲು ಕೊಡುತ್ತಿರುವ ಹಸುವಿನ ಕೆಚ್ಚಲನ್ನೆ ಕೊಯ್ದು ತಿನ್ನುವ ಮೂರ್ಖತನಕ್ಕೆ ನಿಂತಿದ್ದೀರಿ(ಗರೀಬಿ ಹಟಾವ್ಹೊ, ಪುಟ ೧೯)

ನೀನು ನೀರು ಕಾಣದ ಬಳ್ಳಿಯಂತೆ ಬಾಡಿ ಹೋಗುವದು ಬೇಡ(ಗರೀಬಿ ಹಟಾವ್ಹೊ, ಪುಟ ೫೦)

ಇದು ಹಲ್ಲು ತೆಗೆದ ಹಾವು ಅಂತ, ಕಲ್ಲೆಸೆದು ಸಾಯಿಸುವ ಹುಚ್ಚುತನ ಮಾತ್ರ ಮಾಡಬೇಡ (ಗರೀಬಿ ಹಟಾವ್ಹೊ, ಪುಟ ೬೪)

ವಿಧವೆಯರ ಬಾಳಲ್ಲಿ ಸುಃಖ ದೊರೆಯುವುದೆಂದರೆ, ಮರುಭೂಮಿಯಲ್ಲಿ ಬೆಳೆ ಬಂದಂತೆ (ಮಾವನ ಮನೆ- ಅನುರಾಧ, ಪುಟ ೯)

ಬೈಗುಳಗಳು

ಸನ್ನಿವೇಶಕ್ಕೆ, ಘಟನೆಗಳಿಗೆ ತಕ್ಕಂತೆ ಪಾತ್ರಗಳನ್ನು ನಾಟಕಕಾರ ಸೃಷ್ಟಿಸುತ್ತಾನೆ. ಸನ್ನಿವೇಶಕ್ಕೆ ತಕ್ಕಂತೆ ಪಾತ್ರಗಳು ಸಂವಾದಕ್ಕೆ ನಿಂತಾಗ ಕೋಪ, ಉದ್ವಿಗ್ನ ಸಂದರ್ಭಗಳಲ್ಲಿ ಪಾತ್ರಗಳ ಗುಣ ಸ್ವಭಾವವನ್ನು ಜನಜನಿತವಾದ ಬೈಗುಳಗಳ ಮೂಲಕ ಚಿತ್ರಿಸಲು ನಾಟಕಕಾರ ಪ್ರಯತ್ನಪಡುತ್ತಾನೆ. ವಿಶೇಷವಾಗಿ

ಖಳನಾಯಕ ಪಾತ್ರಗಳು ದೌರ್ಜನ್ಯವನ್ನು ಬಿಂಬಿಸಲು ಬೈಗುಳ ಮೂಲಕ ಪ್ರಯತ್ನಿಸುತ್ತವೆ. ಬಿ.ಆರ್. ಅರಿಷಿಣಗೋಡಿಯವರು ತಮ್ಮ ಎಲ್ಲಾ ನಾಟಕಗಳಲ್ಲಿ ಬೈಗುಳಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಉದಾಃ ಆದರ್ಶ ದಂಪತಿಗಳನ್ನು ಅಗಲಿಸಿ ನನ್ನೊಡನೆ ಒಡಿಬಂದ ನೀನು ಹೊಲೆ ಹೇಸಿಯಲ್ಲವೇ ಸೂಳೆ(ಹೆಣ್ಣುಮಗಳು, ಪುಟ ೩೩).

ನೀನೊಬ್ಬ ಭಲೋ ಅವಿವೇಕಿ ಗಂಟ ಬಿದ್ದೀ ನಮ್ಮ ಪಾಲಿಗೆ (ಹೆಣ್ಣುಮಗಳು, ಪುಟ ೧೨)

ಅಗಸರ ನಾಯಿಗತೆ ತಿರಗ್ಯಾಡೂದ ಆತನ ಹ್ವಾರೆ (ಹೆಣ್ಣುಮಗಳು, ಪುಟ ೧೨)

ನರಕ ತಿನ್ನುವ ನಾಯಿಯಂತಾದೆಯಾ ಚಂಡಾಲಾ (ಹೆಣ್ಣುಮಗಳು, ಪುಟ ೧೫)

ಬೊಗಳುವ ನಾಯಿಗಳ ಬಾಯಿಗೇನು ಬೀಗ ಹಾಕುವುದಿದೆಯೇ (ಹೆಣ್ಣುಮಗಳು, ಪುಟ ೨೧)

ತವರು ಮನೆ ಸೇರಿ ಹೊಲೆ ಸೂಳೆಯಂತಾದೆಯಾ ಹೇಸಿ ಹೆಣ್ಣೆ (ಹೆಣ್ಣುಮಗಳು, ಪುಟ ೨೫)

ನಿಮ್ಮ ಜೀವನ ಹೊಲಸು ತುಂಬಿದ ತಿಪ್ಪೆ ಆಗಿದ್ರೂ ಮಂದಿ ತಪ್ಪು ಎಣಿಸೋದು ಬಿಡುವುದಿಲ್ಲ ನೀವು (ಬಡವರೂ ನಗಬೇಕು, ಪುಟ ೫)

ಹಳ್ಳಿಯ ಮಳ್ಳ ದರಿದ್ರ ಹೆಣ್ಣು (ಕಣ್ಣಿದ್ದೂ ಕುರುಡ, ಪುಟ ೧೫)

ಹೋದೀ ಮಗನ ಹಾರಿ! ನಿನ್ನ ಪುಟ.. ಬಿಡ್ಸಿ ಪಂಜರದಾಗ ಇಡಸ್ತೀನಿ (ಕಣ್ಣಿದ್ದೂ ಕುರುಡ, ಪುಟ ೩೯)

ಇವರು ತಾಯಿ ಮಕ್ಕಳಲ್ರಿ ತಾಯಿ ಗಂಡರು (ಸೈನಿಕನ ಸಹೋದರಿ, ಪುಟ ೮೩)

ನನ್ನ ಮಗ ನೀತಿಗೆಟ್ಟ ನಾಯಿಯಾಗಿದ್ದಾನೆಂದು ನಿಮಗೆ ಮೊದಲೆ ತಿಳಿಸಿದ್ದರೆ, ನೀನೇಕೆ ಬಂದೆ ಅವನ ಕರಪಿಡಿಯಲೆಂದು ಮತ್ತೊಂದು ನಾಯಿಯಾಗಿ (ಸೈನಿಕನ ಸಹೋದರಿ, ಪುಟ ೧೦೧)

ಎಮ್ಮಿ ಗೊಡ್ಡಿನಂತ್ಯಾಕೀ, ನನ್ನ ಹಲ್ಲ ಉದರಸ್ತೀಯಾ? ನಿನ್ನ ಎಲಬು ಮುರಿವಂಗ ಒದ್ದೇನು (ಗಂಡೆದೆಯ ಗೌರಿ, ಪುಟ ೧೫)

ಉಪ್ಪುಂಡು ಬೆಳೆದ ಈ ಮನಿ ಋಣ ಈ ರೀತಿ ತೀರ್ಸಿದ್ಯಾ ಹಲಕಾ ನನ ಮಗನೆ (ಬಡವರೂ ನಗಬೇಕು, ಪುಟ ೬)

ಇನ್ನೂ ಹುಡಿಗೇರ ಹುಚ್ಚು ಬಿಟ್ಟಿಲ್ಲಲ್ಲೊ ಮುದಿಮಂಗ (ಬಡವರೂ ನಗಬೇಕು, ಪುಟ ೫)

ಬಾಯಿ ಹಂಗರಬಿಟ್ರೆ ಅಡ್ಡಾ ತಿಡ್ಡಾ ಸೀಳಿ ಹಾಕಿ ಬಿಡ್ತೀನಿ ಮಗನೆ (ಬಡವರೂ ನಗಬೇಕು, ಪುಟ ೮)

ಊರ ಊರು ತಿರಗೂ ತಿರಬಾಕಿ (ಬಡವರೂ ನಗಬೇಕು, ಪುಟ ೨೯)

ಆ ಬಿಳುಪು ರೋಗದ ಅನಿಷ್ಟ ಹೆಣ್ಣಿನ ಮುಖಾ ನೋಡುವುದು ನನಗೆ ಬೇಕಾಗಿಲ್ಲ (ಗರೀಬಿ ಹಟಾವೊ, ಪುಟ ೧೪)

ಬಾರಲೇ ಬುಬ್ಬಣೆ; ಮುಂದಕ ಬಾ (ಗಂಡದೆಯ ಗೌರಿ, ಪುಟ ೪೦)

ಹೋಗಲೇ ಭಿಕಾರಿ ನನ ಮಗನ ಹೋಗು (ಗಂಡೆದೆಯ ಗೌರಿ, ಪುಟ ೪೬)

ಕರಿಗಾಲ ನನ ಮಗನ (ಗಂಡೆದೆಯ ಗೌರಿ, ಪುಟ ೬೧)

ಕಣ್ಣ ಬಿಟ್ಟ ಅಂದ್ರ ಕಡ್ಡಿಚ್ಚ ತಂದು ನಿನ್ನ ಕಣ್ಣ ತಗದ ಹಾಕೇನು (ಸಂಗ್ಯಾ-ಬಾಳ್ಯಾ, ಪುಟ ೨೮)

ಮಾಡ್ಕೊಂಡ ಹೆಂಡ್ತಿನ್ನ ಮಿಂಡಗ ಒಪ್ಪಿಸಿ ಅವ್ನ ಆಸ್ತಿ ಆಸೇಕ ನಾಯಿ ಹಂಗ ಬದುಕೊ ಶಂಡಂತ ತಿಳಿದಿಯೇನಲೇ ನಮ್ಮನ್ನ ಸೂಳೆಮಗನ (ಸಂಗ್ಯಾ-ಬಾಳ್ಯಾ, ಪುಟ ೬೮)

ಗಾದೆಗಳು

ಸಾಹಿತ್ಯ ಕೃತಿಯ ಮೇಲ್ಮೆಯಲ್ಲಿ ಗಾದೆಯ ಮಾತುಗಳ ಬಳಕೆ ಮಹತ್ವದ ಪಾತ್ರವಹಿಸುತ್ತದೆ. ಇದು ಲೇಖಕನ ಲೋಕಾನುಭವದ ಗುರುತಾಗುತ್ತದೆ. ಲೇಖಕ ಗಾದೆಗಳ ಮೂಲಕ ಸನ್ನಿವೇಶವನ್ನೋ, ಪಾತ್ರವನ್ನೋ ಸಮರ್ಥಿಸಿಕೊಳ್ಳುವ ರೀತಿ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹವಾದುದು. ಅರಿಷಿಣಗೋಡಿಯವರು ತಮ್ಮ ನಾಟಕಗಳಲ್ಲಿ ಬಳಸಿಕೊಂಡ ಕೆಲವು ಗಾದೆಗಳನ್ನು ಇಲ್ಲಿ ಪಟ್ಟಿ ಮಾಡಬಹುದು.

ಬಡವನ ಸಿಟ್ಟು, ದವಡೆಗೆ ಮೂಲ (ಲಂಚ ಸಾಮ್ರಾಜ್ಯ, ಪುಟ ೨)

ದೊಡ್ಡವರ ಮನಿ ಸುದ್ದಿ ದೊಡ್ಡವು ಇರ್‍ತಾವನ್ನೂದೇನ ಸುಳ್ಳಲ್ಲಾ (ಸತ್ಯ) (ಹೆಣ್ಣುಮಗಳು, ಪುಟ ೨೦)

ಪುಣ್ಯಾಕ್ಕ ಅನ್ನ ನೀಡಿದರೆ ಚೆನ್ನಾಗಿಲ್ಲ (ಹೆಣ್ಣುಮಗಳು, ಪುಟ ೩೨)

ಇದ್ದೂರ ಕೆರಿ ತುಂಬ ನೀರು ಇಟಕೊಂಡು, ಹಾಳೂರ ಹಳ್ಳದಾಗ ಹಗೆತೋಡಿದರು (ಬಡವರೂ ನಗಬೇಕು, ಪುಟ ೩)

ಗೂಳಿ ಬಿದ್ದಾಗ ಆಳಿಗೊಂದು ಕಲ್ಲು (ಬಡವರೂ ನಗಬೇಕು)

ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕಪ್ಪ (ಬಡವರೂ ನಗಬೇಕು, ಪುಟ ೨೨)

ಗಾಳಿ ಎಲ್ಲಿ ಬೀಸತ್ತ ಅಂದ್ರ ಊರ ಹೊರಗ ಗಿಡವಾಗ ಬೀಸತ್ತ ಅಂತ (ಸೈನಿಕನ ಸಹೋದರಿ, ಪುಟ ೫೬)

ಹೊಟ್ಟೆಯಲ್ಲಿ ಹುಟ್ಟಿದ್ದೊಂದು ವೈರಿ ಬೆನ್ನಿಗೆ ಬಿದ್ದದ್ದೊಂದು ವೈರಿ ಅಂತ ಸುಮ್ಮನೆ ಹೇಳಲಿಲ್ಲ ಹಿರಿಯರು (ಗರೀಬಿ ಹಟಾವೊ, ಪುಟ ೧೬)

ಬಡವರ ದುಡಿಮೆಯೇ ಬಲ್ಲಿದರ ಬೊಕ್ಕಸ (ಗರೀಬಿ ಹಟಾವೊ, ಪುಟ ೧೯)

ಬೆಂಕಿ ಕೂಡ ಕುಸ್ತಿಯಾಡಬಾರದು (ಗರೀಬಿ ಹಟಾವೊ, ಪುಟ ೨೮)

ಹೊತ್ತು ಬಂದಾಗ ಕತ್ತಿ ಕಾಲ ಹಿಡಿಬೇಕಾಗುತ್ತ (ಗರೀಬಿ ಹಟಾವೊ, ಪುಟ ೨೧)

ಕಾಮಣೆಯಾದವರ ಕಣ್ಣಿಗೆ ಜಗತ್ತೇ ಹಸಿರಾಗಿ ತೋರುತ್ತದೆ (ಗರೀಬಿ ಹಟಾವೊ, ಪುಟ ೩೬)

ಬಲವಿಲ್ಲದ ಕಾಲಕ್ಕೆ ನೆಲವೆದ್ದು ಬಡಿಯಿತೆಂಬಂತಾಗಿದೆ (ಗರೀಬಿ ಹಟಾವೊ, ಪುಟ ೩೯)

ನೆಲುವಿಗೆ ಹಾರದ ಬೆಕ್ಕು ಆಕಾಶಕ್ಕೆ ಹಾರಿದಂಗ (ಗರೀಬಿ ಹಟಾವೊ, ಪುಟ ೪೨)

ಹಣ ಅಂದ್ರ ಹೆಣ ಸೈತ ಬಾಯಿ ಬಿಡತ್ತ (ಗರೀಬಿ ಹಟಾವೊ, ಪುಟ ೪೫)

ಅಂಜುವವರ ಮೇಲೆ ಅರಿವೆ ಹಾವು ಬಿಡತಾರ (ಗಂಡೆದೆಯ ಗೌರಿ, ಪುಟ ೬)

ಸಲಿಗೆಕೊಟ್ಟ ನಾಯಿ ತಲಿಗೇರಿತ ಅಂದಾಂಗ (ಗಂಡೆದೆಯ ಗೌರಿ, ಪುಟ ೨೮)

ಹುಣಸೆಮರ ಮುಪ್ಪಾದರೂ ಹುಳಿ ಮುಪ್ಪಾಗಿರುವುದಿಲ್ಲ (ಮಾವನ ಮನೆ-ಅನುರಾಧಾ, ಪುಟ ೧೪)

ಹೊಸಾ ಎಮ್ಮಿ ಕಟ್ಟಿ ಒದಿಸಿಕೊಳ್ಳುವುದಕ್ಕಿಂತ ಹಳೆ ಎಮ್ಮಿ ಕಟ್ಟಿ ಹಯ್ನಾ ಉಣ್ಣೂದು ಬೇಸಲೆ (ಸಂಗ್ಯಾ-ಬಾಳ್ಯಾ, ಪುಟ ೪೬)

ಅರಿಷಿಣಗೋಡಿಯವರ ನಾಟಕಗಳ ಒಟ್ಟು ನೋಟ

ವೃತ್ತಿ ಕಂಪನಿಗಳು ಮನರಂಜನೆಯ ಮುಖಾಂತರ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಉದ್ದೇಶವನ್ನು ಇಟ್ಟುಕೊಂಡಿರುತ್ತವೆ. ಹೆಸರು ಕೇಳಿಯೇ ನಾಟಕ ನೋಡಬೇಕೆಂದು ಪ್ರೇಕ್ಷಕರಲ್ಲಿ ಕುತೂಹಲ ಉಂಟುಮಾಡಲು ತಮ್ಮ ನಾಟಕಗಳಿಗೆ ಆಕರ್ಷಕ ಹೆಸರನ್ನಿಟ್ಟು ನಾಟಕ ರಚಿಸಿರುವದನ್ನು ಕಾಣುತ್ತೇವೆ. ಅರಿಷಿಣಗೋಡಿಯವರು ತಮ್ಮ ನಾಟಕಗಳಿಗೆ ಆಕರ್ಷಕ ಹೆಸರನ್ನಿಟ್ಟು ಪ್ರೇಕ್ಷಕರನ್ನು ತಮ್ಮೆಡೆಗೆ ಸೆಳೆದುಕೊಂಡಿದ್ದನ್ನು ನೋಡುತ್ತೇವೆ. ಇಲ್ಲಿಗೆ ಬಂತೋ ಸಂಗಯ್ಯಾ, ಬಸ್ ಕಂಡಕ್ಟರ್, ಗರೀಬಿ ಹಟಾವೋ, ಲಂಚ ಸಾಮ್ರಾಜ್ಯ, ಹೆಣ್ಣು ಮಗಳು, ಸೈನಿಕನ ಸಹೋದರಿ(ಚೆಂದ್ರಿಯ ಚೆಲ್ಲಾಟ, ಶೆಟ್ಟಿಯ ಹಾರಾಟ), ಕಣ್ಣಿದ್ದೂ ಕುರುಡ ಮುಂತಾದ ನಾಟಕಗಳು ಹೆಸರಿನಿಂದಲೇ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದವು.

ಅರಿಷಿಣಗೋಡಿಯವರ ನಾಟಕಗಳಲ್ಲಿ ಸಮಕಾಲೀನ ಸಮಸ್ಯೆಗಳಾದ ಹೆಣ್ಣಿನ ಗೋಳು, ದುಡ್ಡಿನ ದರ್ಪ, ಬಡವರ ಶೋಷಣೆ, ಮದ್ಯಪಾನದ ದುಷ್ಪರಿಣಾಮ, ವಿಧವಾ ಸಮಸ್ಯೆ, ಮಲಮಗಳ ಅಳಲು,

ಮಲತಾಯಿಯ ಕಿರುಕುಳ, ಅಕ್ಕ-ತಂಗಿಯ ಮತ್ಸರ, ಜೂಜು, ಕಾಳಸಂತೆ, ಲಂಚಕೋರತನ, ದೇಶಕ್ಕಾಗಿ ಪ್ರಾಣವನ್ನು ಬಲಿಕೊಡಲು ಸಿದ್ಧನಾದ ಸೈನಿಕ, ಕುಟಿಲ ಕಾರಸ್ಥಾನ, ಹೆಣ್ಣಿನ ವಿವಿಧ ಮುಖಗಳ ಪರಿಚಯ, ಹೊಲಮನೆ ಜಗಳ, ಭ್ರಷ್ಟ ಸರಕಾರಿ ನೌಕರದಾರ, ಗ್ರಾಮೀಣ ಬದುಕಿನಲ್ಲಿ ಎದುರಾಗಿ ಬರುವ ಅನೇಕ ಸಮಸ್ಯೆಗಳು ಮುಂತಾದ ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಕಡೆಗೆ ಗಮನಹರಿಸಿದ್ದನ್ನು ನೋಡಬಹುದು. ಸಮಕಾಲೀನ ಸಮಸ್ಯೆಗಳೇ ಅವರ ಸಾಮಾಜಿಕ ನಾಟಕಗಳ ಕಥಾವಸ್ತುವಾಗಿವೆ.

ನಾಟಕದಲ್ಲಿ ಆರೇಳು ಪುರುಷ ಪಾತ್ರಗಳು, ನಾಲ್ಕೈದು ಸ್ತ್ರೀಪಾತ್ರಗಳು ಇರುತ್ತವೆ. ಗೌಡ-ಅಧಿಕಾರಿಗಳು ಹೆಚ್ಚಾಗಿ ದುಷ್ಟರಾಗಿರುತ್ತಾರೆ. ಬಡವರು, ಕಾರ್ಮಿಕರು ಒಳ್ಳೆಯವರಾಗಿರುತ್ತಾರೆ. ಒಳ್ಳೆಯವರಿಗೆ ಒಳಿತಾಗ ಬೇಕೆಂಬ ಕಾಳಜಿ ನಾಟಕದಲ್ಲಿ ಕಂಡುಬರುತ್ತದೆ. ಕೆಟ್ಟವರು ಕೊನೆಗೆ ನಾಟಕದಲ್ಲಿ ಬುದ್ಧಿ ಕಲಿತು ಒಳ್ಳೆಯವರಾಗಿ ಪರಿವರ್ತನೆಯಾಗುತ್ತಾರೆ. ಕೆಟ್ಟವರಿಗೆ ಸಾವೇ ಪರಿಹಾರವಲ್ಲ ಎನ್ನುವ ಧೋರಣೆಯನ್ನು ನಾಟಕಗಳಲ್ಲಿ ಕಾಣುತ್ತೇವೆ.

ಇವರ ಪ್ರತಿಯೊಂದು ನಾಟಕದಲ್ಲಿ ಹನ್ನೆರಡು ಅಥವಾ ಹದಿಮೂರು ಪ್ರವೇಶಗಳಿರುತ್ತವೆ. ಆರು ಪ್ರವೇಶಗಳು ಮುಗಿದ ನಂತರ ಮಧ್ಯಂತರ ವಿರಾಮವಿರುತ್ತದೆ. ಪೂರ್ವಾರ್ಧದಲ್ಲಿ ಕತೆಯ ಪರಿಚಯ ಮತ್ತು ಘಟನೆಗಳ ಬೆಳವಣಿಗೆಯನ್ನು ಕಾಣುತ್ತೇವೆ. ಉತ್ತರಾರ್ಧದಲ್ಲಿ ನಾಟಕದ ಪರಿಣಾಮವನ್ನು ಬಿಂಬಿಸಿರುವದನ್ನು ನೋಡುತ್ತೇವೆ.

ಇವರ ನಾಟಕಗಳಲ್ಲಿ ಕೌಟುಂಬಿಕ ಸಮಸ್ಯೆಗಳಿಗೆ ಆದ್ಯತೆ ಕೊಟ್ಟಿರುವುದನ್ನು ಕಾಣುತ್ತೇವೆ. ಆಧುನಿಕ ಶಿಕ್ಷಣ, ನಗರ ಜೀವನ, ಸ್ವಾರ್ಥ ರಾಜಕಾರಣ, ಹಣ ಗಳಿಸುವ ಹಂಬಲ ಇವುಗಳ ಪರಿಣಾಮದಿಂದ ಗ್ರಾಮೀಣ ಭಾಗದ ಅವಿಭಕ್ತ ಕುಟುಂಬಗಳು ಎದುರಿಸುವ ಸಮಸ್ಯೆಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಬದಲಾವಣೆಯಾಗುವುದನ್ನು ಇವರು ಇಷ್ಟಪಡುವದಿಲ್ಲ.

ರಾಮಕೃಷ್ಣ ಮರಾಠೆಯವರು ಹೇಳುವಂತೆ "ಗಂಭೀರ ಸಮಸ್ಯೆಗಳ ಸರಳ ನಿರೂಪಣೆ ಇರುತ್ತದೆ, ಅದಕ್ಕೆ ಸುಲಭ ಪರಿಣಾಮವೂ ಸೂಚಿತವಾಗಿರುತ್ತದೆ, ಅಪರಾಧಿಗಳು ನಿರಪರಾಧಿಗಳಾಗಿ, ದುಷ್ಟರು ಪಶ್ಚಾತ್ತಾಪಪಟ್ಟು ಒಳ್ಳೆಯವರಾಗಿ ಪರಿವರ್ತನೆಯಾಗುತ್ತಾರೆ. ನಾಟಕದ ಕೊನೆಯಲ್ಲಿ ಪ್ರೇಕ್ಷಕರಿಗೆ ಸಂದೇಶವಿರುತ್ತದೆ. ನೀತಿ ಹೇಳುವ ರೀತಿ ನೋಡಿದರೆ ಇವರ ಕೃತಿಗಳು ಸನಾತನ ಸಂತನಂತೆ ಕಾಣುತ್ತವೆ" (ಬಿ.ಆರ್. ಅರಿಷಿಣಗೋಡಿ. ರಂಗಸಂಪನ್ನರು ಕಿರುಜೀವನ ಚರಿತ್ರೆ, ಲೇ. ಡಾ. ರಾಮಕೃಷ್ಣ ಮರಾಠೆ ಪುಟ ೩೨)

ಕಡಿದು ಹೋದ ಸಂಬಂಧಗಳನ್ನು ಮತ್ತೆ ಕುಟುಂಬದಲ್ಲಿ ಒಂದುಗೂಡಿಸುವ ಪಾತ್ರವೊಂದು ಎಲ್ಲಾ ನಾಟಕಗಳಲ್ಲಿ ಇರುವದನ್ನು ಕಾಣುತ್ತೇವೆ. ಬಸ್ ಕಂಡಕ್ಟರದಲ್ಲಿ ಪ್ರದೀಪ, ಕಣ್ಣಿದ್ದೂ ಕುರುಡದಲ್ಲಿ

ಶಿವರಾಜ, ಸೈನಿಕನ ಸಹೋದರಿಯಲ್ಲಿ ಸಂಜೀವ, ಲಂಚ ಸಾಮ್ರಾಜ್ಯದಲ್ಲಿ ಶಿಲಾಧರ, ಹೆಣ್ಣು ಮಗಳು ನಾಟಕದಲ್ಲಿ ರವೀಂದ್ರ ಮುಂತಾದ ಪಾತ್ರಗಳು ಕೌಟುಂಬಿಕ ಸಾಮರಸ್ಯವನ್ನು ಕುದುರಿಸಲು ಪ್ರಯತ್ನಿಸುತ್ತವೆ.

ಅವರ ಎಲ್ಲಾ ನಾಟಕಗಳ ಕೇಂದ್ರಬಿಂದು ಕುಟುಂಬ ಇಲ್ಲವೆ ಗ್ರಾಮವಾಗಿರುತ್ತದೆ. ಅವರ ಎಲ್ಲಾ ನಾಟಕಗಳನ್ನು ಅಭ್ಯಸಿಸಿದರೆ ಕಂಪನಿ ನಾಟಕಗಳನ್ನು ಅಭ್ಯಸಿಸಿದಂತೆ ಭಾಸವಾಗುತ್ತದೆ. ಸಾಮಾನ್ಯವಾಗಿ ಕಂಪನಿ ನಾಟಕಗಳನ್ನು ನೋಡುವ ಪ್ರೇಕ್ಷಕರಾದರೂ ಹಳ್ಳಿಯವರೇ ಆಗಿರುತ್ತಾರೆ. ಹಳ್ಳಿಯವರು ಹೆಚ್ಚಾಗಿ ಅವಿಭಕ್ತ ಕುಟುಂಬದ ಅಭಿಮಾನಿಗಳಾಗಿರುತ್ತಾರೆ. ಅರಿಷಿಣಗೋಡಿಯವರ ನಾಟಕಗಳನ್ನು ನೋಡುವ ಪ್ರೇಕ್ಷಕರು ತಮ್ಮ ಹಳ್ಳಿ ಜೀವನದ ಭಾವನೆಗಳನ್ನು ನಾಟಕದಲ್ಲಿ ಕಂಡು ನಾಟಕದ ಕಥೆಯೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿ ಆನಂದಿಸುತ್ತಿದ್ದರು.

ಭಾಷೆ: "ಜಗತ್ತಿನಲ್ಲಿ ಮಾನವ ಬೇರೆ ಪ್ರಾಣಿಗಳಿಗಿಂತಲೂ ಶ್ರೇಷ್ಠವಾದದ್ದು ಅವನು ಕಂಡುಕೊಂಡ ಮಾತನಾಡುವ ಭಾಷೆಯಿಂದ. 'ಭಾಷೆ' ಮಾನವನು ನಿರ್ಮಿಸಿಕೊಂಡ ಒಂದು ಅತ್ಯಂತ ಸುಂದರವಾದ ಆಟಿಕೆ, ಭಾಷೆಯೊಡನೆ ಚೆನ್ನಾಟ ಮಾಡುವುದೇ ಒಂದು ಅನುಭವ. ಆ ಅನುಭವದ ಫಲವೇ ಸಾಹಿತ್ಯ" (ಸಾಹಿತ್ಯ ಮತ್ತು ಭಾಷೆ, ಲೇ: ಶಾಂತಿನಾಥ ದೇಸಾಯಿ, ಪುಟ ೩) ಭಾಷೆಯ ಬಗ್ಗೆ ಶಾಂತಿನಾಥ ದೇಸಾಯಿಯವರು ಮೇಲಿನಂತೆ ಹೇಳುವರು. ಭಾಷೆ ಇಲ್ಲದೆ ಹೋಗಿದ್ದರೆ ಪರಸ್ಪರ ಸಂಪರ್ಕವನ್ನು ಇಂದಿನ ಸಮಾಜವನ್ನು ಊಹಿಸಲಿಕ್ಕೂ ಸಾಧ್ಯವಾಗುತ್ತಿದ್ದಿಲ್ಲ. ಭಾಷೆ ಇಲ್ಲದೆ ಸಾಹಿತ್ಯವಿಲ್ಲ. ಆದರೆ ಸಾಹಿತ್ಯವಿಲ್ಲದಿದ್ದರೂ ಭಾಷೆ ನಡೆಯುತ್ತದೆ.

ಮಾನವ ತನಗುಂಟಾದ ಅನುಭವಗಳನ್ನು ಸುಂದರವಾದ ಮಾತುಗಳಿಂದ ಬರೆಯತೊಡಗಿದಾಗ ಸಾಹಿತ್ಯದ ಪ್ರಕರಗಳಾದ ಕಾವ್ಯ, ಕಥೆ, ಕಾದಂಬರಿ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳು (ಲಲಿತಕಲೆಗಳು) ಹುಟ್ಟಿಕೊಂಡವು. ಸಾಹಿತ್ಯಕ್ಕೆ ತನ್ನದೇಯಾದ ಲಯವಿದ್ದಂತೆ ನಾಟಕ ಸಾಹಿತ್ಯಕ್ಕೂ ತನ್ನದೇ ಆದ ಗದ್ಯಲಯವಿದೆ. ಆದರೆ ನಮ್ಮ ಬಹಳಷ್ಟು ವೃತ್ತಿರಂಗ ನಾಟಕಕಾರರು ನಾಟಕದ ಗದ್ಯಲಯದ ಕಡೆಗೆ ಲಕ್ಷ ವಹಿಸಲಿಲ್ಲ. ಈ ನೋವನ್ನು ಅ.ನ.ಕೃಷ್ಣರಾಯರು ಹೀಗೆ ಹೇಳುತ್ತಾರೆ. "ಇಂದಿನ ರಂಗಭೂಮಿಯ ಮೇಲೆ ಕಾಣಿಸಿ ಕೊಳ್ಳುತ್ತಿರುವ ಸಾಹಿತ್ಯ ಶುದ್ಧತೆ ಕನಸಿನ ಗಂಟಾಗಿದೆ. ನಾಟಕಕ್ಕೂ ಮುಖ್ಯವಾದುದು ನಾಟಕ ಸಾಹಿತ್ಯ ನಾಟಕ ರಚನೆಗೆ ಅಪಾರ ಅನುಭವ, ಕೃಷಿ, ಪಾಂಡಿತ್ಯ, ತಂತ್ರಜ್ಞಾನ ಅವಶ್ಯಕ. ನಾಟಕ ನಾಟಕವಾಗಬೇಕೆ ವಿನಃ ಸಂಗೀತ ಕಚೇರಿಯಾಗಲಿ, ಭಾಷಣ ವೇದಿಕೆಯಾಗಲಿ ಆಗಬಾರದು. ಪಾತ್ರಗಳ ಬಾಯಲ್ಲಿ ಬರುವ ಮಾತುಗಳು ಪಾತ್ರಗಳ ಸ್ಥಾನಮಾನ ಸಂಸ್ಕೃತಿಗೆ ಅನುಗುಣವಾಗಿರಬೇಕು. ನಾಟಕ ಸಾಹಿತ್ಯದ ಉದ್ಧಾರವಾಗದೆ ನಾಟಕ ಉದ್ಧಾರವಾಗುವದಿಲ್ಲ" (ಭಾರತೀಯ ಕಲಾದರ್ಶನ) ಎಂಬ ಅವರ ಅಭಿಪ್ರಾಯ ಇವತ್ತಿಗೂ ಪ್ರಸ್ತುತವೆನಿಸುತ್ತದೆ.

ಇವುಗಳನ್ನೆಲ್ಲ ಗಮನಿಸಿದ ಬಿ.ಆರ್.ಅರಿಷಿಣಗೋಡಿಯವರು ತಮ್ಮ ನಾಟಕದಲ್ಲಿ ಭಾಷಾಭಿನಯದತ್ತ ಲಕ್ಷಹರಿಸಿರುವದನ್ನು ಕಾಣುತ್ತೇವೆ. ಅರಿಷಿಣಗೋಡಿಯವರ ಭಾಷೆಯ ಬಗ್ಗೆ ರಾಮಕೃಷ್ಣ ಮರಾಠೆಯವರು ಹೀಗೆ ಹೇಳುತ್ತಾರೆ:

"ಪಾತ್ರಗಳ ಮಾತುಗಾರಿಕೆಯಲ್ಲಿ ಮಡಿವಂತಿಕೆ ಇಲ್ಲ, ಧಾಟಿ ಮಾತ್ರ ಆಡುಮಾತಿನದು. ಹಳ್ಳಿಯಲ್ಲಿ ಹುಟ್ಟಿ ನಗರದಲ್ಲಿ ಒಂದಿಷ್ಟು ಓದಿದವರು ಆಡುವ ಮಾತಿನ ಶೈಲಿ ಇವರದು. ಹೀಗಾಗಿ ಇವರ ಪಾತ್ರಗಳು ಇತ್ತ ಶುದ್ಧ ಶಿಷ್ಟವೂ ಅಲ್ಲದೆ ಅತ್ತ ಶುದ್ಧ ಆಡುಮಾತೂ ಅಲ್ಲದ ಮಿಶ್ರ ಭಾಷೆಯನ್ನಾಡುತ್ತಾರೆ. ಅದು ಆಡಲು ಸುಲಭ, ಕೇಳಲು ಹಿತವಾಗಿರುತ್ತದೆ"(ಬಿ.ಆರ್. ಅರಿಷಿಣಗೋಡಿ ರಂಗ ಸಂಪನ್ನರು-ಕಿರು ಜೀವನ ಚರಿತ್ರೆ, ಡಾ. ರಾಮಕೃಷ್ಣ ಮರಾಠೆ, ಪುಟ ೩೨).

ಬಿ.ಆರ್. ಅರಿಷಿಣಗೋಡಿಯವರ ನಾಟಕಗಳ ಭಾಷೆ ಸರಳ, ಮಿಶ್ರಭಾಷೆಯಾದರೂ ಉಳಿದ ನಾಟಕಕಾರಗಿಂತಲೂ ಭಿನ್ನ. ಕೇವಲ ಪ್ರಾದೇಶಿಕ ಭಾಷೆಯನ್ನು ಬಳಸಿದರೆ ಬೇರೆ ಪ್ರದೇಶದ ಜನರಿಗೆ ಅರ್ಥವಾಗಲಿಕ್ಕಿಲ್ಲ ಎಂದು ತಿಳಿದು ಎಲ್ಲ ಪ್ರದೇಶದವರಿಗೂ ಅರ್ಥವಾಗುವಂತೆ ಭಾಷೆಯನ್ನು ತಮ್ಮ ನಾಟಕಗಳಲ್ಲಿ ಬಳಸಿರುವುದನ್ನು ನೋಡುತ್ತೇವೆ. ಆಡುಮಾತಿಗೆ ಹೆಚ್ಚು ಒತ್ತು ಕೊಟ್ಟಂತೆ ಕಂಡುಬರುವುದು. ಅರಿಷಿಣಗೋಡಿಯವರು ತಮ್ಮ ನಾಟಕಗಳಲ್ಲಿ ಉದ್ದುದ್ದ ಬೇಸರ ತರಿಸುವ ಶಬ್ದಾಡಂಬರದ ಸಂಭಾಷಣೆಗಳನ್ನು ಬಳಸದೇ ಇರುವ ಮನೋಭಾವದವರು. ಪ್ರತಿ ಮಾತು ಅರ್ಥವಂತಿಕೆಯಿಂದ ರಸಪೂರ್ಣವಾಗಿವೆ. ಕಥೆಯನ್ನು ಕುತೂಹಲದ ಮುಖಾಂತರ ನಡೆಸಿಕೊಂಡು ಹೋಗುವ ಕಲೆಗಾರಿಕೆ ರೂಢಿಸಿಕೊಂಡವರಾಗಿದ್ದರು. ನಲವಡಿ ಶ್ರೀಕಂಠ ಶಾಸ್ತ್ರಿಗಳು, ಎಚ್.ಎನ್. ಹೂಗಾರ, ಪಿ.ಬಿ. ಧುತ್ತರಗಿ, ಮಹಾಂತೇಶ ಶಾಸ್ತ್ರಿಗಳ ನಂತರ ವೃತ್ತಿರಂಗಭೂಮಿಯಲ್ಲಿ ತಮ್ಮದೇ ಆದ ಹೊಸತನ ತಂದು ಅರಿಷಿಣಗೋಡಿಯವರು ತಮ್ಮ ನಾಟಕದ ಮುಖಾಂತರ ಪ್ರೇಕ್ಷಕರನ್ನು ರಂಜಿಸಿದರು.

ತಮ್ಮ ನಾಟಕಗಳಲ್ಲಿ ಆಡುಮಾತು ಬಳಸಿದರೂ ನಗರದವರಿಗೆ ತಿಳಿಯುವಂತೆ ಗ್ರಂಥಸ್ಥ ಭಾಷೆಯ ಕಡೆಗೂ ಲಕ್ಷ್ಯ ಹರಿಸಿದರು. ಆಡುಮಾತು ಬಳಸಿದರೂ ಉನ್ನತ ವರ್ಗದ ಪಾತ್ರಗಳ ಮುಖಾಂತರ ಗ್ರಾಂಥಿಕ ಭಾಷೆಯಲ್ಲಿ ಮಾತನಾಡಿಸಿದ್ದರು. ಮಧ್ಯಮ ವರ್ಗದ ಪಾತ್ರಗಳು ಅತ್ತ ಗ್ರಾಮ್ಯವೂ ಅಲ್ಲದ ಗ್ರಂಥಸ್ಥವೂ ಅಲ್ಲದ ಮಿಶ್ರಭಾಷೆಯನ್ನು ಮಾತನಾಡುತ್ತವೆ. ಸಾಮಾನ್ಯ ಪಾತ್ರಗಳು, ಮುಖ್ಯವಾಗಿ ಹಾಸ್ಯ ಪಾತ್ರಗಳು ಸಂಪೂರ್ಣ ಗ್ರಾಮ್ಯ ಭಾಷೆಯಲ್ಲಿಯೇ ಮಾತನಾಡುತ್ತವೆ.

ಸಾಹಿತ್ಯಿಕ ಗುಣಃ ಸಮಕಾಲೀನ ನಾಟಕಕಾರರಲ್ಲಿ ಬಿ.ಆರ್. ಅರಿಷಿಣಗೋಡಿಯವರು ತಮ್ಮದೇ ಆದ ವಿಶಿಷ್ಟ ಸಾಹಿತ್ಯಿಕ ಗುಣದಿಂದ ಗಮನ ಸೆಳೆದಿದ್ದಾರೆ. ಅರಿಷಿಣಗೋಡಿಯವರು ಸತತ ಅಭ್ಯಾಸದಿಂದ ಗಳಿಸಿದ ಜ್ಞಾನಸಂಪತ್ತು, ರಂಗಭೂಮಿಯ ಸಂಪರ್ಕದಿಂದ ಪಡೆದ ಅನುಭವ, ಜೀವನದಲ್ಲಿ ತಾವು

ಕಂಡು ಕೇಳದ ವಿಷಯಗಳನ್ನು ತಮ್ಮ ಕೃತಿಯಲ್ಲಿ ಮೂಡಿಸಿದ್ದಾರೆ. ಹೀಗಾಗಿ ಅವರ ಕೃತಿಗಳು ಶಬ್ದಸೌಷ್ಠವ, ಪ್ರಾಸ, ಗಾದೆ, ಪಡೆನುಡಿ, ಅಲಂಕಾರ ಸಾಹಿತ್ಯಿಕ ಸತ್ವದಿಂದ ಕೂಡಿದವುಗಳಾಗಿವೆ.

ಬಿ.ಆರ್.ಅರಿಷಿಣಗೋಡಿಯವರ ನಾಟಕಗಳಲ್ಲಿ ಅಲಂಕಾರ, ಪ್ರಾಸಕ್ಕೆ ಒತ್ತು ಕೊಡದೆ ಅರ್ಥಕ್ಕೆ ಒತ್ತುಕೊಟ್ಟಿರುವದು ಕಂಡುಬರುವುದು. ದ್ವಂದ್ವಾರ್ಥಕ್ಕೆ ಅವರ ನಾಟಕಗಳಲ್ಲಿ ಅವಕಾಶವಿಲ್ಲ. ಹಾಸ್ಯ ಪಾತ್ರದ ಮಾತುಗಳು ಅಶ್ಲಿಲತೆಯ ಕಡೆಗೆ ಒಲಿಯುವದಿಲ್ಲ. ಸರಳ ಸಾತ್ವಿಕ ಮಾತುಗಳಿಂದ ನಾಟಕವನ್ನು ಮುನ್ನಡೆಸಿಕೊಂಡು ಹೋಗುತ್ತವೆ. ಕೀಳು ಅಭಿರುಚಿಯ ಪ್ರಚಾರಕ್ಕೆ ಬಿದ್ದು ಸಾಹಿತ್ಯಿಕ ಸತ್ವವನ್ನು ಕೆಡಿಸಿದವರಲ್ಲ. ರಂಗಭೂಮಿಯ ಪಾವಿತ್ರ್ಯಕ್ಕೆ ಧಕ್ಕೆ ಬರದ ಹಾಗೆ ಸಾಹಿತ್ಯ ಸೃಷ್ಟಿಸಿರುವರು. ನಂಬಿದ ಸಿದ್ಧಾಂತ, ತತ್ವಗಳಿಗೆ ಬದ್ಧರಾಗಿ ಸಾಹಿತ್ಯ ಸೃಷ್ಟಿ ಮಾಡಿದರು. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದಕ್ಕಾಗಿಯೇ ಸಾಹಿತ್ಯ ಸೃಷ್ಟಿ ಮಾಡಿರುವದನ್ನು ಕಾಣುತ್ತೇವೆ. ಎಲ್ಲಾ ವಯೋಮಾನದ ಪ್ರೇಕ್ಷಕರಲ್ಲಿ ಸದಭಿರುಚಿಯನ್ನುಂಟು ಮಾಡುವ ಕಾಳಜಿಯನ್ನು ಇವರ ನಾಟಕಗಳಲ್ಲಿ ಕಾಣುತ್ತೇವೆ. ಸಹಕುಟುಂಬ ಪರಿವಾರಸಮೇತ ಮುಜುಗರ ವಿಲ್ಲದೆ ಇವರ ನಾಟಕಗಳನ್ನು ನೋಡಿ ಆನಂದಿಸಬಹುದಾಗಿದೆ.

ಶೈಲಿಃ ಒಬ್ಬ ಬರಹಗಾರನ ಸಾಮರ್ಥ್ಯವನ್ನು ಅಳೆಯುವಲ್ಲಿ ಶೈಲಿಯೂ ಒಂದು ಪ್ರಮುಖವಾದ ಅಂಶ. ಒಬ್ಬ ನಾಟಕಕಾರ ಬೇರೆ ನಾಟಕಕಾರನಿಗಿಂತ ಹೇಗೆ ಭಿನ್ನ ಎಂದು ಗುರುತಿಸುವಲ್ಲಿ ಶೈಲಿ ಒಂದು ಪ್ರಮುಖ ಸಾಧನವಾಗಿ ಕಂಡುಬರುತ್ತದೆ. ಶೈಲಿಯ ಬಗೆಗೆ ಭಾರತೀಯ ಮತ್ತು ಪಾಶ್ಚಿಮಾತ್ಯ ವಿದ್ವಾಂಸರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶೈಲಿ ಎಂದರೆ ಉತ್ತಮ ಬರವಣಿಗೆ, ಶೈಲಿಯೆಂದರೆ ಸಾಹಿತ್ಯ ಭಾಷೆಗೆ ಹೊಂದಿಸಿದ ಅಲಂಕಾರವೆಂದು, ಸಂದರ್ಭಕ್ಕೆ ತಕ್ಕಂತೆ ಭಾಷೆಯನ್ನು ಬಳಸುವ ರೀತಿಯೆಂದು ಮುಂತಾದ ಅರ್ಥದಲ್ಲಿ ಹೇಳುತ್ತಾರೆ.

ಬರಹಗಾರ ತನ್ನ ಭಾಷೆಯ ವ್ಯಾಕರಣ, ಶಬ್ದಾರ್ಥ, ರೀತಿ, ಜಾಯಮಾನಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ತನ್ನ ವೈಯಕ್ತಿಕ ಭಾವನೆಗಳಿಗೆ ಮೂರ್ತಸ್ವರೂಪ ಕೊಡುತ್ತಾನೋ ಅವನಲ್ಲಿ ಶೈಲಿ ಇದೆಯೆಂದು ಹೇಳ ಬಹುದು.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಸಾಹಿತ್ಯಕ್ಕೆ ಸಂಬಂಧಿಸಿದ ಚಳುವಳಿಗಳು ನಡೆಯುತ್ತಲೇ ಬಂದಿರುವುದನ್ನು ಕಾಣುತ್ತೇವೆ. ಈ ಚಳುವಳಿಗಳೂ ಅರಿಷಿಣಗೋಡಿಯವರ ಶೈಲಿಯ ಮೇಲೆ ಪ್ರಭಾವ ಬೀರಿವೆ.

ನಮ್ಮ ವೃತ್ತಿರಂಗಭೂಮಿ ನಾಟಕಕಾರರು ಸುಲಭ, ಸಂಕೀರ್ಣ, ಗದ್ಯಲಯ, ಪದ್ಯಲಯ ಮುಂತಾದ ಯಾವ ರೀತಿಯಲ್ಲಿ ಬರೆಯಬೇಕೆಂಬ ತೊಳಲಾಟದಲ್ಲಿ ಬಿದ್ದಿದ್ದನ್ನು ಕಾಣುತ್ತೇವೆ. ಅವರವರ ನಾಟಕಗಳನ್ನು ಅಧ್ಯಯನ ಮಾಡಿದಾಗ ಇದು ನಲವಡಿ ಶ್ರೀಕಂಠ ಶಾಸ್ತ್ರಿಗಳ ಶೈಲಿ, ಕಂದಗಲ್‌ರ ಶೈಲಿ, ಗರೂಡರ

ಶೈಲಿ, ಎಚ್.ಆರ್. ಭಸ್ಮೆಯವರ ಶೈಲಿ, ಎಚ್.ಎನ್. ಹೂಗಾರರ ಶೈಲಿ, ಇದು ಎನ್. ಬಸವರಾಜರ ಶೈಲಿ ಎಂದು ಸಹಜವಾಗಿ ಗುರುತಿಸಲಿಕ್ಕೆ ಸಾಧ್ಯವಾಗುತ್ತದೆ. ಶೈಲಿ ಒಮ್ಮೊಮ್ಮೆ ನಾಟಕದ ಪ್ರಕಾರವನ್ನು ಅವಲಂಬಿಸಿಯೂ ಬದಲಾವಣೆಯಾಗುತ್ತದೆ. ಪೌರಾಣಿಕ ನಾಟಕಗಳ ಶೈಲಿ, ಭಕ್ತಿಪ್ರಧಾನ ನಾಟಕಗಳ ಶೈಲಿ, ಐತಿಹಾಸಿಕ ನಾಟಕಗಳ ಶೈಲಿ, ಸಾಮಾಜಿಕ ನಾಟಕಗಳ ಶೈಲಿ ಬೇರೆ ಬೇರೆಯಾಗಿರುವದನ್ನು ಕಾಣುತ್ತೇವೆ. ಒಂದೊಂದು ಭಾವ ಪ್ರದರ್ಶನಕ್ಕೆ ಒಂದೊಂದು ಶೈಲಿಯನ್ನು ಬಳಸಬೇಕಾಗುತ್ತದೆ. ಶೃಂಗಾರಕ್ಕೆ ಮಧುರ ಶೈಲಿ, ವೀರಕ್ಕೆ ಗಂಡು ಶೈಲಿ, ಕಠೋರ ಶೈಲಿ ಹೀಗೆ ಒಬ್ಬ ನಾಟಕಕಾರನಲ್ಲಿ ಭಾವ, ಸನ್ನಿವೇಶಕ್ಕೆ ತಕ್ಕ ಶೈಲಿಯನ್ನು ಕಾಣುತ್ತೇವೆ.

ವೃತ್ತಿರಂಗಭೂಮಿಯ ನಾಟಕಗಳು ರಂಗಪ್ರಯೋಗದ ಮುಖಾಂತರ ಯಶಸ್ಸು ಗಳಿಸುವ ಗುರಿಯನ್ನು ಹೊಂದಿರುತ್ತವೆ. ಇವುಗಳನ್ನು ನೋಡುವ ಪ್ರೇಕ್ಷಕ ಶ್ರೀಸಾಮಾನ್ಯ. ಆದ್ದರಿಂದ ಶ್ರೀಸಾಮಾನ್ಯನನ್ನು ಲಕ್ಷ್ಯದಲ್ಲಿಟ್ಟುಕೊಂಡು ತಮ್ಮ ಶೈಲಿಯನ್ನು ರೂಢಿಸಿಕೊಳ್ಳುವುದು ಅವಶ್ಯ. ಅದರಲ್ಲೂ ಸಾಮಾಜಿಕ ನಾಟಕಗಳ ಕಥಾವಸ್ತುವನ್ನೊಳಗೊಂಡ ನಾಟಕಗಳ ಶೈಲಿ ಸರಳವಾಗುವದು ಸಹಜ. ಸಾಮಾಜಿಕ ನಾಟಕಗಳನ್ನು ಬರೆದ ಬಿ.ಆರ್. ಅರಿಷಿಣಗೋಡಿಯವರ ಶೈಲಿ ಸರಳ ಆಡುಮಾತಿನ, ಮಿಶ್ರ ಭಾಷಾ ಶೈಲಿಯನ್ನು ಒಳಗೊಂಡಿದೆ.

ತಂತ್ರ: ಸಾಹಿತ್ಯದ ಇತರ ಪ್ರಕಾರಗಳಿಗಿಂತಲೂ ನಾಟಕದಲ್ಲಿ ತಂತ್ರವೆನ್ನುವುದು ಪ್ರಮುಖ ಪಾತ್ರವಹಿಸುತ್ತದೆ. ನಾಟಕ ಪ್ರಯೋಗ ಪ್ರಧಾನವಾಗಿರುವುದರಿಂದ ಕೆಲವೇ ತಾಸುಗಳಲ್ಲಿ ಪ್ರೇಕ್ಷಕರ ಮುಂದೆ ಪ್ರದರ್ಶಿಸಿದಾಗ ಅದು ಪ್ರೇಕ್ಷಕನಿಗೆ ಮನರಂಜನೆ ಕೊಡುವಂತಾಗಬೇಕು. ಆದ್ದರಿಂದ ನಾಟಕಕಾರ ವಿಶೇಷವಾದ ತಂತ್ರಗಾರಿಕೆಯ ನೈಪುಣ್ಯವನ್ನು ಅರಿತವನಾಗಿರಬೇಕಾಗುತ್ತದೆ. "ತಂತ್ರದ ಬಗ್ಗೆ ಸಾಹಿತ್ಯ ವಿಮರ್ಶೆಯಲ್ಲಿ ಬೇರೆ ಬೇರೆ ವ್ಯಾಖ್ಯೆಗಳನ್ನು ನೋಡುತ್ತೇವೆ. ಅಂತರಂಗದ ಅನುಭವಕ್ಕೆ ಬಹಿರಂಗದಲ್ಲಿ ಒಂದು ನಿರ್ಧಿಷ್ಟವಾದ ಆಕಾರವನ್ನು ನೀಡುವಿಕೆಯ ಕಲೆಯಲ್ಲಿ ಅಭಿವ್ಯಕ್ತಿ ಎನಿಸಿಕೊಳ್ಳುತ್ತದೆ. ಬಹಿರಂಗ ಎಂದು ಯಾವುದನ್ನು ಕರೆಯುತ್ತೇವೆಯೋ ಅದು ಬಣ್ಣವಾಗಬಹುದು, ಶಿಲೆಯಾಗಬಹುದು, ನಾದವಾಗಬಹುದು, ಭಾಷ್ಯ ರೂಪವಾದ ಶಬ್ದ ಸಾಮಗ್ರಿಯಾಗಿರಬಹುದು. ಈ ಬಹಿರಂಗ ಸಾಮಗ್ರಿಯನ್ನು ಕಲಾವಿದ ಎಷ್ಟರ ಮಟ್ಟಿಗೆ ತನ್ನ ಅಂತರಂಗದ ಅಥವಾ ಅನುಭವದ ಅಭಿವ್ಯಕ್ತಿಗೆ ಯಶಸ್ವಿಯಾದ ಮಾಧ್ಯಮವನ್ನಾಗಿ ಮಾಡಿಕೊಳ್ಳುವನೋ ಅಷ್ಟರ ಮಟ್ಟಿಗೆ ಕಲೆ ಸಮರ್ಪಕವಾಯಿತೆಂದು ಹೇಳಬಹುದು. ಹಾಗೆ ಬಹಿರಂಗದ ಸಾಮಗ್ರಿಗಳ ಮೂಲಕ ಕವಿ ಸಾಧಿಸುವ ಅಭಿವ್ಯಕ್ತಿಯನ್ನು, ವಿಧಾನಗಳನ್ನು, ನೈಪುಣ್ಯಗಳನ್ನು, ಕೌಶಲಗಳನ್ನು ತಂತ್ರ ಎನ್ನುವ ಮಾತಿನಿಂದ ನಿರ್ದೇಶಿಸಬಹುದು" (ವಿಮರ್ಶೆಯ ಪೂರ್ವ ಪಶ್ಚಿಮ ಅನುಭವ-ತಂತ್ರ ಡಾ. ಜಿ.ಎಸ್. ಶಿವರುದ್ರಪ್ಪ, ಪುಟ ೧೦೦). ಒಟ್ಟಿನಲ್ಲಿ ತಂತ್ರವೆಂದರೆ ವಿಧಾನ, ಕೌಶಲ, ನೈಪುಣ್ಯ ಮುಂತಾದ ಅರ್ಥದಲ್ಲಿ ಕರೆಯಬಹುದಾಗಿದೆ. ಸಾಹಿತಿ ಜೀವನದಲ್ಲಿ ತಾನು ಕಂಡುಂಡ ಅನುಭವಗಳಿಗೆ

ತನ್ನ ಕಲ್ಪನಾಲೋಕದ ಜೀವಂತಿಕೆಯನ್ನು ಸಹೃದಯನಿಗೆ ತಿಳಿಸಿಕೊಡುವ ವಿಧಾನವೇ ತಂತ್ರ. ಹೀಗಾಗಿ ಒಂದು ಸಾಹಿತ್ಯ ಕೃತಿಯಲ್ಲಿ ತಂತ್ರ ತನ್ನ ವೈಶಿಷ್ಟ್ಯವನ್ನು ಪಡೆದುಕೊಳ್ಳುತ್ತದೆ.

ಒಬ್ಬ ನಾಟಕಕಾರ ತನ್ನ ಕೃತಿಯಲ್ಲಿ ಹೆಣೆದ ಕಥಾಸಂವಿಧಾನ, ಸನ್ನಿವೇಶ ನಿರ್ಮಾಣ, ನಿರೂಪಣಾ ಕ್ರಮ, ರಸ ಪ್ರತಿಪಾದನ, ಪಾತ್ರಸೃಷ್ಟಿ ಇವೆಲ್ಲವೂ ತಂತ್ರದ ವ್ಯಾಪ್ತಿಯೊಳಗೆ ಬರುತ್ತವೆ. ಬಿ.ಆರ್. ಅರಿಷಿಣಗೋಡಿಯವರು ತಮ್ಮ ನಾಟಕದ ತಲೆಬರಹವನ್ನು ಸಮರ್ಥಿಸಿಕೊಂಡು ಹೋಗುವುದು ಅದು ಅವರ ತಂತ್ರ, ಸನ್ನಿವೇಶದಿಂದ ಸನ್ನಿವೇಶಕ್ಕೆ ನಾಟಕದಲ್ಲಿ ಸರಾಗವಾಗಿ ಕಥೆಯನ್ನು ಮುನ್ನಡೆಸಿಕೊಂಡು ಹೋಗುವ ತಂತ್ರಗಾರಿಕೆಯನ್ನು ಅರಿಷಿಣಗೋಡಿಯವರು ಕರಗತ ಮಾಡಿಕೊಂಡಿದ್ದರು. ಪಾತ್ರಗಳು ತಮ್ಮ ಧ್ಯೇಯ ಪ್ರತಿಪಾದನೆಗೆ ಸನ್ನಿವೇಶದಿಂದ ಸನ್ನಿವೇಶಕ್ಕೆ ಮೈತುಂಬಿಕೊಂಡು ಸಂಚರಿಸುವುದು ಕೂಡ ಬಿ.ಆರ್. ಅರಿಷಿಣಗೋಡಿಯವರ ತಂತ್ರಗಾರಿಕೆಯೇ.

ಬಿ.ಆರ್. ಅರಿಷಿಣಗೋಡಿಯವರು ತಮ್ಮ ನಾಟಕದ ಆಶಯವನ್ನು ಪ್ರೇಕ್ಷಕರಿಗೆ ತಲುಪಿಸಲು ಸರಳವಾದ ಅರ್ಥವಾಗುವ ಮಾರ್ಗವನ್ನು ಅನುಸರಿಸಿದ್ದು ಇವರ ತಂತ್ರಗಾರಿಕೆಯನ್ನು ತೋರಿಸುತ್ತದೆ. ತಿಳಿಯಾದ ಹಾಸ್ಯ ಜೋಡಣೆಯನ್ನು ಅವರ ತಂತ್ರಗಾರಿಕೆಯಲ್ಲಿ ಕಾಣುತ್ತೇವೆ. ನಿಜಜೀವನದಲ್ಲಿ ಕಂಡ ಪಾತ್ರಗಳನ್ನು ನಾಟಕದಲ್ಲಿ ಚಿತ್ರಿಸುವ ಕಲೆಗಾರಿಕೆಯನ್ನು ಬಿ.ಆರ್. ಅರಿಷಿಣಗೋಡಿಯವರು ಕರಗತ ಮಾಡಿಕೊಂಡಿದ್ದರು. ಹೀಗಾಗಿ ಇವರ ನಾಟಕಗಳು ವಿಶಿಷ್ಟ ತಂತ್ರಗಾರಿಕೆಯಿಂದ ರಚಿಸಲ್ಪಟ್ಟವುಗಳಾಗಿವೆ.

ಬಿ.ಆರ್. ಅರಿಷಿಣಗೋಡಿಯವರ ಒಟ್ಟು ೧೪ ನಾಟಕಗಳು ವಿಶಿಷ್ಟ ಭಾಷೆ, ಶೈಲಿ, ತಂತ್ರಗಾರಿಕೆಯಿಂದ ಜನಮಾನಸದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿವೆ.

ಪಾತ್ರ ಸೃಷ್ಟಿ: ಬಿ.ಆರ್. ಅರಿಷಿಣಗೋಡಿಯವರು ಪ್ರೇಕ್ಷಕರ ಮನದಲ್ಲಿ ಅಚ್ಚಳಿಯದಂತೆ ಪಾತ್ರ ಸೃಷ್ಟಿ ಮಾಡುವುದರಲ್ಲಿ ನಿಸ್ಸೀಮರು. ಕಥಾಸಂವಿಧಾನಕ್ಕೆ ತಕ್ಕಂತೆ ಪಾತ್ರಗಳನ್ನು ಸೃಷ್ಟಿ ಮಾಡುವುದರಲ್ಲಿ ಪಳಗಿದವರಾಗಿದ್ದರು. ಬೇರೆ ಬೇರೆ ವಯೋಮಾನದ, ಬೇರೆ ಬೇರೆ ಅಭಿರುಚಿಯ, ಬೇರೆ ಬೇರೆ ಮನೋಧರ್ಮದ ಪಾತ್ರಗಳು ತಮ್ಮ ಅಸ್ತಿತ್ವವನ್ನು ಸ್ಥಾಪಿಸಲು ಪ್ರಯತ್ನಿಸುವ ಪರಿ ಮನ ಮುಟ್ಟುವಂತೆ ಚಿತ್ರಿತವಾಗಿರುವುದನ್ನು ಕಾಣುತ್ತೇವೆ. ಪಾತ್ರಗಳು ಸಮಕಾಲೀನ ಸಂವೇದನಗಳಿಗೆ ಸ್ಪಂದಿಸುವಂತಿರುತ್ತವೆ. ವೃತ್ತಿರಂಗಭೂಮಿಯ ನಾಟಕಗಳಲ್ಲಿ ಹೆಚ್ಚಾಗಿ ನಾಯಕ, ಪ್ರತಿನಾಯಕ, ನಾಯಕಿ ಪಾತ್ರಗಳಿಗೆ ಪ್ರಾಧಾನ್ಯತೆ ಇರುವುದನ್ನು ಕಾಣುತ್ತೇವೆ. ನಾಯಕ ಒಳ್ಳೆಯವ, ಪ್ರತಿನಾಯಕ ದುಷ್ಟ ಎಂದು ಚಿತ್ರಿಸಿ ಇವರಿಬ್ಬರನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಥಾ ಹಂದರವನ್ನು ನಿರ್ಮಿಸುವದನ್ನು ವೃತ್ತಿರಂಗಭೂಮಿಯಲ್ಲಿ ಕಾಣುತ್ತೇವೆ. ಆದರೆ ಬಿ.ಆರ್. ಅರಿಷಿಣಗೋಡಿಯವರು ತಮ್ಮ ನಾಟಕಗಳಲ್ಲಿ ನಾಯಕ, ಪ್ರತಿನಾಯಕ, ಪಾತ್ರಗಳಿಗಷ್ಟೆ ಪ್ರಾಧಾನ್ಯತೆ ಕೊಡದೆ ನಾಟಕದ ಎಲ್ಲಾ ಪಾತ್ರಗಳಿಗೂ ಪ್ರಾಧಾನ್ಯತೆಯನ್ನು ಕೊಟ್ಟಿರುವದನ್ನು ಕಾಣುತ್ತೇವೆ. ಒಂದೊಂದು

ಪಾತ್ರಗಳು ಒಂದೊಂದು ಸನ್ನಿವೇಶದಲ್ಲಿ ತಮ್ಮ ಅಂತರಂಗವನ್ನು ಬಿಚ್ಚಿಡಲು ಸಹಾಯವಾಗುವಂತೆ ಪಾತ್ರಗಳ ಸೃಷ್ಟಿ ಮಾಡಿರುವುದು ಇವರ ವೈಶಿಷ್ಟ್ಯಗಳಲ್ಲೊಂದು. ಒಂದು ಪಾತ್ರವನ್ನು ವೈಭವಿಕರಿಸಿ ಇನ್ನೊಂದು ಪಾತ್ರವನ್ನು ನಿಕೃಷ್ಟವಾಗಿ ಚಿತ್ರಿಸಿದ್ದನ್ನು ಇವರ ನಾಟಕಗಳಲ್ಲಿ ಕಾಣುವುದಿಲ್ಲ. ಎಲ್ಲಾ ಪಾತ್ರಗಳು ಸಮಾನ ಅವಕಾಶಗಳನ್ನು ಪಡೆದು ರಂಗದ ಮೇಲೆ ಪರಿಣಾಮವನ್ನು ಬೀರುತ್ತವೆ.

ಕುಟುಂಬದಲ್ಲಿ ಹೆಣ್ಣಿನ ಮಹತ್ವವನ್ನು ಅರಿತ ಬಿ.ಆರ್. ಅರಿಷಿಣಗೋಡಿಯವರು ಹೆಣ್ಣಿನ ನೋವು-ನಲಿವು, ಬೆಡಗು, ಬಿನ್ನಾಣ, ಕುಟಿಲತನ, ಸ್ವಾರ್ಥ, ಅನೈತಿಕತೆ, ಹೆಣ್ಣಿನ ಗೋಳು, ದರ್ಪ, ಪ್ರೀತಿ, ವಾತ್ಸಲ್ಯ, ತ್ಯಾಗ ಎಲ್ಲವನ್ನೂ ತಮ್ಮ ನಾಟಕದಲ್ಲಿ ಸ್ತ್ರೀ ಪಾತ್ರಗಳ ಮುಖಾಂತರ ಚಿತ್ರಿಸಿದ್ದಾರೆ.

ಒಬ್ಬೊಬ್ಬ ನಟರಿಗಾಗಿಯೇ ಪಾತ್ರಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಾಟಕ ಬರೆಯುವ ಕಾಲ ವೊಂದಿತ್ತು. ಆದರೆ ಅರಿಷಿಣಗೋಡಿಯವರು ತಾವು ಆಯ್ದುಕೊಂಡ ಕಥಾವಸ್ತುವಿಗೆ ಅನುಗುಣವಾಗಿ ಪಾತ್ರಗಳನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಹೀಗಾಗಿ ಅರಿಷಿಣಗೋಡಿಯವರ ಕಥಾವಸ್ತು ಮತ್ತು ಪಾತ್ರಗಳು ಒಂದಕ್ಕೊಂದು ಪೂರಕವಾಗಿ ಮೂಡಿಬಂದಿವೆ.

ಬಿ.ಆರ್.ಅರಿಷಿಣಗೋಡಿಯವರ ನಾಟಕಗಳಲ್ಲಿ ಪಾತ್ರಗಳ ಸಂಖ್ಯೆ ಮಿತಿಮೀರದೆ ಒಂದು ಮಿತಿಯಲ್ಲಿ ಪಾತ್ರಗಳನ್ನು ಸೃಷ್ಟಿಸಿರುವುದನ್ನು ನೋಡುತ್ತೇವೆ. ಕೆಲವೇ ಪಾತ್ರಗಳು ಇರುವುದರಿಂದ ಕಥೆ ಸಂಕೀರ್ಣವಾಗದೆ ಇರುವುದು ಒಂದು ವಿಶೇಷ. ಇವರ ನಾಟಕಗಳಲ್ಲಿ ಹೆಚ್ಚೆಂದರೆ ೬-೭ ಪುರುಷ ಪಾತ್ರಗಳು, ೪-೫ ಸ್ತ್ರೀ ಪಾತ್ರಗಳು ನಾಟಕದ ಕಥೆಯನ್ನು ಮುನ್ನಡೆಸಿಕೊಂಡು ಹೋಗಲು ೩-೪ ಪಾತ್ರಗಳು, ಒಬ್ಬ ನಾಯಕ, ನಾಯಕಿ, ಖಳನಾಯಕ, ಹಾಸ್ಯಪಾತ್ರ (ಪೋಷಕ ಪಾತ್ರ) ಉಳಿದ ಪಾತ್ರಗಳು ಕಥೆಗೆ ಪೂರಕವಾಗಿ ಬರುತ್ತವೆ. ನಾಯಕ ಪಾತ್ರಗಳು ಉದಾತ್ತ ಗುಣಗಳನ್ನು ಹೊಂದಿ, ಗ್ರಂಥಸ್ಥ ಹಾಗೂ ಲೋಕಾರೂಢಿಯ ಮಾತುಗಳನ್ನು ಹೇಳುತ್ತವೆ. ಖಳನಾಯಕನ ಪಾತ್ರಗಳು ಅಪ್ಪಟ ಗ್ರಂಥಸ್ಥ, ಗಂಭೀರ ಮಾತುಗಳನ್ನು ಹೇಳುತ್ತವೆ. ತಮ್ಮ ಆಶೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೋಗಿ ವಿಫಲವಾಗುತ್ತವೆ. ನಾಯಕ ಪಾತ್ರಗಳಾದರೂ ತಮ್ಮ ಉದಾತ್ತ ಗುಣಗಳಿಂದ ನೀತಿ ನಿರೂಪಣೆ ಮಾಡುತ್ತಾ ಯಶಸ್ಸನ್ನು ಹೊಂದುತ್ತವೆ. ಹಾಸ್ಯ ಪಾತ್ರಗಳಾದರೂ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಗ್ರಾಮ್ಯ ಪದಗಳ ಬಳಕೆಯಿಂದ ಸನ್ನಿವೇಶದಿಂದ ಸನ್ನಿವೇಶಕ್ಕೆ ಸಮಾಜದ ಅಂಕು-ಡೊಂಕುಗಳನ್ನು ಪ್ರತಿಪಾದಿಸುತ್ತವೆ. ಕೆಲವೊಂದು ಸ್ತ್ರೀ ಪಾತ್ರಗಳು ದರ್ಪ, ಅಸೂಯೆ, ಅನೈತಿಕತೆ, ಕಾರಸ್ಥಾನ, ಮೋಸ, ವಂಚನೆಗಳನ್ನು ಪ್ರತಿನಿಧಿಸುವಂತಿದ್ದಾರೆ. ಇನ್ನೂ ಕೆಲವು ಸ್ತ್ರೀ ಪಾತ್ರಗಳು, ತ್ಯಾಗ, ವಾತ್ಸಲ್ಯ, ಪ್ರತಿವೃತಾ ಶಿರೋಮಣಿ, ಕರುಣೆ, ತಾಳ್ಮೆ ಮುಂತಾದ ಗುಣಗಳನ್ನು ಪ್ರತಿನಿಧಿಸುತ್ತವೆ. ಅರಿಷಿಣಗೋಡಿಯವರ ನಾಟಕಗಳಲ್ಲಿಯ ಪಾತ್ರಗಳನ್ನು ಈ ರೀತಿ ನೋಡಬಹುದು.

ಆಶಯ: ವೃತ್ತಿ ನಾಟಕ ಕಂಪನಿಯ ಉದ್ದೇಶ ನೀತಿ-ನಿರೂಪಣೆ, ರಂಜನೆ, ಲೋಕಕಥನಗಳನ್ನು ಬಿಂಬಿಸುವದಾಗಿದೆ. ಬಿ.ಆರ್. ಅರಿಷಿಣಗೋಡಿಯವರ ನಾಟಕಗಳಲ್ಲಿ ಈ ಮೂರು ಗುಣಗಳನ್ನು ಕಾಣುತ್ತೇವೆ. ಸಮಾಜದಲ್ಲಿಯ ಕೊಳೆಯನ್ನು ತೊಳೆಯುವದು ಅದರ ಸ್ವಾಸ್ಥ್ಯವನ್ನು ಕಾಪಾಡುವುದು, ನೋಡುಗನಲ್ಲಿ ಸದಭಿರುಚಿಯನ್ನು ಬೆಳೆಸುವದು ನಾಟಕಕಾರರ ಆಶಯವಾಗಿರುವದನ್ನು ಕಾಣುತ್ತೇವೆ. ಅಲ್ಲದೆ ವೃತ್ತಿರಂಗಭೂಮಿಯ ಪಾವಿತ್ರ್ಯ ಪರಂಪರೆಗಳನ್ನು ಉಳಿಸಿ ಮುಂದುವರಿಸಿಕೊಂಡು ಹೋಗ ಬೇಕೆನ್ನುವುದು ಅರಿಷಿಣಗೋಡಿಯವರ ಎಲ್ಲ ನಾಟಕಗಳ ಆಶಯವಾಗಿದೆ.

ತಮ್ಮ ಪ್ರತಿಭೆ, ಸ್ವಾನುಭವ, ಕಲ್ಪನೆ, ಚಿಂತನೆಗಳ ಮೂಲಕ ನಾಟಕಗಳನ್ನು ಕಲಾತ್ಮಕವಾಗಿ ರಚಿಸಿ ಜನರನ್ನು ರಂಜಿಸುತ್ತಾ ಬಂದಿದ್ದಾರೆ. ಸಮಾಜದಲ್ಲಿಯ ವಿವಿಧ ವ್ಯಕ್ತಿಗಳ ಗುಣಸ್ವಭಾವಗಳನ್ನು ತಮ್ಮ ನಾಟಕದಲ್ಲಿ ಚಿತ್ರಿಸುವುದರ ಮುಖಾಂತರ ಇಡೀ ಸಮಾಜವನ್ನು ಓರೆಗೆ ಹಚ್ಚಿ ನೋಡಿದ್ದಾರೆ. ಮಾನವ ಸ್ವಭಾವದ ಒಳಿತು-ಕೆಡಕುಗಳನ್ನು ಚಿತ್ರಿಸಿದ್ದಾರೆ. ಸಮಾಜದಲ್ಲಿಯ ಪುರುಷ, ಸ್ತ್ರೀಯರ ಅಂಕುಡೊಂಕುಗಳನ್ನು ತಮ್ಮ ನಾಟಕಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಕಾಂತೆಯ ಉಪದೇಶದಂತೆ ನಯವಾಗಿ ಸಮಾಜದಲ್ಲಿ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ.

ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ತಮ್ಮ ನಾಟಕದ ಕಥಾವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಸಮಾಜದಲ್ಲಿಯ ಗುಣ-ದೋಷಗಳನ್ನು ಎತ್ತಿ ಹೇಳಿ, ಗುಣಗಳನ್ನು ಉಜ್ವಲಗೊಳಿಸುವುದು ಇವರ ನಾಟಕಗಳ ಆಶಯವಾಗಿದೆ. ಮಾನವನಲ್ಲಿ ಮನೆಮಾಡಿದ ಅಸೂಯೆ, ಮೋಸ, ವಂಚನೆ, ಕುಂಟಲತನ, ವಿಶ್ವಾಸದ್ರೋಹ, ಲಾಭಬಡುಕತನ, ಭ್ರಷ್ಟಾಚಾರ, ಅನ್ಯಾಯ, ಅಧರ್ಮ, ಅನೀತಿ, ಅತ್ಯಾಚಾರಗಳು ಮುಂತಾದವುಗಳಿಗೆ ಕಡಿವಾಣ ಹಾಕಿ, ನ್ಯಾಯ, ಪ್ರೀತಿ, ವಿಶ್ವಾಸ, ಶೀಲ, ವಿನಯ, ವಿವೇಕ, ಶಾಂತಿ, ಸಭ್ಯತೆ, ಧರ್ಮ ಮುಂತಾದ ನಮ್ಮ ಭಾರತೀಯ ಪರಂಪರೆ, ಸಂಪ್ರದಾಯಗಳನ್ನು ಎತ್ತಿ ಹಿಡಿಯಲು ನಾಟಕಕಾರರು ತಮ್ಮ ನಾಟಕಗಳ ಮುಖಾಂತರ ಪ್ರಯತ್ನಿಸಿರುವುದನ್ನು ಕಾಣುತ್ತೇವೆ.

ಹೀಗೆ ಬಿ.ಆರ್. ಅರಿಷಿಣಗೋಡಿಯವರು ತಮ್ಮ ಪ್ರತಿಭೆಯ ಕಲಾಕುಂಚದಿಂದ ಸುಂದರ ದೃಶ್ಯಗಳನ್ನು ಚಿತ್ರಿಸಿ ಪ್ರೇಕ್ಷಕರಲ್ಲಿ ಸದಭಿರುಚಿಯನ್ನು ಬೆಳೆಸಿದ್ದಾರೆ. ಬಿ.ಆರ್. ಅರಿಷಿಣಗೋಡಿಯವರು ಅಗ್ಗದ ಪ್ರಚಾರಕ್ಕೆ ಬಲಿಯಾಗಲಿಲ್ಲ, ಹಣಗಳಿಕೆಗಾಗಿ ಅತಿಯಾದ ರಂಜನೆ ಅಶ್ಲೀಲ ಮುಂತಾದವುಗಳಿಗೆ ತಮ್ಮ ನಾಟಕದಲ್ಲಿ ಅವಕಾಶವನ್ನು ಕಲ್ಪಿಸಲಿಲ್ಲ. ಬದಲಾಗಿ ಸಮಾಜ, ಸಾಹಿತ್ಯ, ಸಂಸ್ಕೃತಿಯ ಮೌಲ್ಯಗಳನ್ನು ಎತ್ತಿಹಿಡಿಯಲು ಈ ನಾಟಕ ಮಾಧ್ಯಮವನ್ನು ಬಳಸಿಕೊಂಡರು. ಹೀಗಾಗಿ ವೃತ್ತಿರಂಗ ನಾಟಕಕಾರರಲ್ಲಿ ಬಿ.ಆರ್. ಅರಿಷಿಣಗೋಡಿಯವರು ತಮ್ಮದೇ ಆದ ಸ್ಥಾನವನ್ನು ಅಲಂಕರಿಸಿದ್ದಾರೆ.

ಮಾಲಿಕರಾಗಿ ತಮ್ಮ ಕಂಪನಿಯ ರಂಗ ಸಜ್ಜಿಕೆಯ ಇತಿ-ಮಿತಿಗಳನ್ನು ಅರ್ಥೈಸಿದ ಅರಿಷಿಣಗೋಡಿಯವರು ಪೌರಾಣಿಕ ನಾಟಕಗಳ ಕಡೆಗೆ ಲಕ್ಷ್ಯ ಹರಿಸಲಿಲ್ಲ. ಸಮಕಾಲೀನ ವೃತ್ತಿ ಮಂಡಳಿಗಳು ಸಾಮಾಜಿಕ

ನಾಟಕಗಳ ಜೊತೆಗೆ ಪೌರಾಣಿಕ ನಾಟಕಗಳನ್ನಾಡುವ ಸಾಹಸ ಮಾಡಿ ಕೆಲವೊಂದು ಕಂಪನಿಗಳು ಯಶಸ್ಸನ್ನು ಹೊಂದಿದರೂ ಅರಿಷಿಣಗೋಡಿಯವರು ಪೌರಾಣಿಕ ನಾಟಕಗಳನ್ನು ಆಡಲಿಲ್ಲ. ಬದಲಾಗಿ ಐತಿಹಾಸಿಕ, ಭಕ್ತಿ ಪ್ರಧಾನ, ಸಾಮಾಜಿಕ ನಾಟಕಗಳನ್ನು ಪ್ರಯೋಗ ಮಾಡಿದರು. ಸಾಮಾಜಿಕ ನಾಟಕಗಳಿಂದ ಕಂಪನಿ ಕೀರ್ತಿ, ಸಂಪತ್ತನ್ನು ಗಳಿಸಿದರು. ಐತಿಹಾಸಿಕ, ಭಕ್ತಿ ಪ್ರಧಾನ ನಾಟಗಳ ಪ್ರಯೋಗದಿಂದ ಕೀರ್ತಿಯನ್ನು ಪಡೆಯಲು ವಿಫಲವಾಯಿತು. ಕಂಪನಿಯ ಪರಿಕರಗಳು ಸಾಮಾಜಿಕ ನಾಟಕಗಳನ್ನು ಸರಿದೂಗಿಸುವಷ್ಟು ಯೋಗ್ಯತೆಯನ್ನು ಪಡೆದಿದ್ದವು. ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ ನಾಟಕಗಳಿಗೆ ಭವ್ಯವಾದ ರಂಗಸಜ್ಜಿಕೆ, ಕಲಾವಿದರಿಗೆ ಬೇಕಾದ ದುಬಾರಿ ವೇಷ-ಭೂಷಣಗಳು, ಆಭರಣಗಳು, ಆಯುಧಗಳು ಇತ್ಯಾದಿ ವಸ್ತುಗಳ ಕೊರತೆ ಕಂಪನಿಯಲ್ಲಿ ಇದ್ದುದರಿಂದ ಐತಿಹಾಸಿಕ, ಭಕ್ತಿಪ್ರಧಾನ ನಾಟಕಗಳು ಹೆಚ್ಚು ಪ್ರಸಿದ್ಧಿಯನ್ನು ಪಡೆಯಲಿಲ್ಲ. ಸಿಂಧೂರ-ಲಕ್ಷ್ಮಣ, ಗರಗದ ಮಡಿವಾಳೇಶ್ವರ ಮಹಾತ್ಮೆ, ಸಂಗೊಳ್ಳಿ ರಾಯಣ್ಣಾ, ಕಿತ್ತೂರು ಚನ್ನಮ್ಮಾ, ಶ್ರೀ ಹೊಳೆ ಹುಚ್ಚೇಶ್ವರ ಮಹಾತ್ಮೆ ನಾಟಕಗಳು ತಕ್ಕಮಟ್ಟಿಗೆ ಯಶಸ್ಸನ್ನು ಪಡೆದವು. ಸಾಮಾನ್ಯ ತರಗತಿಯ ರಂಗಸಜ್ಜಿಕೆಯನ್ನು ಕಂಪನಿಯು ಹೊಂದಿದುದರ ಪರಿಣಾಮ ಐತಿಹಾಸಕ, ಭಕ್ತಿ ಪ್ರಧಾನ ನಾಟಕಗಳ ರಂಗ ಪ್ರದರ್ಶನಗಳು ಪ್ರೇಕ್ಷಕರನ್ನು ಸೆಳೆಯಲು ವಿಫಲವಾದವೆಂದು ಹೇಳಬಹುದು. ಅರಿಷಿಣಗೋಡಿಯವರು ತಮ್ಮ ವೃತ್ತಿರಂಗಭೂಮಿಯ ಕಲಾಯಾತ್ರೆಯಲ್ಲಿ ನಾಡಿನಾದ್ಯಂತ ೬೫ಕ್ಕೂ ಹೆಚ್ಚು ನಾಟಕಗಳನ್ನು ಕಂಪನಿಯಲ್ಲಿ ಆಡಿಸಿರುವರು. ಇವುಗಳಲ್ಲಿ ೩ ನಾಟಕಗಳು ಐತಿಹಾಸಿಕ (ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣಾ, ಕಿತ್ತೂರು ಚನ್ನಮ್ಮ) ನಾಟಕಗಳು ಎರಡು ಭಕ್ತಿ ಪ್ರಧಾನ (ಗರಗದ ಮಡಿವಾಳೇಶ್ವರ ಮಹಾತ್ಮೆ, ಶ್ರೀ ಹೊಳೆ ಹುಚ್ಚೇಶ್ವರ ಮಹಾತ್ಮೆ) ನಾಟಕಗಳನ್ನು ಬಿಟ್ಟರೆ ಉಳಿದೆಲ್ಲಾ ನಾಟಕಗಳು ಸಾಮಾಜಿಕ ನಾಟಕಗಳೆ. ಪೌರಾಣಿಕ ನಾಟಕಗಳನ್ನು ಕಂಪನಿ ಆಡದೇ ಇರುವುದು ಕಂಪನಿಯ ಇತಿ-ಮಿತಿಗಳನ್ನು ತೋರಿಸುತ್ತದೆ.

ಅರಿಷಿಣಗೋಡಿಯವರು ಪ್ರದರ್ಶಿಸಿದ ಐತಿಹಾಸಿಕ, ಭಕ್ತಿ ಪ್ರಧಾನ ನಾಟಕಗಳಾದ ಸಿಂಧೂರ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣಾ, ಕಿತ್ತೂರ ಚೆನ್ನಮ್ಮ, ಗರಗದ ಮಡಿವಾಳೇಶ್ವರ ಮಹಾತ್ಮೆ, ಶ್ರೀ ಹೊಳೆ ಹುಚ್ಚೇಶ್ವರ ಮಹಾತ್ಮೆ ನಾಟಕಗಳು ವೃತ್ತಿರಂಗಭೂಮಿಯಲ್ಲಿ ಪ್ರೇಕ್ಷಕರನ್ನು ಸೆಳೆದುಕೊಳ್ಳುವಲ್ಲಿ ಕಂಪನಿ ಸೋಲನ್ನು ಅನುಭವಿಸಿತು. ಪೌರಾಣಿಕ, ಐತಿಹಾಸಿಕ, ಭಕ್ತಿ ಪ್ರಧಾನ ನಾಟಕಗಳ ಸಾಧಕ-ಬಾಧಕಗಳನ್ನು ಅರ್ಥಮಾಡಿಕೊಂಡ ಅರಿಷಿಣಗೋಡಿಯವರು ಸರಳವಾದ ಕಥಾವಸ್ತುವನ್ನು ಒಳಗೊಂಡ ಸುಂದರ ಸಾಮಾಜಿಕ ನಾಟಕಗಳನ್ನು ಆಡುತ್ತ ಯಶಸ್ಸನ್ನು ಪಡೆದರು. ಸಾಮಾಜಿಕ ನಾಟಕಗಳಿಗೆ ಬೇಕಾಗುವಷ್ಟು ರಂಗಪರಿಕರಗಳು ಕಂಪನಿಯಲ್ಲಿದ್ದವು. ಸಾಮಾಜಿಕ ನಾಟಕಗಳಲ್ಲಿ ಪಾತ್ರ ಮಾಡತಕ್ಕಂತಹ ನಟ-ನಟಿಯರು ಕಂಪನಿಯಲ್ಲಿದ್ದರು. ಸಾಮಾಜಿಕ ನಾಟಕಗಳಾದರೆ ಕೇವಲ ೧೫ ದಿನಗಳಲ್ಲಿ ನಿರ್ದೇಶನ ಮಾಡಿ ರಂಗ ಪ್ರಯೋಗಕ್ಕೆ ತರುವ ಅವಕಾಶವಿದ್ದುದರಿಂದ ಕಂಪನಿ ಕೆಲವು ಅನುಕೂಲ ಹಾಗೂ ಅನಾನುಕೂಲಗಳಿಂದ ಸಾಮಾಜಿಕ

ನಾಟಕಗಳನ್ನಾಡುವುದರ ಕಡೆಗೆ ಗಮನ ಹರಿಸಿದೆ. 'ಸಾಮಾಜಿಕ ನಾಟಕಗಳೆಂದರೆ ಅರಿಷಿಣ ಗೋಡಿಯವರ ಕಂಪನಿ, ಅರಿಷಿಣಗೋಡಿಯವರ ಕಂಪನಿಯೆಂದರೆ ಸಾಮಾಜಿಕ ನಾಟಕಗಳು' ಎನ್ನುವಷ್ಟು ಕೀರ್ತಿಯನ್ನು ಕಂಪನಿ ಪಡೆದಿತ್ತು.

ಅರಿಷಿಣಗೋಡಿಯವರು ನಾಟಕಗಳ ಮುಖಾಂತರ ಸಮಕಾಲಿನ ಸಮಸ್ಯಗಳ ಮೇಲೆ ಬೆಳಕು ಚೆಲ್ಲುತ್ತಾ ಜನಸಾಮಾನ್ಯರಿಗೆ ಮನರಂಜನೆ ನೀಡುವುದರ ಜೊತೆಗೆ ಅರಿವನ್ನು ಮೂಡಿಸಿ ಜಾಗೃತಿಯನ್ನು ಉಂಟು ಮಾಡಿದರು. ೩೧-೧೨-೧೯೬೧ರಂದು ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಹೆಸರಿನ ಅಡಿಯಲ್ಲಿ ನಾಟಕ ಕಂಪನಿ ಆರಂಭಿಸಿ ಸುಮಾರು ೪೩ ವರ್ಷಗಳ ಕಾಲ ನಿರಂತರ ಕರ್ನಾಟಕದ ಉದ್ದಗಲಕ್ಕೂ ಸಾಮಾಜಿಕ, ಐತಿಹಾಸಿಕ, ಭಕ್ತಿಪ್ರಧಾನ ನಾಟಕಗಳನ್ನು ಪ್ರದರ್ಶಿಸುತ್ತಾ ೨೫೦ರಿಂದ ೩೦೦ ರಂಗಕರ್ಮಿಗಳನ್ನು ಪೋಷಿಸುತ್ತಾ ವೃತ್ತಿರಂಗಭೂಮಿಗೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಕರ್ನಾಟಕದ ತುಂಬೆಲ್ಲ ಜನಾನುರಾಗಿಯಾಗಿ ಮೆರೆದ ಬಿ.ಆರ್. ಅರಿಷಿಣಗೋಡಿಯವರ ಕೊನೆಯ ಕಂಪನಿ ಕ್ಯಾಂಪ್ ಮುಕ್ತಾಯ ಮಾಡಿದಾಗ ಸಖಿರಾಯ ಪಟ್ಟಣದಲ್ಲಿತ್ತು. ಆ ಹೊತ್ತಿಗೆ ಉಳಿದ ಮೂರೂ ಬ್ರ್ಯಾಂಚ್ ಕಂಪನಿಗಳು ಹಂತ-ಹಂತವಾಗಿ ಮುಚ್ಚಿದ್ದವು. ೨೦೦೩ರಲ್ಲಿ ಕಂಪನಿ ತನ್ನ ಕೊನೆಯ ಅಂಕ ಪರದೆಯನ್ನು ಸಖಿರಾಯ ಪಟ್ಟಣದಲ್ಲಿ ಎಳೆಯಿತು. ಕಂಪನಿ ಮಾಲಿಕ, ನಾಟಕಕಾರ, ನಟ, ನಿರ್ದೇಶಕರಾಗಿ ವೃತ್ತಿರಂಗಭೂಮಿಗೆ ಅಖಂಡ ೪೩ ವರ್ಷಗಳ ಕಾಲ ರಂಗಕಲಾ ಸೇವೆಯನ್ನು ಮಾಡಿದ ಅರಿಷಿಣಗೋಡಿಯವರನ್ನು ನೆನಪಿಸಿ ಕೊಳ್ಳುವುದೆಂದರೆ ಅರ್ಧ ಶತಮಾನದ ವೃತ್ತಿರಂಗಭೂಮಿಯನ್ನು ಮೆಲಕು ಹಾಕಿದಂತೆ.

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಈ ಪ್ರಬಂಧದುದ್ದಕ್ಕೂ ಬಿ. ಆರ್. ಅರಿಷಿಣಗೋಡಿಯವರು ಉತ್ತರ ಕರ್ನಾಟಕದ ವೃತ್ತಿರಂಗ ಭೂಮಿಯಲ್ಲಿ ಯಶಸ್ವಿ ಕಂಪನಿ ಮಾಲಿಕರಾಗಿ, ನಾಟಕಕಾರರಾಗಿ, ನಟರಾಗಿ, ನಿರ್ದೇಶಕರಾಗಿ ಯಾವ ರೀತಿ ತಮ್ಮ ಬಹುಮುಖ ಪ್ರತಿಭೆಯನ್ನು ತೋರಿಸಿದ್ದಾರೆ ಎಂಬುದನ್ನು ನೋಡಲಾಯಿತು.

ಬಿ. ಆರ್. ಅರಿಷಿಣಗೋಡಿಯವರು ವೃತ್ತಿರಂಗಭೂಮಿಗೆ ಪಾದಾರ್ಪಣೆ ಮಾಡುವುದಕ್ಕಿಂತ ಪೂರ್ವದಲ್ಲಿ ಉತ್ತರ ಕರ್ನಾಟಕದ ವೃತ್ತಿರಂಗಭೂಮಿ ರಾಜ-ಮಹಾರಾಜರ ವೈಭವದಂತೆ ಮೆರೆದಿರುವದನ್ನು ನೋಡುತ್ತೇವೆ. ಕಾಲ ಬದಲಾದಂತೆ ಪ್ರೇಕ್ಷಕರ ಅಭಿರುಚಿಯು ಬದಲಾಯಿತು. ಇದನ್ನು ಮನಗಂಡ ವೃತ್ತಿ ಕಂಪನಿ ನಾಟಕಕಾರರು, ಕಂಪನಿ ಮಾಲಿಕರು ಮೊದಲು ಪ್ರದರ್ಶಿಸುತ್ತಿದ್ದ ಪೌರಾಣಿಕ, ಐತಿಹಾಸಿಕ, ಭಕ್ತಿ ಪ್ರಧಾನ ನಾಟಕಗಳನ್ನು ಕಡಿಮೆ ಮಾಡಿ ಸಾಮಾಜಿಕ ನಾಟಕಗಳನ್ನು ಹೆಚ್ಚಾಗಿ ಪ್ರದರ್ಶಿಸಲಿಕ್ಕೆ ಹತ್ತಿದರು. ಸಾಮಾಜಿಕ ನಾಟಕಗಳ ಪ್ರದರ್ಶನದ ವೃತ್ತಿ ಸ್ಪರ್ಧಾಭರದಲ್ಲಿ ವೃತ್ತಿ ರಂಗಭೂಮಿ ಅಶ್ಲೀಲ, ದ್ವಂದ್ವಾರ್ಥಗಳ ಬಳಕೆಯಿಂದ ತನ್ನ ಪಾವಿತ್ರ್ಯತೆಯನ್ನು ಕಳೆದುಕೊಳ್ಳಲಿಕ್ಕೆ ಹತ್ತಿತು. ಇದನ್ನು ಗ್ರಹಿಸಿದ ನಲವಡಿ ಶ್ರೀಕಂಠ ಶಾಸ್ತ್ರಿಗಳು ನೊಂದ ಮನದಿಂದ ಹೀಗೆ ಹೇಳುತ್ತಾರೆ:

"ಯದ್ವಾ ತದ್ವಾ ನಾಟಕಗಳನ್ನು ಮಾಡಿ, ಮನಬಂದಂತೆ ದುಡ್ಡು ಖರ್ಚು ಮಾಡಿ ಕೇವಲ ವಿಷಯ ಚಿಂತಾನಿಮಗ್ನರಾಗಿ ಹಾಳಾಗಿ ಹಳ್ಳಾಕೂಡಿ ಹೋಗುವ 'ಛೀ' ಪಾತ್ರರಿಗೆ ಯಾರೇನು ಮಾಡುವುದು? ನಾಟಕಗಳಾದರೂ ಧಾರ್ಮಿಕ, ಸಾಮಾಜಿಕ, ನೈತಿಕ ಮಾರ್ಗದರ್ಶಕರಾಗಬೇಕು. ಹಾಗಿರದೇ ಬರೇ ಸುಂದರಿ, ರಮಣಿ, ನಾಗವೇಣಿ, ನಿನ್ನನ್ನು ಅಗಲಿರಲಾರೆ ಎಂಬುದಾಗಿ ಹೋಳೀಹುಣ್ಣಿಮೆಯಲ್ಲಿಯೇ ಸಮಾಪ್ತಿಯಾಗ ಬಾರದು. ಶೃಂಗಾರರಸವನ್ನು ಆದಷ್ಟು ಕಡಿಮೆ ಮಾಡಬೇಕು"(ಲಿಖಿತಲೀಲಾ- ಶ್ರೀಕಂಠ ಶಾಸ್ತ್ರಿಗಳು, ಪ್ರಸ್ತಾವನೆ, ಪುಟ-೧೧). ಶ್ರೀಕಂಠಶಾಸ್ತ್ರಿಗಳ ರಂಗಭೂಮಿ ಕುರಿತಾದ ಈ ಬಗೆಯ ಕಾಳಜಿಯನ್ನು ಅರ್ಥಮಾಡಿಕೊಂಡ ಬಿ.ಆರ್. ಅರಿಷಿಣಗೋಡಿಯವರು ಅದರ ಸಂವೇದನೆಗಳಿಗೆ ಸ್ಪಂದಿಸಿ ರಂಗ ಭೂಮಿ ಕಾಳಜಿ, ರಂಗ ಶ್ರದ್ಧೆ ಹಾಗೂ ಪಾವಿತ್ರ್ಯವನ್ನು ಉಳಿಸಿಕೊಂಡು ನಾಟಕ ರಚನೆಗೆ ಕೈ ಹಾಕಿದರು.

ಇದೇ ಸಮಯದಲ್ಲಿ ನಲವಡಿ ಶ್ರೀಕಂಠಶಾಸ್ತ್ರಿಗಳು, ಎಚ್.ಎನ್. ಹೂಗಾರ, ಪಿ.ಬಿ. ಧುತ್ತರಗಿ, ಎಚ್.ಆರ್. ಭಸ್ಮೆ, ಎಲ್.ಎಸ್. ಇನಾಮದಾರ, ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ಸಾಮಾಜಿಕ ನಾಟಕಗಳನ್ನು ವೃತ್ತಿ ರಂಗಭೂಮಿಗೆ ತರಲಿಕ್ಕೆ ಪ್ರಾರಂಭಿಸಿದರು. ಈ ಮೇಲಿನ ನಾಟಕಕಾರರು ತಮ್ಮ ಸಾಮಾಜಿಕ ನಾಟಕಗಳಲ್ಲಿ ಹೊಸತನ ತಂದು ರಂಗಭೂಮಿಯ ಪಾವಿತ್ರ್ಯವನ್ನು ಉಳಿಸಲು ಪ್ರಯತ್ನಿಸಿದರು. ವೃತ್ತಿರಂಗಭೂಮಿಯಲ್ಲಿ ನಡೆದ ಇವೆಲ್ಲಾ ಬದಲಾವಣೆಗಳು ಬಿ.ಆರ್. ಅರಿಷಿಣಗೋಡಿಯವರ ಮೇಲೆ ಪ್ರಭಾವ ಬೀರಿದವು.

ರಂಗಭೂಮಿಯ ಆಕರ್ಷಣೆಗೆ ಒಳಗಾದ ಬಿ.ಆರ್. ಅರಿಷಿಣಗೋಡಿಯವರು ವೃತ್ತಿ ಮಂಡಳಿಯನ್ನು ಕಟ್ಟಿದರು. ಆ ಕಾಲದಲ್ಲಿ ವೃತ್ತಿರಂಗಭೂಮಿಯಲ್ಲಿ ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ, ಸಾಮಾಜಿಕ ನಾಟಕಗಳು ರಂಗಪ್ರಯೋಗಗೊಳ್ಳುತ್ತಿದ್ದವು. ಇವಾವುದರ ಕಡೆಗೆ ಲಕ್ಷವರಿಸದೆ ಬಿ. ಆರ್. ಅರಿಷಿಣಗೋಡಿಯವರು ಕೇವಲ ಸಾಮಾಜಿಕ ನಾಟಕಗಳನ್ನು ರಚಿಸಿ ತಮ್ಮ ಕಂಪನಿಯಲ್ಲಿ ರಂಗಪ್ರಯೋಗಕ್ಕೆ ಒಳಪಡಿಸಿ ಜನಜಾಗೃತಿಯನ್ನು ಉಂಟುಮಾಡಿದರು. ಕಾಲ ಬದಲಾದಂತೆ ಜನರ ಅಭಿರುಚಿಯೂ ಬದಲಾಯಿತು. ಸಮಾಜದಲ್ಲಿ ಹೊಸ-ಹೊಸ ಸಮಸ್ಯೆಗಳು ಉದ್ಭವವಾದವು. ಒಂದು ಕಡೆ ಚಲನಚಿತ್ರದ ಪ್ರಭಾವ ವೃತ್ತಿ ರಂಗಭೂಮಿಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡಿತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಿ ಆರ್. ಅರಿಷಿಣಗೋಡಿಯವರು ಸಂವೇದನಾಶೀಲರಾಗಿ ಆಕರ್ಷಕ ತಲೆಬರಹವನ್ನು ಹೊಂದಿದ ಹೊಸ ಹೊಸ ನಾಟಕಗಳನ್ನು ಬರೆದು ಕಂಪನಿಯಲ್ಲಿ ರಂಗ ಪ್ರಯೋಗ ಮಾಡಿ ವೃತ್ತಿ ರಂಗ ಭೂಮಿಯ ಆಕರ್ಷಣೆಯನ್ನು ಹೆಚ್ಚಿಸಿದರು. ಇದು ಅವರ ರಂಗಶ್ರದ್ಧೆಯನ್ನು ತೋರಿಸುತ್ತದೆ. ತಮ್ಮ ಸುತ್ತಲಿನ ಸಮಾಜದ ಸಮಸ್ಯೆಗಳನ್ನು ತಮ್ಮ ನಾಟಕದ ಕಥಾ ವಸ್ತುವನ್ನಾಗಿ ತೆಗೆದುಕೊಂಡರೂ ಅದು ಕೇವಲ ಮನರಂಜನೆಯಲ್ಲಿ ಮುಕ್ತಾಯವಾಗದೆ ಸಮಾಜದ ಮೌಲ್ಯಗಳಾದ ನೈತಿಕತೆ, ಧರ್ಮ, ಧೈರ್ಯ, ಸಾಹಸ ಮುಂತಾದವುಗಳು ಪ್ರೇಕ್ಷಕರ ಮನಸ್ಸಿನಲ್ಲಿ ರಿಂಗಣಿಸುವಂತೆ ಚಿತ್ರಿಸಿ, ಸ್ವಸ್ಥ ಸಮಾಜ ನಿರ್ಮಾಣದ ಕಡೆಗೆ ಲಕ್ಷ್ಯ ಹರಿಸಿದ್ದಾರೆ.

ನಾಟಕ ಕಂಪನಿಯ ಮಾಲಿಕನೊಬ್ಬನಿಗೆ ಒಂದು ಕಂಪನಿ ನಡೆಸುವುದೇ ಕಷ್ಟ. ಆದರೆ ಬಿ.ಆರ್. ಅರಿಷಿಣಗೋಡಿಯವರು ಹೊಸ ಹೊಸ ಬ್ರ್ಯಾಂಚ್ ಕಂಪನಿಗಳನ್ನು ಕಟ್ಟುವುದರ ಕಡೆಗೆ ಲಕ್ಷ್ಯ ವಹಿಸಿ ಒಟ್ಟು ನಾಲ್ಕು ಕಂಪನಿಗಳನ್ನು ಕಟ್ಟಿ ಯಶಸ್ವಿಯಾಗಿ ಒಂದೂ ದಿನ ರಂಗ ಪ್ರಯೋಗ ನಿಲ್ಲದ ಹಾಗೆ ೪೩ ವರ್ಷಗಳವರೆಗೆ ಮುನ್ನಡೆಸಿಕೊಂಡು ಬಂದುದು ಇವರ ವೈಶಿಷ್ಟ್ಯ. ಇಂಥ ಸಾಹಸದ ಮಧ್ಯವೇ ೧೪ ನಾಟಕಗಳನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ.

ಅರಿಷಿಣಗೋಡಿಯವರು ತಾವು ಬರೆದ ನಾಟಕವನ್ನಷ್ಟೇ ತಮ್ಮ ಕಂಪನಿಗಳಲ್ಲಿ ಪ್ರದರ್ಶನ ಮಾಡಬೇಕೆಂಬ ಮಡಿವಂತಿಕೆಯನ್ನು ಪಾಲಿಸಿದವರಲ್ಲ. ಇತರ ನಾಟಕಕಾರರ ನಾಟಕಗಳನ್ನು ರಂಗ ಪ್ರದರ್ಶನ ಮಾಡಿ

ಸಮಕಾಲೀನ ನಾಟಕಕಾರರು ವೃತ್ತಿರಂಗಭೂಮಿಯಲ್ಲಿ ಹೆಸರು ಗಳಿಸುವಂತೆ ನೋಡಿಕೊಂಡಿದ್ದಾರೆ. ಪತ್ತೆದಾರಿ ನಾಟಕಗಳನ್ನು ಸಮಕಾಲೀನ ವೃತ್ತಿ ಕಂಪನಿಗಳು ಪ್ರದರ್ಶನ ಮಾಡಲು ಹಿಂಜರಿಯುತ್ತಿದ್ದ ಕಾಲದಲ್ಲಿ ಪತ್ತೆದಾರಿ ನಾಟಕವನ್ನು ಪ್ರದರ್ಶಿಸಿ ವೃತ್ತಿರಂಗಭೂಮಿಯ ವೈವಿಧ್ಯತೆಯನ್ನು ಹೆಚ್ಚಿಸಿದ್ದಾರೆ. ನಾ.ದೇ. ನರಸಿಂಹಮೂರ್ತಿಯವರ 'ಎಚ್ಚರ ತಂಗಿ ಎಚ್ಚರ' ಎಂಬ ಪತ್ತೆದಾರಿ ನಾಟಕವನ್ನು ಕರ್ನಾಟಕದಾದ್ಯಂತ ಪ್ರದರ್ಶಿಸಿ ಪ್ರೇಕ್ಷಕರಲ್ಲಿ ಕುತೂಹಲ ಮನಸ್ಸನ್ನು ಬೆಳೆಸಿರುವರು. ಬೆಂಗಳೂರಿನ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಸತತ ಯಶಸ್ವಿ ೫೦೧ ರಂಗಪ್ರಯೋಗ ಮಾಡಿದ ಈ ನಾಟಕ ಪತ್ತೆದಾರಿ ನಾಟಕಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. ಇದಕ್ಕೆ ಬಿ.ಆರ್. ಅರಿಷಿಣಗೋಡಿಯವರ ಪ್ರತಿಭೆ ಮತ್ತು ಸಾಹಸ ಮನೋವೃತ್ತಿಗಳು ಕಾರಣವಾಗಿವೆ.

ರಂಗ ಕಲಾಯಾತ್ರೆಯ ಸಂದರ್ಭದಲ್ಲಿ ಬೇರೆ ಬೇರೆ ಊರುಗಳಲ್ಲಿ ಕಂಪನಿಗೆ ಬಂದು ಸೇರಿದ ಕಲಾವಿದರ ಕಲಾಪ್ರತಿಭೆಗೆ ನೀರುಣಿಸಿ ಬೆಳೆಸಿದ್ದಾರೆ. ಅನೇಕ ಕಲಾವಿದರು ಇವರ ಕಂಪನಿಯ ಮುಖಾಂತರ ಜನಾನುರಾಗಿಯಾಗಿ ಮೆರೆದಿದ್ದಾರೆ. ಬಿ.ಆರ್. ಅರಿಷಿಣಗೋಡಿಯವರ ಕಂಪನಿಯಿಂದ ಅನೇಕ ರಂಗ ಕಲಾವಿದರ ತಂಡವೇ ನಿರ್ಮಾಣಗೊಂಡವು. ಇವರ ಬಹುಪಾಲು ನಾಟಕಗಳು ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸಿರುವದರ ಪರಿಣಾಮವಾಗಿ ಇವರ ನಾಟಕಗಳು ವೃತ್ತಿ ರಂಗಭೂಮಿಯಲ್ಲಿ ಹೆಚ್ಚು ಆಕರ್ಷಣೀಯವಾದವು.

ಪ್ರತಿಯೊಂದು ನಾಟಕದಲ್ಲಿ ಬರುವ ಪಾತ್ರಗಳು ಸನ್ನಿವೇಶಕ್ಕೆ ತಕ್ಕಂತೆ ತಮ್ಮ ಮನೋಧರ್ಮವನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸುವಂತೆ ಪಾತ್ರಗಳ ಸೃಷ್ಟಿ ಮಾಡಿರುವುದು ಇವರ ವೈಶಿಷ್ಟ್ಯ. ನಾಟಕದಲ್ಲಿ ಬರುವ ಪೋಷಕ ಪಾತ್ರದಿಂದ ನಾಯಕ ಪಾತ್ರದವರೆಗೆ ಯಾವ ಪಾತ್ರವು ನಿಕೃಷ್ಟವಾಗಿ ಕಾಣುವದಿಲ್ಲ. ಇದರಿಂದ ಪ್ರತಿಯೊಬ್ಬ ಕಲಾವಿದ ತನ್ನ ಕಲಾಪ್ರತಿಭೆಯನ್ನು ತೋರಿಸಲು ಸಾಧ್ಯವಾಗುವದು.

ಬಿ.ಆರ್. ಅರಿಷಿಣಗೋಡಿಯವರ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾಗಿ ಖಾಸ್ಗತೇಶ್ವರ ನಾಟ್ಯ ಸಂಘ ತಾಳಿಕೋಟಿ, ಬಸವೇಶ್ವರ ನಾಟ್ಯ ಸಂಘ ಕಲಕೇರಿ, ಬಸವೇಶ್ವರ ನಾಟ್ಯ ಸಂಘ ಬೆನಕಟ್ಟಿ ಮುಂತಾದ ಅನೇಕ ವೃತ್ತಿ ಕಂಪನಿಗಳು ಹುಟ್ಟಿ ಬಂದು ರಂಗಭೂಮಿ ಪರಂಪರೆಯನ್ನು ಮುಂದುವರಿಸಿವೆ. ಸಮಾಜದಲ್ಲಿ ವೃತ್ತಿಯಿಂದ ನಿರ್ಲಕ್ಷಕ್ಕೆ ಒಳಗಾದ ಕಂಡಕ್ಟರ, ಸೈನಿಕ, ನೇಕಾರ ಪಾತ್ರಗಳನ್ನು ಪ್ರಧಾನ ಪಾತ್ರಗಳನ್ನಾಗಿಟ್ಟು ಕೊಂಡು ನಾಟಕ ರಚಿಸಿರುವದು ಇವರ ವಿಶೇಷತೆ. ಇವತ್ತಿಗೂ ಕೂಡಾ ಇವರ ಬಸ್ ಕಂಡಕ್ಟರ, ಸೈನಿಕನ ಸಹೋದರಿ, ಹೆಣ್ಣುಮಗಳು, ಇಲ್ಲಿಗೆ ಬಂತೋ ಸಂಗಯ್ಯಾ ನಾಟಕಗಳು ಹವ್ಯಾಸಿ ಹಾಗೂ ವೃತ್ತಿ ಮಂಡಳಿಯಲ್ಲಿ ಪ್ರದರ್ಶನಗೊಳ್ಳುತ್ತಿರುವದೇ ಇದಕ್ಕೆ ಸಾಕ್ಷಿ.

ಶ್ರಮಿಕ ವರ್ಗ, ರೈತಾಪಿ ವರ್ಗಗಳ ಬಗ್ಗೆ ಅನುಕಂಪ ಹಾಗೂ ಸಹಾನುಭೂತಿಯನ್ನು ಇವರ ಎಲ್ಲಾ ನಾಟಕಗಳಲ್ಲಿ ನೋಡಬಹುದು. ಗ್ರಾಮೀಣ ಬದುಕಿನ ವಿವಿಧ ಮಜಲುಗಳನ್ನು ನಗರ ಜೀವನದ

ಹಿನ್ನೆಲೆಯಲ್ಲಿ ಚಿತ್ರಿಸಿರುವದನ್ನು ಇವರ ನಾಟಕಗಳಲ್ಲಿ ಕಾಣುತ್ತೇವೆ. ಇವರ ನಾಟಕಗಳು ಅವಿಭಕ್ತ ಕುಟುಂಬವನ್ನು ಇಷ್ಟಪಡುವುದಿಲ್ಲ. ಹಾದಿತಪ್ಪುತ್ತಿರುವ ಯುವ ಜನತೆಯನ್ನು ಕಾಲಕಾಲಕ್ಕೆ ಎಚ್ಚರಿಸುವ ಮತ್ತು ಸರಿದಾರಿಗೆ ತರುವ ಸಾತ್ವಿಕ ಸಿಟ್ಟು ಇವರ ನಾಟಕಗಳಲ್ಲಿ ಕಂಡುಬರುತ್ತದೆ. ಬಿ.ಆರ್. ಅರಿಷಿಣಗೋಡಿಯವರು ನಾಟಕಕಾರರಾಗಿ, ಕಂಪನಿ ಮಾಲಿಕರಾಗಿ, ನಟ, ನಿರ್ದೇಶಕರಾಗಿ ಯಾವುದೇ ದುಶ್ಚಟಗಳಿಗೆ ಬಲಿಯಾಗಲಿಲ್ಲ. ಸ್ವಸ್ಥ ಸಮಾಜ ನಿರ್ಮಾಣದ ಕಡೆಗೆ ಕಾಳಜಿಯನ್ನು ವಹಿಸಿದ್ದಾರೆ. ವೃತ್ತಿರಂಗಭೂಮಿಯಲ್ಲಿ ಅನೇಕ ಕಂಪನಿ ಮಾಲಿಕರು, ನಾಟಕಕಾರರು ಬಣ್ಣದ ಬದುಕಿನ ಬೆನ್ನು ಹತ್ತಿ ಹೊಲ, ಮನೆಗಳನ್ನು ಮಾರಿಕೊಂಡು ಸಾಲದ ಶೂಲದಲ್ಲಿ ಬಿದ್ದು ತಲೆಮರೆಸಿಕೊಂಡು ಕಣ್ಮರೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಿ. ಆರ್. ಅರಿಷಿಣಗೋಡಿಯವರು ಅಪರೂಪದ ಸಜ್ಜನ ನಾಟಕಕಾರರಾಗಿ ತೋರುತ್ತಾರೆ.

ತಮ್ಮ ಜೀವಿತಾವಧಿಯಲ್ಲಿಯೇ ವೃತ್ತಿ ರಂಗಭೂಮಿಯಿಂದ ಅಪಾರ ಕೀರ್ತಿ, ಸಂಪತ್ತು, ಸನ್ಮಾನಗಳನ್ನು ಪಡೆದ ಭಾಗ್ಯಶಾಲಿ ಇವರು. ಬಿ.ಆರ್. ಅರಿಷಿಣಗೋಡಿಯವರು ವೃತ್ತಿ ರಂಗಭೂಮಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಹುಬ್ಬಳ್ಳಿ ಧಾರವಾಡ ನಾಗರಿಕರು **'ನಾಟ್ಯ ಕಲಾಭೂಷಣ'** ಬಿರುದು ನೀಡಿದ್ದಾರೆ. ಡಾ. ಪುಟ್ಟರಾಜ ಗವಾಯಿಗಳು **'ನಾಟ್ಯಕಲಾತಿಲಕ'** ಬಿರುದನ್ನು ನೀಡಿ ಗೌರವಿಸಿದ್ದಾರೆ. ಡಾ. ಗುಬ್ಬಿ ವೀರಣ್ಣ ಸ್ಮರಣ ದಿನೋತ್ಸವದ ಸಂದರ್ಭದಲ್ಲಿ **'ನಾಟಕ ಕಲಾ ಪ್ರವೀಣ'** ಎಂಬ ಬಿರುದು ಪಡೆದಿದ್ದಾರೆ. ಜೇವರ್ಗಿಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು **'ಕಲಾರಶ್ಮಿ'** ಬಿರುದಿನಿಂದ ಗೌರವಿಸಿದ್ದಾರೆ. ೧೯೯೮ರಲ್ಲಿ ಕರ್ನಾಟಕ ಘನ ಸರಕಾರ ನವೆಂಬರ್ ೧ರಂದು ಕೊಡಮಾಡುವ **'ರಾಜ್ಯೋತ್ಸವ ಪ್ರಶಸ್ತಿ'**ಯನ್ನು ಬಿ.ಆರ್. ಅರಿಷಿಣಗೋಡಿಯವರಿಗೆ ನೀಡಿ ಪುರಸ್ಕರಿಸಿದೆ. ೨೦೦೩ರಲ್ಲಿ **'ಗುಬ್ಬಿ ವೀರಣ್ಣ ಪ್ರಶಸ್ತಿ'**ಗೆ ಭಾಜನರಾಗಿದ್ದಾರೆ.

ಇಷ್ಟೆಲ್ಲಾ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದರೂ ಬಿ.ಆರ್. ಅರಿಷಿಣಗೋಡಿಯವರಲ್ಲಿ ಎಂದೂ ಅಹಂ ಮೂಡಿಲ್ಲ. ಸಧ್ಯ ಕುಟುಂಬ ಸದಸ್ಯರೊಂದಿಗೆ, ಸಮಾಜದೊಂದಿಗೆ, ಅನ್ಯೊನ್ಯ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಆಡಂಬರದ ಜೀವನವನ್ನು ಎಂದೂ ಇಷ್ಟ ಪಡುವವರಲ್ಲ. ಸಂಕೋಚ ಸ್ವಭಾವದ ಬಿ.ಆರ್. ಅರಿಷಿಣಗೋಡಿಯವರು ಪ್ರಚಾರದ ಗೀಳು ಅಂಟಿಸಿಕೊಂಡವರಲ್ಲ. ವೃತ್ತಿರಂಗಭೂಮಿ ಪರಂಪರೆಯನ್ನು ಬೆಳೆಸುವುದರ ಜೊತೆಗೆ ತಾವು ಕೂಡಾ ಬೆಳೆದು ದೊಡ್ಡವರಾಗಿದ್ದಾರೆ. ೪೩ ವರ್ಷಗಳ ವರೆಗೆ ವೃತ್ತಿ ರಂಗಭೂಮಿಯಲ್ಲಿ ಸೇವೆಗೈದ ಬಿ.ಆರ್. ಅರಿಷಿಣಗೋಡಿಯವರ ಬದುಕು ಬರಹದ ಅನೇಕ ವಿಷಯಗಳನ್ನು ಹುಡುಕಿ ಹೊರ ತೆಗೆದ ಸಮಾಧಾನ ಪ್ರಸ್ತುತ ಲೇಖಕನಿಗಿದೆ.

ಪ್ರಬಂಧದ ಫಲಿತಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಲಾಗಿದೆ

೧. ಶ್ರೀ ಹುಚ್ಚೇಶ್ವರ ನಾಟ್ಯ ಸಂಘವನ್ನು ದೀರ್ಘ ಕಾಲ ನಡೆಸಿಕೊಂಡು ಬಂದು ವೃತ್ತಿರಂಗಭೂಮಿಗೆ ಅರಿಷಿಣಗೋಡಿಯವರು ಆದರ್ಶಪ್ರಾಯರಾದರು. ನಾಟಕ ಸಾಹಿತ್ಯ ರಚನೆಯಲ್ಲಿಯೂ ಅವರು

ಪ್ರಾವೀಣ್ಯತೆ ಗಳಿಸಿದ್ದಾರೆ. ಹೀಗಿದ್ದೂ ಇವರ ಬದುಕು-ಬರಹ ಕುರಿತು ಸಮಗ್ರ ಅಧ್ಯಯನ ಇದುವರೆಗೆ ನಡೆದಿರಲಿಲ್ಲ. ಈ ಅವಶ್ಯಕತೆಯನ್ನು ಪ್ರಸ್ತುತ ಮಹಾಪ್ರಬಂಧ ಪೂರೈಸಿದೆಯೆಂದು ಇಲ್ಲಿ ಭಾವಿಸಲಾಗಿದೆ.

೨. ಕೇವಲ ಬಿ.ಆರ್. ಅರಿಷಿಣಗೋಡಿಯವರಲ್ಲ, ಅವರ ಸಮಕಾಲೀನ ರಂಗಭೂಮಿಯ ಅವಲೋಕನವೂ ಇಲ್ಲಿ ಇರುವುದರಿಂದ ಮುಂದಿನ ರಂಗಾಭ್ಯಾಸಿಗಳಿಗೆ ಇದು ನೆರವಾಗುವದೆಂದು ಭಾವಿಸಲಾಗಿದೆ.

೩. ಬಿ.ಆರ್. ಅರಿಷಿಣಗೋಡಿಯವರ ರಂಗಯಾತ್ರೆಯನ್ನು ಕಟ್ಟಿಕೊಡುವಲ್ಲಿ ಗ್ರಂಥಸ್ಥ ವಿಷಯಗಳನ್ನು ಅವಲಂಬಿಸದೆ ಸಂದರ್ಶನ ಮತ್ತು ಕ್ಷೇತ್ರಕಾರ್ಯಗಳನ್ನು ವಿಶೇಷವಾಗಿ ಅವಲಂಬಿಸಲಾಗಿದೆ. ಇದರಿಂದ ಹೊಸ ವಿಷಯಗಳನ್ನೆಷ್ಟೋ ಸಂಗ್ರಹಿಸಲಾಗಿದೆ.

೪. ಈ ಪ್ರಬಂಧದಿಂದ ಬಿ.ಆರ್. ಅರಿಷಿಣಗೋಡಿಯವರ ಸಮಗ್ರ ನಾಟಕ ಸಾಹಿತ್ಯದ ಅಧ್ಯಯನ ಸಾಧ್ಯವಾಗಿದೆ.

೫. ಪ್ರಾಮಾಣಿಕ ರಂಗಕರ್ಮಿ ಬಿ.ಆರ್. ಅರಿಷಿಣಗೋಡಿಯವರ ರಂಗ ಶ್ರದ್ಧೆಯ ವಿವಿಧ ನೆಲೆಗಳನ್ನು ಬೇರೆ ಬೇರೆ ಮಜಲುಗಳಿಂದ ಇಲ್ಲಿ ಸ್ಥಿರೀಕರಿಸಲಾಗಿದೆ.

ಅನುಬಂಧಗಳು

೧. ಬಿ.ಆರ್. ಅರಿಷಿಣಗೋಡಿಯವರ ಬದುಕು

೨. ಬಿ.ಆರ್. ಅರಿಷಿಣಗೋಡಿಯವರು ಬರೆದ ನಾಟಕಗಳು, ಪ್ರಕಟಿತ ನಾಟಕಗಳು

೩. ಬಿ.ಆರ್. ಅರಿಷಿಣಗೋಡಿಯವರು ಅಭಿನಯಿಸಿದ ಪಾತ್ರಗಳು

೪. ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿಯ ಶಾಖೆಗಳು ಪ್ರಾರಂಭವಾದ ವರ್ಷ

೫. ಬಿ.ಆರ್. ಅರಿಷಿಣಗೋಡಿಯವರಿಗೆ ಸಂದ ಸನ್ಮಾನ ಮತ್ತು ಪ್ರಶಸ್ತಿಗಳು

೬. ಕಮತಗಿ ಕಂಪನಿ ರಂಗಪ್ರದರ್ಶನ ಮಾಡಿದ ನಾಟಕಗಳು ಮತ್ತು ನಾಟಕಕಾರರು

೭. ಹುಚ್ಚೇಶ್ವರ ಕಂಪನಿಯ ಕಲಾವಿದರು

೮. ಗ್ರಂಥಋಣ

೯. ಛಾಯಾಚಿತ್ರಗಳು

ಅನುಬಂಧ ೧

ಬಿ.ಆರ್. ಅರಿಷಿಣಗೋಡಿಯವರ ಬದುಕು

ಜನನ	: ೨೧.೧೨.೧೯೩೪
ತಂದೆ	: ರಂಗಪ್ಪ
ತಾಯಿ	: ಕಾಶವ್ವ
ಹುಟ್ಟೂರು	: ಬೆನಕಟ್ಟಿ
ನೆಲೆಸಿದ ಊರು	: ಕಮತಗಿ
ಅಣ್ಣಂದಿರು	: ಗಿರಿಯಪ್ಪ, ರಾಯಪ್ಪ
ಅಕ್ಕ	: ಲಕ್ಷ್ಮೀಬಾಯಿ
ಹೆಂಡತಿ	: ರೇಣುಕಾ
ಮಕ್ಕಳು	: ವೆಂಕಟೇಶ್ (೧೯೬೮) ಶಶಿಧರ (೧೯೭೦) ಶ್ರೀಕಾಂತ (೧೯೭೩)
ಶಿಕ್ಷಣ	: ಎಫ್.ವಾಯ್.ಸಾಯನ್ಸ್ (೧೯೫೬)

ಅನುಬಂಧ ೨

ಅರಿಷಿಣಗೋಡಿಯವರು ಬರೆದ ನಾಟಕಗಳು

ಲಂಚ ಸಾಮ್ರಾಜ್ಯ (೧೯೬೧)

ಹೆಣ್ಣುಮಗಳು (೧೯೬೧)

ಆಸ್ತಿಯ ಪಾಲು (೧೯೬೧)

ಅನುರಾಧಾ (೧೯೬೧)

ಬಸ್ ಕಂಡಕ್ಟರ್ (೧೯೬೫)

ಸೈನಿಕನ ಸಹೋದರಿ (೧೯೬೫)

ಕಣ್ಣಿದ್ದೂ ಕುರುಡ (೧೯೬೮)

ಇಲ್ಲಿಗೆ ಬಂತೋ ಸಂಗಯ್ಯಾ (೧೯೬೮)

ಗರೀಬಿ ಹಟಾವೋ (೧೯೭೨)

ಗಂಡೆದೆಯ ಗೌರಿ (೧೯೭೮)

ಬಡವರೂ ನಗಬೇಕು (೧೯೭೮)

ಸಂಗ್ಯಾ-ಬಾಳ್ಯಾ (೧೯೮೫)

ನಕಲಿ ಸಂಪನ್ನರು (೧೯೮೬)

ಗೀಗೀ ಮೇಳದ ಗಂಗಮ್ಮ (ಅಪೂರ್ಣ ೨೦೦೯-೨೦೧೦)

ಪ್ರಕಟಿತ ನಾಟಕಗಳು

ಬಸ್ ಕಂಡಕ್ಟರ್ -೧೯೭೫

ಹೆಣ್ಣು ಮಗಳು -೧೯೭೫

ಕಣ್ಣಿದ್ದೂ ಕುರುಡ -೧೯೭೫

ಇಲ್ಲಿಗೆ ಬಂತೋ ಸಂಗಯ್ಯಾ -೧೯೭೫

ಸೈನಿಕನ ಸಹೋದರಿ -೧೯೭೫

ಅನುಬಂಧ ೩

ಅರಿಶಿಣಗೋಡಿಯವರು ಅಭಿನಯಿಸಿದ ಪಾತ್ರಗಳು

೧. ಲಂಚ ಸಾಮ್ರಾಜ್ಯ - ಶಿಲಾಧರ (ನಾಯಕ), ರಮೇಶ, ನಿಂಗಪ್ಪ (ಶಿಲಾಧರನ ತಂದೆ)

೨. ಹೆಣ್ಣುಮಗಳು - ಗಿರೀಶ (ನಾಯಕ), ಸೋಮೇಶ (ತಂದೆ)

೩. ಗರೀಬಿ ಹಟಾವೋ - ಗುರುಬಸಪ್ಪ ಶೆಟ್ಟಿ (ಹಾಸ್ಯ ಪಾತ್ರ), ರಾಮು

೪. ಸೈನಿಕನ ಸಹೋದರಿ - ಸಂಜೀವ (ಹಾಸ್ಯ ಪಾತ್ರ), ಲಿಂಗಣ್ಣ ಶೆಟ್ಟರು

೫. ಇಲ್ಲಿಗೆ ಬಂತೋ ಸಂಗಯ್ಯಾ - ಆರ್.ಎಂ.ಡಾಕ್ಟರ್

೬. ಕೊಂಡು ತಂದ ಗಂಡ - ಮಾಣಿ (ಹಾಸ್ಯ ಪಾತ್ರ)

೭. ಬಸ್ ಕಂಡಕ್ಟರ್ - ಪ್ರದೀಪ್ (ನಾಯಕ), ರಂಗಣ್ಣ (ತಂದೆ ಪಾತ್ರ), ದೇವಣ್ಣ (ಖಾನಾವಳಿ ಒಡೆಯ), ರಾಜು ಕಂಡಕ್ಟರ್

ಅನುಬಂಧ ೪

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿಯ ಶಾಖೆಗಳು

ಕಂಪನಿ ಆರಂಭದ ವರ್ಷ - ೩೧.೧೨.೧೯೬೧

ಕ್ಯಾಂಪ್ ಬಾಗಲಕೋಟ

ಮೊದಲನೆಯ ಬ್ರ್ಯಾಂಚ್ ಕಂಪನಿ

ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ

ಆರಂಭವಾದ ವರ್ಷ ೧೯೬೬-೧೯೬೭

ಕ್ಯಾಂಪ್ ರಬಕವಿ

ಎರಡನೆಯ ಬ್ರ್ಯಾಂಚ್ ಕಂಪನಿ

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ

ಆರಂಭವಾದ ವರ್ಷ ೧೯೭೭

ಕ್ಯಾಂಪ್, ಗಂಗಾವತಿ

ಮೂರನೆಯ ಬ್ರ್ಯಾಂಚ್ ಕಂಪನಿ

ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ

ಆರಂಭವಾದ ವರ್ಷ - ೧೯೮೪

ಕ್ಯಾಂಪ್ ಮೂಡಿಗೆರೆ

ಅನುಬಂಧ ೫

ಅರಿಷಿಣಗೋಡಿಯವರಿಗೆ ಸಂದ ಸನ್ಮಾನ ಮತ್ತು ಪ್ರಶಸ್ತಿಗಳು

ಹುಬ್ಬಳ್ಳಿ-ಧಾರವಾಡ ಮಹಾನಾಗರಿಕರಿಂದ ಸನ್ಮಾನ ಮತ್ತು 'ನಾಟ್ಯ ಕಲಾಭೂಷಣ' ಬಿರುದು, ೩.೫.೧೯೭೦

ಗದಗ ವೀರೇಶ್ವರ ಪುಣ್ಯಾಶ್ರಮದಲ್ಲಿ ಪಂ.ಉಭಯಗಾನ ವಿಶಾರದ ಡಾ. ಪುಟ್ಟರಾಜ ಗವಾಯಿಗಳಿಂದ ಸನ್ಮಾನ 'ನಾಟ್ಯಕಲಾತಿಲಕ' ಬಿರುದು, ೨೯.೯.೧೯೭೨.

ಅರಿಸಿಕೆರೆ ಕ್ಯಾಂಪಿನಲ್ಲಿ ಸಾಯಿನಾಥ ಮಂದಿರದಲ್ಲಿ ಸನ್ಮಾನ 'ನಾಟ್ಯ ಕಲಾ ಶ್ರೇಷ್ಠ' ಬಿರುದು, ೬.೬.೧೯೭೬.

ತುಮಕೂರ ಕ್ಯಾಂಪಿನಲ್ಲಿ, ಕನ್ನಡ ರಾಜ್ಯೋತ್ಸವದ ಅಂಗವಾಗಿ, ೨.೧೨.೧೯೮೮.

ಡಾ. ಗುಬ್ಬಿ ವೀರಣ್ಣ ಸ್ಮರಣ ದಿನೋತ್ಸವದ ಸಂದರ್ಭದಲ್ಲಿ ಸನ್ಮಾನ ಪತ್ರ 'ನಾಟಕ ಕಲಾಪ್ರವೀಣ' ಬಿರುದು.

ಜೇವರಗಿ ಕ್ಯಾಂಪಿನಲ್ಲಿ ಶ್ರೀ ಷಣ್ಮುಖ ಶಿವಯೋಗಿಗಳ ಮಠದಲ್ಲಿ ಶ್ರೀ ಶಾಂತಲಿಂಗ ಮಹಾಸ್ವಾಮಿಗಳಿಂದ ಸನ್ಮಾನ ಪತ್ರ 'ಕಲಾರಶ್ಮಿ' ಬಿರುದು, ೧೧.೧೨.೧೯೮೮.

ಅಥಣಿ ಕ್ಯಾಂಪ್, ಲಿಂ. ಮುರುಘೇಂದ್ರ ಶಿವಯೋಗಿಗಳ ಗಚ್ಚಿನ ಮಠದಲ್ಲಿ ಶ್ರೀ ಮ.ನಿ.ಪ್ರ. ಚೆನ್ನಬಸವ ಮಹಾಸ್ವಾಮಿಗಳಿಂದ ಸನ್ಮಾನ 'ಭಕ್ತಕಲಾಭೂಷಣ' ಬಿರುದು, ೧೧.೧೧.೧೯೯೨

ಕರ್ನಾಟಕ ರಾಜ್ಯೋತ್ಸವದ ಪ್ರಶಸ್ತಿ, ೧೯೯೮.

ಕನ್ನಡ ಪತ್ರಿಕಾ, ಕಲಾ ಸಂಸ್ಕೃತಿ ವೇದಿಕೆ, ಬೆಂಗಳೂರು ಇವರಿಂದ 'ಪ್ರತಿಭಾಶ್ರೀ' ಪ್ರಶಸ್ತಿ, ೮.೬.೧೯೯೮.

ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ, ೨೦೦೩.

ಅನುಬಂಧ ೬

ಕಮತಗಿ ಕಂಪನಿ ರಂಗ ಪ್ರದರ್ಶನ ಮಾಡಿದ ನಾಟಕಗಳು ಮತ್ತು ನಾಟಕಕಾರರು

೧೯೬೧ರಿಂದ

ಲಂಚ ಸಾಮ್ರಾಜ್ಯ, ಹೆಣ್ಣುಮಗಳು- ಬಿ.ಆರ್. ಅರಿಷಿಣಗೋಡಿ

೧೯೬೫ರಿಂದ

ಬಸ್ ಕಂಡಕ್ಟರ್, ಸೈನಿಕನ ಸಹೋದರಿ- ಬಿ.ಆರ್. ಅರಿಷಿಣಗೋಡಿ

೧೯೬೮ರಿಂದ

ಇಲ್ಲಿಗೆ ಬಂತೋ ಸಂಗಯ್ಯಾ, ಕಣ್ಣಿದ್ದೂ ಕುರುಡ- ಬಿ.ಆರ್. ಅರಿಷಿಣಗೋಡಿ

೧೯೭೨ರಿಂದ

ಪ್ರಜಾ ಸರಕಾರ, ಸತಿಪತಿ- ಮಹಾಂತೇಶ ಶಾಸ್ತ್ರಿ

೧೯೭೫ರಿಂದ

ದೇವರಿಲ್ಲದ ಗುಡಿ- ಮಹಾಂತೇಶ ಶಾಸ್ತ್ರಿ

೧೯೭೮ರಿಂದ

ಗಂಡೆದೆಯ ಗೌರಿ, ಬಡವರೂ ನಗಬೇಕು- ಬಿ.ಆರ್. ಅರಿಷಿಣಗೋಡಿ

ಸಿಂಧೂರ ಲಕ್ಷ್ಮಣ- ಎನ್.ಎಸ್. ಜೋಶಿ

೧೯೮೦ರಿಂದ

ರೀತಿ ತಪ್ಪಿದರೂ ನೀತಿ ತಪ್ಪಿಲ್ಲ, ಪಾಪದ ದೇಹ ಪುಣ್ಯದ ಜೀವ

ನನ್ನ ಗಂಡನ ಹೆಂಡತಿ, ಗೌರಿ ಹೋದಳು ಗಂಗೆ ಬಂದಳು- ಎಸ್.ಎಂ. ಖೇಡಗಿ

ಶ್ರೀ ಹೊಳೆ ಹುಚ್ಚೇಶ್ವರ ಮಹಾತ್ಮೆ- ಎನ್.ಎಸ್. ಜೋಶಿ

ಗಂಡೆದೆಯ ಗೌರಿ- ಅರಿಷಿಣಗೋಡಿ

೧೯೮೧ರಿಂದ

ಗೆದ್ದವರು ಯಾರು, ಕೊಂಡು ತಂದ ಗಂಡ- ಎಚ್.ಎನ್.ಹೂಗಾರ

೧೯೮೫ರಿಂದ

ಸಂಗ್ಯಾ-ಬಾಳ್ಯಾ- ಬಿ.ಆರ್. ಅರಿಷಿಣಗೋಡಿ

೧೯೮೬ರಿಂದ

ನಕಲಿ ಸಂಪನ್ನರು- ಬಿ.ಆರ್. ಅರಿಷಿಣಗೋಡಿ

ಧರ್ಮದೇವತೆ- ಮಾರುತೇಶ ಮಾಂಡ್ರೆ

ಸಂಗೊಳ್ಳಿ ರಾಯಣ್ಣಾ- ಎಸ್.ಎಂ. ಖೇಡಗಿ

ಎಚ್ಚರ ತಂಗಿ ಎಚ್ಚರ- ನಾ.ದೇ. ನರಸಿಂಹಮೂರ್ತಿ

ಮುದುಕನ ಮದುವೆ- ಪಿ.ಬಿ. ಧುತ್ತರಗಿ

ಗರಗದ ಮಡಿವಾಳೇಶ್ವರ ಮಹಾತ್ಮೆ- ಎಸ್.ಎಂ. ಖೇಡಗಿ

ಏರಿದ ನಂಜು- ಮಹಾಂತೇಶ್ ಶಾಸ್ತ್ರಿ

ಕೈಲಾಗದ ಗಂಡ ಕೈಲಾಸ ಕಂಡ- ಎಸ್.ಎಂ. ಕಣವಿ

ಭೂಮಿ ತೂಕದ ಹೆಣ್ಣು, ತವರು ಬಿಟ್ಟ ತಂಗಿ- ಕೆ. ಪ್ರಕಾಶ

ಅನುಬಂಧ ೭

ಶ್ರೀ ಹುಚ್ಚೇಶ್ವರ ಕಂಪನಿಯ ಕಲಾವಿದರು

ನಟರು

೧. ಮಹಮ್ಮದ ಕೋಳಿ, ಕಮತಗಿ

೨. ಶಿವಲಿಂಗಪ್ಪ ಹಳ್ಳದ, ಕಮತಗಿ

೩. ಈಶ್ವರ ಗೋಂದಕರ, ಕಮತಗಿ

೪. ಬಸಯ್ಯ, ಪಟ್ಟದಕಲ್ಲ

೫. ಯಲ್ಲಪ್ಪ ರಡ್ಡೇರ ತಿಮ್ಮಾಪುರ

೬. ಗುಡುಸಾಬ, ಇಳಕಲ್ಲ

೭. ಅಬ್ಬಾಸಲಿ ಅಳ್ವಂಡಿ, ಇಳಕಲ್ಲ

೮. ಮಾರ್ತೆಪ್ಪ ಕೊಪ್ಪರದ

೯. ಸೋಮಯ್ಯ, ಲಕ್ಷ್ಮೇಶ್ವರ

೧೦. ರಾಮನಗೌಡ, ಕಟಗೇರಿ

೧೧. ರಹಿಮಾನಸಾಬ, ಶಿರಹಟ್ಟಿ

೧೨. ಬಸಪ್ಪ ಕಲ್ಲೂರ

೧೩. ಸುರೇಶ ಪಾಟೀಲ, ಕೋವಾಡ

೧೪. ಸೋಮಣ್ಣ, ಹೊಳಗುಂದಿ

೧೫. ರಾಮಗೋಪಾಲ (ಚಿತ್ರನಟ, ಕಂಪನಿಯಿಂದ ಚಲನಚಿತ್ರಕ್ಕೆ ಹೋದವರು)

೧೬. ಮಾರುತಿ ತೋರಣಗಟ್ಟಿ

೧೭. ಮೃತ್ಯುಂಜಯಸ್ವಾಮಿ

೧೮. ನಿಂಗನಗೌಡ ಅಂಬಲಿ

೧೯. ದೇವರಾಜ ಅಂಬಲಿ

೨೦. ಪರಮೇಶಿ ಗದಗ

೨೧. ರಾಮಣ್ಣ, ಐನಾಪೂರ

೨೨. ಪಾಂಡುರಂಗ ಗೋಕರ್ಣ

೨೩. ಗುರುಸಿದ್ದಯ್ಯ, ಇದ್ದಲಗಿ

೨೪. ರಾಚಯ್ಯ ಗುಳೇದಗುಡ್ಡ

೨೫. ಶಂಕ್ರಯ್ಯ, ರಕ್ಕಸಗಿ

೨೬. ಸಾರಂಗಯ್ಯ, ಐಹೊಳೆ

೨೭. ಉಳಿವೆಪ್ಪ ಬಡಿಗೇರ

೨೮. ಬಿ. ಸಣ್ಣಾಚಾರಿ

೨೯. ಮರಿಯಣ್ಣ ಹೊಸಪೇಟೆ

೩೦. ಕೆ. ಬಾಲಚಂದ್ರಗೌಡ

೩೧. ಅಯ್ಯನಗೌಡ, ಶಾಡಗುಪ್ಪಿ

೩೨. ಬಾಬಣ್ಣ, ಗೋಕಾಕ

೩೩. ರುದ್ರಪ್ಪ ಮಾಸ್ತರ, ಮಲ್ಲೆಗಟ್ಟಿ

೩೪. ಶಿವಾನಂದ, ಬಿದರಕೋಟೆ

೩೫. ಗಂಗಾಧರ ಗುಬ್ಬಿ

೩೬. ಪರಮೇಶಿ, ಸಿರ್ಸಿ

೩೭. ವಿಜಯಶೇಖರ, ಆನೆಗುಂದಿ

೩೮. ಯಮನಪ್ಪ, ಸಾಸನೂರ

೩೯. ಅಮ್ಮಣಗಿ ದೇಸಾಯಿ

೪೦. ಈಶ್ವರ ಶಿಗ್ಗಲಿ

೪೧. ಮರಿಯಣ್ಣ, ಮದ್ದೂರ

೪೨. ಮಂಜುನಾಥ, ಕುಮಟಾ

೪೩. ಅಶೋಕ ಶೆಟ್ರು, ಮಂಗಳೂರು

೪೪. ರಾಮಣ್ಣ ರಿತ್ತಿ

೪೫. ಎಂ. ದೇವರಾಜ, ಅರಸೀಕೆರೆ

೪೬. ಜಗದೀಶ ದಾವಣಗೆರೆ

೪೭. ದೇಸಾಯಿ ಸಿಂಧನೂರ

೪೮. ಬಾಳಪ್ಪ ಕಿತ್ತೂರ

೪೯. ಸಂಗಪ್ಪ ಕಡಿವಾಲ

೫೦. ಮಾರ್ತಾಂಡ ಗವಾಯಿ, ಗಂಗಾವತಿ

೫೧. ಮಾಣಿಕರಾವ್ ಗವಾಯಿ, ಗಂಗಾವತಿ

೫೨. ಕುಬೇರಪ್ಪ ಗವಾಯಿ, ಗಂಗಾವತಿ

೫೩. ತಯ್ಯುಬಕಾನ, ಯಡಹಳ್ಳಿ

೫೪. ನಾಗೇಶ ಮೈಸೂರು

೫೫. ಸಿದ್ಧರಾಜ ಕಲ್ಲೂರ

೫೬. ಮಲ್ಲೇಶಿ ಕಲ್ಲೂರ

೫೭. ಸಿದ್ದಣ್ಣ ಮೈಂದರಗಿ

೫೮. ವಿರೂಪಾಕ್ಷ ಮೈಂದರಗಿ

೫೯. ವೀರಭದ್ರಪ್ಪ ಮಂಗಳಗುಡ್ಡ

೬೦. ಬಸವರಾಜ ಮದರಿ

೬೧. ಕೆ. ಪ್ರಕಾಶ

೬೨. ಕೆ. ಶಂಕ್ರಯ್ಯಸ್ವಾಮಿ

೬೩. ವೆಂಕಟೇಶ ಹೆಗಡೆ

೬೪. ಜಯಣ್ಣ ಹೊಸಮನಿ

೬೫. ಶೇಖರ ಹೆಗಡೆ

೬೬. ಕುಮಾರ ಸಿರ್ಸಿ

೬೭. ಕೃಷ್ಣಮೂರ್ತಿ ಹಾಸನ

೬೮. ವಿರೂಪಾಕ್ಷ ಗದಗ

೬೯. ತಿಪ್ಪೇಶಿ ಕತಿಗಾಲ

೭೦. ಸದಾ ಮಂಗಳೂರ

೭೧. ಸಂಗಮೇಶ ಬ್ಯಾಡಗಿ

೭೨. ಕೊಟ್ರಯ್ಯ ಬ್ಯಾಡಗಿ

೭೩. ಗಿರಿ ದಾವಣಗೆರೆ

೭೪. ಚಿಕ್ಕರೆಡ್ಡಿ ಹಂಚಿನಾಳ

೭೫. ಹನುಮಂತಪ್ಪ ಚಿಲಕಾರಗಿ

೭೬. ನಾಗರಾಜ ಆಲೂರ

೭೭. ಪಂಚಾಕ್ಷರಿ ಬನಹಟ್ಟಿ

೭೮. ಶ್ಯಾಮ ಭೋಸಲೆ

೭೯. ಪ್ರಶಾಂತ ಜೋಶಿ

೮೦. ರಾಜು ತಾಳಿಕೋಟಿ

೮೧. ವಿಜಯ ತಾಳಿಕೋಟಿ

೮೨. ಕುಮಾರಸ್ವಾಮಿ

೮೩. ಉಮೇಶ ಕುಕನೂರ

೮೪. ಬಾಬು ಕುಕನೂರ

೮೫. ಅಣ್ಣಪ್ಪ ಕಟಗೇರಿ ಬೆನಕಟ್ಟಿ

ನಟಿಯರು

೧. ಪ್ರಮೀಳಾಬಾಯಿ ಗುಡೂರ

೨. ಶಾಂತಾಬಾಯಿ, ಇಳಕಲ್

೩. ನೀಲಮ್ಮ ಅಮ್ಮಣಗಿ

೪. ಮೆಹಬೂಬಿ ನೂರಜಹಾನ್, ಗದಗ

೫. ಹಸನಬೇಗಂ ಬಾಗಲಕೋಟೆ

೬. ಮಮತಾಜ ಗುಡೂರು

೭. ಲೋಲಾ ಬೆಂಗಳೂರು

೮. ಬಸವಣ್ಣೆವ್ವ ಗದಗ

೯. ಸುಲೋಚನಾ ಇಳಕಲ್ಲ

೧೦. ಲಲಿತಾ ಕೋದಂಡ

೧೧. ಮೋಹಿನಿ ಬೆಂಗಳೂರ

೧೨. ಮಾಲತಿ ಮೈಸೂರು

೧೩. ಸೋಮಕ್ಕ ಕುಸುಗಲ್

೧೪. ಇಂದುಮತಿ, ದಾವಣಗೆರೆ

೧೫. ದೇವಕಿ, ದಾವಣಗೆರೆ

೧೬. ಜಯಾ ರಿತ್ತಿ

೧೭. ಲಲಿತಾ, ದಾವಣಗೆರೆ

೧೮. ರಾಜಮ್ಮ, ತುಮಕೂರು

೧೯. ಶಾಂತಾ ಮಾಲ್ವಿ

೨೦. ಕೆ. ಜಯಲಕ್ಷ್ಮೀ (ಚಿತ್ರನಟಿ, ಕಂಪನಿಯಿಂದ ಚಿತ್ರರಂಗಕ್ಕೆ ಹೋದವರು)

೨೧. ಲೋಲಾಕ್ಷಿ ಮದ್ದೂರ

೨೨. ಪದ್ಮಕ್ಕ ಖಾನಸಾಬ, ಕಲ್ಲೂರ

೨೩. ಕುಂದಾಪುರ ಸುಮಿತ್ರಾ

೨೪. ಚಂಪಾಬಾಯಿ ಪುರಿ, ಗದಗ

೨೫. ಸುಶೀಲಾ, ಕುಂದಾಪುರ

೨೬. ಶೀಲಾಬಾಯಿ, ಯಲ್ಲಾಪುರ

೨೭. ಶೋಭಾ, ಗದಗ

೨೮. ಗಾಯತ್ರಿ, ಗದಗ

೨೯. ಶಶಿಪ್ರಭಾ, ಬೆಂಗಳೂರು

೩೦. ಮೀನಾಕ್ಷಿ, ದಾವಣಗೆರೆ

೩೧. ಪಾರ್ವತಮ್ಮ, ದಾವಣಗೆರೆ

೩೨. ಕೆ. ಕಮಲಾ

೩೩. ಪ್ರೇಮಾ ಹೊಸಮನಿ

೩೪. ಬಾಬಿ ಬೆಂಗಳೂರು

೩೫. ಪ್ರಿಯಾ ದೇವದುರ್ಗ

೩೬. ಮಂಗಳಾ ಶಿಕಾರಿಪುರ

೩೭. ಹೇಮಾ ಗದಗ

೩೮. ಸರ್ವಮಂಗಳಾ

೩೯. ವಿಶಾಲಾಕ್ಷಿ, ರಾಮದುರ್ಗ

೪೦. ಲೀಲಾ ಮೈಸೂರ

೪೧. ಪುಷ್ಪಾ, ಹೂವಿನಹಡಗಲಿ

೪೨. ವಸುಂಧರಾ, ದಾವಣಗೆರೆ

೪೩. ಅರುಣಾ ಸಿರ್ಸಿ

೪೪. ವಸಂತಾ, ಶಿರಹಟ್ಟಿ

೪೫. ವಸಂತಾ, ಹಾಸನ

೪೬. ಜ್ಯೋತಿ ಮಂಗಳೂರ

೪೭. ಗುಂಡಮ್ಮ ಜೋಶಿ

೪೮. ಜಯಮ್ಮ ಕಲ್ಲೂರ

ಹಾರ್ಮೋನಿಯಂ ವಾದಕರು

೧. ಬಸಲಿಂಗಪ್ಪ, ಹೂಗಾರ, ಕಮತಗಿ

೨. ಶಂಕ್ರಪ್ಪ, ಕಂಪ್ಲಿ, ಇಳಕಲ್ಲ

೩. ಈಶ್ವರ ಮೊರಗೇರಿ

೪. ರೇವಣಸಿದ್ದಪ್ಪ ಸುರಕೋಡ

೫. ಸೋಮನಾಥ ತಂಗೋಡ

೬. ಗೋಪಾಲ, ಬಳ್ಳಾರಿ

೭. ಬಸವಣ್ಣೆಪ್ಪ, ಹೊಸಪೇಟೆ

೮. ಪಂಚಯ್ಯ ಮಡ್ಡಿಮಠ

೯. ಮಲ್ಲಿಕಾರ್ಜುನ, ಅಸುಂಡಿ

೧೦. ಪರಯ್ಯಸ್ವಾಮಿ, ಬನಹಟ್ಟಿ

೧೧. ರಾಜು ಶಿಡ್ಲಗೇರಿ

ತಬಲಾ ವಾದಕರು

೧. ಬಸಲಿಂಗಪ್ಪ, ಹೂಗಾರ, ಕಮತಗಿ

೨. ರಂಗಪ್ಪ ಗುರೆಲ್ಲ

೩. ಚೆನ್ನಪ್ಪ ಧನ್ನೂರ

೪. ಗುಂಡುಕುಮಾರ, ಇಳಕಲ್ಲ

೫. ಚಂದ್ರು ದಾವಣಗೆರೆ

೬. ವಿಜಯಕುಮಾರ, ಮರೋಳ

೭. ನಾಗೇಶ ಭಟ್ಟರು

೮. ಖಾನಸಾಬ, ಕಲ್ಲೂರ

೯. ಕಮಲರಾಜ, ದೇವದುರ್ಗ

೧೦. ಶಿವಾನಂದ ಬಾಗಲಕೋಟೆ

ಪೇಂಟರರು

೧. ಕೆ.ಎಲ್. ಕೆಂಧೋಳಿ ಪೇಂಟರ್, ಇಳಕಲ್ಲ
೨. ಶಿಲ್ಪಾಚಾರ್ಯ ಪೇಂಟರ್, ಚಿತ್ರದುರ್ಗ
೩. ಎಸ್. ಪ್ರಹ್ಲಾದ್ ಪೇಂಟರ್, ಹುಬ್ಬಳ್ಳಿ
೪. ರಾಜು ಪೇಂಟರ್, ಹಿರೇಹಾಳ
೫. ಅಮೀನ್ ಪೇಂಟರ್, ಇಳಕಲ್ಲ
೬. ಕೃಷ್ಣಾ ಪೇಂಟರ್, ಹುಬ್ಬಳ್ಳಿ
೭. ಮರಿ ಪೇಂಟರ್, ಬೆಂಗಳೂರು

ಮ್ಯಾನೇಜರರು

೧. ಬಸವರಾಜ, ನ್ಯಾಮತಿ
೨. ಕುಂಟೋಜಿ ಬಸಣ್ಣ, ಅಮೀನಗಡ
೩. ಬಾಲರಾಜ, ಬೆಂಗಳೂರು
೪. ಬಿ.ಸಿ. ಕೊಪ್ಪದ ವಿಜಾಪುರ
೫. ಜಿ.ಎನ್. ಕುಲಕರ್ಣಿ, ಹುಬ್ಬಳ್ಳಿ
೬. ಆರ್.ಸಿ. ಗೊರ್ಜಿನಾಳ, ಗದಗ
೭. ಎಸ್.ಬಿ. ಹಳ್ಳದ
೮. ಟಿ. ಶಿವಣ್ಣ, ತುಮಕೂರ
೯. ಕರೀಂಸಾಬ, ದೇವಗಿರಿ
೧೦. ರವೀಂದ್ರಕುಮಾರ, ಹಾಸನ

ಸಂಗೀತ ನಿರ್ದೇಶಕರು

೧. ಸಂಗಮೇಶ, ಹೊನ್ನಿಗನೂರು
೨. ಚಿದಾನಂದ ಸಪ್ಪಂಡಿ, ಇಳಕಲ್ಲ
೩. ಗಂಗಾಧರ ಭೂತಿ, ಬನಹಟ್ಟಿ
೪. ಪಟ್ಟಣಶೆಟ್ಟಿ ಮಾಸ್ತರ, ಗದಗ
೫. ವಾದಿರಾಜ ಗವಾಯಿಗಳು, ಕಂಪ್ಲಿ

ಅನುಬಂಧ ೮

ಗ್ರಂಥ ಋಣ

೧. ಉತ್ತರ ಕರ್ನಾಟಕ ವೃತ್ತಿರಂಗಭೂಮಿ- ಡಾ. ರಾಮಕೃಷ್ಣ ಮರಾಠೆ, ಇಳಾ ಪ್ರಕಾಶನ, ಬೆಂಗಳೂರು.

೨. ಕರ್ನಾಟಕ ರಂಗಭೂಮಿ- ಡಾ. ಎಚ್.ಕೆ. ರಂಗನಾಥ, ಸುರುಚಿ ಪ್ರಕಾಶನ, ಮೈಸೂರು.

೩. ಕನ್ನಡ ರಂಗಭೂಮಿ- ಬಿ.ವಿ. ವೈಕುಂಠರಾಜು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಕನ್ನಡ ರಂಗಭೂಮಿಯ ವಿಕಾಸ- ಡಾ. ಎಚ್.ಕೆ. ರಾಮನಾಥ ಅಭಿನಯ ಪ್ರಕಾಶನ ಕುವೆಂಪುನಗರ, ಮೈಸೂರು.

೫. ಬಿ.ಆರ್. ಅರಿಷಿಣಗೋಡಿ ರಂಗ ಸಂಪನ್ನರು- ಕಿರುಜೀವನ ಚರಿತ್ರೆ, ಡಾ. ರಾಮಕೃಷ್ಣ ಮರಾಠೆ ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೬. ಸಂಶೋಧನೆ ಏನು? ಏಕೆ? ಹೇಗೆ?- ಎಂ. ಚಂದ್ರಪೂಜಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಪಿ.ಬಿ. ಧುತ್ತರಗಿ ರಂಗ ಸಂಪನ್ನರ ಜೀವನ ಚರಿತ್ರೆ- ಡಾ. ವೀರಣ್ಣ ರಾಜೂರ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೮. ಹೆಚ್.ಎನ್. ಹೂಗಾರ ರಂಗಸಂಪನ್ನರು- ಚಂದ್ರಶೇಖರ ವಸ್ತ್ರದ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೯. ಎಚ್.ಎನ್. ಹೂಗಾರ ಬದುಕು ಬರಹ ಮಹಾಪ್ರಬಂಧ- ಡಾ. ಶಿವಪ್ಪ ಮ. ಕುರಿ ಶಿವಬಸವ ಪ್ರಕಾಶನ, ಹೊಸಹಳ್ಳಿ.

೧೦. ಪ್ರಯೋಗ ಪ್ರಸಂಗ- ಡಾ. ಗಣೇಶ ಅಮೀನಗಡ, ಅರಿವು ಪ್ರಕಾಶನ, ಬೆಂಗಳೂರು.

೧೧. ವೃತ್ತಿ ರಂಗ ಸಂಸ್ಕೃತಿ ಮಹಾಪ್ರಬಂಧ- ಡಾ. ದೇವದಾಸ ಕಳಸದ ವಿದ್ಯಾನಿಧಿ ಪ್ರಕಾಶನ, ಗದಗ

೧೨. ಬಣ್ಣದ ಬದುಕಿನ ಚಿನ್ನದ ದಿನಗಳು- ಡಾ. ಗಣೇಶ ಅಮೀನಗಡ, ಪ್ರಸಾದನ ಪ್ರಕಾಶನ, ಮಂಗಳೂರು.

೧೩. ಕೊಣ್ಣೂರ ನಾಟಕ ಕಂಪನಿ- ಡಾ. ರಾಮಕೃಷ್ಣ ಮರಾಠೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಖರೇ ಖರೇ ಸಂಗ್ಯಾಬಾಳ್ಯಾ ಸಣ್ಣಾಟ- ಡಾ. ಎಂ.ಎಂ. ಕಲಬುರ್ಗಿ, ಲೋಹಿಯಾ ಪ್ರಕಾಶನ, ಬಳ್ಳಾರಿ

P.T.O

೧೫. ಕನ್ನಡ ಹವ್ಯಾಸಿ ರಂಗಭೂಮಿ ಒಂದು ಅಧ್ಯಯನ- ಮಹಾಪ್ರಬಂಧ, ಡಾ. ಜಿ.ಎ. ಹಡಗಲಿ ಚಂದ್ರನಾಥ ಪ್ರಕಾಶ, ಧಾರವಾಡ.

೧೬. ಕಂದಗಲ್ಲ ಸ್ಮೃತಿ- (ಸಂ) ಡಾ. ಶ್ರೀರಾಮ ಇಟ್ಟಣ್ಣವರ.

೧೭. ಗ್ರೀಕ್ ರಂಗಭೂಮಿ ಮತ್ತು ನಾಟಕ- ಎಲ್.ಎಸ್. ಶೇಷಗಿರಿರಾವ್.

೧೮. ಕಂದಗಲ್ಲ ಹಣಮಂತರಾಯರು- ಡಾ. ಎಸ್.ಬಿ. ಅಳಗಿ, ಲಿಪಿ ಪ್ರಕಾಶನ, ಬೆಂಗಳೂರು.

೧೯. ಬಿ. ವಿ. ಕಾರಂತ- (ಸಂ) ಮುರಳೀಧರ ಉಪಾಧ್ಯ, ಹಿರಿಯಡಕ

೨೦. ರಂಗಸಂಪನ್ನರು ಡಾ. ಬಿ.ವಿ. ವೈಕುಂಠರಾಜು- ಸತೀಶ್ ಶಿಲೆ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೨೧. ತೆರೆ ಸರಿದಾಗ ಮಾಲತಿಶ್ರೀ ಮೈಸೂರು ಅವರ ಆತ್ಮಕತೆ- ಗುಡಿಹಳ್ಳಿ ನಾಗರಾಜ.

೨೨. ಕನ್ನಡ ರಂಗಭೂಮಿ ಅಂದು-ಇಂದುಃ ಆರು ಉಪನ್ಯಾಸಗಳು- ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ (೧೯೭೪)

೨೩. ಕರ್ನಾಟಕ ಕಲಾ ವೈಭವ ನಾಟ್ಯ ಸಂಘ ಬೆಳಗಾವಿ- ಡಾ. ಎಸ್.ಎಫ್. ಜಕಬಾಳ, ಕ.ವಿ.ವಿ. ಧಾರವಾಡಕ್ಕೆ ಸಾದರಪಡಿಸಿದ ಮಹಾಪ್ರಬಂಧ (೧೯೯೬)

೨೪. ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಮತ್ತು ರಂಗಭೂಮಿಯ ಅಧ್ಯಯನ, ಡಾ. ಬಸವರಾಜ ಜಗಜಂಪಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ.

೨೫. ನಲವಡಿ ಶ್ರೀಕಂಠಶಾಸ್ತ್ರಿಗಳು-ಮೃತ್ಯುಂಜಯ ಹೊರಕೇರಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ.

೨೬. ರಂಗಸುತ್ತ- (ಸಂ) ಶ್ರೀಮತಿ ಸರೋಜ ಇಟ್ಟಣ್ಣವರ, ಬಾಗಲಕೋಟ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೫.

೨೭. ನಾಟಕಕಾರ ಸಂಸ- ಡಾ. ಶಾಲಿನಿ ರಘುನಾಥ ಭಟ್ಟ, ಕ.ವಿ.ವಿ. ಧಾರವಾಡ (೧೯೯೨).

೨೮. ನಾಟಕ ಮತ್ತು ಸಿನೆಮಾ- ಕೆ.ವಿ. ಸುಬ್ಬಣ್ಣ, ಅಕ್ಷರ ಪ್ರಕಾಶನ (೧೯೭೯).

೨೯. ನಾಟಕರತ್ನ ಗುಬ್ಬಿ ವೀರಣ್ಣ- ಬಿ.ಎನ್. ಚಿನ್ನಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ (೧೯೯೨).

೩೦. ಭಾರತೀಯ ರಂಗಭೂಮಿ- ಆದ್ಯ ರಂಗಾಚಾರ್ಯ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ (೧೯೭೭).

೩೧. ಮರಾಠಿ ರಂಗಭೂಮಿಯ ಚಾರಿತ್ರಿಕ ಇತಿಹಾಸ- ಶ್ರೀ ನಾ. ಕಡಪಟ್ಟಿ, ವೀನಸ್ ಪ್ರಕಾಶನ, ಪುಣೆ (೧೯೫೭).

೩೨. ರಂಗಚಿಂತನೆ- (ಸಂ) ಡಾ. ವಿಜಯಾ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, (೧೯೯೩).

P.T.O

೩೩. ರಂಗಭೂಮಿಯ ನಟ ಸಾರ್ವಭೌಮ ಹಂದಿಗನೂರ ಸಿದ್ರಾಮಪ್ಪ- ಡಾ. ಬಿ.ಆರ್. ನಾಡಗೌಡ ಕ.ವಿ.ವಿ. ಧಾರವಾಡ (೧೯೮೦).

೩೪. ಲೀಲಾವತಾರ- ನಲವಡಿ ಶ್ರೀಕಂಠಶಾಸ್ತ್ರಿಗಳು.

೩೫. ಶ್ರೀರಂಗರ ನಾಟಕಗಳು- ಡಿ. ಜಿ. ಹಾಜವಗೋಳ, ಕ.ವಿ.ವಿ. ಧಾರವಾಡ. (೧೯೯೬)

೩೬. ಸಾಹಿತ್ಯ ಮತ್ತು ರಂಗಭೂಮಿ- ಎಚ್.ಎಸ್. ಶಿವಪ್ರಕಾಶ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (೧೯೯೨).

೩೭. ಇಂದಿನ ರಂಗಕಲಾವಿದರು- (ಸಂ) ವಿಜಯಾ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು (೧೯೮೬).

೩೮. ಉತ್ತರ ಕರ್ನಾಟಕದ ಬೈಲಾಟ- ಡಾ. ಬಸವರಾಜ ಮಲಶೆಟ್ಟಿ, ಪ್ರಸಾರಾಂಗ, ಕ.ವಿ.ವಿ. ಧಾರವಾಡ (೧೯೮೩).

೩೯. ಕನ್ನಡ ರಂಗಭೂಮಿ ನಡೆದುಬಂದ ದಾರಿ- ಶ್ರೀರಂಗ ಸಾಹಿತ್ಯ ಪರಿಷತ್ತು, ಬೆಂಗಳೂರು. (೧೯೮೭).

೪೦. ಕನ್ನಡ ರಂಗಭೂಮಿ ನಡೆದುಬಂದ ದಾರಿ- ಬಿ. ಪುಟ್ಟಸ್ವಾಮಯ್ಯ, ಆಯ್.ಬಿ.ಎಚ್. ಪ್ರಕಾಶನ, ಬೆಂಗಳೂರು (೧೯೮೭).

೪೧. ಕರ್ನಾಟಕ ರಂಗಮಂದಿರಗಳು- ಕೆ. ರಮಾನಂದ ಹೆಗಡೆ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

೪೨. ಕರ್ನಾಟಕ ರಂಗಭೂಮಿ ನಿನ್ನೆ, ಇಂದು, ನಾಳೆ- (ಸಂ) ಸಿಂಧುವಳ್ಳಿ ಅನಂತಮೂರ್ತಿ, ಎಚ್.ಕೆ. ರಂಗನಾಥ, ಮೈಸೂರು.

೪೩. ಗುಬ್ಬಿ ಕಂಪನಿ- ಡಾ. ಸಿಂಧುವಳ್ಳಿ ಅನಂತಮೂರ್ತಿ, ಸುರುಚಿ ಪ್ರಕಾಶನ, ಬೆಂಗಳೂರು.

೪೪. ಚಿತ್ತರಗಿ ಗಂಗಾಧರ ಶಾಸ್ತ್ರಿ- ದಿ. ಪಾಲಾಕ್ಷ ಆರ್. ಹಿರೇಮಠ, ಆಯ್.ಬಿ.ಎಚ್. ಪ್ರಕಾಶನ, ಬೆಂಗಳೂರು.

೪೫. ಬಣ್ಣ, ಬೆಳಕು- ಎಚ್.ಕೆ. ರಂಗನಾಥ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (೧೯೭೪).

೪೬. ರಾವುಸಾಹೇಬ ಶಿವಮೂರ್ತಿ ಕಲಬುರ್ಗಿಮಠ- ಬಾಬುರಾವ ಬಿ. ದೇಸಾಯಿ, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ, ಗದಗ.

೪೭. ಶ್ರೀ ಗರುಡ ಸದಾಶಿವರಾಯರು- ಎನ್ಕೆ, ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು (೧೯೭೦).

೪೮. ಶ್ರೀಕೃಷ್ಣ ಪಾರಿಜಾತ- ಡಾ. ಶ್ರೀರಾಮ ಇಟ್ಟಣ್ಣವರ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ.

೪೯. ರಂಗಭೂಮಿ ಮತ್ತು ಚಲನಚಿತ್ರ- ಅನು: ಅಕ್ಷರ, ಅಕ್ಷರ ಪ್ರಕಾಶನ, ಸಾಗರ.

೫೦. ವಾಸುದೇವ ಪ್ರಶಸ್ತಿ- ವಾಸುದೇವ, ವಿನೋದಿನಿ ನಾಟ್ಯ ಸಂಘ, ಬಾಗಲಕೋಟ.

೫೧. ಉತ್ತರ ಕರ್ನಾಟಕದ ಜನಪದ ಸಾಹಿತ್ಯ- ಡಾ. ಎಂ.ಎಂ. ಕಲಬುರ್ಗಿ (೧೯೭೮).

೫೨. ಕನ್ನಡ ರಂಗಭೂಮಿಯ ಪರ್ವತವಾಣಿ- (ಸಂ) ಎಲ್.ಎಸ್. ಶೇಷಗಿರಿರಾವ್ (೧೯೯೫).


೫೩. ಕರ್ನಾಟಕ ಸಂಸ್ಕೃತಿ ಸಮೀಕ್ಷೆ- ಡಾ. ಎಚ್. ತಿಪ್ಪೇರುದ್ರಸ್ವಾಮಿ.

೫೪. ಭಾರತೀಯ ಕಲಾ ದರ್ಶನ- (ಸಂ) ಅ.ನ. ಕೃಷ್ಣರಾಯ.

೫೫. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ- ಡಾ. ಎಂ. ಚಿದಾನಂದಮೂರ್ತಿ (೧೯೬೬).

ಅನುಬಂಧ ೯

ಛಾಯಾಚಿತ್ರಗಳು



ಬಿ.ಆರ್. ಅರಿಷಿಣಗೋಡಿಯವರು



ದಿ. ಆರ್.ಆರ್. ಅರಿಷಿಣಗೋಡಿಯವರು



ಬಿ.ಆರ್. ಅರಿಷಿಣಗೋಡಿಯವರ ತಾಯಿ ಕಾಶವ್ವ ರಂಗಪ್ಪ ಅರಿಷಿಣಗೋಡಿ



ಧರ್ಮಪತ್ನಿ ಸೌ. ರೇಣುಕಾ ಅವರೊಂದಿಗೆ ಬಿ.ಆರ್. ಅರಿಷಿಣಗೋಡಿ



ಬಿ.ಆರ್. ಅರಿಷಿಣಗೋಡಿಯವರ ಹುಟ್ಟೂರು ಬೆನಕಟ್ಟಿ ಗ್ರಾಮದ ಮನೆ



ಬಿ.ಆರ್. ಅರಿಷಿಣಗೋಡಿಯವರು ಸಧ್ಯ ವಾಸಿಸುತ್ತಿರುವ ಕಮತಗಿಯ ಮನೆ



ಕಮತಗಿಯಲ್ಲಿ ಇತ್ತೀಚಿಗೆ ಪ್ರಾರಂಭಿಸಿದ ಎಚ್.ಎನ್.ಎಸ್.ಕೆ. ಚಲನಚಿತ್ರಮಂದಿರದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಹುಚ್ಚೇಶ್ವರ ಸ್ವಾಮಿಗಳು, ಬಾಗಲಕೋಟ ಚರಂತಿಮಠದ ಶ್ರೀ ಪ್ರಭುಸ್ವಾಮಿಗಳು, ಅಳಿಯ ರಮೇಶ ಮೆಳ್ಳಿಯವರೊಂದಿಗೆ ಬಿ.ಆರ್. ಅರಿಷಿಣಗೋಡಿಯವರು



ಬಿ.ಆರ್. ಅರಿಷಿಣಗೋಡಿಯವರ ಕುಟುಂಬ ವರ್ಗ ಕುಳಿತವರು: ಮೊಮ್ಮಕ್ಕಳೊಂದಿಗೆ ಬಿ.ಆರ್. ಅರಿಷಿಣಗೋಡಿ ದಂಪತಿಗಳು ನಿಂತವರು: (ಎಡದಿಂದ) ಡಾ. ಶ್ರೀಕಾಂತ ಪತ್ನಿ ಡಾ. ಅನುಪಮಾ, ಶ್ರೀಮತಿ ವಿಜಯಭಾರತಿ-ವೆಂಕಟೇಶ, ಶಶಿಧರ-ಕಾಶೀಬಾಯಿ



ತಮ್ಮ ಕಂಪನಿಯ ರಂಗಪರಿಕರಗಳೊಂದಿಗೆ ಬಿ.ಆರ್. ಅರಿಷಿಣಗೋಡಿಯವರು



ಹೆಣ್ಣುಮಗಳು' ನಾಟಕದ ದೃಶ್ಯವೊಂದರಲ್ಲಿ ಸಹ ಕಲಾವಿದೆಯೊಂದಿಗೆ ಬಿ.ಆರ್. ಅರಿಷಿಣಗೋಡಿ



'ಹೆಣ್ಣುಮಗಳು' ನಾಟಕದ ಗೂರನ ಪಾತ್ರದಲ್ಲಿ ಬಿ.ಆರ್. ಅರಿಷಿಣಗೋಡಿ



'ಇಲ್ಲಿಗೆ ಬಂತೋ ಸಂಗಯ್ಯಾ' ನಾಟಕದ ಆರ್.ಎಮ್.ಪಿ. ಡಾಕ್ಟರನ ಪಾತ್ರದಲ್ಲಿ ಬಿ.ಆರ್. ಅರಿಷಿಣಗೋಡಿ



ಕಲಾವಿದೆ ಶೀಲಾ ಯಲ್ಲಾಪೂರ



'ಗೌಡ್ರಗದ್ಲ' ನಾಟಕದಲ್ಲಿ ಗೌಡನ ಪಾತ್ರದಲ್ಲಿ ಕಲಾವಿದ ಅಯ್ಯನಗೌಡ ಶಾಡಗುಪ್ಪಿ



ಕಲಾವಿದೆ ಶ್ರೀಮತಿ ಅಕ್ಕಣ್ಣೆ



'ಗರೀಬಿ ಹಟಾವೊ' ನಾಟಕದ ರಾಮೂನ ಪಾತ್ರದಲ್ಲಿ ನಟಿ ಜಯಲಕ್ಷ್ಮೀ ಪಾಟೀಲರೊಂದಿಗೆ ಬಿ.ಆರ್. ಅರಿಷಿಣಗೋಡಿ



ಕಲಾವಿದ ಶಂಕ್ರಯ್ಯ ರಕ್ಕಸಗಿ



ಹುಬ್ಬಳ್ಳಿಯ ಕ್ಯಾಂಪ್‌ನಲ್ಲಿ ಚಲನಚಿತ್ರ ನಟಿ ಭಾರತಿ ಕಂಪನಿಗೆ ಭೇಟ್ಟಿಕೊಟ್ಟ ಸಂದರ್ಭದಲ್ಲಿ ಬಲತುದಿಯಲ್ಲಿ ತರುಣ ಕಲಾವಿದ ಬಿ.ಆರ್. ಅರಿಷಿಣಗೋಡಿ



ಬೆಂಗಳೂರು ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಚಲನಚಿತ್ರ ನಟರಾದ ಅಂಬರೀಷ-ಸುಮಲತಾ ದಂಪತಿಗಳೊಂದಿಗೆ



ಬೆಂಗಳೂರು ಗುಬ್ಬಿ ವೀರಣ್ಣ ರಂಗ ಮಂದಿರದಲ್ಲಿ ಚಲನಚಿತ್ರ ನಟ ಸುಧೀರ್ ಅವರೊಂದಿಗೆ ಅರಿಷಿಣಗೋಡಿಯವರು



ಗುಬ್ಬಿ ವೀರಣ್ಣ ಪ್ರಶಸ್ತಿ ಫಲಕ



ಜಿ.ಆರ್. ಅರಿಷಿಣಗೋಡಿ ಅವರು ಪಡೆದ ಪ್ರಶಸ್ತಿ, ಸನ್ಮಾನ ಪತ್ರ, ಫಲಕಗಳು



ಬಿ.ಆರ್. ಅರಿಷಿಣಗೋಡಿ ಅವರಿಗೆ ಕೊಡಮಾಡಿದ ಬಳ್ಳಾರಿ ರಾಘವ ಪ್ರಶಸ್ತಿ



ಗುಬ್ಬಿ ವೀರಣ್ಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಂದಿನ ರಾಜ್ಯಪಾಲರಾದ ಟಿ.ಎಸ್. ಚತುರ್ವೇದಿ ಹಾಗೂ ಡಾ. ಎಚ್. ನರಸಿಂಹಯ್ಯ ಅವರೊಂದಿಗೆ ಬಿ.ಆರ್. ಅರಿಷಿಣಗೋಡಿ




ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಲೀಲಾವತಿ ಆರ್. ಪ್ರಸಾದ ಅವರೊಂದಿಗೆ ಬಿ.ಆರ್. ಅರಿಷಿಣಗೋಡಿ



ಬೆಂಗಳೂರು ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಪ್ರದರ್ಶಿತವಾದ ಜನಪ್ರಿಯ ನಾಟಕ 'ಎಚ್ಚರ ತಂಗಿ ಎಚ್ಚರ' ಸಂದರ್ಭದಲ್ಲಿ




ನಾಟಕದ ಗೋಡೆ ಭಿತ್ತಿ ಪತ್ರ



ನಾಟಕದ ತಿಕೀಟಿನ ಮಾದರಿ



ನಾಟಕದ ಪ್ರಚಾರಕ್ಕೆ ಬಳಸಲ್ಪಡುತ್ತಿದ್ದ ತೂಗು ಭಿತ್ತಿಪತ್ರ



॥ ಶ್ರೀ ರಂಗನಾಥ ಪ್ರಸನ್ನ ॥ ಸ್ಥಾಪನೆ : 1961

ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ.

(ಜಿಲ್ಲಾ : ವಿಜಾಪೂರ)

ಒಡೆಯರು.
ಶ್ರೀ ಬಿ. ಆರ್. ಅರಿಷಿಣಗೋಡಿ

ಕ್ಯಾಂಪ : ತೀರ್ಥಹಳ್ಳಿ ದಿನಾಂಕ : 8-12-98

ಗೆ: ತಹಶೀಲದಾರ ಸಾಹೇಬರು, ತಾಲ್ಲೂಕ ತೀರ್ಥಹಳ್ಳಿ ಇವರ ಸನ್ನಿಧಿಗೆ

ಮಾನ್ಯರೇ,

ಮ್ಯಾನೇಜರ ಎಸ್.ಬಿ. ಹಳ್ಳದ, ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಕ್ಯಾಂಪ ತೀರ್ಥಹಳ್ಳಿ.

ಸರ,


ಈಗ ನಮ್ಮ ಸಂಘದ ಕ್ಯಾಂಪನ್ನು ತೀರ್ಥಹಳ್ಳಿ ಪುರಪಂಚಾಯತಿ ಆವರಣದಲ್ಲಿ ಟೆಂಪರರಿಯಾಗಿ ಶೆಡ್ಡರ ಹಾಕಿಕೊಂಡು ನಮ್ಮ ಸಂಘದ ನಾಟಕವನ್ನು ಆಡಬೇಕೆಂದು ಮಾಡಿರುತ್ತೇನೆ. ಕಾರಣ ಮೇಲಾಬಂದವರು ನಮ್ಮ ಸಂಘಕ್ಕೆ ತೀರ್ಥಹಳ್ಳಿ ಮುಕ್ಕಾಂನಲ್ಲಿ ಬಾಜೂಕ ಬರೆದ ನಮ್ಮ ನಾಟಕಗಳನ್ನು ಪ್ರಯೋಗ ನಡೆಸಲುವಾಗಿ ತಾ: 14-12-98 ರಿಂದ 31-1-99 ರವರೆಗೆ ನಾಟಕಗಳನ್ನು ಪ್ರಯೋಗಿಸಲಿಕ್ಕೆ ಪರವಾನಿಗೆಯನ್ನು ಮಂಜೂರು ಮಾಡಬೇಕಾಗಿ ಬರಕೊಂಡ ವಿನಂತಿ ಅರ್ಜಿ.

ನಮ್ಮ ನಾಟಕಗಳು:
1) ತಾಳಿ ಕಟ್ಟಿದರೂ ಗಂಡನಲ್ಲ
2) ಭೂಮಿ ತೂಕದ ಹೆಣ್ಣು
3) ನನ್ನ ಗಂಡನ ಹೆಂಡತಿ
4) ಬಸಕಂಡಿಕ್ಕೆರೆ
5) ಗೌಡ್ತಿ ಹೋದಳು ಗಂಗಿ ಬಂದಳು
ಇತ್ಯಾದಿ.


ತಮ್ಮ ವಿಶ್ವಾಸಿಗ
(ಎಸ್ ಬಿ ಹಳ್ಳದ)
ಮ್ಯಾನೇಜರ
ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ

ತಹಶೀಲ್ದಾರ್,
ತೀರ್ಥಹಳ್ಳಿ ತಾ.

ನಾಟಕ ಪ್ರದರ್ಶನ ಮಾಡಲು ಸ್ಥಳೀಯ ತಹಶೀಲದಾರರಿಂದ ಪಡೆದ ಪರವಾನಿಗೆ ಪತ್ರದ ಮಾದರಿ



ಇತರ ಕವಿಗಳ ನಾಟಕ ಆಡಲು ಮಾಡಿಕೊಂಡ ಕರಾರು ಹಾಗೂ ಪರವಾನಿಗೆ ಪತ್ರದ ಮಾದರಿ



ಬಿ.ಆರ್. ಅರಿಷಿಣಗೋಡಿಯವರ ಹಸ್ತಾಕ್ಷರಗಳು